


ಜಾನ್ ರೀಡ್

ರೂಪಾಂತರ : ಡಾ|| ಬಿ. ಆರ್. ಮಂಜುನಾಥ್

# ಜಗವ ನಡುಗಿಸಿದ ಆ ಹತ್ತುದಿನ

ಜಾನ್ ರೀಡ್

# ಜಗವ ನಡುಗಿಸಿದ
# ಆ ಹತ್ತುದಿನ

ಕನ್ನಡಕ್ಕೆ

ಡಾ॥ ಬಿ. ಆರ್. ಮಂಜುನಾಥ್

ನವಕರ್ನಾಟಕ ಪ್ರಕಾಶನ

**JAGAVA NADUGISIDA AA HATTUDINA** (Kannada)
*TEN DAYS THAT SHOOK THE WORLD by John Reed*
*Adapted from English by Dr. B. R. Manjunath*

Third Print : 2023    Pages : 232    Price : ₹ 275
Paper : 70 gsm Maplitho 18.6 Kg (1/8 Demy Size)

ಮೊದಲನೇ ಮುದ್ರಣ : 2017
ಎರಡನೇ ಮುದ್ರಣ : 2018
ಮೂರನೇ ಮುದ್ರಣ : 2023



**ಬೆಲೆ : ₹ 275**

ಮುಖಪುಟ : ಅರುಣ್‌ಕುಮಾರ್ ಜಿ.

ಪ್ರಕಾಶಕರು
**ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್**
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560 001
ದೂರವಾಣಿ : 080–22161900 / 22161901 / 22161902

*ಶಾಖೆಗಳು/ ಮಳಿಗೆಗಳು*
ನವಕರ್ನಾಟಕ, ಕ್ರೆಸೆಂಟ್ ರಸ್ತೆ, ಬೆಂಗಳೂರು – 1, ✆ 080–22161913/14, Email : nkpsales@gmail.com
ನವಕರ್ನಾಟಕ, ಕೆಂಪೇಗೌಡ ರಸ್ತೆ, ಬೆಂಗಳೂರು – 9, ✆ 080–22203106, Email : nkpkgr@gmail.com
ನವಕರ್ನಾಟಕ, ಶರವು ದೇವಸ್ಥಾನ ರಸ್ತೆ, ಮಂಗಳೂರು – 1, ✆ 0824–2441016, Email : nkpmng@gmail.com
ನವಕರ್ನಾಟಕ, ಬಲ್ಮಠ, ಮಂಗಳೂರು – 1, ✆ 0824–2425161, Email : nkpbalmatta@gmail.com
ನವಕರ್ನಾಟಕ, ರಾಮಸ್ವಾಮಿ ವೃತ್ತ, ಮೈಸೂರು–24, ✆ 0821–2424094, Email : nkpmysuru@gmail.com
ನವಕರ್ನಾಟಕ, ಸ್ಟೇಷನ್ ರಸ್ತೆ, ಕಲಬುರಗಿ – 2, ✆ 08472–224302, Email : nkpglb@gmail.com

ಮುದ್ರಕರು : ಜಿ. ಕೆ. ಪ್ರಿಂಟ್ಸ್, ಬೆಂಗಳೂರು – 560 021

**0311236671**    **ISBN 978-81-8467-724-9**

---

Published by Navakarnataka Publications Private Limited, Embassy Centre Crescent Road, Bengaluru - 560 001 (India). Email : navakarnataka@gmail.com

# ಓದುಗರೊಂದಿಗೆ ಮಾತುಕತೆ

"ಕ್ರಾಂತಿಗಳು ಹೊರಹೊಮ್ಮುವುದು ಆಕಸ್ಮಿಕದಿಂದಲ್ಲ, ಅವಶ್ಯಕತೆಯಿಂದ. ಕ್ರಾಂತಿ ಎಂಬುದು ಕೃತಕದಿಂದ ನಿಜದ ಕಡೆಗಿನ ನಡಿಗೆ. ಅದು ಏಕೆ ಘಟಿಸುತ್ತದೆಂದರೆ ಅದು ಅನಿವಾರ್ಯವಾಗಿರುತ್ತದೆ. ಸರ್ವಾಧಿಕಾರವು ನಿಜವಾದಾಗ, ಕ್ರಾಂತಿಯು ಜನರ ಹಕ್ಕಾಗುತ್ತದೆ."

– *ವಿಕ್ಟರ್ ಹ್ಯೂಗೊ*

"ಕ್ರಾಂತಿ ಮನುಕುಲದ, ಯಾರೂ ಕಸಿದುಕೊಳ್ಳಲಾಗದ ಹಕ್ಕು."

– *ಭಗತ್ ಸಿಂಗ್*

ನೂರು ವರ್ಷಗಳ ಹಿಂದೆ ರಷ್ಯಾ ಎಂಬ ಎಲ್ಲರ ತಿರಸ್ಕಾರಕ್ಕೆ ಒಳಗಾಗಿದ್ದ ದೇಶದಲ್ಲಿ ಅಶಿಕ್ಷಿತರೂ, ಬಡವರೂ ಆದ ಕಾರ್ಮಿಕರು ಅಧಿಕಾರಕ್ಕೆ ಬಂದರು. ಅವರೊಂದಿಗೆ ಬಲವಾಗಿ ನಿಂತವರು, ಬಡ ರೈತಾಪಿಗಳು. ತಮ್ಮ ದೇಶದ, ಎಲ್ಲ ದೇಶದ ಶ್ರೀಮಂತರ ಉಪೇಕ್ಷೆ, ಲೇವಡಿ, ತಿರಸ್ಕಾರ, ದ್ವೇಷಗಳನ್ನು ಮೆಟ್ಟಿನಿಂತು ಅವರು ಅಧಿಕಾರದ ಸೂತ್ರಗಳನ್ನು ಕೈಗೆತ್ತಿಕೊಂಡರು.

ನವೆಂಬರ್ 7, 1917

ರಷ್ಯಾದ ಕ್ರಾಂತಿ ಅಲ್ಲಿಯವರೆಗೂ ಘಟಿಸಿದ್ದ ಎಲ್ಲಾ ಮಹಾಕ್ರಾಂತಿಗಳಿಗಿಂತ ಭಿನ್ನವಾಗಿತ್ತು. ಅಮೆರಿಕದ ಸ್ವಾತಂತ್ರ್ಯ ಸಂಗ್ರಾಮ, ಫ್ರೆಂಚ್ ಮಹಾಕ್ರಾಂತಿ ಎಲ್ಲವೂ ಯುಗಪ್ರವರ್ತಕ ಕ್ರಾಂತಿಗಳೇ. ಮಾನವ ಕುಲವನ್ನು ಸ್ವಾತಂತ್ರ್ಯ, ಸಮಾನತೆಯತ್ತ ಕೊಂಡೊಯ್ಯುವ ಪಥದಲ್ಲಿ ಮುಖ್ಯ ಮೈಲಿಗಲ್ಲುಗಳೇ. ಆದರೆ ನವೆಂಬರ್ ಕ್ರಾಂತಿಗೆ ಇನ್ನೊಂದು ಮುಖ್ಯ ವಿಶೇಷ ಗುಣವಿದೆ.

ಹಿಂದಿನ ಎಲ್ಲಾ ಕ್ರಾಂತಿಗಳು ತಮ್ಮ ಕಾಲದ ಸಮಾಜಗಳನ್ನು ಉತ್ತಮಪಡಿಸಿದವು, ಪರಿಸ್ಥಿತಿಯನ್ನು ಸಹ್ಯಗೊಳಿಸಿದವು ನಿಜ. ಆದರೆ ಅವು ಒಂದು ಶೋಷಕ ಗುಂಪಿನ ಜಾಗದಲ್ಲಿ ಇನ್ನೊಂದು ಶೋಷಕರ ಗುಂಪನ್ನು ಸ್ಥಾಪಿಸಿದ್ದವು. ರಷ್ಯಾದ ನವೆಂಬರ್ ಕ್ರಾಂತಿ ಮಾತ್ರ ಚರಿತ್ರೆಯಲ್ಲಿ ಮೊತ್ತ ಮೊದಲ ಬಾರಿಗೆ ದೃಢವಾದ ಬುನಾದಿಯ ಮೇಲೆ ಶೋಷಿತರನ್ನು ಅಧಿಕಾರದ ಸ್ಥಾನದಲ್ಲಿ ಕೂರಿಸಿತ್ತು.

ಜನತಾಂತ್ರಿಕ ಕ್ರಾಂತಿಗಳು ಎಲ್ಲರೂ ಸ್ವತಂತ್ರರಾಗಲಿ, ಸಮಾನರಾಗಲಿ ಎಂಬ ಧ್ಯೇಯವನ್ನು ಪ್ರಾಮಾಣಿಕವಾಗಿಯೇ ಎತ್ತಿ ಹಿಡಿದಿದ್ದವು. ಆದರೆ ಅವು ಖಾಸಗಿ ಆಸ್ತಿಯನ್ನು 'ಪವಿತ್ರ' ಎಂದು ಭಾವಿಸಿ ರಕ್ಷಿಸಿದ್ದವು. ಅಂಥ ವ್ಯವಸ್ಥೆಯಲ್ಲಿ ಆಸ್ತಿಯಿದ್ದವರು ತಮ್ಮ ಆಸ್ತಿಯನ್ನು ಹೆಚ್ಚಿಸಿಕೊಳ್ಳಲು ಉಳಿದವರನ್ನು ಶೋಷಿಸುವುದು ಅನಿವಾರ್ಯವಾಗಿ ಬಿಡುತ್ತದೆ. ಅಲ್ಲಿಗೆ ಬೇರೆಯವರನ್ನು ಶೋಷಿಸುವ ಸ್ವಾತಂತ್ರ್ಯ ಆಸ್ತಿವಂತನಿಗೆ ದಕ್ಕಿದರೆ,

ಆಸ್ತಿಹೀನನಿಗೆ ದೊರಕುವುದು ಶೋಷಣೆಗೆ ತನ್ನನ್ನು ತಾನೇ ಅನಿವಾರ್ಯವಾಗಿ ಒಪ್ಪಿಸಿಕೊಳ್ಳುವ ಸ್ವಾತಂತ್ರ್ಯ. ಇಂಥ ವರ್ಗವೈಷಮ್ಯವಿರುವ ಸಮಾಜದಲ್ಲಿ ಮನುಷ್ಯರ ನಡುವಿನ ಸಮಾನತೆಯು ಮರೀಚಿಕೆಯಾಗುವುದು ಸಹಜ, ಖಂಡಿತ. ಆದ್ದರಿಂದಲೇ ರಷ್ಯನ್ ಕ್ರಾಂತಿಯು ಖಾಸಗಿ ಆಸ್ತಿಯನ್ನು ನಿಷೇಧಿಸಿತು. ಹೀಗಾಗಿ ನೂರು ವರ್ಷಗಳ ನಂತರವೂ ಖಾಸಗಿ ಆಸ್ತಿಯನ್ನು ಬೆಂಬಲಿಸುವವರು ಅದನ್ನು ಬಯ್ಯುತ್ತಲೇ ಇರುತ್ತಾರೆ. ಖಾಸಗಿ ಆಸ್ತಿಯ ಕೆಡುಕನ್ನು ಕಂಡವರು, ಶೋಷಣೆ ಮತ್ತು ಅಸಮಾನತೆಗೆ ತುತ್ತಾದವರು ಕ್ರಾಂತಿಯನ್ನು ನೆನೆನೆನೆದು ಆರಾಧಿಸುತ್ತಲೇ ಇರುತ್ತಾರೆ. ಇತಿಹಾಸದಲ್ಲಿ ಇಷ್ಟೊಂದು ದ್ವೇಷಕ್ಕೂ, ಅಷ್ಟೊಂದು ಗಾಢ ಪ್ರೀತಿಗೂ ಕಾರಣವಾದ ಇನ್ನೊಂದು ಕ್ರಾಂತಿ ಇದುವರೆಗೂ ಕಂಡಿಲ್ಲ !

ಶಿಲಾಯುಗದ ಕಾಲದಲ್ಲಿ ಮನುಷ್ಯನಿಗೆ ನಾವಿಂದು ಕಾಣುವಂಥ, ಪರರನ್ನು ಶೋಷಿಸಲು ಸಾಧ್ಯವಾಗಬಲ್ಲ ಖಾಸಗಿ ಆಸ್ತಿ ಇರಲಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಲಿಕ್ಕೆ ತುಂಬ ಜಾಣ್ಮೆಯಾಗಲೀ, ಚರಿತ್ರೆಯ ಜ್ಞಾನವಾಗಲೀ, ಕಲ್ಪನಾ ಸಾಮರ್ಥ್ಯವಾಗಲೀ ಅಗತ್ಯವಿಲ್ಲ ಅಲ್ಲವೇ ? ಎಲ್ಲರೂ ಸ್ವತಂತ್ರರೂ, ಸಮಾನರೂ ಆದ ಆ ಕಾಲದಲ್ಲಿ ಹಸಿವಿತ್ತು, ಅಭದ್ರತೆ, ಅನಿಶ್ಚಿತತೆಗಳಿದ್ದವು ನಿಜ. ಆದರೆ ಶೋಷಣೆಯಿರಲಿಲ್ಲ. ಎಲ್ಲರಿಗೂ ಸೇರಿದ್ದ ನೆಲ, ಕಾಡಿನ ಉತ್ಪನ್ನ, ದನಕರುಗಳು, ಎಲ್ಲಾ ಕ್ರಮೇಣ ಕೆಲವೇ ಕೆಲವರ ಸ್ವತ್ತಾಗಿದ್ದು ಒಂದು ದುರಂತ ಪ್ರಕ್ರಿಯೆ, ರಕ್ತವೂ ಕಣ್ಣೀರೂ ಒಟ್ಟಿಗೆ ಹರಿದು ಹೋದ ಹೃದಯವಿದ್ರಾವಕ ಕಥೆ. ಒಂದು ಕಡೆ ಉಳ್ಳವರು, ಇನ್ನೊಂದು ಕಡೆ ಏನೂ ಇಲ್ಲದವರು ಎಂಬ ವರ್ಗಗಳು ಸೃಷ್ಟಿಯಾದ ಈ ಪ್ರಘಟನೆಯ ವಿವರ ಇಲ್ಲಿ ಸಾಧ್ಯವಿಲ್ಲ. ಆದರೆ ಒಂದಂತೂ ಸತ್ಯ, ಯಾವ ದಿನದಿಂದ ಈ ಜಗತ್ತಿನಲ್ಲಿ ಸಮಾನತೆ, ಸ್ವಾತಂತ್ರ್ಯಗಳನ್ನು ನಾಶ ಮಾಡಲಾಯಿತೋ ಆ ದಿನದಿಂದಲೇ ಅಂಥ ಒಂದು ಆಸ್ತಿಯಿಲ್ಲದ, ಶೋಷಣೆಯಿಲ್ಲದ, ಅಸಮಾನತೆಯಿಲ್ಲದ ಸಮಾಜಕ್ಕಾಗಿ ಹಂಬಲವೂ ಬೆಳೆಯುತ್ತಾ ಹೋಯಿತು. ಜಗತ್ತಿನ ಎಲ್ಲ ಭಾಗಗಳಲ್ಲೂ ಅಲಿಖಿತ ಹಾಡುಗಬ್ಬಗಳಲ್ಲಿ, ಮಿಥಕಗಳಲ್ಲಿ, ದಂತಕಥೆಗಳಲ್ಲಿ, ಪುರಾಣಗಳಲ್ಲಿ, ಜನಪದರ ನಿವೇದನೆಗಳಲ್ಲಿ ಅದು ಹಾಸುಹೊಕ್ಕಾಗಿದೆ. ಇದರ ಮುಂದುವರಿಕೆಯಾಗಿಯೇ ವಿಶ್ವದ ಎಲ್ಲಾ ಮಹಾಧರ್ಮಗಳೂ ಕೂಡ ಎಲ್ಲವೂ ಎಲ್ಲರಿಗೂ ಸಿಗಬಹುದಾದ ಸ್ವರ್ಗ, ಜನ್ನತ್, ಪ್ಯಾರಡೈಸ್‌ಗಳ ಆಶೆಯನ್ನು ಪ್ರತಿಫಲಿಸಿದವಲ್ಲವೇ ?

ಆದರೆ ಇದನ್ನು ಭೂಮಿಯ ಮೇಲೆ ಸಾಕಾರಗೊಳಿಸಲು ಕೇವಲ ಆಶೆ, ಆಕಾಂಕ್ಷೆ, ಕನಸುಗಳಿಂದ ಸಾಧ್ಯವಿಲ್ಲ. ಅದಕ್ಕೊಂದು ವೈಜ್ಞಾನಿಕ ಚಿಂತನೆ ಬೇಕು. ಶೋಷಣಾ ರಹಿತ ವ್ಯವಸ್ಥೆಯನ್ನು ಸೃಷ್ಟಿಸಬೇಕೆಂಬ ಹಂಬಲವು ಅನೇಕ ಚಿಂತಕರ ಮನದ ಮೂಲೆಯಲ್ಲಿ ಸಮಾಜವಾದದ ಆಕಾರವನ್ನು ಪಡೆದುಕೊಂಡರೂ, ಅದು ನಿಜಕ್ಕೂ ಪ್ರಬಲ ಆಯುಧವಾದದ್ದು ಕಾರ್ಲ್ ಮಾರ್ಕ್ಸ್ ಕೈಯಲ್ಲಿ. ಅವರು ಸಮಾಜವಾದವನ್ನು ರೂಪಿಸಬಹುದಾದವರು ಯಾರೆಂದರೆ ಸರ್ವಸ್ವವನ್ನೂ ಕಳೆದುಕೊಂಡು, ಶ್ರಮಬಿಟ್ಟು ಬದುಕಲು ಇನ್ನೇನೂ ಇಲ್ಲದ ಶ್ರಮಜೀವಿಗಳು ಮಾತ್ರ ಎಂದು ಗುರುತಿಸಿದರು. ಸಮಾಜವಾದವು ಮನುಕುಲದ ಗತಿಯಲ್ಲಿ ಅನಿವಾರ್ಯವಾಗಿ, ಸಮಾಜಚಲನೆಯ ನಿಯಮಕ್ಕನುಗುಣವಾಗಿ ಬರಲೇಬೇಕು ಎಂದು ಸಾಧಿಸಿದರು.

ಅವರ ಕಲ್ಪನೆಯ ಸಮಾಜವಾದ ಮುಂದುವರೆದ ಯುರೋಪಿನ ರಾಷ್ಟ್ರಗಳಲ್ಲಿ

ವಾಸ್ತವಕ್ಕಿಳಿಯಲು ಐತಿಹಾಸಿಕ ಕಾರಣಗಳಿಂದ ಅಡೆತಡೆಗಳು ಬಂದವು. ಆಗ ಅತ್ಯಂತ ಹಿಂದುಳಿದ ದೇಶವೊಂದರಲ್ಲಿ ಇದನ್ನು ಜಾರಿಗೆ ತರಲು ಸಾಧ್ಯ ಎಂದು ಧೈರ್ಯವಾಗಿ ಪ್ರತಿಪಾದಿಸಿದವರು ಲೆನಿನ್. ಅವರ ಮಾರ್ಗದರ್ಶನದಲ್ಲಿ ಕ್ರಾಂತಿಯ ನೇತಾರನಾಗಿ ಹೊರಹೊಮ್ಮಿದ ಬೋಲ್ಶೆವಿಕ್ ಪಕ್ಷವು ನವೆಂಬರ್ 7ರಿಂದ 17ರವರೆಗೂ ನಡೆದ ಕ್ರಾಂತಿಯ ಮೂಲಕ ವೈಜ್ಞಾನಿಕ ಸಮಾಜವಾದದ ಕಲ್ಪನೆಯನ್ನು ಆಧರಿಸಿದ ಹೊಸ ಸಮಾಜವನ್ನು ಕಟ್ಟುವ ಕೆಲಸವನ್ನು ಕೈಗೆತ್ತಿಕೊಂಡಿತು.

ಇಂಥ ಕೆಲಸಕ್ಕೆ ಕೈ ಇಟ್ಟವರು ಎದುರಿಸಿದ ಕಷ್ಟಗಳನ್ನು ಊಹಿಸಿಕೊಳ್ಳುವುದೂ ನಮಗೆ ಕಷ್ಟ. ಒಳಗಿನ ಶತ್ರುಗಳು, ಹೊರಗಿನ ಶತ್ರುಗಳು, ಹಿಂದುಳಿದ ಆರ್ಥಿಕ – ಸಾಮಾಜಿಕ ಪರಿಸ್ಥಿತಿ, ಮಹಾಯುದ್ಧದಿಂದ ಸಂಭವಿಸಿದ್ದ ವಿನಾಶ, ಅನುಭವದ ಕೊರತೆ, ಇವುಗಳ ನಡುವೆ ಅತ್ಯಂತ ಸಾಮಾನ್ಯ ಜನರು ಧೀರೋದಾತ್ತ ನಾಯಕರಾಗಿ ರೂಪುಗೊಂಡಿದ್ದು, ಇವುಗಳನ್ನು ಯಾರಾದರೂ ಚಿತ್ರಿಸಿದರೆ ಅದು ಈ ಯುಗದ ಅತಿಶ್ರೇಷ್ಠ ಅಮರ ಕಾವ್ಯವಾಗುತ್ತದೆ.

ಈ ಸಮಾಜವಾದದ ಸಾಧನೆಯಾದರೂ ಹೇಗಿತ್ತು, ಕಣ್ಣು ಕೋರೈಸುವ ಹಾಗಿತ್ತು. ಆಶ್ಚರ್ಯ, ಸಂತಸಗಳಿಂದ ದಿಗ್ಭ್ರಮೆಯಾಗುವಂತಿತ್ತು, ನಿರುದ್ಯೋಗ, ಬಡತನ, ವೇಶ್ಯಾವಾಟಿಕೆ, ಬಾಲಶ್ರಮ, ಬೆಲೆ ಏರಿಕೆ, ಜೂಜು, ಕುಡಿತ ಇವೆಲ್ಲವೂ ಮಾಯವಾದವು ಎಂಬುದು ಪವಾಡ ಸದೃಶ ಸಾಧನೆಯಲ್ಲವೇ ! ಕ್ರೀಡೆ, ಕಲೆ, ಸಂಗೀತ, ನೃತ್ಯ, ವಿಜ್ಞಾನ, ತಂತ್ರಜ್ಞಾನ ಈ ಎಲ್ಲಾ ಕ್ಷೇತ್ರಗಳಲ್ಲೂ ಸೋವಿಯತ್ ಸಮಾಜವಾದದ ದಾಖಲೆಗಳು ನಂಬಲಿಕ್ಕೆ ಕಷ್ಟವಾದರೂ ನಿಜವಾದಂಥವು. ಈ ಮಾಹಿತಿಗಳನ್ನು ಕಮ್ಯುನಿಸ್ಟರಲ್ಲದೆ ಅನೇಕ ಪ್ರಸಿದ್ಧರೂ, ಪ್ರತಿಭಾವಂತರೂ ದಾಖಲಿಸಿದ್ದಾರೆ ಎಂಬುದನ್ನು ಗಮನಿಸಬೇಕು.

ಇದನ್ನೆಲ್ಲಾ ಹೇಳಿದ ಕೂಡಲೇ, ಅಂಥ ವ್ಯವಸ್ಥೆ ಏಕೆ ಬಿದ್ದುಹೋಯಿತು ಎಂಬ ಪ್ರಶ್ನೆ ಥಟ್ಟೆಂದು ಎದ್ದು ಬರುತ್ತದೆ. ನಾನು ಸಾವಿರಗಟ್ಟಲೆ ತರುಣರೊಂದಿಗೆ ಚರ್ಚಿಸುವಾಗ ಈ ಪ್ರಶ್ನೆಯನ್ನು ಎದುರಿಸಿದ್ದೇನೆ. ಈ ಪ್ರಶ್ನೆ ಬರುವುದು ಇಂಥ ವ್ಯವಸ್ಥೆ ಪ್ರಾಯಶಃ ಇರಲಿಲ್ಲ ಎಂಬ ಸಂಶಯದಿಂದಲ್ಲ ! ಅದು ಹುಟ್ಟುವುದು ಅಯ್ಯೋ ಅಂಥ ವ್ಯವಸ್ಥೆಯನ್ನು ನಾವು ಏಕೆ ಕಳೆದುಕೊಂಡೆವು ಎಂಬ ನೋವಿನಿಂದ, ಹೀಗೇಕಾಯಿತು ಎಂಬ ಸಹಜ ಕುತೂಹಲದಿಂದ, ಮುಂದೆ ಹಾಗಾಗದಂತೆ ತಡೆಗಟ್ಟಬೇಕು ಎಂಬ ಕಾಳಜಿಯಿಂದ.

ಇದಕ್ಕೆ ಉತ್ತರ ತುಂಬ ಸಂಕೀರ್ಣವಾದದ್ದು, ದೀರ್ಘವಾದದ್ದು ಮತ್ತು ಒಂದು ಮುನ್ನುಡಿಯ ನೆಪದಲ್ಲಿ ಬರೆದ ಲೇಖನದ ವ್ಯಾಪ್ತಿಗೆ ಮೀರಿದ್ದು. ನಾನಿಲ್ಲಿ ಇಷ್ಟು ಮಾತ್ರ ಹೇಳಬಲ್ಲೆ: ಮಾರ್ಕ್ಸ್ ಹೇಳಿದ ಹಾಗೆ, ನಾವು ತರಲೆತ್ನಿಸುವ ಸಮಾಜವಾದವು ಶುಭ್ರವಾಗಿ ಆಕಾಶದಿಂದ ಅವತರಿಸಿದ ವ್ಯವಸ್ಥೆಯಲ್ಲ. ಅದು ಇದೇ ಬಂಡವಾಳಶಾಹಿ ವ್ಯವಸ್ಥೆಯ ಗರ್ಭದಿಂದ ಹೊರಬಂದ ಮಗು. ಸಹಜವಾಗಿಯೇ, ಅದರ ಮೈತುಂಬ ಹಳೆಯ ವ್ಯವಸ್ಥೆಯ ಕೊಳೆಗಳು, ಕಲೆಗಳು – ರಾಜಕೀಯ, ಸಾಮಾಜಿಕ, ನೈತಿಕ – ಎಲ್ಲಾ ದೋಷಗಳೂ ಜನ್ಮಕ್ಕಂಟಿ ಬಂದಿರುತ್ತವೆ. ಈ ಮಗುವನ್ನು ತೊಳೆಯುವ ಪ್ರಕ್ರಿಯೆ ದೀರ್ಘವಾದದ್ದು. ಕೊಂಚ ಲೋಪವಾದರೂ ವ್ಯಾಧಿಗಳು ಕಟ್ಟಿಟ್ಟ ಬುತ್ತಿ ಮತ್ತು ಲೆನಿನ್ ಹೇಳಿದ ಹಾಗೆ ಸಮಾಜವಾದ ಒಂದು ಸ್ಥಿತ್ಯಂತರ ವ್ಯವಸ್ಥೆ. ಸ್ವಲ್ಪ ಎಡವಟ್ಟಾದರೂ ಕಾರ್ಮಿಕ ವರ್ಗ ಕೊಂಚ ಎಚ್ಚರತಪ್ಪಿದರೂ ಹಳೆಯ ವ್ಯವಸ್ಥೆ ಎಲ್ಲಾ ಶಕ್ತಿಯೊಂದಿಗೆ

ವಾಪಸ್ ಬರುತ್ತದೆ. 'ಹೋದೆಯಾ ಪಿಶಾಚಿ ಎಂದರೆ, ಅದು ಗವಾಕ್ಷಿಯಲ್ಲಿ ನಾನು ಬಂದೆ' ಎನ್ನುತ್ತ ಮರಳಿರುತ್ತದೆ. ಶತಮಾನಗಳಿಂದ ಶೇಖರಣೆಯಾಗಿ ಬಂದ ಹಳೆಯ ಚಿಂತನೆ, ನಂಬಿಕೆ, ಕೆಲಸದ ಶೈಲಿ ಅಭ್ಯಾಸಗಳು ಸುಲಭದಲ್ಲಿ ಹೋಗುವುದಿಲ್ಲ.

ಉದಾಹರಣೆಗಳು ಎಂದೂ ಸರ್ವ ಸಮರ್ಪಕವಾಗುವುದಿಲ್ಲ. ಅವು ಒಂದು ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ ಅಷ್ಟೇ. ಸಮಾಜವಾದ ಕೇವಲ ಆದರ್ಶ, ಎಲ್ಲಾ ಸಮಾಜವಾದಿಗಳೂ ಭೂಮಿಯ ಮೇಲಿಲ್ಲದೆ ಗಾಳಿಯಲ್ಲಿ ತೇಲುವ ಜನ, ರಷ್ಯಾದ ಸಮಾಜವಾದ ಒಂದು ವಿಫಲಪ್ರಯೋಗ, ಎನ್ನುವವರಿಗೆ ಒಂದು ಮಾತು. ಮನುಷ್ಯ ಗಾಳಿಯಲ್ಲಿ ತೇಲಲಾರ, ದೇವರು ಕೊಟ್ಟ ಕಾಲುಗಳನ್ನು ಉಪಯೋಗಿಸಿ ಅವನು ನಡೆಯಲು ಕಲಿಯಲಿ ಸಾಕು. ನಾವು ಹಾರಬೇಕೆಂದಿದ್ದರೆ ಸರ್ವಶಕ್ತನು ನಮಗೆ ರೆಕ್ಕೆಗಳನ್ನು ಕೊಟ್ಟಿರುತ್ತಿದ್ದ ಎಂಬ ವಾದ ಇಪ್ಪತ್ತನೆಯ ಶತಮಾನದ ಆರಂಭದಲ್ಲೂ ಇತ್ತು.

ಆದರೆ ರೈಟ್ ಸೋದರರು ಹಾರಲೆತ್ನಿಸಿದರು. ಪ್ರಾಯೋಗಿಕ ವಿಮಾನಗಳು ಮುರಿದು ಹೋದವು. ಸಂಪ್ರದಾಯವಾದಿಗಳು ಅವರನ್ನು ನೋಡಿ ನಕ್ಕರು. ಮೊದಲ ಬಾರಿ ಅವರು ಕೇವಲ 120 ಅಡಿ ಹಾರಿದ್ದರು, ಕೇವಲ 12 ಸೆಕೆಂಡ್ ಗಾಳಿಯಲ್ಲಿದ್ದರು. ವಿಜ್ಞಾನ ವಿರೋಧಿಗಳು ಅವರನ್ನು ಕೆಳಗೆ ಬಿದ್ದಿದ್ದಕ್ಕೆ, ವಿಮಾನಕ್ಕೂ ದೇಹಕ್ಕೂ ಪೆಟ್ಟಾದದ್ದಕ್ಕೆ ಹಾಸ್ಯ ಮಾಡುತ್ತಾ ಹೋದರು. ಆದರೆ ರೈಟ್ ಸೋದರರು ಯೋಚಿಸಿದರು, "ನಾವು ಹನ್ನೆರಡು ಸೆಕೆಂಡ್ ಗಾಳಿಯಲ್ಲಿ ಇದ್ದುದ್ದು ಹೇಗೆ, ಬಿದ್ದದ್ದು ಏಕೆ ಎಂದು ಅರ್ಥಮಾಡಿಕೊಂಡರೆ ಒಂದು ದಿನ, ಹನ್ನೆರಡು ನೂರು ಕಿಲೋಮೀಟರ್ ಕ್ರಮಿಸಬಲ್ಲ, ಹನ್ನೆರಡು ತಾಸು ಹಾರಬಲ್ಲ ವಿಮಾನ ತಯಾರಿಸಬಲ್ಲೆವು." ವಿಜ್ಞಾನ ಹಿನ್ನಡೆಗಳಿಂದ ಕಲಿಯುತ್ತದೆ.

ನಾವು ಇಂದು ಅಷ್ಟೇ ಧನಾತ್ಮಕವಾಗಿ, ವೈಜ್ಞಾನಿಕವಾಗಿ ಯೋಚಿಸಬೇಕಾಗಿದೆ. ಒಂದು ವ್ಯವಸ್ಥೆ 74 ವರ್ಷ ಅಭೂತಪೂರ್ವ ಸಾಧನೆ ಮಾಡಿದ್ದು ಸತ್ಯವಾದರೆ, ಅದನ್ನು ಶತಮಾನಗಳ ಕಾಲ ಉಳಿಯಬಲ್ಲ, ಇನ್ನೂ ಮುಂದಕ್ಕೆ ವಿಕಸನವಾಗಬಲ್ಲ ವ್ಯವಸ್ಥೆಯನ್ನಾಗಿ ರೂಪಿಸುವುದು ಹೇಗೆ ? ಅದು ಕೆಳಗುರುಳಲು ಕಾರಣಗಳಾದರೂ ಯಾವುವು, ಮುಂದಿನ ಪ್ರಯೋಗದಲ್ಲಿ ಅದನ್ನು ನಿವಾರಿಸುವುದು ಹೇಗೆ ?

> **ಈ ವ್ಯವಸ್ಥೆಯನ್ನು ಸ್ಥಾಪಿಸುವ ಪ್ರಯೋಗ ನಡೆದದ್ದು ಅತ್ಯಂತ ಹಿಂದುಳಿದ ದೇಶವೊಂದರಲ್ಲಿ. ಜನತಂತ್ರದ ರೂಢಿ, ಆಚರಣೆ ತುಂಬ ಶೈಶವಾವಸ್ಥೆಯಲ್ಲಿದ್ದ ದೇಶದಲ್ಲಿ, ಶತ್ರುಗಳಿಂದ ಸುತ್ತುವರೆದಿದ್ದ ನೆಲದಲ್ಲಿ, ಇಷ್ಟಾಗಿಯೂ ಅವರು ಸ್ಥಾಪಿಸಿದ ವಿಕ್ರಮಗಳು ಇಂದಿಗೂ ನಮ್ಮಲ್ಲಿ ಬೆರಗು, ಪ್ರೇರಣೆ, ಧೈರ್ಯಗಳನ್ನು ಹುಟ್ಟಿಸುತ್ತವೆ. ಜಾನ್ ರೀಡ್ ಇದನ್ನೆಲ್ಲಾ ಹತ್ತಿರದಿಂದ ನೋಡಿ ಬರೆದ ಪುಸ್ತಕ ಇದು.**

ಕನ್ನಡದ ಓದುಗರ, ತರುಣರ ಇಂದಿನ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪುಸ್ತಕವನ್ನು ಸಂಗ್ರಹಗೊಳಿಸಬೇಕಿತ್ತು. ಅಂದು ಅವಶ್ಯವಿದ್ದ ಅನೇಕ ವಿವರಗಳು, ಟಿಪ್ಪಣಿಗಳು ಇಂದು ತುಂಬ ಅವಶ್ಯವೂ ಇಲ್ಲ. ಕನ್ನಡದ ಓದುಗರಿಗೆ ರಷ್ಯನ್ ಹೆಸರುಗಳು, ಚರಿತ್ರೆ, ಭೂಗೋಳ ಎಲ್ಲವೂ ಅಪರಿಚಿತ. ಓದುವ ಅಭ್ಯಾಸವೂ ಕ್ಷೀಣವಾಗುತ್ತಿರುವ ಇಂದಿನ ಹಿನ್ನೆಲೆಯಲ್ಲಿ ಪುಸ್ತಕದ ಸ್ವಾರಸ್ಯವನ್ನೂ ಉಳಿಸಿಕೊಳ್ಳುವಂತೆ ಸಂಗ್ರಹಿಸಿ, ಭಾವಾನುವಾದ ಮಾಡಲು ಯತ್ನಿಸಿದ್ದೇನೆ.

ರೀಡ್ ಈ ಪುಸ್ತಕವನ್ನು ಬರೆದ ಶೈಲಿ ವಿಶಿಷ್ಟವಾದದ್ದು. ಇದು ಆತ ಕ್ರಾಂತಿಯಲ್ಲಿ

ಭಾಗಿಯಾಗುತ್ತಾ, ನಿಂತಕಡೆ, ಓಡಾಡುವಾಗ, ದಾಖಲಿಸಿಕೊಂಡ ವಾಸ್ತವಾಂಶಗಳ ಸರಮಾಲೆ. ಆತ ಅದರ ಸ್ವರೂಪವನ್ನು ಬೇಕೆಂದೇ ಹಾಗೆ ಉಳಿಸಿದ್ದಾನೆ. ಆದ್ದರಿಂದ ಅಲ್ಲಲ್ಲಿ ಕಥನವು ತುಂಡರಿಸಿದ ಭಾವನೆ ಬರುತ್ತದೆ. ಇದು ಅಲೆದಾಡುತ್ತಾ, ಸಿಕ್ಕಿದ ಕಾಗದದ ಮೇಲೆ ಬರೆದ ಕ್ರಾಂತಿಯ ಬಖೈರು. ತೀರಾ ಹಟಾತ್ತಾಗಿ ಯಾವುದೋ ಘಟನೆ, ವಿವರಣೆ ನಿಂತು ಬಿಡುತ್ತದೆ. ಪಕ್ಕನೆ ಇನ್ನೊಂದು ಸನ್ನಿವೇಶದ ವರದಿ ಆರಂಭವಾಗುತ್ತದೆ. ಆ ಶೈಲಿಯನ್ನು ನಾನು ಹಾಗೇ ಉಳಿಸಿದ್ದೇನೆ. ತೀರಾ ಅವಶ್ಯವಾದ ಕಡೆ ಒಂದೆರಡು ವಾಕ್ಯಗಳನ್ನು ಲೇಖಕನ ವಿಚಾರಕ್ಕೆ, ಆಶಯಕ್ಕೆ ಊನವಾಗದಂತೆ ಸೇರಿಸಿದ್ದೇನೆ.

ರೀಡ್ ಕ್ರಾಂತಿಯನ್ನು ದೂರದಿಂದ ನಿಂತು ನೋಡಿದ ತಟಸ್ಥ ಪ್ರೇಕ್ಷಕನಂತೆ ಬರೆದಿಲ್ಲ. ಆತ ಕ್ರಾಂತಿಯ ಪಕ್ಷಪಾತಿ. ಈ ದೋಷಾರೋಪಣೆಯನ್ನು ಅನುವಾದಕನ ಮೇಲೂ ಮಾಡಬಹುದು. ನಮ್ಮ ಭಾವನೆಗಳು ತಿಳಿವಳಿಕೆಗಳು ಕಥನದೊಂದಿಗೆ ನಮ್ಮ ಅರಿವಿಗೇ ಬರದೆ ಹಾಸುಹೊಕ್ಕಾಗಿ ಬೆರೆತಿರುತ್ತವೆ. ಅದೇನೇ ಇದ್ದರೂ ಕ್ರಾಂತಿಗೆ ಸಂಬಂಧಿಸಿದ ಸತ್ಯವು ಯಥಾವತ್ತಾಗಿ ನಿರೂಪಿತವಾಗಿದೆಯೆಂದೇ ಭಾವಿಸುತ್ತೇನೆ.

ನವೆಂಬರ್ ಕ್ರಾಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ಈ ಕೆಲಸವನ್ನು ನನಗೊಪ್ಪಿಸಿ, ಎಲ್ಲ ರೀತಿಯಲ್ಲೂ ಸಹಕರಿಸಿದ 'ನವಕರ್ನಾಟಕ ಪ್ರಕಾಶನ'ಕ್ಕೂ ಅನೇಕ ಆಕರ ಸಾಮಗ್ರಿಗಳನ್ನೂ ಸಲಹೆಗಳನ್ನೂ ನೀಡಿದ ಡಾ॥ ಜಿ. ರಾಮಕೃಷ್ಣರವರಿಗೂ ನಾನು ಆಭಾರಿಯಾಗಿದ್ದೇನೆ.

ಕನ್ನಡ ಓದುವ ಅನೇಕ ಯುವಕ ಯುವತಿಯರು ಯಾರು ಈ ಪುಸ್ತಕವನ್ನು ಓದಲು ಕೈಗೆತ್ತಿಕೊಂಡಿದ್ದಾರೋ ಅವರೆಲ್ಲರಲ್ಲೂ ಇದು ಕ್ರಾಂತಿಯ ಕುರಿತಾದ ಹಂಬಲವನ್ನು ಚಿಗುರಿಸಲಿ, ಈಗಾಗಲೇ ಸಕ್ರಿಯರಾಗಿರುವವರ ಕೈಯಲ್ಲಿ ಇದೊಂದು ಉಪಯುಕ್ತ ಉಪಕರಣವಾಗಲಿ ಎಂದು ನಾನು ಹಂಬಲಿಸುತ್ತೇನೆ. ಅಮೆರಿಕಾದ ಕ್ರಾಂತಿಕಾರಿ ಕವಿ ವಾಲ್ಟ್ ವಿಟ್‌ಮನ್‌ನು 1848ರ ಸರಣಿ ಕ್ರಾಂತಿಗಳ ವೈಫಲ್ಯದ ನಂತರ ಕ್ರಾಂತಿಕಾರಿಗಳನ್ನು ಹುರಿದುಂಬಿಸುತ್ತಾ ಹೇಳಿದ 'ವಿಫಲ ಕ್ರಾಂತಿಕಾರಿಗೆ' ಎಂಬ ಕವನದ ಈ ಸಾಲುಗಳೊಂದಿಗೆ ನನ್ನ ಅರಿಕೆಯನ್ನು ಮುಗಿಸುತ್ತೇನೆ. ಆತ ಸ್ವಾತಂತ್ರ್ಯ ಎಂಬ ಪದವನ್ನು ಎಲ್ಲೆಲ್ಲಿ ಉಪಯೋಗಿಸಿದ್ದಾನೋ, ಅಲ್ಲೆಲ್ಲಾ ನಾವು 'ಕ್ರಾಂತಿ' ಎಂದು ಓದಿಕೊಳ್ಳಬೇಕಷ್ಟೇ,

*ಧೈರ್ಯವಿರಲಿ ತಮ್ಮ ಧೈರ್ಯವಿರಲಿ ತಂಗಿ*
*ಮುನ್ನಡೆಯುತ್ತಿರು, ಏನೇ ಬರಲಿ ಸ್ವಾತಂತ್ರ್ಯದ ಸೇವೆ ನಡೆಯುತ್ತಲೇ ಇರಬೇಕು*
*ಒಂದೆರಡು ಸೋಲಿನಿಂದ ಅಥವಾ ನೂರಾರು ಸೋಲುಗಳಿಂದಲೇ ಆಗಲೀ*
*ಬಗ್ಗುಬಡಿಯಲಾಗುವಂಥ ಧ್ಯೇಯ, ಅದು ಎಂಥ ಧ್ಯೇಯ...*
*ಅದು ಕಾಯುತ್ತಿರುತ್ತದೆ, ತನ್ನ ಘಳಿಗೆಗಾಗಿ, ತಾಳ್ಮೆಯಿಂದ...*

*ಧೀರರ ಗಂಟಲುಗಳ ತುಂಬ ರಕ್ತ ತುಂಬಿರಲಿ,*
*ನಾಚಿಕೆಯಿಂದ ಅವರ ಕಣ್ಣು ನೆಲದತ್ತ ಬಾಗಿರಲಿ*
*ಏನೇ ಆಗಿರಲಿ, ಅದೇನೇ ಆಗಿರಲಿ...*

*ಸ್ವಾತಂತ್ರ್ಯ ತನ್ನ ಜಾಗವನ್ನು ಖಾಲಿ ಮಾಡಿ ಹೋಗಿಲ್ಲ.*
*ಜಾಗ ಖಾಲಿ ಮಾಡುವ ಘಳಿಗೆ ಬಂದಾಗ*
*ಹೊರಹೋಗುವವರಲ್ಲಿ ಸ್ವಾತಂತ್ರ್ಯ ದೇವತೆ ಮೊದಲನೆಯವಳಲ್ಲ*
*ಆಕೆ ಎರಡನೆಯವಳಲ್ಲ, ಮೂರನೆಯವಳಲ್ಲ, ನೂರನೆಯವಳೂ ಅಲ್ಲ*
*ಆಕೆ ಎಲ್ಲರೂ ಹೊರಗೆ ಹೋದ ಮೇಲೆ ಮಾತ್ರ ಹೋಗುವಂಥವಳು*
*ಜಗದ ಎಲ್ಲ ಭಾಗದಿಂದ ಎಲ್ಲ ನರನಾರಿಯರು, ಆತ್ಮಸಾಕ್ಷಿಯೂ*
*ಹೊರಗೆ ಹೋದ ಮೇಲೆ ಮಾತ್ರ ಆಕೆ ವಿದಾಯ ಹೇಳುತ್ತಾಳೆ.*

*ಹೀಗಾಗಿ ಧೈರ್ಯವಿರಲಿ ಕ್ರಾಂತಿಕಾರಿ, ಕ್ರಾಂತಿಕಾರಿಣಿ*
*ನಾವು ಬರೇ ಗೆಲುವು ಮಾತ್ರ ಮಹಾನ್ ಎಂದುಕೊಂಡಿದ್ದೇವೇನು?*
*ನಿಜ ವಿಜಯದಲ್ಲಿ ಮಹಾನತೆ ಇದೆ*
*ಆದರೆ ಅನಿವಾರ್ಯವಾದಾಗ ಸೋಲಿನಲ್ಲೂ ಸಾವಿನಲ್ಲೂ*
*ಭವ್ಯತೆಯಿದೆ, ದಿವ್ಯತೆ ಇದೆ, ಮಹಾನತೆ ಇದೆ.*

ಈ ಆಶಾವಾದ, ಕೆಚ್ಚು, ವಿವೇಕವನ್ನು ನವೆಂಬರ್ ಮಹಾಕ್ರಾಂತಿ ನಮ್ಮಿಂದ ಅಪೇಕ್ಷಿಸುತ್ತದೆ.

**ಡಾ॥ ಬಿ. ಆರ್. ಮಂಜುನಾಥ್**

ಬೆಂಗಳೂರು
30 ಅಕ್ಟೋಬರ್ 2017

# ಸ್ವಲ್ಪ ನಿಲ್ಲಿ.. ಈತ ಜಾನ್ ರೀಡ್

ಹೌದು, ನೀವು ಪುಸ್ತಕವನ್ನು ಓದಲು ಆರಂಭಿಸುವ ಮುನ್ನ ಇದರ ಲೇಖಕನ ಬಗ್ಗೆ ತಿಳಿದುಕೊಂಡು ನಂತರ ಮುಂದುವರೆಯುವುದು ಒಳ್ಳೆಯದು.

ತನ್ನ ಬದುಕೇ ಬರೆಹವಾದ ಅಸಾಧಾರಣ ವ್ಯಕ್ತಿ ಈತ. ಬರೆದಂತೆಯೇ ಬದುಕಿದವನು. ಎಲ್ಲೋ ದೂರದಲ್ಲಿ ಬೆಚ್ಚಗೆ ಕುಳಿತು ತಿಂದುಂಡು ಆರಾಮವಾಗಿದ್ದು, ವ್ಯವಸ್ಥೆಯಿಂದ ಬೇಕಾದದ್ದನ್ನೆಲ್ಲಾ ಹೀರಿಕೊಳ್ಳುತ್ತಾ ಅದೇ ಸಮಯದಲ್ಲಿ ದುಡ್ಡಿಗೋ ಹೆಸರು ಮಾಡಿಕೊಳ್ಳಲೋ ಕ್ರಾಂತಿಯ ಬಗ್ಗೆ, ಯುದ್ಧದ ಬಗ್ಗೆ ಬರೆದವನಲ್ಲ ರೀಡ್. ಉಪವಾಸ, ಬಡತನ, ವ್ಯವಸ್ಥೆಯ ಕ್ರೌರ್ಯ ಎಲ್ಲವನ್ನೂ ಅನುಭವಿಸಿದವನು. ತನ್ನ ನಂಬಿಕೆಗಳಿಗಾಗಿ ಬಹಳಷ್ಟು ಕಷ್ಟ ಅನುಭವಿಸಿದವನು. ಕ್ರಾಂತಿಯಲ್ಲೂ, ಯುದ್ಧದಲ್ಲೂ ನೇರವಾಗಿ ಭಾಗವಹಿಸಿದವನು. ಅಮೆರಿಕಾದ ಒರೆಗಾನ್ ರಾಜ್ಯದ ಪೋರ್ಟ್‌ಲ್ಯಾಂಡ್ ಈತನ ಜನ್ಮಸ್ಥಳ.

ಜಾನ್ ರೀಡ್ ಸ್ಥಿತಿವಂತ ಕುಟುಂಬದಲ್ಲಿ ಹುಟ್ಟಿದವನು. ಅವನ ಮನೆ ಫ್ರೆಂಚ್ ಷಾಟೊ ಮಾದರಿಯಲ್ಲಿ ಕಟ್ಟಿದ ಭವ್ಯವಾದ ಸೌಧ. ಅಪ್ಪ ಬಹಳ ಕ್ರಿಯಾಶಾಲಿ, ಉತ್ಸಾಹಿ, ಧೈರ್ಯಸ್ಥ, ನೇರ ಮಾತು ನಡೆವಳಿಕೆಯ ವ್ಯಕ್ತಿ. ಅನೇಕ ಬಾರಿ ಬಲಿಷ್ಠರನ್ನು ಎದುರುಹಾಕಿಕೊಂಡಿದ್ದ. ದೈತ್ಯ ಟ್ರಸ್ಟ್‌ಗಳು ಬಡವರ ಸರ್ಕಾರದ ಜಮೀನನ್ನು ನುಂಗಲು ಬಂದಾಗ ಅದರ ವಿರುದ್ಧ ತಿರುಗಿಬಿದ್ದವನು. ಇಂಥ ಪ್ರತಿಭಟನೆಗಳಿಂದಾಗಿ ಏಟು ತಿಂದವನು. ಜೈಲು ಕಂಡವನು. ಬಾಲಕ ರೀಡ್, ವಾರಿಗೆಯ ಹುಡುಗರೊಂದಿಗೆ ಜಗಳದಲ್ಲಿ ಹೆದರಿಕೊಂಡಾಗ ಅಪ್ಪನನ್ನು ನೆನಪಿಸಿಕೊಂಡು 'ನಾನು ನಮ್ಮ ಅಪ್ಪನಂತಾಗಲಿಲ್ಲವಲ್ಲ' ಎಂದು ದುಃಖಿಸಿದನಂತೆ. ಆದರೆ ನಿಜಕ್ಕೂ ಅಪ್ಪ ತನ್ನ ಗುಣಗಳಿಗೆ ಮಗನನ್ನು ಉತ್ತರಾಧಿಕಾರಿಯಾಗಿ ಮಾಡಿದ್ದ. ಮುಂದೆ ಇತಿಹಾಸ ಇದಕ್ಕೆ ಯಥೇಚ್ಛವಾಗಿ ಪುರಾವೆ ಒದಗಿಸುತ್ತದೆ.

ಹುಡುಗ ರೀಡ್ ತುಂಬ ಓದುತ್ತಿದ್ದ. ಅಲ್ಲಿಂದ ಅವನ ಕಲ್ಪನಾ ಪ್ರಪಂಚವೂ, ಭಾವ ಪ್ರಪಂಚವೂ ಶ್ರೀಮಂತವಾಗುತ್ತ ಹೋಯಿತು ನೋಡಿ. ಮನೆಯ ಅಟ್ಟದ ಮೇಲೆ ಸೋದರರನೊಂದಿಗೆ ನಾಟಕ ಆಡುತ್ತಿದ್ದ. ರಮ್ಯವಾದ ಕಥೆಗಳನ್ನು ಹುಟ್ಟಿಸಿಕೊಂಡು ಹೇಳುವ ಶಕ್ತಿ ಬೆಳೆಯಿತು. ಹುಡುಗ ಸಾಹಸಿಯಾದ. ಮನೆಯಿಂದ ಶಾಲೆಗೆ ಭೂಮಿಯಲ್ಲಿ ಸುರಂಗ ಕೊರೆಯಲು ಪ್ರಯತ್ನಿಸಿದ್ದ !

ಹಾರ್ವರ್ಡ್ ವಿಶ್ವವಿದ್ಯಾಲಯ ಅಮೆರಿಕಾದಲ್ಲೂ, ಜಗತ್ತಿನಲ್ಲೂ ಬಹಳ ಪ್ರತಿಷ್ಠಿತವಾದ ವಿಶ್ವವಿದ್ಯಾಲಯ. ಅಮೆರಿಕಾದ ದೊಡ್ಡ ದೊಡ್ಡ ಬಂಡವಾಳಗಾರರು, ತೀರಾ ಮೇಲ್ವರ್ಗದ ಜನ ತಮ್ಮ ಮಕ್ಕಳನ್ನು ಅಲ್ಲಿಗೆ ಸೇರಿಸುತ್ತಿದ್ದರು. ತಮ್ಮ ಮಕ್ಕಳು ಭಾರೀ ತಿಳಿವಳಿಕಸ್ಥರಾಗಬೇಕು, ಆದರೆ ಒಂದಿಷ್ಟೂ ಹಾದಿ ತಪ್ಪಬಾರದು, 'ರ್‍ಯಾಡಿಕಲ್' ಆಗಬಾರದು

ಎಂಬುದು ಆ ವರ್ಗದ ಬಯಕೆ. ವಿಶ್ವವಿದ್ಯಾಲಯ ಅದಕ್ಕನುಗುಣವಾದ ವಾತಾವರಣವನ್ನು ಸೃಷ್ಟಿಸಿತ್ತು. ವಿಶ್ವವಿದ್ಯಾಲಯದ ನೇತೃತ್ವದಲ್ಲಿದ್ದವರೆಲ್ಲಾ ಇಂಥ 'ಶ್ರೇಷ್ಠ, ಕುಲೀನ'ರೇ !

ಜಾನ್ ರೀಡ್ ತುಂಬ ಲವಲವಿಕೆಯ, ತುಂಟ ಹುಡುಗ. ಬೀದಿ ಜಗಳದಲ್ಲೂ ಬೆನ್ನು ತಿರುಗಿಸದೆ ಸೆಟೆದು ನಿಂತು ಅದರಿಂದ ಸೋಲೇ ಬರಲಿ, ಗೆಲುವೇ ಬರಲಿ ಆನಂದಿಸಿದವನು. ಅಯ್ಯೋ ನಾನು ಹೆದರುತ್ತಿದ್ದ ಗೂಂಡಾಗಳ ಶಕ್ತಿ ಇಷ್ಟೇನೇ, ಎಂದು ಅಚ್ಚರಿಪಡುತ್ತಾ, ಪ್ರತಿ ಸಂಘರ್ಷದ ಮೂಲಕವೂ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುತ್ತಾ ಹೋದವನು. ತಾನು ಸ್ವತಃ ಹೆಸರುವಾಸಿಯಾದ 'ಮೂಲ' ಅಮೆರಿಕನ್ ಕುಟುಂಬದಿಂದ ಬಂದು, ಶ್ರೀಮಂತ ಹಿನ್ನೆಲೆಯವನಾದರೂ ಅವನಿಗೆ ಹಾರ್ವರ್ಡ್‌ನ 'ಸ್ನಾಬ್'ಗಳ ಬಗ್ಗೆ – ಪ್ರತಿಷ್ಠಾ ಪೂಜಕರ ಬಗ್ಗೆ ಅಸಹ್ಯವಿತ್ತು. ಹಾರ್ವರ್ಡ್‌ನಲ್ಲಿ ಅವನಿದ್ದಾಗ ವಿದ್ಯಾರ್ಥಿಗಳ ನಡುವೆ ಒಂದು ಬಂಡಾಯದ ಗಾಳಿ ಬೀಸತೊಡಗಿತು. ಜಾನ್ ಅದರೊಂದಿಗೆ ಸೇರಿಕೊಂಡ. ಅವರು, 'ಕುಲೀನ'ರನ್ನು ಅವರು ಆಕ್ರಮಿಸಿಕೊಂಡಿದ್ದ ಉನ್ನತ ಸ್ಥಾನಗಳಿಂದ ಕೆಳಗೆಳೆದು ಹಾಕಿದರು. ಶೈಕ್ಷಣಿಕ ಪರಿಸರ ಉತ್ತಮವಾಗಬೇಕೆಂದು ಆಡಳಿತ ಮಂಡಳಿಯ ವಿರುದ್ಧವೂ ಸೆಣಸಾಡಿದರು.

ಆಲ್ಬರ್ಟ್ ರೈಸ್ ವಿಲಿಯಮ್ಸ್ ಎಂಬಾತ ಸಹ ಅಮೆರಿಕಾದ ಪ್ರಗತಿಶೀಲ ಪತ್ರಕರ್ತ. ಜಾನ್ ರೀಡ್‌ನ ಸ್ನೇಹಿತನಾಗಿದ್ದು ಅವನು ಸತ್ತ ಮೇಲೆ ಗೆಳೆಯನ ಬಗ್ಗೆ ಒಳ್ಳೆಯ ಲೇಖನ ಬರೆದಿದ್ದಾನೆ. ಅವನ ಪ್ರಕಾರ ರೀಡ್‌ನೇ ಸ್ವತಃ ಹಾರ್ವರ್ಡ್‌ನಲ್ಲಿ ಸಮಾಜವಾದಿ ಕ್ಲಬ್ಬನ್ನು ಸ್ಥಾಪಿಸಿದ. ರೀಡ್ ಈ ಹಂತದಲ್ಲಿ ಒಳ್ಳೆಯ ಲೇಖಕನಾಗಿ ರೂಪುಗೊಳ್ಳಲಾರಂಭಿಸಿದ್ದ. ಆತ ಒಳ್ಳೆಯ ಕವಿ ಸಹ ಎಂಬುದು ಅನೇಕರಿಗೆ ಗೊತ್ತಿಲ್ಲ. ಅವನ ಅನೇಕ 'ಸೌಮ್ಯವಾದಿ' ಸ್ನೇಹಿತರು 'ನಿನ್ನ ಲೇಖನಿ ಚೆನ್ನಾಗಿದೆ, ನೀನು ಸಾಹಿತಿಯಾಗು' ಎಂದರು. ಆದರೆ ರೀಡ್‌ನ ಆಸಕ್ತಿಗಳು ಅಷ್ಟು ಹೊತ್ತಿಗೆ ಅನೇಕ ಟಿಸಿಲುಗಳಾಗಿ ಒಡೆದುಕೊಂಡಿದ್ದವು. ಲೇಖಕ, ಸಿದ್ಧಾಂತಿ, ಕ್ರಿಯಾಶೀಲ ಹೋರಾಟಗಾರ, ವರದಿಗಾರ ಎಲ್ಲಾ. ಕಾವ್ಯ ಜಗತ್ತಿಗೆ ಆದ ನಷ್ಟದಿಂದ ಹೋರಾಟದ ಜಗತ್ತಿಗಂತೂ ಬಹಳ ದೊಡ್ಡ ಲಾಭವಾಯಿತು.

ರೀಡ್ ಚೆನ್ನಾಗಿ ಫುಟ್‌ಬಾಲ್ ಆಡುತ್ತಿದ್ದ. ವಿಶ್ವವಿದ್ಯಾಲಯದ ಎರಡು ಪತ್ರಿಕೆಗಳಲ್ಲಿ ಕ್ರಿಯಾಶೀಲನಾಗಿದ್ದು ಒಂದಕ್ಕೆ ಸಂಪಾದಕನೂ ಆದ. ತುಂಬ ಚೆನ್ನಾಗಿ ಹಾಡುತ್ತಾ ಸಂಗೀತದ ಕ್ಲಬ್‌ಗೂ ನಾಯಕತ್ವ ನೀಡಿದ. ಇವನ ಬಗ್ಗೆ 'ದಿ ಎಜುಕೇಶನ್ ಆಫ್ ಜಾನ್ ರೀಡ್' ಎಂಬ ಪುಸ್ತಕ ಬಂದಿದೆ. ರೀಡ್‌ನ ವರ್ಣರಂಜಿತ ವ್ಯಕ್ತಿತ್ವದ ಬಗ್ಗೆ ಬಹಳಷ್ಟು ಮಾಹಿತಿ ನೀಡುವ ಈ ಪುಸ್ತಕಕ್ಕೆ ಮುನ್ನುಡಿ ಬರೆದವನು, ಇವನ ಬಗ್ಗೆ ಹತ್ತಿರದಿಂದ ತಿಳಿದವನಾಗಿದ್ದ ಇನ್ನೊಬ್ಬ ಮಿತ್ರ ಜಾನ್ ಸ್ಟುವರ್ಟ್. ಅವನ ಪ್ರಕಾರ ಜಾನ್‌ಗೆ ಆಗ ಎರಡು ದಿಕ್ಕಿನ ಸೆಳೆತಗಳಿದ್ದವು. ಒಂದು ಸೆಳೆತ ಪ್ರತಿಭಾಶಾಲಿಯಾದ ಅವನನ್ನೂ ಕುಲೀನರ, ಊರ್ಧ್ವಭ್ರುಕುಟಿಗಳ (high browed) ನಡುವೆ ನೀನು ಏನು ಎಂದು ತೋರಿಸು, ಅದರ ಮನ್ನಣೆ ಗಳಿಸು ಎಂದು ಹೇಳುತ್ತಿತ್ತು. ಇದರ ವಿರುದ್ಧ ದಿಕ್ಕಿನ ಸೆಳೆತವು ಆತನಿಗೆ ಇವರ ಅಹಂಕಾರವನ್ನು ವಿರೋಧಿಸು, ಜಂಬದ ಬಲೂನಿಗೆ ಸೂಜಿ ಚುಚ್ಚು, ಅವರನ್ನು ಖಂಡಿಸು ಎಂದು ವಿದ್ರೋಹದ ಪ್ರೇರಣೆಯನ್ನು ಕಿವಿಯಲ್ಲಿ ಹೇಳುತ್ತಿತ್ತು. ಕಡೆಗೂ ಗೆದ್ದದ್ದು ವಿದ್ರೋಹದ ರೀಡ್, ಎಲ್ಲರಂತೆ ತಾನು ಆಗಲು ಒಲ್ಲದ ನಮ್ಮ ಪರಿಚಿತನಾದ ರೀಡ್.

ಇವನನ್ನು ಬಲ್ಲವರು, ಗೆಳೆಯರು ಎಂದುಕೊಂಡರು, 'ಇದೆಲ್ಲಾ ನಾಲ್ಕು ದಿನದ ಆಟ, ಸಮಾಜವಾದ ಇವನ ಚರ್ಮಕ್ಕಿಂತ ಆಳಕ್ಕಿಳಿಯಲಾರದು. ಬದುಕಿನ ಆಶೆ-ಆಮಿಷಗಳು ಇವನನ್ನು ಮಾಗಿಸುತ್ತವೆ' ಎಂದು. ಇಷ್ಟಾಗಿಯೂ ಅವನ ಪ್ರತಿಭಾಶಾಲಿ ಲೇಖನಿ ಆಗಲೇ ಇವನದ್ದು ವಿಲಕ್ಷಣ ಪ್ರತಿಭೆ ಎಂಬ ಕೀರ್ತಿಯನ್ನು ವಿಶ್ವವಿದ್ಯಾಲಯದಲ್ಲಿ ತಂದುಕೊಟ್ಟಿತ್ತು.

ಕ್ಯಾಂಪಸ್‌ನಿಂದ ಹೊರ ನಡೆದು ರೀಡ್ ನ್ಯೂಯಾರ್ಕ್‌ಗೆ ಬಂದ. ಅವನು ಎಂದೂ ಒಣಸಿದ್ಧಾಂತಿಯಾಗಲಿಲ್ಲ. ಬದುಕನ್ನು ನೋಡುತ್ತಾ, ಪರೀಕ್ಷಿಸುತ್ತಾ, ಸಮಾಜದಲ್ಲಿ ಮಡುಗಟ್ಟಿದ ವೇದನೆಯ ಬೇರುಗಳನ್ನು ಹುಡುಕಲು ಯತ್ನಿಸಿದ. ನ್ಯೂಯಾರ್ಕ್‌ನಲ್ಲಿ ಅವನು ಮೋಟರ್ ಕಾರುಗಳನ್ನು ನೋಡಿದ, ಚಿಂದಿ ಬಟ್ಟೆಯುಟ್ಟು, ಫುಟ್‌ಪಾತ್‌ಗಳಲ್ಲಿ ವಾಸವಿದ್ದವರನ್ನೂ ನೋಡಿದ. ಸೂಳೆಯರನ್ನು, ಭಿಕ್ಷುಕರನ್ನು ಸಮೀಪದಿಂದ ವೀಕ್ಷಿಸುತ್ತಾ ತಾನು ಅಲೆಮಾರಿಯಾಗಿ ಅಲೆದ. ಅಲ್ಲಿನ ಕೇಂದ್ರ ಸ್ಥಳ 'ಮ್ಯಾನ್‌ಹಟನ್'ಬಗ್ಗೆ ಒಳ್ಳೆಯ ಪದ್ಯ ಬರೆದಿದ್ದಾನೆ. ಬದುಕಿನ ಈ ಹಂತದಲ್ಲಿ ತನ್ನ ತಾಯಿಗಾಗಿ ದುಡಿಯಬೇಕು, ಶ್ರೀಮಂತನಾಗಬೇಕು, ಪ್ರಸಿದ್ಧ ಬರೆಹಗಾರನಾಗಬೇಕು ಎಂಬ ಹಂಬಲ ಅವನಲ್ಲಿ ಜೀವಂತವಾಗಿತ್ತು. ಆದರೆ ಅದಕ್ಕಾಗಿ ರಾಜಿಮಾಡಿಕೊಳ್ಳುವುದು ಅವನಿಗೆ ಸಾಧ್ಯವಿರಲಿಲ್ಲ. ಅವನು ಬಂಡವಾಳಗಾರರನ್ನು, ಪ್ರತಿಷ್ಠಾಪೂಜಕರನ್ನು, ಮಧ್ಯಮವರ್ಗದ ಮೌಲ್ಯಗಳನ್ನು ಗೇಲಿ ಮಾಡುತ್ತಲೇ ಹೋದ.

ಅವು ಅಮೆರಿಕಾದಲ್ಲಿ ಸಮಾಜವಾದ ಜನಪ್ರಿಯವಾಗಿದ್ದ ದಿನಗಳು. ಎಷ್ಟರಮಟ್ಟಿಗೆ ಎಂದರೆ 'ಅಪೀಲ್ ಟು ರೀಸನ್' ಎಂಬ ವಾರ ಪತ್ರಿಕೆಗೆ ಐದು ಲಕ್ಷ ಜನ ಚಂದಾದಾರರಿದ್ದರು. 'ದಿ ಮಾಸಸ್' ಎಂಬುದು ಇನ್ನೊಂದು ಉದಯೋನ್ಮುಖ ಪತ್ರಿಕೆ. ಮಾರ್ಕ್ಸ್‌ವಾದದ ಗಂಭೀರ ಅನುಯಾಯಿಗಳು ಪತ್ರಿಕೆಯ ಜೊತೆಗಿದ್ದರು.... ಅಲ್ಲಿ ರೀಡ್‌ನಿಗೆ ತನ್ನ ಅನಿಸಿಕೆಗಳ ಮುಕ್ತ ಅಭಿವ್ಯಕ್ತಿಗೆ ಅವಕಾಶ ಸಿಕ್ಕಿತು.

ಸ್ಟುವರ್ಟ್ ಹೇಳುತ್ತಾನೆ, "ರೀಡ್ ವೇಗವಾಗಿ ಕಲಿತದ್ದು ಯುದ್ಧದ ನಡುವೆ, ಅದು ರಾಷ್ಟ್ರಗಳ ಮಧ್ಯದ ಯುದ್ಧವಿರಬಹುದು, ವರ್ಗಗಳ ನಡುವಿನ ಸಮರವಿರಬಹುದು, ಅವನ ಅತ್ಯುತ್ತಮ ಬರೆವಣಿಗೆ ಬಂದದ್ದು ಯುದ್ಧದ ಕೋಲಾಹಲದ ನಡುವೆ... ಅವನಿಗೆ ತಟಸ್ಥವಾಗಿರುವುದು ಸಾಧ್ಯವಿರಲಿಲ್ಲ. ಅವನಿಗೆ ಸರಿ ಅನಿಸಿದ್ದರ ಪಕ್ಷಪಾತಿಯಾಗುತ್ತಿದ್ದ."

ನ್ಯೂಜೆರ್ಸಿ ಸಂಸ್ಥಾನದ ಪ್ಯಾಟೆರ್‌ಸನ್ ರೇಷ್ಮೆ ಬಟ್ಟೆಯ ಉತ್ಪಾದನೆಯ ಕೇಂದ್ರವಾಗಿತ್ತು. 1913ರಲ್ಲಿ ಅಲ್ಲಿ ಮುಷ್ಕರ ಆರಂಭವಾಯಿತು. ಹೋರಾಟದ ನಾಯಕರು ನ್ಯೂಯಾರ್ಕ್‌ನಿಂದ ಪ್ರಗತಿಶೀಲ ಬುದ್ಧಿಜೀವಿಗಳನ್ನು ಬೆಂಬಲಕ್ಕಾಗಿ ಕರೆದುಕೊಂಡು ಬಂದರು. ಅದರಲ್ಲಿ ರೀಡ್‌ನೂ ಒಬ್ಬ. ಅಲ್ಲಿ ನಡೆಯುತ್ತಿದ್ದ ಭೀಕರ ಶೋಷಣೆ, ಕಾರ್ಮಿಕರ ಹೃದಯ ವಿದ್ರಾವಕ ಬವಣೆ ಅವನ ಮನಸ್ಸನ್ನು ಕಲಕಿತು. ಅವನು ತನ್ನ ಎಲ್ಲಾ ಸಹಜ ಉತ್ಸಾಹ, ಲವಲವಿಕೆಯೊಂದಿಗೆ ಅದರಲ್ಲಿ ಧುಮುಕಿ ವರದಿ ಮಾಡಲಾರಂಭಿಸಿದ. ಪೊಲೀಸರಿಂದ ಏಟುತಿಂದ, ಜೈಲಿನ ಶಿಕ್ಷೆಯನ್ನೂ ಅನುಭವಿಸಬೇಕಾಗಿ ಬಂತು. ಹಾಡುವ ಹಕ್ಕಿಯಂತೆ ನಗರದಿಂದ ಬಂದಿದ್ದ ಹುಡುಗನ ಗಂಟಲಿನಿಂದ ಈಗ ಕೋಮಲ, ರಮ್ಯ ಹಾಡುಗಳು ಹೊರಬರಲಿಲ್ಲ. ಹೋರಾಟದ ಕಹಳೆಯಾಗಿತ್ತು ಅವನ ದನಿ. ಕಾರ್ಮಿಕ ನಾಯಕ ಹೇವುಡ್ ಅವನನ್ನು ಒಂದು ಸಾರ್ವಜನಿಕ ಸಭೆಗೆ ಕರೆದುಕೊಂಡು ಹೋಗಿ ಪರಿಚಯಿಸಿದ. ಮಾತನಾಡುತ್ತಾ, ಹಾಡುತ್ತಾ ಜಾನ್ ರೀಡ್, ಪಲ್ಲವಿಯಲ್ಲಿ ಮಾಲಿಕರನ್ನು

ಧಿಕ್ಕರಿಸುವ ಸಾಲು ಬಂದಾಗಲೆಲ್ಲಾ ಅಲ್ಲಿದ್ದ ಇಪ್ಪತ್ತೈದು ಸಾವಿರ ಜನರಿಗೂ ಅದನ್ನು ಹಾಡಲು ಕಲಿಸಿದ! ಅದನ್ನು ಕೇಳಿದವರು ಹೇಳುತ್ತಾರೆ, 'ಅದು ಸಮುದ್ರದ ಮೊರೆತದಂತಿತ್ತು. ವ್ಯವಸ್ಥೆಯ ಯಜಮಾನರು ಕ್ರಾಂತಿ ಊರಿಗೆ ಬಂದೇಬಿಟ್ಟಿತು ಎಂದು ಹೆದರಿಕೊಂಡಿದ್ದರು' ಎಂದು. ಅದೇ ರಿತಿ ಇನ್ನೊಮ್ಮೆ ಮ್ಯಾಡಿಸನ್ ಸ್ಕ್ವೇರ್‌ನಲ್ಲೂ ಸಾವಿರಾರು ಜನರೊಂದಿಗೆ ಹಾಡಿದ್ದ.

ಮೆಕ್ಸಿಕೋದಲ್ಲಿ ಆಗ ಒಂದು ಸಶಸ್ತ್ರ ಬಂಡಾಯ ಶುರುವಾಗಿತ್ತು. ಝಪಾಟಾ ಮತ್ತು ಪಾಂಚೋ ವಿಲ್ಲಾ ಎಂಬ ಇಬ್ಬರು ಆಕರ್ಷಕ ನಾಯಕರ ನೇತೃತ್ವದಲ್ಲಿ ಜೀತದಾಳುಗಳು, ಬಡರೈತರು ಕ್ರೂರಿಗಳೂ, ಭ್ರಷ್ಟರೂ ಆದ ಸರ್ವಾಧಿಕಾರಿಗಳ ವಿರುದ್ಧ ತಿರುಗಿಬಿದ್ದಿದ್ದರು. ಮೆಟ್ರೋಪಾಲಿಟನ್ ಪತ್ರಿಕೆ ರೀಡ್‌ನನ್ನು ಅಲ್ಲಿಗೆ ವರದಿಗಾರನಾಗಿ ಕಳಿಸಲು ಬಯಸಿತು. ರೀಡ್ ಉತ್ಸಾಹದಿಂದ ಒಪ್ಪಿಕೊಂಡ. ಅವನಿಗೆ ಇಪ್ಪತ್ತಾರು ವಯಸ್ಸು, ಬಿಸಿರಕ್ತ ಕುದಿಯುತ್ತಿತ್ತು. ಆಗ ಮೆಕ್ಸಿಕೊ ತುಂಬ ಅಪಾಯದ ಜಾಗ. ಆದರೆ ರೀಡ್‌ಗೆ ಅಪಾಯದ ಭಯವಿರಲಿಲ್ಲ, ಅದು ಅವನ ಜೀವಮಾನದ ಸ್ನೇಹಿತ. ರೀಡ್ ಮರುಭೂಮಿಯಲ್ಲಿ ಕುದುರೆ ಸವಾರಿ ಮಾಡುತ್ತಾ ಆ ಸಶಸ್ತ್ರ ಬಂಡಾಯಗಾರರೊಂದಿಗೆ ಓಡಾಡಿದ. ಬೂರ್ಶ್ವಾ ಪತ್ರಿಕೆಗಳು ಚಿತ್ರಿಸಿದ್ದಕ್ಕಿಂತ ಈ ಜನ ತುಂಬ ಭಿನ್ನವಾಗಿದ್ದರು. ಅವರು ರಕ್ತ ಪಿಪಾಸುಗಳಾಗಿರಲಿಲ್ಲ. ತುಂಬ ಸರಳವಾಗಿದ್ದರು, ನ್ಯಾಯ ನಿಷ್ಠುರವಾಗಿದ್ದರು, ಧೀರರಾಗಿದ್ದರು, ಬದುಕಿನ ಆನಂದಕ್ಕೆ ಸ್ಪಂದಿಸುತ್ತಿದ್ದರು. ಇದೆಲ್ಲಾ ರೀಡ್‌ನ ಸ್ವಂತ ಗುಣಗಳು.

ನಾಲ್ಕು ತಿಂಗಳ ನಂತರ ಅಮೆರಿಕಾಗೆ ಬಂದ ರೀಡ್; ಅಷ್ಟು ಹೊತ್ತಿಗೆ ಅವನು ಮಹಾ ಸಾಹಸಿಯೂ, ಪ್ರತಿಭಾವಂತನೂ ಆದ ಲೇಖಕ ಎಂಬ ಹೆಸರು ಹರಡಿತ್ತು. ಅನೇಕ ಗಣ್ಯರು ಅವನನ್ನು ಹುಡುಕಿಕೊಂಡು ಬಂದು ಪತ್ರಿಕೆಗಳಲ್ಲಿ ಕೆಲಸ ಕೊಟ್ಟರು. ಉನ್ನತ ಸಮಾಜಕ್ಕೂ ಅವನ ಬಗ್ಗೆ ಆಕರ್ಷಣೆ ಹುಟ್ಟಿತ್ತು. ಎಷ್ಟರ ಮಟ್ಟಿಗೆ ಎಂದರೆ ಅಮೆರಿಕಾದ ಅಧ್ಯಕ್ಷನನ್ನು ಭೇಟಿಯಾಗಲು, ಸಂದರ್ಶಿಸಲು ಅವನಿಗೆ ಅವಕಾಶ ಸಿಕ್ಕಿತು. ಅಧ್ಯಕ್ಷ ವುಡ್ರೋ ವಿಲ್ಸನ್‌ಗೆ ಉದಾರವಾದಿ ಜನತಾಂತ್ರಿಕ ರಾಜಕಾರಣಿ ಎಂಬ ಹೆಸರಿತ್ತು. ಏನೇ ಆದರೂ ಅಮೆರಿಕಾ ದೇಶವು ಮೆಕ್ಸಿಕೋದ ಆಂತರಿಕ ವಿಷಯದಲ್ಲಿ ತಲೆಹಾಕಬಾರದು ಎಂದು ರೀಡ್ ಅಧ್ಯಕ್ಷನಿಗೆ ಬುದ್ಧಿಹೇಳಿದ ! ಅಧ್ಯಕ್ಷನು ಸಹ ಇವನ ಅಭಿಪ್ರಾಯವನ್ನು ಒಪ್ಪಿಕೊಂಡಂತೆ ಮಾತನಾಡಿದ.

ಆದರೆ ರೀಡ್ ಆಳುವ ವರ್ಗದ ಇಂಥ ಮೆಚ್ಚುಗೆಯನ್ನು ಉಳಿಸಿಕೊಳ್ಳಲಿಲ್ಲ. ಅವನು ಕೊಲರೆಡೊದಲ್ಲಿ ನಡೆಯುತ್ತಿದ್ದ ಕಲ್ಲಿದ್ದಲು ಗಣಿ ಕಾರ್ಮಿಕರ ಮುಷ್ಕರವನ್ನು ವರದಿ ಮಾಡಲು ಹೋದ. ಮತ್ತೆ ಪೊಲೀಸರಿಂದ ಏಟು ತಿಂದ. ಜೈಲಿಗೆ ಹೋಗಿ ಬರುತ್ತಲೇ ಇದ್ದ.

1914ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾಯಿತು. ಅಮೆರಿಕಾ ಹೆಸರಿಗೆ ತಟಸ್ಥ ರಾಷ್ಟ್ರವಾಗಿತ್ತು ಅಷ್ಟೇ, ಆದರೆ ಅದಕ್ಕೂ ಯುದ್ಧ ಬೇಕಿತ್ತು. ದೇಶದೊಳಗೆ ಆರ್ಥಿಕ ಬಿಕ್ಕಟ್ಟಿತ್ತು. ಅದರಿಂದ ಹೊರಬರಲು ಶಸ್ತ್ರಾಸ್ತ್ರಗಳನ್ನು ತಯಾರಿಸಿ ಮಾರಾಟ ಮಾಡಿ ಹಣಮಾಡಿಕೊಳ್ಳುವ ಹುನ್ನಾರ ಅಮೆರಿಕಾದ ಬಂಡವಾಳಗಾರರದ್ದು. ಹೀಗಾಗಿ ಕ್ರಮೇಣ ಅಮೆರಿಕಾದಲ್ಲಿ ಯುದ್ಧೋನ್ಮಾದ, ಮಿತ್ರ ರಾಷ್ಟ್ರಗಳ ಪರವಾದ ವಕಾಲತ್ತು ಆರಂಭವಾಯಿತು. ತಾವು ಶಾಂತಿಪರ ಎಂದು ಹೇಳಿಕೊಳ್ಳುತ್ತಿದ್ದ ಬುದ್ಧಿಜೀವಿಗಳೆಲ್ಲಾ ಇದ್ದಕ್ಕಿದ್ದಂತೆ ತಮ್ಮನ್ನೇ ಮಾರಿಕೊಂಡು ಅಂಧರಾಷ್ಟ್ರಾಭಿಮಾನಿಗಳಾಗಿ, ಯುದ್ಧದ ಪ್ರಚಾರಕರಾಗಿಬಿಟ್ಟರು. ಇದರಲ್ಲಿ ಅವನ ಹಾರ್ವರ್ಡ್, ಕೇಂಬ್ರಿಡ್ಜ್ ಸ್ನೇಹಿತರೂ ಇದ್ದರು.

ರೀಡ್ ತುಂಬ ಬೇಸರಪಟ್ಟುಕೊಂಡ. ಈ ಯುದ್ಧ ವರ್ತಕರ ಯುದ್ಧ. ಮಾರುಕಟ್ಟೆ ಕಬಳಿಸಿಕೊಳ್ಳಲು ಎರಡು ಬಂಡವಾಳಶಾಹಿ ರಾಷ್ಟ್ರಗಳ ಗುಂಪು ಕಿತ್ತಾಡುತ್ತಿವೆ. ಇದರಲ್ಲಿ ಜನತೆಯ ಯಾವ ಹಿತಾಸಕ್ತಿಯೂ ಇಲ್ಲ ಎಂದು ಅವನು ವಾದಿಸಿದ.

ಅಂತೂ ಇಂತೂ ಯುದ್ಧದ ವರದಿಗಾರನಾಗಿ ಅವನು ಯುರೋಪಿನಲ್ಲಿದ್ದ ಪಶ್ಚಿಮ ರಣಾಂಗಣವನ್ನು ತಲುಪಿದ. ಅಲ್ಲಿ ಅವನು ಕಂಡ ಸತ್ಯವೆಂದರೆ ಯುದ್ಧದಲ್ಲಿ ಶ್ರೀಮಂತ ವರ್ಗದವರಿಗೆ ಆಸಕ್ತಿಯಿತ್ತು. ಆದರೆ ಜನಸಾಮಾನ್ಯರು ಯುದ್ಧದಿಂದ ಸುಸ್ತಾಗಿದ್ದರು. ಅವರಿಗೆ ಇನ್ನೊಂದು ದೇಶವನ್ನು, ಅವರ ಜನರನ್ನು, ನಾವೇಕೆ ದ್ವೇಷಿಸಬೇಕು ಎಂಬುದರ ಬಗ್ಗೆ ಯಾವ ಸ್ಪಷ್ಟತೆಯೂ ಇರಲಿಲ್ಲ. ಇಡಿಯ ಯುರೋಪು ವಿನಾಶದ ಹಾದಿಯಲ್ಲಿತ್ತು. ರೀಡ್ ಅನೇಕ ದೇಶಗಳನ್ನು ಸುತ್ತಿದ. ಸರ್ಬಿಯಾದಲ್ಲಿ ಹಾದು ಹೋಗುವಾಗ ಅವನು ಹೆಣಗಳು ರಾಶಿ ಬಿದ್ದಿದ್ದ ಜಾಗವೊಂದರಲ್ಲಿ ನಡೆಯಬೇಕಾಯಿತು. ಕೊಳೆತ ಹೆಣಗಳು ಕೆಸರಿನೊಂದಿಗೆ ಬೆರೆತು ಹೋಗಿದ್ದವು. ಕಾಲಿಟ್ಟರೆ ಕಚಕ್ ಪಿಚಕ್ ಎನ್ನುವ ಕೆಸರಿನಲ್ಲಿ ಬೂಟುಗಳ ಕೆಳಗೆ ಮೂಳೆ ಮುರಿಯುವ ಸದ್ದು. ಬೀಭತ್ಸವಾದ ದೃಶ್ಯ. ರೀಡ್ ಇದ್ದದ್ದನ್ನು ಇದ್ದ ಹಾಗೆಯೇ ವರದಿ ಮಾಡಿದ. ಅಮೆರಿಕನ್ ಆಳುವ ವರ್ಗಕ್ಕೆ ಖುಷಿಯಾಗುವ ಯುದ್ಧದ ರೋಮಾಂಚಕಾರಿ ಕಥೆಯನ್ನು, ಮಿತ್ರರಾಷ್ಟ್ರಗಳ 'ದಿಗ್ವಿಜಯ'ವನ್ನೂ ಅವನು ವರ್ಣಿಸಲಿಲ್ಲ. ಇದ್ದಕ್ಕಿದ್ದಂತೆ ಪತ್ರಿಕೋದ್ಯಮದಲ್ಲಿ ಅವನು ಅನಾಥನಾಗಿಬಿಟ್ಟ. ರುಡ್‌ಯಾರ್ಡ್ ಕಿಪ್ಲಿಂಗ್ ಬಹಳ ಮೆಚ್ಚಿಕೊಂಡಿದ್ದ ಈ ತರುಣ ವರದಿಗಾರನಿಗೆ ಈಗ ಪತ್ರಿಕೆಗಳ ಜಗತ್ತಿನಲ್ಲಿ ಮಿತ್ರರೇ ಇಲ್ಲದಂತಾದರು. ಯಾವಾಗಲೂ ತೆರೆದಿದ್ದ ಮಿತ್ರರ ಮನೆಯ ಬಾಗಿಲುಗಳೂ ಈಗ ಮುಚ್ಚಿಕೊಂಡವು.

ಇಂಥ ಹುಚ್ಚು ಯುದ್ಧವನ್ನು ಅಮೆರಿಕನ್ ಕಾರ್ಮಿಕ ವರ್ಗವೂ ವಿರೋಧಿಸುತ್ತಿಲ್ಲವಲ್ಲ ಎಂದು ಅವನಿಗೆ ನೋವಾಯಿತು. ಅವನ ನಂಬಿಕೆ, ವಿಶ್ವಾಸಗಳು ಅಲುಗಾಡುತ್ತಿದ್ದ ಕ್ಷಣ ಅದು. ಯಾರಾದರೂ ಯುದ್ಧವನ್ನು ವಿರೋಧಿಸಬಾರದೇ ಎಂದು ಅವನು ತಹತಹಿಸುತ್ತಿದ್ದ. ಆಗ ಅವನಿಗೆ ಜರ್ಮನಿಯಿಂದ ಕಮ್ಯುನಿಸ್ಟ್ ನಾಯಕ ಕಾರ್ಲ್ ಲೀಬ್‌ನೆಕ್ಟ್‌ನ ದನಿ ತೇಲಿ ಬಂತು. ಆತ ಯುದ್ಧದಲ್ಲಿನ ಲಾಭದ ಹಿತಾಸಕ್ತಿಗಳನ್ನೂ ಸರಕಾರಕ್ಕೆ ಕೊಂಚವೂ ಅಂಜದೆ ಬಯಲಿಗೆಳೆದಿದ್ದ. ಅದೇ ಸಮಯದಲ್ಲಿ ಲೆನಿನ್, ಇದು ಸಾಮ್ರಾಜ್ಯಶಾಹಿಗಳ ಯುದ್ಧ, ಕಾರ್ಮಿಕರು ತಮ್ಮ ದೇಶಗಳ ಬಂಡವಾಳಗಾರರನ್ನು ಬೆಂಬಲಿಸದೆ ಯುದ್ಧ ನಿಲ್ಲಿಸಲು ಒತ್ತಡ ಹೇರಬೇಕು ಎಂದದ್ದು ಅವನನ್ನು ತುಂಬ ಆಕರ್ಷಿಸಿತು. 'ಆಳುವ ವರ್ಗಗಳು ವಿನಾಶಕಾರಿ ಯುದ್ಧದಲ್ಲಿ ಮುಳುಗಿರಲಿ, ಕಾರ್ಮಿಕ ವರ್ಗ ದೇಶದೊಳಗೆ ಕ್ರಾಂತಿಯನ್ನು ನೆರವೇರಿಸಲಿ' ಎಂಬ ಕರೆ ಜನಪ್ರಿಯವಾಗುತ್ತಿತ್ತು.

ಏತನ್ಮಧ್ಯೆ 1917ರ ಮಾರ್ಚ್‌ನಲ್ಲಿ ರಷ್ಯಾ ದೇಶದ ಒಳಗೆ ತ್ಸಾರ್‌ನ ವಿರುದ್ಧದ ಕ್ರಾಂತಿ ಘಟಿಸಿತು. ರೀಡ್‌ಗೆ ಅದು ಒಳ್ಳೆಯದು ಎನಿಸಿತು. ಆದರೆ ಅದರಿಂದ ತುಂಬ ದೊಡ್ಡ ಬದಲಾವಣೆಯೇನೂ ಆಗುವುದಿಲ್ಲ. ಯುದ್ಧವೂ ನಿಲ್ಲುವುದಿಲ್ಲ ಎಂಬುದು ಅವನ ಭಾವನೆ. ತ್ಸಾರ್ ಹೋಗುತ್ತಾನೆ, ಆ ಜಾಗದಲ್ಲಿ ಎಲ್ಲಾ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವಂಥ ಬಂಡವಾಳಶಾಹಿ ಮಾದರಿಯ ಜನತಂತ್ರ ಬರುತ್ತದೆ ಎಂದು ಅವನು ಉಪೇಕ್ಷೆಯಿಂದಲೇ ಇದ್ದ. ಆದರೆ ರಷ್ಯಾ ನಿಶ್ಶಬ್ದವಾಗಿ, ಶಾಂತವಾಗಿ, ಭದ್ರವಾಗಿ ಕೂರಲಿಲ್ಲ. ಅಲ್ಲಿ ಏನೋ ಒಳಕುದಿಯೊಂದು ಮುಂದುವರೆದಿತ್ತು. ಕ್ರಮೇಣ ಮೆಲ್ಲಗಿದ್ದ ಜನತೆಯ ಧ್ವನಿ ಗಂಭೀರ

ಗುಡುಗಿನ ಘರ್ಜನೆಯಾಗತೊಡಗಿತು. ಈಗ ಜಾನ್ ರೀಡ್‌ನ ಅಶಾಂತ ಮನಸ್ಸು ಉತ್ತೇಜಿತವಾಯಿತು. ವಿಶಾಲ ಜನಸಮುದಾಯ ಎದ್ದೇಳುತ್ತಿದೆ ಎಂದು ಅವನಿಗನ್ನಿಸಿತು. ಅವನು ಪೆತ್ರೋಗ್ರಾಡ್‌ನತ್ತ ಧಾವಿಸಿದ.

ಅವನು 1917ರ ಸೆಪ್ಟೆಂಬರ್‌ನಲ್ಲಿ ಅಲ್ಲಿಗೆ ಮುಟ್ಟಿದಾಗ ಪೆತ್ರೋಗ್ರಾಡ್ ಉದ್ವಿಗ್ನವಾಗಿತ್ತು. ಜನರಲ್ ಕೊರ್ನಿಲೊವ್ ಎಂಬಾತ ಎಳೆಯ ಜನತಂತ್ರವನ್ನು ಕತ್ತು ಹಿಸುಕಿ ಸಾಯಿಸಲು ದಂಡೆತ್ತಿ ಬಂದು ವಿಫಲನಾಗಿದ್ದ. ಅದಕ್ಕೆ ಮುಖ್ಯ ಕಾರಣ ಲೆನಿನ್ ಪೆತ್ರೋಗ್ರಾಡ್‌ನ ಸೈನಿಕರನ್ನೂ, ಕಾರ್ಮಿಕರನ್ನೂ ಸಂಘಟಿಸಿದ್ದ ರೀತಿ. ಹಿಂದೆಯೂ ರೀಡ್ ರಾಜಧಾನಿಯನ್ನು ನೋಡಿದ್ದ. ಆದರೆ ಅದು ಈಗ ಪೂರ್ತಿ ಬದಲಾಗಿತ್ತು. ಈ ಮೊದಲು ಯುದ್ಧದಿಂದ ನೊಂದು ಸಪ್ಪಗಿದ್ದ ಕಾರ್ಮಿಕರು, ಜನಸಾಮಾನ್ಯರು ಈಗ ಲವಲವಿಕೆಯಿಂದ ಕುಣಿಯುವ ಉತ್ಸಾಹದಲ್ಲಿದ್ದರು. ಸೊಕ್ಕಿ ಖುಷಿಯಾಗಿದ್ದ ಶ್ರೀಮಂತರು ಈಗ ಕೋಪದಲ್ಲಿದ್ದರು, ಖಿನ್ನರಾಗಿದ್ದರು, ಸದ್ದಿಲ್ಲದೆ ಹಲ್ಲು ಕಡಿಯುತ್ತಿದ್ದರು. ಇದನ್ನೆಲ್ಲಾ ಅವನು ಮಿತ್ರನಿಗೆ ಬರೆದ ಕಾಗದದಲ್ಲಿ ವರ್ಣಿಸಿದ.

ಜಾನ್ ರೀಡ್ ಯಾವುದೋ ಹೋಟೆಲ್ ರೂಮಿನಲ್ಲಿ ಕುಳಿತು ವರದಿ ತರಿಸಿಕೊಳ್ಳಲಿಲ್ಲ. ಅವನು ರಸ್ತೆಯಲ್ಲಿದ್ದ, ಯುದ್ಧರಂಗದಲ್ಲಿದ್ದ, ಕಂದಕಗಳಲ್ಲಿ ಇಳಿದ, ಕಡೆಯ ಪಕ್ಷ ಮೂರು – ನಾಲ್ಕು ಬಾರಿ ಮೃತ್ಯುವಿನ ಬಾಯಿಂದ ತಪ್ಪಿಸಿಕೊಂಡು ಬಂದ. ಹೋಟೆಲ್‌ಗಳಲ್ಲಿ, ಬೀದಿಗಳಲ್ಲಿ, ಕಛೇರಿಗಳಲ್ಲಿ, ಸಮ್ಮೇಳನಗಳಲ್ಲಿ ಕುಳಿತು ನೆಲಕ್ಕೆ ಕಿವಿಯಿಟ್ಟು ಕೇಳಿಸಿಕೊಂಡ. ಕರಪತ್ರಗಳನ್ನು, ಭಿತ್ತಿಪತ್ರಗಳನ್ನು, ವೃತ್ತಪತ್ರಿಕೆಗಳ ಹೊರೆಯನ್ನು ಸಂಗ್ರಹಿಸಿದ. ನಿಂತಲ್ಲಿ ಕುಳಿತಲ್ಲಿ ಟಿಪ್ಪಣಿ ಪುಸ್ತಕಗಳ ತುಂಬ ಗೀಚಿದ. ಲೆನಿನ್, ಟ್ರಾಟ್‌ಸ್ಕಿ, ಕಮೆನೆವ್ ಇನ್ನೂ ಅನೇಕ ನಾಯಕರನ್ನು, ದೇಶ ವಿದೇಶಗಳ ಬೂರ್ಶ್ವಾ ರಾಜತಂತ್ರಜ್ಞರನ್ನು ಸಂಪರ್ಕಿಸಿದ.

ಇದೆಲ್ಲದರ ಮಧ್ಯೆ ಅವನು ತಾನೇ ಸ್ವತಃ ಬದಲಾಗುತ್ತ ಹೋದ. ಕಾರ್ಮಿಕರು – ರೈತರೊಂದಿಗೆ ಒಂದಾಗಿಬಿಟ್ಟಿದ್ದ. ಹಿಂದೆ ಅಮೆರಿಕಾದಲ್ಲಿ, ಮೆಕ್ಸಿಕೊದಲ್ಲಿ ಅವನು ಕಲಿತದ್ದಕ್ಕಿಂತ ಇಲ್ಲಿನ ಅನುಭವ ವಿಭಿನ್ನವಾಗಿತ್ತು. ಪ್ರತಿ ನಿಮಿಷವನ್ನೂ ವ್ಯರ್ಥಮಾಡದೆ ಅವನು ಓಡಾಡುತ್ತಾ ಅನುಭವಗಳನ್ನು ಹೀರಿಕೊಂಡ. ಇತಿಹಾಸದ ಒಂದು ಅನನ್ಯ ಕ್ಷಣದಲ್ಲಿ ನಾನು ಉಸಿರಾಡುತ್ತಿದ್ದೇನೆ ಎಂಬುದು ಅವನ ಭಾವನೆಯಾಗಿತ್ತು. ಆದ್ದರಿಂದಲೇ ಅವನಿಗೆ ಊಟ, ನಿದ್ರೆ, ವಿಶ್ರಾಂತಿ ಎಲ್ಲಾ ಸಮಯದ ಪೋಲು ಅನಿಸಿಬಿಡುತ್ತಿತ್ತು. ಇಂಥ ವಿಷಯ ಸಂಗ್ರಹಣೆಯಿಂದಲೇ ಮುಂದೆ ಅವನು ಅಮೆರಿಕಾದಲ್ಲಿ ಕುಳಿತು 'ಜಗವ ನಡುಗಿಸಿದ ಆ ಹತ್ತುದಿನ'ವನ್ನು ನೇಯುತ್ತ ಹೋದ, ಯಾವ ಸ್ನೇಹಿತರ ಕೈಗೂ ಸಿಗದೆ 'ಭೂಗತ'ನಾಗಿ ಬರೆಯುವ ಜ್ವರ ಬಂದವನಂತೆ ದಿನರಾತ್ರಿ ಕೂತು ಬರೆದ ಅಪೂರ್ವ ಕೃತಿ ಇದು. ಇದನ್ನು ಬರೆದು ಮುಗಿಸಿದಾಗ ಕೊಳಕನಾಗಿ, ಕೃಶನಾಗಿ, ವ್ಯಾಧಿಗ್ರಸ್ತನಂತೆ ಕಂಡಿದ್ದ ಎಂದು ಅವನ ಗೆಳೆಯ ಈಸ್ಟ್‌ಮನ್ ಹೇಳಿದ್ದಾನೆ.

ಕ್ರಾಂತಿಯಲ್ಲಿ ದೌಡಾಯಿಸುತ್ತಾ ಬರೆದ ಈ ಕೃತಿಯಲ್ಲಿ ಕೆಲವು ದೋಷಗಳು ಉಳಿದದ್ದು ಅಸಹಜವೇನಲ್ಲ. ಜಾನ್ ರೀಡ್ ಹೇಳುವ ಕತೆಯಲ್ಲಿ ಕ್ರಾಂತಿಗಾಗಿ ನಡೆದಿದ್ದ ಸಂಕೀರ್ಣ ಸಿದ್ಧತೆಯ ವಿವರ ಸಿಗುವುದಿಲ್ಲ ಎಂದು ಅವನ ಗೆಳೆಯ ಜಾನ್ ಸ್ಟುವರ್ಟ್ ತನ್ನ ಮುನ್ನುಡಿಯಲ್ಲಿ ಬರೆದಿದ್ದಾನೆ. ರೀಡ್ ಪೀಟರ್ಸ್‌ಬರ್ಗ್‌ಗೆ ಬರುವುದಕ್ಕೆ ಒಂದು ತಿಂಗಳು ಮುಂಚೆ ಬೋಲ್ಶೆವಿಕ್ ಪಾರ್ಟಿಯ ಆರನೇ ಮಹಾಧಿವೇಶನ ನಡೆದಿತ್ತು. ಸ್ಟುವರ್ಟ್‌ನ

ಮಾತುಗಳಲ್ಲೇ ಹೇಳಬೇಕೆಂದರೆ, "ಅದು ಕೆರೆನ್‌ಸ್ಕಿ ಸರ್ಕಾರ ಮತ್ತು ಯುದ್ಧೋನ್ಮಾದದಲ್ಲಿದ್ದ ಬೂರ್ಶ್ವಾ ವರ್ಗದ ವಿರುದ್ಧ ಅಂತಿಮ ಸಮರಕ್ಕೂ ಬೋಲ್ಶೆವಿಕರನ್ನು ಸಜ್ಜುಗೊಳಿಸಿತು. ಪೊಲೀಸರು ಬೇಟೆಯಾಡುತ್ತಿದ್ದುದರಿಂದ ಲೆನಿನ್ ತಲೆಮರೆಸಿಕೊಂಡಿದ್ದರು. ಲೆನಿನ್ ಮತ್ತು ಕೇಂದ್ರ ಸಮಿತಿಯ ಪರವಾಗಿ ಸ್ಟಾಲಿನ್ ಎರಡು ವರದಿಗಳನ್ನು ಮಂಡಿಸಿದರು. ಅದರಲ್ಲಿ ರಾಜಕೀಯ ಪರಿಸ್ಥಿತಿ ಹಾಗೂ ಬೋಲ್ಶೆವಿಕರು ಅನುಸರಿಸಬೇಕಾದ ತಂತ್ರದ ಸಮಗ್ರ ವಿಶ್ಲೇಷಣೆ ಇತ್ತು. ಪಕ್ಷದೊಳಗೆ ಕ್ರಾಂತಿಯಿಂದ ದಾರಿತಪ್ಪಿಸುವ, ಶರಣಾಗತ ಮನೋಭಾವದವರ ವಿರುದ್ಧ ಹೋರಾಟವನ್ನು ಕೈಗೆತ್ತಿಕೊಳ್ಳ ಬೇಕೆಂಬ ಮಹತ್ವದ ನಿರ್ಧಾರವಾದದ್ದು, ಈ ಮಹಾಧಿವೇಶನದಲ್ಲಿಯೇ.... ಇದಲ್ಲದೆ ಅಧಿಕಾರವನ್ನು ಕೈಗೆತ್ತಿಕೊಳ್ಳುವ ಕುರಿತಾಗಿ ಕೇಂದ್ರ ಸಮಿತಿ ನವೆಂಬರ್‌ನಲ್ಲಿ ತೆಗೆದುಕೊಂಡ ಮಹತ್ವದ ನಿರ್ಧಾರಗಳ ಬಗ್ಗೆಯೂ ರೀಡ್‌ಗೆ ನಿಖರವಾದ ಮಾಹಿತಿ ಇರಲಿಲ್ಲ."

ಈ ಪುಸ್ತಕ ಹಿಂದೆ ಪ್ರಕಟವಾದಾಗ ಅದಕ್ಕೆ ಬರೆದಿರುವ ಹಿನ್ನುಡಿಯಲ್ಲಿಯೂ ಕೆಲವು ಮಹತ್ವದ ಅಂಶಗಳನ್ನು ಅಂದಿನ ಪ್ರಕಾಶಕರು ದಾಖಲಿಸಿದ್ದಾರೆ. ಅದು ಟ್ರಾಟ್‌ಸ್ಕಿಯ ಪಾತ್ರದ ಕುರಿತಾದದ್ದು. ಟ್ರಾಟ್‌ಸ್ಕಿ ನಿಸ್ಸಂಶಯವಾಗಿಯೂ ಕ್ರಾಂತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದ. ಆದರೆ ಕ್ರಾಂತಿಯಲ್ಲಿ ಬಡ ರೈತಾಪಿಗಳು ತುಂಬ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ರೈತ ಕಾರ್ಮಿಕರ ನಿಕಟಬಾಂಧವ್ಯ ಕ್ರಾಂತಿಗೆ ಅಗತ್ಯ ಎಂಬ ಲೆನಿನ್‌ರ ವಿಶ್ಲೇಷಣೆಯಲ್ಲಿ ಆತನಿಗೆ ನಂಬಿಕೆ ಇರಲಿಲ್ಲ. ಮತ್ತು ಕ್ರಾಂತಿ ಕೇವಲ ರಷ್ಯಾದಲ್ಲಿ ಆದರೆ ಅದು ಯಶಸ್ವಿಯಾಗದು, ಮುಂದುವರೆದ ಯುರೋಪಿಯನ್ ರಾಷ್ಟ್ರಗಳಲ್ಲಿ ಕ್ರಾಂತಿಯಾಗದಿದ್ದರೆ ನಮ್ಮ ಹೋರಾಟ ವಿಫಲವಾಗುತ್ತದೆ ಎಂದು ಆತ ಪರಾಭವವಾದಿಯಾಗಿ ನಿಲುವು ತೆಗೆದುಕೊಂಡಿದ್ದ. ಹೀಗಾಗಿ ಅವನ ಧೋರಣೆ, ನಿಲುವು ಕ್ರಾಂತಿಯ ಸಮಯದಲ್ಲೂ ಪದೇ ಪದೇ ಬದಲಾಗಿ ಅದೂ ಸಹ ಕ್ರಾಂತಿಗೆ ತೊಡಕಾಗಿತ್ತು. ಈ ವಿವರಗಳೂ ಸಹ ರೀಡ್‌ನ ಪುಸ್ತಕದಲ್ಲಿ ಲಭ್ಯವಿಲ್ಲ ಎಂಬುದೂ ಒಂದು ದೋಷ.

ಅದೇನೇ ಇರಲಿ, ಸ್ವತಃ ಲೆನಿನ್ ಹೇಳುವಂತೆ ಇದೊಂದು ಅದ್ಭುತವಾದ ಪುಸ್ತಕ. ಭಾಷೆ ಸರಿಯಾಗಿ ಬರದಿದ್ದ ಒಬ್ಬ ಪತ್ರಕರ್ತ, ಈ ದೇಶದ ಆಚಾರ-ವಿಚಾರ, ರಾಜಕೀಯ ಹಿನ್ನೆಲೆಗಳ ಪರಿಚಯವಿಲ್ಲದಿದ್ದ ಒಬ್ಬ ತರುಣ ಎಷ್ಟು ಚೆನ್ನಾಗಿ ಕ್ರಾಂತಿಯ ವಾಸ್ತವವನ್ನು ಗ್ರಹಿಸಿದನಲ್ಲ ! ಇದು ಅಚ್ಚರಿಯ ವಿಷಯ.

ಆದರೆ ಅವನಂಥ ಸಮರಶೀಲ ವ್ಯಕ್ತಿಗೆ ಇದು ಅಸಹಜವಲ್ಲ. ಅವನು ಎಲ್ಲೇ ಹುಟ್ಟಿ ಬೆಳೆದಿರಲಿ ಅವನು ಹೋದಲ್ಲೆಲ್ಲಾ ಕಾರ್ಮಿಕರ, ಶೋಷಿತರ ನಾಡಿಬಡಿತವನ್ನು ಹಿಡಿಯಬಲ್ಲ ಸಾಮರ್ಥ್ಯವನ್ನು ಹೊಂದಿದ್ದ. ಘಂಟೆಗಟ್ಟಲೆ ಬೂರ್ಶ್ವಾ ರಾಜಕಾರಣಿಗಳ ಜೊತೆ ಚರ್ಚಿಸಿದ ಮೇಲೂ ಅವನಿಗೆ ಅವರ ವರದಿಯಲ್ಲಿ ಎಷ್ಟು ಬಡಾಯಿ, ಎಷ್ಟು ಉತ್ಪ್ರೇಕ್ಷೆ, ಎಷ್ಟು ಜನವಿರೋಧಿ ಚಿತ್ರಣವಿದೆ ಎಂಬುದು ಗೊತ್ತಾಗುತ್ತಿತ್ತು. ಸೂಕ್ಷ್ಮಗ್ರಾಹಿಯಾದ ಅವನು ಹದ್ದಿನ ಕಣ್ಣಿನಿಂದ ಕ್ರಾಂತಿಯನ್ನು ಗಮನಿಸಿದ್ದ.

ಕಂತೆಕಂತೆ ದಾಖಲೆಗಳನ್ನು ಹೊತ್ತು ತಾಯ್ನಾಡಿಗೆ ಹೋದ ರೀಡ್ ಅಲ್ಲಿ ಕೂತು ಪುಸ್ತಕ ಬರೆದ. ಅದು 1919ರಲ್ಲಿ ಪ್ರಕಟವಾಯಿತು. ರಷ್ಯನ್ ಆವೃತ್ತಿ 1923ರಲ್ಲಿ ಹೊರಬಂತು. ಅಮೆರಿಕಾದಲ್ಲಿ ಮತ್ತೆ ಪೊಲೀಸರ ಕಾಟ, ಹಸ್ತಪ್ರತಿ ಮತ್ತು ದಾಖಲೆಗಳು ಪೊಲೀಸರ ವಶ, ಆದರೆ ರೀಡ್‌ನನ್ನು ಯಾವುದೂ ಧೃತಿಗೆಡಿಸಲಿಲ್ಲ.

ಸೋವಿಯತ್ ಒಕ್ಕೂಟದ ಪರವಾಗಿ ಮಾತನಾಡಿದ್ದಕ್ಕೆ ಪೊಲೀಸರು ಅವನನ್ನು ಬಡಿದು ಚಚ್ಚಿದರು. ರಾಜದ್ರೋಹದ ಆಪಾದನೆ ಹೊರಿಸಿದರು. ಆದರೂ ಅವನು ಹತ್ತಾರು ನಗರಗಳಲ್ಲಿ ಭಾಷಣ ಮಾಡಿದ. ಫಿಲಡೆಲ್ಫಿಯಾದಲ್ಲಿ ಅವನು ಮಾತನಾಡಬೇಕಾಗಿದ್ದ ಸಭಾಂಗಣಕ್ಕೆ ಬೀಗ ಜಡಿದರು. ಅವನು ಹೊರಗೆ ಸಾಬೂನು ತಂದಿದ್ದ ಪೆಟ್ಟಿಗೆಯ ಮೇಲೆ ನಿಂತು ಸಾವಿರಾರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ.

ಮತ್ತೆ ರೀಡ್ ಸಮಾಜವಾದದ ನಿರ್ಮಾಣವನ್ನು ನೋಡಿ ವರದಿ ಮಾಡಲು ಸೋವಿಯತ್ ಯೂನಿಯನ್‌ಗೆ ವಾಪಸಾದ. ಅವನ ಹೆಂಡತಿ ಲೂಯಿ ಬ್ರಾಂಟ್ ಜೊತೆಯಲ್ಲಿದ್ದಳು. ಆಕೆಯೂ ಹೋರಾಟ ನಿರತ ಪತ್ರಕರ್ತೆ. ಸಾಮ್ರಾಜ್ಯಶಾಹಿಗಳು ಹೊಸ ಸಮಾಜವಾದಿ ರಾಷ್ಟ್ರದ ಮೇಲೆ ಯುದ್ಧ ಸಾರಿದ್ದರು. ಆರ್ಥಿಕ ದಿಗ್ಬಂಧನವಿತ್ತು. ಆದರೆ ಜನರ ಉತ್ಸಾಹ, ಜೀವಂತಿಕೆ, ಹೋರಾಟದ ಮನೋಭಾವ ಅರಳುತ್ತಾ ಹೋಗುತ್ತಿತ್ತು. ಇದನ್ನೆಲ್ಲಾ ನೋಡಿ ಸಂಭ್ರಮಿಸುತ್ತಾ, ಹಗಲಿರುಳು ದುಡಿಯುತ್ತಿದ್ದಾಗ ಅವನಿಗೆ ಟೈಫಾಯ್ಡ್ ಬಂತು. ದಿಗ್ಬಂಧನದಿಂದಾಗಿ ಔಷಧಿಗಳು ಸಿಗಲಿಲ್ಲ. 1920ರ ಅಕ್ಟೋಬರ್ 17ರಂದು ತನ್ನ ಮೂವತ್ತಮೂರನೆಯ ವಯಸ್ಸಿನಲ್ಲಿ, ಏರು ಯೌವನದಲ್ಲಿ ಈ ಅಮೆರಿಕನ್ ಕ್ರಾಂತಿಕಾರಿ ತೀರಿಕೊಂಡ.

'ಜಗವ ನಡುಗಿಸಿದ ಆ ಹತ್ತುದಿನ' ಪುಸ್ತಕದಲ್ಲಿ ರೀಡ್, ಕ್ರೆಮ್ಲಿನ್ ಗೋಡೆಯ ಬಳಿ ಕ್ರಾಂತಿಯ ಹುತಾತ್ಮರನ್ನು ಮಣ್ಣು ಮಾಡಿದ ದೃಶ್ಯವನ್ನು ಹೃದಯಂಗಮವಾಗಿ ವರ್ಣಿಸಿದ್ದಾನೆ. ಕೇವಲ ಮೂರು ವರ್ಷದೊಳಗೆ ತಾನೇ ಅಲ್ಲಿ ಮಣ್ಣಾಗಬಹುದು ಎಂಬುದು ಅವನಿಗೆ ತಿಳಿದಿರಲಿಲ್ಲ. ಅದು ರಷ್ಯನ್ನರು ತಮ್ಮ ಧೀರರಿಗೆ, ನಾಯಕರಿಗೆ ಮೀಸಲಿಟ್ಟ ಜಾಗ. ಅಲ್ಲಿ ಮಣ್ಣು ಸೇರುವುದು ಅಪಾರ ಗೌರವದ ಸಂಕೇತ. ಅಲ್ಲೇ ಜಾನ್ ರೀಡ್ ಚಿರನಿದ್ರೆಯಲ್ಲಿದ್ದಾನೆ. ರಷ್ಯನ್ ಕಾರ್ಮಿಕ ವರ್ಗ ಅತ್ಯಂತ ಪ್ರೀತಿಯಿಂದ ತನ್ನ ದತ್ತು ಪುತ್ರನಿಗೆ ಅಲ್ಲಿ ಜಾಗ ಮಾಡಿಕೊಟ್ಟಿದೆ.

ಜಾನ್ ಈಗಲೂ ಅಲ್ಲೇ ಇದ್ದಾನೆ. ಆದರೆ ಇಂದು ಅಲ್ಲಿ ಸಮಾಜವಾದವಿಲ್ಲ. ಈಗ ಜಾನ್ ಬದುಕಿದ್ದರೆ ಹೇಳಿರುತ್ತಿದ್ದ, 'ರಷ್ಯನ್ ಬಂಡವಳಿಗರು ತಾತ್ಕಾಲಿಕವಾಗಿ ಗೆದ್ದಿದ್ದಾರೆ. ಮತ್ತೆ ನಮ್ಮ ದುಡಿಯುವ ಜನ ಎದ್ದು ಬರುತ್ತಾರೆ. ನವೆಂಬರ್ ಕ್ರಾಂತಿಯ ಕೀರ್ತಿಯನ್ನು ಎತ್ತಿ ಹಿಡಿಯುತ್ತಾರೆ. ಮತ್ತೆ ರಷ್ಯಾದ ಅದಮ್ಯ ಕ್ರಾಂತಿಕಾರಿ ಸ್ಫೂರ್ತಿ ಜಗತ್ತಿಗೆ ಮಾದರಿಯಾಗುತ್ತದೆ' ಎಂದು.

*ಮಹಾನ್ ಕ್ರಾಂತಿಕಾರಿ, ಅಂತರರಾಷ್ಟ್ರೀಯವಾದಿ, ನಿರ್ಭೀತ ಪತ್ರಕರ್ತ*
*ಜಾನ್ ರೀಡ್‌ಗೆ ಕ್ರಾಂತಿಕಾರಿ ನಮನಗಳು.*

# ರಷ್ಯಾದ ಮಹಾಕ್ರಾಂತಿ – 1917

## ಪ್ರಮುಖ ಘಟನೆಗಳು

| | |
|---|---|
| ಮಾರ್ಚ್ 7–11 | : ರಾಜಧಾನಿ ಪೆತ್ರೋಗ್ರಾಡ್‌ನಲ್ಲಿ ಮುಷ್ಕರಗಳು, ಪ್ರತಿಭಟನಾ ಪ್ರದರ್ಶನಗಳು. |
| ಮಾರ್ಚ್ 12 | : ಪೆತ್ರೋಗ್ರಾಡ್‌ನಲ್ಲಿ ಝಾರ್ ಚಕ್ರವರ್ತಿಯ ಆಡಳಿತವನ್ನು ಕಿತ್ತು ಹಾಕಿದ್ದು. |
| | : ಒಂದು ಕಡೆ ರಾಜ್ಯ ಡ್ಯೂಮಾ ಇನ್ನೊಂದು ಕಡೆ ಪೆತ್ರೋಗ್ರಾಡ್ ಸೋವಿಯತ್ ಎರಡೂ ರಚನೆಯಾಗುತ್ತವೆ. |
| ಮಾರ್ಚ್ 27 | : ಪೆತ್ರೋಗ್ರಾಡ್ ಸೋವಿಯತ್ ಎಲ್ಲ ದೇಶದ ಜನತೆಗೂ ಯುದ್ಧವನ್ನು ಕೊನೆಗಾಣಿಸಲು ಕರೆ ನೀಡುತ್ತದೆ. |
| ಏಪ್ರಿಲ್ 16 | : ಪೆತ್ರೋಗ್ರಾಡ್‌ಗೆ ಲೆನಿನ್ ಆಗಮನ. |
| ಏಪ್ರಿಲ್ 20 | : ಏಪ್ರಿಲ್ ಥೀಸಿಸ್ – ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯನ್ನು ಈಗ ಆರಂಭಿಸಬೇಕೆಂಬ ಪ್ರತಿಪಾದನೆಯನ್ನು ಲೆನಿನ್ ಮಂಡಿಸುತ್ತಾರೆ. |
| ಮೇ 1 | : ಹಂಗಾಮಿ ಸರ್ಕಾರದ ವಿದೇಶಾಂಗ ಮಂತ್ರಿ ಮಿಲ್ಯುಕೋವ್ ಯುದ್ಧ ಮುಂದುವರೆಯುವುದೆಂದು ಘೋಷಿಸುತ್ತಾನೆ. ಕೂಡಲೇ ಅದಕ್ಕೆ ಪ್ರತಿಭಟನೆಗಳು ಆರಂಭವಾಗುತ್ತವೆ. |
| ಜುಲೈ 16–18 | : ಬೋಲ್ಶೆವಿಕರಿಂದ ಪ್ರತಿಭಟನೆಗಳ ಆರಂಭ. ಸೈನ್ಯದಿಂದ ನಿರ್ದಯ ದಮನ. ಭೂಗತರಾದ ಲೆನಿನ್. |
| ಜುಲೈ 21 | : ಕೆರೆನ್‌ಸ್ಕಿ ನೇತೃತ್ವದ ಹೊಸ ಹಂಗಾಮಿ ಸರ್ಕಾರದ ಸ್ಥಾಪನೆ. |
| ಆಗಸ್ಟ್ 8–16 | : ಬೋಲ್ಶೆವಿಕ್ ಪಕ್ಷದ 6ನೇ ಮಹಾಧಿವೇಶನ ಟ್ರಾಟ್‌ಸ್ಕಿಯ ಗುಂಪೂ ವಿಲೀನವಾಗುತ್ತದೆ. |
| ಸೆಪ್ಟೆಂಬರ್ 10 | : ಕೊರ್ನಿಲೊವ್ ನೇತೃತ್ವದ ಪ್ರತಿಕ್ರಾಂತಿಗೆ ಸೋಲು. |
| ಸೆಪ್ಟೆಂಬರ್ 13 | : ಪೆತ್ರೋಗ್ರಾಡ್ ಸೋವಿಯತ್‌ನಲ್ಲಿ ಬೋಲ್ಶೆವಿಕ್ ಪಾರಮ್ಯ. |
| ಸೆಪ್ಟೆಂಬರ್ 19 | : ಮಾಸ್ಕೋ ಸೋವಿಯತ್‌ನಲ್ಲಿ ಬೋಲ್ಶೆವಿಕರಿಗೆ ಬಹುಮತ. |
| ಅಕ್ಟೋಬರ್ 23 | : ಲೆನಿನ್ ಹಾಜರಿದ್ದ ಪಕ್ಷದ ಕೇಂದ್ರ ಸಮಿತಿ ಸಭೆಯಲ್ಲಿ ಸಶಸ್ತ್ರ ಬಂಡಾಯದ ನಿರ್ಧಾರ. |
| ಅಕ್ಟೋಬರ್ 25 | : ಪೆತ್ರೋಗ್ರಾಡ್ ಸೋವಿಯತ್, ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ನೇಮಿಸುತ್ತದೆ. |
| ನವೆಂಬರ್ 6 | : ಬೋಲ್ಶೆವಿಕರು ಕ್ರಾಂತಿಯ ಸಿದ್ಧತೆಯನ್ನು ಪೂರ್ಣಗೊಳಿಸುತ್ತಾರೆ. ಸ್ಮೋಲ್ನಿ ಭವನಕ್ಕೆ ಲೆನಿನ್‌ರ ಆಗಮನ. |
| ನವೆಂಬರ್ 7 | : ಬೋಲ್ಶೆವಿಕ್ ಬಹುಮತವಿರುವ 2ನೇ ಸೋವಿಯತ್ ಮಹಾಧಿವೇಶನದ ಆರಂಭ. ಹಂಗಾಮಿ ಸರ್ಕಾರದ ಪತನ. ಕೆರೆನ್‌ಸ್ಕಿಯ ಪಲಾಯನ. |
| ನವೆಂಬರ್ 8 | : ಶಾಂತಿ ಮತ್ತು ಭೂಮಿಯ ಕುರಿತಾದ ಡಿಕ್ರಿಗಳ ಘೋಷಣೆ. |

# ಲೆನಿನ್



"ಧಮನಿಯಲಿ ಬಿಸಿ ನೆತ್ತರುಕ್ಕದೆ ನೆನೆಯಲಾರೆ
ನಿನ್ನಂ ಲೆನಿನ್,
ನಿನ್ನ ಹೆಸರದು ಸಿಡಿಲ್ ಸದ್ದು ದೊರೆಗಿವಿಗೆ,
ನಿನ್ನ ಸಮತಾಬೋಧೆ ಸಿಡಿಮದ್ದು,
... ದುಡಿವ ದೀನರಿಗೆ ದೈವ
ಅನ್ಯರಿಗೆ ಯಮದಂಡ"

– **ರಾಷ್ಟ್ರಕವಿ ಕುವೆಂಪು**
**(1935)**

# ಪರಿವಿಡಿ


| | |
|---|---|
| ಮುನ್ನುಡಿ – ವಿ ಐ. ಲೆನಿನ್ | 20 |
| ರಷ್ಯನ್ ಆವೃತ್ತಿಗೆ ಮುನ್ನುಡಿ – ನಾದೆಝ್ದಾ ಕ್ರುಪ್‌ಸ್ಕಾಯಾ | 21 |
| ಪ್ರಸ್ತಾವನೆ | 23 |
| ವಿವರಣೆಗಳು, ಟಿಪ್ಪಣಿಗಳು | 27 |
| ಅಧ್ಯಾಯ 1 : ಹಿನ್ನೆಲೆ | 31 |
| ಅಧ್ಯಾಯ 2 : ಬಂತ್ಶೈ ಬಂತ್ಶೈ ಸುಂಟರಗಾಳಿ (ಚಂಡಮಾರುತ) | 39 |
| ಅಧ್ಯಾಯ 3 : ಕ್ರಾಂತಿಗೆ ಮುಂಚಿನ ದಿನ | 64 |
| ಅಧ್ಯಾಯ 4 : ಹಂಗಾಮಿ ಸರ್ಕಾರದ ಪತನ | 87 |
| ಅಧ್ಯಾಯ 5 : ನಾಗಲೋಟದ ಮುನ್ನಡೆ | 112 |
| ಅಧ್ಯಾಯ 6 : ವಿಮೋಚನಾ ಸಮಿತಿ | 134 |
| ಅಧ್ಯಾಯ 7 : ಕ್ರಾಂತಿಕಾರಿ ರಣಾಂಗಣ | 151 |
| ಅಧ್ಯಾಯ 8 : ಪ್ರತಿ ಕ್ರಾಂತಿ | 164 |
| ಅಧ್ಯಾಯ 9 : ವಿಜಯ | 179 |
| ಅಧ್ಯಾಯ 10 : ಮಾಸ್ಕೋ | 194 |
| ಅಧ್ಯಾಯ 11 : ಅಧಿಕಾರದ ಸ್ಥಾಪನೆ | 204 |
| ಅಧ್ಯಾಯ 12 : ರೈತರ ಮಹಾಧಿವೇಶನ | 221 |

# ಮುನ್ನುಡಿ

ತುಂಬ ಆಸಕ್ತಿಯಿಂದ, ಕಿಂಚಿತ್ತೂ ಕಡಿಮೆಯಾಗದ ಏಕಾಗ್ರತೆಯಿಂದ ಜಾನ್ ರೀಡ್‌ರ 'ಜಗವ ನಡುಗಿಸಿದ ಆ ಹತ್ತುದಿನ' ಪುಸ್ತಕವನ್ನು ಓದಿ ಮುಗಿಸಿದ್ದೇನೆ. ಜಗತ್ತಿನ ಕಾರ್ಮಿಕರೆಲ್ಲ ಇದನ್ನು ಓದಬೇಕೆಂದು ಯಾವ ಹಿಂಜರಿಕೆಯೂ ಇಲ್ಲದೆ ಹೇಳುತ್ತೇನೆ. ಈ ಪುಸ್ತಕ ಹೇಗಿದೆಯೆಂದರೆ ಇದು ಎಲ್ಲ ಭಾಷೆಗಳಲ್ಲೂ ಅನುವಾದಗೊಂಡು ಲಕ್ಷಗಟ್ಟಲೆ ಪ್ರತಿಗಳು ಪ್ರಕಟವಾದರೆ ನನಗೆ ಖುಷಿಯಾಗುತ್ತದೆ. ಅಲ್ಲಿ ನಡೆದ ಘಟನೆಗಳ ಅತ್ಯಂತ ಸತ್ಯನಿಷ್ಠವಾದ ಹಾಗೂ ಉಜ್ವಲವಾದ ಚಿತ್ರಣವನ್ನೇ ಈ ಪುಸ್ತಕ ನೀಡಿದೆ. ನಿಜಕ್ಕೂ ಕಾರ್ಮಿಕ ವರ್ಗದ ಕ್ರಾಂತಿ ಎಂದರೇನು, ಕಾರ್ಮಿಕ ವರ್ಗದ ಸರ್ವಾಧಿಕಾರ ಎಂದರೇನು ಎಂಬುದನ್ನು ಗ್ರಹಿಸಲು ಅದು ತುಂಬ ಸಹಾಯಕ. ಈಗ ಈ ಪರಿಕಲ್ಪನೆಗಳನ್ನು ಎಲ್ಲೆಡೆ ಚರ್ಚಿಸಲಾಗುತ್ತಿದೆ. ಆದರೆ ಇವುಗಳನ್ನು ಒಪ್ಪಿಕೊಳ್ಳುವ ಮುನ್ನ ಅಥವಾ ತಿರಸ್ಕರಿಸುವ ಮುನ್ನ ಯಾರೇ ಆಗಲಿ ತನ್ನ ನಿರ್ಣಯದ ಮಹತ್ವವನ್ನು ಸರಿಯಾಗಿ ಗ್ರಹಿಸಬೇಕಾಗುತ್ತದೆ. ಈ ಪ್ರಶ್ನೆಗಳು ಅಂತರರಾಷ್ಟ್ರೀಯ ಕಾರ್ಮಿಕ ಚಳುವಳಿಯ ಮೂಲಭೂತ ಪ್ರಶ್ನೆಗಳಾಗಿವೆ. ಜಾನ್ ರೀಡ್‌ರ ಪುಸ್ತಕವು ನಿಸ್ಸಂಶಯವಾಗಿಯೂ ಈ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

**ವಿ. ಐ. ಲೆನಿನ್**

1919ರ ಕೊನೆಯ ಭಾಗದಲ್ಲಿ

# ರಷ್ಯನ್ ಆವೃತ್ತಿಗೆ ಮುನ್ನುಡಿ

ಜಾನ್ ರೀಡ್‌ರು ತಮ್ಮ ಅಸಾಧಾರಣ ಕೃತಿಗೆ ನೀಡಿದ ಹೆಸರು 'ಜಗವ ನಡುಗಿಸಿದ ಆ ಹತ್ತುದಿನ'. ಈ ಪುಸ್ತಕವು ಅಕ್ಟೋಬರ್ ಮಹಾಕ್ರಾಂತಿಯ ಮೊದಲ ದಿನಗಳನ್ನು, ಮನೋಹರವಾಗಿ, ಸಮರ್ಥವಾಗಿ, ವಿವರವಾಗಿ ದಾಖಲಿಸಿದೆ. ಇದು ಕೇವಲ ವಾಸ್ತವಾಂಶಗಳ ಮಂಡನೆಯಲ್ಲ ಅಥವಾ ದಾಖಲೆಗಳ ಸಂಗ್ರಹವೂ ಅಲ್ಲ. ಇದರಲ್ಲಿ ಕಾಣುವುದು ನೈಜ ಬದುಕಿನ ದೃಶ್ಯಗಳ ನಿರಂತರ ಅನಾವರಣ. ಎಷ್ಟರಮಟ್ಟಿಗೆ ಎಂದರೆ ಕ್ರಾಂತಿಯಲ್ಲಿ ಆ ದಿನಗಳಲ್ಲಿ ಭಾಗವಹಿಸಿದ ಯಾವುದೇ ವ್ಯಕ್ತಿ ನಾನು ಇಂಥದೇ ಘಟನೆಗಳನ್ನು ಕಂಡಿದ್ದೆನಲ್ಲಾ ಎಂದುಕೊಳ್ಳುತ್ತಾನೆ. ಬದುಕಿನ ಈ ಚಿತ್ರಗಳು ಜನಸಮುದಾಯದ ಭಾವನೆಗಳನ್ನು, ಕ್ರಾಂತಿಯ ಪ್ರತಿಯೊಂದು ನಡೆಯನ್ನೂ ನಿರ್ಧರಿಸಿದ ಭಾವನೆಗಳನ್ನು, ಆಶ್ಚರ್ಯವೆನಿಸುವಷ್ಟು ನಿಖರವಾಗಿ ಪ್ರತಿಬಿಂಬಿಸಿವೆ.

ಯಾರೇ ಆಗಲೀ, ಈ ದೇಶದ ಭಾಷೆಯನ್ನಾಗಲೀ, ಬದುಕನ್ನಾಗಲೀ ಅರಿಯದ ಒಬ್ಬ ವಿದೇಶೀಯ, ಒಬ್ಬ ಅಮೆರಿಕನ್ ಹೇಗೆ ಇಂತಹ ಪುಸ್ತಕವನ್ನು ಬರೆಯಲು ಸಾಧ್ಯ ಎಂದು ಅಂದುಕೊಳ್ಳಬಹುದು. ಲೇಖಕನು ಅನೇಕ ಮುಖ್ಯಾಂಶಗಳನ್ನು ಗಮನಿಸದೆ ಎಡವಟ್ಟುಗಳನ್ನು ಮಾಡಿರಬಹುದು ಎಂದೂ ಅನಿಸಬಹುದು.

ಬಹಳಷ್ಟು ವಿದೇಶೀ ಲೇಖಕರು ರಷ್ಯಾದ ಕುರಿತು ಬೇರೆಯ ರೀತಿಯಲ್ಲೇ ಬರೆಯುತ್ತಾರೆ. ಒಂದೋ ಅವರು ತಾವು ಕಂಡ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ ಅಥವಾ ಸಂಬಂಧವೇ ಇಲ್ಲದ, ಪ್ರಾತಿನಿಧಿಕವಾಗಿಯೂ ಇರದ ಕೆಲವೊಂದು ಘಟನೆಗಳನ್ನು ಪೋಣಿಸಿಕೊಂಡು ಅವಾಸ್ತವವಾದ ತೀರ್ಮಾನಗಳನ್ನು ಮಂಡಿಸಿಬಿಡುತ್ತಾರೆ. ಆದರೆ ಕ್ರಾಂತಿಗೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದ ವಿದೇಶೀಯರ ಸಂಖ್ಯೆ ತೀರ ಕಡಿಮೆ ಬಿಡಿ.

ಜಾನ್ ರೀಡ್‌ರವರ ಯಶಸ್ವಿ ಬರೆವಣಿಗೆಯ ಹಿಂದಿನ ಗುಟ್ಟೇನು, ಆತ ಉದಾಸೀನ ಪ್ರೇಕ್ಷಕನಾಗಿರಲಿಲ್ಲ. ಭಾವುಕತೆಯಿಂದ ತನ್ಮಯರಾಗಿದ್ದ ಕ್ರಾಂತಿಕಾರಿಯಾಗಿದ್ದರು. ಈ ಮಹಾನ್ ಹೋರಾಟದ ಮಹತ್ವವನ್ನು ಅರಿಯಬಲ್ಲ, ಘಟನೆಗಳ ಅರ್ಥವನ್ನು ಗ್ರಹಿಸಬಲ್ಲ ಕಮ್ಯುನಿಸ್ಟ್ ಆತ. ಈ ತಿಳಿವಳಿಕೆಯೇ ಆತನಿಗೆ ಅಗತ್ಯವಾದ ತೀಕ್ಷ್ಣ ಒಳನೋಟವನ್ನು ಒದಗಿಸಿತು. ಇಲ್ಲದಿದ್ದರೆ ಅಂಥ ಒಂದು ಪುಸ್ತಕವನ್ನು ಬರೆಯುವುದು ಸಾಧ್ಯವೇ ಆಗುತ್ತಿರಲಿಲ್ಲ.

ರಷ್ಯನ್ನರು ಕ್ರಾಂತಿಯ ಬಗ್ಗೆ ಬೇರೆ ರೀತಿಯಲ್ಲೇ ಬರೆಯುತ್ತಾರೆ. ಒಂದೋ ಅವರು ಈ ಇಡೀ ಪ್ರಘಟನೆಯನ್ನು ಸಾದ್ಯಂತವಾಗಿ ಮೌಲ್ಯಮಾಪನ ಮಾಡಿ ಬರೆಯುತ್ತಾರೆ; ಅಥವಾ ತಾವು ಭಾಗವಹಿಸಿದ ಘಟನೆಗಳನ್ನು ವರದಿ ಮಾಡುತ್ತಾರೆ. ಆದರೆ ಜಾನ್ ರೀಡ್‌ರ

ಪುಸ್ತಕವಾದರೋ ಒಂದು ಜನಸಮುದಾಯದ, ಜನಪ್ರಿಯ ಕ್ರಾಂತಿಯ ವಿಶಾಲ ನೋಟವನ್ನು ಒದಗಿಸುತ್ತದೆ. ಹೀಗಾಗಿ ನವೆಂಬರ್ ಕ್ರಾಂತಿ ಎಂದರೆ ಚರಿತ್ರೆಯ ಭಾಗವಾಗಿ ಕಾಣುವ ಮುಂದಿನ ತಲೆಮಾರುಗಳಿಗೆ, ಎಳೆಯರಿಗೆ ಇದು ವಿಶೇಷವಾಗಿ ಮಹತ್ವವುಳ್ಳದ್ದೇ ಆಗುತ್ತದೆ. ರೀಡ್‌ರವರ ಈ ಹೊತ್ತಿಗೆಯು ತನ್ನದೇ ಆದ ರೀತಿಯಲ್ಲಿ ನಿಜಕ್ಕೂ ಒಂದು ಮಹಾಕಾವ್ಯ.

ಜಾನ್ ರೀಡ್‌ರವರು ರಷ್ಯನ್ ಕ್ರಾಂತಿಯೊಂದಿಗೆ ತಮ್ಮ ಬದುಕನ್ನು ಬೆಸೆದುಕೊಂಡರು. ಸೋವಿಯತ್ ರಷ್ಯಾ ಆತನಿಗೆ ತುಂಬಾ ಪ್ರಿಯವಾಯಿತು. ಆತ ಟೈಫಾಯ್ಡ್ ರೋಗಕ್ಕೆ ತುತ್ತಾಗಿ ರಷ್ಯಾದಲ್ಲೇ ಮಡಿದರು. ಅವರನ್ನು ಕೆಂಪು ಚೌಕದಲ್ಲಿ, ಕ್ರೆಮ್ಲಿನ್ ಗೋಡೆಯ ಕೆಳಗೆ ಮಣ್ಣುಮಾಡಲಾಗಿದೆ. ಕ್ರಾಂತಿಯ ಸಮಯದಲ್ಲಿ ಮಡಿದ ಧೀರರ ಶವಯಾತ್ರೆಯನ್ನು ಅಷ್ಟು ಹೃದಯಸ್ಪರ್ಶಿಯಾಗಿ ವರ್ಣಿಸಿದ ಮಹಾಲೇಖಕನು ಆ ಗೌರವಕ್ಕೆ ಖಂಡಿತಾ ಅರ್ಹನಲ್ಲವೇ.

**– ನಾದೆಜ್ದಾ ಕ್ರುಪ್‌ಸ್ಕಾಯಾ**

(ಬೋಲ್ಶೆವಿಕ್ ಪಕ್ಷದ ನಾಯಕರಲ್ಲೊಬ್ಬರು ಹಾಗೂ ಲೆನಿನ್‌ರ ಮಡದಿ)

# ಪ್ರಸ್ತಾವನೆ

ಈ ಪುಸ್ತಕ ತೀವ್ರವಾಗಿ ನಡೆದುಹೋದ ಇತಿಹಾಸದ ಒಂದು ತುಣುಕು. ಆ ಇತಿಹಾಸ ನಾನು ಕಣ್ಣಾರೆ ಕಂಡ ಇತಿಹಾಸ. ಈ ಪುಸ್ತಕದ ಉದ್ದೇಶ ಇಷ್ಟೇ, ನವೆಂಬರ್ ಕ್ರಾಂತಿಯ ವಿವರವಾದ ಚಿತ್ರಣವನ್ನು ನೀಡುವುದು. ಆ ಕ್ರಾಂತಿಯಲ್ಲಿ ಕಾರ್ಮಿಕರು ಹಾಗೂ ಸೈನಿಕರಿಗೆ ಮುಂದಾಳತ್ವ ನೀಡಿ ಬೋಲ್ಶೆವಿಕ್‌ರು (ಕಮ್ಯುನಿಸ್ಟರು) ರಷ್ಯದ ರಾಜ್ಯಾಧಿಕಾರವನ್ನು ಕೈಗೆತ್ತಿಕೊಂಡು ಸೋವಿಯತ್‌ಗಳು ಎಂದು ಕರೆಯಲ್ಪಡುತ್ತಿದ್ದ ಜನತೆಯ ಸಮಿತಿಗಳಿಗೆ ಅದನ್ನು ವರ್ಗಾಯಿಸಿದ ಕಥನ ಇದು. ಕ್ರಾಂತಿಕಾಲದ ಸಶಸ್ತ್ರ ದಂಗೆಯ ಕೇಂದ್ರವಾಗಿದ್ದ, ರಾಜಧಾನಿಯೂ ಆಗಿದ್ದ ಪೆತ್ರೋಗ್ರಾಡ್ (ರೆಡ್ ಪೆತ್ರೋಗ್ರಾಡ್) ನಲ್ಲಿ ಜರುಗಿದ ಘಟನೆಗಳ ಬಗ್ಗೆಯೇ ಈ ಪುಸ್ತಕ ಗಮನ ಹರಿಸಬೇಕಾಯಿತು. ಅದು ಸಹಜ. ಆದರೆ ಪೆತ್ರೋಗ್ರಾಡ್‌ನಲ್ಲಿ ಎಂಥ ಘಟನೆಗಳು ಜರುಗಿದವೋ ಅವು ಸ್ವಲ್ಪ ಹೆಚ್ಚು ಅಥವಾ ಸ್ವಲ್ಪ ಕಡಿಮೆ ಇಡೀ ರಷ್ಯಾದಲ್ಲಿ ಯಥಾವತ್ತಾಗಿ ಪುನರಾವರ್ತನೆಯಾಯಿತು. ಇದನ್ನು ಓದುಗರು ಗಮನದಲ್ಲಿ ಇರಿಸಿಕೊಳ್ಳುವುದು ಒಳ್ಳೆಯದು.

ನಾನು ಏನನ್ನು ನೇರವಾಗಿ ಕಂಡೆ, ಅನುಭವಿಸಿದೆ, ಯಾವುದಕ್ಕೂ ನಂಬಲರ್ಹ ದಾಖಲೆಗಳಿವೆ ಇವುಗಳನ್ನು ಮಾತ್ರ ನಾನು ಈ ಪುಸ್ತಕದಲ್ಲಿ ಬರೆದಿದ್ದೇನೆ. ಮೊದಲ ಪುಟಗಳನ್ನು ನಾನು ನವೆಂಬರ್ ಕ್ರಾಂತಿಯ ಹಿಂದಿನ ಕಾರಣಗಳೇನು ಎಂಬುದನ್ನು ವಿವರಿಸಲಿಕ್ಕೆ ಮೀಸಲಿಟ್ಟಿದ್ದೇನೆ. ಅದು ಓದಲು ಸ್ವಲ್ಪ ಕಠಿಣವಾಗುತ್ತದೇನೋ ಎನಿಸುತ್ತದೆ. ಆದರೆ ಮುಂದೆ ನಡೆದದ್ದನ್ನು ಅರ್ಥಮಾಡಿಕೊಳ್ಳಲು ಅದು ಅವಶ್ಯಕ.

ಬೋಲ್ಶೆವಿಕ್‌ರು ಮುನ್ನೆಲೆಗೆ ಬಂದದ್ದು ಹೇಗೆ ಎಂಬುದನ್ನು ಅರಿಯಲು ರಷ್ಯಾದ ಆರ್ಥಿಕ ಬದುಕು, ರಷ್ಯಾದ ಸೈನ್ಯ ಅಸ್ತವ್ಯಸ್ತಗೊಂಡದ್ದು 1917ರ ನವೆಂಬರ್ 7ರಂದು ಅಲ್ಲ, ಅದಕ್ಕೆ ಮುಂಚೆಯೇ ಎಂಬುದನ್ನು ಗ್ರಹಿಸಬೇಕಾಗುತ್ತದೆ. 1915ರಷ್ಟು ಹಿಂದೆಯೇ ಆರಂಭವಾದ ಪ್ರಕ್ರಿಯೆಯ ತಾರ್ಕಿಕ ಅಂತ್ಯ ಅದು. ಜ಼ಾರ್‌ನ ಆಸ್ಥಾನದ ಮೇಲೆ ನಿಯಂತ್ರಣವನ್ನು ಸಾಧಿಸಿಕೊಂಡಿದ್ದ ಭ್ರಷ್ಟ ಪ್ರತಿಗಾಮಿಗಳು ಜರ್ಮನರೊಂದಿಗೆ ಪ್ರತ್ಯೇಕ ಶಾಂತಿ ಒಪ್ಪಂದ ಮಾಡಿಕೊಳ್ಳಬೇಕೆಂಬ ಒಳ ಉದ್ದೇಶದಿಂದ ಒಳಗಿನಿಂದಲೇ ಗುಟ್ಟಾಗಿ ರಷ್ಯಾಗೆ ದ್ರೋಹ ಬಗೆದಿದ್ದರು. ರಣರಂಗದಲ್ಲಿ ಶಸ್ತ್ರಾಸ್ತ್ರಗಳ ಕೊರತೆ, ಅದರಿಂದ 1915ರ ಬೇಸಿಗೆಯಲ್ಲಿ ಆರಂಭವಾದ ಸೈನ್ಯದ ಹಿಮ್ಮುಖ ಚಲನೆ, ಸೈನ್ಯದಲ್ಲೂ ಮಹಾನಗರಗಳಲ್ಲೂ ಕಾಣಿಸಿಕೊಂಡ ಆಹಾರದ ಅಭಾವ, 1916ರಲ್ಲಿ ಸರಕು ಉತ್ಪಾದನೆ ಮತ್ತು ಸಾಗಾಣಿಕೆಗಳು ನಿಂತುಹೋದದ್ದು – ಇವೆಲ್ಲವೂ ಕೂಡ ಪೂರ್ಣ ಪ್ರಮಾಣದ ಪಿತೂರಿಯ ಭಾಗವೇ ಆಗಿದ್ದವು. 1917ರ ಮಾರ್ಚ್ ತಿಂಗಳಲ್ಲಿ ನಡೆದ ಜ಼ಾರ್ ಚಕ್ರವರ್ತಿಯ ವಿರುದ್ಧದ ಕ್ರಾಂತಿಯು ಇದೆಲ್ಲಕ್ಕೂ ಸಕಾಲದಲ್ಲಿಯೇ ಪೂರ್ಣವಿರಾಮ ಹಾಕಿತ್ತು.

ಹೊಸ ಆಳ್ವಿಕೆ ಅಧಿಕಾರ ವಹಿಸಿಕೊಂಡ ಮೇಲೆ ಪ್ರಾರಂಭದ ತಿಂಗಳುಗಳಲ್ಲಿ ಒಂದು

ರೀತಿಯ ಗೊಂದಲದ ವಾತಾವರಣವಿತ್ತು. ಒಂದು ಮಹಾಕ್ರಾಂತಿ ಘಟಿಸಿದಾಗ ಅದು ಸಹಜವೇ. ಆದರೂ ಸಹ ಜಗತ್ತಿನಲ್ಲಿ ಅತ್ಯಂತ ದಮನಕ್ಕೆ ಒಳಗಾದ ಹದಿನಾರು ಕೋಟಿ ಜನ ಇದ್ದಕ್ಕಿದ್ದಂತೆ ಸ್ವಾತಂತ್ರ್ಯವನ್ನು ಗಳಿಸಿಕೊಂಡಾಗ ಸೋಜಿಗವೆಂಬಂತೆ ಆಂತರಿಕ ಪರಿಸ್ಥಿತಿಯೂ ಸುಧಾರಿಸಿತು ಮತ್ತು ಯುದ್ಧಭೂಮಿಯಲ್ಲಿ ಹೋರಾಟದ ಕೆಚ್ಚು ಸಹ ವೃದ್ಧಿಯಾಯಿತು.

ಆದರೆ ಈ 'ಮಧುಚಂದ್ರ'ದ ಅವಧಿ ದೀರ್ಘವಾಗಿರಲಿಲ್ಲ. ಆಸ್ತಿವಂತ ವರ್ಗಗಳ ಅಪೇಕ್ಷೆ ಇಷ್ಟೇ : ಕ್ರಾಂತಿಯು ರಾಜ್ಯಾಧಿಕಾರವನ್ನು ಝಾರ್ ಚಕ್ರವರ್ತಿಯಿಂದ ಕಸಿದುಕೊಂಡು ತಮಗೆ ಒಪ್ಪಿಸಬೇಕು. ರಷ್ಯಾ ಹೇಗಿರಬೇಕು? ಫ್ರಾನ್ಸ್ ಅಥವಾ ಅಮೆರಿಕಾದಂತೆ ಸಂವಿಧಾನಾತ್ಮಕ ಗಣರಾಜ್ಯವಾಗಬೇಕು. ಅಥವಾ ಇಂಗ್ಲೆಂಡಿನ ಮಾದರಿಯಲ್ಲಿ ಹೆಸರಿಗೆ ರಾಜನಿರುವ ಸಂವಿಧಾನಬದ್ಧ ರಾಜನ ಆಳ್ವಿಕೆಯೂ ಆಗಬಹುದು. ಆದರೆ ಜನತೆಯ ಅಪೇಕ್ಷೆ ಏನು? ಅವರಿಗೆ ಕೈಗಾರಿಕೆಗಳಲ್ಲಾಗಲೀ, ಜಮೀನುಗಳಲ್ಲಾಗಲೀ ನಿಜವಾದ ಅರ್ಥದ ಜನತಂತ್ರ ಬರಬೇಕು.

ಹೀಗಾಗಿ ಅಂದು ರಷ್ಯಾದಲ್ಲಿ ಮಹಾಯುದ್ಧ ನಡೆಯುತ್ತಿರುವಾಗಲೇ, ಮಾರ್ಚ್‌ನಲ್ಲಿ ರಾಜ್ಯಾಧಿಕಾರದ ಬದಲಾವಣೆಯಾದ ಕ್ರಾಂತಿಯ ನಂತರ ಇನ್ನೊಂದು ಸಾಮಾಜಿಕ ಕ್ರಾಂತಿ ಆರಂಭವಾಯಿತು. ಇದು ಬೋಲ್ಶೆವಿಕರ ವಿಜಯದಲ್ಲಿ ಪರ್ಯವಸಾನಗೊಂಡಿತು.

ವಿದೇಶಿಯರು, ಅದರಲ್ಲೂ ಅಮೆರಿಕನ್ನರು, ರಷ್ಯಾದ ದುಡಿಯುವ ಜನತೆಯ 'ಅಜ್ಞಾನ'ದ ಬಗ್ಗೆ ಒತ್ತಿ ಒತ್ತಿ ಹೇಳುತ್ತಾರೆ. ಅವರಿಗೆ ಪಶ್ಚಿಮದ ರಾಷ್ಟ್ರಗಳ ಜನತೆಗೆ ದೊರಕಿದ್ದಂಥ ರಾಜಕೀಯ ಅನುಭವ ಇರಲಿಲ್ಲ ನಿಜ. ಆದರೆ ಅವರಿಗೆ ತಮ್ಮದೇ ಆದ ಸಂಘಟನೆಗಳನ್ನು ರಚಿಸಿಕೊಂಡ ಗಾಢವಾದ ಅನುಭವವಿತ್ತು. 1917ರ ಹೊತ್ತಿಗಾಗಲೇ ಒಂದು ಕೋಟಿ ಇಪ್ಪತ್ತು ಲಕ್ಷದಷ್ಟು ಜನ ಗ್ರಾಹಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದರು. ಅದೇ ರೀತಿ ಆಗ ಅಸ್ತಿತ್ವಕ್ಕೆ ಬಂದ 'ಸೋವಿಯತ್' ಎಂಬ ಜನಸಮಿತಿಗಳೂ ಸಹ ಅವರ ಅದ್ಭುತವಾದ ಸಂಘಟನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ. ಎಲ್ಲಕ್ಕೂ ಮಿಗಿಲಾಗಿ ಸಮಾಜವಾದದ ಸಿದ್ಧಾಂತದಲ್ಲಾಗಲೀ, ಅದನ್ನು ವಾಸ್ತವದಲ್ಲಿ ಕಾರ್ಯರೂಪಕ್ಕೆ ಇಳಿಸುವುದರಲ್ಲಾಗಲೀ ಅವರಿಗೆ ಸಿಕ್ಕಿದ್ದಂಥ ತರಬೇತಿ ಜಗತ್ತಿನಲ್ಲಿ ಯಾರಿಗೂ ಸಿಕ್ಕಿರಲಿಲ್ಲ.

ಅನೇಕರಿಗೆ ಸೋವಿಯತ್ ಸರ್ಕಾರದ ಬಗ್ಗೆ ದ್ವೇಷವಿದೆ. ಅದಕ್ಕೆ ಅವರು ಕೊಡುವ ಕಾರಣವೇನೆಂದರೆ ಕ್ರಾಂತಿಯ ಕೊನೆಯ ಹಂತದಲ್ಲಿ 'ಮರ್ಯಾದಸ್ಥ' ಜನರ ಮೇಲೆ ಬೋಲ್ಶೆವಿಕರು ಪಾಶವೀ ದಾಳಿಗಳನ್ನು ನಡೆಸಿಬಿಟ್ಟರು ಎಂಬುದು. ವಾಸ್ತವವಾಗಿ ನಡೆದದ್ದೇನು ? ಆಸ್ತಿವಂತ ವರ್ಗಗಳು ಜನಾನುರಾಗಿಯೂ, ಜನರಿಂದಲೇ ಸೃಷ್ಟಿಯಾದದ್ದೂ ಆಗಿದ್ದಂಥ ಕ್ರಾಂತಿಕಾರಿ ಸಂಘಟನೆಗಳು ಬಲಿಷ್ಠವಾಗುತ್ತಿವೆ ಎಂಬುದು ತಮ್ಮ ಅರಿವಿಗೆ ಬರುತ್ತಿದ್ದಂತೆ ಅವುಗಳನ್ನು ನಾಶಪಡಿಸಲು ಯತ್ನಿಸಿದರು. ಕ್ರಾಂತಿಯನ್ನು ಸ್ಥಗಿತಗೊಳಿಸಲು ಯತ್ನಿಸಿದರು. ಇದಕ್ಕಾಗಿ ಹತಾಶ ಯತ್ನಗಳೂ ನಡೆದವು. ಮಾರ್ಚ್ ಕ್ರಾಂತಿಯ ನಂತರ ಅಧಿಕಾರ ವಹಿಸಿಕೊಂಡಿದ್ದ ಕೆರೆನ್‌ಸ್ಕಿ ಸರ್ಕಾರವನ್ನು, ಬಲಗೊಳ್ಳುತ್ತಿದ್ದ ಸೋವಿಯತ್‌ಗಳನ್ನು ಧ್ವಂಸ ಮಾಡಲಿಕ್ಕಾಗಿ ಸಂಚಾರ ಸಾಗಣೆ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದರು. ಕಾರ್ಖಾನೆ ಮಟ್ಟದಲ್ಲಿನ ಜನಸಮಿತಿಗಳನ್ನು ತುಳಿದು ಹಾಕಬೇಕೆಂದು ಕಾರ್ಖಾನೆಗಳನ್ನೇ ಮುಚ್ಚಲಾಯಿತು. ಉರಿಸಲು ಬೇಕಾದ ಇಂಧನ, ಕಚ್ಚಾವಸ್ತುಗಳು ಬೇರೆಲ್ಲಿಗೋ ಹೋಗುವಂತೆ ಮಾಡಲಾಯಿತು. ರಣಾಂಗಣದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸೈನಿಕರ

ಸಮಿತಿಗಳನ್ನು ಧ್ವಂಸಮಾಡಲೋಸುಗ ಮರಣ ದಂಡನೆಯನ್ನು ಮತ್ತೆ ಜಾರಿಗೆ ತರಲಾಯಿತು ಹಾಗೂ ಸೈನ್ಯದ ಸೋಲಿಗೆ ಒಳಸಂಚನ್ನು ಸಹ ರೂಪಿಸಲಾಯಿತು.

ನಿಜಕ್ಕೂ ಇದೆಲ್ಲಾ ಬೋಲ್ಶೆವಿಕ್ ಎಂಬ ಬೆಂಕಿಗೆ ತುಪ್ಪ ಸುರಿದಂತಾಯಿತು. ಬೋಲ್ಶೆವಿಕರು ಸೋವಿಯತ್ ಜನಸಮಿತಿಗಳಿಗೇ ಪರಮಾಧಿಕಾರ ಎಂದು ಘೋಷಿಸಿ ವರ್ಗ ಸಮರವನ್ನು ಪ್ರಚುರಪಡಿಸಿದರು.

ಈ ಎರಡು ಧ್ರುವಗಳ ನಡುವೆ, ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ಮುಂತಾದ 'ಮಂದಗಾಮಿ' ಸಮಾಜವಾದಿಗಳು, ಸಣ್ಣಪಕ್ಷಗಳು ಒಂದೋ ಈ ತುದಿಯನ್ನು ಅಥವಾ ಇನ್ನೊಂದು ತುದಿಯನ್ನು ಪೂರ್ಣ ಮನಸ್ಸಿನಿಂದಲೋ, ಅರೆಮನಸ್ಸಿನಿಂದಲೋ ಬೆಂಬಲಿಸುತ್ತಿದ್ದರು. ಆಸ್ತಿವಂತ ವರ್ಗಗಳು ಇವರುಗಳ ಮೇಲೂ ದಾಳಿ ನಡೆಸುತ್ತಿದ್ದರು. ಆದರೆ ಇವರಾದರೋ ತಮ್ಮತಮ್ಮ ಸಿದ್ಧಾಂತಗಳಿಂದಲೇ ಕೈಕಾಲು ಕಟ್ಟಿಸಿಕೊಂಡಂತೆ, ವಿಕಲಾಂಗರಾಗಿ ಪ್ರತಿರೋಧ ಒಡ್ಡಲು ಅಶಕ್ತರಾಗಿದ್ದರು.

ಒಟ್ಟಿನಲ್ಲಿ ಹೇಳಬೇಕೆಂದರೆ ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ಝಾರ್‌ನಿಂದ ಅಧಿಕಾರ ಹಸ್ತಾಂತರವಾಗುವ ರಾಜಕೀಯ ಕ್ರಾಂತಿಗೆ ಮಾತ್ರ ಸಿದ್ಧರಾಗಿದ್ದರೇ ಹೊರತು ಸರ್ವಾಂಗೀಣ ಸಾಮಾಜಿಕ ಕ್ರಾಂತಿಗೆ ರಷ್ಯಾ ಪಕ್ವವಾಗಿದೆ ಎಂದು ಅವರು ನಂಬಿರಲಿಲ್ಲ. ಅವರ ಪ್ರಕಾರ ಜನಸಮುದಾಯಕ್ಕೆ ಶಿಕ್ಷಣ ಸಾಲದು. ಅವರ ಕೈಗೆ ಅಧಿಕಾರ ಒಪ್ಪಿಸುವ ಯಾವುದೇ ಪ್ರಯತ್ನ ನಡೆದಲ್ಲಿ ಪ್ರತಿಗಾಮಿಗಳು ಬಲಿಷ್ಠರಾಗುತ್ತಾರೆ ಮತ್ತು ಹಳೆಯ ಪ್ರಭುತ್ವವು ಯಾರದೋ ಅವಕಾಶವಾದದಿಂದ ವಾಪಸ್ ಅಧಿಕಾರ ಕಬಳಿಸಬಹುದು. ಹೀಗಾಗಿ ಅಧಿಕಾರ ವಹಿಸಿಕೊಳ್ಳಲೇಬೇಕು ಎನ್ನುವಂಥ ಪರಿಸ್ಥಿತಿ ಅಸ್ತಿತ್ವಕ್ಕೆ ಬಂದಾಗ ಮಂದಗಾಮಿ ಸಮಾಜವಾದಿಗಳೂ ಅದಕ್ಕೆ ಸಿದ್ಧರಾಗಿರಲಿಲ್ಲ. ಸದ್ಯಕ್ಕೆ ಆಸ್ತಿವಂತವರ್ಗಗಳೇ ಅಧಿಕಾರದಲ್ಲಿ ಮುಂದುವರೆಯಲಿ ಎಂಬುದು ಇದರ ಅರ್ಥ.

ಪಶ್ಚಿಮ ಯುರೋಪಿನಲ್ಲಿ ಏನೆಲ್ಲಾ ರಾಜಕೀಯ ಹಾಗೂ ಆರ್ಥಿಕ ಬದಲಾವಣೆಗಳು ಚರಿತ್ರೆಯಲ್ಲಿ ಜರುಗಿವೆಯೋ ಆ ಎಲ್ಲಾ ಹಂತಗಳ ಮೂಲಕ ರಷ್ಯಾ ಕೂಡ ಹಾದುಹೋಗಬೇಕು ಎಂಬುದು ಅವರ ನಿಲುವು. ಎಂದರೆ ತಾತ್ಕಾಲಿಕವಾಗಿಯಾದರೂ ಕೈಗಾರಿಕೋದ್ಯಮಿಗಳು ಅಧಿಕಾರ ವಹಿಸಿಕೊಳ್ಳಲಿ. ಹಾಗಾದ ಮೇಲೆಯೇ ವಿಶ್ವದ ಎಲ್ಲಾ ದೇಶಗಳೊಂದಿಗೆ ರಷ್ಯಾ ಸಹ ಪೂರ್ಣಪ್ರಮಾಣದ ಸಮಾಜವಾದಕ್ಕೆ ಪ್ರವೇಶಿಸಬೇಕು. ಹೀಗಾಗಿ ಅವರು ರಷ್ಯಾದಲ್ಲಿ ಮೊದಲ ಸಂಸತ್ ವ್ಯವಸ್ಥೆ ಬರಬೇಕು ಎಂಬ ಆಸ್ತಿವಂತ ವರ್ಗಗಳ, ಬಂಡವಾಳಗಾರರ ನಿಲುವೇನಿತ್ತು ಅದನ್ನು ಒಪ್ಪಿಕೊಂಡಿದ್ದರು. ಇದರ ಪರಿಣಾಮವಾಗಿ ಅವರು ಸರ್ಕಾರದಲ್ಲಿ ಈ ಆಸ್ತಿವಂತ ವರ್ಗಗಳೊಂದಿಗೆ ಸಹಕರಿಸಬೇಕು ಎಂಬ ಧೋರಣೆಯನ್ನೇ ಅನುಸರಿಸಿದರು.

ಇಲ್ಲಿಂದಾಚೆಗೆ ಆ ವರ್ಗಗಳನ್ನು ಬೆಂಬಲಿಸುವುದು ಅವರಿಗೆ ಸುಲಭವಾಯಿತು. 'ಮಂದಗಾಮಿ' ಸಮಾಜವಾದಿಗಳಿಗೆ ಬಂಡವಾಳಶಾಹಿ ವರ್ಗ, ಬೂರ್ಶ್ವಾಸಿಯ ಅಗತ್ಯ ಕಂಡುಬಂತು. ಆದರೆ ಬಂಡವಾಳಶಾಹಿ ವರ್ಗಕ್ಕೆ 'ಮಂದಗಾಮಿ' ಸಮಾಜವಾದಿಗಳ ಅವಶ್ಯಕತೆ ಕಡಿಮೆಯಾಗುತ್ತಾ ಹೋಯಿತು. ಹೀಗಾಗಿ ಕ್ರಮೇಣ ಆಸ್ತಿವಂತ ವರ್ಗಗಳು ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಲು ಹೆಚ್ಚು ಒತ್ತಡ ಹೇರುತ್ತಾ ಹೋದಂತೆ, ಸಂಪುಟದಲ್ಲಿದ್ದ ಸಮಾಜವಾದಿ ಸಚಿವರು ಕ್ರಮೇಣ ತಮ್ಮ ಕಾರ್ಯಕ್ರಮವನ್ನು ತ್ಯಜಿಸಿ ಅವರು ಒತ್ತರಿಸಿ ಬಂದಂತೆಲ್ಲಾ ದಾರಿ ಬಿಟ್ಟುಕೊಡಲಾರಂಭಿಸಿದರು.

ಕಡೆಗೊಮ್ಮೆ ಬೋಲ್ಶೆವಿಕರು ಪ್ರಬಲ ವರ್ಗಗಳ ಎಲ್ಲಾ ಪೊಳ್ಳು ಆಶ್ವಾಸನೆಗಳನ್ನೂ ಬಯಲಿಗೆಳೆದಾಗ ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ಹೆಚ್ಚು ಹೆಚ್ಚು ಆಸ್ತಿವಂತ ವರ್ಗಗಳ ಜೊತೆ ಹೆಗಲಿಗೆ ಹೆಗಲು ಕೊಟ್ಟು ಆಖಾಡಕ್ಕಿಳಿದರು. ಇಂದು ಜಗತ್ತಿನಾದ್ಯಂತ ಅದೇ ವಿದ್ಯಮಾನ ಕಂಡುಬರುತ್ತಿದೆ.

ನನಗನ್ನಿಸುವುದು ಬೋಲ್ಶೆವಿಕರು ವಿನಾಶಕಾರಿ ಶಕ್ತಿಯಾಗಲಿರಲಿಲ್ಲ. ಬದಲಿಗೆ ರಚನಾತ್ಮಕ ಕಾರ್ಯಕ್ರಮವೊಂದನ್ನು ಹೊಂದಿದ್ದು ಅದನ್ನು ಇಡಿಯ ದೇಶದಲ್ಲಿ ಸ್ಥಾಪಿಸುವ ಶಕ್ತಿ ಇದ್ದದ್ದು ಅವರಿಗೆ ಮಾತ್ರ. ಅವರೇನಾದರೂ ಅಂತಿಮವಾಗಿ ಯಶಸ್ವಿಯಾಗದಿದ್ದರೆ, ಡಿಸೆಂಬರ್ ತಿಂಗಳ ವೇಳೆಗೆ ಜರ್ಮನ್ ಸೈನ್ಯ ರಾಜಧಾನಿ ಪೆತ್ರೋಗ್ರಾಡ್ ನಗರವನ್ನೂ ಮಾಸ್ಕೊ ನಗರವನ್ನೂ ಆಕ್ರಮಿಸಿಕೊಂಡಿರುತ್ತಿತ್ತು. ಇನ್ನೊಬ್ಬ ಝಾರ್ ಚಕ್ರವರ್ತಿ ಮತ್ತೆ ಅಧಿಕಾರಕ್ಕೆ ಬಂದಿರುತ್ತಿದ್ದ. ಇದರ ಬಗ್ಗೆ ನನಗೆ ಎಳ್ಳಷ್ಟೂ ಸಂಶಯವಿಲ್ಲ.

ಈಗಲೂ, ಸೋವಿಯತ್ ಅಧಿಕಾರ ಅಸ್ತಿತ್ವಕ್ಕೆ ಬಂದು ಒಂದು ವರ್ಷವಾದಮೇಲೂ, ಬೋಲ್ಶೆವಿಕ್ ಕ್ರಾಂತಿಯನ್ನು 'ಒಂದು ದುಸ್ಸಾಹಸ' ಎಂದು ವರ್ಣಿಸುವುದು ಫ್ಯಾಷನ್ ಆಗಿಯೇ ಇದೆ. ಅದು ನಿಜಕ್ಕೂ ಸಾಹಸವೇ; ಎಂಥ ಸಾಹಸ! ಅದು ದುಡಿಯುವ ಜನತೆಯ ಸರಳವಾದ, ವಿಶಾಲವ್ಯಾಪ್ತಿಯ ಆಶೋತ್ತರಗಳನ್ನು ಆಧರಿಸಿ ಅವರಿಗೆ ಮುಂದಾಳತ್ವ ನೀಡಿ ನೆರವೇರಿಸಿದ, ಇತಿಹಾಸವನ್ನೇ ಸೃಷ್ಟಿಸಿದ, ಮನುಕುಲ ಕಂಡ ಅತ್ಯಂತ ಮಹತ್ವದ ಸಾಧನೆಗಳಲ್ಲೊಂದು. ದೊಡ್ಡ ದೊಡ್ಡ ಜಾಗೀರುಗಳಿಗೆ ಸೇರಿದ ಭೂಮಿಯನ್ನು ರೈತರ ನಡುವೆ ಹಂಚಲು ಬೇಕಾದ ಏರ್ಪಾಡನ್ನು ಮಾಡಿಕೊಂಡಾಗಿತ್ತು. ಕೈಗಾರಿಕೆಯ ಮೇಲೆ ಕಾರ್ಮಿಕರ ಹತೋಟಿಯನ್ನು ಸ್ಥಾಪಿಸಲು ಕಾರ್ಖಾನೆ ಸಮಿತಿಗಳು ಹಾಗೂ ಟ್ರೇಡ್ ಯೂನಿಯನ್‌ಗಳೂ ಸಜ್ಜಾಗಿದ್ದವು. ಪ್ರತಿಯೊಂದು ಹಳ್ಳಿ, ಪಟ್ಟಣ, ನಗರ, ಜಿಲ್ಲೆ, ಪ್ರಾಂತ್ಯಗಳಲ್ಲಿ ಸ್ಥಳೀಯ ಆಡಳಿತವನ್ನು ನಿರ್ವಹಿಸಲು ರೈತರ, ಕಾರ್ಮಿಕರ, ಸೈನಿಕರ ಸೋವಿಯತ್ ಜನಸಮಿತಿಗಳು ಅಣಿಯಾಗಿದ್ದವು.

ಯಾರು ಏನಾದರೂ ಅಂದುಕೊಳ್ಳಲಿ, ಮಾನವನ ಇತಿಹಾಸದಲ್ಲಿ ರಷ್ಯನ್ ಕ್ರಾಂತಿಯು ಒಂದು ಮಹಾನ್ ಪ್ರಘಟನೆ. ಇದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಅದೇ ರೀತಿ ಬೋಲ್ಶೆವಿಕರ ಉದಯವೂ ಅಷ್ಟೇ ಜಾಗತಿಕ ಮಹತ್ವದ ಘಟನೆ. 1871ರಲ್ಲಿ ಮೊದಲಬಾರಿಗೆ ಅಲ್ಪಕಾಲಕ್ಕಾದರೂ ಫ್ರಾನ್ಸ್‌ನಲ್ಲಿ ಕಾರ್ಮಿಕರು ಅಧಿಕಾರಕ್ಕೆ ಬಂದದ್ದರ ಬಗ್ಗೆ ಎಂದರೆ 'ಪ್ಯಾರಿಸ್ ಕಮ್ಯೂನ್' ಪ್ರಘಟನೆಯ ಬಗ್ಗೆ ಚರಿತ್ರಕಾರರು ಹೇಗೆ ಪ್ರತಿಯೊಂದು ದಾಖಲೆಯನ್ನು ಹೆಕ್ಕಿ ತೆಗೆಯುತ್ತಾರೋ ಅದೇ ರೀತಿ 1917ರಲ್ಲಿ ಪೆತ್ರೋಗ್ರಾಡ್‌ನಲ್ಲಿ ಏನಾಯಿತು ಎಂಬುದು ತೀವ್ರ ಆಸಕ್ತಿಯ ವಿಷಯವಾಗುತ್ತದೆ. ಅಲ್ಲಿನ ಜನತೆಯಲ್ಲಿ ಚೈತನ್ಯವನ್ನು ಉಕ್ಕಿಸಿದ ಸ್ಫೂರ್ತಿ ಯಾವುದು, ಆ ನಾಯಕರು ಹೇಗಿದ್ದರು, ಹೇಗೆ ಮಾತನಾಡುತ್ತಿದ್ದರು, ಹೇಗೆ ಕಾರ್ಯ ನಿರ್ವಹಿಸಿದರು ಎಂಬುದನ್ನು ಅರಿಯುವ ಹಂಬಲವಿರುತ್ತದೆ. ಇದನ್ನು ತಣಿಸುವ ಉದ್ದೇಶದಿಂದಲೇ ನಾನು ಈ ಪುಸ್ತಕವನ್ನು ಬರೆದಿದ್ದೇನೆ.

ಇಡೀ ಸಂಘರ್ಷದಲ್ಲಿ ನನ್ನದು ತಟಸ್ಥ ನಿಲುವಲ್ಲ. ನನಗೆ ನನ್ನದೇ ಆದ ಒಲವು ನಿಲುವುಗಳಿದ್ದವು. ಆದರೆ ಆ ಮಹೋನ್ನತ ದಿನಗಳ ವರದಿ ಒಪ್ಪಿಸುವಾಗ ನಾನು ಒಬ್ಬ ಪ್ರಾಮಾಣಿಕ ವರದಿಗಾರನಾಗಿ, ಸತ್ಯವನ್ನು ದಾಖಲಿಸಲು ಯತ್ನಿಸಿದ್ದೇನೆ.

ನ್ಯೂಯಾರ್ಕ್, 1 ಜನವರಿ 1919 **ಜಾನ್ ರೀಡ್**

# ವಿವರಣೆಗಳು, ಟಿಪ್ಪಣಿಗಳು

ಪುಸ್ತಕದಲ್ಲಿ ಬರುವ ಕೆಲವೊಂದು ಸಂಘಟನೆಗಳು, ಸಂಸ್ಥೆಗಳ ಬಗ್ಗೆ ಚಿಕ್ಕ ಪರಿಚಯ ಅಗತ್ಯ.

## ರಾಜಕೀಯ ಪಕ್ಷಗಳು

1. **ಮೊನಾರ್ಕಿಸ್ಟರು** : ರಾಜಪ್ರಭುತ್ವದ ಪರ, ಬಹಿರಂಗ ಚಟುವಟಿಕೆ ಇಲ್ಲ. ಬಹುತೇಕ ಕ್ಯಾಡೆಟ್ ಪಕ್ಷದೊಂದಿಗೆ ವಿಲೀನ.

2. **ಕ್ಯಾಡೆಟ್‌ಗಳು** : ಎಂದರೆ ಕಾನ್‌ಸ್ಟಿಟ್ಯೂಶನಲ್ ಡೆಮಾಕ್ರೆಟರು ಎಂಬುದರ ಹ್ರಸ್ವರೂಪ. ಆಸ್ತಿವಂತ ವರ್ಗಗಳ ಪಕ್ಷ, ಮಾರ್ಚ್‌ಕ್ರಾಂತಿಯ ನಂತರ ಸರ್ಕಾರ ರಚಿಸಿದರು. ಜನತೆಯ ಶಾಂತಿಪರ ಇಚ್ಛೆಗೆ ವಿರುದ್ಧವಾಗಿ ಮೊದಲನೆಯ ಮಹಾಯುದ್ಧದಲ್ಲಿ ರಷ್ಯಾ ಭಾಗವಹಿಸಬೇಕು ಎಂಬ ನಿಲುವನ್ನು ಹೊಂದಿದ್ದರಿಂದ ಜನ ಏಪ್ರಿಲ್ ತಿಂಗಳಲ್ಲೇ ಇವರನ್ನು ಕಿತ್ತು ಬಿಸಾಕಿದರು. ಕ್ರಾಂತಿಯು ಹೆಚ್ಚು ಸಾಮಾಜಿಕ ಆರ್ಥಿಕ ಸಮಾನತೆಯತ್ತ ಮುಂದುವರೆದಾಗ ಈ ಪಕ್ಷ ಹೆಚ್ಚು ಸಂಪ್ರದಾಯನಿಷ್ಠವಾಯಿತು. ಹಳೆಯ ವ್ಯವಸ್ಥೆಯ ಪರವಾಯಿತು.

2ಎ. **ಸಾರ್ವಜನಿಕ ಮುಖಂಡರ ಗುಂಪು** : ಇದರಲ್ಲಿ ಇದ್ದವರು ಬ್ಯಾಂಕರ್‌ಗಳು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು.

3. **ರಷ್ಯನ್ ಸೋಷಿಯಲ್ ಡೆಮಾಕ್ರೆಟಿಕ್ ಲೇಬರ್ ಪಾರ್ಟಿ** : ಮೂಲತಃ ಕಾರ್ಲ್ ಮಾರ್ಕ್ಸ್‌ರಿಂದ ಪ್ರಣೀತವಾದ ಸಿದ್ಧಾಂತಕ್ಕೆ ಬದ್ಧರಾದ ಸಮಾಜವಾದಿಗಳು 1903ರಲ್ಲಿ ನಡೆದ ಮಹಾಧಿವೇಶನದಲ್ಲಿ ಪಕ್ಷವು ಹೋಳಾಯಿತು. ಅದಕ್ಕೆ ಕಾರಣ ಪಕ್ಷ ಅನುಸರಿಸಬೇಕಾದ ರಣಕೌಶಲ್ಯ, ಕಾರ್ಯವೈಖರಿಗಳ ಕುರಿತಾದ ಭಿನ್ನಾಭಿಪ್ರಾಯಗಳು. ಹೆಚ್ಚು ಜನ ಸದಸ್ಯರು – ಬಹುಮತವಿದ್ದ ಬಣ ಬೋಲ್ಶೆವಿಕ್ ಎಂದು ಕರೆಯಲ್ಪಟ್ಟಿತು. ಮೆನ್ಶೆವಿಕ್ ಎಂದರೆ ಅಲ್ಪಮತ ಹೊಂದಿದ್ದವರು ಎಂದು.

4. **ಮೆನ್ಶೆವಿಕ್** : ಸಮಾಜವಾದದತ್ತ ನಿಧಾನವಾಗಿ ಸಮಾಜವು ವಿಕಸನ ಹೊಂದುವುದಾಗಿ ಎಂದು ಆಶಿಸುವ ವಿವಿಧ ಛಾಯೆಗಳ ಸಮಾಜವಾದಿಗಳು ಇದ್ದರು. ಇದರಲ್ಲಿ ಅನೇಕರು ಅನುಕೂಲಸ್ಥ ಕುಟುಂಬಗಳಿಂದ ಬಂದಿದ್ದ ಬುದ್ಧಿಜೀವಿಗಳು. ಇವರಲ್ಲೇ ಇನ್ನೊಂದು ಗುಂಪು ಅಂತರರಾಷ್ಟ್ರೀಯವಾದಿಗಳದ್ದು. ಸ್ವಲ್ಪ ತೀವ್ರ ವಾದಿಗಳಾದರೂ ಮೆನ್ಶೆವಿಕ್ ತಾಯಿಬೇರಿನಿಂದ ಬೇರ್ಪಡಿಸಿಕೊಳ್ಳದಿದ್ದವರು. ಬೋಲ್ಶೆವಿಕರು ಪ್ರತಿಪಾದಿಸುತ್ತಿದ್ದ ಕಾರ್ಮಿಕವರ್ಗದ ಸರ್ವಾಧಿಕಾರಕ್ಕೆ ವಿರುದ್ಧ ವಾಗಿದ್ದವರು. ಟ್ರಾಟ್‌ಸ್ಕಿ ಬಹಳ ಕಾಲ ಈ ಪಕ್ಷದಲ್ಲಿದ್ದರು.

5. **ಬೋಲ್ಶೆವಿಕರು** : ಮಂದಗಾಮಿಯಾದ ಮತ್ತು ಪಾರ್ಲಿಮೆಂಟರಿ ರಾಜಕೀಯದಲ್ಲೇ ಪೂರಾ ವಿಶ್ವಾಸವಿಟ್ಟುಕೊಂಡಿದ್ದ ಸಮಾಜವಾದಿಗಳ ಜೊತೆ ತಮಗಿದ್ದ

ಭಿನ್ನತೆಯನ್ನು ಸ್ಪಷ್ಟಪಡಿಸಲು ಈ ಪಕ್ಷ ಈಗ ತನ್ನನ್ನೇ ಕಮ್ಯುನಿಸ್ಟ್ ಪಾರ್ಟಿ ಎಂದು ಕರೆದುಕೊಂಡಿದೆ. ಬೋಲ್ಶೆವಿಕರು ಕಾರ್ಮಿಕವರ್ಗವು ಕೂಡಲೇ ಸಶಸ್ತ್ರ ಕ್ರಾಂತಿಗೆ ಹೋಗಬೇಕೆಂದು ಪ್ರೇರೇಪಿಸಿದವರು. ಭೂಮಿ, ಕಾರ್ಖಾನೆ, ನೈಸರ್ಗಿಕ ಸಂಪನ್ಮೂಲ, ಬ್ಯಾಂಕುಗಳ ಮೇಲೆ ಹಿಡಿತ ಸಾಧಿಸಿ ಸಮಾಜವಾದವನ್ನು ಸ್ಥಾಪಿಸಲು ರಾಜ್ಯಾಧಿಕಾರವನ್ನು ಪಡೆದುಕೊಂಡವರು. ಕೈಗಾರಿಕಾ ಕಾರ್ಮಿಕರ ಮೇಲೆ ಮುಖ್ಯವಾಗಿ ಅವಲಂಬಿತವಾಗಿದ್ದರೂ ವಿಶಾಲ ರೈತ ಸಮುದಾಯದ ಬೆಂಬಲವನ್ನೂ ಪಡೆದ ಈ ಪಕ್ಷದ ನಾಯಕರು ಲೆನಿನ್. ನಂತರ ಟ್ರಾಟ್‌ಸ್ಕಿ ಈ ಪಕ್ಷ ಸೇರಿದರು.

6. **ನ್ಯೂ ಲೈಫ್ ಎಂಬುದು ಮ್ಯಾಕ್ಸಿಂ ಗಾರ್ಕಿ ಮುಂತಾದ ಬುದ್ಧಿಜೀವಿಗಳ ಸಂಘಟನೆ.**
7. **ಸೋಷಲಿಸ್ಟ್ ರೆವಲ್ಯೂಶನರಿ ಪಾರ್ಟಿ** : ಇವರನ್ನು ಎಸ್ ಆರ್‌ಗಳು ಎನ್ನುವುದೂ ಉಂಟು. ಮೂಲತಃ ರೈತರ ಪಕ್ಷ. ಜಮೀನು ಮಾಲೀಕರಿಗೆ ಪರಿಹಾರ ಕೊಟ್ಟು ಭೂಮಿಯನ್ನು ರಾಷ್ಟ್ರೀಕರಣಗೊಳಿಸಬೇಕು ಎಂದು ನಂಬಿದ್ದವರು. ಮುಂದೆ ಕೆಲವು ತಿಂಗಳು ಪ್ರಧಾನಿಯಾಗಿದ್ದ ಕೆರೆನ್‌ಸ್ಕಿ ಈ ಬಣದವರೇ, ರಾಜಕೀಯದಲ್ಲಿ ಮೆನ್ಶೆವಿಕರಿಗೆ ಹತ್ತಿರವಾದವರು. ಇವರಲ್ಲೇ ತೀವ್ರಗಾಮಿಗಳಾಗಿದ್ದ ಬುದ್ಧಿಜೀವಿಗಳು ಲೆಫ್ಟ್ ಸೋಷಲಿಸ್ಟ್ ರೆವಲ್ಯೂಶನರಿಗಳು ಎಂಬ ಬಣವಾದರು. ಇವರು ಬೋಲ್ಶೆವಿಕರಿಗೆ ಹತ್ತಿರವಾಗಿ ರೈತ ಬೆಂಬಲ ಗಳಿಸಿಕೊಳ್ಳಲು ನೆರವಾದವರು.

## ಸಭೆ – ಸಮಾವೇಶಗಳ ಕಾರ್ಯವಿಧಾನ

ಈ ಪುಸ್ತಕದಲ್ಲಿ ಅನೇಕ ಸಭೆಗಳು ನಡೆದದ್ದರ ಬಗ್ಗೆ ವಿವರಗಳು ಬಂದಿವೆ. ರಷ್ಯಾದಲ್ಲಿ ಸಭೆಗಳು ಆರಂಭವಾಗುವ ಮುನ್ನ ಅಧ್ಯಕ್ಷೀಯ ಮಂಡಳಿಯನ್ನು ಚುನಾಯಿಸಲಾಗುತ್ತದೆ. ಸಭೆಯಲ್ಲಿ ಭಾಗವಹಿಸಿರುವ ವಿವಿಧ ಬಣಗಳ, ಗುಂಪುಗಳ ಪ್ರತಿನಿಧಿಗಳು ಮಂಡಳಿಯಲ್ಲಿ ಸದಸ್ಯರಾಗಿರುತ್ತಾರೆ. ಪ್ರಾತಿನಿಧ್ಯವು ಅವರವರ ಬಲಾಬಲಕ್ಕೆ ತಕ್ಕಂತೆ ಇರುತ್ತದೆ. ಮಂಡಳಿಯು ಚರ್ಚೆ ಹೇಗೆ ನಡೆಯಬೇಕು ಎಂದು ನಿರ್ಧರಿಸುತ್ತದೆ. ಪ್ರತಿಯೊಂದು ಪ್ರಶ್ನೆಯನ್ನು ಬೇಕಾದಷ್ಟು ಚರ್ಚಿಸಿ ಬಿಡಿಬಿಡಿಯಾಗಿ ಮತಕ್ಕೆ ಹಾಕಲಾಗುತ್ತದೆ. ನಿಜಕ್ಕೂ ಸಭೆಯನ್ನು ನಡೆಸಿಕೊಂಡು ಹೋಗುವುದು ಲವಲವಿಕೆಯಿಂದ ಗದ್ದಲಮಾಡುತ್ತಾ, ಭಾಗವಹಿಸುವ ಜನಗಳೇ. ಅಧ್ಯಕ್ಷರು ಸಭೆಯಲ್ಲಿ ಸುವ್ಯವಸ್ಥೆಯನ್ನು ಕಾಪಾಡುತ್ತಾರೆ ಅಷ್ಟೇ. ಪ್ರತಿಯೊಂದು ಬಣವು ತನ್ನ ನಿಲುವು ಏನಿರಬೇಕೆಂದು ವಿರಾಮಗಳ ಸಂದರ್ಭದಲ್ಲಿ [illegible] ಸೇರಿ ನಿರ್ಧ[illegible] ಒಗ್ಗಟ್ಟಾಗಿ ಮತ ಚಲಾಯಿಸುತ್ತದೆ.
ಯಾವುದು, ಆ [illegible]

ನಿರ್ವಹಿಸಿದ**ಸಂಘಟನೆಗಳು**

ಉಗ[illegible]

1. **ಸೋವಿಯತ್** : ಸೋವಿಯತ್ ಎಂದರೆ ಮಂಡಳಿ ಎಂದು ಅರ್ಥ. ಆದರೆ ಕ್ರಾಂತಿಯನಂತರ ಸೋವಿಯತ್ ಎಂದರೆ ಅದರ ಅರ್ಥ ಕಾರ್ಮಿಕರ ಸಂಘಟನೆಗಳು ಆಯ್ಕೆ ಮಾಡಿದಂಥ ಒಂದು ರೀತಿಯ ಸಂಸತ್ತಿನಂತೆ ಕೆಲಸ ಮಾಡುವ ಸಂಸ್ಥೆ. ಅದೇ ರೀತಿ ರೈತರ, ಸೈನಿಕರ ಸೋವಿಯತ್‌ಗಳೂ ಇರುತ್ತವೆ. ಪ್ರತಿಯೊಂದು ಹಳ್ಳಿಯಲ್ಲಿ, ಪಟ್ಟಣದಲ್ಲಿ, ನಗರದಲ್ಲಿ ಸೋವಿಯತ್‌ಗಳಿರುವಂತೆಯೇ ಜಿಲ್ಲೆ ಮತ್ತು ಪ್ರಾಂತ್ಯ ಮಟ್ಟದಲ್ಲೂ ಸೋವಿಯತ್‌ಗಳಿದ್ದು, ರಷ್ಯಾದಾದ್ಯಂತ ಇರುವ ಎಲ್ಲಾ ಸೋವಿಯತ್‌ಗಳಿಗೂ ಒಂದು

ಕೇಂದ್ರೀಯ ಕಾರ್ಯಕಾರಿ ಸಮಿತಿಯೂ ಇರುತ್ತದೆ. ಮಾರ್ಚ್ ಕ್ರಾಂತಿಯ ನಂತರ ಎಲ್ಲೆಡೆ ಕಾರ್ಮಿಕರ ಮತ್ತು ಸೈನಿಕರ ಸೋವಿಯತ್ ಒಂದಾದವು. ನವೆಂಬರ್‌ನಲ್ಲಿ ನಡೆದ ಬೋಲ್ಶೆವಿಕ್ ಕ್ರಾಂತಿಯ ನಂತರ ರೈತರ ಸೋವಿಯತ್‌ಗಳೂ ಇವರೊಂದಿಗೆ ಸೇರಿದವು.

2. **ಟ್ರೇಡ್ ಯೂನಿಯನ್** : ರಷ್ಯಾದ ಕಾರ್ಮಿಕ ಸಂಘಗಳಿಗೆ ಟ್ರೇಡ್ ಯೂನಿಯನ್‌ಗಳು ಎಂದು ಕರೆಯಲಾಗುತ್ತಿದ್ದು ಬೋಲ್ಶೆವಿಕ್ ಕ್ರಾಂತಿಯ ಹೊತ್ತಿಗೆ ಇವುಗಳಲ್ಲಿ ಮೂವತ್ತರಿಂದ ನಲವತ್ತು ಲಕ್ಷ ಜನ ಸದಸ್ಯರಿದ್ದರು. ಇದಕ್ಕೂ ಕೇಂದ್ರೀಯ ನಾಯಕತ್ವವು ರಾಜಧಾನಿಯಲ್ಲಿತ್ತು.

3. **ಫ್ಯಾಕ್ಟರಿಶಾಪ್ ಸಮಿತಿಗಳು** : ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದು ಕಾರ್ಖಾನೆಗಳನ್ನು ನಡೆಸುವ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡವು. ಈ ಸಮಿತಿಗಳಿಗೂ ಅಖಿಲ ರಷ್ಯಾ ಮಟ್ಟದಲ್ಲಿ ಕೇಂದ್ರ ಸಮಿತಿಯೊಂದು ಪೆತ್ರೋಗ್ರಾಡ್‌ನಿಂದ ಕೆಲಸ ನಿರ್ವಹಿಸುತ್ತಿತ್ತು.

4. **ಡ್ಯೂಮಾ** : ವಿಚಾರ ವಿನಿಮಯದ ಅಂಗ ಎಂದರ್ಥ. ಹಳೆಯ ರಷ್ಯನ್ ಸಾಮ್ರಾಜ್ಯದ ಡ್ಯೂಮಾ 1917ರ ಸೆಪ್ಟೆಂಬರ್ ಹೊತ್ತಿಗೆ ವಿಸರ್ಜಿಸಲ್ಪಟ್ಟಿತು. ಈ ಪುಸ್ತಕದಲ್ಲಿ ಬರುವ ಡ್ಯೂಮಾ ಒಂದು ನಗರಸಭೆ.

5. **ಜೆಮ್‌ಸ್ಟ್ವೊ** : ಗ್ರಾಮೀಣ ಮಂಡಳಿಗಳಾಗಿದ್ದು, ಮುಖ್ಯವಾಗಿ ಶಿಕ್ಷಣ ಹಾಗೂ ಸಮಾಜಸೇವೆಯ ಕೆಲಸವನ್ನು ರೈತರ ಮಧ್ಯೆ ನಿರ್ವಹಿಸುತ್ತಿದ್ದವು. ಡ್ಯೂಮಾ ಮತ್ತು ಜೆಮ್‌ಸ್ಟ್ವೊಗಳ ಬಲವು ಆರ್ಥಿಕ ಆಧಾರದ ಮೇಲೆ ರಚಿತವಾದ ಸೋವಿಯತ್‌ಗಳ ಎದುರು ಕ್ಷೀಣಿಸುತ್ತಾ ಹೋಯಿತು.

6. **ಕೋ ಆಪರೇಟಿವ್ಸ್** : ಕ್ರಾಂತಿಗೆ ಮುಂಚೆಯೇ ಸಹಕಾರಸಂಘಗಳು ಅಸ್ತಿತ್ವಕ್ಕೆ ಬಂದಿದ್ದು ಅದರಲ್ಲಿ ಮಿಲಿಯಾಂತರ ಸದಸ್ಯರಿದ್ದರು. ಮಂದಗಾಮಿ ಸಮಾಜವಾದಿಗಳಿಂದ ಆರಂಭವಾಗಿದ್ದ ಈ ಸಂಘಟನೆಗಳು, ಉತ್ಪಾದನೆ ಮತ್ತು ವಿತರಣೆ ಸಂಪೂರ್ಣವಾಗಿ ಕಾರ್ಮಿಕರ ವಶ ಆಗಬೇಕೆಂದು ಒತ್ತಾಯಿಸುತ್ತಿದ್ದ ಕ್ರಾಂತಿಕಾರಿ ಸಮಾಜವಾದಿ ಗುಂಪುಗಳ ಬೆಂಬಲವನ್ನು ಪಡೆದುಕೊಂಡಿರಲಿಲ್ಲ. ಕ್ರಾಂತಿಯವರೆಗೂ ಇವು ಬದಲಾವಣೆಯ ವಿರೋಧಿಯಾಗಿದ್ದವು.

7. **ಸೈನ್ಯ ಸಮಿತಿಗಳು** : ರಾಜಪದ್ಧತಿಯ ಕಾಲದ ಸೈನ್ಯಾಧಿಕಾರಿಗಳ ಪ್ರಭಾವವನ್ನು ಎದುರಿಸಲು ಸೈನಿಕರು ಸೈನ್ಯ ಸಮಿತಿಗಳನ್ನು ರಚಿಸಿಕೊಂಡಿದ್ದರು. ಪ್ರತಿ ಕಂಪೆನಿ, ರೆಜಿಮೆಂಟ್, ಬ್ರಿಗೇಡ್, ಡಿವಿಶನ್‌ಗಳಿಗೆ ಸಮಿತಿಗಳು ರಚಿತವಾಗಿ ಎಲ್ಲಕ್ಕೂ ಮೇಲೆ ಕೇಂದ್ರ ಸೈನ್ಯ ಸಮಿತಿ ಇತ್ತು. ಕ್ರಾಂತಿಯ ಸಂದರ್ಭದಲ್ಲಿ ಆಡಳಿತ ಯಂತ್ರ ಕುಸಿದುಬಿದ್ದಾಗ ಸಂಪೂರ್ಣ ನಿರ್ವಹಣೆಯನ್ನು ನೋಡಿಕೊಂಡದ್ದು ಈ ಸಮಿತಿಗಳೇ.

## ಕೇಂದ್ರ ಸಮಿತಿಗಳು

1917ರ ವಸಂತ ಕಾಲದಲ್ಲಿ ಮತ್ತು ಬೇಸಿಗೆಯಲ್ಲಿ ಪೆತ್ರೋಗ್ರಾಡ್‌ನಲ್ಲಿ ಎಲ್ಲಾ ಸಂಘಟನೆಗಳ ಅಖಿಲ ರಷ್ಯನ್ ಸಮಾವೇಶಗಳನ್ನು ಸಂಘಟಿಸಲಾಯಿತು. ಕಾರ್ಮಿಕರ, ರೈತರ, ಸೈನಿಕರ, ಟ್ರೇಡ್ ಯೂನಿಯನ್‌ಗಳ, ಫ್ಯಾಕ್ಟರಿಶಾಪ್ ಸಮಿತಿಗಳ, ಭೂಸೇನೆ ಮತ್ತು ನೌಕಾ ಸೇನೆಯ ಸಮಿತಿಗಳ, ವಿವಿಧ ರಾಷ್ಟ್ರೀಯತೆಗಳೆಲ್ಲವುಗಳ ಅಖಿಲ ರಷ್ಯನ್ ಸಮಾವೇಶಗಳು ಜರುಗಿದವು. ಈ ಎಲ್ಲ ಸಮಿತಿಗಳಲ್ಲೂ ಕೇಂದ್ರ ಸಮಿತಿಗಳನ್ನು

ರಚಿಸಲಾಯಿತು. ಈ ಸಮಿತಿಗಳು ಸರ್ಕಾರದಲ್ಲಿ ತಮಗೆ ಸಂಬಂಧಪಟ್ಟ ಸಂಘಟನೆಗಳ ಹಿತಾಸಕ್ತಿಯನ್ನು ಸರ್ಕಾರದ ಕೇಂದ್ರದಲ್ಲಿ ರಕ್ಷಿಸಬೇಕಿತ್ತು. ಹಂಗಾಮಿ ಸರ್ಕಾರವು ನವೆಂಬರ್ ಕ್ರಾಂತಿಗೆ ಮುನ್ನ ದುರ್ಬಲವಾಗುತ್ತಾ ಹೋದಂತೆ ಈ ಸಮಿತಿಗಳೇ ಹೆಚ್ಚಿನ ಆಡಳಿತಾತ್ಮಕ ಅಧಿಕಾರವನ್ನು ಚಲಾಯಿಸುತ್ತಾ ಹೋದವು.

ಈ ಪುಸ್ತಕದಲ್ಲಿ ಕೆಲವೊಂದು ಮುಖ್ಯವಾದ ಸಂಘಗಳ ಪ್ರಸ್ತಾಪ ಬರುತ್ತದೆ. ಅದರಲ್ಲಿ ಒಂದು ಯೂನಿಯನ್ ಆಫ್ ಯೂನಿಯನ್ಸ್ (ಸಂಘಗಳ ಮಹಾಸಂಘ). ಇದು ವೈದ್ಯರುಗಳ, ವಕೀಲರುಗಳ ಮಹಾಸಂಘವಾಗಿದ್ದು ಬೋಲ್ಶೆವಿಕ್ ಕ್ರಾಂತಿಯನ್ನು ವಿರೋಧಿಸಿತ್ತು. ತ್ಸೆ–ಇ–ಕಾ ಎಂಬುದು ಕಾರ್ಮಿಕರು ಹಾಗೂ ಸೈನಿಕರ ಪ್ರತಿನಿಧಿಗಳ ಸೋವಿಯತ್‌ಗಳ ಕೇಂದ್ರ ಸಮಿತಿ, ಸೆಂಟ್ರೋಫ್ಲೋಟ್ ಕೇಂದ್ರೀಯ ನೌಕಾ ಸಮಿತಿ, ವಿಕ್‌ಜೆಲ್ ಎಂಬುದು ರೈಲ್ವೆ ಕಾರ್ಮಿಕರ ಕೇಂದ್ರ ಸಮಿತಿ. ರೈತರ ಒಕ್ಕೂಟ ಅಥವಾ ಪೆಸಂಟ್ಸ್ ಯೂನಿಯನ್ ಎಂಬುದು 1905ರಲ್ಲಿ ಕ್ರಾಂತಿಕಾರಿ ರೈತರ ಸಂಘಟನೆಯಾಗಿದ್ದುದು, 1917ರ ಹೊತ್ತಿಗೆ ಶ್ರೀಮಂತ ರೈತರ ಮುಖವಾಣಿಯಾಗಿ ರೈತರ ಸೋವಿಯತ್ ಕ್ರಾಂತಿಕಾರಿ ಧೋರಣೆಗೆ ವಿರುದ್ಧವಾಗಿತ್ತು.

## ಇತರ ಸಂಘಟನೆಗಳು

ಇವುಗಳಲ್ಲದೆ ಅನೇಕ ಸಶಸ್ತ್ರ ಪಡೆಗಳ ಹೆಸರನ್ನೂ ನಾವು ಪರಿಚಯಿಸಿಕೊಳ್ಳೋಣ. ಅದರಲ್ಲಿ ಮೊದಲಿಗೆ ಮುಖ್ಯವಾದದ್ದು ರೆಡ್‌ಗಾರ್ಡ್ಸ್. 1905ರಲ್ಲಿ ಝಾರ್‌ನ ವಿರುದ್ಧ ಹೋರಾಡಲೆತ್ನಿಸಿ ವಿಫಲವಾದ ಕ್ರಾಂತಿಯ ಸಂದರ್ಭದಲ್ಲಿ ರೆಡ್‌ಗಾರ್ಡ್ಸ್ ಉದಯಿಸಿದರು. ಮತ್ತೆ ಇವರು 1917ರ ಮಾರ್ಚ್ ಕ್ರಾಂತಿಯ ಸಂದರ್ಭದಲ್ಲಿ ಸಶಕ್ತವಾಗಿ ಹೊರಹೊಮ್ಮಿದರು. ನಗರದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು ಇವರ ಹೊಣೆಯಾಗಿತ್ತು. ಕ್ರಾಂತಿ ಬಿಕ್ಕಟ್ಟನ್ನು ಎದುರಿಸಿದಾಗೆಲ್ಲಾ ಕಾಣಿಸಿಕೊಂಡ ಈ ದಳಗಳಲ್ಲಿ ಇದ್ದವರು ಶಿಸ್ತು, ತರಬೇತಿ ಇಲ್ಲದಿದ್ದರೂ ಕ್ರಾಂತಿಕಾರಿ ಉತ್ಸಾಹದಿಂದ ತುಂಬಿ ತುಳುಕುತ್ತಿದ್ದಂಥ ಕಾರ್ಖಾನೆ ಕಾರ್ಮಿಕರು.

ಕ್ರಾಂತಿಯ ಕೊನೆಯಭಾಗದಲ್ಲಿ ಉಳ್ಳವರ ಖಾಸಗಿ ಆಸ್ತಿಯನ್ನು ರಕ್ಷಿಸಲು ಮತ್ತು ಬೋಲ್ಶೆವಿಕರನ್ನು ವಿರೋಧಿಸಲು ಹುಟ್ಟಿಕೊಂಡ ಪಡೆಯೇ ವೈಟ್‌ಗಾರ್ಡ್ಸ್. ಟೆಖಿಂಟ್ಸಿ, ಡೆತ್‌ಬೆಟಾಲಿಯನ್, ಅಧಿಕಾರಿಗಳ ಒಕ್ಕೂಟ (ಯೂನಿಯನ್ ಆಫ್ ಆಫೀಸರ್ಸ್) ಇವೆಲ್ಲವೂ ಬೇರೆ ಬೇರೆ ಸಂದರ್ಭಗಳಲ್ಲಿ ಕ್ರಾಂತಿಯನ್ನು ವಿರೋಧಿಸಲೆಂದೇ ಹುಟ್ಟಿಕೊಂಡವು.

* * *

ಈ ಪುಸ್ತಕದಲ್ಲಿ ತಿಂಗಳುಗಳ ಎಣಿಕೆಯನ್ನು ಜಾಗತಿಕವಾಗಿ ಒಪ್ಪಿತವಾದ ಕ್ಯಾಲೆಂಡರ್‌ಗೆ ಅನುಗುಣವಾಗಿ ಮಾಡಲಾಗಿದೆ. ಆಗ ರಷ್ಯಾದಲ್ಲಿ ಉಪಯೋಗಿಸುತ್ತಿದ್ದ ಕ್ಯಾಲೆಂಡರ್ ಸುಮಾರು 13ದಿನ ಹಿಂದಕ್ಕಿತ್ತು.

ಈ ಪುಸ್ತಕದಲ್ಲಿ ಆಕರ ಸಾಮಗ್ರಿಯಾಗಿ ಉಪಯೋಗಿಸಿರುವುದು ಬಹುತೇಕವಾಗಿ ವಿವಿಧ ವಿಶ್ವಾಸಾರ್ಹ ಪತ್ರಿಕೆಗಳು. ಇದಲ್ಲದೆ ಆ ಸಂದರ್ಭದಲ್ಲಿ ಬಿಡುಗಡೆಯಾದ ಎಲ್ಲ ಸರ್ಕಾರಿ ಆಜ್ಞೆಗಳು, ಅಧಿಸೂಚನೆಗಳನ್ನು ಸಂಗ್ರಹಿಸಿ ಬಳಸಿಕೊಂಡಿದ್ದೇನೆ.

## ಅಧ್ಯಾಯ – 1

# ಹಿನ್ನೆಲೆ

1917ರ ಮಾರ್ಚ್‌ನಲ್ಲಿ ಝಾರ್ ಚಕ್ರವರ್ತಿಯ ವಿರುದ್ಧದ ಕ್ರಾಂತಿ ಮುಗಿದಿತ್ತು. ಅದೇ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ನಾನು ಪೆತ್ರೋಗ್ರಾಡ್ ನಗರದಲ್ಲಿದ್ದೆ. ಆಗ ಪ್ರವಾಸಿಗರಾದ ವಿದೇಶಿ ಪ್ರೊಫೆಸರ್ ಒಬ್ಬರು ನನ್ನನ್ನು ಕಾಣಲು ಬಂದರು. ಕ್ರಾಂತಿ ನಿಧಾನವಾಗಿ ನಿಲುಗಡೆಗೆ ಬರುತ್ತಿದೆ ಎಂದು ಅವರು ವರ್ತಕರಿಂದಲೂ, ಬುದ್ಧಿಜೀವಿಗಳಿಂದಲೂ ಕೇಳಿದ್ದರು. ಹಾಗೆಂದು ಅವರು ಒಂದು ಲೇಖನವನ್ನೂ ಬರೆದರು. ಆಮೇಲೆ ಅವರು ಕಾರ್ಖಾನೆಗಳಿದ್ದ, ರೈತ ಸಮುದಾಯವಿದ್ದ ಊರುಗಳಿಗೆ ಭೇಟಿ ಕೊಟ್ಟರು. ಅಲ್ಲಿ ನೋಡಿದರೆ ಕ್ರಾಂತಿ ವೇಗವಾಗಿ ಮುಂದೆ ಮುಂದೆ ಹೋಗುತ್ತಿದ್ದಂತೆ ಅವರಿಗೆ ತೋರಿತು. ಎಲ್ಲೆಡೆ ದುಡಿಯುವ ಜನ "ಎಲ್ಲ ಜಮೀನು ರೈತರಿಗೆ, ಎಲ್ಲಾ ಕಾರ್ಖಾನೆಗಳು ಕಾರ್ಮಿಕರಿಗೆ" ಎಂದು ಮಾತನಾಡಿಕೊಳ್ಳುತ್ತಿದ್ದರು. ಪ್ರೊಫೆಸರರೇನಾದರೂ ಸಮರಭೂಮಿಗೆ ಭೇಟಿ ಕೊಟ್ಟಿದ್ದರೆ ಯುದ್ಧದಿಂದ ಬೇಸತ್ತ ಸೈನಿಕರು ಶಾಂತಿಗಾಗಿ ಪರಿತಪಿಸುವುದನ್ನೂ ನೋಡಬಹುದಿತ್ತು. ಪ್ರೊಫೆಸರರಿಗೆ ಅಚ್ಚರಿ ಎನಿಸಿತು. ಆದರೆ ಎರಡು ಅಭಿಪ್ರಾಯಗಳೂ ಸತ್ಯವೇ ಆಗಿದ್ದವು. ಆಸ್ತಿವಂತ ವರ್ಗಗಳೆಲ್ಲಾ ಸಂಪ್ರದಾಯವಾದಿಗಳೂ, ಯಥಾಸ್ಥಿತಿವಾದಿಗಳೂ ಆಗುತ್ತಾ ಹೋಗುತ್ತಿದ್ದರೆ, ಜನಸಾಮಾನ್ಯರು ಹೆಚ್ಚು ಹೆಚ್ಚು ತೀವ್ರಗಾಮಿಗಳಾಗುತ್ತಿದ್ದರು.

ವರ್ತಕರು ಮತ್ತು ಬುದ್ಧಿಜೀವಿಗಳಲ್ಲಿ ಕ್ರಾಂತಿ ವಿಪರೀತ ಮುಂದಕ್ಕೆ ಹೋಗಿದೆ, ದೀರ್ಘವಾಗಿದೆ. ಇನ್ನು ಸಾಕು, ಎಲ್ಲಾ ನಿಯಂತ್ರಣಕ್ಕೆ ಬರಬೇಕು ಎಂಬ ಭಾವನೆ ಇತ್ತು. ಕೆರೆನ್‌ಸ್ಕಿ ನೇತೃತ್ವದ ಹಂಗಾಮಿ ಸರ್ಕಾರವನ್ನು ಬೆಂಬಲಿಸುತ್ತಿದ್ದ ರಾಜಪರರಾಗಿದ್ದ ಮಂದಗಾಮಿ ಸಮಾಜವಾದಿಗಳು ಎಂದರೆ ಮೆನ್ಶೆವಿಕರ ಹಾಗೂ ಸೋಷಲಿಸ್ಟ್ ರೆವಲ್ಯೂಶನರಿ ಪಕ್ಷಗಳ ನಿಲುವು ಸಹ ಹೀಗೇ ಇತ್ತು. ಕ್ರಾಂತಿ ಎಂಬ ನಾಟಕದಲ್ಲಿ ಎರಡು ಅಂಶಗಳಿರುತ್ತವೆ. ಮೊದಲನೆಯದರಲ್ಲಿ ಹಳೆಯದನ್ನು ನಾಶಮಾಡಲಾಗುತ್ತದೆ. ಎರಡನೆಯದರಲ್ಲಿ ಹೊಸತನ್ನು ಕಟ್ಟಬೇಕಾಗುತ್ತದೆ. ಇಲ್ಲಾದರೋ ಮೊದಲನೆಯದೇ ಅತಿ ಉದ್ದವಾಗಿದೆ ಎಂದು ಅವರು ತಮ್ಮ ಪತ್ರಿಕೆಯಲ್ಲಿ ಬರೆದುಕೊಂಡಿದ್ದರು.

ಆದರೆ ಕಾರ್ಮಿಕರು, ರೈತರು ಹಾಗೂ ಸೈನಿಕರಲ್ಲಿ ಮೊದಲನೆಯ ಅಂಶ ಇನ್ನೂ ಮುಗಿದಿಲ್ಲ ಎಂಬ ಭಾವನೆಯೇ ಬಲವಾಗಿ ಬೇರೂರಿತ್ತು. ರಣಾಂಗಣದಲ್ಲಿ ಸೈನ್ಯದ ಅಧಿಕಾರಿಗಳು ಸಾಮಾನ್ಯ ಸೈನಿಕರನ್ನು ಇನ್ನೂ ಮನುಷ್ಯರಂತೆ ನಡೆಸಿಕೊಳ್ಳುತ್ತಿರಲಿಲ್ಲ. ಇತ್ತ ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಣೆಗೆ ಸಂಬಂಧಿಸಿದಂತಹ ಸರ್ಕಾರಿ ಆಜ್ಞೆಗಳನ್ನು ಜಾರಿಗೆ

ತರಲೆತ್ನಿಸಿದ ರೈತರ ಸಮಿತಿಗಳನ್ನೇ ಜೈಲಿಗೆ ಹಾಕಲಾಗುತ್ತಿತ್ತು. ಇನ್ನು ಕಾರ್ಮಿಕರಾದರೋ ಕಾರ್ಖಾನೆಗಳಲ್ಲಿ ವಿಪರೀತ ದಮನಕಾರಿ ಕ್ರಮಗಳಿಗೆ ಬಲಿಯಾಗುತ್ತಿದ್ದರು. ರಾಜಕೀಯ ಕಾರಣಗಳಿಗಾಗಿ ಗಡೀಪಾರಾಗಿದ್ದವರು ಹೊಸ ಸರ್ಕಾರದಡಿ ಸುರಕ್ಷಿತವಾಗಿರಬಹುದೆಂದು ವಾಪಸ್ ಬಂದರೆ ಅವರಿಗೆ ಅಸಹನೀಯ ಕಿರುಕುಳ ನೀಡಲಾಗುತ್ತಿತ್ತು. 1905ರ ಕ್ರಾಂತಿಯಲ್ಲಿ ಭಾಗವಹಿಸಿದವರಿಗೆ ಈಗ ಶಿಕ್ಷೆ ಆರಂಭವಾಯಿತು !

ಹೀಗೆ ಜನತೆಯಲ್ಲಿ ಕಾಣಿಸಿಕೊಂಡ ಎಲ್ಲ ರೀತಿಯ ಅಸಮಾಧಾನಗಳಿಗೆ ಮಂದಗಾಮಿ ಸಮಾಜವಾದಿಗಳು ನೀಡುತ್ತಿದ್ದದ್ದು ಒಂದೇ ಒಂದು ಉತ್ತರ: ಡಿಸೆಂಬರ್‌ನಲ್ಲಿ ಸಂವಿಧಾನಾತ್ಮಕ ಶಾಸನಸಭೆ ಶುರುವಾಗಲಿದೆ, ಅಲ್ಲಿಯವರೆಗೂ ನೀವು ಕಾಯಬೇಕು. ಆದರೆ ಜನಸಾಮಾನ್ಯರಿಗೆ ಇದರಿಂದ ತೃಪ್ತಿಯಾಗುತ್ತಿರಲಿಲ್ಲ. ರಷ್ಯನ್ ಕ್ರಾಂತಿಗೆ ಕೆಲವೊಂದು ನಿರ್ದಿಷ್ಟ ಗುರಿಗಳಿದ್ದವು. ಅನೇಕ ಹುತಾತ್ಮರು ಮಾರ್ಚ್ ಕ್ರಾಂತಿಯಲ್ಲಿ ಅದಕ್ಕಾಗಿಯೇ ಜೀವತೆತ್ತಿದ್ದರು. ಸೈನಿಕರಿಗೆ ದೇಶಕ್ಕೆ ಶಾಂತಿ ಬೇಕು. ರೈತರಿಗೆ ಭೂಮಿ ಬೇಕು. ಕಾರ್ಖಾನೆಗಳ ಮೇಲೆ ಕಾರ್ಮಿಕರ ನಿಯಂತ್ರಣ ಬರಬೇಕು. ಇವೇ ಆ ಆಶೋತ್ತರಗಳು. ಸಂವಿಧಾನಾತ್ಮಕ ಸಭೆಯನ್ನು ಮತ್ತೆ ಮತ್ತೆ ಮುಂದೂಡಲಾಗಿದೆ. ಪ್ರಾಯಶಃ ಅದರ ಉದ್ದೇಶವೇ ಮೊದಲ ಜನತೆ ತಣ್ಣಗಾಗಲಿ ಎಂದಿರಬೇಕು. ಅವರ ಬೇಡಿಕೆಗಳು ಬದಲಾಗಲಿ ಎಂದಿರಬೇಕು. ಕ್ರಾಂತಿ ಜರುಗಿ ಎಂಟು ತಿಂಗಳು ಉರುಳಿವೆ. ಆದರೆ ಕಣ್ಣಿಗೆ ಕಾಣುವಂತಹ ಯಾವ ಪ್ರತಿಫಲವೂ ದಕ್ಕಿಲ್ಲ.

ಅದೇನೇ ಇರಲಿ ಜನತೆ ಪ್ರಶ್ನೆಗಳನ್ನು ತಾವೇ ಇತ್ಯರ್ಥಪಡಿಸಲು ಶುರು ಮಾಡಿಕೊಂಡರು. ಸೈನಿಕರು ಯುದ್ಧಭೂಮಿಯನ್ನು ಬಿಟ್ಟು ಹೊರಡಲಾರಂಭಿಸಿದರು. ರೈತರು ಶ್ರೀಮಂತ ಜಮೀನ್ದಾರರ ಬಂಗ್ಲೆಗಳನ್ನು ಸುಟ್ಟುಹಾಕಿದರು. ಕಾರ್ಮಿಕರ ಮುಷ್ಕರಗಳು ಉಗ್ರವಾಗುತ್ತಾ ಹೋದವು. ಆದರೆ ನಿರೀಕ್ಷೆಯಂತೆಯೇ ಅಧಿಕಾರಿಗಳು, ಭೂಮಾಲೀಕರು, ಬಂಡವಾಳಗಾರರು ಯಾವುದೇ ಜನತಾಂತ್ರಿಕ ಒಪ್ಪಂದಕ್ಕೆ ಬರಲಿಲ್ಲ.

ಇತ್ತ ಹಂಗಾಮಿ ಸರ್ಕಾರವು ಒಂದು ಕಡೆ ಸ್ವಲ್ಪವೂ ಪರಿಣಾಮಕಾರಿಯಲ್ಲದ ಸುಧಾರಣೆಗಳನ್ನು ಜಾರಿಮಾಡಿದರೆ ಇನ್ನೊಂದು ಕಡೆ ತೀವ್ರ ದಮನಕಾರಿ ಕ್ರಮಗಳಿಗೆ ಮೊರೆಹೊಕ್ಕಿತು. ಕಾರ್ಮಿಕರ ಸಭೆಗಳ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಯಿತು. ಕ್ರಾಂತಿಕಾರಿ ಪತ್ರಿಕೆಗಳನ್ನೇ ಮುಚ್ಚಲಾಯಿತು. ಸೈನ್ಯದಲ್ಲಿ ಸರ್ಕಾರಕ್ಕೆ ವಿರುದ್ಧವಾಗಿ ಪ್ರಚಾರ ಮಾಡಿದವರನ್ನು ಬಂಧಿಸಲಾಯಿತು. ರೆಡ್‌ಗಾರ್ಡ್ ಸಂಘಟನೆಯನ್ನು ವಿಸರ್ಜಿಸುವ ಯತ್ನಗಳು ನಡೆದವು. ಕ್ರಾಂತಿಕಾರಿ ಪ್ರಚಾರಕರಿಗೆ ಮರಣದಂಡನೆ ವಿಧಿಸಲಾಯಿತು.

ಸರ್ಕಾರದಲ್ಲಿದ್ದ ಮಂದಗಾಮಿ ಸಮಾಜವಾದಿ ಸಚಿವರು ಆಸ್ತಿವಂತ ವರ್ಗಗಳೊಂದಿಗೆ ಸಹಕಾರವನ್ನು ಬಯಸುತ್ತಾ ಈ ಕ್ರಮಗಳನ್ನು ಸಮರ್ಥಿಸಿಕೊಂಡರು. 1917ರಲ್ಲಿ ಬಿಕ್ಕಟ್ಟು ಉಲ್ಬಣಿಸುತ್ತಿದ್ದಾಗ ಕೆರೆನ್‌ಸ್ಕಿ ಮತ್ತು ಮಂದಗಾಮಿ ಸಮಾಜವಾದಿಗಳು ಆಸ್ತಿವಂತ ವರ್ಗಗಳೊಂದಿಗೆ ಮೈತ್ರಿಮಾಡಿಕೊಂಡು ಸರ್ಕಾರ ರಚಿಸಿಬಿಟ್ಟರು. ಬೋಲ್ಶೆವಿಕರು ಮಾತ್ರ ಶಾಂತಿ, ಭೂಮಿ, ಕೈಗಾರಿಕೆಗಳ ಮೇಲೆ ಕಾರ್ಮಿಕರ ನಿಯಂತ್ರಣ ಎಂಬುದಕ್ಕೆ ಬದ್ಧವಾಗಿ ಉಳಿದರು. ಫಲಿತಾಂಶ ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ಜನಬೆಂಬಲ ಕಳೆದುಕೊಂಡರು. ಜನಸಾಮಾನ್ಯರು ಬೋಲ್ಶೆವಿಕರನ್ನು ಹಿಂಬಾಲಿಸಿದರು.

ಅಕ್ಟೋಬರ್ ತಿಂಗಳ ಮಧ್ಯಭಾಗದಲ್ಲಿ 'ಕಾರ್ಮಿಕ ಪಥ' ಎಂಬ ಪತ್ರಿಕೆ 'ಸಮಾಜವಾದಿ

ಮಂತ್ರಿಗಳು' ಎಂಬ ಲೇಖನವೊಂದನ್ನು ಪ್ರಕಟಿಸಿ ಅವರ ಎಲ್ಲ ಪಾತಕಗಳನ್ನೂ ಪಟ್ಟಿಮಾಡಿತು. ಸೈನಿಕ ಕ್ರಾಂತಿಕಾರಿಗಳಿಗೆ ಮರಣ ದಂಡನೆ ವಿಧಿಸಿದವರು, ಕಾರ್ಮಿಕರನ್ನು ನಿಃಶಸ್ತ್ರಗೊಳಿಸಿದವರು, ರೈತಕಾರ್ಮಿಕರ ವೃತ್ತಪತ್ರಿಕೆಗಳನ್ನು ನಿಷೇಧಿಸಿದವರು, ಪ್ರತಿಗಾಮಿಗಳೊಂದಿಗೆ ರಾಜಿಮಾಡಿಕೊಂಡವರು, ಕಾರ್ಮಿಕರನ್ನು ತುಳಿಯಲು ಪೊಲೀಸು ಮತ್ತು ಸೈನ್ಯವನ್ನು ಉಪಯೋಗಿಸಿದವರು ಇಂಥ ಜನರೇ ಮಂತ್ರಿಮಂಡಲದಲ್ಲಿ ಸಮಾಜವಾದಿ ಸಚಿವರಾಗಿದ್ದರು. ಹೀಗಾಗಿ ಇವರ ಬಗ್ಗೆ ಜನತೆಗೆ ತೀವ್ರ ಆಕ್ರೋಶವಿತ್ತು. ಅದರಲ್ಲೂ ಅವರ ನಾಯಕನಾಗಿದ್ದ ಕೆರೆನ್‌ಸ್ಕಿಯ ಬಗ್ಗೆ ಘೋರ ತಿರಸ್ಕಾರವಿತ್ತು.

ನೌಕಾಪಡೆಯ ಸೈನಿಕ ಅಧಿವೇಶನವೊಂದರಲ್ಲಂತೂ ಬಂಡವಾಳಗಾರರ ಏಜೆಂಟನಾಗಿ ದ್ರೋಹ ಬಗೆದಿರುವ ನಾಚಿಕೆಗೆಟ್ಟ ಸಮಾಜವಾದಿ ಕೆರೆನ್‌ಸ್ಕಿಯನ್ನು ಹಂಗಾಮಿ ಸರ್ಕಾರದಿಂದ ಕಿತ್ತುಹಾಕಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಗಿತ್ತು. ಈ ಎಲ್ಲಾ ಅತೃಪ್ತಿ, ಪ್ರತಿರೋಧಗಳಿಂದಾಗಿ ಬೋಲ್ಶೆವಿಕರು ಪ್ರವರ್ಧಮಾನಕ್ಕೆ ಬಂದುಬಿಟ್ಟರು.

1917ರ ಮಾರ್ಚ್‌ನಲ್ಲಿ ಪೀಟರ್ಸ್‌ಬರ್ಗ್‌ನಲ್ಲಿದ್ದ ಟೌರೈಡ್ ಅರಮನೆಯನ್ನು ಕಾರ್ಮಿಕರು ಹಾಗೂ ರೈತರು ಪ್ರವಾಹದಂತೆ ಬಂದು ಸುತ್ತಿಕೊಂಡಿದ್ದರು. ಆ ಒತ್ತಾಯದಡಿಯಲ್ಲಿ ಡ್ಯೂಮಾ (ರಷ್ಯನ್ ಶಾಸನ ಸಭೆ) ಅಧಿಕಾರ ವಹಿಸಿಕೊಳ್ಳಬೇಕಾಯಿತು. ಅಲ್ಲಿಂದಾಚೆಗೆ ಕ್ರಾಂತಿಯ ಗತಿಯನ್ನು ಪ್ರತಿ ಹಂತದಲ್ಲಿಯೂ ನಿರ್ಧರಿಸಿದವರು ಜನಸಾಮಾನ್ಯರೇ. "ಯುದ್ಧದಲ್ಲಿ ನಮ್ಮ ನೆಲ ಬಿಟ್ಟುಕೊಡುವುದಿಲ್ಲ, ರಾಜಿ ಕಪ್ಪ ಸಲ್ಲಿಸುವುದಿಲ್ಲ, ರಾಷ್ಟ್ರೀಯತೆಗಳಿಗೆ ಸ್ವಯಂ ನಿರ್ಧಾರದ ಹಕ್ಕಿರಬೇಕು" ಎಂಬ ಶಾಂತಿಯ ಷರತ್ತುಗಳು ಕೂಡ ಅವರ ಸೋವಿಯತ್ ಘೋಷಿಸಿದಂಥವೇ. ಜುಲೈನಲ್ಲಿ ಮತ್ತೆ ಅರಮನೆಗೆ ಮುತ್ತಿಗೆ ಹಾಕಿ ಸೋವಿಯತ್‌ಗಳೇ ಸರ್ಕಾರ ನಡೆಸಬೇಕೆಂದು ಒತ್ತಾಯ ನಡೆಸಿದ್ದು ಸಹ ಕಾರ್ಮಿಕರ ಬಂಡಾಯವೇ.

ಆ ಸಂದರ್ಭದಲ್ಲಿ ಬೋಲ್ಶೆವಿಕರು ಹೋರಾಟದ ನೇತೃತ್ವ ವಹಿಸಿಕೊಂಡರು. ಬಂಡಾಯ ವಿಫಲವಾಯಿತು. ಜನಾಭಿಪ್ರಾಯ ಅವರ ವಿರುದ್ಧವಾಗಿತ್ತು. ಸರ್ಕಾರ ದಮನಕಾರಿ ತಂತ್ರಗಳನ್ನು ಹರಿಬಿಟ್ಟಿತು. ಲೆನಿನ್ ಸೇರಿದಂತೆ ಅನೇಕ ನಾಯಕರು ಭೂಗತರಾದರು. ಬೋಲ್ಶೆವಿಕರು ಜರ್ಮನರ ಏಜೆಂಟರೆಂಬ ಪ್ರಚಾರವನ್ನೂ ಆರಂಭಿಸಲಾಯಿತು.

ಆದರೆ ಅಂಥ ಎಲ್ಲ ಆಪಾದನೆಗಳು ಸುಳ್ಳೆಂಬುದು ಬೇಗ ಬಹಿರಂಗವಾಯಿತು. ಹಂಗಾಮಿ ಸರ್ಕಾರ ನಿರ್ವೀರ್ಯ, ಚಂಚಲ ಎಂದು ಅನಿಸುತ್ತಿತ್ತು. ಬೋಲ್ಶೆವಿಕರಾದರೋ "ಎಲ್ಲಾ ಅಧಿಕಾರ ಸೋವಿಯತ್‌ಗಳಿಗೆ" ಎಂಬ ಜನಪ್ರಿಯ ಘೋಷಣೆಯನ್ನು ಮುಂದುವರೆಸಿದರು. ಬಹುತೇಕ ಸೋವಿಯತ್‌ಗಳು ಅವರ ನಿಯಂತ್ರಣದಲ್ಲಿರಲಿಲ್ಲ ವಾದ್ದರಿಂದ ಅವರ ಬೇಡಿಕೆಯಲ್ಲಿ ಸ್ವಾರ್ಥವಿಲ್ಲ ಎಂಬುದು ಸ್ಪಷ್ಟವಾಗಿತ್ತು.

ಇನ್ನೂ ಮುಖ್ಯವಾದ ಅಂಶವೆಂದರೆ ಅವರು ಜನತೆಯ ಸಾಮಾನ್ಯ, ಸರಳ ಆಶೋತ್ತರಗಳನ್ನು ತೆಗೆದುಕೊಂಡು ಆಂದೋಲನದ ಕಾರ್ಯಕ್ರಮವನ್ನು ರೂಪಿಸಿಬಿಟ್ಟರು. ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ಬಂಡವಾಳಶಾಹಿ ವರ್ಗದೊಂದಿಗೆ ರಾಜಿ ಮಾಡಿಕೊಳ್ಳುತ್ತಿದ್ದಾಗ ಬೋಲ್ಶೆವಿಕರು ಜನತೆಯ ಹೃದಯವನ್ನು ಗೆದ್ದುಬಿಟ್ಟರು. ಸೆಪ್ಟೆಂಬರ್ ವೇಳೆಗಾಗಲೇ ಹವಾ ಬದಲಾಗಿತ್ತು. ಕಾರ್ಮಿಕರು, ಸೈನಿಕರು, ನಾವಿಕರುಗಳನ್ನು

ಬೋಲ್ಶೆವಿಕರು ಗೆದ್ದುಕೊಂಡು ಬಿಟ್ಟಿದ್ದರು. ಆ ತಿಂಗಳಲ್ಲಿ ನಡೆದ ಮಹಾನಗರಗಳ ಮುನಿಸಿಪಲ್ ಚುನಾವಣೆಗಳಲ್ಲಿ ಮೆನ್ಶೆವಿಕರು – ಸೋಷಲಿಸ್ಟ್ ರೆವಲ್ಯೂಶನರಿಗಳು ಶೇಕಡ 70ರಷ್ಟು ಸ್ಥಾನಗಳಿಂದ ಶೇಕಡ 18ಕ್ಕೆ ಕುಸಿದಿದ್ದರು.

ಆ ಸಮಯದಲ್ಲಿ ಸೋವಿಯತ್‌ಗಳ ಕೇಂದ್ರ ಸಮಿತಿ, ಸೇನಾಪಡೆಗಳ ಕೇಂದ್ರ ಸಮಿತಿ ಹಾಗೂ ಅಂಚೆ ತಂತಿ ಕಾರ್ಮಿಕರ ಮಹಾಸಂಘಗಳ ನಾಯಕತ್ವ ಇವೆಲ್ಲವೂ ಬೋಲ್ಶೆವಿಕರನ್ನು ವಿರೋಧಿಸುತ್ತಿದ್ದವು. ಇದರಿಂದಾಗಿ ಅನೇಕ ವೀಕ್ಷಕರು ಬೋಲ್ಶೆವಿಕರು ದುರ್ಬಲಗೊಳ್ಳುತ್ತಿದ್ದಾರೆಂಬ ಗೊಂದಲಕ್ಕೆ ತುತ್ತಾದರು. ವಾಸ್ತವ ಹಾಗಿರಲಿಲ್ಲ. ಅವೆಲ್ಲಾ ತುಂಬ ಹಿಂದೆ ಚುನಾಯಿತವಾಗಿದ್ದಂಥವು. ಈಗ ಪರಿಸ್ಥಿತಿ ವೇಗವಾಗಿ ಬದಲಾಗುತ್ತಿತ್ತು. ಎಲ್ಲಾ ಸ್ಥಳೀಯ ಸೋವಿಯತ್‌ಗಳಲ್ಲಿ ನಾಡಿನಾದ್ಯಂತ ಬೋಲ್ಶೆವಿಕರು ಬಹುಮತ ಗಳಿಸುತ್ತಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ರಾಜಕೀಯ ತಿಳಿವಳಿಕೆ ನಿಧಾನವಾಗಿ ಬೆಳಗುತ್ತಿದ್ದುದರಿಂದ ರೈತರು ಸ್ವಲ್ಪ ಜಡವಾಗಿದ್ದರು. ಆದರೆ ಅವರಲ್ಲೂ ಕ್ರಾಂತಿಕಾರಿಗಳ ಶಾಖೆ ಆರಂಭವಾಗಿತ್ತು.

ಇದೇ ಸಮಯದಲ್ಲಿ ಪ್ರತಿಗಾಮಿಗಳೂ ಸಕ್ರಿಯವಾಗುತ್ತಿದ್ದರು. ಆತ್ಮವಿಶ್ವಾಸ ಗಳಿಸಿಕೊಳ್ಳುತ್ತಿದ್ದರು. ಪ್ರಗತಿಶೀಲ ನಾಟಕಗಳ ಪ್ರದರ್ಶನಕ್ಕೆ ತಡೆಯೊಡ್ಡಲಾಗುತ್ತಿತ್ತು. ಕೆಲವೊಂದು ಪತ್ರಿಕೆಗಳು ದೇಶಕ್ಕೊಬ್ಬ ಸರ್ವಾಧಿಕಾರಿ ಬೇಕು ಎಂದು ಹುಯಿಲೆಬ್ಬಿಸಿದ್ದವು.

ಇದೇ ಸಂದರ್ಭದಲ್ಲಿ ರಷ್ಯಾದ ಅತಿದೊಡ್ಡ ಬಂಡವಾಳಗಾರನಾದ ಲಿಯಾಝನೋವ್ ಎಂಬುವನ ಜೊತೆ ಮಾತನಾಡುವ ಅವಕಾಶ ನನಗೆ ಸಿಕ್ಕಿತು. ಆತ "ಕ್ರಾಂತಿ ಎಂಬುದೊಂದು ರೋಗ. ವಿದೇಶಿ ಶಕ್ತಿಗಳು ಈಗ ನಮ್ಮ ದೇಶದಲ್ಲಿ ಮಧ್ಯಪ್ರವೇಶ ಮಾಡಬೇಕು. ಕಾಯಿಲೆ ಬಿದ್ದ ಮಗುವನ್ನು ಗುಣಪಡಿಸುವಂತೆ, ಚಿಕಿತ್ಸೆ ನೀಡಿ ನಮಗೆ ಮತ್ತೆ ನಡೆಯಲು ಹೇಳಿಕೊಡಬೇಕು. ಇದು ಮೇಲ್ನೋಟಕ್ಕೆ ಅನುಚಿತ ಎನಿಸಬಹುದು. ಆದರೆ ಬೇರೆ ರಾಷ್ಟ್ರಗಳು ತಮ್ಮ ದೇಶಕ್ಕೂ ಬೋಲ್ಶೆವಿಸಂ ಅಪಾಯಕಾರಿ, ಈ 'ಕಾರ್ಮಿಕ ವರ್ಗದ ಸರ್ವಾಧಿಕಾರ' 'ಜಾಗತಿಕ ಕ್ರಾಂತಿ' ಮುಂತಾದ ಪರಿಕಲ್ಪನೆಗಳು ಸಾಂಕ್ರಾಮಿಕ ಎಂಬುದನ್ನು ಅರಿಯಬೇಕು" ಎಂದ. ಇದಲ್ಲದೆ ದೇಶದ ಆಂತರಿಕ ವ್ಯವಸ್ಥೆ ಕುಸಿಯುತ್ತಿರುವುದು, ಯುದ್ಧದಲ್ಲಿ ಸೋಲು, ಆಹಾರದ ಅಭಾವ ಈ ಎಲ್ಲ ಕಾರಣಗಳಿಂದ ಕ್ರಾಂತಿ ವಿಫಲವಾಗೇ ಆಗುತ್ತದೆ ಎಂಬ ಆಶಾವಾದವೂ ಅವನಿಗಿತ್ತು. ವರ್ತಕರು, ಬಂಡವಾಳಗಾರರು ಎಂದಿಗೂ ಉತ್ಪಾದನೆಯ ಮೇಲೆ ನಿಯಂತ್ರಣದ ಹಕ್ಕನ್ನು ದುಡಿಯುವ ಜನತೆಗೆ ಕೊಡಲು ಒಪ್ಪುವುದಿಲ್ಲ ಎಂಬುದು ಸಹ ಅವನ ದೃಢವಾದ ವಿಶ್ವಾಸ. ಪೂರ್ಣ ಮಿಲಿಟರಿ ಸರ್ವಾಧಿಕಾರವನ್ನು ಹೇರಿ, ಅದರ ಪಾಶವೀಬಲದಿಂದ ಬೋಲ್ಶೆವಿಕರನ್ನು, ಸಂವಿಧಾನಾತ್ಮಕ ಶಾಸನಸಭೆಯನ್ನು ಬಗ್ಗುಬಡಿಯಬಹುದು ಎಂಬುದೇ ಆತನ ಪರಿಹಾರೋಪಾಯ.

ರಷ್ಯಾದ ಚಳಿಗಾಲ ತುಂಬ ಕ್ರೂರವಾದದ್ದು, ಆಹಾರವಿಲ್ಲದೆ, ಸಂಚಾರ ಸಂಪರ್ಕವಿಲ್ಲದೆ ಜನ ನರಳಾಡುತ್ತಿದ್ದರು. ಯುದ್ಧದಲ್ಲಿ ಯಾವುದೇ ಅವಶ್ಯಕ ವಸ್ತುವಿನ ಸರಬರಾಜುಗಳಿಲ್ಲದೆ ಸೈನ್ಯ ಸೋಲುತ್ತಿತ್ತು. ಜನತೆ ಬೂರ್ಶ್ವಾವರ್ಗ (ಬಂಡವಾಳಶಾಹಿಗಳು) ದ್ರೋಹ ಬಗೆಯುವ ಒಳಸಂಚಿನಲ್ಲಿ ತೊಡಗಿದ್ದಾರೆ ಎಂದು ಹತಾಶೆ ವ್ಯಕ್ತಪಡಿಸುತ್ತಿದ್ದರು.

ಹೀಗೆ ಒಂದು ಕಡೆ ಕ್ರಾಂತಿಕಾರಿ ಶಕ್ತಿಗಳು ಬೆಳೆಯುತ್ತಿದ್ದರೆ ಇನ್ನೊಂದೆಡೆ ಪ್ರತಿಗಾಮಿಗಳು ಸಜ್ಜಾಗುತ್ತಿದ್ದರು. ಆದ್ದರಿಂದ ಒಂದು ದೊಡ್ಡ ಅಂತರ್ಯುದ್ಧ ಅನಿವಾರ್ಯ ಎನಿಸುತ್ತಿತ್ತು.

ಅಮೆರಿಕನ್ನರಿಗೆ ಯಾವುದೇ ದೇಶದೊಳಗೆ ಇಂಥ ಪರಿಸ್ಥಿತಿ ಉದ್ಭವಿಸಬಹುದು, ವರ್ಗಸಮರ ಈ ತಾರಕಕ್ಕೆ ಏರಬಹುದು ಎನ್ನುವುದನ್ನು ನಂಬಲು ಕಷ್ಟವಾಗುತ್ತದೆ ಎಂಬುದು ನನಗೆ ಗೊತ್ತು. ಆದರೆ ಆಳುವ ವರ್ಗ ಕ್ರಾಂತಿಯನ್ನು ತಡೆಯಲು ಅತ್ಯಂತ ಹೀನವಾದ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿತ್ತು. ಸೋವಿಯತ್‌ಗಳಿಗೆ ಅಧಿಕಾರ ನೀಡುವ ಬದಲು ಯುದ್ಧದಲ್ಲಿ ಸೋಲುವುದೇ ವಾಸಿ ಎಂದ ಸೈನ್ಯಾಧಿಕಾರಿಗಳನ್ನು ನಾನು ಕಂಡಿದ್ದೇನೆ. ಕ್ಯಾಡೆಟ್ ಪಾರ್ಟಿಯ ನಾಯಕನೊಬ್ಬ ತಾವು ಬೇಕೆಂದೇ ದೇಶದ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದೇವೆಂದೂ, ಅದರಿಂದ ಕ್ರಾಂತಿಗೆ ಕೆಟ್ಟ ಹೆಸರು ತರಲಾಗುತ್ತದೆಂದು ನನ್ನ ಬಳಿ ಕೊಚ್ಚಿಕೊಂಡ. ಮಾಲೀಕರು ನೀರು ಬಿಟ್ಟು ಕಲ್ಲಿದ್ದಲಿನ ಗಣಿಗಳನ್ನು ಮುಳುಗಿಸಿದ್ದುಂಟು. ಇಂಜಿನಿಯರ್‌ಗಳು ಬಟ್ಟೆ ಕಾರ್ಖಾನೆಗಳಲ್ಲಿ ಬೇಕೆಂದೇ ಯಂತ್ರಗಳನ್ನು ನಾಶಮಾಡಿದ್ದರು. ರೈಲ್ವೆ ಎಂಜಿನ್‌ಗಳನ್ನು ಹಾಳುಗೆಡವುತ್ತಿದ್ದ ಅಧಿಕಾರಿಗಳನ್ನು ಕಾರ್ಮಿಕರೇ ಹಿಡಿದುಹಾಕಿದ್ದರು. ಆಸ್ತಿವಂತ ವರ್ಗಗಳು ಬೋಲ್ಶೆವಿಕರು ಅಧಿಕಾರಕ್ಕೆ ಬರುವ ಬದಲು ನಮ್ಮ ದೇಶವನ್ನು ಜರ್ಮನರೇ ಸ್ವಾಧೀನಪಡಿಸಿಕೊಳ್ಳಲಿ ಎನ್ನುತ್ತಿದ್ದರು. ಒಂದು ಟೀ ಪಾರ್ಟಿಯಲ್ಲಿದ್ದ ಹನ್ನೊಂದು ಜನರಲ್ಲಿ ಹತ್ತು ಮಂದಿ ಈ ಅಭಿಪ್ರಾಯಕ್ಕೆ ಮತ ಹಾಕಿದ್ದನ್ನು ನಾನೇ ಸ್ವತಃ ಕಂಡೆ !

ಎಲ್ಲೆಡೆ ಕಳ್ಳದಾಸ್ತಾನಿನ ದಂಧೆ ಆರಂಭವಾಯಿತು. ಕಾಳಸಂತೆಕೋರರು ಸಂಪೂರ್ಣವಾಗಿ ಪರಿಸ್ಥಿತಿಯ ದುರ್ಲಾಭವನ್ನು ಪಡೆದುಕೊಂಡರು. ಅವರ ಬೃಹತ್ ಲಾಭ ಅದ್ದೂರಿ ವಿನೋದಕೂಟಗಳಿಗೋ, ಸರ್ಕಾರಿ ಅಧಿಕಾರಗಳಿಗೆ ಲಂಚ ತಿನ್ನಿಸಲೋ ವೆಚ್ಚವಾಗುತ್ತಿತ್ತು. ಆಹಾರ, ಇಂಧನಗಳನ್ನು ಕಳ್ಳತನದಲ್ಲಿ ವಿದೇಶಗಳಿಗೆ ಕಳಿಸಿದ್ದೂ ಉಂಟು. ಮಹಾನಗರಗಳಲ್ಲಿ ಆಹಾರ, ಬಟ್ಟೆ ದೊರಕುತ್ತಿತ್ತು. ಆದರೆ ಅದೆಷ್ಟು ದುಬಾರಿಯಾಗಿತ್ತೆಂದರೆ ಅದು ಬಡವರ ಕೈಗೆ ಏನು ಮಾಡಿದರೂ ಎಟುಕುತ್ತಿರಲಿಲ್ಲ.

ಪುಟ್ಟ ಪಟ್ಟಣವೊಂದರಲ್ಲಿ ನನಗೆ ಒಂದು ವರ್ತಕರ ಕುಟುಂಬದ ಪರಿಚಯವಿತ್ತು. ಅಲ್ಲಿ ಮೂವರು ಗಂಡು ಮಕ್ಕಳಿದ್ದರು. ಒಬ್ಬ ಕಳ್ಳ ದಾಸ್ತನುಗಾರ ಇನ್ನೊಬ್ಬ ಚಿನ್ನದ ಕಳ್ಳ ಸಾಗಾಣಿಕೆದಾರ. ಮೂರನೆಯವನು ಬಂಡವಾಳಗಾರ. ಜನ ಹಸಿವಿನಿಂದ ಸಾಯುತ್ತಿದ್ದರೂ ಇವರಿಗೆ ಯಾವ ಭೋಗವಸ್ತುವಿಗೂ ಕೊರತೆಯಿರಲಿಲ್ಲ. ಇಂಥ ಜನ, ಹಸಿವು ಚಳಿಯಿಂದ ಸಾಯುತ್ತಾ ಸೈನಿಕರು ಯುದ್ಧದಲ್ಲಿ ಸೋತರೆ ದೊಡ್ಡ ದೇಶಪ್ರೇಮಿಗಳಂತೆ ಅವರನ್ನು ಶಪಿಸುತ್ತಿದ್ದರು. ಕಳ್ಳದಾಸ್ತಾನನ್ನು ಹಿಡಿದು ಬೋಲ್ಶೆವಿಕರು ಜನರಿಗೆ ಹಂಚಿದರೆ ಅವರನ್ನು 'ಢಕಾಯಿತರು' ಎಂದು ಬೈದುಕೊಳ್ಳುತ್ತಿದ್ದರು.

ಈ ಕೊಳೆತದ ಹಿಂದೆ ಈಗಲೂ ಝಾರ್ ಚಕ್ರವರ್ತಿಯ ಪರವಾದ ಕರಾಳ ಶಕ್ತಿಗಳೂ ಕೆಲಸ ಮಾಡುತ್ತಿದ್ದವು. ಪ್ರಧಾನಿ ಕೆರೆನ್‌ಸ್ಕಿ ಕಾಸು ಕೊಟ್ಟರೆ ಅವನ ಪರವಾಗಿಯೂ ಪಿತೂರಿ ಮಾಡುವ ಜನ ಇವರು. 'ಬ್ಲಾಕ್ ಹಂಡ್ರೆಡ್ಸ್' ಮುಂತಾದ ಅನೇಕ ಗುಪ್ತದಳಗಳು ಮತ್ತೆ ಪ್ರತಿಗಾಮಿ ಆಳ್ವಿಕೆಯನ್ನು ಸ್ಥಾಪಿಸಲು ರಹಸ್ಯವಾಗಿ ದುಡಿಯುತ್ತಿದ್ದವು.

ಈ ಎಲ್ಲಾ ದೈತ್ಯ ಭ್ರಷ್ಟಾಚಾರ, ಸುಳ್ಳುಗಳ ನಡುವೆ ಬೋಲ್ಶೆವಿಕರ ಧ್ವನಿ ಮಾತ್ರ ಗಟ್ಟಿಯಾಗಿ ಮೊಳಗುತ್ತಿತ್ತು. "ಸೋವಿಯತ್‌ಗಳಿಗೆ ಎಲ್ಲ ಅಧಿಕಾರ ನೀಡಿ ! ಮಿಲಿಯಾಂತರ ರೈತ-ಕಾರ್ಮಿಕರ-ಸೈನಿಕರ ಪ್ರತಿನಿಧಿಗಳಿಗೆ ಪೂರ್ಣ ಅಧಿಕಾರ ಸಿಗಬೇಕು ! ಎಲ್ಲರಿಗೂ

ಅನ್ನ, ಎಲ್ಲರಿಗೂ ಭೂಮಿ! ಅರ್ಥಹೀನ ಯುದ್ಧವನ್ನು ನಿಲ್ಲಿಸಿ, ದ್ರೋಹ, ಕಾಳಸಂತೆಗೆ ಕೊನೆ ಹಾಕಿ, ಕ್ರಾಂತಿ ಅಪಾಯದಲ್ಲಿದೆ!"

ಮಾರ್ಚ್‌ನಲ್ಲಿ ಆರಂಭವಾಗಿದ್ದ ಬಂಡವಾಳಶಾಹಿಗಳು ಮತ್ತು ಕಾರ್ಮಿಕರ ಮಧ್ಯದ ಸೆಣೆಸಾಟ, ಸರ್ಕಾರ ಮತ್ತು ಸೋವಿಯತ್‌ಗಳ ಮಧ್ಯದ ಸಂಘರ್ಷ ಈಗ ಕೊನೆಯ ಹಂತವನ್ನು ತಲುಪಿತ್ತು. ಮಧ್ಯಯುಗದ ಕತ್ತಲಿನಿಂದ ಇಪ್ಪತ್ತನೆಯ ಶತಮಾನಕ್ಕೆ ಒಂದೇಬಾರಿಗೆ ಜಿಗಿದಿದ್ದ ರಷ್ಯಾ, ಇದೀಗ ಒಂದುಕಡೆ ಕೇವಲ ರಾಜ್ಯಾಧಿಕಾರದ ಹಸ್ತಾಂತರ ಸಾಕೆಂಬ ಕ್ರಾಂತಿಯ ಪರಿಕಲ್ಪನೆ ಹಾಗೂ ಇನ್ನೊಂದು ಕಡೆ ಸಮಾಜ ಪೂರ್ತಿ ಬದಲಾಗಬೇಕೆಂಬ ಪರಿಕಲ್ಪನೆ ಇವೆರಡರ ನಡುವಣ ಜೀವನ್ಮರಣದ ಹೋರಾಟವೊಂದನ್ನು ಜಗತ್ತಿಗೆ ಪರಿಚಯಿಸಿತು.

ಇಷ್ಟೊಂದು ಉಪವಾಸ, ಭ್ರಮನಿರಸನಗಳ ನಡುವೆಯೂ ಕ್ರಾಂತಿ ಅದೆಂಥ ಜೀವಚೈತನ್ಯವನ್ನು ಪ್ರದರ್ಶಿಸಿತ್ತು! ಬೂರ್ಶ್ವಾ ವರ್ಗಕ್ಕೆ ತನ್ನ ನಿಜವಾದ ರಷ್ಯಾದ ಪರಿಚಯವಿರಲಿಲ್ಲ. ಕ್ರಾಂತಿ ಎಂಬ 'ವ್ಯಾಧಿ' ಇದೀಗ ಸಮಾರೋಪದತ್ತ ಸಾಗುತ್ತಿತ್ತು.

ನವೆಂಬರ್ ತಿಂಗಳಿಗೆ ಮೊದಲಿನ ರಷ್ಯಾ ಇನ್ನೊಂದು ಯುಗಕ್ಕೆ ಸೇರಿತ್ತೇನೋ ಎಂಬ ಭಾವನೆ ಬರುತ್ತದೆ. ಅದು ಅಷ್ಟು ಸಂಪ್ರದಾಯನಿಷ್ಠವಾಗಿತ್ತು. ಆಮೇಲೆ ಬದುಕು ಅದೆಷ್ಟು ಹೊಸದಾಯಿತು, ವೇಗ ಪಡೆದುಕೊಂಡಿತು. ರಷ್ಯನ್ ರಾಜಕೀಯವು ಪ್ರಗತಿಯತ್ತ ಎಡಕ್ಕೆ ಹೊರಳಿಕೊಂಡಿತು. ಕ್ಯಾಡೆಟ್ ಪಾರ್ಟಿ, ಕೆರೆನ್‌ಸ್ಕಿ ಎಲ್ಲರೂ ಜನವಿರೋಧಿಗಳಾದರು. ಮಧ್ಯಮಮಾರ್ಗಿ ಸಮಾಜವಾದಿಗಳು ಜನಬೆಂಬಲ ಕಳೆದುಕೊಂಡರು.

ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳು ರಷ್ಯಾದಲ್ಲಿ ಅತ್ಯಂತ ದುರ್ಭರ ಕಾಲ. ಹಗಲು ಕಿರಿದಾಗುತ್ತದೆ. ಮಳೆ ಎಡೆಬಿಡದೆ ಸುರಿಯುತ್ತದೆ. ಎಲ್ಲೆಡೆ ಕೆಸರು, ಕೊರೆಯುವ ಹಿಮ, ಗಾಳಿ, ಸುರಿಯುವ ಮಂಜು, ಕೆಟ್ಟ ಚಳಿ, ರಾತ್ರಿ ವಿದ್ಯುತ್ ಇಲ್ಲದೆ ಮತ್ತು ಜರ್ಮನ್ ಬಾಂಬರ್ ವಿಮಾನಗಳ ಭಯದಿಂದ ರಸ್ತೆ ದೀಪಗಳಿಲ್ಲ. ಎಲ್ಲೆಡೆ ಕಳ್ಳತನದ ಭಯ. ಹಂಗಾಮಿ ಸರ್ಕಾರದ ಆಡಳಿತ ಹೀಗಿತ್ತು.

ಪ್ರತಿವಾರ ಕಳೆದಂತೆ ಆಹಾರದ ಕೊರತೆ ಹೆಚ್ಚಾಯಿತು. ಬ್ರೆಡ್ ರೇಷನ್ ಅರ್ಧಕ್ಕಿಳಿಯಿತು, ಕಾಲುಭಾಗಕ್ಕಿಳಿಯಿತು. ಕಡೆಗೊಂದು ವಾರ ಬ್ರೆಡ್ ಇಲ್ಲದೆಯೇ ಕಳೆಯಿತು. ಸಕ್ಕರೆ ಅಪರೂಪವಾದರೆ, ಚಾಕೊಲೆಟ್‌ನ ಬೆಲೆ ಆಕಾಶಕ್ಕೇರಿತು. ನಗರದ ಶಿಶುಗಳ ಸಂಖ್ಯೆಯಲ್ಲಿ ಅರ್ಧಭಾಗಕ್ಕೆ ಸಾಕಾಗುವಷ್ಟು ಮಾತ್ರ ಹಾಲು ದೊರಕುತ್ತಿತ್ತು. ಹಣ್ಣು ಸಿಗಬೇಕಾದ ಋತುವಿನಲ್ಲಿ ಬೆಲೆ ಏರಿಕೆ ಹೇಗಿತ್ತೆಂದರೆ ಸೇಬು, ಪೀಚ್ ಹಣ್ಣುಗಳನ್ನು ಯಾರೂ ಮುಟ್ಟುವಂತಿರಲಿಲ್ಲ.

ಹಾಲು, ಬ್ರೆಡ್, ಸಕ್ಕರೆ ಎಲ್ಲಕ್ಕೂ ಜನ ಕ್ಯೂನಲ್ಲಿ ನಿಲ್ಲಬೇಕಿತ್ತು. ಚಳಿಯಲ್ಲೂ ಮಳೆಯಲ್ಲೂ ಹೆಂಗಸರು ಮಕ್ಕಳನ್ನೆತ್ತಿಕೊಂಡು ನಿಂತಿರುತ್ತಿದ್ದರು. ಝಾರ್‌ನ ಆಳ್ವಿಕೆಯ ಕಾಲದಿಂದಲೂ ಇದು ಅವರಿಗೆ ಅಭ್ಯಾಸವಾಗಿತ್ತು. ಬೆಚ್ಚಗಿನ ಬಟ್ಟೆಗಳೂ ಇಲ್ಲದ ಜನ ಹಿಮಕಟ್ಟಿ ಬಿಳುಪಾಗಿದ್ದ ಪೆತ್ರೋಗ್ರಾಡಿನ ರಸ್ತೆಗಳಲ್ಲಿ ಇಡೀ ದಿನ ರಷ್ಯಾದ ಚಳಿಯನ್ನು ಎದುರಿಸಿ ನಿಂತಿರುತ್ತಿದ್ದುದನ್ನು ಊಹಿಸಿಕೊಳ್ಳಿ.

ಇನ್ನೊಂದು ಕಡೆ ಬದುಕು ಮಾಮೂಲಾಗಿದೆಯೇನೋ ಎನ್ನುವಂತೆ ಸಭಾಂಗಣಗಳಲ್ಲಿ ಕುಣಿತ, ನಾಟಕ, ಹಾಡು ಎಲ್ಲಾ ನಡೆಯುತ್ತಲೇ ಇತ್ತು. ಚಿತ್ರಶಾಲೆಗಳಲ್ಲಿ ಪ್ರದರ್ಶನಗಳು

ವಾರಾಂತ್ಯದಲ್ಲಿ ನಡೆಯುತ್ತಿದ್ದವು. ಕಲೆ, ಸಾಹಿತ್ಯ, ತತ್ತ್ವಶಾಸ್ತ್ರದ ಬಗ್ಗೆ ಭಾಷಣಗಳನ್ನು ಬಿಗಿಯುವವರು ಬಿಗಿಯುತ್ತಲೇ ಇದ್ದರು. ಅಧ್ಯಾತ್ಮ ಮಾತನಾಡುವವರಿಗಂತೂ ಅದು ಹೇಳಿ ಮಾಡಿಸಿದ ಕಾಲವಾಗಿತ್ತು. ಅನೇಕ ರೀತಿಯ ಧರ್ಮ ಪ್ರಚಾರವೂ ಅವ್ಯಾಹತವಾಗಿ ನಡೆದಿತ್ತು.

ಒಟ್ಟಿನಲ್ಲಿ ಇಂಥ ಸಂದರ್ಭಗಳಲ್ಲಿ ಎಲ್ಲೆಡೆ ನಡೆಯುವ ಹಾಗೆ ಅಲ್ಲಿಯೂ ಕ್ಷುದ್ರ, ಸಾಂಪ್ರದಾಯಿಕ ಜೀವನಶೈಲಿ ಕ್ರಾಂತಿಯನ್ನು ಗಣನೆಗೆ ತೆಗೆದುಕೊಳ್ಳದೇ ನಡೆದುಕೊಂಡು ಹೋಗುತ್ತಿತ್ತು. ಚಿತ್ರಕಾರರು ಕ್ರಾಂತಿಯನ್ನು ಬಿಟ್ಟು ಉಳಿದ ಎಲ್ಲಾ ವಿಷಯಗಳ ಬಗ್ಗೆಯೂ ಚಿತ್ರಿಸುತ್ತಿದ್ದರು. ಶ್ರೀಮಂತ ಹೆಂಗಸರು, ಪುರುಷರು ಅತ್ಯುತ್ತಮ ಪೋಷಾಕನ್ನು ಧರಿಸಿ, ಬೆಳ್ಳಿ ಬಂಗಾರದ ನಶ್ಯದ ಡಬ್ಬಿ ಹಿಡಿದು ಝಾರ್ ಚಕ್ರವರ್ತಿಯಾದರೂ ಬರಲಿ, ಜರ್ಮನರಾದರೂ ಬರಲಿ ಒಟ್ಟಿನಲ್ಲಿ ಮನೆಗೆಲಸಕ್ಕೆ ಚಾಕರರು ಸಿಗದಂತಾಗಬಾರದು ಎಂದು ಹರಟೆ ಹೊಡೆಯುತ್ತಿದ್ದರು.

ಇಡಿಯ ರಷ್ಯಾ ಹೊಸ ಜಗತ್ತೊಂದನ್ನು ಗರ್ಭದಲ್ಲಿ ಹೊತ್ತು ಪ್ರಸವ ವೇದನೆಯನ್ನು ಅನುಭವಿಸುತ್ತಿರುವಂತಿತ್ತು. ನೌಕರ ಚಾಕರರನ್ನು ಇನ್ನು ಮುಂದೆ ಪ್ರಾಣಿಗಳಂತೆ ನಡೆಸಿಕೊಳ್ಳುವುದು ಸಾಧ್ಯವಿರಲಿಲ್ಲ. ಪ್ರತಿಯೊಬ್ಬ ದುಡಿಯುವ ಮನುಷ್ಯನಿಗೂ ಅವನದ್ದೇ ಆದ ಸಂಘವಿತ್ತು. ಸೋವಿಯತ್ ಇತ್ತು. ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಬಂದಿತ್ತು. ಹೋಟೆಲ್ ನೌಕರರೂ ಸಂಘಟಿತರಾಗಿದ್ದರು. ಸ್ವಾಭಿಮಾನದಿಂದ ನಾವು 'ಟಿಪ್ಸ್ ಸ್ವೀಕರಿಸುವುದಿಲ್ಲ' ಎಂಬ ಬೋರ್ಡ್‌ಗಳನ್ನು ಗೋಡೆಗೆ ಹಾಕಿಕೊಂಡಿದ್ದರು.

ರಣಾಂಗಣದಲ್ಲಿ ಸೈನಿಕರು ತಮ್ಮದೇ ಸಮಿತಿ ರಚಿಸಿಕೊಂಡು ಅಧಿಕಾರಿಗಳನ್ನು ಪ್ರತಿರೋಧಿಸಿದರು. ಕಾರ್ಮಿಕರು ಕಾರ್ಖಾನೆಗಳಲ್ಲಿ ತಮ್ಮದೇ ಆದ ಸಮಿತಿಗಳ ಮೂಲಕ ಹಳೆಯ ವ್ಯವಸ್ಥೆಯೊಂದಿಗೆ ಹೋರಾಟಕ್ಕಿಳಿದರು. ಮತ್ತೊಂದು ಗಮನಾರ್ಹ ಬೆಳವಣಿಗೆಯೆಂದರೆ ಇಡಿಯ ರಷ್ಯಾ ಬದಲಾರಂಭಿಸಿತ್ತು. ಜನತೆ ರಾಜಕೀಯ, ಅರ್ಥಶಾಸ್ತ್ರ, ಚರಿತ್ರೆ ಎಲ್ಲವನ್ನೂ ಅಭ್ಯಸಿಸಿದರು. ಲಕ್ಷಾಂತರ ಕರಪತ್ರಗಳು ಹಂಚಲ್ಪಟ್ಟವು. ಸಾವಿರಾರು ಸಂಘಟನೆಗಳು ಇಂಥ ಕರಪತ್ರಗಳನ್ನು ಹಳ್ಳಿಗಳಲ್ಲಿ, ಕಾರ್ಖಾನೆಗಳಲ್ಲಿ, ರಸ್ತೆಗಳಲ್ಲಿ, ಸೈನ್ಯಗಳಲ್ಲಿ ವಿತರಿಸುತ್ತಿದ್ದರು. ಕಲಿಯಬೇಕೆಂಬ ಭಯಂಕರ ಹಸಿವಿಗೆ ಕ್ರಾಂತಿ ಅಭಿವ್ಯಕ್ತಿ ನೀಡಿತ್ತು. ಕಾದ ಮರಳಿನಲ್ಲಿ ನೀರು ಇಂಗಿಹೋಗುವಂತೆ ರಷ್ಯಾ ಈ ಸಾಹಿತ್ಯವನ್ನು ಹೀರಿಕೊಂಡಿತ್ತು. ಅವರು ಓದುತ್ತಿದ್ದದ್ದು ಗೊಡ್ಡುನೀತಿಕಥೆಯನ್ನಲ್ಲ, ವಿರೂಪಗೊಂಡ ಇತಿಹಾಸವನ್ನಲ್ಲ, ಜನತೆಯಲ್ಲಿ ಹೊಲಸನ್ನು ಹರಡುವ ಅಗ್ಗದ ಸಾಹಿತ್ಯವನ್ನಲ್ಲ, ಅವರು ಓದುತ್ತಿದ್ದದ್ದು ಸೈದ್ಧಾಂತಿಕ ವಿಷಯಗಳನ್ನು; ಟಾಲ್‌ಸ್ಟಾಯ್, ಗೊಗೊಲ್, ಗಾರ್ಕಿಯರನ್ನು.

ಮತ್ತೆ ಎಲ್ಲೆಲ್ಲೂ ಭಾಷಣಗಳ ಸುರಿಮಳೆ. ಭಾಷಣ, ಚರ್ಚೆ, ಉಪನ್ಯಾಸ – ರಂಗಭೂಮಿಯಲ್ಲಿ, ಸರ್ಕಸ್‌ನಲ್ಲಿ, ಶಾಲೆ – ಕ್ಲಬ್ಬುಗಳಲ್ಲಿ, ಸೋವಿಯತ್ ಸಭೆಗಳಲ್ಲಿ, ರಣಾಂಗಣದಲ್ಲಿ, ಹಳ್ಳಿಗಳಲ್ಲಿ, ಕಾರ್ಖಾನೆಗಳಲ್ಲಿ, ಎಲ್ಲೆಡೆ ತೀವ್ರವಾದ ಮಾತುಕತೆ. ಎಲ್ಲಾ ಪಕ್ಷಗಳ ಭಾಷಣಕಾರರನ್ನೂ ಆಲಿಸಲು ಜನ ಸಾವಿರಗಟ್ಟಲೆ ಸೇರುತ್ತಿದ್ದರು. ಪೆತ್ರೋಗ್ರಾಡಿನ ಎಲ್ಲಾ ರಸ್ತೆ ಸೇರುವ ಮೂಲೆಗಳಲ್ಲಿ, ರೈಲುಗಳಲ್ಲಿ, ಬಸ್‌ಗಳಲ್ಲಿ ಅಲ್ಲಲ್ಲೇ ಹುಟ್ಟುತ್ತಿದ್ದ ವಾದವಿವಾದಗಳು...

ಮತ್ತೆ ರಾಶಿ ರಾಶಿ ಸಭೆಗಳು : ಅಖಿಲ ರಷ್ಯಾ ಸಮ್ಮೇಳನಗಳಂತೆ, ಸಮಾವೇಶಗಳಂತೆ, ಸೋವಿಯತ್ ಅಧಿವೇಶನಗಳಂತೆ, ಸಹಕಾರಿ ಸಂಘಗಳ, ರಾಷ್ಟ್ರೀಯತೆಗಳ, ರೈತರ,

ರಾಜಕೀಯ ಪಕ್ಷಗಳ, ಕಡೆಗೆ ಪುರೋಹಿತರದ್ದೂ ಸಹ ಸಭೆಗಳ ಮೇಲೆ ಸಭೆಗಳು! ರಾಜಧಾನಿಯಲ್ಲಿ ಯಾವಾಗ ನೋಡಿದರೂ ಮೂರು ನಾಲ್ಕು ಸಮ್ಮೇಳನಗಳು ಜರುಗುತ್ತಲೇ ಇದ್ದವು. ಎಲ್ಲೂ ಯಾರಿಗೂ ಭಾಷಣಕ್ಕೆ ಮಿತಿ ಹಾಕಲು ಜನ ಬಿಡುತ್ತಿರಲಿಲ್ಲ. ಪ್ರತಿಯೊಬ್ಬನೂ ತನಗನಿಸಿದ್ದನ್ನು ಹೇಳೀ ಹೇಳುತ್ತಿದ್ದ. ಇದೆಲ್ಲಾ ಅದ್ಭುತ ದೃಶ್ಯವೆನಿಸುತ್ತಿತ್ತು.

ನಾವೊಮ್ಮೆ ರಣಾಂಗಣಕ್ಕೆ ಭೇಟಿಕೊಟ್ಟಿದ್ದೆವು. ಅಲ್ಲಿ ಕಾಲಿಗೆ ಬೂಟಿಲ್ಲದೆ ಟ್ರೆಂಚ್‌ಗಳಲ್ಲಿ ಕೆಸರಿನಲ್ಲಿ ಓಡಾಡುತ್ತಿದ್ದ ಸಣಕಲುಕಡ್ಡಿಗಳಂತಿದ್ದ ಸೈನಿಕರನ್ನು ಕಂಡೆವು. ಹರಿದ ಬಟ್ಟೆಯ ನಡುವೆ ಅವರ ನೀಲಿಗಟ್ಟಿದ ಮೈ ಕಾಣುತ್ತಿತ್ತು. ಆದರೆ ಅವರಾದರೋ ನಮ್ಮನ್ನು ಕಂಡಕೂಡಲೇ ಕಾತರದಿಂದ 'ಓದಲು ಏನಾದರೂ ತಂದಿದ್ದೀರಾ?' ಎಂದು ಕೇಳುತ್ತಿದ್ದರು.

ಅನೇಕ ಬದಲಾವಣೆಗಳು ಮೇಲ್ನೋಟಕ್ಕೇ ಕಾಣುತ್ತಿದ್ದವು. ಕ್ಯಾಥರೀನ್ ಮಹಾರಾಣಿಯ ಪ್ರತಿಮೆಯ ಕೈನಲ್ಲೇ ಕೆಂಬಾವುಟವನ್ನು ಸಿಕ್ಕಿಸಲಾಗಿತ್ತು! ಅನೇಕ ಕಡೆ ಮಾಸಲು ಬಣ್ಣಕ್ಕೆ ತಿರುಗಿದ ಕೆಂಪು ಧ್ವಜಗಳು ಹಾರಾಡುತ್ತಿದ್ದವು. ರಾಜನ ಆಳ್ವಿಕೆಯ ಸಂಕೇತಗಳನ್ನು, ಚಿಹ್ನೆಗಳನ್ನು ಕಿತ್ತುಹಾಕಲಾಗಿತ್ತು. ಕ್ರೂರ ಪೊಲೀಸರ ಜಾಗದಲ್ಲಿ ನಾಗರಿಕ ರಕ್ಷಣಾ ದಳಗಳು ಕಾಣುತ್ತಿದ್ದವು. ಆದರೂ ಇನ್ನೂ ಸಹ ಕೆಲವೊಂದು ಹೊಂದಿಕೆಯಾಗದ ಅಂಶಗಳೂ ಜತೆಯಲ್ಲೇ ಕಾಣುತ್ತಿದ್ದವು.

ಉದಾಹರಣೆಗೆ, ರಾಜನ ಕಾಲದ ಅಧಿಕಾರ ಶ್ರೇಣಿಯ ವ್ಯವಸ್ಥೆ, ಚಕ್ರವರ್ತಿಯ ಚಿಹ್ನೆಯಿದ್ದ ಸಮವಸ್ತ್ರಗಳು ಅಸ್ತಿತ್ವದಲ್ಲಿದ್ದವು; ಸಂಜೆಯಾದರೆ ರಸ್ತೆಯ ತುಂಬ ಸರ್ಕಾರಿ ಅಧಿಕಾರಿಗಳು ಮನೆಯತ್ತ ಸಾಗುವ ದೃಶ್ಯ – ಇವೆಲ್ಲಾ ಹಾಗೇ ಇದ್ದವು.

ಹೀಗೆ ಇಡಿಯ ರಾಷ್ಟ್ರವೇ ಕ್ಷೋಭೆಯಲ್ಲಿರುವ ವಿಸರ್ಜನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ, ರಷ್ಯದ ಜನಸ್ತೋಮ ಎದ್ದೇಳುತ್ತಿರುವ ಭವ್ಯ ದೃಶ್ಯ ಪ್ರದರ್ಶನವೊಂದು ಅನಾವರಣಗೊಳ್ಳುತ್ತ ಹೋಯಿತು.

## ಅಧ್ಯಾಯ – 2

# ಬಂತ್ರೈ ಬಂತ್ರೈ ಸುಂಟರಗಾಳಿ (ಚಂಡಮಾರುತ)

ಆಗ ರಷ್ಯಾದ ಸೈನ್ಯಗಳಿಗೆ ಮಹಾದಂಡನಾಯಕನಾಗಿದ್ದವನು ಜನರಲ್ ಲಾವ್ರ್ ಕೊರ್ನಿಲೊವ್ ಎಂಬುವನು. ಈತ ಪೆತ್ರೋಗ್ರಾಡ್‌ನ್ನು ಕೈವಶ ಮಾಡಿಕೊಂಡು ರಷ್ಯಾದ ಮಿಲಿಟರಿ ಸರ್ವಾಧಿಕಾರಿಯಾಗಬೇಕೆಂದು ಸೈನ್ಯಗಳನ್ನೆತ್ತಿಕೊಂಡು ಬಂದ. ಅವನ ಹಿಂದೆ ಇದ್ದದ್ದು ಕ್ರಾಂತಿಯನ್ನು ಹೊಸಕಿ ಹಾಕಲು ಭಂಡತನದಿಂದ ಯತ್ನಿಸುತ್ತಿದ್ದ ಬಂಡವಾಳಗಾರರ ಉಕ್ಕಿನ ಪಂಜ. ಈ ಒಳಸಂಚಿನಲ್ಲಿ ಕೆಲವು ಸಮಾಜವಾದಿ ಸಚಿವರೂ ಭಾಗಿಗಳಾಗಿದ್ದರೆಂದು ಆರೋಪಿಸಲಾಗಿತ್ತು. ಕೆರೆನ್‌ಸ್ಕಿಯ ಮೇಲೂ ಸಂಶಯ ಉಂಟಾಯಿತು. ನಿಜಕ್ಕೂ ಹೇಳಬೇಕೆಂದರೆ ಹೆಚ್ಚು ತೀವ್ರವಾದದತ್ತ ಆಕರ್ಷಿತರಾಗುತ್ತಿದ್ದ ಸೋವಿಯತ್‌ಗಳನ್ನು, ಸೈನಿಕ ಸಂಘಗಳನ್ನು, ನಿಯಂತ್ರಿಸಲು ಆರಂಭದಲ್ಲಿ ಕೆರೆನ್‌ಸ್ಕಿಯೇ ಕೊರ್ನಿಲೊವ್‌ನಿಗೆ ರಹಸ್ಯವಾಗಿ ಆಹ್ವಾನ ನೀಡಿದ್ದ. ಆದರೆ ಕೊರ್ನಿಲೊವ್‌ನನ್ನು ಸೈನಿಕ ಸಮಿತಿಗಳು ಒಂದಾಗಿ ಎದುರಿಸಿ, ಸೋಲಿಸಿ, ದಸ್ತಗಿರಿ ಮಾಡಿಬಿಟ್ಟವು. ಕೆಲವು ಜನರಲ್‌ಗಳು ಕೆಲಸ ಕಳೆದುಕೊಂಡರು. ಸಂಪುಟ ಸಚಿವರನೇಕರನ್ನು ಅಮಾನತ್ತಿನಲ್ಲಿಡಲಾಯಿತು. ಸಂಪುಟ ಕುಸಿದುಬಿತ್ತು.

ಬಂಡವಾಳಗಾರರ ಪಕ್ಷವಾದ ಕ್ಯಾಡೆಟ್‌ಗಳನ್ನು (ಕಾನ್‌ಸ್ಟಿಟ್ಯೂಶನಲ್ ಡೆಮೊಕ್ರಾಟ್ಸ್) ಸೇರಿಸಿಕೊಂಡು ಹೊಸ ಸರ್ಕಾರ ರಚಿಸಲು ಕೆರೆನ್‌ಸ್ಕಿ ಪ್ರಯತ್ನಿಸಿದ. ಆದರೆ ಕೆರೆನ್‌ಸ್ಕಿಯ ಮಾತೃಪಕ್ಷವಾದ ಸೋಷಲಿಸ್ಟ್ ರೆವಲ್ಯೂಶನರಿ ಪಾರ್ಟಿಗೇ ಸ್ವತಃ ಇದು ಇಷ್ಟವಿರಲಿಲ್ಲ. ಅವರು ಕ್ಯಾಡೆಟ್‌ಗಳನ್ನು ಕೈಬಿಡು ಎಂದು ಹೇಳಿದರೆ ಕೆರೆನ್‌ಸ್ಕಿ ಅದಕ್ಕೆ ಒಪ್ಪಲಿಲ್ಲ. ಬದಲಿಗೆ ಜಾಸ್ತಿ ಒತ್ತಾಯ ಮಾಡಿದರೆ ತಾನೇ ರಾಜೀನಾಮೆ ಕೊಟ್ಟುಬಿಡುವುದಾಗಿ ಧಮಕಿ ಹಾಕಿದ. ಆದರೆ ಜನಾಭಿಪ್ರಾಯ ಅವನ ನಿಲುವಿಗೆ ಪೂರ್ತಿ ವಿರುದ್ಧವಾಗಿತ್ತು. ಹೀಗಾಗಿ ಗತ್ಯಂತರವಿಲ್ಲದೆ ಅವನು ಈ ವಿಷಯ ತೀರ್ಮಾನವಾಗುವವರೆಗೂ ಐದು ಜನ ಹಳೆಯ ಸಚಿವರನ್ನೊಳಗೊಂಡ ಮಂಡಳಿಯೊಂದಕ್ಕೆ ನಾಯಕನಾಗಿ ಸರ್ಕಾರ ನಡೆಸಿಕೊಂಡು ಹೋಗಲು ಒಪ್ಪಿಕೊಂಡ.

ಅದೇನೇ ಇರಲಿ, ಈ ವಿಫಲವಾದ ಕೊರ್ನಿಲೊವ್ ಒಳಸಂಚಿನಿಂದಾಗಿ ಮಂದಗಾಮಿಗಳು, ಕ್ರಾಂತಿಕಾರಿಗಳು ಎಲ್ಲಾ ರೀತಿಯ ಸಮಾಜವಾದಿಗಳೂ ಒಂದಾಗಬೇಕಾಯಿತು. ಇದರ ಹಿಂದೆ ಕೆಲಸ ಮಾಡಿದ್ದು ಗಾಢವಾದ ಆತ್ಮರಕ್ಷಣೆಯ ತುರ್ತು. ಇನ್ನು ಮುಂದೆ ಇಂಥ ಯಾವ ಕೊರ್ನಿಲೊವ್‌ಗಳೂ ತಲೆ ಎತ್ತಬಾರದು. ಇನ್ನು ಕ್ರಾಂತಿಯ ಪರವಾದ ಶಕ್ತಿಗಳನ್ನು ಬೆಂಬಲಿಸುವ ಸರ್ಕಾರ ಅಧಿಕಾರಕ್ಕೆ ಬರಬೇಕು.

ಅದಕ್ಕಾಗಿ ಪೆತ್ರೋಗ್ರಾಡ್‌ನಲ್ಲಿ ಜನತಾಂತ್ರಿಕ ಸಮ್ಮೇಳನವನ್ನು ನಡೆಸಲು ತ್ಸೆ-ಇ-ಕಾ ತೀರ್ಮಾನಿಸಿತು. ಜನತೆಯನ್ನು ಪ್ರತಿನಿಧಿಸುವ ಎಲ್ಲಾ ಸಂಘ ಸಂಸ್ಥೆಗಳೂ ಸೆಪ್ಟೆಂಬರ್‌ನಲ್ಲಿ ನಡೆಯುವ ಈ ಅಧಿವೇಶನಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳಿಸಬೇಕು ಎಂದು ರೈತ ಕಾರ್ಮಿಕ ಸೈನಿಕರ ಸಂಘಟನೆಗಳ ಕೇಂದ್ರ ನಾಯಕತ್ವವಾದ ತ್ಸೆ-ಇ-ಕಾ ಕರೆ ನೀಡಿತು.

ಒಡನೆಯೇ ತ್ಸೆ-ಇ-ಕಾ-ದಲ್ಲಿ ಮೂರು ಬಣಗಳು ಹುಟ್ಟಿಕೊಂಡವು. ಎಲ್ಲಾ ಸೋವಿಯತ್ ಜನಸಮಿತಿಗಳ ಅಖಿಲ ರಷ್ಯಾ ಸಮ್ಮೇಳನವನ್ನು ಕರೆಯಬೇಕು ಮತ್ತು ಅಂಥ ಒಂದು ಸಮ್ಮೇಳನವೇ ರಾಜ್ಯಾಧಿಕಾರವನ್ನು ವಹಿಸಿಕೊಳ್ಳಬೇಕು ಎಂಬುದು ಬೋಲ್ಶೆವಿಕರ ಆಗ್ರಹ. ಎರಡನೆಯ ಬಣದಲ್ಲಿ ಸೋಷಲಿಸ್ಟ್ ರೆವಲ್ಯೂಶನರಿಗಳ 'ಕೇಂದ್ರವಾದಿ' ಪಂಥ ಮತ್ತು ಎಡವಾದಿ ಪಂಥ ಮೆನ್ಶೆವಿಕರ ಇಂಟರ್‌ನ್ಯಾಷನಲಿಸ್ಟ್ ಗುಂಪು ಹಾಗೂ ಮೆನ್ಶೆವಿಕರ ಕೇಂದ್ರವಾದಿ ಪಂಥ ಹೀಗೆ ನಾಲ್ಕು ಸಂಘಟನೆಗಳಿದ್ದವು. ಇವರೆಲ್ಲರ ಒಕ್ಕೊರಲಿನ ಅಭಿಪ್ರಾಯವೆಂದರೆ, ನಾವೆಲ್ಲಾ ಸೇರಿ ಒಂದು ಶುದ್ಧ ಸಮಾಜವಾದಿ ಸರ್ಕಾರವನ್ನು ರಚಿಸೋಣ. ಮೆನ್ಶೆವಿಕರ ಹಾಗೂ ಸೋಷಲಿಸ್ಟರ ಬಲಪಂಥೀಯ ಗುಂಪುಗಳು ಸೇರಿ ಮೂರನೆಯ ಬಣ ಸೃಷ್ಟಿಯಾಗಿತ್ತು. ಆಸ್ತಿವಂತ ವರ್ಗಗಳನ್ನು ಸೇರಿಸಿಕೊಂಡು ಹೊಸ ಸರ್ಕಾರವನ್ನು ರಚಿಸಬೇಕು ಎಂಬುದು ಈ ಬಣದ ಒತ್ತಾಯ.

ಇದೇ ಸಂದರ್ಭದಲ್ಲಿ ಬೋಲ್ಶೆವಿಕರು ಪೆತ್ರೋಗ್ರಾಡ್‌ನ ಸೋವಿಯತ್‌ನಲ್ಲಿ, ಮಾಸ್ಕೊ, ಕೀವ್, ಒಡೆಸ್ಸಾ ಮುಂತಾದ ನಗರಗಳ ಸೋವಿಯತ್‌ಗಳಲ್ಲಿ ಬಹುಮತವನ್ನು ಗಳಿಸಿಕೊಂಡರು.

ಈಗ ತ್ಸೆ-ಇ-ಕಾವನ್ನು ಅಲ್ಲಿಯವರೆಗೂ ನಿಯಂತ್ರಿಸುತ್ತಿದ್ದ ಮೆನ್ಶೆವಿಕರಿಗೂ ಸೋಷಲಿಸ್ಟ್ ರೆವಲ್ಯೂಶನರಿಗಳೂ ಗಾಬರಿಯಾಗಿಬಿಟ್ಟಿತು. ಅವರಿಗೆ ಕೊರ್ನಿಲೊವ್‌ಗಿಂತಲೂ ಲೆನಿನ್‌ರೇ ಹೆಚ್ಚು ಅಪಾಯಕಾರಿ ಎನಿಸತೊಡಗಿತು! ಕೂಡಲೇ ಅವರು ಜನತಾಂತ್ರಿಕ ಸಮ್ಮೇಳನದಲ್ಲಿದ್ದ ಪ್ರಾತಿನಿಧ್ಯದ ಮಾದರಿಯನ್ನೇ ಬದಲಾಯಿಸತೊಡಗಿದರು. ಸಹಕಾರ ಸಂಘಗಳು ಮುಂತಾದ ಸಂಪ್ರದಾಯನಿಷ್ಠ ಸಂಘಟನೆಗಳಿಂದಲೇ ಹೆಚ್ಚು ಸದಸ್ಯರನ್ನು ಸಮ್ಮೇಳನದಲ್ಲಿ ತುಂಬಿಬಿಟ್ಟರು. ಆದರೆ ಇಂಥ ಪಕ್ಷಪಾತಿಯಾಗಿದ್ದ ಸಮ್ಮೇಳನ ಸಹ ಶುರುವಿನಲ್ಲಿ ಕ್ಯಾಡೆಟ್ ಪಾರ್ಟಿ ಇಲ್ಲದೆಯೇ ಸರ್ಕಾರ ರಚಿಸೋಣ ಎಂದು ತೀರ್ಮಾನಿಸಿಬಿಟ್ಟಿತು. ಆದರೆ ಹೀಗಾದಲ್ಲಿ ತಾನು ರಾಜೀನಾಮೆ ನೀಡುವುದಾಗಿ ಕೆರೆನ್‌ಸ್ಕಿ ಬೆದರಿಸಿದ್ದರಿಂದ ಹಾಗೂ ಮಂದಗಾಮಿ ಸಮಾಜವಾದಿಗಳು 'ಗಣರಾಜ್ಯ ಅಪಾಯದಲ್ಲಿದೆ' ಎಂದು ಹುಯಿಲೆಬ್ಬಿಸಿದ್ದರಿಂದ ಒಂದು ಸಣ್ಣ ಬಹುಮತದೊಂದಿಗೆ ಬಂಡವಾಳಗಾರರನ್ನೂ ಸೇರಿಸಿಕೊಂಡು ಸರ್ಕಾರ ರಚಿಸುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಹೀಗಾಗಿ ಶಾಸನ ಮಾಡುವ ಅಧಿಕಾರವಿಲ್ಲದ, ಕೇವಲ ಸಲಹೆ ನೀಡಬಹುದಾದ 'ರಷ್ಯನ್ ಗಣರಾಜ್ಯದ ಹಂಗಾಮಿ ಮಂಡಳಿ' ಎಂಬುದು ಅಸ್ತಿತ್ವಕ್ಕೆ ಬಂತು. ಹೊಸ ಸಚಿವ ಸಂಪುಟದಲ್ಲಿ ಆಸ್ತಿವಂತ ವರ್ಗಗಳ ಕೈ ಮೇಲಾಯಿತು. ಗಣರಾಜ್ಯ ಮಂಡಳಿಯಲ್ಲೂ ಅವರಿಗೆ ಅನುಚಿತವಾದ ಹೆಚ್ಚಿನ ಸಂಖ್ಯೆಯ ಸ್ಥಾನಗಳು ದೊರೆತುಬಿಟ್ಟವು.

ವಾಸ್ತವವಾಗಿ ಹೇಳಬೇಕೆಂದರೆ ತ್ಸೆ-ಇ-ಕಾ ಈ ಹೊತ್ತಿಗೆ ನಿಜಕ್ಕೂ ಸೋವಿಯತ್ ಜನಸಮಿತಿಗಳ ಬುಡಮಟ್ಟದ ಸಂಘಟನೆಗಳನ್ನು ಪ್ರತಿನಿಧಿಸುತ್ತಿರಲಿಲ್ಲ. ಅದು ಹಿಂದೆ ಯಾವಾಗಲೋ ಚುನಾಯಿತವಾಗಿದ್ದು ಈಗ ವೇಗವಾಗಿ ಬದಲಾಗುತ್ತಿರುವ ರಾಜಕೀಯ

ಪರಿಸ್ಥಿತಿಯಲ್ಲಿ ಜನಬೆಂಬಲವನ್ನು ಕಳೆದುಕೊಂಡ ನಾಯಕತ್ವ, ಸೆಪ್ಟೆಂಬರ್‌ನಲ್ಲಿ ಕರೆಯಬೇಕಾಗಿದ್ದ ಸೋವಿಯತ್‌ಗಳ ಅಖಿಲ ರಷ್ಯನ್ ಸಮ್ಮೇಳನವನ್ನು ನಡೆಸಲು ಅದು ನಿಯಮಬಾಹಿರವಾಗಿ ನಿರಾಕರಿಸಿತ್ತು. ಅದು ತಾನೂ ಅಧಿವೇಶನವನ್ನು ಕರೆಯಲು ತಯಾರಿರಲಿಲ್ಲ. ಬೇರೆಯವರು ಅದನ್ನು ಸಂಘಟಿಸಲು ಬಿಡಲೂ ಇಲ್ಲ. ಸೋವಿಯತ್‌ಗಳ ಕಥೆ ಮುಗಿಯಿತು. ಇನ್ನು ಅವುಗಳನ್ನು ವಿಸರ್ಜಿಸಬೇಕು ಎಂದು ಇಝ್‌ವೆಸ್ತಿಯಾ (ಸುದ್ದಿ) ಎಂಬ ಅವರ ಮುಖಪತ್ರಿಕೆ ಘೋಷಿಸಿಬಿಟ್ಟಿತು. ಇದೇ ಸಂದರ್ಭದಲ್ಲಿ ಹೊಸ ಸರ್ಕಾರ ಸಹ, 'ಎಲ್ಲಾ ಬೇಜವಾಬ್ದಾರಿ ಸಂಘಟನೆಗಳನ್ನೂ (ಎಂದರೆ ಸೋವಿಯತ್‌ಗಳನ್ನು ಎಂದು ಓದಿಕೊಳ್ಳಿ) ಮುಗಿಸಬೇಕು' ಎಂದು ಘೋಷಿಸಿತು.

ಇದಕ್ಕೆ ಬೋಲ್ಶೆವಿಕರ ಪ್ರತಿಕ್ರಿಯೆ ಏನು ? ಅವರು ನವೆಂಬರ್ 2ರಂದು ಎಲ್ಲಾ ಅಖಿಲ ರಷ್ಯಾಮಟ್ಟದ ಸೋವಿಯತ್‌ಗಳೂ ಸಭೆ ಸೇರಿ ರಷ್ಯಾದ ಸರ್ಕಾರವನ್ನು ತಾವೇ ಕೈಗೆತ್ತಿಕೊಳ್ಳಬೇಕೆಂದು ಕರೆನೀಡಿದರು. ಅದೇ ಸಮಯದಲ್ಲಿ ಅವರು ಜನತೆಗೆ ದ್ರೋಹ ಬಗೆಯುವ ಸರ್ಕಾರದಲ್ಲಿ ಭಾಗಿಯಾಗುವುದಿಲ್ಲ ಎಂದು ಹೇಳಿ ಹೊಸದಾಗಿ ರಚಿಸಲ್ಪಟ್ಟಿದ್ದ 'ರಷ್ಯನ್ ಗಣರಾಜ್ಯ ಮಂಡಳಿ'ಯಿಂದ ಹೊರಗೆ ಬಂದರು.

ಬೋಲ್ಶೆವಿಕರು ಹೊರನಡೆದದ್ದರಿಂದ ಆ ನತದೃಷ್ಟ ಮಂಡಳಿಗೆ ಶಾಂತಿಯೇನೂ ದಕ್ಕಲಿಲ್ಲ. ಏಕೆಂದರೆ ಆಸ್ತಿವಂತ ವರ್ಗಗಳು ಇನ್ನೂ ಹೆಚ್ಚು ದುರಹಂಕಾರದಿಂದ, ಆಕ್ರಮಣಶೀಲತೆಯಿಂದ, ಒತ್ತಡಗಳನ್ನು ಪೇರಿಸುತ್ತಾ ಹೋದರು. ಕ್ಯಾಡೆಟ್ ಪಕ್ಷದವರು ರಷ್ಯಾ ದೇಶವು ಒಂದು ಗಣತಂತ್ರ ಎಂದು ಘೋಷಿಸಲು ಹಕ್ಕೇ ಇಲ್ಲ ಎಂದು ವಾದಿಸತೊಡಗಿದರು. ಅಷ್ಟೇ ಅಲ್ಲದೆ ಸೈನ್ಯದಲ್ಲೂ ನೌಕಾದಳದಲ್ಲೂ ಇರುವ ಯೋಧರ ಸಮಿತಿಗಳನ್ನು ವಿಸರ್ಜಿಸಬೇಕು ಎಂದು ಆಗ್ರಹಿಸಿದರು. ಸೋವಿಯತ್ ಜನಸಮಿತಿಗಳನ್ನು ಖಂಡಿಸಿದರು. ಒಟ್ಟಿನಲ್ಲಿ ಜನತೆಗೆ ಕ್ರಾಂತಿಯಿಂದ ದಕ್ಕಿದ ಹಕ್ಕು, ಅಧಿಕಾರಗಳನ್ನು ಮೊಟಕುಗೊಳಿಸಲು ತೀವ್ರವಾದ ಕ್ರಮಗಳನ್ನು ಆರಂಭಿಸಿದರು. ಅದೇ ಸಮಯದಲ್ಲಿ ಮಂಡಳಿಯಲ್ಲಿ ಇನ್ನೊಂದು ಪಾರ್ಶ್ವದಲ್ಲಿದ್ದ ಮೆನ್ಶೆವಿಕ್ ಇಂಟರ್‌ನ್ಯಾಷನಲಿಸ್ಟರು ಹಾಗೂ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ಯುದ್ಧ ನಿಲ್ಲಿಸಿ ಶಾಂತಿ ಘೋಷಣೆಯಾಗಲಿ ಎಂದರು. ರೈತರಿಗೆ ಭೂಮಿ ಹಾಗೂ ಕಾರ್ಖಾನೆಗಳ ಮೇಲೆ ಕಾರ್ಮಿಕರ ನಿಯಂತ್ರಣವಿರಲಿ ಎಂದು ಆಗ್ರಹಿಸಿದರು. ಒಟ್ಟಿನಲ್ಲಿ ಬೋಲ್ಶೆವಿಕರ ಕಾರ್ಯಕ್ರಮವನ್ನೇ ಎತ್ತಿಹಿಡಿದರು.

ಆ ಸಂದರ್ಭದಲ್ಲಿ ಕ್ಯಾಡೆಟ್ ಪಕ್ಷಕ್ಕೆ ಉತ್ತರವಾಗಿ ಮೆನ್ಶೆವಿಕ್ ಇಂಟರ್‌ನ್ಯಾಷನಲಿಸ್ಟರ ನಾಯಕನಾಗಿದ್ದ ಮಾರ್ಟೋವ್ ಮಾಡಿದ ಭಾಷಣವನ್ನು ಕೇಳುವ ಅವಕಾಶ ನನಗೆ ದೊರಕಿತ್ತು. ತೀರಾ ಅಸ್ವಸ್ಥನಾಗಿದ್ದ ಆತ ಮುಂದಕ್ಕೆ ಬಾಗುತ್ತಾ ಬಲಪಂಥೀಯರತ್ತ ಬೆರಳು ತೋರುತ್ತಾ ಕರ್ಕಶವಾಗಿದ್ದ ತನ್ನ ದನಿಯಲ್ಲಿ ಹೀಗೆಂದ :

"ಸೋಲೊಪ್ಪಿಕೊಂಡವರು ಎಂದು ನೀವು ನಮ್ಮನ್ನು ಹೀಯಾಳಿಸುತ್ತೀರಿ. ಆದರೆ ನಿಜಕ್ಕೂ ಸೋತಮನಸ್ಥಿತಿಯವರು ಯಾರು ಗೊತ್ತೆ ? ಶಾಂತಿಯ ಘೋಷಣೆ ಮಾಡಲು ಇನ್ನೂ ಒಳ್ಳೆಯ ಮುಹೂರ್ತ ಬರಲಿ ಎಂದು ಕಾಯುತ್ತಿರುವವರು. ರಷ್ಯನ್ ಸೈನ್ಯ ನಿಶ್ಶೇಷವಾಗಿ ನಾಶವಾಗುವವರೆಗೂ ಶಾಂತಿಯನ್ನು ಮುಂದೂಡುವವರು, ಬೇರೆ ಬೇರೆ ಸಾಮ್ರಾಜ್ಯಶಾಹಿಗಳ ಗುಂಪುಗಳು, ರಷ್ಯಾವನ್ನು ಚೌಕಾಶಿಗೆ ಉಪಯೋಗಿಸಿಕೊಳ್ಳಲು

ಬಿಡುವಂಥವರು. ನೀವು, ನೀವು ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನು ರಕ್ಷಿಸಲು ರೂಪಿಸಿದ ನೀತಿಗಳನ್ನು ರಷ್ಯಾದ ಜನತೆಯ ಮೇಲೆ ಹೇರಲು ಹೊರಟಿದ್ದೀರಿ. ನೀವು ಜರ್ಮನ್ ಏಜೆಂಟರೆಂದು ಕರೆಯುವ ಕ್ರಾಂತಿಕಾರಿ ಸಮಾಜವಾದಿಗಳ ಯತ್ನ ವಿಫಲವಾಗುವುದಿಲ್ಲ. ಅವರು ಎಲ್ಲ ದೇಶಗಳಲ್ಲೂ ಜನತಂತ್ರಪರವಾದ ಸಮುದಾಯಗಳ ಆತ್ಮಸಾಕ್ಷಿಯನ್ನು ಜಾಗ್ರತಗೊಳಿಸಿದ್ದಾರೆ..."

ಮಂಡಳಿಯೊಳಗೆ ಹೀಗೆ ಎರಡು ಬಣಗಳು ಏರ್ಪಟ್ಟವು. ಯಾವುದೇ ರೀತಿಯ ಹೊಂದಾಣಿಕೆ ಸಾಧ್ಯವಾಗದಂಥ ಸಂಘರ್ಷದ ವಾತಾವರಣ ಇಬ್ಬರನ್ನೂ ಬೇರ್ಪಡಿಸಿತ್ತು. ಇವರುಗಳ ಮಧ್ಯೆ ಮೆನ್ಶೆವಿಕರು ಹಾಗೂ ಸೋಷಲಿಸ್ಟರು ಒಮ್ಮೆ ಈ ಕಡೆಗೆ, ಒಮ್ಮೆ ಆ ಕಡೆಗೆ ತಾರಾಡುತ್ತಿದ್ದರು. ಆದರೆ ಹೆಚ್ಚುತ್ತಿದ್ದ ಜನತೆಯ ಅತೃಪ್ತಿಯ ಒತ್ತಡದಡಿಯಲ್ಲಿ ಅವರು ಎಡಕ್ಕೆ ಎಂದರೆ ತೀವ್ರಗಾಮಿಗಳತ್ತ ಸರಿಯಲೇಬೇಕಾಯಿತು.

ಇದೇ ಸಂದರ್ಭದಲ್ಲಿ ಪ್ಯಾರಿಸ್ ನಗರದಲ್ಲಿ ಮಹಾಯುದ್ಧದಲ್ಲಿನ ಮಿತ್ರಪಕ್ಷಗಳ ಕೂಟದ ಸಮ್ಮೇಳನ ನಡೆದಿತ್ತು. ಅದರ ಘೋಷಣೆ ಏನಿರುತ್ತದೋ ಎಂದು ಎಲ್ಲರೂ ಕಾದಿದ್ದರು. ಈ ಪ್ರಘಟನೆಯೇ ವಿದೇಶಾಂಗ ನೀತಿಯ ಪ್ರಶ್ನೆಯನ್ನು ಮುನ್ನೆಲೆಗೆ ತಂದಿತು.

ರಷ್ಯಾದಲ್ಲಿ ಅಂದು ಅಸ್ತಿತ್ವದಲ್ಲಿದ್ದ ಎಲ್ಲಾ ಸಮಾಜವಾದಿ ಪಕ್ಷಗಳೂ ಕಡೆಯ ಪಕ್ಷ ಸೈದ್ಧಾಂತಿಕ ಮಟ್ಟದಲ್ಲಿ ಪ್ರಜಾಸತ್ತಾತ್ಮಕವಾದ ಷರತ್ತುಗಳ ಆಧಾರದ ಮೇಲೆ ಆದಷ್ಟು ಬೇಗ ಶಾಂತಿಯನ್ನು ಸ್ಥಾಪಿಸಬೇಕು ಎಂಬುದರ ಬಗ್ಗೆ ಒಲವು ಹೊಂದಿದ್ದವು. 1917ರ ಮೇ ತಿಂಗಳ ಹೊತ್ತಿಗಾಗಲೇ ಆ ಸಂದರ್ಭದಲ್ಲಿ ಮೆನ್ಶೆವಿಕರು ಹಾಗೂ ಸೋಷಲಿಸ್ಟ್ ರೆವಲ್ಯೂಶನರಿಗಳ ನಿಯಂತ್ರಣದಲ್ಲಿದ್ದ ಪೆತ್ರೋಗ್ರಾಡ್ ನಗರದ ಸೋವಿಯತ್ ಹೆಸರುವಾಸಿಯಾಗಿದ್ದ ಶಾಂತಿಸೂತ್ರಗಳನ್ನು ಘೋಷಿಸಿತ್ತು. ಯುದ್ಧದ ಗುರಿ ಏನು, ಮುಂದುವರೆಯಬೇಕೇ ಬೇಡವೇ ಎಂಬುದನ್ನು ತೀರ್ಮಾನಿಸಲು ಮಿತ್ರರಾಷ್ಟ್ರಗಳು ಒಂದು ಸಮ್ಮೇಳನವನ್ನು ಸಂಘಟಿಸಬೇಕು ಎಂದು ಅವರು ಆಗ್ರಹಿಸಿದ್ದರು. ಮೊದಲು ಆಗಸ್ಟ್‌ನಲ್ಲಿ ನಡೆಸಲಾಗುವುದು ಎಂದು ಹೇಳಲಾಗಿದ್ದ ಈ ಸಮ್ಮೇಳನವನ್ನು ನಂತರ ಸೆಪ್ಟೆಂಬರ್‌ಗೆ ಮುಂದೂಡಲಾಗಿತ್ತು. ಆನಂತರ ಅಕ್ಟೋಬರ್‌ಗೆ ಎತ್ತಿಹಾಕಿ ಇದೀಗ ನವೆಂಬರ್ 10ಕ್ಕೆ ಎಂದು ನಿಗದಿಪಡಿಸಲಾಗಿತ್ತು.

ಹಂಗಾಮಿ ಸರ್ಕಾರ ತನ್ನ ಕಡೆಯಿಂದ ಇಬ್ಬರು ಪ್ರತಿನಿಧಿಗಳ ಹೆಸರನ್ನು ನಿರ್ಧರಿಸಿತು. ಆದರೆ ಸೋವಿಯತ್ ಜನಸಮಿತಿಗಳು ತಮ್ಮ ಪರವಾಗಿ ವಾದ ಮಂಡಿಸಲು ಸ್ಕೊಬೆಲೆವ್ ಎಂಬಾತನನ್ನು ಸೂಚಿಸಿದವು. ಆತ ಮಂಡಿಸಲು ಒಂದು ಪ್ರಣಾಳಿಕೆಯನ್ನು ಸಿದ್ಧಪಡಿಸಿದವು. ನಕಾಜ್ (ಸೂಚನೆಗಳು) ಎಂಬುದು ಅದರ ಹೆಸರು. ಸ್ಕೊಬೆಲೆವ್ ಪ್ರತಿನಿಧಿಯಾಗುವುದು, ಸಮ್ಮೇಳನದಲ್ಲಿ ಸೂಚನೆಗಳನ್ನು ಮಂಡಿಸುವುದು, ಇದು ಯಾವುದೂ ಹಂಗಾಮಿ ಸರ್ಕಾರಕ್ಕೆ ಇಷ್ಟವಿರಲಿಲ್ಲ. ಮಿತ್ರ ರಾಷ್ಟ್ರಗಳ ರಾಯಭಾರಿಗಳೂ ಇದನ್ನು ವಿರೋಧಿಸಿದರು. ಕಡೆಗೆ ಬ್ರಿಟನ್‌ನ ಸಂಸತ್ತಿನಲ್ಲಿ ಬೋನಾರ್ ಲಾ ಎಂಬ ಪ್ರಭಾವಶಾಲಿ ರಾಜಕಾರಣಿ (ಮುಂದೆ ಅವನು ಪ್ರಧಾನಮಂತ್ರಿಯೂ ಆದ) "ಪ್ಯಾರಿಸ್ ಸಮ್ಮೇಳನವು ಯುದ್ಧದ ಗೊತ್ತುಗುರಿಗಳನ್ನು ಚರ್ಚಿಸುವುದಿಲ್ಲ. ಯುದ್ಧ ನಿರ್ವಹಣೆಯ ವಿಧಾನಗಳನ್ನಷ್ಟೇ ಚರ್ಚಿಸಲಾಗುವುದು" ಎಂದು ತಣ್ಣಗೆ ಘೋಷಿಸಿಬಿಟ್ಟ.

ಇದನ್ನು ಕೇಳಿ ರಷ್ಯಾದ ಪಟ್ಟಭದ್ರ ಪರವಾದ ಪತ್ರಿಕೆಗಳಿಗೆ ತುಂಬ ಖುಷಿಯಾಯಿತು.

ಬೋಲ್ಶೆವಿಕರು ಮಾತ್ರ, "ಸೋಷಲಿಸ್ಟ್ ರೆವಲ್ಯೂಶನರಿಗಳ ಹಾಗೂ ಮೆನ್ಶೆವಿಕರ ರಾಜಿ ಮನೋಭಾವ ಅವರನ್ನು ಎಂಥ ದುಃಸ್ಥಿತಿಗೆ ತಳ್ಳಿದೆ ನೋಡಿ" ಎಂದು ಟೀಕಿಸಿದರು.

ರಣಾಂಗಣದ ಸಾವಿರಾರು ಮೈಲಿ ಉದ್ದದ ಮುಂಚೂಣಿಯಲ್ಲಿ ಲಕ್ಷಗಟ್ಟಲೆ ಸೈನಿಕರು ಉಬ್ಬರಬಂದ ಸಮುದ್ರದಂತೆ ಕುದಿಯಲಾರಂಭಿಸಿದರು. ನೂರಾರು ಸೈನಿಕರ ನಿಯೋಗಗಳು ರಾಜಧಾನಿಗೆ ನುಗ್ಗಿ "ಶಾಂತಿ ಬೇಕು" "ಶಾಂತಿ ಬೇಕು" ಎಂದು ಘರ್ಜಿಸಲಾರಂಭಿಸಿದರು.

ನಗರದೊಳಗೆ ಹರಿಯುವ ನೇವಾ ನದಿಯನ್ನು ದಾಟಿ ನಾನು 'ಸರ್ಕೆ ಮಾಡರ್ನೆ' ಎಂಬ ಸ್ಥಳಕ್ಕೆ ಹೋದೆ. ಅದು ಸಭೆಗಳು ನಡೆಯುವ ಸ್ಥಳ. ಆ ದಿನಗಳಲ್ಲಿ ಎಲ್ಲೆಡೆ ಪ್ರತಿರಾತ್ರಿ ಭಾರಿ ಸಭೆಗಳು ನಡೆಯತ್ತಿದ್ದವು. ಸಭಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇತ್ತು. ಕತ್ತಲಿದ್ದ ಈ ಬಯಲು ಸಭಾಂಗಣದಲ್ಲಿ ಅಲ್ಲಲ್ಲಿ ತೂಗುದೀಪಗಳನ್ನು ನೇತುಹಾಕಿದ್ದರು. ವೇದಿಕೆಯಿಂದ ಹಿಡಿದು ಮೇಲಿನ ಕೊಟ್ಟಕೊನೆಯ ಮೆಟ್ಟಿಲಿನವರೆಗೂ ಜನ ತುಂಬಿದ್ದರು. ಅದರಲ್ಲಿ ಸೈನಿಕರಿದ್ದರು, ನಾವಿಕರಿದ್ದರು, ಕಾರ್ಮಿಕರಿದ್ದರು, ಮಹಿಳೆಯರೂ ಇದ್ದರು. ತಮ್ಮ ಬದುಕೇ ಈ ಮಾತುಗಳ ಮೇಲೆ ನಿರ್ಧಾರವಾಗುತ್ತದೆನೋ ಎನ್ನುವ ರೀತಿಯಲ್ಲಿ ಅವರು ಭಾಷಣಗಳನ್ನು ಆಲಿಸುತ್ತಿದ್ದರು. ಐನೂರು ನಲವತ್ತೆಂಟನೇ ಸೈನ್ಯದ ತುಕಡಿಯಿಂದ ಬಂದ ಸೈನಿಕನೊಬ್ಬ ಭಾಷಣ ಮಾಡುತ್ತಿದ್ದ.

ಅವನು ತನ್ನ ಸಂಗಾತಿಗಳನ್ನು ಉದ್ದೇಶಿಸಿ ಗಾಢವೇದನೆಯಿಂದ ಮಾತಾಡುತ್ತಿದ್ದ. ಅವನ ಸುಸ್ತಾದ ಮುಖದಲ್ಲಿ, ಹಾವಭಾವದಲ್ಲಿ ಅದು ವ್ಯಕ್ತವಾಗುತ್ತಿತ್ತು. "ಕಾಮ್ರೇಡ್ಸ್, ಮೇಲೆ ಇರುವ ಜನ ಯಾವಾಗಲೂ ನಮಗೆ ಹೆಚ್ಚಿನ ತ್ಯಾಗ ಮಾಡಿ, ಹೆಚ್ಚಿನ ತ್ಯಾಗ ಮಾಡಿ, ಎಂದು ಕರೆಕೊಡುತ್ತಾರೆ. ಆದರೆ ಯಾರ ಬಳಿ ಎಲ್ಲ ಸೌಭಾಗ್ಯವೂ ಇದೆಯೋ ಅವರ ಕೂದಲು ಸಹ ಕೊಂಕುವುದಿಲ್ಲ."

"ನಾವು ಜರ್ಮನರೊಂದಿಗೆ ಯುದ್ಧದಲ್ಲಿದ್ದೇವೆ. ಇಂಥ ಸಂದರ್ಭದಲ್ಲಿ ಯಾರಾದರೂ ನಮ್ಮ ಮಿಲಿಟರಿ ನಾಯಕತ್ವದಲ್ಲಿ ನೀವೂ ಇರಿ ಎಂದು ಜರ್ಮನರನ್ನು ಕರೆಯಬಹುದೇ ? ನಾವು ಬಂಡವಾಳಗಾರರೊಡನೆಯೂ ಸಂಘರ್ಷದಲ್ಲಿದ್ದೇವೆ, ಆದರೆ ನಮ್ಮ ಸರ್ಕಾರದಲ್ಲಿ ಭಾಗವಹಿಸಿ ಎಂದು ಅವರನ್ನು ಆಹ್ವಾನಿಸುತ್ತಿದ್ದೇವೆ..."

"ನಮ್ಮ ಸೈನಿಕ ಕೇಳುತ್ತಾನೆ, 'ನಾನು ಏತಕ್ಕಾಗಿ ಕಾದಾಡಬೇಕು ದಯಮಾಡಿ ಹೇಳಿ. ದೂರದಲ್ಲೆಲ್ಲೋ, ಯಾರಿಗೋ ಸೇರಿದ ಕಾನ್‌ಸ್ಟಾಂಟಿನೋಪಲ್ ನಗರಕ್ಕೋಸ್ಕರವೋ ಅಥವಾ ನಮ್ಮ ರಷ್ಯಾ ದೇಶಕ್ಕಾಗಿಯೋ ? ನಾನು ಲೂಟಿಕೋರ ಬಂಡವಾಳಗಾರರ ಪರ ಗುದ್ದಾಡಬೇಕೋ ಅಥವಾ ಕ್ರಾಂತಿಯನ್ನು ಕಾಪಾಡುವುದಕ್ಕೋ ? ಇದು ಸ್ಪಷ್ಟವಾದರೆ ನಾನು, ಮರಣದಂಡನೆ ಕೊಟ್ಟುಬಿಟ್ಟಾರೆಂಬ ಭಯದಿಂದಲ್ಲ, ಸ್ವಂತ ಇಚ್ಛೆಯಿಂದಲೇ ಯುದ್ಧಕ್ಕೆ ಧುಮುಕುತ್ತೇನೆ.' "

"ಭೂಮಿ ರೈತರಿಗೆ ಸಿಗುವಂತಾಗಲಿ, ಕಾರ್ಖಾನೆಗಳು ಕಾರ್ಮಿಕರ ನಿಯಂತ್ರಣಕ್ಕೆ ಬರಲಿ ಮತ್ತು ಎಲ್ಲ ಅಧಿಕಾರ ಸೋವಿಯತ್ ಜನಸಮಿತಿಗಳಿಗೆ ದೊರಕಲಿ. ಆಗ ನೋಡಿ ನಾವು ಏತಕ್ಕಾಗಿ ಹೋರಾಡುತ್ತಿದ್ದೇವೆಂಬುದು ನಮಗೆ ಸ್ಪಷ್ಟವಾಗುತ್ತದೆ ಮತ್ತು ನಾವು ಅದಕ್ಕಾಗಿ ಸೆಣೆಸಾಡುತ್ತೇವೆ."

ಸೈನ್ಯದ ಪಾಳೆಯಗಳಲ್ಲಿ, ಕಾರ್ಖಾನೆಗಳಲ್ಲಿ, ಬೀದಿಬದಿಗಳಲ್ಲಿ ಸೈನಿಕರ ಭಾಷಣಗಳು

ನಡೆಯುತ್ತಿದ್ದವು. ಪ್ರತಿಯೊಬ್ಬರೂ ಯುದ್ಧ ಕೊನೆಯಾಗಲಿ ಎಂದು ಆಗ್ರಹಿಸುತ್ತಿದ್ದರು. ಸರ್ಕಾರ ನಿಜಕ್ಕೂ ಪೂರ್ಣಮನಸ್ಸಿನಿಂದ, ಕ್ರಿಯಾಶೀಲವಾಗಿ ಶಾಂತಿಗಾಗಿ ಪ್ರಯತ್ನಿಸದಿದ್ದರೆ, ಸೈನ್ಯವು ರಣಭೂಮಿಯನ್ನು ತ್ಯಜಿಸಿ ಮನೆಗೆ ಮರಳುವುದು ಖಂಡಿತ ಎಂದು ಘೋಷಿಸುತ್ತಿದ್ದರು.

ಎಂಟನೇ ಸೈನ್ಯದಳದ ವಕ್ತಾರ ಹೀಗೆನ್ನುತ್ತಿದ್ದ:

"ನಾವು ತುಂಬ ದುರ್ಬಲರಾಗಿದ್ದೇವೆ. ಪ್ರತಿ ತುಕಡಿಯಲ್ಲೂ ಕೆಲವೇ ಜನ ಉಳಿದಿದ್ದೇವೆ. ಮೇಲಿನವರು ಕೂಡಲೇ ನಮಗೆ ಆಹಾರ, ಬೂಟುಗಳು, ಬೆಚ್ಚಗಿನ ಉಡುಪು, ಬೆಂಬಲಕ್ಕೆ ಇನ್ನಷ್ಟು ಸೈನ್ಯಗಳನ್ನು ಒದಗಿಸದಿದ್ದರೆ, ಇನ್ನು ಸ್ವಲ್ಪಕಾಲದಲ್ಲಿ ಯುದ್ಧಭೂಮಿಯಲ್ಲಿ ಯಾರೂ ಉಳಿದಿರುವುದಿಲ್ಲ. ಒಂದೋ ಶಾಂತಿ, ಇಲ್ಲ, ಅವಶ್ಯ ವಸ್ತುಗಳ ಸರಬರಾಜು, ಸರ್ಕಾರ ಯುದ್ಧವನ್ನು ನಿಲ್ಲಿಸಬೇಕು ಇಲ್ಲದಿದ್ದರೆ ಸೈನ್ಯಕ್ಕೆ ಸೂಕ್ತ ಬೆಂಬಲವನ್ನಾದರೂ ನೀಡಬೇಕು..."

ನಲವತ್ತಾರನೆಯ ಸೈಬಿರಿಯನ್ ಫಿರಂಗಿದಳದ ವಕ್ತಾರ ಹೀಗೆನ್ನುತ್ತಿದ್ದ :

"ಸೈನ್ಯದಲ್ಲಿನ ಅಧಿಕಾರಿಗಳು ನಮ್ಮ ಸಾಮಾನ್ಯ ಸೈನಿಕರ ಸಮಿತಿಗಳೊಂದಿಗೆ ಕೆಲಸ ಮಾಡಲು ಇಷ್ಟಪಡುವುದಿಲ್ಲ. ನಮ್ಮ ಸಂಘಟನಾಕಾರರಿಗೆ, ಪ್ರಚಾರಕರಿಗೆ ಅವರು ಮರಣದಂಡನೆಯ ಶಿಕ್ಷೆಯನ್ನು ವಿಧಿಸುತ್ತಾರೆ. ಈ ಕ್ರಾಂತಿ ವಿರೋಧಿ ಸರ್ಕಾರವೋ ಅಂಥವರಿಗೇ ಬೆಂಬಲ ನೀಡುತ್ತದೆ. ಕ್ರಾಂತಿ ನಮ್ಮ ಪಾಲಿಗೆ ಶಾಂತಿಯನ್ನು ತರುತ್ತದೆ ಎಂದು ನಾವು ಭಾವಿಸಿದ್ದೆವು. ಆದರೆ ಈ ಸರ್ಕಾರ ನಾವು ಅದರ ಬಗ್ಗೆ ಮಾತನಾಡುವುದನ್ನು ನಿಷೇಧಿಸಿದೆ. ಇನ್ನೊಂದು ಕಡೆ ಅದು ನಮಗೆ ಸಾಕಾಗುವಷ್ಟು ಆಹಾರವನ್ನೂ ಒದಗಿಸುವುದಿಲ್ಲ. ಹೋಗಲಿ ಶತ್ರುಗಳೊಡನೆ ಸೆಣೆಸಾಡಲು ಅಗತ್ಯವಿರುವ ಶಸ್ತ್ರಾಸ್ತ್ರಗಳನ್ನಾದರೂ ಒದಗಿಸುತ್ತದೆಯೇ ಎಂದರೆ ಅದೂ ಇಲ್ಲ..."

ರಷ್ಯಾವನ್ನು ಹೊರತುಪಡಿಸಿ ಶಾಂತಿಯನ್ನು ಏರ್ಪಡಿಸಿಕೊಳ್ಳುವ ಯತ್ನವೊಂದು ನಡೆಯುತ್ತಿದೆ ಎಂಬ ಗಾಳಿಸುದ್ದಿ ಯುರೋಪಿನಿಂದ ತೇಲಿಬಂತು. 1917ರ ಬೇಸಿಗೆಯಲ್ಲಿ ಆಸ್ಟ್ರಿಯಾ ದೇಶ ಫ್ರಾನ್ಸ್‌ನೊಂದಿಗೆ ಅಂಥ ಒಂದು ಶಾಂತಿಸೂತ್ರದ ಬಗ್ಗೆ ಪ್ರಸ್ತಾಪಿಸಿತ್ತು. ಎಲ್ಲಾ ಯುದ್ಧನಿರತ ದೇಶಗಳು ಬೃಹತ್ ಆರ್ಥಿಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವಂತಹ ಜನ ಬರ್ನ್ ನಗರದಲ್ಲಿ ಇದಕ್ಕಾಗಿ ಸೇರಿದ್ದರು. ರಷ್ಯಾವನ್ನು ಹೊರಗಿಟ್ಟು ಇಂಥ ರಾಜಿಸೂತ್ರವೊಂದನ್ನು ಮಾಡಿಕೊಳ್ಳುವ ಯತ್ನ ನಡೆದಿತ್ತು.

ಇದು ಜನತೆಯಲ್ಲಿ ಅಸಮಾಧಾನವನ್ನು ಸೃಷ್ಟಿಸಿತ್ತು. ಜೊತೆಗೆ ಯುದ್ಧದಲ್ಲಿ ಮಿತ್ರರಾಷ್ಟ್ರವೆನಿಸಿಕೊಂಡ ಫ್ರಾನ್ಸ್‌ನಲ್ಲಿ ಸೋವಿಯತ್ ಸೈನ್ಯಗಳನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆಯೆಂಬ ವರ್ತಮಾನದಿಂದ ಅತೃಪ್ತಿ ಹೆಚ್ಚಾಯಿತು. ಅಲ್ಲಿ ಇರಿಸಲಾಗಿದ್ದ ಫಸ್ಟ್ ಬ್ರಿಗೇಡ್ ಸೈನಿಕದಳದವರು, ರಷ್ಯಾ ದೇಶದೊಳಗೆ ತಮ್ಮ ಸಂಗಾತಿಗಳು ಮಾಡುತ್ತಿದ್ದ ಹಾಗೆಯೇ ರಣಾಂಗಣದಲ್ಲಿ ಅಧಿಕಾರಿಗಳ ಬದಲು ಸೈನಿಕ ಸಮಿತಿಗಳನ್ನು ಆಯ್ಕೆ ಮಾಡಿ ಕೊಳ್ಳಲು ಯತ್ನಿಸಿದರು. ಇದನ್ನು ವಿಫಲಗೊಳಿಸಲು ಹೊಸ ತಂತ್ರವೊಂದು ಶುರುವಾಯಿತು.

ಗ್ರೀಸ್‌ನ ಬಳಿಯಲ್ಲಿದ್ದ ಸಲೋನಿಕಾ ರಣಾಂಗಣವು ಭೀಕರ ಅವ್ಯವಸ್ಥೆ ಹಾಗೂ ಸೋಲಿನ ತಾಣವಾಗಿತ್ತು. ಅಲ್ಲಿಗೆ ಈ ಪಡೆಗಳನ್ನು ಕಳುಹಿಸುವ ಯತ್ನ ನಡೆದಾಗ ಸೈನಿಕರು

ತಾವು ಅಲ್ಲಿಗೆ ಬಲಿಪಶುಗಳಾಗಿ ಹೋಗುವುದಿಲ್ಲವೆಂದೂ ತಮ್ಮನ್ನು ರಷ್ಯಾಗೆ ವಾಪಸ್ ಕಳಿಸಬೇಕೆಂದೂ ಹಠಹಿಡಿದರು. ಅಧಿಕಾರಿಗಳು ಅವರನ್ನು ಸುತ್ತುವರೆದು ಉಪವಾಸ ಕೆಡವಿದರು. ಆನಂತರ ಫಿರಂಗಿದಳವನ್ನು ಕರೆಸಿ ಗುಂಡುಹಾರಿಸಿ ಅನೇಕರನ್ನು ಕೊಲ್ಲಲಾಯಿತು. ಶರಣಾಗತರಾದಮೇಲೂ ಇನ್ನೂರು ಜನರನ್ನು ಪೂರ್ವಯೋಜಿತ ರೀತಿಯಲ್ಲಿ ತಣ್ಣಗೆ ಕೊಂದುಹಾಕಿದರು.

ಮಾರಿನ್‌ಸ್ಕಿ ಅರಮನೆ ಎಂಬಲ್ಲಿ ಬಿಳಿಯ ಅಮೃತ ಶಿಲೆಗಳಿಂದಲೂ, ಕೆಂಪುಕಲ್ಲುಗಳಿಂದಲೂ ಮಾಡಿದ ಸುಂದರವಾದ ಸಭಾಂಗಣವಿದೆ. ಅಲ್ಲಿ ಗಣರಾಜ್ಯ ಮಂಡಳಿಯು ಸಭೆ ಸೇರಿತ್ತು. ಅಕ್ಟೋಬರ್ 29ರಂದು ನಾನು ಅಲ್ಲಿಗೆ ಹೋದೆ. ಅಲ್ಲಿ ರಷ್ಯಾದ ವಿದೇಶಾಂಗ ಮಂತ್ರಿ ತೆರೆಶ್ಚೆಂಕೊ ಮಾತನಾಡುವವನಿದ್ದ. ಇಡೀ ದೇಶದಲ್ಲಿ ಶಾಂತಿಗಾಗಿ ಹಂಬಲಿಸುತ್ತಾ ನಿತ್ರಾಣರಾಗಿದ್ದ ಜನತೆ ಆತ ಘೋಷಿಸಲಿದ್ದ ವಿದೇಶಾಂಗ ನೀತಿಯ ಬಗ್ಗೆ ತೀವ್ರ ಕಾತುರತೆಯಿಂದ ಕಾಯುತ್ತಿದ್ದರು.

ಅವನೋ ಒಳ್ಳೆ ವೇಷಭೂಷಣ ಹಾಕಿಕೊಂಡಿದ್ದ, ನುಣ್ಣನೆಯ ಮುಖದ ಎತ್ತರವಾದ ತರುಣ. ಅವನು ಎಲ್ಲಿಯೂ ಸಿಕ್ಕಿಹಾಕಿಕೊಳ್ಳದಂತೆ ಬದ್ಧತೆಯಿಲ್ಲದ ಜಾಣತನದ ಮಾತುಗಳನ್ನು ಉದುರಿಸುತ್ತಿದ್ದ. ಎಲ್ಲವೂ ಅರ್ಥಹೀನ ಆಡಂಬರದ ಮಾತುಗಳಷ್ಟೇ. 'ಮಿತ್ರರಾಷ್ಟ್ರಗಳ ನೆರವಿನೊಂದಿಗೆ ಜರ್ಮನಿಯನ್ನು ಮಟ್ಟ ಹಾಕಿಬಿಡುತ್ತೇವೆ', 'ರಷ್ಯಾದ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುತ್ತೇವೆ', 'ಸ್ಕೊಬೆಲೆವ್‌ನ ನಕಾಜ್ ಸೂತ್ರದಿಂದ ತುಂಬ ಮುಜುಗರವಾಗಿದೆ' – ಇವೇ ಅವನು ಉದುರಿಸುತ್ತಿದ್ದ ಅಣಿಮುತ್ತುಗಳು. ಅವನು ಕಡೆಗೂ ಉಸುರಿದ ಸಾರಾಂಶ ಹೀಗಿತ್ತು:

"ರಷ್ಯಾ ಒಂದು ಮಹಾನ್ ಶಕ್ತಿ. ಏನೇ ಆಗಲಿ ರಷ್ಯಾ ಒಂದು ಮಹಾನ್ ಶಕ್ತಿಯಾಗೇ ಉಳಿಯುತ್ತದೆ. ನಾವು ಮಾತೃಭೂಮಿಯನ್ನು ರಕ್ಷಿಸಬೇಕು. ನಾವೊಂದು ಮಹಾನ್ ಆದರ್ಶದ ಸಂರಕ್ಷಕರು. ಒಂದು ಮಹಾನ್ ಶಕ್ತರಾಷ್ಟ್ರದ ಮಕ್ಕಳು ಎಂಬುದನ್ನು ತೋರಿಸಿಕೊಡಬೇಕು."

ಇದರಿಂದ ಯಾರಿಗೂ ತೃಪ್ತಿಯಾಗಲಿಲ್ಲ. ಪ್ರತಿಗಾಮಿಗಳಿಗೆ 'ಬಲವಾದ' ಸಾಮ್ರಾಜ್ಯಶಾಹಿ ನೀತಿ ಬೇಕಿತ್ತು. ಜನತಂತ್ರವಾದ ಪಕ್ಷಗಳಿಗೆ ಸರ್ಕಾರವು ಶಾಂತಿಗಾಗಿ ಶ್ರಮಿಸುತ್ತದೆ ಎಂಬ ಆಶ್ವಾಸನೆ ಬೇಕಿತ್ತು. ನಾನು ಪೆತ್ರೋಗ್ರಾಡ್ ನಗರದ ಬೋಲ್ಶೆವಿಕರ ರೊಬೊಚಿ ಸೊಲ್ದಾತ್ (ಎಂದರೆ 'ಕಾರ್ಮಿಕ ಸೈನಿಕ') ಪತ್ರಿಕೆಯಲ್ಲಿ ಬಂದ ಸಂಪಾದಕೀಯವನ್ನು ಉಲ್ಲೇಖಿಸುತ್ತೇನೆ.

## ರಣಾಂಗಣದ ಯೋಧರಿಗೆ ಸರ್ಕಾರದ ಉತ್ತರ

ತುಟಿಯೇ ಬಿಚ್ಚದ ನಮ್ಮ ಸಚಿವರಲ್ಲೊಬ್ಬರಾದ ಶ್ರೀಮಾನ್ ತೆರೆಶ್ಚೆಂಕೊ ಯುದ್ಧಭೂಮಿಯಲ್ಲಿರುವ ಸೈನಿಕರಿಗೆ ಕೆಳಕಂಡಂತೆ ಉತ್ತರಿಸಿದ್ದಾರೆ.

1. *ನಾವು ಮಿತ್ರರಾಷ್ಟ್ರಗಳೊಂದಿಗೆ ದೃಢವಾಗಿ ಒಗ್ಗೂಡಿದ್ದೇವೆ. (ಗಮನಿಸಿ ಅಲ್ಲಿನ ಜನಸಾಮಾನ್ಯರೊಂದಿಗೆ ಅಲ್ಲ, ಜನವಿರೋಧಿ ಸರ್ಕಾರಗಳೊಂದಿಗೆ)*
2. *ಚಳಿಗಾಲದಲ್ಲಿ ಯುದ್ಧ ಮುಂದುವರೆಸುವ ಸಾಧ್ಯಾಸಾಧ್ಯತೆಯ ಬಗ್ಗೆ ಚರ್ಚೆ ನಡೆಸಿ ಉಪಯೋಗವಿಲ್ಲ. ಅದನ್ನು ಮಿತ್ರರಾಷ್ಟ್ರಗಳ ಸರ್ಕಾರಗಳು ನಿರ್ಧರಿಸುತ್ತವೆ.*
3. *ಜುಲೈ ಒಂದರಂದು ಶುರುಮಾಡಿದ ಯುದ್ಧದಿಂದ ಉಪಯೋಗವಾಗಿದೆ.*

*ಹರ್ಷವಾಗಿದೆ. (ಅದರಿಂದ ಉಂಟಾದ ಪರಿಣಾಮಗಳ ಬಗ್ಗೆ ಒಂದು ಮಾತೂ ಹೇಳಿಲ್ಲ !)*

4. *ಮಿತ್ರರಾಷ್ಟ್ರಗಳಿಗೆ ನಮ್ಮ ಬಗ್ಗೆ ಕಾಳಜಿ ಇಲ್ಲ ಎನ್ನಲಾಗದು. ಅವರು ಮಾಡಿದ ಅನೇಕ ಪ್ರಮುಖ ಘೋಷಣೆಗಳು ನಮ್ಮ ಕೈಸೇರಿವೆ.*
   *(ಘೋಷಣೆಗಳೇ? ಮಾಡಿತೋರಿಸುವುದು ಇಲ್ಲವೇ? ಬ್ರಿಟಿಷ್ ನೌಕಾದಳದ ವರ್ತನೆ ನಮಗೆ ಗೊತ್ತಿಲ್ಲವೇ? ರೀಗಾ ಕದನದಲ್ಲಿ ಹೇಗಿದ್ದರೂ ಇನ್ನು ರಷ್ಯಾ ಕಥೆ ಮುಗಿದ ಹಾಗೆ ಎಂದುಕೊಂಡು ನಮಗೆ ಕೈಕೊಟ್ಟು ಓಡಲಿಲ್ಲವೇ? ಝಾರ್‌ನ ಕಾಲದಲ್ಲಿ ಮುಖ್ಯ ಸೈನ್ಯಾಧಿಕಾರಿಯಾಗಿದ್ದ, ಭ್ರಷ್ಟ ಮತ್ತು ದ್ರೋಹಿಯಾದ, ಈಗ ಗಡಿಪಾರಾಗಿರುವ ಜನರಲ್ ಗುರ್ಕೊಗೆ ಬ್ರಿಟಿಷ್ ಸರ್ಕಾರ ಸ್ವಾಗತ ನೀಡಿ ಸನ್ಮಾನಿಸಿಲ್ಲವೇ? ಸಚಿವರು ಈ ಯಾವ ಸಂಗತಿಯ ಬಗ್ಗೆಯೂ ಮಾತನಾಡುತ್ತಿಲ್ಲ.)*

5. *ಸ್ಕೊಬೆಲೆವ್‌ನ ನಕಾಜ್ (ಸೂಚನೆಗಳು) ಕೆಟ್ಟದಾಗಿವೆ. ಮಿತ್ರರಾಷ್ಟ್ರಗಳಿಗೆ ಅದು ಇಷ್ಟವಿಲ್ಲ. ಮಿತ್ರರಾಷ್ಟ್ರಗಳ ಸಮ್ಮೇಳನದಲ್ಲಿ ನಾವೆಲ್ಲಾ ಒಂದೇ ದನಿಯಲ್ಲಿ ಮಾತನಾಡಬೇಕು.*

*ನೀವು ಕೇಳಬಹುದು ಸಚಿವರು ಹೇಳಲಿಕ್ಕಿದ್ದದ್ದು ಇಷ್ಟೇನೇ? ಉತ್ತರ : ಹೌದು ಇಷ್ಟೇನೆ, ಹಾಗಾದರೆ ಪರಿಹಾರ ಏನು? ದ್ರೋಹ ಬಗೆಯುತ್ತಿರುವ ಮಿತ್ರರಾಷ್ಟ್ರಗಳಲ್ಲಿ ತೆರೆಶ್ಚೆಂಕೊನಂಥ ಜನಗಳಲ್ಲಿ ನಂಬಿಕೆ ಇಡಿ. ಶಾಂತಿ ಬರುವುದು ಯಾವಾಗ? ನಮ್ಮ ಮಿತ್ರರಾಷ್ಟ್ರಗಳು ದಯಮಾಡಿ ಅನುಮತಿ ಕೊಟ್ಟಾಗ !*

*ಯುದ್ಧಭೂಮಿಯಲ್ಲಿ ಜೀವನ್ಮರಣ ಹೋರಾಟದಲ್ಲಿರುವ ನಮ್ಮ ಯೋಧರಿಗೆ ಸರ್ಕಾರ ಕೊಡುವ ಉತ್ತರ ಇಂಥದು.*

ಹೀಗಿದ್ದ ರಷ್ಯಾದ ರಾಜಕೀಯ ರಂಗದ ಪರದೆಯ ಹಿಂದೆ ಇನ್ನೊಂದು ಅಮಂಗಳಕರ ಶಕ್ತಿಯ ಉದಯವಾಯಿತು. ಅವರೆ ಕೊಸ್ಸಾಕರು. ಉಕ್ರೇನ್ ಮತ್ತು ದಕ್ಷಿಣ ರಷ್ಯಾದ ಕೊಸ್ಸಾಕರು, ಯುದ್ಧದಲ್ಲೂ ಅಶ್ವಾರೋಹಣೆಯಲ್ಲೂ ನಿಷ್ಣಾತರು. ಅವರ ನಿಲುವು ಬದಲಾಗತೊಡಗಿದ್ದೇ ಆತಂಕಕ್ಕೆ ಕಾರಣ. ಖ್ಯಾತ ಕ್ರಾಂತಿಕಾರಿ ಲೇಖಕ ಮ್ಯಾಕ್ಸಿಂ ಗಾರ್ಕಿಯವರು ನಡೆಸುತ್ತಿದ್ದ 'ನೊವಾಯಾ ಜಿಝ್ನ್' (ಹೊಸ ಬದುಕು) ಪತ್ರಿಕೆ ಹೀಗೆ ವ್ಯಾಖ್ಯಾನ ಮಾಡಿತು.

*"ಕ್ರಾಂತಿಯ ಆರಂಭದಲ್ಲಿ ಕೊಸಾಕರು ಜನಸಮುದಾಯದ ಮೇಲೆ ಗುಂಡುಹಾರಿಸಲು ಒಪ್ಪಲಿಲ್ಲ. ಜನರಲ್ ಕೊರ್ನಿಲೊವ್‌ನು ಪೆತ್ರೋಗ್ರಾಡ್ ನಗರದ ಮೇಲೆ ದಂಡೆತ್ತಿ ಬಂದಾಗಲು ಅವರು ಅವನನ್ನು ಅನುಸರಿಸಲು ಸಮ್ಮತಿಸಲಿಲ್ಲ. ಆದರೆ ಸಕ್ರಿಯವಾಗಿ ಅಲ್ಲದಿದ್ದರೂ ಒಂದು ರೀತಿಯಲ್ಲಿ ಕ್ರಾಂತಿಗೆ ನಿಷ್ಠೆಯನ್ನು ತೋರಿಸುತ್ತಿದ್ದ ತಮ್ಮ ಧೋರಣೆಯನ್ನು ಕೊಸಾಕರು ಈಗ ಕೈಬಿಟ್ಟಿದ್ದಾರೆ. ಈಗ ಅವರು ಕ್ರಾಂತಿಯ ವಿರುದ್ಧ ಸಕ್ರಿಯ ರಾಜಕೀಯ ಚಟುವಟಿಕೆಗೆ ಇಳಿದಿದ್ದಾರೆ. ಕ್ರಾಂತಿಯ ರಂಗಮಂಚದಲ್ಲಿ ಹಿನ್ನೆಲೆಯಲ್ಲಿದ್ದವರು ಈಗ ಭೂಮಿಕೆಯ ಮುಂಭಾಗಕ್ಕೆ ಬಂದಿದ್ದಾರೆ."*

ಕೊರ್ನಿಲೊವ್ ಪ್ರಕರಣದಲ್ಲಿ ಭಾಗಿಯಾಗಿದ್ದನೆಂಬ ಕಾರಣಕ್ಕಾಗಿ ಡಾನ್ ನದಿಯ ತೀರದ ಕೊಸ್ಸಾಕರ ನಾಯಕನಾದ ಕಲೆಡಿನ್‌ನನ್ನು ಹಂಗಾಮಿ ಸರ್ಕಾರವು ಅವನ ಸ್ಥಾನದಿಂದ ವಜಾ ಮಾಡಿತ್ತು. ಆದರೆ ಅವನು ರಾಜೀನಾಮೆ ನೀಡಲು ಒಪ್ಪಲೇ ಇಲ್ಲ.

ಡಾನ್ ಕೊಸ್ಸಾಕ್ ಪ್ರದೇಶದ ಮುಖ್ಯ ನಗರ ನೊವೊಚೆರ್‌ಕಾಸ್ಕ್ ಬಳಿ ಮೂರು ಬೃಹತ್ ಗಾತ್ರದ ಸೈನ್ಯಗಳೊಂದಿಗೆ ತಳವೂರಿದ್ದ. ಅಲ್ಲಿದ್ದುಕೊಂಡು ಪಿತೂರಿಗಳನ್ನು ರೂಪಿಸುತ್ತಾ ಬೆದರಿಸುತ್ತಾ ಇದ್ದ. ಅವನ ಶಕ್ತಿ ಎಷ್ಟು ವಿಪರೀತವಾಗಿತ್ತೆಂದರೆ ಸರ್ಕಾರ ಅವನ ಅವಿಧೇಯತೆಯನ್ನು ಗಮನಿಸಿಯೇ ಇಲ್ಲವೇನೋ ಎಂಬಂತೆ ಸುಮ್ಮನೆ ಕುಳಿತಿತ್ತು. ಅಷ್ಟೇ ಅಲ್ಲ ಕೊಸ್ಸಾಕರ ಸೈನ್ಯಗಳ ಒಕ್ಕೂಟದ ಮಂಡಳಿಗೆ ಮಾನ್ಯತೆಯನ್ನು ನೀಡಬೇಕಾಯಿತು. ಸಾಲದೆಂಬಂತೆ ಅವರನ್ನು ಖುಷಿಪಡಿಸಲು ಕೊಸ್ಸಾಕರ ನಡುವೆಯೇ ಚಿಗುರೊಡೆದಿದ್ದ ಸೋವಿಯತ್‌ನ್ನು ಕಾನೂನುಬಾಹಿರ ಎಂದು ಘೋಷಿಸಬೇಕಾಯಿತು...

ಅಕ್ಟೋಬರ್ ತಿಂಗಳ ಆರಂಭದಲ್ಲಿ ಕೊಸ್ಸಾಕರ ನಿಯೋಗವೊಂದು ಪ್ರಧಾನಿ ಕೆರೆನ್‌ಸ್ಕಿಯನ್ನು ಭೇಟಿ ಮಾಡಿತು. ಕಲೆಡಿನ್‌ನ ಮೇಲಿರುವ ಎಲ್ಲಾ ಆರೋಪಗಳನ್ನು ಕೈಬಿಡಲೇಬೇಕೆಂದು ಅವರು ದುರಹಂಕಾರದಿಂದ ಒತ್ತಾಯಿಸಿದರು. 'ಸೋವಿಯತ್‌ಗಳಿಗೆ ಬೆಂಬಲ ನೀಡಬೇಡ' ಎಂದು ಪ್ರಧಾನಿಗೇ ತಾಕೀತು ಮಾಡಿದರು. ಕೆರೆನ್‌ಸ್ಕಿ, ಕಲೆಡಿನ್‌ನನ್ನು ಬಿಡಲು ಒಪ್ಪಿದ. "ಹಂಗಾಮಿ ಸರ್ಕಾರವು ಸೋವಿಯತ್‌ಗಳ ಮೇಲೆ ಅವಲಂಬಿತವಾಗಿಲ್ಲ. ಅವರು ಅಸ್ತಿತ್ವದಲ್ಲಿರುವುದೇ ನಮ್ಮ ಪಾಲಿಗೆ ವಿಷಾದದ ಸಂಗತಿ" ಎಂದು ಅವರಿಗೆ ಸಮಾಧಾನಪಡಿಸಿದ.

ಅದೇ ಸಮಯದಲ್ಲಿ ಕೊಸ್ಸಾಕ್ ನಿಯೋಗವೊಂದು ಬ್ರಿಟಿಷ್ ರಾಯಭಾರಿಯನ್ನು ಭೇಟಿಯಾಗಿ ತಾವು 'ಸ್ವತಂತ್ರ ಕೊಸ್ಸಾಕ್ ಜನಾಂಗದ ಪ್ರತಿನಿಧಿಗಳು' ಎಂದು ತಮ್ಮನ್ನೇ ಬಣ್ಣಿಸಿಕೊಂಡರು.

ಡಾನ್ ಪ್ರದೇಶದಲ್ಲಿ ಕೊಸ್ಸಾಕ್ ಗಣರಾಜ್ಯ ಎಂದು ಕರೆಯಲ್ಪಡುವಂಥ ಆಡಳಿತವೊಂದು ಅಸ್ತಿತ್ವಕ್ಕೆ ಬಂದುಬಿಟ್ಟಿತು. ಉಕ್ರೇನ್‌ನ ಇನ್ನೊಂದು ಪ್ರದೇಶವಾಗಿದ್ದ ಕುಬಾನ್ ಪ್ರಾಂತ್ಯವು ತನ್ನನ್ನೇ ಸ್ವತಂತ್ರ ಕೊಸ್ಸಾಕ್ ರಾಷ್ಟ್ರ ಎಂದು ಘೋಷಿಸಿಕೊಂಡಿತು. ರೊಸ್ಟೊವ್-ಆನ್-ಡಾನ್ ಮತ್ತು ಎಕಟೆರಿನ್‌ಬರ್ಗ್ ನಗರಗಳ ಸೋವಿಯತ್‌ಗಳನ್ನು ಶಸ್ತ್ರಸಜ್ಜಿತ ಕೊಸ್ಸಾಕರು ವಿಸರ್ಜಿಸಿಬಿಟ್ಟರು. ಖಾರ್ಕೊವ್ ಪಟ್ಟಣದಲ್ಲಿದ್ದ ಕಲ್ಲಿದ್ದಲು ಗಣಿಕಾರ್ಮಿಕರ ಕೇಂದ್ರ ಕಚೇರಿಯ ಮೇಲೆ ದಾಳಿ ನಡೆಯಿತು. ಕೊಸ್ಸಾಕ್ ಚಳವಳಿಯ ಸ್ವರೂಪವೇ ಸಮಾಜವಾದದ ವಿರುದ್ಧದ ಸಶಸ್ತ್ರ ಬಂಡಾಯ. ಅದರ ನಾಯಕರೆಲ್ಲಾ ಕಲೆಡಿನ್ ಮತ್ತು ಕೊರ್ನಿಲೊವ್‌ರಂತೆಯೇ ಕುಲೀನರು, ಶ್ರೀಮಂತ ಭೂಮಾಲಿಕರು. ಇವರಿಗೆ ಬೆಂಬಲ ಸಿಕ್ಕಿದ್ದು ಮಾಸ್ಕೊ ನಗರದ ಪ್ರಬಲ ಬ್ಯಾಂಕ್ ಉದ್ಯಮಿಗಳು ಹಾಗೂ ವರ್ತಕರಿಂದ.

ಹಳೆಯ ರಷ್ಯಾ ವೇಗವಾಗಿ ಛಿದ್ರಛಿದ್ರವಾಗುತ್ತಿತ್ತು. ಉಕ್ರೇನ್‌ನಲ್ಲಿ, ಪೋಲೆಂಡ್‌ನಲ್ಲಿ, ಫಿನ್‌ಲೆಂಡ್‌ನಲ್ಲಿ, ಬಿಳಿರಷ್ಯಾ (ಹೆಚ್ಚು ಕಮ್ಮಿ ಇಂದಿನ ಬೆಲಾರಸ್ ರಾಷ್ಟ್ರ)ದಲ್ಲಿ ಪ್ರತ್ಯೇಕ ರಾಷ್ಟ್ರವನ್ನು ರಚಿಸಿಕೊಳ್ಳುತ್ತೀವಿ ಎಂಬ ಚಳುವಳಿ ಬಲವಾಗುತ್ತಾ ಹೋಯಿತು. ಅಲ್ಲಿದ್ದ ಸರ್ಕಾರಗಳೆಲ್ಲಾ ಆಸ್ತಿವಂತ ವರ್ಗಗಳ ಕೈಯಲ್ಲಿದ್ದಂಥವು. ಅವು ಪೆತ್ರೋಗ್ರಾಡ್‌ನ ಕೇಂದ್ರ ಸರ್ಕಾರದ ಆಜ್ಞೆಗಳನ್ನು ಧಿಕ್ಕರಿಸಿ ಸ್ವಾಯತ್ತತೆಯನ್ನು ಘೋಷಿಸಿಕೊಂಡವು. ಫಿನ್‌ಲೆಂಡ್, ಹಂಗಾಮಿ ಸರ್ಕಾರಕ್ಕೆ ಸಾಲ ನೀಡಲು ಒಪ್ಪದೆ, ತನ್ನ ಪ್ರದೇಶದಲ್ಲಿದ್ದ ರಷ್ಯನ್ ಸೇನೆಯನ್ನು ವಾಪಸ್ ಕರೆದುಕೊಳ್ಳಬೇಕೆಂದು ಒತ್ತಾಯಿಸಿತು. ಉಕ್ರೇನ್‌ನ ರಾಜಧಾನಿ ಕೀವ್‌ನಗರದಲ್ಲಿದ್ದ ರಾಡಾ ಎಂಬ ಅಲ್ಲಿನ ಸಂಸತ್ತು ತನ್ನ ಗಡಿಗಳನ್ನು ವಿಸ್ತರಿಸುವ ನಿರ್ಣಯ ಕೈಗೊಂಡಿತು.

ಅವರು ಉರಾಲ್ ಪರ್ವತಗಳವರೆಗೂ ಇದ್ದ ಎಲ್ಲಾ ದಕ್ಷಿಣ ರಷ್ಯದ ಫಲವತ್ತಾದ ಭೂಮಿಯನ್ನು ಕಬಳಿಸಿದರು. ತಮ್ಮದೇ ರಾಷ್ಟ್ರೀಯ ಸೈನ್ಯವನ್ನು ರಚಿಸಿಕೊಂಡರು. ಅಲ್ಲಿನ ಪ್ರಧಾನಿಯಾದ ವಿನ್ನಿಚೆಂಕೊ ಜರ್ಮನಿಯೊಂದಿಗೆ ಪ್ರತ್ಯೇಕವಾಗಿ ರಾಜಿಮಾಡಿಕೊಳ್ಳಲು ಅಣಿಯಾಗಿದ್ದ. ಹಂಗಾಮಿ ಸರ್ಕಾರ ಇದನ್ನೆಲ್ಲಾ ನೋಡಿಯೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿತ್ತು. ಸೈಬೀರಿಯಾ ಮತ್ತು ಕಾಕಸಸ್ ಪ್ರದೇಶಗಳು ಪ್ರತ್ಯೇಕ ಸಂವಿಧಾನ ಸಭೆಗಳನ್ನು ರಚಿಸಿಕೊಳ್ಳುತ್ತೇವೆಂದು ಆಗ್ರಹಪಡಿಸಿದವು. ಈ ಎಲ್ಲಾ ದೇಶಗಳಲ್ಲಿಯೂ ಅಲ್ಲಿನ ಆಸ್ತಿವಂತ ವರ್ಗಗಳ ಪ್ರತಿನಿಧಿಯಾದ ಆಳ್ವಿಕರಿಗೂ, ಅಲ್ಲಿನ ಕಾರ್ಮಿಕ – ಸೈನಿಕ ಸೋವಿಯತ್ ಜನಸಮಿತಿಗಳಿಗೂ ನಡುವೆ ತೀಕ್ಷ್ಣವಾದ ಹೋರಾಟ ಶುರುವಾಯಿತು.

ದಿನದಿಂದ ದಿನಕ್ಕೆ ಪರಿಸ್ಥಿತಿ ಕೈಮೀರಿ ಹೋಗುತ್ತಿತ್ತು. ಲಕ್ಷಾಂತರ ಸೈನಿಕರು ರಣಾಂಗಣವನ್ನು ತೊರೆದು ದೇಶದಾದ್ಯಂತ ಗೊತ್ತುಗುರಿಯಿಲ್ಲದ ಪ್ರವಾಹದಂತೆ ಸಂಚರಿಸುತ್ತಿದ್ದರು. ಟಾಂಬೊವ್, ಟ್ವೇರ್ ಪ್ರದೇಶಗಳಲ್ಲಿ ರೈತರು ಸರ್ಕಾರದ ದಮನಕಾರಿ ಕ್ರಮಗಳಿಂದ ರೋಸಿಹೋದರು. ಕಡೆಗೆ ಅವರು ಶ್ರೀಮಂತ ಜಮೀನ್ದಾರರ ಹೊಲಗಳಿಗೂ ಭವನಗಳಿಗೂ ಬೆಂಕಿಹಚ್ಚಿಬಿಟ್ಟರು. ಡಾನ್‌ನ ಕಲ್ಲಿದ್ದಲು ಗಣಿಗಳಲ್ಲಿ, ಮಾಸ್ಕೊ ಹಾಗೂ ಒಡೆಸ್ಸಾ ನಗರಗಳಲ್ಲಿ ಬೃಹತ್ ಮುಷ್ಕರಗಳು ಆರಂಭವಾದವು. ಸಾರಿಗೆ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ಸೈನ್ಯ ಹಸಿವಿನಿಂದ ಬಳಲಿತ್ತು. ಮಹಾನಗರಗಳಲ್ಲಿ ತಿನ್ನಲು ಬ್ರೆಡ್ ಸಿಗುತ್ತಿರಲಿಲ್ಲ.

ಜನತಾಂತ್ರಿಕ ಶಕ್ತಿಗಳು ಮತ್ತು ಕ್ರಾಂತಿವಿರೋಧಿ ಪ್ರತಿಗಾಮಿಶಕ್ತಿಗಳು ಈ ಎರಡರ ನಡುವೆ ಸಿಕ್ಕಿಹಾಕಿಕೊಂಡ ಸರ್ಕಾರವು ಏನೂ ಮಾಡಲಾಗದೆ ನಿಷ್ಕ್ರಿಯವಾಗುತ್ತಿತ್ತು. ಪ್ರತಿಕ್ರಿಯಿಸಲೇಬೇಕು ಎನ್ನುವಂಥ ಒತ್ತಡಕ್ಕೆ ಒಳಗಾದಾಗ ಅದು ಖಂಡಿತವಾಗಿ ಆಸ್ತಿವಂತ ವರ್ಗಗಳನ್ನೇ ಬೆಂಬಲಿಸುತ್ತಿತ್ತು. ಬಂಡೆದ್ದಿದ್ದ ರೈತರನ್ನು ಹದ್ದುಬಸ್ತಿನಲ್ಲಿಡಲು ಕ್ರಾಂತಿವಿರೋಧಿ ಕೊಸ್ಸಾಕ್ ದಳಗಳನ್ನು ಕಳಿಸಲಾಗುತ್ತಿತ್ತು. ತಾಷ್ಕೆಂಟ್ ನಗರದಲ್ಲಿ ಸರ್ಕಾರಿ ಅಧಿಕಾರಿಗಳು ಸೋವಿಯತ್‌ನ್ನು ತುಳಿದಹಾಕಿದರು. ಪೆತ್ರೋಗ್ರಾಡ್‌ನಲ್ಲಿ ಆರ್ಥಿಕ ಮಂಡಳಿ ಸಭೆ ಸೇರುತ್ತಿತ್ತು. ಅದರ ಉದ್ದೇಶ ಹಾಳುಬಿದ್ದಿದ್ದ ದೇಶದ ಅರ್ಥವ್ಯವಸ್ಥೆಗೆ ಮರುಹುಟ್ಟು ನೀಡುವುದು. ಸಭೆಯಲ್ಲಿ ಬಂಡವಾಳಗಾರರ ಹಿತಾಸಕ್ತಿಗಳು ಹಾಗೂ ಕಾರ್ಮಿಕರ ಹಿತಾಸಕ್ತಿಗಳು ಸತತವಾಗಿ ಘರ್ಷಣೆಗೆ ಇಳಿಯುತ್ತಿದ್ದವು. ಇದರಿಂದಾಗಿ ಮಂಡಳಿಯ ಕೆಲಸ ಸ್ತಬ್ಧವಾಯಿತು. ಕಡೆಗೆ ಕೆರೆನ್‌ಸ್ಕಿ ಮಂಡಳಿಯನ್ನೇ ವಿಸರ್ಜಿಸಿಬಿಟ್ಟ. ಇನ್ನೊಂದು ಕಡೆ ಮಾಜಿ ಸೈನ್ಯಾಧಿಕಾರಿಗಳು ಕ್ಯಾಡೆಟ್ ಪಕ್ಷದ ಬೆಂಬಲದೊಂದಿಗೆ ಸೈನ್ಯದಲ್ಲೂ ನೌಕಾದಳದಲ್ಲೂ ಶಿಸ್ತು ತರಲು ಅತ್ಯಂತ ಕಠೋರ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಲಾರಂಭಿಸಿದರು. ಆದರೆ ಇದಕ್ಕೆ ವಿರುದ್ಧವಾದ ಅಭಿಪ್ರಾಯವೂ ಇತ್ತು. ಆಗ ನೌಕಾ ಇಲಾಖೆಗೆ ಸಚಿವರಾಗಿದ್ದವರು ಅಡ್ಮಿರಲ್ ವರ್‌ಡರೆವ್‌ಸ್ಕಿ ಎಂಬುವರು. ಯುದ್ಧ ಸಚಿವರು ಜನರಲ್ ವರ್ಖೊವ್‌ಸ್ಕಿ ಎಂಬುವರು. ಇಬ್ಬರೂ ಸಹ ಈಗ ಬೇಕಾದದ್ದು ಒಂದು ಹೊಸ ರೀತಿಯ, ಸ್ವಇಚ್ಛೆಯ, ಜನತಾಂತ್ರಿಕ ಶಿಸ್ತು, ಇದನ್ನು ಜಾರಿಗೆ ತರಲು ಭೂಸೇನೆ ಹಾಗೂ ನೌಕಾದಳದ ಸೈನಿಕರ ಸಮಿತಿಗಳ ಸಹಕಾರವನ್ನು ಪಡೆದುಕೊಳ್ಳ ಬೇಕಾಗುತ್ತದೆ, ಇದು ಮಾತ್ರವೇ ಭೂಸೇನೆಯನ್ನು ಹಾಗೂ

ನೌಕಾದಳವನ್ನು ಉಳಿಸುತ್ತದೆ ಎಂದು ವಾದಿಸಿದರು. ಆದರೆ ಅವರ ಶಿಫಾರಸ್ಸುಗಳನ್ನು ಉಪೇಕ್ಷಿಸಲಾಯಿತು.

ಜನತೆಯ ಆಕ್ರೋಶದ ಅಗ್ನಿಗೆ ತುಪ್ಪ ಸುರಿಯಲೇಬೇಕೆಂದು ಪ್ರತಿಗಾಮಿಗಳು ನಿರ್ಧರಿಸಿದಂತಿತ್ತು. ಬಂಡುಕೋರ ಕೊರ್ನಿಲೊವ್‌ನ ವಿಚಾರಣೆ ಸಮೀಪಿಸುತ್ತಿತ್ತು. ಬಂಡವಾಳಗಾರರ ಪತ್ರಿಕೆಗಳು ಅವನನ್ನು ಬಹಿರಂಗವಾಗಿಯೇ ಬೆಂಬಲಿಸಲಾರಂಭಿಸಿದವು. ಅವನನ್ನು 'ಮಹಾನ್ ದೇಶಭಕ್ತ ರಷ್ಯನ್' ಎಂದು ಕೆಲವರು ಹೊಗಳಿದರು. ಇನ್ನು ಕೆಲವರು ಕೊರ್ನಿಲೊವ್, ಕಲೆಡಿನ್ ಹಾಗೂ ಕೆರೆನ್‌ಸ್ಕಿ ಇವರುಗಳ ಜಂಟಿ ಸರ್ವಾಧಿಕಾರವೇ ಪರಿಹಾರ ಎಂದೂ ಘೋಷಿಸಿಬಿಟ್ಟರು.

ಒಂದು ದಿನ ಗಣರಾಜ್ಯ ಮಂಡಳಿಯ ಅಧಿವೇಶನ ನಡೆಯುತ್ತಿದ್ದ ಸಭಾಭವನದ ಪರ್ತಕರ್ತರ ಗ್ಯಾಲರಿಯಲ್ಲಿ ನಾನು ಬುರ್ಟ್ಸೆವ್ ಎಂಬ ಬುದ್ಧಿಜೀವಿಯೊಡನೆ ಮಾತನಾಡುತ್ತಿದ್ದೆ. ಚಿಕ್ಕ ಶರೀರ, ಬಾಗಿದ ಬೆನ್ನಿನ ಆತ ದಪ್ಪ ಗಾಜಿನ ಕನ್ನಡಕಗಳನ್ನು ಹಾಕಿಕೊಂಡಿದ್ದ. ಸುಕ್ಕುಗಟ್ಟಿದ ಮುಖ, ಕೆದರಿದ ಕೂದಲು ಮತ್ತು ಗಡ್ಡ ಸಾಕಷ್ಟು ಬಿಳಿಯ ಕೂದಲು ಇದ್ದ ಆತ ವಾದಿಸಿದ:

"ನನ್ನ ಮಾತು ಕೇಳೋ ಹುಡುಗ, ರಷ್ಯಾಗೆ ಈಗ ಬೇಕಾಗಿರೋದು ಒಬ್ಬ ಶಕ್ತಿಶಾಲಿ ಮನುಷ್ಯ. ಕ್ರಾಂತಿ ವಿಷಯ ಕೈ ಬಿಟ್ಟು ನಾವು ಜರ್ಮನರ ಬಗ್ಗೆ ಇನ್ನು ಯೋಚಿಸಬೇಕು. ಅಡ್ಡ ಕಸುಬಿಗಳು, ಕೊರ್ನಿಲೊವ್‌ನ ಸೋಲಿಸಿದೋರು ಅಡ್ಡಕಸುಬಿಗಳು, ಅವರ ಹಿಂದೆ ಇರೋರು ಜರ್ಮನ್ ಏಜೆಂಟರು, ಕೊರ್ನಿಲೊವ್ ಗೆಲ್ಲಬೇಕಾಗಿತ್ತು ಕಣಯ್ಯ..."

ಇನ್ನೊಂದು ಕಡೆ ತೀವ್ರ ಬಲಪಂಥೀಯ ಪತ್ರಿಕೆಗಳು, ಅದರಲ್ಲಿ ಕೆಲವು ರಾಜಪ್ರಭುತ್ವವೇ ವಾಪಸ್ ಬರಲಿ ಎನ್ನುವಂಥವು, ಕ್ರಾಂತಿಕಾರಿ ಜನತಂತ್ರವನ್ನು ಹೊಸಕಿ ಹಾಕಿಬಿಡಬೇಕೆಂದು ಅಬ್ಬರಿಸುತ್ತಿದ್ದವು.

ಇದೇ ಸಮಯದಲ್ಲಿ ಅಕ್ಟೋಬರ್ 23ರಂದು, ರಷ್ಯಾದ ಉತ್ತರಭಾಗದಲ್ಲಿ ಬಾಲ್ಟಿಕ್ ಸಮುದ್ರಕ್ಕೆ ತೆರೆದುಕೊಂಡಿರುವ ರೀಗಾ ಕೊಲ್ಲಿಯಲ್ಲಿ ಜರ್ಮನರೊಂದಿಗೆ ನೌಕಾಯುದ್ಧ ಜರುಗಿತು. ಆಗ ಪೆತ್ರೋಗ್ರಾಡ್ ಅಪಾಯದಲ್ಲಿದೆ ಎಂಬ ನೆಪದಲ್ಲಿ ಹಂಗಾಮಿ ಸರ್ಕಾರವು ರಾಜಧಾನಿಯನ್ನು ಖಾಲಿ ಮಾಡಿ ಹೋಗಲು ಯೋಜನೆಯನ್ನು ಸಿದ್ಧಪಡಿಸಿತು. ಮೊದಲು ಶಸ್ತ್ರಾಸ್ತ್ರ ತಯಾರಿಕೆ ಘಟಕಗಳನ್ನು ಅಲ್ಲಿಂದ ಹೊರತೆಗೆದು ರಷ್ಯಾದ ಉದ್ದಗಲಕ್ಕೂ ಅದನ್ನು ಹಂಚಿಬಿಡುವುದು, ಆಮೇಲೆ ಸರ್ಕಾರವನ್ನೇ ಮಾಸ್ಕೊ ನಗರಕ್ಕೆ ವರ್ಗಾಯಿಸಿಬಿಡುವುದು, ಇದು ಯೋಜನೆ. ಕೂಡಲೇ ಬೋಲ್ಶೆವಿಕರು, ಇದೊಂದು ಕ್ರಾಂತಿಯ ಕೆಂಪು ಕೇಂದ್ರವನ್ನು ದುರ್ಬಲಗೊಳಿಸುವ ಪಿತೂರಿ ಎಂದು ಅಬ್ಬರಿಸಲಾರಂಭಿಸಿದರು. ಜರ್ಮನರಿಗೆ ರೀಗಾ ಪಟ್ಟಣವನ್ನು ಮಾರಿಕೊಂಡರು ಮತ್ತು ಈಗ ಪೆತ್ರೋಗ್ರಾಡ್‌ನ್ನೇ ಬಿಟ್ಟೋಡುತ್ತಿದ್ದಾರೆ ಎಂಬುದು ಸಾರಾಂಶ.

ಬಂಡವಾಳಶಾಹಿ ವರ್ಗ, ಬೂರ್ಶ್ವಾಗಳು ಖುಷಿಯಾಗಿದ್ದರು. ಕ್ಯಾಡೆಟ್ ಪಕ್ಷದ ಮುಖಪತ್ರಿಕೆಯು "ಅರಾಜಕತಾವಾದಿಗಳ ಗಲಭೆಯಿಲ್ಲದೆ, ಮಾಸ್ಕೋದಲ್ಲಿ ಸರ್ಕಾರವು ಶಾಂತಿಯುತ ವಾತಾವರಣದಲ್ಲಿ ಕಾರ್ಯ ನಿರ್ವಹಿಸಬಹುದು" ಎಂದು ಬರೆಯಿತು. ಕ್ಯಾಡೆಟ್‌ಗಳು ಇನ್ನೂ ತೀವ್ರ ಬಲಪಂಥೀಯರಾಗಿದ್ದರು. ಅವರ ನಾಯಕ ರೊಡ್‌ಜ಼ಿಯಾಂಕೊ ಎನ್ನುವವನಂತೂ ಪೆತ್ರೋಗ್ರಾಡ್ ಜರ್ಮನರ ವಶವಾಗುವುದೇ

ಒಳ್ಳೆಯದು, ಹಾಗಾದಲ್ಲಿ ಸೋವಿಯತ್‌ಗಳನ್ನೂ, ಕ್ರಾಂತಿಕಾರಿಯಾದ ಬಾಲ್ಟಿಕ್ ಸಮುದ್ರದ ನೌಕಾದಳವನ್ನೂ ನಾಶಮಾಡಿಬಿಡಬಹುದು ಎಂದುಬಿಟ್ಟ.

ಆದರೆ ರಾಜಧಾನಿ ವರ್ಗಾವಣೆಗೆ ಚಂಡಮಾರುತದಂಥ ವಿರೋಧ ಬಂತು. ಅದರಿಂದಾಗಿ ಯೋಜನೆಯನ್ನು ಕೈಬಿಡಲೇಬೇಕಾಯಿತು.

ಅದೇನೇ ಇರಲಿ, ಇಡೀ ರಷ್ಯವನ್ನು ಆವರಿಸುವಂಥ ಮೋಡಗಳು ದಟ್ಟೈಸುತ್ತಿದ್ದವು. ಗುಡುಗು ಮೊಳಗುತ್ತಿತ್ತು ಮಿಂಚು ಬೆಳಗುತ್ತಿತ್ತು. ಆ ಮಹಾನ್ ಮೇಘರಾಶಿಯೇ ಸೋವಿಯತ್ ಜನ ಸಮಿತಿಗಳ ರಾಷ್ಟ್ರಮಟ್ಟದ ಮಹಾಧಿವೇಶನ. ಅದಕ್ಕೆ ವಿರೋಧ ಬಂದದ್ದು ಕೇವಲ ಸರ್ಕಾರದಿಂದಲ್ಲ, ಎಲ್ಲ ರೀತಿಯ ಮಂದಗಾಮಿ ಸಮಾಜವಾದಿಗಳೂ ಅದಕ್ಕೆ ವಿರುದ್ಧವಾಗಿದ್ದರು. ಆಗ ಅಸ್ತಿತ್ವದಲ್ಲಿದ್ದ ಸೈನಿಕರ ಹಾಗೂ ನಾವಿಕರ ಕೇಂದ್ರ ನಾಯಕತ್ವಕ್ಕೆ ಅಧಿವೇಶನ ಬೇಕಿರಲಿಲ್ಲ. ಕೆಲವು ಟ್ರೇಡ್ ಯೂನಿಯನ್‌ಗಳು ಹಾಗೂ ರೈತ ಸೋವಿಯತ್‌ಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತ್ಸೆ–ಇ–ಕಾನೇ ಇದಕ್ಕೆ ವಿರುದ್ಧವಾಗಿತ್ತು. ಅದನ್ನು ತಡೆಹಿಡಿಯಲು ಪ್ರಯತ್ನಗಳು ನಡೆದವು. ಮೊದಲು ಪೆತ್ರೋಗ್ರಾಡ್ ಸೋವಿಯತ್ ಆರಂಭಿಸಿದ್ದರೂ ಈಗ ತ್ಸೆ–ಇ–ಕಾನ ವಶಕ್ಕೆ ಬಂದಿದ್ದ ಇಜ್‌ವೆಸ್ತಿಯಾ ಮತ್ತು ಗೊಲೊಸ್ ಸೊಲ್ದಾತಾ (ಸೈನಿಕ ದನಿ) ಮುಂತಾದ ಪತ್ರಿಕೆಗಳೂ ಅಧಿವೇಶನದ ವಿರುದ್ಧ ಪ್ರಚಾರ ಮಾಡಿದವು. ಸೋಷಲಿಸ್ಟ್ ರೆವಲ್ಯೂಶನರಿ ಪಾರ್ಟಿಯ ಎಲ್ಲಾ ಪತ್ರಿಕೆಗಳು ಅಧಿವೇಶನದ ವಿರುದ್ಧ ತಿರುಗಿಬಿದ್ದಿದ್ದವು.

ಅಧಿವೇಶನಕ್ಕೆ ಪ್ರತಿನಿಧಿಗಳನ್ನು ಚುನಾಯಿಸುವುದನ್ನು ತಡೆಯಲು ಸ್ಥಳೀಯ ಸೋವಿಯತ್‌ಗಳಿಗೆ, ಸೈನಿಕ ಸಮಿತಿಗಳಿಗೆ ಸಂದೇಶವಾಹಕರನ್ನು ಅಟ್ಟಿದರು, ತಾರು ಕಳಿಸಿದರು. ಅಧಿವೇಶನದ ವಿರುದ್ಧ ಸಾರ್ವಜನಿಕ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಸಾಂವಿಧಾನಿಕ ಶಾಸನಸಭೆಯ ಅಧಿವೇಶನ ಹತ್ತಿರವಿರುವಾಗಲೇ ಇಂಥ ಅಧಿವೇಶನವನ್ನು ಸಂಘಟಿಸುವುದು ಜನತಂತ್ರಕ್ಕೆ ವಿರುದ್ಧ ಎಂದು ಘೋಷಿಸಲಾಯಿತು. ಸಾಂವಿಧಾನಿಕ ಶಾಸನಸಭೆ, ರಣಾಂಗಣದಿಂದ ಬಂದ ಪ್ರತಿನಿಧಿಗಳು, ರೈತರ ಒಕ್ಕೂಟಗಳು, ಕೊಸ್ಸಾಕ್ ಸೈನ್ಯದ ಸಂಘಗಳು, ಜ಼ಾರ್‌ಗೆ ನಿಷ್ಠರಾಗಿದ್ದ ಸೈನ್ಯಾಧಿಕಾರಿಗಳ ಸಂಘಗಳು ಎಲ್ಲರ ಮೂಲಕವೂ ಇದೇ ಮಾತುಗಳನ್ನು ಹೇಳಿಸಲಾಯಿತು. ರಷ್ಯನ್ ಗಣರಾಜ್ಯ ಮಂಡಳಿಯಂತೂ ಒಕ್ಕೊರಲಿನಿಂದ ಅಧಿವೇಶನವನ್ನು ಖಂಡಿಸಿತು. ಒಟ್ಟಿನಲ್ಲಿ ರಷ್ಯಾದ ಮಾರ್ಚ್ ಕ್ರಾಂತಿಯು ಯಾವ ಸಂಸ್ಥೆಗಳನ್ನು, ಯಂತ್ರವನ್ನು ಸೃಷ್ಟಿಸಿತ್ತೋ, ಅವೆಲ್ಲವನ್ನೂ ಈಗ ಸೋವಿಯತ್ ಜನಸಮಿತಿಗಳ ಮಹಾಧಿವೇಶನವನ್ನು ತಡೆಯಲು ಉಪಯೋಗಿಸಿಕೊಳ್ಳಲಾಯಿತು.

ಇನ್ನೊಂದು ಕಡೆ ಶ್ರಮಜೀವಿಗಳ, ಕಾರ್ಮಿಕರ, ಬಡಸೈನಿಕರ, ಬಡರೈತರ ಸಂಕಲ್ಪವು ಆಕಾರವನ್ನು ಪಡೆದುಕೊಳ್ಳುತ್ತಿತ್ತು. ಅನೇಕ ಸ್ಥಳೀಯ ಸೋವಿಯತ್‌ಗಳು ಆಗಲೇ ಬೋಲ್ಶೆವಿಕ್ ಪರವಾಗಿದ್ದವು. ಫ್ಯಾಕ್ಟರಿ ಶಾಪ್ ಕಮಿಟಿಗಳು ಎಂಬ ಕೈಗಾರಿಕಾ ಕಾರ್ಮಿಕರ ಸಂಘಟನೆಗಳು, ಬಂಡಾಯವೆದ್ದಿದ್ದ ಭೂಸೇನೆ ಹಾಗೂ ನೌಕಾಸೇನೆಗಳ ಸಂಘಟನೆಗಳು ಸಹ ಇವರೊಂದಿಗಿದ್ದವು. ಅಧಿವೇಶನಕ್ಕೆ ಪ್ರತಿನಿಧಿಗಳನ್ನು ಚುನಾಯಿಸದಂತೆ ನಿರ್ಬಂಧ ಹೇರಿದ್ದರೂ ಸಹ ಅನೇಕ ಕಡೆ ಉಳಿದ ಜನರೇ ಸೇರಿಕೊಂಡು ತಮ್ಮಲ್ಲೊಬ್ಬರನ್ನು ಪೆತ್ರೋಗ್ರಾಡಿಗೆ ಕಳಿಸಲು ಆಯ್ಕೆ ಮಾಡುತ್ತಿದ್ದರು. ಇನ್ನೂ ಕೆಲವು ಕಡೆ ಅಧಿವೇಶನಕ್ಕೆ

ತಡೆಯೊಡ್ಡಲು ಪ್ರಯತ್ನಿಸುತ್ತಿದ್ದ ನಾಯಕತ್ವಗಳನ್ನೇ ಜನತೆ ಕಿತ್ತು ಬಿಸಾಕಿ ಹೊಸ ಸಮಿತಿಗಳನ್ನು ರಚಿಸಿಕೊಂಡರು. ಬುಡಮಟ್ಟದಿಂದ ಒಂದು ಬೃಹತ್ ದಂಗೆ ರೂಪುಗೊಳ್ಳಲಾರಂಭಿಸಿತು. ಕ್ರಾಂತಿ ಎಂಬ ಅಗ್ನಿಕುಂಡದ ಮೇಲೆ ಕಳೆದ ಕೆಲವು ತಿಂಗಳುಗಳಿಂದ ಕಟ್ಟಿಕೊಂಡು ಗಟ್ಟಿಯಾಗುತ್ತಿದ್ದ ಕವಚವನ್ನು ಇದು ಸೀಳಿ ಒಡೆದು ಹಾಕಲಾರಂಭಿಸಿತು. ಇಂಥದೊಂದು ಸ್ವಯಂಸ್ಫೂರ್ತಿಯಿಂದ ಹುಟ್ಟಿದ ಬೃಹತ್ ಜನಸಮುದಾಯದ ಚಳುವಳಿಯಿಂದ ಮಾತ್ರವೇ ಅಖಿಲ ರಷ್ಯಾ ಮಟ್ಟದ ಸೋವಿಯತ್ ಮಹಾಧಿವೇಶನ ಸಾಧ್ಯವಾಗಬಹುದಾಗಿತ್ತು...

ಪ್ರತಿದಿನವೂ ಬೋಲ್ಶೆವಿಕ್ ಭಾಷಣಕಾರರು ಸೈನ್ಯ ಶಿಬಿರಗಳಲ್ಲಿ, ಕಾರ್ಖಾನೆಗಳಲ್ಲಿ "ಅಂತರ್ಯುದ್ಧವನ್ನು ಪ್ರಚೋದಿಸುತ್ತಿರುವ" ಸರ್ಕಾರವನ್ನು ಖಂಡಿಸುತ್ತಾ ಸಂಚರಿಸುತ್ತಿದ್ದರು. ಒಂದು ಸಂಜೆ ನಾನು ಉಗಿಯ ಮೇಲೆ ನಡೆಯುತ್ತಿದ್ದ ಟ್ರಾಮ್ ಒಂದರಲ್ಲಿ ಊರಿನೊಳಗೆ ಪ್ರಯಾಣ ಮಾಡಿದೆ. ನಾನು ಹೋಗಬೇಕಾಗಿದ್ದದ್ದು ಒಂದು ಶಸ್ತ್ರಾಸ್ತ್ರ ತಯಾರಿಸುವ ಕಾರ್ಖಾನೆಗೆ. ಅದು ಶೂಸೆಲ್‌ಬರ್ಗ್ ಎನ್ನುವ ಊರಿಗೆ ಹೋಗುವ ಹೆದ್ದಾರಿಯಲ್ಲಿತ್ತು. ಕಾರ್ಖಾನೆಗಳು, ಚರ್ಚುಗಳ ನಡುವೆ ಕೆಸರಿನಲ್ಲಿ ನಮ್ಮ ಪ್ರಯಾಣ ಸಾಗಿತು.

ಇನ್ನೂ ಪೂರ್ಣವಾಗಿಲ್ಲದ ಕಟ್ಟಡವೊಂದರ ಅಂದಗೆಟ್ಟ ಇಟ್ಟಿಗೆ ಗೋಡೆಗಳ ನಡುವೆ ಸಭೆ ನಡೆಯಿತು. ಮರದ ಚೌಕಟ್ಟಿಗೆ ಕೆಂಪು ಬಟ್ಟೆಯನ್ನು ಹೊದಿಸಿ ತಾತ್ಕಾಲಿಕ ವೇದಿಕೆಯನ್ನು ಮಾಡಿಕೊಂಡಿದ್ದರು. ಹತ್ತು ಸಾವಿರ ಜನ ಕಪ್ಪು ಬಟ್ಟೆ ಧರಿಸಿದ ಗಂಡಸರು ಹೆಂಗಸರು ಅಲ್ಲಿ ನೆರೆದಿದ್ದರು. ಗುಡುಗಿನ ಸದ್ದಿನಂತೆ ದೊಡ್ಡ ಗಂಟಲಿನಲ್ಲಿ ಮಾತನಾಡುವ ಜನ ಅಲ್ಲಿ ರಾಶಿ ಬಿದ್ದಿದ್ದ ಇಟ್ಟಿಗೆಗಳ ಮೇಲೆ, ಮರಮುಟ್ಟಿನ ರಾಶಿಯ ಮೇಲೆ ನೆರೆದಿದ್ದರು. ಮೋಡ ತುಂಬಿ ಮಬ್ಬಾಗಿದ್ದ ಆಗಸದಲ್ಲಿ ಆಗಾಗ ಸೂರ್ಯ ಇಣುಕುತ್ತಿದ್ದ. ಖಾಲಿ ಚೌಕಟ್ಟುಗಳು ಮಾತ್ರ ಇದ್ದ ಕಿಟಕಿಗಳ ಮೂಲಕ ಕೆಂಪಾದ ಬೆಳಕು ಹರಿದು ಬಂದು ಕತ್ತೆತ್ತಿ ನಮ್ಮತ್ತ ನೋಡುತ್ತಿದ್ದ ಆ ಸರಳ ಜನಗಳ ಮುಖದ ಮೇಲೆ ಬೀಳುತ್ತಿತ್ತು.

ಲೂನಚಾರ್ಸ್ಕಿಯವರ ಭಾಷಣ ನಡೆಯುತ್ತಿತ್ತು. ಇವರು ಪ್ರಮುಖ ಬೋಲ್ಶೆವಿಕ್ ನಾಯಕರಾಗಿದ್ದವರು ಮತ್ತು ಮುಂದೆ ಸಚಿವರೂ ಆದವರು. ನೋಡಲಿಕ್ಕೆ ವಿದ್ಯಾರ್ಥಿ ಯಂತಿದ್ದ ಈತನ ಮುಖದಲ್ಲಿ ಕಲಾವಿದನೊಬ್ಬನ ಸೂಕ್ಷ್ಮತೆ, ಸಂವೇದನಾಶೀಲತೆ ಗಳಿದ್ದವು. ಆತ ಏಕೆ ಸೋವಿಯತ್‌ಗಳು ಎಲ್ಲಾ ಅಧಿಕಾರಗಳನ್ನೂ ಕೈಗೆತ್ತಿಕೊಳ್ಳ ಬೇಕಾಗುತ್ತದೆ ಎಂಬುದನ್ನು ವಿವರಿಸುತ್ತಿದ್ದರು. ಶತ್ರುಗಳು ಪೂರ್ವಯೋಜಿತ ರೀತಿಯಲ್ಲಿ ದೇಶವನ್ನು ಸರ್ವನಾಶಕ್ಕೆ ತಳ್ಳುತ್ತಿದ್ದಾರೆ. ಸೈನ್ಯವನ್ನು ಹಾಳುಗೆಡವುತ್ತಿದ್ದಾರೆ. ಇನ್ನೊಬ್ಬ ಕೊರ್ನಿಲೊವ್‌ನಂಥ ಜನದ್ರೋಹಿ ನಾಯಕ ಬರಲಿಕ್ಕೆ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಬೇರೆ ಯಾವ ಮಾರ್ಗದಿಂದಲೂ ಶತ್ರುಗಳಿಂದ ಕ್ರಾಂತಿಯನ್ನು ರಕ್ಷಿಸುವುದು ಸಾಧ್ಯವಿಲ್ಲ.

ರುಮೇನಿಯಾ ದೇಶದ ಬಳಿಯ ರಣರಂಗದಿಂದ ಬಂದಿದ್ದವನೊಬ್ಬ ಆವೇಶದಿಂದ ಮಾತನಾಡಲಾರಂಭಿಸಿದ. ತೆಳ್ಳಗೆ ಭಯಂಕರವಾಗಿದ್ದ. ಅವನು ದುರಂತದ ಸಾಕಾರ ರೂಪವಾಗಿದ್ದ. "ಕಾಮ್ರೇಡ್ಸ್, ರಣಭೂಮಿಯಲ್ಲಿ ನಾವು ಉಪವಾಸ ಬಿದ್ದು ಸೊರಗಿದ್ದೇವೆ. ಚಳಿಯಲ್ಲಿ ಶರೀರಗಳು ಸೆಟೆದುಕೊಂಡಿವೆ. ಯಾವ ಒಳ್ಳೆಯ ಕಾರಣವೂ ಇಲ್ಲದೆ ನಾವು

ಸಾಯುತ್ತಿದ್ದೇವೆ. ಇಲ್ಲಿರುವ ಅಮೆರಿಕನ್ ಸಂಗಾತಿಗಳು ನಮ್ಮ ಈ ಮಾತನ್ನು ತಮ್ಮ ದೇಶದ ಜನರಿಗೆ ಮುಟ್ಟಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಕೊನೆಯ ಉಸಿರಿರುವವರೆಗೂ, ನಾವು ರಷ್ಯನ್ನರು ಕ್ರಾಂತಿಯನ್ನು ಕೈ ಬಿಡುವುದಿಲ್ಲ. ಜಗತ್ತಿನ ಎಲ್ಲ ಜನ ಮೇಲೆದ್ದು ನಮಗೆ ನೆರವು ನೀಡುವವರೆಗೂ ನಾವು ಕೋಟೆಯನ್ನು ರಕ್ಷಿಸಿಕೊಂಡೇ ಇರುತ್ತೇವೆ! ಜಾಗೃತರಾಗಿ ಸಾಮಾಜಿಕ ಕ್ರಾಂತಿಗಾಗಿ ಹೋರಾಡಬೇಕೆಂದು ಅಮೆರಿಕಾದ ಕಾರ್ಮಿಕರಿಗೆ ಸಂದೇಶ ತಲುಪಿಸಿ."

ನಂತರ ಮಾತನಾಡಿದವನು ಇನ್ನೊಬ್ಬ ಹೆಸರಾಂತ ಬೋಲ್ಶೆವಿಕ್ ನಾಯಕ ಪೆಟ್ರೋವ್‌ಸ್ಕಿ. ಕೃಶ ದೇಹದವನೂ, ಮಾತಿನಲ್ಲಿ ನಿಧಾನಸ್ಥನೂ ಆದರೂ ಆತ ಸುಲಭಕ್ಕೆ ಸಮಾಧಾನ ಹೊಂದುವಂಥವನಲ್ಲ. ಅವನು ಹೇಳತೊಡಗಿದ :

"ಇದು ಕಾರ್ಯಾಚರಣೆಯ ಹೊತ್ತು, ಹರಟೆಗೆ ಸಮಯವಲ್ಲ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಆದರೆ ನಾವು ಅದಕ್ಕೆ ಹೊಂದಿಕೊಳ್ಳಬೇಕು. ಅವರು ನಮ್ಮನ್ನು ಉಪವಾಸ ಕೆಡವಿ, ಚಳಿಯಲ್ಲಿ ಮರಗಟ್ಟಿ ಹೋಗುವಂತೆ ಮಾಡಲು ಯತ್ನಿಸುತ್ತಿದ್ದಾರೆ. ಆದರೆ ವಿಪರೀತ ಆಟ ಆಡಲು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ಅರ್ಥಮಾಡಿಸಬೇಕು. ಅವರೇನಾದರೂ ಶ್ರಮಜೀವಿಗಳ ಸಂಘಟನೆಯ ಮೇಲೆ ಕೈ ಮಾಡಿದರೆ ಅವರನ್ನು ಭೂಮಂಡಲದಿಂದಾಚೆಗೆ ಕಸ ಗುಡಿಸಿ ಹಾಕಿದಂತೆ ಬಿಸಾಕಿಬಿಡುತ್ತೇವೆ."

ಬೋಲ್ಶೆವಿಕ್‌ರ ಪತ್ರಿಕೆಗಳ ಪ್ರಸಾರ ಇದ್ದಕ್ಕಿದ್ದಂತೆ ಹೆಚ್ಚಾಯಿತು. ಅಲ್ಲಿಯವರೆಗೂ ಇದ್ದದ್ದು ರೊಬೊಚಿ ಪುಟ್ ಮತ್ತು ಸೊಲ್ದಾತ್ (ಸೈನಿಕ) ಎಂಬ ಎರಡೇ ಪತ್ರಿಕೆಗಳು. ಈಗ 'ಹಳ್ಳಿಯ ಪ್ರತಿಭಟನೆ' ಎಂಬ ರೈತರ ಪತ್ರಿಕೆಯೂ ಆರಂಭವಾಯಿತು. ದಿನಕ್ಕೆ ಐದು ಲಕ್ಷ ಪ್ರಸಾರವನ್ನು ಪತ್ರಿಕೆ ಗಳಿಸಿಕೊಂಡಿತು. ರೊಬೊಚಿ ಇ ಸೊಲ್ದಾತ್ ಪತ್ರಿಕೆಯ ಅಕ್ಟೋಬರ್ 17ರ ಸಂಚಿಕೆಯಲ್ಲಿನ ಮುಖ್ಯ ಲೇಖನ ಬೋಲ್ಶೆವಿಕ್‌ರ ಅಭಿಪ್ರಾಯವನ್ನು ಹೀಗೆ ಮುಂದಿಟ್ಟಿತು :

*"ಯುದ್ಧವನ್ನು ನಾಲ್ಕನೆಯ ವರ್ಷವೂ ಮುಂದುವರೆಸಿದರೆ ಸೈನ್ಯವೂ ದೇಶವೂ ಧ್ವಂಸವಾಗಿ ಹೋಗುತ್ತವೆ. ಪೆತ್ರೋಗ್ರಾಡ್‌ನ ಭದ್ರತೆಗೇ ಅಪಾಯವಿದೆ. ಜನ ಸಂಕಷ್ಟಗಳಿಂದ ಪ್ರತಿಕ್ರಾಂತಿಕಾರಿಗಳಿಗೆ ಖುಷಿಯಾಗುತ್ತಿದೆ. ತೀರಾ ಹತಾಶ ಸ್ಥಿತಿಯನ್ನು ಮುಟ್ಟಿದ ರೈತರು ಬಂಡೇಳುತ್ತಿದ್ದಾರೆ. ಸರ್ಕಾರಿ ಅಧಿಕಾರಿಗಳು ಮತ್ತು ಜಮೀನ್ದಾರರು ಅವರನ್ನು ಕೊಂದು ಹಾಕುತ್ತಿದ್ದಾರೆ. ಕಾರ್ಖಾನೆಗಳು, ಗಣಿಗಳು ಮುಚ್ಚಿಹೋಗಿ ಕಾರ್ಮಿಕರನ್ನು ಉಪವಾಸದ ಭಯ ಕಾಡುತ್ತಿದೆ. ಬೂರ್ಶ್ವಾ ವರ್ಗಕ್ಕೆ ಮತ್ತು ಅವರ ಸೈನ್ಯದ ಜನರಲ್‌ಗಳಿಗೆ ಸೈನ್ಯದಲ್ಲಿ ಕುರುಡು ಶಿಸ್ತನ್ನು ಮತ್ತೆ ಹೇರುವುದು ಬೇಕಾಗಿದೆ. ಬೂರ್ಶ್ವಾವರ್ಗದ ಬೆಂಬಲದೊಂದಿಗೆ ಕೊರ್ನಿಲೊವ್‌ನ ಬಾಡಿಗೆ ಭಂಟರು ಸಂವಿಧಾನಾತ್ಮಕ ಶಾಸನ ಸಭೆಯನ್ನು ವಿಸರ್ಜಿಸಲು ಯತ್ನಿಸುತ್ತಿದ್ದಾರೆ.*

*ಕೆರೆನ್‌ಸ್ಕಿ ಸರ್ಕಾರ ಜನತೆಗೆ ವಿರುದ್ಧವಾಗಿದೆ. ಅವನು ದೇಶವನ್ನೇ ಹಾಳು ಮಾಡುತ್ತಾನೆ. ಈ ಪತ್ರಿಕೆ ಜನತೆಯ ಪರವಾಗಿ ನಿಲ್ಲುತ್ತದೆ. ಇದಕ್ಕೆ ಬೆಂಬಲವಾಗಿ ರೈತಕಾರ್ಮಿಕರು, ಸೈನಿಕರು, ಬಡವರು ನಿಂತಿದ್ದಾರೆ. ಕ್ರಾಂತಿಯನ್ನು ಪೂರ್ಣಗೊಳಿಸಿದರೆ ಮಾತ್ರ ಜನತೆ ಬದುಕುಳಿಯುತ್ತಾರೆ. ಇದಕ್ಕಾಗಿ ಎಲ್ಲ ಅಧಿಕಾರವನ್ನೂ ಸೋವಿಯತ್‌ಗಳಿಗೆ ಒಪ್ಪಿಸಬೇಕು.*

*ಈ ಪತ್ರಿಕೆ ಕೆಳಗಿನ ಅಂಶಗಳಿಗೆ ಒತ್ತಾಯಿಸುತ್ತದೆ.*

* ರಾಜಧಾನಿಯಲ್ಲೂ, ಪ್ರಾಂತ್ಯಗಳಲ್ಲೂ ಎಲ್ಲ ಅಧಿಕಾರವನ್ನೂ ಸೋವಿಯತ್‌ಗಳಿಗೆ ಒಪ್ಪಿಸತಕ್ಕದ್ದು.
* ಎಲ್ಲಾ ರಣಾಂಗಣಗಳಲ್ಲೂ ಕೂಡಲೇ ಶಾಂತಿಯನ್ನು ಸ್ಥಾಪಿಸಬೇಕು.
* ದೇಶಗಳ ಜನತೆ, ಜನತೆಯ ನಡುವೆ ಪ್ರಾಮಾಣಿಕ ಶಾಂತಿ ಏರ್ಪಡಲಿ.
* ಜಮೀನ್ದಾರರ ಎಸ್ಟೇಟುಗಳನ್ನು ಯಾವ ಪರಿಹಾರವೂ ನೀಡದೆ ರೈತರಿಗೆ ಒಪ್ಪಿಸಿ.
* ಎಲ್ಲಾ ಕೈಗಾರಿಕಾ ಉತ್ಪಾದನೆಯ ಮೇಲೆ ಕಾರ್ಮಿಕರ ನಿಯಂತ್ರಣ ಬರಲಿ.
* ಪ್ರಾಮಾಣಿಕವಾಗಿ ಚುನಾಯಿತವಾದ, ವಿಶ್ವಾಸಾರ್ಹವಾದ ಒಂದು ಸಂವಿಧಾನಾತ್ಮಕ ಶಾಸನಸಭೆ ಅಸ್ತಿತ್ವಕ್ಕೆ ಬರಲಿ.

ಜರ್ಮನ್ ಏಜೆಂಟರೆಂದು ದೂಷಿಸಲ್ಪಟ್ಟ ಬೋಲ್ಶೆವಿಕ್‌ರ ಪತ್ರಿಕೆಯ ಇನ್ನೊಂದು ಭಾಗವನ್ನೂ ಇಲ್ಲಿ ಉಲ್ಲೇಖಿಸುವುದು ಆಸಕ್ತಿದಾಯಕ :

*"ಲಕ್ಷಾಂತರ ಜನತೆಯ ರಕ್ತದಲ್ಲಿ ಮಿಂದೆದ್ದ ಜರ್ಮನ್ ಚಕ್ರವರ್ತಿ ಕೈಸರನು ಪೆತ್ರೋಗ್ರಾಡಿನ ಮೇಲೆ ಸೈನ್ಯ ಕಳಿಸಬೇಕೆಂದಿದ್ದಾನೆ. ನಮ್ಮಂತೆಯೇ ಶಾಂತಿಯನ್ನು ಬಯಸುವ ಜರ್ಮನಿಯ ರೈತ–ಕಾರ್ಮಿಕರಿಗೆ, ಸೈನಿಕರಿಗೆ ಈ ಪಾಪಿಷ್ಠ ಯುದ್ಧದ ವಿರುದ್ಧ ದಂಗೆ ಏಳಲು ನಾವು ಕರೆ ನೀಡೋಣ !*

*ಈ ಮಾತನ್ನು ಯಾರು ಹೇಳಬಹುದು. ರೈತ–ಕಾರ್ಮಿಕರು ಮತ್ತು ಸೈನಿಕರ ಪರವಾದ ಕ್ರಾಂತಿಕಾರಿ ಸರ್ಕಾರ ಮಾತ್ರ ರಾಜತಂತ್ರಜ್ಞರನ್ನು ಪಕ್ಕಕ್ಕೆ ಸರಿಸಿ ಯುದ್ಧ ಭೂಮಿಯಲ್ಲಿರುವ ಜರ್ಮನ್ ಸೈನಿಕರೊಂದಿಗೆ ಈ ರೀತಿ ನೇರವಾಗಿ ಮಾತನಾಡಲು ಸಾಧ್ಯ. ನಮ್ಮ ವಿಮಾನಗಳು ಜರ್ಮನ್ ಭಾಷೆಯಲ್ಲಿ ಮುದ್ರಿತವಾದ ಇಂಥ ಘೋಷಣೆಯುಳ್ಳ ಕರಪತ್ರಗಳನ್ನು ಯುದ್ಧ ಭೂಮಿಯ ಕಂದಕಗಳ ತುಂಬ ಮತ್ತು ಇಡಿಯ ಜರ್ಮನಿಯ ಉದ್ದಗಲಕ್ಕೂ ಮಳೆಯಂತೆ ಸುರಿಸಬಹುದು.*

ಗಣರಾಜ್ಯ ಮಂಡಳಿಯ ಸದನದಲ್ಲಿ ಎರಡೂ ಬಣಗಳ ಮಧ್ಯದ ಬಿರುಕು ಅಗಲವಾಗುತ್ತಾ ಹೋಯಿತು.

ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳಿಗೆ ಸೇರಿದ ಕರೆಲಿನ್ ಎಂಬಾತ ಘೋಷಿಸಿದ : "ಆಸ್ತಿವಂತ ವರ್ಗಗಳು ಕ್ರಾಂತಿಕಾರಿ ಪ್ರಭುತ್ವದ ಸಂಘಟನೆಯನ್ನು ಉಪಯೋಗಿಸಿಕೊಂಡೇ ಮಿತ್ರಪಕ್ಷಗಳ ಕೂಟದ ಯುದ್ಧದ ರಥಕ್ಕೆ ರಷ್ಯಾವನ್ನು ಕಟ್ಟಿಹಾಕಬೇಕೆಂದು ಸಂಚು ಹೂಡಿವೆ. ಕ್ರಾಂತಿಕಾರಿ ಪಕ್ಷಗಳು ಈ ತಂತ್ರವನ್ನು ಸಂಪೂರ್ಣವಾಗಿ ವಿರೋಧಿಸುತ್ತವೆ."

ಆದರೆ ಇದಕ್ಕೆ ವಿರುದ್ಧವಾದ ಅಭಿಪ್ರಾಯಗಳೂ ಇದ್ದವು. ಪಾಪ್ಯುಲಿಸ್ಟ್ ಸೋಷಲಿಸ್ಟರು ಎಂಬ ಗುಂಪಿಗೆ ಸೇರಿದ ಚೆಕೊವ್‌ಸ್ಕಿ ಎಂಬುವನು ರೈತರಿಗೆ ಭೂಮಿಯನ್ನು ಹಂಚುವುದನ್ನು ವಿರೋಧಿಸಿದ. ಕ್ಯಾಡೆಟ್ ಪಕ್ಷದವರ ಧೋರಣೆಯನ್ನು ತಳೆದು ಹೀಗೆಂದ :

"ಈ ಕೂಡಲೇ ಸೈನ್ಯದಲ್ಲಿ ಕಠೋರ ಶಿಸ್ತನ್ನು ತರಬೇಕು. ಯುದ್ಧದ ಸಮಯದಲ್ಲಿ ಯಾವುದೇ ಸಾಮಾಜಿಕ ಆರ್ಥಿಕ ಸುಧಾರಣೆಗಳನ್ನು ಕೈಗೆತ್ತಿಕೊಳ್ಳಬಾರದೆಂದು ನಾನು ಮೊದಲಿನಿಂದಲೂ ಹೇಳುತ್ತಲೇ ಇದ್ದೇನೆ. ಆದರೂ ನಾವು ಅದೇ ಅಪರಾಧವನ್ನು ಮುಂದುವರೆಸುತ್ತಿದ್ದೇವೆ. ಅದೇನೇ ಇರಲಿ ನಾನು ಸುಧಾರಣಾ ವಿರೋಧಿಯಲ್ಲ, ಏಕೆಂದರೆ ನಾನೊಬ್ಬ ಸೋಷಲಿಸ್ಟ್."

ಇದಕ್ಕೆ ಪ್ರತಿಯಾಗಿ ಎಡವಾದಿಗಳು "ನಿನ್ನನ್ನು ನಂಬುವುದಿಲ್ಲ" ಎಂದು ಕೂಗುತ್ತಿದ್ದರು. ಬಲಪಂಥೀಯರು ಚಪ್ಪಾಳೆ ಹೊಡೆಯುತ್ತಿದ್ದರು.

ಕ್ಯಾಡೆಟ್ ಪಾರ್ಟಿಯ ನಾಯಕ ಅಡ್‌ಜ್‌ಮೊವ್ ಎಂಬುವನು, "ನಾವು ಸೈನಿಕರಿಗೆ ಯುದ್ಧದ ಧ್ಯೇಯೋದ್ದೇಶಗಳನ್ನು ಏಕೆ ವಿವರಿಸಬೇಕು, ಪ್ರತಿಯೊಬ್ಬ ಸೈನಿಕನೂ ಅರ್ಥ ಮಾಡಿಕೊಳ್ಳಬೇಕಾಗಿರುವುದು ಇಷ್ಟೆ. ರಷ್ಯನ್ ನೆಲದಿಂದ ಶತ್ರುವನ್ನು ಓಡಿಸಬೇಕು ಎಂಬುದನ್ನಷ್ಟೇ" ಎಂದು ಅರಚಿಕೊಳ್ಳುತ್ತಿದ್ದ.

ಕೆರೆನ್‌ಸ್ಕಿ ಸ್ವತಃ ಎರಡು ಬಾರಿ ಶಾಸನಸಭೆಗೆ ಬಂದು ಮಾತನಾಡಿದ. ರಾಷ್ಟ್ರೀಯ ಐಕ್ಯತೆ ಬೇಕು ಎಂದು ಉದ್ರೇಕದಿಂದ ಬೇಡಿಕೊಂಡ. ಜೋರಾಗಿ ಅತ್ತೂ ಬಿಟ್ಟ. ಆದರೆ ಶಾಸನಸಭೆ ಅಲ್ಲಲ್ಲಿ ವ್ಯಂಗ್ಯವಾಗಿ ಪ್ರಶ್ನಿಸುತ್ತಾ ತಣ್ಣಗೆ ಅವನ ಅಬ್ಬರವನ್ನು ಕೇಳಿಸಿಕೊಂಡಿತು ಅಷ್ಟೇ.

ಸ್ಮೋಲ್ನಿ ಇನ್‌ಸ್ಟಿಟ್ಯೂಟ್ ಎಂಬುದು ತ್ಸೆ–ಇ–ಕಾ ಗೆ ಹಾಗೂ ಪೆತ್ರೋಗ್ರಾಡ್ ಸೋವಿಯತ್‌ಗೆ ಕೇಂದ್ರ ಕಛೇರಿಯಾಗಿತ್ತು. ವಿಸ್ತಾರವಾದ ನೇವಾ ನದಿಯ ಬದಿಯಲ್ಲಿದ್ದ ಆ ಭವನಕ್ಕೆ ನಾನು ಸ್ಟ್ರೀಟ್ ಕಾರ್ ಎಂಬ ನಗರಸಾರಿಗೆಯಲ್ಲಿ ಪ್ರಯಾಣ ಬೆಳೆಸಿದೆ. ಕೆಸರಿಂದ ರಾಡಿಯಾಗಿದ್ದ, ಚಪ್ಪಡಿ ಹಾಸಿದ್ದ ರಸ್ತೆಗಳಲ್ಲಿ, ಅಪಾರ ಜನಜಂಗುಳಿಯ ಮಧ್ಯೆ ನಮ್ಮ ವಾಹನ ಬಸವನ ಹುಳುವಿನಂತೆ ತೆವಳುತ್ತಾ ಸಾಗಿತು. ರಸ್ತೆಯ ಕೊನೆಯಲ್ಲಿ ಸ್ಮೋಲ್ನಿ ಕಾನ್‌ವೆಂಟ್‌ನ ಮನೋಹರವಾದ ಬಂಗಾರದ ಚಿತ್ತಾರವಿದ್ದ ತಿಳಿ ನೀಲಿ ಬಣ್ಣದ ಗುಮ್ಮಟಗಳು ಕಾಣತೊಡಗಿದ್ದವು. ಪಕ್ಕದಲ್ಲಿಯೇ ಮೂರು ಅಂತಸ್ತುಗಳಿದ್ದ ಇನ್ನೂರು ಗಜಗಳಷ್ಟು ಉದ್ದವಿದ್ದ ಸೈನಿಕರ ಶಿಬಿರಗಳು ಮುಂದಕ್ಕೆ ಚಾಚಿಕೊಂಡಿದ್ದವು. ಪ್ರವೇಶ ದ್ವಾರದ ಮೇಲೆ ರಾಜನ ಚಿಹ್ನೆಯು ಅದೇ ಹಿಂದಿನ ಸೊಕ್ಕಿನಿಂದ ಮೆರೆಯುತ್ತಿತ್ತು.

ಇದು, ಹಿಂದಿನ ರಾಜಪ್ರಭುತ್ವದ ಆಳ್ವಿಕೆಯ ಕಾಲದಲ್ಲಿ ರಷ್ಯಾದ ಶ್ರೀಮಂತರ ಕುಲೀನರ ಹೆಣ್ಣುಮಕ್ಕಳಿಗೆಂದೇ ಮೀಸಲಾದ ಕಾನ್ವೆಂಟ್ ಶಾಲೆಯಾಗಿತ್ತು. ಇದಕ್ಕೆ ತ್ಸಾರಿನಾ – ರಾಣಿಯೇ ಧನಸಹಾಯ ಮಾಡುತ್ತಿದ್ದಳು. ಅದನ್ನು ಈಗ ಕಾರ್ಮಿಕರ ಹಾಗೂ ಸೈನಿಕರ ಕ್ರಾಂತಿಕಾರಿ ಸರ್ಕಾರವು ಉಪಯೋಗಿಸುತ್ತಿತ್ತು. ಅಲ್ಲಿ ನೂರಕ್ಕೂ ಹೆಚ್ಚು ಶುಭ್ರ ಬಿಳಿಯ ಬಣ್ಣದ ಗೋಡೆಗಳಿದ್ದ ವಿಶಾಲ ಕೋಣೆಗಳಿದ್ದವು. ಅವುಗಳ ಮೇಲೆ ಈಗಲೂ ಅಲ್ಲಲ್ಲಿ 'ತರಗತಿ ಕೊಠಡಿ ಮೂರು', 'ಶಿಕ್ಷಕರ ಕೊಠಡಿ' ಇತ್ಯಾದಿ ಫಲಕಗಳು ಉಳಿದುಕೊಂಡಿದ್ದವು. ಅವುಗಳ ಮೇಲೆ ವೇಗವಾಗಿ ಕೆಲಸಮಾಡಬೇಕಾಗಿದ್ದ ಹೊಸ ಆಡಳಿತದ ತುರ್ತನ್ನು ಪ್ರತಿಬಿಂಬಿಸುವಂತೆ ಒರಟಾಗಿ ಬರೆದ ಫಲಕಗಳನ್ನು ತೂಗುಹಾಕಲಾಗಿತ್ತು. ಅವುಗಳ ಮೇಲೆ 'ಪೆತ್ರೋಗ್ರಾಡ್ ಸೋವಿಯತ್‌ನ ಕೇಂದ್ರ ಸಮಿತಿ', 'ತ್ಸೆ–ಇ–ಕಾ ಕಛೇರಿ', 'ವಿದೇಶಾಂಗ ಕಛೇರಿ', 'ಟ್ರೇಡ್ ಯೂನಿಯನ್ ಕೇಂದ್ರ ಸಮಿತಿ', 'ಸೈನ್ಯಗಳ ಕೇಂದ್ರ ಸಮಿತಿ' ಮತ್ತು ವಿವಿಧ 'ಪಕ್ಷದ ಕಛೇರಿ' ಮುಂತಾದ ಹೆಸರುಗಳನ್ನು ನಮೂದಿಸಲಾಗಿತ್ತು.

ಭವನದಲ್ಲಿ ಓಡಾಡಲಿಕ್ಕಾಗಿ ಇದ್ದ ಕಾರಿಡಾರ್ – ಮೊಗಸಾಲೆಗಳಲ್ಲಿ ಎತ್ತರವಾದ ಕಮಾನುಗಳಿದ್ದವು. ಅಲ್ಲಲ್ಲಿ ವಿದ್ಯುಚ್ಛಕ್ತಿ ದೀಪಗಳು ಉರಿಯುತ್ತಿದ್ದವು. ಅದರ ತುಂಬ ಅವಸರದಲ್ಲಿ ಓಡಾಡುತ್ತಿದ್ದ ಕಾರ್ಮಿಕರು, ಕೆಲಸಗಾರರು. ಅವರಲ್ಲಿ ಕೆಲವರು ವೃತ್ತಪತ್ರಿಕೆಗಳು, ಘೋಷಣಾ ಪತ್ರಗಳು ಮುಂತಾದ ಪ್ರಚಾರ ಸಾಮಗ್ರಿಗಳನ್ನು ಹೊತ್ತು ಬೆನ್ನು ಬಾಗಿಸಿಕೊಂಡು ಓಡಾಡುತ್ತಿದ್ದರು. ಮರದ ಹಲಗೆಗಳನ್ನು ಹಾಸಿದ್ದ ನೆಲದ ಮೇಲೆ ಅವರ ಭಾರವಾದ ಬೂಟುಗಳು ದೊಡ್ಡ ಸದ್ದನ್ನು ಮಾಡುತ್ತಿದ್ದವು. "ಕಾಮ್ರೇಡರೇ,

ಆರೋಗ್ಯ ರಕ್ಷಣೆಗಾಗಿ ಪರಿಸರವನ್ನು ಶುಚಿಯಾಗಿಡಿ" ಎಂಬ ಸೂಚನೆಗಳನ್ನು ಎಲ್ಲಾ ಕಡೆ ಅಂಟಿಸಿದ್ದರು. ಮಹಡಿ ಮೆಟ್ಟಿಲುಗಳ ಬಳಿ ಜಾಗ ಸಿಕ್ಕಿದ ಕಡೆಯೆಲ್ಲಾ ಬೇರೆ ಬೇರೆ ರಾಜಕೀಯ ಪಕ್ಷದವರು ತಮ್ಮ ಕಿರುಹೊತ್ತಿಗೆಗಳನ್ನು, ಪುಸ್ತಕಗಳನ್ನು ಮಾರಾಟಕ್ಕಿರಿಸಿಕೊಂಡಿದ್ದರು.

ಕೆಳಮಹಡಿಯಲ್ಲಿ ಕಾನ್ವೆಂಟ್ ಇದ್ದ ಕಾಲದಿಂದಲೂ ಉಪಯೋಗಿಸುತ್ತಿದ್ದ ಊಟ ಮಾಡುವ ಹಜಾರವನ್ನು ಈಗಲೂ ಅದೇ ಉದ್ದೇಶಕ್ಕಾಗಿಯೇ ಉಳಿಸಿದ್ದರು. ಎರಡು ರೂಬಲ್ ಕೊಟ್ಟು ನಾನು ಊಟದ ಟಿಕೆಟ್ ಅನ್ನು ಕೊಂಡುಕೊಂಡೆ. ಊಟ ಬಡಿಸುವ ಉದ್ದನೆಯ ಟೇಬಲ್ ತಲುಪಲು ಸಾವಿರಾರು ಜನ ನಿಂತಿದ್ದ ಸಾಲನ್ನು ನಾನೂ ಸೇರಿಕೊಂಡೆ. ಒಂದು ಇಪ್ಪತ್ತು ಜನ ಗಂಡಸರು ಹೆಂಗಸರು ಅಲ್ಲಿ ಬಡಿಸಲು ನಿಂತಿದ್ದರು. ಮೇಜಿನ ಮೇಲೆ ಪಾತ್ರೆಗಳಲ್ಲಿ ಕ್ಯಾಬೇಜ್ ಸೂಪ್, ಮಾಂಸದ ತುಂಡುಗಳು, ಗೋಧಿ ಕಡುಬು, ಕಪ್ಪು ಬ್ರೆಡ್ ಎಲ್ಲವನ್ನೂ ಇರಿಸಿದ್ದರು. ಮತ್ತೆ ಒಂದು ಕಪ್ ಟೀಗೆ ಐದು ಕೊಪೆಕ್‌ಗಳು. ನಾನು ಬುಟ್ಟಿಯಿಂದ ಒಂದು ಮರದ ಚಮಚ ತೆಗೆದುಕೊಂಡೆ. ಅದರ ಮೇಲಿನ ಎಣ್ಣೆ ಸರಿಯಾಗಿ ಹೋಗಿರಲಿಲ್ಲ. ಅಲ್ಲೇ ಮರದ ಮೇಜುಗಳ ಸುತ್ತ ಹಾಕಿದ್ದ ಬೆಂಚುಗಳ ಮೇಲೆ ಕುಳಿತ ಹಸಿದ ಕಾರ್ಮಿಕರು ಒರಟೊರಟಾದ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ ಗಬಗಬನೆ ಉಣ್ಣುತ್ತಿದ್ದರು.

ಮೇಲಿನ ಮಹಡಿಯಲ್ಲಿ ತ್ಸೆ–ಇ–ಕಾಗೆಂದೇ ಮೀಸಲಿಟ್ಟ ಇನ್ನೊಂದು ಊಟ ಮಾಡುವ ಸ್ಥಳವೂ ಇತ್ತು. ಆದರೆ ಅಲ್ಲಿಗೆ ಎಲ್ಲರೂ ಹೋಗುತ್ತಿದ್ದರು. ಅಲ್ಲಿ ಚೆನ್ನಾಗಿ ಬೆಣ್ಣೆ ಹಚ್ಚಿದ ಬ್ರೆಡ್ ಸಿಗುತ್ತಿತ್ತು. ಬೇಕಾದಷ್ಟು ಟೀ ಸಹ.

ಕಟ್ಟಡದ ದಕ್ಷಿಣ ಪಾರ್ಶ್ವದ ಎರಡನೆಯ ಮಹಡಿಯಲ್ಲಿ ದೊಡ್ಡ ಸಭಾಂಗಣವಿತ್ತು. ಮುಂಚೆ ಅದು ನರ್ತನ ಮುಂದಿರವಾಗಿತ್ತು. ಎತ್ತರವಾದ ಆ ಬಿಳಿಯ ಸಭಾಮಂದಿರದಲ್ಲಿ ಬಿಳಿಯ ದೀಪಗಳು ಗೊಂಚಲು ಗೊಂಚಲಾಗಿ ಇಳಿಬಿದ್ದಿದ್ದವು. ನೂರಾರು ಅಲಂಕಾರದ ಬಲ್ಬುಗಳಿದ್ದ ಗೊಂಚಲುಗಳವು. ಸಭಾಂಗಣವನ್ನು ಎರಡು ಸಾಲು ಕಂಬಗಳು ವಿಭಜಿಸಿದ್ದವು. ಒಂದು ಕೊನೆಯಲ್ಲಿ ವೇದಿಕೆ. ಅದರ ಎರಡೂ ತುದಿಗಳಲ್ಲಿ ದೀಪದ ಕಂಬಗಳು. ಹಿಂಬದಿಯಲ್ಲಿ ಒಂದು ಬಂಗಾರದ ಚೌಕಟ್ಟು. ಅದರ ಮೇಲೆ ಚಕ್ರವರ್ತಿಗಳ ಚಿತ್ರವನ್ನು ನಿಲ್ಲಿಸಲಾಗಿತ್ತು.

ಸಭಾಂಗಣದ ಆಚೆ ಸೋವಿಯತ್‌ಗಳ ಮಹಾಧಿವೇಶನಕ್ಕಾಗಿ ನೋಂದಣಿ ಮತ್ತು ದಾಖಲೆಗಾಗಿ ಕಛೇರಿಯನ್ನು ಆರಂಭಿಸಲಾಯಿತು. ನಾನು ಅಲ್ಲಿ ನಿಂತು ಒಳಗೆ ಬರುತ್ತಿದ್ದ ಹೊಸ ಪ್ರತಿನಿಧಿಗಳನ್ನು ಗಮನಿಸಿದೆ. ಕೆಲವರು ದೊಡ್ಡ ಆಕಾರದ ಗಡ್ಡಧಾರಿ ಸೈನಿಕರು, ಕೆಲವರು ಕಪ್ಪು ಅಂಗಿಗಳನ್ನು ಧರಿಸಿದ ಕಾರ್ಮಿಕರು, ಕೆಲವರು ಉದ್ದುದ್ದ ಕೂದಲು ಬಿಟ್ಟುಕೊಂಡ ರೈತರು. ಆ ಕಛೇರಿಯ ಮುಖ್ಯಸ್ಥಳಾಗಿದ್ದ ಹುಡುಗಿ ಪ್ಲೆಖನೋವ್‌ರ 'ಯೆದಿನೆತ್‌ಸ್ವೊ' ಗುಂಪಿಗೆ ಸೇರಿದವಳು. ಆ ಪ್ಲೆಖನೋವ್ ಎಂಬಾತ ಒಂದು ಕಾಲದಲ್ಲಿ ರಷ್ಯಾದೊಳಗೆ ಮಾರ್ಕ್ಸ್‌ವಾದವನ್ನು ಪರಿಚಯಿಸಿದ್ದ ಹಿರಿಯ. ಆದರೆ ಈಗ ಈ ಕ್ರಾಂತಿಗೆ ವಿರುದ್ಧವಾಗಿರುವವನು. ಹೀಗಾಗಿ ಆ ಹುಡುಗಿ ಸಹಜವಾಗಿಯೇ ಇವರನ್ನೆಲ್ಲಾ ತಿರಸ್ಕಾರದಿಂದ ನೋಡುತ್ತಾ ಹೇಳಿದಳು: "ಇವರು ಮೊದಲನೇ ಅಧಿವೇಶನಕ್ಕೆ ಬಂದಿದ್ದ ಪ್ರತಿನಿಧಿಗಳ ಹಾಗಿಲ್ಲ. ಒರಟರು, ಅಜ್ಞಾನಿಗಳು, ಕರಿಯ ಜನ". ವಾಸ್ತವ ಹಾಗೆ ಇತ್ತು.

ರಷ್ಯಾದ ಅಂತರಾಳವನ್ನೇ ಕ್ರಾಂತಿ ಕಲಕಿಬಿಟ್ಟಿದ್ದರಿಂದ, ತಳದಲ್ಲಿದ್ದವರು ಈಗ ಮೇಲೆ ಬಂದಿದ್ದರು. ಈ ದಾಖಲಾತಿ ಸಮಿತಿಯನ್ನು ನೇಮಕ ಮಾಡಿದ್ದುದು ಕ್ರಾಂತಿ ವಿರೋಧಿಯಾದ ಹಳೆಯ ತ್ಸೆ–ಇ–ಕಾ. ಆದ್ದರಿಂದ ಈ ಕಛೇರಿ ಪ್ರತಿಯೊಬ್ಬ ಪ್ರತಿನಿಧಿಗೂ ಅವರು ಕಾನೂನುಬದ್ಧವಾಗಿ ಚುನಾಯಿತರಾಗಿಲ್ಲ ಎಂದು ಸವಾಲು ಎಸೆಯುತ್ತಿತ್ತು. ಬೋಲ್ಶೆವಿಕ್‌ರ ಕೇಂದ್ರ ಸಮಿತಿಯ ಸದಸ್ಯನಾದ ಕರಾನ್ ಎಂಬಾತ ಮಾತ್ರ ಆತ್ಮವಿಶ್ವಾಸದಿಂದ ನಗುತ್ತಾ "ಚಿಂತೆ ಮಾಡಬೇಡಿ, ಸಮಯ ಬಂದಾಗ ನೀವೆಲ್ಲರೂ ಒಳಗೆ ಬರೋ ಹಾಗೆ ನಾವು ನೋಡ್ಕೋತೀವಿ" ಎನ್ನುತ್ತಿದ್ದ.

'ರಬೋಚಿ ಇ ಸೊಲ್ಡಾತ್' (ಕಾರ್ಮಿಕ–ಸೈನಿಕ) ಪತ್ರಿಕೆ ಹೀಗೆಂದು ಬರೆದಿತ್ತು: "ಹೊಸ ಅಖಿಲ ರಷ್ಯಾ ಅಧಿವೇಶನಕ್ಕೆ ಬರಲಿರುವ ಪ್ರತಿನಿಧಿಗಳ ಗಮನಕ್ಕೆ ಒಂದು ವಿಷಯವನ್ನು ತರಬೇಕಿದೆ. ಅಧಿವೇಶನವು ನಡೆಯುವುದೇ ಇಲ್ಲವೆಂದೂ, ಪ್ರತಿನಿಧಿಗಳು ಪೆತ್ರೋಗ್ರಾಡ್ ಅನ್ನು ತೊರೆದುಹೋಗುವುದೇ ಕ್ಷೇಮವೆಂದೂ ಕೆಲವರು ಪ್ರಚಾರ ಮಾಡುತ್ತಿದ್ದಾರೆ. ಸಂಘಟನಾ ಸಮಿತಿಯಲ್ಲಿರುವ ಕೆಲವರು ಅಧಿವೇಶನಕ್ಕೆ ಭಂಗತರಲು ಮಾಡುತ್ತಿರುವ ಯತ್ನ ಇದು. ಈ ಸುಳ್ಳುಗಳಿಗೆ ಮಹತ್ವ ನೀಡಬೇಡಿ. ಬರಲಿರುವ ದಿನಗಳು ಮಹೋನ್ನತವಾದಂಥವು."

ನವೆಂಬರ್ 2ರಂದು ಸಮಾವೇಶ ಆರಂಭವಾದರೆ ನಿರ್ದಿಷ್ಟ ಅಗತ್ಯ ಸಂಖ್ಯೆಯ – ಕೋರಮ್, ಪ್ರತಿನಿಧಿಗಳು ದೊರಕುವುದಿಲ್ಲ ಎಂಬುದು ಈ ವೇಳೆಗೆ ಸ್ಪಷ್ಟವಾಗಿತ್ತು. ಹೀಗಾಗಿ ಅಧಿವೇಶನದ ಆರಂಭವನ್ನು 7ನೇ ತಾರೀಖಿಗೆ ಮುಂದೂಡಲಾಯಿತು. ಅದೇನೇ ಇರಲಿ ಇಷ್ಟು ಹೊತ್ತಿಗೆ ಇಡೀ ದೇಶವೇ ಜಾಗೃತವಾಗಿತ್ತು. ಇನ್ನು ತಮ್ಮ ನಿಲುವಿಗೆ ಸೋಲು ಖಚಿತ ಎಂಬುದನ್ನು ಅರ್ಥಮಾಡಿಕೊಂಡ ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ತಮ್ಮ ಮೊದಲಿನ ತಂತ್ರವನ್ನು ಬದಲಿಸಿಕೊಂಡು, ಪ್ರಾಂತ್ಯಗಳಲ್ಲಿದ್ದ ತಮ್ಮ ಸಂಘಟನೆಗಳಿಗೆ ಆದಷ್ಟೂ ಮಂದಗಾಮಿ ಪ್ರತಿನಿಧಿಗಳನ್ನು ಆಯ್ಕೆಮಾಡಿ ಕಳುಹಿಸಿ ಎಂದು ಸುದ್ದಿ ಕಳಿಸಿದರು. ಇನ್ನೊಂದು ಕಡೆ ರೈತರ ಸೋವಿಯತ್‌ಗಳ ಕೇಂದ್ರೀಯ ಕಾರ್ಯಕಾರಿ ಸಮಿತಿಯು ಕಾರ್ಮಿಕರು ಮತ್ತು ಸೈನಿಕರು ತೆಗೆದುಕೊಳ್ಳಬಹುದಾದ ಯಾವುದೇ ನಿರ್ಧಾರಕ್ಕೆ ಪ್ರತಿತಂತ್ರವನ್ನು ರೂಪಿಸಲು ಡಿಸೆಂಬರ್ 13ರಿಂದ ರೈತರ ಮಹಾಧಿವೇಶನ ಎಂದು ಘೋಷಿಸಿಬಿಟ್ಟಿತು.

ಈಗ ಬೋಲ್ಶೆವಿಕ್‌ರು ಏನು ಮಾಡುವುದು? ಸೈನಿಕರು ಹಾಗೂ ಕಾರ್ಮಿಕರು ರಸ್ತೆಗಿಳಿದು ರಾಜಧಾನಿಯಲ್ಲಿ ಸಶಸ್ತ್ರ ಮೆರವಣಿಗೆಯನ್ನು ನಡೆಸುತ್ತಾರೆ ಎಂಬ ಗಾಳಿಸುದ್ದಿ ಹುಟ್ಟಿಕೊಂಡಿತು. ಬೂರ್ಶ್ವಾ ಹಾಗೂ ಪ್ರತಿಗಾಮಿ ಪತ್ರಿಕಾ ಮಾಧ್ಯಮಗಳು ಇನ್ನೇನು ಸಶಸ್ತ್ರ ದಂಗೆ ಶುರುವಾಗಲಿದೆ ಎಂದು ಭವಿಷ್ಯ ನುಡಿದವು. ಜೊತೆಗೆ ಸರ್ಕಾರವು ಪೆತ್ರೋಗ್ರಾಡ್ ಸೋವಿಯತ್ ನಾಯಕರನ್ನು ಬಂಧಿಸಬೇಕು ಅಥವಾ ಕಡೆಯಪಕ್ಷ ಸೋವಿಯತ್‌ಗಳ ಮಹಾಧಿವೇಶನವನ್ನು ರದ್ದುಪಡಿಸಬೇಕು ಎಂದು ಒತ್ತಡಹಾಕಿದವು. ನೋವಯಾ ರುಸ್‌ನಂಥ ಪ್ರತಿಗಾಮಿ ಪತ್ರಿಕೆಗಳಂತೂ ಬೋಲ್ಶೆವಿಕ್‌ರ ನರಮೇಧ ನಡೆಯಲಿ ಎಂದು ಬೊಬ್ಬೆ ಹಾಕಿದವು.

ಪ್ರತಿಗಾಮಿಗಳು ಕ್ರಾಂತಿಯನ್ನು ನಾಶ ಮಾಡಲು ಹೊರಟಿದ್ದಾರೆ ಎಂದು ಖ್ಯಾತ ಕ್ರಾಂತಿಕಾರಿ ಲೇಖಕ ಮ್ಯಾಕ್ಸಿಂ ಗಾರ್ಕಿಯವರ 'ನೋವಯಾ ಜಿಜನ್' ಪತ್ರಿಕೆ ಬೋಲ್ಶೆವಿಕ್

ಅಭಿಪ್ರಾಯವನ್ನೇ ಸಮರ್ಥಿಸಿತು. ಅವಶ್ಯಕತೆ ಉಂಟಾದಲ್ಲಿ ಶಸ್ತ್ರಾಸ್ತ್ರ ಹಿಡಿದು ಇದನ್ನು ಪ್ರತಿರೋಧಿಸಬೇಕು. ಆದರೆ ಈ ಪ್ರಯತ್ನದಲ್ಲಿ ಕ್ರಾಂತಿಕಾರಿ ಜನತಂತ್ರವನ್ನು ಪ್ರತಿನಿಧಿಸುವ ಎಲ್ಲಾ ರಾಜಕೀಯ ಪಕ್ಷಗಳು ಒಗ್ಗಟ್ಟನ್ನು ಪ್ರದರ್ಶಿಸಬೇಕು ಎಂಬುದು ಅವರ ನಿಲುವು.

ಜನತಂತ್ರವು ತನ್ನ ಶಕ್ತಿಗಳನ್ನು ಕ್ರೋಢೀಕರಿಸಿಕೊಳ್ಳದಿದ್ದಾಗ, ಅದರ ಪ್ರಭಾವವನ್ನು ವಿರೋಧಿಸುವ ಶಕ್ತಿಗಳು ಇನ್ನೂ ಬಲಿಷ್ಠವಾಗಿರುವಾಗ ನಾವೇ ದಾಳಿಯನ್ನು ಆರಂಭಿಸುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಆದರೆ ಶತ್ರುಗಳು ಬಲಪ್ರಯೋಗಕ್ಕೆ ಮುಂದಾದಲ್ಲಿ, ಕ್ರಾಂತಿಕಾರಿ ಜನತಂತ್ರವು ಹೋರಾಟದ ಕಣಕ್ಕಿಳಿದು ರಾಜ್ಯಾಧಿಕಾರವನ್ನು ಕೈವಶ ಮಾಡಿಕೊಳ್ಳಬೇಕು. ಅಂಥ ಪ್ರಯತ್ನವನ್ನು ಪ್ರಜ್ಞಾವಂತ ಜನತೆ ಬೆಂಬಲಿಸುತ್ತದೆ ಎಂದು ಪತ್ರಿಕೆ ತನ್ನ ಅಭಿಪ್ರಾಯವನ್ನು ದಾಖಲಿಸಿತ್ತು.

ಗಾರ್ಕಿಯವರು, ಎಲ್ಲಾ ಪ್ರತಿಗಾಮಿ ಮತ್ತು ಸರ್ಕಾರಿ ವೃತ್ತಪತ್ರಿಕೆಗಳು ಬೋಲ್ಶೆವಿಕ್‌ರನ್ನು ಹಿಂಸೆಗೆ ಪ್ರಚೋದಿಸುತ್ತಿವೆ ಎಂದು ಆಪಾದಿಸಿದರು. ಅಕಾಲಿಕವಾದ ಸಶಸ್ತ್ರ ಬಂಡಾಯವು ಕೊರ್ನಿಲೊವ್‌ನಂಥ ಪ್ರತಿಗಾಮಿ, ಜನವಿರೋಧಿ, ಸರ್ವಾಧಿಕಾರಿಗೆ ದಾರಿ ಮಾಡಿಕೊಟ್ಟಿತು ಎಂಬುದು ಅವರ ಆತಂಕ. ಹೀಗಾಗಿ ಸುಳ್ಳುಸುದ್ದಿಗಳನ್ನು ಬಯಲಿಗೆಳೆಯಿರಿ ಎಂದು ಅವರು ಬೋಲ್ಶೆವಿಕ್‌ರಿಗೆ ಮನವಿ ಮಾಡಿಕೊಂಡರು. ಮೆನ್ಶೆವಿಕರು 'ಡಿಯೆನ್' (ದಿನ) ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು. ಅದರಲ್ಲಿ ರೋಮಾಂಚಕಾರಿ ಕಟ್ಟುಕತೆಯೊಂದನ್ನು ಮುದ್ರಿಸಲಾಯಿತು. ಅದರಲ್ಲಿ ನಕ್ಷೆಯ ಸಮೇತ ಬೋಲ್ಶೆವಿಕರು ಎಲ್ಲಿಲ್ಲಿ ದಾಳಿ ನಡೆಸಲಿದ್ದಾರೆ ಎಂಬ ಸುಳ್ಳುಸುದ್ದಿಯನ್ನು ಪ್ರಚಾರಮಾಡಿದರು.

ಇದ್ದಕ್ಕಿದ್ದಂತೆ ಯಾರೋ ಮಾಟಮಂತ್ರ ಮಾಡಿದ್ದಾರೇನೋ ಎನ್ನುವ ಹಾಗೆ ರಾಜಧಾನಿಯ ಗೋಡೆಯ ಮೇಲೆಲ್ಲಾ ಹೊಸ ಹೊಸ ಭಿತ್ತಿಪತ್ರಗಳು ಕಾಣಿಸಿಕೊಂಡವು. ಅದರಲ್ಲಿ 'ಮಂದಗಾಮಿ' ಸಂಪ್ರದಾಯಶೀಲ ಗುಂಪುಗಳು ಮತ್ತು ಸ್ವತಃ ತ್ಸೆ–ಇ–ಕಾ ಮೆರವಣಿಗೆಗಳನ್ನು ಖಂಡಿಸಿದ್ದರು. ಅದೇ ರೀತಿ ಕಾರ್ಮಿಕರು ಮತ್ತು ಸೈನಿಕರು ಚಳುವಳಿಗಾರರ ಪ್ರಚೋದನೆಗಳಿಗೆ ಬಲಿಯಾಗಬಾರದೆಂಬ ಕಿವಿಮಾತನ್ನೂ ಹೇಳಲಾಗಿತ್ತು. ಉದಾಹರಣೆಗೆ ಸೋಷಲಿಸ್ಟ್ ರೆವಲ್ಯೂಶನರಿ ಪಕ್ಷದ ಸೈನಿಕ ವಿಭಾಗ ಕೆಳಕಂಡ ಹೇಳಿಕೆ ನೀಡಿತ್ತು :

"ಸಶಸ್ತ್ರ ಮೆರವಣಿಗೆಯ ವದಂತಿಗಳು ಕೇಳಿಬರುತ್ತಿವೆ. ಇಂಥ ಬಂಡಾಯಕ್ಕೆ ಕರೆ ನೀಡಿದವರಾರು? ಬೋಲ್ಶೆವಿಕ್‌ರನ್ನು ಕೇಳಿದರೆ ಅವರು ತಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುತ್ತಾರೆ. ವಿಶಾಲ ಜನಸ್ತೋಮಕ್ಕೆ ಇದೆಲ್ಲಾ ಇಷ್ಟವಿಲ್ಲದಿದ್ದರೂ ಯಾರಾದರೂ ದುಃಸಾಹಸವಾದಿಗಳು ಇಂಥ ಪ್ರಯತ್ನವನ್ನು ಮಾಡಬಹುದು. ರಷ್ಯಾ ಹಾದು ಹೋಗುತ್ತಿರುವ ಅಪಾಯಕಾರಿ ಪರಿಸ್ಥಿತಿಯಲ್ಲಿ ಇಂಥ ಯಾವುದೇ ದಂಗೆ ಕೂಡಲೇ ಅಂತರ್ಯುದ್ಧಕ್ಕೆ ಕಾರಣವಾಗಬಹುದು. ಇದರಿಂದ ಕಾರ್ಮಿಕರ ಸಂಘಟನೆಗಳೇ ನಾಶವಾಗಬಹುದು. ಇಂಥ ಬಂಡಾಯದ ಮೂಲಕ ಕ್ರಾಂತಿಯನ್ನು, ಸಂವಿಧಾನಾತ್ಮಕ ಶಾಸನಸಭೆಯನ್ನು ನಾಶಗೊಳಿಸಿ, ಜರ್ಮನಿಯ ಚಕ್ರವರ್ತಿಯನ್ನು ಒಳಗೆ ಬಿಟ್ಟುಕೊಳ್ಳಲಾಗುತ್ತದೆ. ಆದ್ದರಿಂದ ಯಾರೂ ಇದಕ್ಕೆ ಓಗೊಡಬೇಡಿ!" ಇತ್ಯಾದಿ ಇತ್ಯಾದಿ.

ಅಕ್ಟೋಬರ್ 28ರಂದು ನಾನು ಸ್ಮೋಲ್ನಿ ಭವನದ ಪಡಸಾಲೆಯಲ್ಲಿ ಕ್ರಾಂತಿಕಾರಿ ನಾಯಕರಲ್ಲೊಬ್ಬ ಎಂದು ಪರಿಗಣಿಸಲ್ಪಟ್ಟಿದ್ದ ಕಾಮೆನೆವ್‌ನೊಡನೆ ಮಾತನಾಡುತ್ತಿದ್ದೆ. ಆತ

ಕೆಂಪನೆಯ ಚೂಪಾದ ಗಡ್ಡವಿದ್ದ ಗಿಡ್ಡವ್ಯಕ್ತಿ. ಆತನಿಗೆ ಸಾಕಷ್ಟು ಸಂಖ್ಯೆಯಲ್ಲಿ ಪ್ರತಿನಿಧಿಗಳು ಬರಬಹುದು ಎಂಬುದರ ಬಗ್ಗೆ ವಿಶ್ವಾಸವೇ ಇರಲಿಲ್ಲ. ಆದರೂ ಆತ ಹೇಳಿದ್ದು, "ಅಧಿವೇಶನ ನಿಜಕ್ಕೂ ನಡೆದರೆ ಅದು ವಿಶಾಲ ಜನತೆಯ ಅಭಿಪ್ರಾಯವನ್ನೇ ಪ್ರತಿಬಿಂಬಿಸುತ್ತೇ. ಬಂದವರಲ್ಲಿ ಬೋಲ್ಶೆವಿಕ್‌ರಿಗೆ ಬಹುಮತವಿದ್ದರೆ ನಾವು ಎಲ್ಲಾ ಅಧಿಕಾರವನ್ನೂ ಸೋವಿಯತ್ ಜನಸಮಿತಿಗಳಿಗೆ ಕೊಡಿ ಎಂದು ಒತ್ತಾಯಿಸುತ್ತೇವೆ. ಮತ್ತೆ ಈ ಹಂಗಾಮಿ ಸರ್ಕಾರ ರಾಜಿನಾಮೆ ನೀಡಲೇಬೇಕು."

ವೊಲೆಂಡಾರ್ಸ್ಕಿ ಎಂಬ ಯುವಕ ಇನ್ನೂ ಖಂಡಿತವಾಗಿ ಹೇಳಿದ: "ನೋಡಿ ಸಂಧಾನ ಪ್ರಯತ್ನಗಳು ಅಧಿವೇಶನದ ಸಾಧ್ಯತೆಗೆ ಭಂಗ ಉಂಟುಮಾಡುತ್ತವೆ. ಅವರೇನಾದರೂ ಸಭೆ ನಡೆಯುವುದಕ್ಕೆ ಅಡ್ಡಿಪಡಿಸಿದರೆ – ನಾವು ವಾಸ್ತವವಾದಿಗಳಾಗಿರೋದರಿಂದ ಎಲ್ಲಾವುದಕ್ಕೂ ತಯಾರಿರಬೇಕಾಗುತ್ತೆ."

ಅಕ್ಟೋಬರ್ 29ರಂದು ನಾನು ಅನೇಕ ದಿನಪತ್ರಿಕೆಗಳ ಸುದ್ದಿಗಳನ್ನು ನನ್ನ ಟಿಪ್ಪಣಿ ಪುಸ್ತಕದಲ್ಲಿ ದಾಖಲಿಸಿದ್ದೆ. ವಿವಿಧ ಗುಂಪುಗಳು ಬೆಳೆಯುತ್ತಾ ಹೋಗುತ್ತಿದ್ದ ಬಿಕ್ಕಟ್ಟನ್ನು ಹೇಗೆ ಗ್ರಹಿಸಿದ್ದವು, ಹೇಗೆ ಪ್ರತಿಕ್ರಿಯಿಸಿದ್ದವು, ಎಂಬುದು ಈ ಮೂಲಕ ವ್ಯಕ್ತವಾಗುತ್ತದೆ:

*ಸೈನ್ಯದ ಅಧಿಕಾರಿಗಳ ಕೇಂದ್ರ ಸ್ಥಳವಾದ ಮೊಘಿಲೆವ್‌ನಲ್ಲಿ ಸರ್ಕಾರಕ್ಕೆ ನಿಷ್ಠರಾದ ರಕ್ಷಕ ದಳಗಳು, ಸ್ಯಾವೇಜ್ ಡಿವಿಜನ್, ಡೆತ್‌ಬೆಟಾಲಿಯನ್ ಮುಂತಾದ ಕ್ರೌರ್ಯಕ್ಕೆ ಹೆಸರಾದ ದಳಗಳನ್ನು, ಕೊಸ್ಯಾಕರನ್ನು ಒಟ್ಟು ಮಾಡಿಕೊಳ್ಳಲಾಗಿತ್ತು.*

*ವಿವಿಧ ಪ್ರದೇಶಗಳಲ್ಲಿದ್ದ, ಶ್ರೀಮಂತರ ಮಕ್ಕಳನ್ನು ಸೈನ್ಯಾಧಿಕಾರಿಗಳನ್ನಾಗಿ ರೂಪಿಸಲು ತರಬೇತಿ ನೀಡುತ್ತಿದ್ದ ಯಂಕರ್ ಸ್ಕೂಲ್‌ಗಳಿಂದ ಅಲ್ಲಿನ ಸದಸ್ಯರನ್ನು ಪೆತ್ರೋಗ್ರಾಡ್‌ಗೆ ಬರಲು ಸರ್ಕಾರ ಆಹ್ವಾನಿಸಿತ್ತು. ಕೆಲವರು ಆಗಲೇ ರಾಜಧಾನಿಗೆ ಬಂದು ಇಳಿದಿದ್ದರು.*

*ಸಶಸ್ತ್ರ ವಾಹನದಳಗಳನ್ನು ಪೆತ್ರೋಗ್ರಾಡ್‌ನಲ್ಲಿದ್ದ ವಿಂಟರ್ ಪ್ಯಾಲೇಸ್‌ಗೆ (ಚಳಿಗಾಲದ ಅರಮನೆಗೆ) ಕರೆತಂದು ನಿಲ್ಲಿಸಲಾಯಿತು.*

*ಆಳುವ ವರ್ಗ ಮಾಡಿಕೊಂಡ ಇಂಥ ಸಿದ್ಧತೆಗಳಿಗೆ ಪ್ರತಿರೋಧ ಒಡ್ಡಲು ಪ್ರತಿ ಸಿದ್ಧತೆಗಳೂ ಆರಂಭವಾದವು.*

*ಸರ್ಕಾರಿ ಶಸ್ತ್ರಾಸ್ತ್ರ ಕಾರ್ಖಾನೆಯಿಂದ ಸಾವಿರ ಸಾವಿರ ಬಂದೂಕುಗಳನ್ನು ತಂದು ಟ್ರಾಟ್‌ಸ್ಕಿಯ ಆಜ್ಞೆಗನುಗುಣವಾಗಿ ಪೆತ್ರೋಗ್ರಾಡ್ ಕಾರ್ಮಿಕ ಪ್ರತಿನಿಧಿಗಳಿಗೆ ಹಂಚಲಾಯಿತು. ನಗರ ಮಿಲಿಶಿಯಾ ಸೈನಿಕ ದಳದಲ್ಲಿ ಎಲ್ಲ ಅಧಿಕಾರವನ್ನೂ ಸೋವಿಯತ್ ಜನಸಮಿತಿಗಳಿಗೇ ವಹಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು.*

ಏನೋ ನಡೆಯಲಿದೆ ಎಂದು ಎಲ್ಲರಿಗೂ ಅನಿಸುತ್ತಿತ್ತು. ಆದರೆ ಜರುಗುವ ಘಟನೆಯ ಬಗ್ಗೆ ಯಾರಿಗೂ ಸ್ಪಷ್ಟ ಚಿತ್ರವಿರಲಿಲ್ಲ. ಆ ಆತಂಕದ ದಿನಗಳ, ಗೊಂದಲದ ದಿನಗಳ ಒಂದು ಸಣ್ಣ ಉದಾಹರಣೆಯಾಗಿ ಮೇಲಿನ ಟಿಪ್ಪಣಿಗಳನ್ನು ಹೇಳಬೇಕಾಯಿತು.

ಸ್ಮೋಲ್ನಿ ಭವನದಲ್ಲಿ ಅಕ್ಟೋಬರ್ 30ರಂದು ಪೆತ್ರೋಗ್ರಾಡ್ ಸೋವಿಯತ್‌ನ ಸಭೆ ನಡೆಯಿತು. ಅಲ್ಲಿ ಮಾತನಾಡುತ್ತಾ ಟ್ರಾಟ್‌ಸ್ಕಿ ಬಂಡವಾಳಶಾಹಿ ಪತ್ರಿಕೆಗಳು, ಸೋವಿಯತ್‌ಗಳು ಸಶಸ್ತ್ರ ಮೆರವಣಿಗೆಗೆ ಯೋಜನೆ ಹಾಕಿಕೊಂಡಿವೆ ಎಂದು ವರದಿ ಮಾಡಿರುವುದನ್ನು ಖಂಡಿಸಿದರು. "ಸೋವಿಯತ್ ಅಧಿವೇಶನಕ್ಕೆ ಅಡ್ಡಿಯುಂಟು ಮಾಡಲು ಪ್ರತಿಗಾಮಿಗಳು ಮಾಡುತ್ತಿರುವ ಪ್ರಯತ್ನ ಇದು. ನಮಗೆ ಅವಶ್ಯವೆನಿಸಿದರೆ

ನಾವು ಮೆರವಣಿಗೆ ಮಾಡುತ್ತೇವೆ. ಅದಕ್ಕೆ ಪೆತ್ರೋಗ್ರಾಡ್ ಸೈನ್ಯ ಶಿಬಿರದ ಬೆಂಬಲವೂ ಇರುತ್ತದೆ. ಆದರೆ ಅಂಥ ಯಾವುದೇ ಕರೆಯನ್ನು ಪೆತ್ರೋಗ್ರಾಡ್ ಸೋವಿಯತ್ ನೀಡಿಲ್ಲ. ವಾಸ್ತವದಲ್ಲಿ ಸರ್ಕಾರವೇ ಪ್ರತಿಕ್ರಾಂತಿಯ ಪಿತೂರಿ ನಡೆಸಿದೆ. ಹಾಗೇನಾದರೂ ಆದರೆ ಅಂಥ ದಾಳಿಯನ್ನು ನಾವು ನಿರ್ಣಾಯಕವಾಗಿಯೂ, ನಿಷ್ಠುರವಾಗಿಯೂ ಹಿಮ್ಮೆಟ್ಟಿಸುತ್ತೇವೆ."

ಪೆತ್ರೋಗ್ರಾಡ್ ಸೋವಿಯತ್ ಅಂಥ ಸಶಸ್ತ್ರ ಪ್ರದರ್ಶನಕ್ಕೆ ಕರೆ ನೀಡಿರಲಿಲ್ಲ ಎಂಬುದೇನೋ ಸತ್ಯವೇ. ಆದರೆ ಬೋಲ್ಶೆವಿಕ್ ಪಕ್ಷದ ಕೇಂದ್ರ ಸಮಿತಿಯು ಸಶಸ್ತ್ರ ಬಂಡಾಯದ ಸಾಧ್ಯತೆಯನ್ನು ಪರಿಗಣಿಸುತ್ತಿತ್ತು. ಅಕ್ಟೋಬರ್ 23ರಂದು ಅವರು ಇದರ ಕುರಿತಾಗಿಯೇ ಇಡೀ ರಾತ್ರಿ ಸಭೆ ನಡೆಸಿದ್ದರು. ನಾಯಕರು, ಪಕ್ಷದೊಳಗಿನ ಬುದ್ಧಿಜೀವಿಗಳು, ಪೆತ್ರೋಗ್ರಾಡ್‌ನ ಕಾರ್ಮಿಕ ಹಾಗೂ ಸೈನಿಕ ಪ್ರತಿನಿಧಿಗಳು ಎಲ್ಲರೂ ಅಲ್ಲಿ ಹಾಜರಿದ್ದರು. ಪಕ್ಷದ ಮೇಧಾವಿ ನಾಯಕರಲ್ಲಿ ಲೆನಿನ್ ಮತ್ತು ಟ್ರಾಟ್‌ಸ್ಕಿ ಸಶಸ್ತ್ರ ಬಂಡಾಯಕ್ಕೆ ಬೆಂಬಲ ನೀಡಿದರು. ಸೈನಿಕರೂ ಸಹ ಇದಕ್ಕೆ ಒಪ್ಪಿಗೆ ಸೂಚಿಸಲಿಲ್ಲ. ಹೀಗಾಗಿ ಮತಕ್ಕೆ ಹಾಕಿದಾಗ ಬಂಡಾಯದ ಪ್ರಸ್ತಾಪವು ಬಿದ್ದುಹೋಯಿತು.

ನಂತರ ಒಬ್ಬ ಒರಟನಂತೆ ಕಾಣುತ್ತಿದ್ದ ಕಾರ್ಮಿಕ ಎದ್ದುನಿಂತ. ಅವನು ರೋಷದಿಂದ ಸಿಡಿಮಿಡಿಗುಟ್ಟುತ್ತಿದ್ದ. "ನಮಗೆ ಸಶಸ್ತ್ರ ಬಂಡಾಯ ಬೇಕು. ನೀವು ಏನಾದರೂ ಮಾಡಿಕೊಳ್ಳಿ. ಆದರೆ ಅದರಿಂದ ಸೋವಿಯತ್ ಜನಸಮಿತಿಗಳು ನಾಶವಾಗುವುದಾದರೆ, ನಾವು ನಿಮ್ಮನ್ನು ಬಿಟ್ಟು ನಡೆಯುತ್ತೇವೆ." ಆಮೇಲೆ ಇನ್ನೂ ಕೆಲವು ಸೈನಿಕರು ಆತನನ್ನು ಬೆಂಬಲಿಸಿ ಮಾತನಾಡಿದರು. ಅದಾದ ಮೇಲೆ ಮತ್ತೆ ಮತಕ್ಕೆ ಹಾಕಿದಾಗ ಸಶಸ್ತ್ರ ಬಂಡಾಯದ ಪ್ರಸ್ತಾಪಕ್ಕೆ ಜಯವಾಯಿತು.

***ಸಂಪಾದಕರ ಟಿಪ್ಪಣಿ:*** *23ರ ರಾತ್ರಿ ನಡೆದ ಕೇಂದ್ರ ಸಮಿತಿಯ ರಹಸ್ಯ ಸಭೆಯಲ್ಲಿ ಲೆನಿನ್ ಸಶಸ್ತ್ರ ಬಂಡಾಯದ ನಿರ್ಣಯವನ್ನು ಮಂಡಿಸಿದರು. ಸ್ಟಾಲಿನ್, ಸ್ವೆರ್ಡ್‌ಲೊವ್, ಮೆಡಮ್ ಕೊಲಂತಾಯ್ ಹಾಗೂ ಟ್ರಾಟ್‌ಸ್ಕಿ ಸೇರಿದಂತೆ ಹನ್ನೆರಡು ಜನ ಹಾಜರಿದ್ದರು. ಇದರಲ್ಲಿ ಝಿನೊವೀವ್, ಕಮೆನೇವ್ ಬಿಟ್ಟು ಉಳಿದ ಹತ್ತೂ ಜನರು ಬಂಡಾಯದ ಪರ ಮತ ಹಾಕಿದರು. 29ರಂದು ನಡೆದ ವಿಸ್ತೃತ ಸಭೆಯಲ್ಲಿ ಸೈನಿಕ, ಕಾರ್ಮಿಕ ಪ್ರತಿನಿಧಿಗಳೂ ಹಾಜರಿದ್ದರು. ಅದರಲ್ಲಿ ಮತ್ತೆ ಲೆನಿನ್ ನಿರ್ಣಯ ಮಂಡಿಸಿ ಸ್ಫೂರ್ತಿದಾಯಕ ಭಾಷಣವನ್ನು ಮಾಡಿದರು. ಇದರ ಪರವಾಗಿ 19 ಮತಗಳು ಬಿದ್ದವು. ಝಿನೊವೀವ್ ಮತ್ತು ಕಮೆನೇವ್ ಮತ್ತೊಮ್ಮೆ ಇದನ್ನು ವಿರೋಧಿಸಿದರು.*

ಅದೇನೇ ಇರಲಿ ಝಿನೊವೀವ್, ಕಮೆನೇವ್, ರಿಯಾಜನೊವ್ ಮುಂತಾದ ಪಕ್ಷದೊಳಗಿನ ಬಲಪಂಥೀಯರು ಸಶಸ್ತ್ರ ಹೋರಾಟವನ್ನು ವಿರೋಧಿಸುತ್ತಲೇ ಹೋದರು. ಇದೇ ಸಂದರ್ಭದಲ್ಲಿ ಲೆನಿನ್ ಬರೆದ 'ಕಾಮ್ರೇಡರಿಗೊಂದು ಪತ್ರ' ಎಂಬ ಹೊತ್ತಿಗೆಯ ಮೊದಲ ಕಂತನ್ನು 'ರಬೋಚಿ ಪುತ್' ಪತ್ರಿಕೆ ಪ್ರಕಟಿಸಿತು. ಜಗತ್ತು ಕಂಡ ಅತ್ಯಂತ ನಿರ್ಭೀತ ರಾಜಕೀಯ ಪ್ರಚಾರದ ಬರೆಹಗಳಲ್ಲಿ ಇದೊಂದು. ಅಕ್ಟೋಬರ್ 31ರ ಬೆಳಿಗ್ಗೆ ಇದು ಮುದ್ರಿತವಾಯಿತು. (ಸರಿಯಾದ ದಿನಾಂಕ ನವೆಂಬರ್ 1– ಸಂ.) ಕಮೆನೇವ್ ಹಾಗೂ ಝಿನೊವೀವ್‌ರ ವಾದಗಳನ್ನು ಖಂಡಿಸಿ, ಸಶಸ್ತ್ರ ಹೋರಾಟದ ಪರವಾದ ಅಂಶಗಳನ್ನು ಇದರಲ್ಲಿ ಲೆನಿನ್ ಮಂಡಿಸಿದ್ದರು. "ಒಂದೋ ಸೋವಿಯತ್‌ಗಳಿಗೆ ಎಲ್ಲ ಅಧಿಕಾರ ಎಂಬ

ಘೋಷಣೆಯನ್ನು ಕೈಬಿಡಿ ಅಥವಾ ಸಶಸ್ತ್ರ ಹೋರಾಟಕ್ಕೆ ಸಜ್ಜಾಗಿ. ಮಧ್ಯದ ದಾರಿ ಎಂಬುದಿಲ್ಲ" ಎಂಬುದು ಅವರ ಪ್ರತಿಪಾದನೆ.

ಇನ್ನೊಂದು ಕಡೆ ಗಣರಾಜ್ಯದ ಮಂಡಳಿಯ ಅಧಿವೇಶನದಲ್ಲಿ ಕ್ರಾಂತಿವಿರೋಧಿ ಕ್ಯಾಡೆಟ್ ಪಾರ್ಟಿಯ ನಾಯಕನಾದ ಮಿಲ್ಯೂಕೊವ್ ಒಂದು ಕಹಿಯಾದ, ಪ್ರಭಾವಶಾಲಿ ಭಾಷಣವನ್ನೇ ಚಚ್ಚಿದ. ಆತ ಮತ್ತು ಸ್ಕೊಬೆಲೆವ್ ಸೂಚನೆ (ನಕಾಜ಼್)ಯನ್ನು ಪ್ರಸ್ತಾಪಿಸಿ ಅದು ಜರ್ಮನರ ಪರವಾಗಿತ್ತು ಎಂದು ಪ್ರಚಾರ ಮಾಡಿದ. ತೆರೆಶ್ಚೆಂಕೊ ಕಡೆಗೆ ವ್ಯಂಗ್ಯದ ನಗೆ ಬೀರಿ ಕ್ರಾಂತಿಕಾರಿ ಜನತಂತ್ರವು ರಷ್ಯಾವನ್ನು ಹಾಳುಗೆಡವುತ್ತಿದೆ ಎಂದ. ಎಡಪಂಥೀಯರು ಆತನ ಭಾಷಣದುದ್ದಕ್ಕೂ ಪ್ರತಿಭಟಿಸುತ್ತಲೇ ಇದ್ದರು.

ಮೇಲಂತಸ್ತಿನಲ್ಲಿದ್ದ ಸಭಾಂಗಣದಲ್ಲಿ ಪೆತ್ರೋಗ್ರಾಡ್ ಸೋವಿಯತ್ ಸಭೆ ತುಂಬಿ ತುಳುಕುತ್ತಿತ್ತು. ಉದ್ರಿಕ್ತ ಚರ್ಚೆಗಳು ನಡೆಯುತ್ತಲೇ ಇದ್ದವು. ಬೋಲ್ಶೆವಿಕ್‌ರ ಪ್ರಚಾರ ಯಶಸ್ವಿಯಾಗುತ್ತಿತ್ತು. ಸರ್ಕಾರಕ್ಕೆ ಸಹ ಇದನ್ನು ಅಲ್ಲಗಳೆಯುವುದು ಸಾಧ್ಯವೇ ಇರಲಿಲ್ಲ. ಆತುರಾತುರವಾಗಿ ಸರ್ಕಾರ ಮತ್ತು ಗಣರಾಜ್ಯ ಮಂಡಳಿಗಳು ಒಟ್ಟಾಗಿ ಸೇರಿ ಎರಡು ಕಾನೂನುಗಳನ್ನು ರಚಿಸಿದವು. ಒಂದು ರೈತರಿಗೆ ನೆಲವನ್ನು ತಾತ್ಕಾಲಿಕವಾಗಿ ಕೊಡುವ ಉದ್ದೇಶಕ್ಕಾಗಿ. ಇನ್ನೊಂದು ತ್ವರಿತವಾಗಿ ಶಾಂತಿಯನ್ನು ಸ್ಥಾಪಿಸಲೋಸುಗ ವಿದೇಶಾಂಗ ನೀತಿಯನ್ನು ಅನುಸರಿಸಲಿಕ್ಕಾಗಿ. ಇದರ ಜೊತೆಗೆ ಸೈನಿಕರಿಗೆ ಸಂತೋಷಪಡಿಸಲೆಂದು ಮಾರನೆಯ ದಿನವೇ ಕೆರೆನ್‌ಸ್ಕಿ, ಸೈನ್ಯದಲ್ಲಿ ಇನ್ನು ಮುಂದೆ ಮರಣದಂಡನೆ ಇರುವುದಿಲ್ಲ, ಎಂದು ಘೋಷಿಸಿದ. ಅದೇ ದಿನ ಮಧ್ಯಾಹ್ನ ಗಣತಂತ್ರವನ್ನು ಉಳಿಸಲು ಮತ್ತು ಅರಾಜಕತೆಯನ್ನು ಹತ್ತಿಕ್ಕಲು ಆಯೋಗವನ್ನು ರಚಿಸಿ ಅದರ ಗೋಷ್ಠಿಯೂ ಅದ್ದೂರಿಯಾಗಿ ಪ್ರಾರಂಭವಾಯಿತು. ಆದರೆ ಅದು ಮುಂದೇನಾಯಿತು ಎಂಬುದರ ಬಗ್ಗೆ ಚರಿತ್ರೆಯಲ್ಲಿ ಯಾವ ದಾಖಲೆಯೂ ದೊರೆಯುವುದಿಲ್ಲ. ಮಾರನೆಯ ದಿನ ನಾನು ಇನ್ನಿಬ್ಬರು ವರದಿಗಾರರೊಡನೆ ಕೆರೆನ್‌ಸ್ಕಿಯನ್ನು ಸಂದರ್ಶಿಸಿದೆ. ಆತ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿಯಾದದ್ದು ಅದೇ ಕಡೆಯ ಬಾರಿ!

ಆತನ ಮಾತು ತುಂಬ ಕಹಿಯಾಗಿತ್ತು. "ಆರ್ಥಿಕ ಬಿಕ್ಕಟ್ಟಿನಿಂದ ಮತ್ತು ಮಿತ್ರರಾಷ್ಟ್ರಗಳ ದ್ರೋಹದಿಂದ ನಿಃಶಕ್ತರಾಗಿದ್ದೇವೆ, ನಾವು ಆರಂಭಿಸಿದ ರಷ್ಯನ್ ಕ್ರಾಂತಿಯ ಕಥೆ ಮುಗಿಯಿತು ಎಂದು ಜಗತ್ತು ಭಾವಿಸಿದೆ. ಇಂಥ ತಪ್ಪು ತಿಳಿವಳಿಕೆಯನ್ನು ಒಪ್ಪಬೇಡಿ. ಕ್ರಾಂತಿ ಈಗ ಆರಂಭವಾಗುತ್ತಿದೆ..." ಆತನಿಗೆ ಗೊತ್ತಿರಲಿಲ್ಲ, ಆತನ ಭವಿಷ್ಯವಾಣಿ ಬೇರೊಂದು ರೀತಿಯಲ್ಲಿ ಸತ್ಯವಾಗುವುದಿತ್ತು !

ಅಕ್ಟೋಬರ್ 30ರಂದು ನಡೆದ ಪೆತ್ರೋಗ್ರಾಡ್ ಸೋವಿಯತ್‌ನ ಅಹೋರಾತ್ರಿ ಸಭೆ ತುಂಬ ಉದ್ವಿಗ್ನವಾಗಿತ್ತು. ಅವತ್ತು ನಾನೂ ಅಲ್ಲಿ ಹಾಜರಿದ್ದೆ. 'ಸೌಮ್ಯವಾದಿ' ಸಮಾಜವಾದಿ ಬುದ್ಧಿಜೀವಿಗಳು, ಅಧಿಕಾರಿಗಳು, ಸೈನ್ಯಾಧಿಕಾರಿ ಸಮಿತಿ ಸದಸ್ಯರು, ತ್ಸೆ–ಇ–ಕಾ ಸದಸ್ಯರು ಎಲ್ಲರೂ ಪೂರ್ಣ ಪ್ರಮಾಣದಲ್ಲಿ ಸಭೆಗೆ ಬಂದುಬಿಟ್ಟಿದ್ದರು. ಇವರ ವಿರುದ್ಧ ಎದ್ದು ನಿಂತು ವಾದಿಸುವವರು ಯಾರು? – ಸರಳರೂ ಭಾವುಕರೂ ಆದ ಕಾರ್ಮಿಕರು, ರೈತರು ಮತ್ತು ಸಾಮಾನ್ಯ ಸೈನಿಕರು.

ಮಾಸ್ಕೊ ನಗರದ ಉತ್ತರಕ್ಕಿರುವ ಟ್ವೆರ್ ಪಟ್ಟಣದ ಗಲಭೆಗಳ ಕುರಿತು ಒಬ್ಬ ರೈತ ಪ್ರತಿನಿಧಿ ಮಾತನಾಡಿದ. ಭೂಮಿ ಸಮಿತಿಗಳನ್ನು ದಸ್ತಗಿರಿ ಮಾಡುವುದರೊಂದಿಗೆ ಇವೆಲ್ಲಾ ಆರಂಭ

ವಾಯಿತು ಎಂದ. "ಈ ಕೆರೆನ್‌ಸ್ಕಿ ಇದ್ದಾನಲ್ಲ, ಇವನು ಜಮೀನ್ದಾರರ ರಕ್ಷಕ" ಎಂದ. ಆ ರೈತ ಸಂಗಾತಿ ಮುಂದುವರೆದು ಆರ್ಭಟಿಸಿದ: "ಸಂವಿಧಾನಾತ್ಮಕ ಶಾಸನ ಸಭೆಯ ಅಧಿವೇಶನವೇನಾದರೂ ನಡೆದರೆ, ನಾವು ಭೂಮಿಯನ್ನು ಖಂಡಿತ ಕಸಿದುಕೊಳ್ಳುತ್ತೇವೆ. ಇದು ಅವರಿಗೆ ಗೊತ್ತು, ಆದ್ದರಿಂದ ಸಂವಿಧಾನ ಶಾಸನಸಭೆಯನ್ನೇ ನಾಶಮಾಡಲು ಹೊರಟಿದ್ದಾರೆ."

ನಂತರ ಪ್ರತಿಲೊವ್ ಕಾರ್ಯಾಗಾರದಿಂದ ಬಂದಿದ್ದ ಯಂತ್ರ ಕಾರ್ಮಿಕನೊಬ್ಬ ಮಾತನಾಡಿದ. (ಪ್ರತಿಲೊವ್ ಕಬ್ಬಿಣದ ಕಾರ್ಯಾಗಾರ ಪೆತ್ರೋಗ್ರಾಡ್‌ನ ಬಳಿಯಲ್ಲಿದೆ. ರಷ್ಯಾದ ಕ್ರಾಂತಿಯಲ್ಲಿ 1905ರಿಂದ ಈ ಕಾರ್ಯಾಗಾರದ ಕಾರ್ಮಿಕರು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾ ಬಂದಿದ್ದರು. ಮಾರ್ಚ್ ತಿಂಗಳ ಮೊದಲ ಕ್ರಾಂತಿಯಲ್ಲೂ ಅದರ ಪಾತ್ರ ಮಹತ್ವಪೂರ್ಣವಾದದ್ದು. ಸಹಜವಾಗಿಯೇ ಆಳುವವರಿಗೆ ಆ ಸ್ಥಳವೆಂದರೆ ಮೈನಡುಕವುಂಟಾಗುತ್ತಿತ್ತು.)

ಅ) ಕಾರ್ಖಾನೆ ನಡೆಸಲು ಬೇಕಾದ ಕಚ್ಚಾಸಾಮಗ್ರಿಗಳಾಗಲೀ, ಉರುವಲು ಇಂಧನವಾಗಲೀ ಇಲ್ಲ ಎಂಬ ನೆಪವೊಡ್ಡಿ ಕಾರ್ಖಾನೆಯ ಒಂದೊಂದೇ ವಿಭಾಗಗಳನ್ನು ಮುಚ್ಚಲಾಗುತ್ತಿದೆ ಎಂದು ಆತ ವಿವರಿಸಿದ. ಆದರೆ ಕಾರ್ಖಾನೆಯ ಕಾರ್ಮಿಕ ಸಮಿತಿಯು, ಬಚ್ಚಿಟ್ಟಿದ್ದ ಸಾಮಗ್ರಿಗಳ ದೊಡ್ಡ ಶೇಖರಣೆಯನ್ನೇ ಕಂಡುಹಿಡಿದಿದೆ ಎಂದು ಆತ ವರದಿ ಮಾಡಿದ.

"ಇದು ಪ್ರಚೋದನಕಾರಿ ತಂತ್ರ. ಒಂದೋ ನಾವು ಉಪವಾಸ ಬಿದ್ದು ಸಾಯಬೇಕು. ಇಲ್ಲವೇ ಹಿಂಸಾತ್ಮಕ ವಿಧಾನಗಳನ್ನು ಕೈಗೆತ್ತಿಕೊಳ್ಳಬೇಕು." ಆತನ ದನಿಯಲ್ಲಿ ಆಕ್ರೋಶವಿತ್ತು.

ಒಬ್ಬ ಸೈನಿಕ ಶುರು ಮಾಡಿದ : "ನಾನು ಎಲ್ಲಿಂದ ಬರುತ್ತಿದ್ದೇನೆ ಗೊತ್ತೆ? ಟ್ರೆಂಚ್‌ಗಳನ್ನು ಅಗೆಯುತ್ತಾ ಹೋರಾಡುತ್ತಿರುವ ರಣಾಂಗಣದಿಂದ. ಆದರೆ ಕಾಮ್ರೇಡ್ಸ್, ನಾವು ತೋಡುತ್ತಿರುವುದು ಕಂದಕಗಳನ್ನಲ್ಲ, ನಮ್ಮನ್ನೇ ಮಣ್ಣುಮಾಡುವ ಸಮಾಧಿಗಳನ್ನು."

ನಂತರ ಮಾತನಾಡಲು ಎದ್ದು ನಿಂತವನು ಒಬ್ಬ ಎತ್ತರವಾದ ತರುಣ ಸೈನಿಕ. ಮಿನುಗುವ ಕಣ್ಣಿನ ಇವನಿಗೆ ಪ್ರತಿನಿಧಿಗಳು ಕಿವಿಗಡಚಿಕ್ಕುವಂತೆ ಹರ್ಷೋದ್ಗಾರ ಹಾಕುತ್ತಾ ಸ್ವಾಗತಿಸಿದರು. ಏಕೆಂದರೆ ಅವನು ಈ ಮುಂಚಿನ ಜುಲೈ ದಂಗೆಯಲ್ಲಿ ಸತ್ತುಹೋದ ಎಂಬ ವರದಿಯಿದ್ದು ಈಗ ಸಾವಿನ ಮನೆಯಿಂದ ವಾಪಸ್ಸಾದವನು. ಹೆಸರು ಚುಡ್‌ನೊವ್‌ಸ್ಕಿ. ಆತ ಹೀಗೆಂದ :

"ಸಾಮಾನ್ಯ ಸೈನಿಕರಿಗೆ ಸೈನಾಧಿಕಾರಿಗಳ ಬಗ್ಗೆ ಯಾವ ನಂಬಿಕೆಯೂ ಉಳಿದಿಲ್ಲ. ಸೈನ್ಯ ಸಮಿತಿಗಳು ಎನ್ನಿಸಿಕೊಂಡವು ಸಹ ನಮ್ಮ ಸೈನಿಕರ ಸೋವಿಯತ್‌ಗಳ ಸಭೆಯನ್ನು ಕರೆಯದೆ ನಮಗೆ ದ್ರೋಹ ಬಗೆದಿವೆ. ಸಂವಿಧಾನಾತ್ಮಕ ಶಾಸನ ಸಭೆಯ ಅಧಿವೇಶನವನ್ನು ಯಾವ ದಿನಾಂಕಕ್ಕೆ ನಿಗದಿಪಡಿಸಲಾಗಿದೆಯೋ ಅದೇ ದಿನದಂದೇ ಆರಂಭಿಸಬೇಕು. ಯಾರಾದರೂ ಅದನ್ನು ಮುಂದಕ್ಕೆ ಹಾಕೋಕೆ ಪ್ರಯತ್ನಿಸಿದರೆ ಅಂಥವರಿಗೆ ನಮ್ಮ ಶಾಪವಿದೆ. ಮತ್ತೆ ನಮ್ಮದು ಗೊಡ್ಡು ಶಾಪಗಳಲ್ಲ. ಏಕೆಂದರೆ ಸೈನ್ಯದವರ ಬಳಿ ಬಂದೂಕುಗಳೂ ಇರುತ್ತವಲ್ಲ...!"

ಸಂವಿಧಾನಾತ್ಮಕ ಶಾಸನಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಸೈನ್ಯದಲ್ಲಿ ಪ್ರಚಾರ ಮುಂತಾದ ಕಾರ್ಯಕ್ರಮಗಳು ಆಗ ಜರುಗುತ್ತಿದ್ದವು. ತಾನಿದ್ದ ಐದನೇ ಸೈನ್ಯ ದಳದಲ್ಲಿ

ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸಿರುವ ಸಮಸ್ಯೆಗಳ ಕುರಿತು ಸಹ ಅವನು ವರದಿ ಮಾಡಿದ : "ಬೋಲ್ಶೆವಿಕರಿಗೆ ಅನಾನುಕೂಲ ಉಂಟುಮಾಡಬೇಕು ಎಂದು ಸೈನ್ಯಾಧಿಕಾರಿಗಳು ಮತ್ತು ಇನ್ನೂ ವಿಶೇಷವಾಗಿ ಮೆನ್ಶೆವಿಕರು ಮತ್ತು ಸೋಷಿಯಲಿಸ್ಟ್ ರೆವಲ್ಯೂಶನರಿಗಳು ಪ್ರಯತ್ನಿಸುತ್ತಿದ್ದಾರೆ. ರಣಾಂಗಣದ ಟ್ರೆಂಚ್‌ಗಳಲ್ಲಿ ನಮ್ಮ ಕರಪತ್ರಗಳನ್ನು ಹಂಚಲು ಬಿಡುತ್ತಿಲ್ಲ. ನಮ್ಮ ಭಾಷಣಕಾರರನ್ನು ಬಂಧಿಸುತ್ತಿದ್ದಾರೆ..."

ಅಷ್ಟರಲ್ಲಿ ಮಾತಿನ ದಿಕ್ಕು ತಪ್ಪಿಸಲೆಂದೇ ಸೈನಿಕನೊಬ್ಬ ಕಿರುಚಿಕೊಂಡ:

"ಊಟಕ್ಕೆ ಬ್ರೆಡ್ ಸಿಗ್ತಿಲ್ಲವಲ್ಲಾ, ನೀನು ಅದರ ಬಗ್ಗೆ ಯಾಕೆ ಮಾತಾಡಲ್ಲ?"

ಸಿಟ್ಟಿನಿಂದ ಚುಡ್‌ನೊವ್‌ಸ್ಕಿ ಉತ್ತರಿಸಿದ.

"ಮನುಷ್ಯ ಬದುಕಿರೋದು ಬರೀ ಬ್ರೆಡ್‌ನಿಂದಲ್ಲ."

ಈತನ ಮಾತಿನ ನಂತರ ಒಬ್ಬ ಮೆನ್ಶೆವಿಕ್ ಸೈನ್ಯಾಧಿಕಾರಿ ಮಾತನಾಡಲು ನಿಂತ. "ಪ್ರಶ್ನೆ ಯಾರು ಅಧಿಕಾರದಲ್ಲಿದ್ದಾರೆ ಅನ್ನೋದಲ್ಲ. ಸಮಸ್ಯೆ ಇರೋದು ಸರ್ಕಾರದಲ್ಲಲ್ಲ, ಯುದ್ಧದಲ್ಲಿ. ಮೊದಲು ನಾವು ಯುದ್ಧಾನ ಗೆಲ್ಲಬೇಕು." ನೆರೆದಿದ್ದ ಜನ ಅಪಹಾಸ್ಯ ಮಾಡುವಂತೆ ಕೂಗಾಡಿದರು. ಶಿಳ್ಳೆ ಹೊಡೆದರು. ಅವನು ಮಾತಾಡುತ್ತಲೇ ಇದ್ದ. "ಬೋಲ್ಶೆವಿಕರು ಅಪಾಯಕಾರಿಗಳು." ಇಡೀ ಸಭಾಂಗಣವೇ ಈ ಮಾತಿಗೆ ನಗೆಯಲ್ಲಿ ಮುಳುಗಿಹೋಯಿತು. "ಸ್ವಲ್ಪ ಕಾಲ ವರ್ಗ ಹೋರಾಟವನ್ನು ಮರೆಯೋಣ" ಎಂದು ಅವನೆಂದರೆ, ಯಾರೋ "ನೀನು ಎಷ್ಟೇ ಆಸೆಪಟ್ಟರೂ ನಾವು ಮರೆಯುವುದಿಲ್ಲ" ಎಂದು ಅಣಕಿಸಿದರು.

ಇರಲಿ, ಊರಿನ ವಾತಾವರಣ ಹೇಗಿತ್ತು? ಪೆತ್ರೋಗ್ರಾಡ್ ಆ ದಿನಗಳಲ್ಲಿ ವಿಲಕ್ಷಣವಾಗಿತ್ತು. ಫ್ಯಾಕ್ಟರಿ ಸಮಿತಿಯ ಕಛೇರಿಗಳಲ್ಲಿ ಬಂದೂಕುಗಳನ್ನು ಶೇಖರಿಸಲಾಗಿತ್ತು, ಪತ್ರವಾಹಕರು ಅವಸರದಿಂದ ಚಲಿಸುತ್ತಿದ್ದರು. ಕಾರ್ಮಿಕರೇ ರಚಿಸಿಕೊಂಡಿದ್ದ 'ರೆಡ್‌ಗಾರ್ಡ್' ಸೈನ್ಯದಳಗಳು ಕವಾಯತು ಮಾಡುತ್ತಿದ್ದವು. ರಾತ್ರಿ ಇಡೀ ಸೈನಿಕ ಶಿಬಿರಗಳಲ್ಲಿ ವಾಗ್ವಾದಗಳು, ಸಭೆಗಳು ನಡೆಯುತ್ತಿದ್ದವು.

ರಸ್ತೆಗಳಲ್ಲಿ ಸಂಜೆಯಾಗುತ್ತಿದ್ದಂತೆ ಗುಂಪು ಗುಂಪು ಜನ ಹೊಸ ಸುದ್ದಿಗಾಗಿ ವೃತ್ತಪತ್ರಿಕೆಗಳಿಗೆ ಮುಗಿಬೀಳುತ್ತಾ ಓಡಾಡಿಕೊಂಡಿದ್ದರು. ರಸ್ತೆ ಡಕಾಯಿತಿಗಳು ಹೆಚ್ಚಾಗಿದ್ದವು. ಓಡಾಡುವುದೇ ಅಪಾಯಕಾರಿಯಾಗಿತ್ತು. ಏನೋ ಕದ್ದ ಆರೋಪಕ್ಕಾಗಿ ಜನ ಒಟ್ಟಾಗಿ ಒಬ್ಬ ಸೈನಿಕನನ್ನು ಒದ್ದು ಕೊಂದದ್ದನ್ನು ನಾನೇ ಕಣ್ಣಾರೆ ನೋಡಿದೆ. ಬ್ರೆಡ್ಡು, ಹಾಲಿಗಾಗಿ ಕಾಯುತ್ತಾ ಸಾಲಿನಲ್ಲಿ ನಿಂತಿದ್ದ ಜನರಿಗೆ ಕೆಲವು ನಿಗೂಢ ವ್ಯಕ್ತಿಗಳು ಗಾಳಿ ಸುದ್ದಿ ಹರಡುತ್ತಿದ್ದರು. 'ಜನ ಸಾಯ್ತಿದ್ದಾರೆ, ಆದರೆ ಸೋವಿಯತ್ ನಾಯಕರು ಐಶಾರಾಮಿ ಜೀವನ ನಡೆಸ್ತಿದಾರೆ' ಎಂದು ಪ್ರಚೋದಿಸುತ್ತಿದ್ದರು. ಒಟ್ಟಿನಲ್ಲಿ ಪ್ರಕ್ಷುಬ್ಧ ಸ್ಥಿತಿ.

ಇತ್ತ ಕ್ರಾಂತಿಕಾರಿ ಚಟುವಟಿಕೆಗಳಿಗೆ ಕೇಂದ್ರವಾಗುತ್ತಿದ್ದ ಸ್ಮೋಲ್ನಿ ಭವನದಲ್ಲಿ ಪ್ರತಿ ಬಾಗಿಲಿನಲ್ಲಿಯೂ ಗಾರ್ಡ್‌ಗಳಿದ್ದರು. ಪಾಸಿಲ್ಲದೆ ಯಾರನ್ನೂ ಬಿಡುತ್ತಿರಲಿಲ್ಲ. ಎಲ್ಲ ಕೋಣೆಗಳಲ್ಲೂ ಬಿರುಸಿನ ಚಟುವಟಿಕೆ. ನೂರಾರು ಸೈನಿಕರು, ಕಾರ್ಮಿಕರು ಸುಸ್ತಾಗಿ ನೆಲದ ಮೇಲೆ ಮಲಗಿರುತ್ತಿದ್ದರು.

ಅತ್ತ, ರಾಜಧಾನಿಯ ಮುಖ್ಯ ಸ್ಥಳಗಳಲ್ಲಿ ಬೆಳಗಿನಿಂದ ಬೈಗಿನವರೆಗೂ ಜೂಜಿನ ಅಡ್ಡೆಗಳು ನಡೆಯುತ್ತಲೇ ಇದ್ದವು. ಮದ್ಯದ ಹೊಳೆ ಹರಿಯುತ್ತಿತ್ತು. ಸುಮಾರು ಇಪ್ಪತ್ತು

ಸಾವಿರ ರೂಬಲ್‌ಗಳ ಪಣವನ್ನು ಒಡ್ಡುತ್ತಿದ್ದರು! ನಗರ ಮಧ್ಯದಲ್ಲಿ ರಾತ್ರಿಕಾಲದಲ್ಲಿ ಬೆಲೆಬಾಳುವ ವಸ್ತ್ರಗಳನ್ನೂ, ಉಡುಪುಗಳನ್ನೂ ಮೈಮೇಲೆ ಹೊತ್ತು ವೇಶ್ಯೆಯರು ಕಿಕ್ಕಿರಿದಿದ್ದ ಪಾನಗೃಹಗಳಲ್ಲಿ ಓಡಾಡಿಕೊಂಡಿದ್ದರು.

ರಾಜ ಪ್ರಭುತ್ವವಾದಿಗಳ ಪಿತೂರಿಗಳು, ಎಲ್ಲೆಡೆ ಜರ್ಮನ್ ಗೂಢಚಾರರು, ಒಳಸಂಚು ರೂಪಿಸುತ್ತಿರುವ ಕಳ್ಳಸಾಗಾಣಿಕೆದಾರರು... ಒಂದೇ, ಎರಡೇ!

ಮಂಕಾದ ಆಗಸದಡಿಯಲ್ಲಿ, ಸುರಿವ ಮಳೆಯಲ್ಲಿ, ಮೈ ನಡುಗಿಸುವ ಚಳಿಯಲ್ಲಿ ಈ ಜೀವಂತವಾಗಿ ಮಿಡಿಯುತ್ತಿರುವ ನಗರವು ವೇಗದಿಂದ, ಶರವೇಗದಿಂದ ಧಾವಿಸುತ್ತಿದೆ! ಎತ್ತ ಕಡೆಗೆ...?

## ಅಧ್ಯಾಯ – 3

# ಕ್ರಾಂತಿಗೆ ಮುಂಚಿನ ದಿನ

ಒಂದು ಸರ್ಕಾರ ದುರ್ಬಲವಾಗಿದ್ದು, ಜನತೆ ವಿದ್ರೋಹಕ್ಕೆ ಸಜ್ಜಾಗಿದ್ದಾಗ, ಆಳುವವರು ಏನೇ ಕ್ರಮ ಕೈಗೊಳ್ಳಲಿ ಅದರಿಂದ ಜನ ಇನ್ನಷ್ಟು ಕೆರಳುತ್ತಾರೆ, ಕ್ರಮ ಕೈಗೊಳ್ಳದೆ ನಿಷ್ಕ್ರಿಯವಾಗೇ ಇದ್ದುಬಿಟ್ಟರೆ ಜನರ ತಿರಸ್ಕಾರ ಇನ್ನಷ್ಟು ಹೆಚ್ಚಾಗುತ್ತದೆ.

ಸರ್ಕಾರ ಪೆತ್ರೋಗ್ರಾಡ್‌ಅನ್ನು ತೊರೆದು ಹೋಗುತ್ತದೆ ಎಂಬ ಸುಳಿವು ಸಿಕ್ಕೊಡನೆ ಜನತೆಯ ಆಕ್ರೋಶ ಚಂಡಮಾರುತದಂತೆ ಸ್ಫೋಟವಾಯಿತು. ಸರ್ಕಾರಕ್ಕೆ ಅಂಥ ಯಾವುದೇ ಉದ್ದೇಶವಿಲ್ಲ ಎಂದು ಘೋಷಿಸಿದರೆ ಜನ ಅದನ್ನು ಹಾಸ್ಯ ಮಾಡಿದರು. ರಬೋಚಿ ಪುತ್ ಪತ್ರಿಕೆಯು, ಹಂಗಾಮಿ ಬೂರ್ಶ್ವಾ ಸರ್ಕಾರವು ಕ್ರಾಂತಿಯ ಒತ್ತಡದ ಕಾರಣದಿಂದಾಗಿ ರಾಜಧಾನಿಯನ್ನು ವರ್ಗಾಯಿಸುವ ಪ್ರಸ್ತಾಪವನ್ನು, ಪೆತ್ರೋಗ್ರಾಡ್‌ಅನ್ನು ಒಪ್ಪಿಸಿ ಓಡಿಹೋಗಬೇಕೆಂಬ ಹುನ್ನಾರವನ್ನು, ಬಚ್ಚಿಟ್ಟು ಸುಳ್ಳು ಹೇಳುತ್ತಿದೆ, ಎಂದು ಜರೆಯಿತು.

ಖಾರ್ಕೊವ್ ಪಟ್ಟಣದಲ್ಲಿ ಮೂವತ್ತು ಸಾವಿರ ಗಣಿಕಾರ್ಮಿಕರು ಮುಷ್ಕರ ಹೂಡಿದರು. ಆಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದ ಕಾರ್ಮಿಕರ ಸಂಘಟನೆ ಐ.ಡಬ್ಲ್ಯು.ಡಬ್ಲ್ಯು "ಕಾರ್ಮಿಕರಿಗೂ, ಬಂಡವಾಳಗಾರರಿಗೂ ಸಮಾನ ಹಿತಾಸಕ್ತಿ ಎಂಬುದಿಲ್ಲ" ಎಂಬ ಆ ಸಂಸ್ಥೆಯ ಹೇಳಿಕೆಯನ್ನು ಈ ಕಾರ್ಮಿಕರು ತಮ್ಮ ಘೋಷ ವಾಕ್ಯವಾಗಿ ಅಳವಡಿಸಿಕೊಂಡಿದ್ದರು. ಕಾರ್ಮಿಕ ಮಂತ್ರಿಯು ಸಮಸ್ಯೆಯನ್ನು ಪರಿಹರಿಸಲು ಕಳುಹಿಸಿದ ಪ್ರತಿನಿಧಿಯ ಬಗ್ಗೆ ಕಾರ್ಮಿಕರಿಗೆ ಉತ್ಕಟವಾದ ದ್ವೇಷವಿತ್ತು. ಆದರೂ ತ್ಸೆ–ಇ–ಕಾ ಇಂಥವನನ್ನು ಕಳುಹಿಸುವುದನ್ನು ಬೆಂಬಲಿಸಿತು. ಅದೇ ರೀತಿ ದಮನಕಾರಿ ಕ್ರಮಗಳಲ್ಲಿ ತೊಡಗಿದ್ದ ಕೊಸ್ಸಾಕರನ್ನು ಅಲ್ಲಿಂದ ವಾಪಸ್ಸು ಕರೆಸಿಕೊಳ್ಳಲೂ ಒಪ್ಪಲಿಲ್ಲ.

ಇದು ಸಾಲದೆಂಬಂತೆ ಸರ್ಕಾರವು ಕಲುಗಾ ಪಟ್ಟಣದಲ್ಲಿನ ಸೋವಿಯತ್‌ಅನ್ನು ಸಹ ಬಲಪ್ರಯೋಗದಿಂದ ವಿಸರ್ಜಿಸಿತು. ಈ ಸೋವಿಯತ್‌ನಲ್ಲಿ ಬಹುಮತ ಹೊಂದಿದ್ದ ಬೋಲ್ಷೆವಿಕರು ಅನ್ಯಾಯಯುತವಾಗಿ ಬಂಧಿಸಲ್ಪಟ್ಟಿದ್ದ ಕೆಲವು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿದ್ದರು. ಇದನ್ನೇ ನೆಪವಾಗಿಟ್ಟುಕೊಂಡು ಸರ್ಕಾರವು ಫಿರಂಗಿದಳವನ್ನು ಕರೆಸಿ ಸೋವಿಯತ್ ಕೇಂದ್ರವನ್ನು ಗುಂಡುಹಾರಿಸಿ ಉಡಾಯಿಸಿತು. ಬೇರೆ ದಾರಿಯಿಲ್ಲದೆ ಭವನವನ್ನು ತೊರೆಯುತ್ತಿದ್ದ ಬೋಲ್ಷೆವಿಕರ ಮೇಲೆ ಕೊಸ್ಸಾಕರು ದಾಳಿ ಮಾಡಿದರು. "ಇದೇ ರೀತಿ ಮಾಸ್ಕೋ, ಪೆತ್ರೋಗ್ರಾಡ್ ಸೇರಿದಂತೆ ಎಲ್ಲಾ ಸೋವಿಯತ್‌ಗಳನ್ನು

ಧೂಳೀಪಟ ಮಾಡುತ್ತೇವೆ" ಎಂದು ಬೊಬ್ಬೆ ಹಾಕಿದರು. ಈ ಘಟನೆ ಇಡೀ ರಷ್ಯಾದಲ್ಲಿ ಆತಂಕ, ಆಕ್ರೋಶಗಳ ಅಲೆಗಳನ್ನೇ ಸೃಷ್ಟಿ ಮಾಡಿತು.

ಇನ್ನೊಂದು ಕಡೆ ಪೆತ್ರೋಗ್ರಾಡ್‌ನಲ್ಲಿ ಬೋಲ್ಶೆವಿಕರ ನಾಯಕರಲ್ಲಿ ಒಬ್ಬರಾದ ಕ್ರೈಲೆಂಕೋರವರ ನೇತೃತ್ವದಲ್ಲಿ ಉತ್ತರ ಪ್ರಾಂತ್ಯಗಳ ಸೋವಿಯತ್‌ಗಳ ಮಹಾಧಿವೇಶನ ಮುಗಿಯಲಿಕ್ಕೆ ಬಂತು. ಅಖಿಲ ರಷ್ಯಾಮಟ್ಟದ ಸೋವಿಯತ್‌ಗಳ ಮಹಾಧಿವೇಶನವೇ ಎಲ್ಲಾ ಅಧಿಕಾರವನ್ನು ಕೈಗೆತ್ತಿಕೊಳ್ಳಬೇಕು ಎಂದು ಅಲ್ಲಿ ನಿರ್ಣಯಿಸಲಾಯಿತು. ಅಧಿವೇಶನವು ಜೈಲಿನಲ್ಲಿದ್ದ ಎಲ್ಲಾ ಬೋಲ್ಶೆವಿಕರಿಗೂ 'ಬಿಡುಗಡೆ ಹತ್ತಿರವಾಗಿದೆ, ಸಂತೋಷದಿಂದಿರಿ' ಎಂಬ ಸಂದೇಶವನ್ನೂ ಕಳಿಸಿತು. ಇದೇ ಮಾದರಿಯಲ್ಲೇ ಅಖಿಲ ರಷ್ಯಾ ಮಟ್ಟದ ಫ್ಯಾಕ್ಟರಿ ಕಾರ್ಮಿಕರ ಸಮ್ಮೇಳನವು ಕೂಡ ಎಲ್ಲ ಅಧಿಕಾರವೂ ಸೋವಿಯತ್‌ಗಳಿಗೆ ಬರಲಿ ಎಂದು ಘೋಷಿಸಿತು. ತ್ಸಾರ್‌ನ ಶೋಷಣೆಯಿಂದ ಬಿಡುಗಡೆಯಾಗಿದ್ದೇವೆ. ಈಗ ಉತ್ಪಾದನಾ ಕ್ಷೇತ್ರದಲ್ಲೂ ಜನತಂತ್ರ ಬರಲಿ. ಎಲ್ಲಾ ಕೈಗಾರಿಕಾ ಉತ್ಪಾದನೆಯ ಮೇಲೆ ಕಾರ್ಮಿಕರ ನಿಯಂತ್ರಣ ಬರಲೇಬೇಕು ಎಂದು ಅದು ಆಗ್ರಹಿಸಿತು. ಇನ್ನೊಂದು ಕಡೆ ರೈಲ್ವೇ ಕಾರ್ಮಿಕರು ತಮ್ಮ ಇಲಾಖೆಯ ಸಚಿವರು ರಾಜಿನಾಮೆ ನೀಡಲೇಬೇಕು ಎಂದು ಆಗ್ರಹಿಸಿದರು.

ಮತ್ತೊಂದು ಕಡೆ ವಿದೇಶಾಂಗ ವ್ಯವಹಾರಕ್ಕೆ ಸಂಬಂಧಿಸಿದಂತೆಯೂ ಒತ್ತಡ ಹೆಚ್ಚುತ್ತಾ ಹೋಯಿತು. ಯುದ್ಧ ಮುಗಿಯಬೇಕು ಎಂಬ ನಿರ್ಣಯವಿದ್ದ 'ನಕಾಜ್' ಅನ್ನೇ ಯುದ್ಧ ನಿರತ ಮಿತ್ರಪಕ್ಷಗಳಿಗೆ ಸಲ್ಲಿಸಬೇಕು ಹಾಗೂ ಹಂಗಾಮಿ ಸರ್ಕಾರವು ಪ್ಯಾರಿಸ್ ನಗರದಲ್ಲಿ ನಡೆಯುವ ಮಾತುಕತೆಗೆ ತನ್ನ ಪ್ರತಿನಿಧಿ ತೆರೆಶ್ಚೆಂಕೋನನ್ನು ಕಳಿಸಬಾರದು ಎಂದು ಸ್ಕೋಬೆಲೆವ್ ತ್ಸೆ-ಇ-ಕಾ- ಪರವಾಗಿಯೇ ಒತ್ತಾಯಿಸಿದರು.

ಇನ್ನೊಂದು ಕಡೆ ಸೈನ್ಯವನ್ನು ಪುನರ್‌ಸಂಘಟಿಸುವ ಹೆಸರಿನಲ್ಲಿ ಕ್ರಾಂತಿಯನ್ನು ತಣ್ಣಗೆ ಮಾಡಲು ಹೊರಟಿದ್ದ, ಸರ್ಕಾರದ ಪರವಾಗಿದ್ದ ಜನರಲ್ ವೆರ್ಖೋವ್‌ಸ್ಕಿ ಎಂಬುವನು ಸಂಪೂರ್ಣ ವಿಫಲನಾಗಿ ಹಿಂತಿರುಗಿದ.

ಇದೇ ವೆರ್ಖೋವ್‌ಸ್ಕಿಯು, ರಷ್ಯಾದ ಸೈನ್ಯಕ್ಕೆ ಇನ್ನು ಹೋರಾಡುವ ಶಕ್ತಿ ಇಲ್ಲ; ಆದ್ದರಿಂದ ಶಾಂತಿ ಸ್ಥಾಪನೆಗಾಗಿ ಮಿತ್ರರಾಷ್ಟ್ರಗಳ ಮೇಲೆ ಒತ್ತಡ ಹೇರಬೇಕು ಎಂದದ್ದಕ್ಕೆ ಆತನನ್ನು 'ಒಬ್‌ಕ್ಕಿ ಡಿಯೆಲೊ' ಎಂಬ ಪತ್ರಿಕೆಯಲ್ಲಿ ಸಿಕ್ಕಾಪಟ್ಟೆ ನಿಂದಿಸಲಾಯಿತು. ಮಿತ್ರ ಪಕ್ಷಗಳನ್ನು ಬಿಟ್ಟು ರಷ್ಯಾ ಪ್ರತ್ಯೇಕವಾಗಿ ಸಂಧಿಗೆ ಸಹಿ ಹಾಕಲು ವೆರ್ಖೋವ್‌ಸ್ಕಿ ಹೇಳುತ್ತಿದ್ದಾನೆ. ಇದು ರಾಷ್ಟ್ರದ್ರೋಹ, – ಹೀಗೆಲ್ಲಾ ಅಪಾದಿಸಲಾಯಿತು. ಈ ಗದ್ದಲದಲ್ಲಿ ಸರ್ಕಾರ ಒಂದು ಕಡೆ ವೆರ್ಖೋವ್‌ಸ್ಕಿಯನ್ನು ಬಲವಂತದ ರಜೆಯ ಮೇಲೆ ಕಳಿಸಿತು, ಇನ್ನೊಂದು ಕಡೆ ಆ ಪತ್ರಿಕೆಯನ್ನು ನಿಷೇಧಿಸಿತು.

ವಿದ್ಯಮಾನಗಳು ವೇಗವಾಗಿ ಘಟಿಸುತ್ತಿದ್ದವು. ಒಂದು ಕಡೆ ನವೆಂಬರ್ 4ರಂದು ಪೆತ್ರೋಗ್ರಾಡ್ ಸೋವಿಯತ್ ದಿನಾಚರಣೆ ಎಂದು ಕ್ರಾಂತಿಪರವಾದ ಶಕ್ತಿಗಳು ಘೋಷಿಸಿದವು. ಆ ದಿನ ರಾಜಧಾನಿಯ ಎಲ್ಲ ಕಡೆ ಬೃಹತ್ ಸಭೆಗಳನ್ನು ಸಂಘಟಿಸಲು ತೀರ್ಮಾನಿಸಲಾಯಿತು. ಸಂಘಟನೆಯ ಅವಶ್ಯಕತೆಗಾಗಿ ಹಾಗೂ ಮುದ್ರಣಾಲಯಕ್ಕಾಗಿ ನಿಧಿ ಸಂಗ್ರಹ ಮಾಡುವುದು ಈ ಕಾರ್ಯಕ್ರಮದ ಉದ್ದೇಶ ಎಂದು ಘೋಷಿಸಲಾಯಿತು. ಆದರೆ ಬಲಪ್ರದರ್ಶನ ಮಾಡಬೇಕು ಎಂಬುದು ಕಾರ್ಯಕ್ರಮದ ಹಿಂದಿನ

ಒಳಉದ್ದೇಶವಾಗಿತ್ತು. ಆದರೆ ಇದ್ದಕ್ಕಿದ್ದಂತೆ ಕೊಸ್ಸಾಕರು ಅದೇ ದಿನ ಇನ್ನೊಂದು ಕಾರ್ಯಕ್ರಮವನ್ನು ಘೋಷಿಸಿದರು. ಅದು ಶಿಲುಬೆಯನ್ನು ಹೊತ್ತು ಮೆರವಣಿಗೆ ಮಾಡುವ ಧಾರ್ಮಿಕ ಕಾರ್ಯಕ್ರಮ. 1812ರಲ್ಲಿ ಇದೇ ಕಾರ್ಯಕ್ರಮದ ಪವಾಡದಿಂದಾಗಿಯೇ ಮಾಸ್ಕೊ ನಗರವನ್ನು ಆಕ್ರಮಿಸಿಕೊಂಡಿದ್ದ ಫ್ರೆಂಚ್ ಚಕ್ರವರ್ತಿ ನೆಪೊಲಿಯನ್‌ನನ್ನು ಹೊರದೂಡಲಾಗಿತ್ತಂತೆ! ಹೀಗಾಗಿ ಕಾರ್ಯಕ್ರಮ ಮತ್ತು ಪ್ರತಿಕಾರ್ಯಕ್ರಮಗಳಿಂದಾಗಿ ನಗರದಲ್ಲಿ ಸ್ಫೋಟಕವಾದ ವಾತಾವರಣ ಸೃಷ್ಟಿಯಾಯಿತು. ಒಂದು ಸಣ್ಣ ಕಿಡಿ ಹೊತ್ತಿಕೊಂಡರೆ ಸಾಕು ಅಂತರ್ಯುದ್ಧ ಯಾವುದೇ ಕ್ಷಣದಲ್ಲಿ ಆರಂಭವಾಗಬಹುದು ಎನ್ನುವಂತಿತ್ತು. ಆಗ ಪೆತ್ರೋಗ್ರಾಡ್ ಸೋವಿಯತ್ 'ಸೋದರ ಕೊಸ್ಸಾಕರೇ' ಎಂಬ ಶೀರ್ಷಿಕೆಯಿರುವ ಕರಪತ್ರದ ಮೂಲಕ ಮನವಿ ಮಾಡಿಕೊಂಡಿತು.

*"ಕೊಸ್ಸಾಕರೇ, ನಿಮ್ಮನ್ನು ಕಾರ್ಮಿಕರ ಮತ್ತು ಸೈನಿಕರ ವಿರುದ್ಧ ಹೊಡೆದಾಡಲು ಪ್ರಚೋದಿಸುವಂಥ ಚಿತಾವಣೆ ನಡೆಯುತ್ತಿದೆ. ಈ ಭ್ರಾತೃಹಂತಕ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿರುವವರು ಯಾರು ಗೊತ್ತೇ? ಅವರು ನಮಗೂ ನಿಮಗೂ ಸಮಾನ ಶತ್ರುಗಳಾದ ಎಲ್ಲಾ ಆಸ್ತಿವಂತರು, ಸೈನ್ಯದ ಜನರಲ್‌ಗಳು, ಬ್ಯಾಂಕರ್‌ಗಳು, ಜಮೀನ್ದಾರರು, ಮಾಜಿ ಅಧಿಕಾರಶಾಹಿ, ಝಾರ್‌ನ ಬಂಟರು, ಎಲ್ಲ ಶ್ರೀಮಂತರು, ಭ್ರಷ್ಟರು. ನಿಮ್ಮ ಕೊಸ್ಸಾಕ್ ಜನರಲ್‌ಗಳು ಎಲ್ಲರೂ ನಮ್ಮನ್ನು ದ್ವೇಷಿಸುತ್ತಾರೆ. ಅವರು ಯಾವುದೇ ಕ್ಷಣದಲ್ಲಿ ಪೆತ್ರೋಗ್ರಾಡ್ ಸೋವಿಯತ್ ಜನಸಮಿತಿಯನ್ನು ಹಾಗೂ ಕ್ರಾಂತಿಯನ್ನು* ನಾಶಮಾಡಲಿದ್ದಾರೆ.

*ನವೆಂಬರ್ 4ರಂದು ಧಾರ್ಮಿಕ ಮೆರವಣಿಗೆಯನ್ನು ಸಂಘಟಿಸಲಾಗಿದೆ. ಅದರಲ್ಲಿ ಭಾಗವಹಿಸಬೇಕೋ ಬೇಡವೋ ಎಂಬುದನ್ನು ನಿಮ್ಮ ಆತ್ಮಸಾಕ್ಷಿಗೆ ಬಿಡುತ್ತೇವೆ. ಆದರೆ ಎಚ್ಚರ! ಧಾರ್ಮಿಕ ಮೆರವಣಿಗೆಯ ಹೆಸರಿನಲ್ಲಿ ಯಾರೂ ನಿಮ್ಮನ್ನು ಕಾರ್ಮಿಕರು–ಸೈನಿಕರ ವಿರುದ್ಧ ಪ್ರಚೋದಿಸಲು ಸಾಧ್ಯವಾಗಬಾರದು!"*

ಮೆರವಣಿಗೆಯನ್ನು ಆತುರಾತುರವಾಗಿ ಕೈಬಿಡಲಾಯಿತು. ಒಂದೆಡೆ ಎಲ್ಲಾ ಸೈನಿಕ ಶಿಬಿರಗಳಲ್ಲಿ ಹಾಗೂ ಕಾರ್ಮಿಕರ ವಸತಿ ಪ್ರದೇಶಗಳಲ್ಲಿ ಬೋಲ್ಶೆವಿಕರು 'ಎಲ್ಲಾ ಅಧಿಕಾರ ಸೋವಿಯತ್‌ಗಳಿಗೆ' ಎಂದು ಪ್ರಚಾರ ಮಾಡುತ್ತಿದ್ದರೆ ಇನ್ನೊಂದು ಕಡೆ ಕರಾಳ ಶಕ್ತಿಗಳು ಯಹೂದಿ ವಿರೋಧಿ ದಂಗೆಗೆ, ಸಮಾಜವಾದಿಗಳನ್ನು ಕೊಚ್ಚಿಹಾಕಲಿಕ್ಕೆ ಜನರನ್ನು ಉನ್ಮಾದಕ್ಕೆ ಬಲಿಯಾಗಿಸಲು ಕರೆ ನೀಡುತ್ತಿದ್ದರು.

ಒಂದೆಡೆ ರಾಜಪ್ರಭುತ್ವದ ಪರವಾಗಿದ್ದ ಪತ್ರಿಕೆಗಳು; ರಕ್ತಪಾತದ ಮೂಲಕ ಕ್ರಾಂತಿಯನ್ನು ದಮನಮಾಡಿ ಎಂದು ಅರಚಿಕೊಳ್ಳುತ್ತಿದ್ದ ಬೂರ್ಶ್ವಾ ಮಾಧ್ಯಮಗಳು. ಇನ್ನೊಂದೆಡೆ "ಇನ್ನು ವಿಳಂಬವಾಗಬಾರದು... ಸಶಸ್ತ್ರ ಕ್ರಾಂತಿ!" ಎಂದು ಘರ್ಜಿಸುತ್ತಿರುವ ಲೆನಿನ್‌ರವರ ಪ್ರಚಂಡ ಧ್ವನಿ.

ಬೂರ್ಶ್ವಾ ಪತ್ರಿಕೆಗಳು ಆತಂಕಕ್ಕೆ ಒಳಗಾಗಿದ್ದವು. 'ವಿನಿಮಯ ಗೆಜೆಟ್' ಎಂಬ ಪತ್ರಿಕೆಯು "ವೈಯಕ್ತಿಕ ಭದ್ರತೆ ಮತ್ತು ಖಾಸಗಿ ಆಸ್ತಿಗೆ ಮನ್ನಣೆ" ಮುಂತಾದ ಸಮಾಜದ ಅತ್ಯಂತ ಪ್ರಾಥಮಿಕ ತತ್ವಗಳಿಗೇ ಧಕ್ಕೆ ತರುವಂತೆ ಬೋಲ್ಶೆವಿಕರು ಪ್ರಚಾರ ಕೈಗೊಂಡಿದ್ದಾರೆ ಎಂದು ಬಣ್ಣಿಸಿತು.

ಆದರೆ ಇದಕ್ಕಿಂತಲೂ ಗಾಢವಾದ ದ್ವೇಷವನ್ನು ವ್ಯಕ್ತಪಡಿಸಿದ್ದೆಂದರೆ 'ಸೌಮ್ಯವಾದಿ'

ಸಮಾಜವಾದಿ ಪತ್ರಿಕೆಗಳೇ. ಒಂದು ಪತ್ರಿಕೆ (ದ್ಯೇಲೋ ನರೋದ) 'ಬೋಲ್ಶೆವಿಕರು ಕ್ರಾಂತಿಯ ಅತ್ಯಂತ ಅಪಾಯಕಾರಿ ಶತ್ರುಗಳು' ಎಂದರೆ ಇನ್ನೊಂದು ಮೆನ್ಶೆವಿಕರ ಡಿಯೆನ್ – 'ಸರ್ಕಾರ ತನ್ನನ್ನು ರಕ್ಷಿಸಿಕೊಂಡು ನಮ್ಮನ್ನು ರಕ್ಷಿಸಬೇಕು' ಎಂದು ಒತ್ತಾಯಿಸಿತು. ಪ್ಲೆಖನೋವ್‌ರವರ 'ಒಗ್ಗಟ್ಟು' ಪತ್ರಿಕೆಯು, ಪೆತ್ರೋಗ್ರಾಡ್‌ನ ಕಾರ್ಮಿಕರಿಗೆ ಶಸ್ತ್ರಾಸ್ತ್ರ ನೀಡಲಾಗುತ್ತಿದೆಯಾದ್ದರಿಂದ ಬೋಲ್ಶೆವಿಕರನ್ನು ಸರಿಯಾಗಿ ಮಟ್ಟ ಹಾಕಿ ಎಂದು ಆಗ್ರಹಿಸಿತು.

ದಿನದಿಂದ ದಿನಕ್ಕೆ ಸರ್ಕಾರ ಇನ್ನಷ್ಟು ಅಸಹಾಯಕವಾಗುತ್ತಾ ಹೋಯಿತು. ನಗರ ಸಭೆಯ ಕೆಲಸಗಳೂ ನಿಂತುಹೋದವು. ದಿನಪತ್ರಿಕೆಗಳಲ್ಲಿ ಡಕಾಯಿತಿ, ಕಳ್ಳತನಗಳ ವರದಿಗಳೇ ತುಂಬಿದ್ದವು. ಆದರೆ ಅಪರಾಧಿಗಳನ್ನು ಹಿಡಿದ ಸುದ್ದಿಯೇ ಇರಲಿಲ್ಲ.

ಇದಕ್ಕೆ ತದ್ವಿರುದ್ಧವಾಗಿ ಶಸ್ತ್ರಸಜ್ಜಿತ ಕಾರ್ಮಿಕರೇ ರಸ್ತೆಗಳಲ್ಲಿ ರಾತ್ರಿ ಹೊತ್ತು ಗಸ್ತು ಹಾಕುತ್ತಾ ಅಪರಾಧಿಗಳೊಂದಿಗೆ ಸೆಣೆಸಾಡಲಾರಂಭಿಸಿದರು. ಕಂಡಲ್ಲಿ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿಕೊಂಡರು.

ನವೆಂಬರ್ 1ನೇ ತಾರೀಖಿನಂದು ಪೆತ್ರೋಗ್ರಾಡಿನ ಮಿಲಿಟರಿ ಕಮಾಂಡರ್ ಕೆಳಕಂಡ ಘೋಷಣೆಯನ್ನು ಹೊರಡಿಸಿದ. ಸರ್ಕಾರ ಕ್ರಾಂತಿಯನ್ನು ತಡೆಯಲು ಎಲ್ಲಾ ಕ್ರಮಗಳನ್ನೂ ಕೈಗೊಂಡಿದೆ ಎಂಬುದು ಅದರ ಸಾರಾಂಶ.

ದೇಶ ವಿಪತ್ತೆನ್ನೆದುರಿಸುತ್ತಿದೆ. ಆದರೂ ಸಶಸ್ತ್ರ ದಂಗೆಗೆ ಪ್ರಚೋದನೆ ನೀಡಲಾಗುತ್ತಿದೆ. ದಿನದಿಂದ ದಿನಕ್ಕೆ ಕಳ್ಳತನ ಅವ್ಯವಸ್ಥೆ ಹೆಚ್ಚಾಗುತ್ತಿವೆ. ಇದು ನಾಗರಿಕರ ಹಾಗೂ ಸರ್ಕಾರದ ಮಾಮೂಲಿ ಕೆಲಸಕ್ಕೆ ತೊಂದರೆಯುಂಟುಮಾಡುತ್ತಿರುವುದರಿಂದ ಈ ಕೆಳಗಿನ ಆಜ್ಞೆಗಳನ್ನು ನಾನು ದೇಶದ ಹಿತಕ್ಕಾಗಿ ನೀಡಬೇಕಾಗಿದೆ.

1. ಎಲ್ಲಾ ಸೈನ್ಯದ ಘಟಕಗಳು ಸರ್ಕಾರಿ ಸಂಸ್ಥೆಗಳನ್ನು ಕಾಪಾಡಲು ಅಧಿಕಾರಿಗಳೊಂದಿಗೆ ಸಹಕರಿಸಬೇಕು.
2. ರಕ್ಷಣಾ ಗಸ್ತು ತುಕಡಿಗಳನ್ನು ಸಂಘಟಿಸಿ ಅಪರಾಧಿಗಳನ್ನು, ಸೈನ್ಯ ತೊರೆದವರನ್ನು ಬಂಧಿಸುವುದು
3. ಸೈನ್ಯ ಶಿಬಿರವನ್ನು ಪ್ರವೇಶಿಸಿ ಬಂಡಾಯಕ್ಕೆ ಪ್ರಚೋದಿಸುವವರನ್ನು ಬಂಧಿಸುವುದು.
4. ಯಾವುದೇ ಸಶಸ್ತ್ರ ಮೆರವಣಿಗೆಯನ್ನು, ದಂಗೆಯನ್ನು ಸೈನ್ಯ ಬಲದಿಂದ ಮಟ್ಟಹಾಕುವುದು.

ಇತ್ಯಾದಿ ಸೂಚನೆಗಳನ್ನು ಆತ ಎಲ್ಲಾ ಸೈನ್ಯಾಧಿಕಾರಿಗಳಿಗೂ ನೀಡಿದ.

ಇದೇ ಮಾದರಿಯಲ್ಲಿ ಕೆರೆನ್‌ಸ್ಕಿ, ಗಣರಾಜ್ಯ ಮಂಡಳಿಯಲ್ಲಿ, ನಮಗೆ ಬೋಲ್ಶೆವಿಕರ ಎಲ್ಲಾ ಸಿದ್ಧತೆಗಳ ಬಗ್ಗೆಯೂ ಅರಿವಿದೆ ಮತ್ತು ಅದನ್ನು ಹುಸಿಯಾಗಿಸಲು ಅವಶ್ಯಕ ಬಲವೂ ನಮ್ಮ ಬಳಿ ಇದೆ ಎಂದ. ಬೋಲ್ಶೆವಿಕರ ಪತ್ರಿಕೆಗಳು ಸರ್ಕಾರವನ್ನು ಬುಡಮೇಲು ಮಾಡುವಂಥ ಪ್ರಚಾರ ನಡೆಸುತ್ತಿವೆ. ಆದರೂ ನಾವು ಪತ್ರಿಕಾ ಸ್ವಾತಂತ್ರ್ಯವನ್ನು ಗೌರವಿಸುವುದರಿಂದ ಅವುಗಳನ್ನು ಸುಮ್ಮನೆ ಬಿಟ್ಟಿದ್ದೇವೆ ಎಂದು ಹೇಳಿಕೊಂಡ. ವಾಸ್ತವದಲ್ಲಿ ಅದು ಸುಳ್ಳು, ಜುಲೈ ತಿಂಗಳಿನಿಂದಲೇ ಬೋಲ್ಶೆವಿಕರ ಪತ್ರಿಕೆಗಳನ್ನು ನಿಷೇಧಿಸಲಾಗಿತ್ತು.

ಬೋಲ್ಶೆವಿಕರು ಮಾಡಲು ಹೊರಟಿರುವುದು ಪ್ರತಿಕ್ರಾಂತಿ ಎಂದು ವರ್ಣಿಸಿದ ಆತ, "ನನ್ನ ಕತೆ ಮುಗಿಯುತ್ತಾ ಬಂತು, ನನಗೆ ಏನಾಗುತ್ತೋ ಆಗಲಿ ಚಿಂತೆಯಿಲ್ಲ. ಆದರೆ

ನಾನು ನಿರ್ಭಯವಾಗಿ ಹೇಳುತ್ತೇನೆ. ಬೋಲ್ಶೆವಿಕರು ರಾಜಧಾನಿಯಲ್ಲಿ ನಂಬಲಾಗದಂಥ ಪ್ರಚೋದನಕಾರಿ ಕೆಲಸಗಳನ್ನು ಮಾಡುತ್ತಿದ್ದಾರೆ."

ಇನ್ನು ಮುಂದಿನ ಎಲ್ಲಾ ಘಟನೆಗಳಿಗೂ ಚಾಲನೆ ನೀಡಬಲ್ಲಂಥ ಸೋವಿಯತ್‌ಗಳ ಮಹಾಧಿವೇಶನದ ಸಿದ್ಧತೆ ಹೇಗೆ ನಡೆದಿತ್ತೆಂಬುದನ್ನು ಗಮನಿಸೋಣ. ನವೆಂಬರ್ 2ರ ಹೊತ್ತಿಗೆ ಬಂದಿದ್ದ ಪ್ರತಿನಿಧಿಗಳು ಕೇವಲ ಹದಿನೈದು ಜನ. ಮಾರನೆಯ ದಿನ ನೂರು ಜನ ಬಂದರೆ, ಅದರ ಮಾರನೆಯ ದಿನ ನೂರ ಎಪತ್ತೈದು. ಅದರಲ್ಲಿ ನೂರಾಮೂರು ಜನ ಬೋಲ್ಶೆವಿಕರು. ಅಧಿವೇಶನ ನಡೆಯಲು ಬೇಕಾದ ಕನಿಷ್ಠ ಸಂಖ್ಯೆ – ಕೋರಂ ಮುಟ್ಟಲು ನಾಲ್ಕು ನೂರು ಜನರಾದರೂ ಬೇಕು. ಇನ್ನುಳಿದಿರುವುದು ಮೂರೇ ದಿನ.

ನಾನು ಒಂದು ರೀತಿ ಕ್ರಾಂತಿಕಾರಿ ಚಟುವಟಿಕೆಗಳ ಕೇಂದ್ರವೇ ಆಗಿಬಿಟ್ಟಿದ್ದ ಸ್ಮೋಲ್ನಿ ಭವನದಲ್ಲಿ ತುಂಬ ಸಮಯವನ್ನು ಕಳೆಯಲಾರಂಭಿಸಿದೆ. ಈಗ ಒಳಗೆ ಹೋಗಿ ಬರುವುದು ಮುಂಚಿನ ಹಾಗೆ ಸುಲಭವಾಗಿರಲಿಲ್ಲ. ಹೊರಗಿನ ಬಾಗಿಲ ಬಳಿ ಎರಡೆರಡು ಸಾಲು ಸೆಂಟ್ರಿಗಳಿದ್ದರು. ಒಳಗೆ ಹೋಗುವುದಕ್ಕೆ ಉದ್ದ ಸಾಲಿರುತ್ತಿತ್ತು. ನಾಲ್ಕು ನಾಲ್ಕು ಜನರನ್ನು ಪ್ರಶ್ನಿಸಿ ಅವರ ಉದ್ದೇಶ, ಗುರುತು ಎಲ್ಲವನ್ನೂ ಖಚಿತ ಪಡಿಸಿಕೊಂಡು ಪಾಸುಗಳನ್ನು ವಿತರಣೆ ಮಾಡಲಾಗುತ್ತಿತ್ತು. ಗೂಢಚಾರರು ಹೇಗೋ ಪಾಸ್ ಪಡೆದು ನುಸುಳುತ್ತಿದ್ದರಿಂದ ಪಾಸ್ ವಿತರಣಾ ಕ್ರಮವನ್ನೇ ಮತ್ತೆ ಮತ್ತೆ ಬದಲಾಯಿಸಲಾಗುತ್ತಿತ್ತು.

ಒಂದು ದಿನ ಹೊರಬಾಗಿಲಿನ ಬಳಿ ಟ್ರಾಟ್‌ಸ್ಕಿ ಮತ್ತು ಅವನ ಮಡದಿಯನ್ನು ಸೆಂಟ್ರಿಗಳು ತಡೆದು ನಿಲ್ಲಿಸಿದರು. ಎಷ್ಟು ಹುಡುಕಿದರೂ ಟ್ರಾಟ್‌ಸ್ಕಿಗೆ ಜೇಬಿನಲ್ಲಿ ಪಾಸ್ ಸಿಗಲಿಲ್ಲ. "ಹೋಗಲಿ ಬಿಡಿ ನಾನು ಯಾರು ಗೊತ್ತೆ?" ಎಂದು ಅವರು ತಮ್ಮ ಪರಿಚಯ ಹೇಳಿಕೊಂಡರು. "ನಿಮ್ಮ ಹೆಸರು ಏನಾದರೂ ಇರಲಿ, ಬೇಕಿಲ್ಲ, ಬಿಡಕ್ಕಾಗಲ್ಲ" ಎಂದ ಸೈನಿಕನಿಗೆ "ನಾನು ಪೆತ್ರೋಗ್ರಾಡ್ ಸೋವಿಯತ್‌ನ ಅಧ್ಯಕ್ಷ" ಎಂದು ಅವರು ಹೇಳಿಕೊಂಡರು. "ಅಷ್ಟು ದೊಡ್ಡ ಮನುಷ್ಯನಾಗಿದ್ರೆ ಒಂದು ತುಂಡು ಕಾಗದ ಇಟ್ಕೊಳ್ಳಕ್ಕಾಗಲ್ವಾ" ಎಂದೇಬಿಟ್ಟ ಆ ಸೈನಿಕ. ಕಡೆಗೆ ಆ ಪಡೆಗೆ ಉಸ್ತುವಾರಿಯಾಗಿದ್ದ ಸೈನಿಕ ಬಂದ. ಅವನಿಗೂ ಟ್ರಾಟ್‌ಸ್ಕಿಯ ಪರಿಚಯವಿಲ್ಲದಿದ್ದರೂ 'ಎಲ್ಲೋ ಕೇಳಿದ ಹಾಗೆ' ಎಂದುಕೊಂಡು ಕಡೆಗೆ ಅನುಮತಿ ಕೊಟ್ಟ. ಸಾಧಾರಣ ಸೈನಿಕರ ಆತ್ಮವಿಶ್ವಾಸ, ಕೆಲಸದಲ್ಲಿನ ಶ್ರದ್ಧೆ ಹೀಗಿತ್ತು.

ಪಡಸಾಲೆಯಲ್ಲಿ ನನಗೆ ಬೋಲ್ಶೆವಿಕ್ ನಾಯಕರಲ್ಲಿ ಒಬ್ಬರೂ, ಕೇಂದ್ರ ಸಮಿತಿಯ ಸದಸ್ಯರೂ ಆದ ಕಾರಾಖಾನ್ ಸಿಕ್ಕಿದರು. ಅವರು ಭವಿಷ್ಯದ ಸರ್ಕಾರ ಹೇಗಿರುತ್ತದೆ ಎಂಬುದರ ಕುರಿತು ನನಗೆ ಕೊಂಚ ಮಾಹಿತಿ ನೀಡಿದರು.

"ನಾವು ಅಂದ್ಕೊಂಡಿರೋದು ಒಂದು ಸಡಿಲವಾದ ಸಂಘಟನೆ. ಸೋವಿಯತ್ ಜನಸಮಿತಿಗಳ ಮೂಲಕ ಏನು ಜನಾಭಿಪ್ರಾಯ ವ್ಯಕ್ತ ಆಗುತ್ತೆ ಅದಕ್ಕೆ ಸರ್ಕಾರ ಸ್ಪಂದಿಸಬೇಕು. ಕೆಳಗಿನ ಹಂತದಲ್ಲಿ ಕ್ರಿಯಾಶೀಲವಾಗಿರೋ ಎಲ್ಲ ಶಕ್ತಿಗಳಿಗೂ ಮುಕ್ತ ಅವಕಾಶ ಇರಬೇಕು. ಈ ಪ್ರಸಕ್ತ ಹಂಗಾಮಿ ಸರ್ಕಾರದ ಕಾರ್ಯವಿಧಾನ, ಜ಼ಾರ್ ಕಾಲದಲ್ಲಿ ಹೇಗಿತ್ತೋ ಹಾಗೇ ಇದೆ. ಇಬ್ಬರೂ ಸ್ಥಳೀಯವಾದ, ಜನತಾಂತ್ರಿಕವಾದ ಆಶಯಗಳಿಗೆ ಅಡ್ಡಿ ಉಂಟುಮಾಡ್ತಾರೆ. ನಮ್ಮ ಹೊಸ ಸಮಾಜದಲ್ಲಿ ಎಲ್ಲಾ

ಕಾರ್ಯತತ್ಪರತೆಯೂ, ಕೆಲಸದ ಮುಂತೊಡಗುವಿಕೆ ಕೆಳಗಿನಿಂದಲೇ ಬರಬೇಕು, ಈ ಸರ್ಕಾರದ ಸಂವಿಧಾನಾತ್ಮಕ ಮಾದರಿ, ನಮ್ಮ ಪಕ್ಷ 'ರಷ್ಯನ್ ಸೋಷಿಯಲ್ ಡೆಮಾಕ್ರೆಟಿಕ್ ಲೇಬರ್ ಪಾರ್ಟಿ' ಇದೆಯಲ್ಲ ಅದರ ಸಂವಿಧಾನ ಹೋಲುವ ಹಾಗಿರುತ್ತೆ. ಹೊಸ ತ್ಸೆ–ಇ–ಕಾ ರಚನೆಯಾಗುತ್ತೆ. ಅದೇ ಹೊಸ ಸಂಸತ್ತು. ಆದರೆ ಅದು ಸೋವಿಯತ್ ಜನಸಮಿತಿಗಳ ಅಖಿಲ ರಷ್ಯಾ ಮಹಾಧಿವೇಶನಕ್ಕೆ ಉತ್ತರದಾಯಿಯಾಗಿರಬೇಕು. ಪ್ರತಿಯೊಂದು ಸಚಿವಾಲಯದ ನೇತೃತ್ವ ಒಬ್ಬ ಮಂತ್ರಿಯದ್ದಲ್ಲ, ಒಂದು ಇಡೀ ಸಮಿತಿಯದ್ದು. ಮತ್ತೆ ಇವೆಲ್ಲಾ ಸಹ ಸೋವಿಯತ್‌ಗೆ ಉತ್ತರದಾಯಿಯಾಗಿರುತ್ವೆ..."

ಈ ಹಿಂದೆ, ಅಕ್ಟೋಬರ್ 30ನೇ ತಾರೀಕೇ ನಾನು ಸ್ಮೋಲ್ನಿ ಭವನದಲ್ಲಿ ಟ್ರಾಟ್‌ಸ್ಕಿಯವರನ್ನು ಸಂದರ್ಶಿಸಿದ್ದೆ. ಆತ ಒಂದು ಸಾಧಾರಣವಾದ ಕೋಣೆಯಲ್ಲಿ, ತೀರಾ ಅಗ್ಗವಾದ ಮೇಜಿನ ಮುಂದೆ ಒಂದು ಒರಟಾದ ಕುರ್ಚಿಯಲ್ಲಿ ಕುಳಿತಿದ್ರು. ನಾನು ಕೇಳಿದ್ದು ಒಂದೆರಡು ಪ್ರಶ್ನೆ ಅಷ್ಟೇ. ಆತನೇ ತುಂಬ ವೇಗವಾಗಿ, ಸತತವಾಗಿ ಒಂದು ಘಂಟೆಯ ಕಾಲ ಮಾತನಾಡಿದರು. ಅವರ ಮಾತಿನ ಒಟ್ಟು ಸಾರಾಂಶವನ್ನು ಮಾತ್ರ ನಾನಿಲ್ಲಿ ದಾಖಲಿಸುತ್ತೇನೆ.

"ಈ ಹಂಗಾಮಿ ಸರ್ಕಾರದಲ್ಲಿ ಯಾವ ತಾಕತ್ತೂ ಉಳಿದಿಲ್ಲ. ನಿಜವಾಗಿ ಸರ್ಕಾರದ ಮೇಲೆ ಹಿಡಿತ ಇರೋದು ಬೂರ್ಶ್ವಾಸಿಗೆ – ಬಂಡವಾಳಶಾಹಿ ಸರ್ಕಾರಕ್ಕೆ. ಆದರೆ ಈ ನಿಯಂತ್ರಣ ಕಣ್ಣಿಗೆ ಬೀಳದಂತೆ ಯುದ್ಧದ ಪರವಾದ ಎಲ್ಲಾ ಮಂದಗಾಮಿ ಸಮಾಜವಾದಿ ಪಕ್ಷಗಳ ಮಿತ್ರಕೂಟ ಎಂಬ ಮುಖವಾಡವನ್ನು ಧರಿಸಲಾಗಿದೆ. ಭೂಮಿಗಾಗಿ ಕಾದು ಬೇಸತ್ತ ರೈತರು ಬಂಡಾಯವೇಳುತ್ತಿರುವುದನ್ನು ನಾವು ಈ ಕ್ರಾಂತಿಯ ಸಂದರ್ಭದಲ್ಲಿ ಕಾಣುತ್ತಿದ್ದೇವೆ. ದೇಶದಾದ್ಯಂತ ನಾವು ಎಲ್ಲಾ ದುಡಿಯುವ ಜನತೆಯಲ್ಲೂ ಇದೇ ಬೇಸರ, ಅಸಮಾಧಾನಗಳನ್ನು ಗಮನಿಸಿದ್ದೇವೆ.

"ಇಂಥ ಸಂದರ್ಭದಲ್ಲಿ ಬಂಡವಾಳಶಾಹಿ ವರ್ಗಕ್ಕೆ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಒಂದು ಅಂತರ್ಯುದ್ಧವನ್ನು ಶುರು ಮಾಡಿಕೊಳ್ಳುವುದು. ಕೊರ್ನಿಲೊವ್ ಬಂಡಾಯ ಆದದ್ದು ಇದಕ್ಕಾಗೇ. ಆದರೆ ಯಶಸ್ವಿಯಾಗಲು ಬೇಕಾದ ಶಕ್ತಿ ಬೂರ್ಶ್ವಾಸಿಗೆ ಇಲ್ಲ ಅಷ್ಟೇ. ಸೈನ್ಯ ನಮ್ಮ ಜೊತೆಗಿದೆ. ರಾಜಿ ಪರವಾಗಿರೋರು, ಎಡಬಿಡಂಗಿಗಳು, ಸೋಷಿಯಲಿಸ್ಟ್ ರೆವಲ್ಯೂಶನರಿಗಳು ಇವರೆಲ್ಲಾ ಜನರ ಕಣ್ಣಿನಲ್ಲಿ ಸ್ಥಾನವನ್ನು ಕಳೆದುಕೊಂಡಿದ್ದಾರೆ. ಯಾಕೆ ಅಂದ್ರೆ ರೈತರು ಮತ್ತು ಜಮೀನ್ದಾರರ ಮಧ್ಯದ ಹೋರಾಟ, ಅದೇ ರೀತಿ ಬಂಡವಾಳಗಾರರು – ಕಾರ್ಮಿಕರ ಮಧ್ಯದ ಹೋರಾಟ ಮತ್ತು ಸಾಮಾನ್ಯ ಸೈನಿಕರು ಹಾಗೂ ಸೈನ್ಯಾಧಿಕಾರಿಗಳ ಮಧ್ಯದ ಹೋರಾಟ ಈಗ ತೀಕ್ಷ್ಣವಾಗಿಬಿಟ್ಟಿದೆ. ಇನ್ನು ಹೊಂದಾಣಿಕೆ ಸಾಧ್ಯವೇ ಇಲ್ಲ ಅನ್ನೋ ಅಷ್ಟು. ಕೇವಲ ಎಲ್ಲ ಜನತೆ ಒಂದಾಗಿ ಮಾಡೋ ಕಾರ್ಯಾಚರಣೆಯಿಂದ, ಶ್ರಮಜೀವಿ ವರ್ಗದ ಸರ್ವಾಧಿಕಾರ ಗೆಲ್ಲೋದ್ರಿಂದ ಕ್ರಾಂತಿಯನ್ನು ಸಾಧಿಸಿಕೊಳ್ಳಬಹುದು. ಜನತೆಯನ್ನು ಕಾಪಾಡಿಕೊಳ್ಳಬಹುದು.

"ಸೋವಿಯತ್‌ಗಳೇ ಜನತೆಯ ಅತ್ಯುತ್ತಮ, ಸಮರ್ಪಕ ಪ್ರತಿನಿಧಿಗಳು. ಅವು ಕ್ರಾಂತಿಕಾರಿ ಅನುಭವದಲ್ಲಿ ಸಮರ್ಪಕವಾಗಿವೆ. ಧ್ಯೇಯೋದ್ದೇಶಗಳಲ್ಲಿ ಸಮರ್ಪಕವಾಗಿವೆ.

ಕಂದಕದಲ್ಲಿ ಹೋರಾಡ್ತಿರೋ ಸೈನಿಕರನ್ನು, ಕಾರ್ಖಾನೆಯಲ್ಲಿ ದುಡೀತಾ ಇರೋ ಕಾರ್ಮಿಕರನ್ನು, ನೆಲದಲ್ಲಿ ಗೇಯುತ್ತಾ ಇರೋ ರೈತರನ್ನು ಪ್ರತಿನಿಧಿಸೋ ಅಂಥ ಸೋವಿಯತ್‌ಗಳೇ ವಾಸ್ತವದಲ್ಲಿ ಕ್ರಾಂತಿಯ ಬೆನ್ನೆಲುಬು.

"ಸೋವಿಯತ್‌ಗಳನ್ನು ಹೊರಗಿಟ್ಟು ರಾಜ್ಯಾಧಿಕಾರವನ್ನು ಸೃಷ್ಟಿಸೋ ಪ್ರಯತ್ನ ನಡೀತು. ಅದರ ಫಲ ಏನು? ಅಧಿಕಾರ ಶೂನ್ಯತೆ – ಒಂದು ರೀತಿ ಅರಾಜಕತೆ ಸೃಷ್ಟಿ ಆಗಿದೆ ಅಷ್ಟೇ. ರಷ್ಯನ್ ಗಣರಾಜ್ಯ ಮಂಡಳಿಯಲ್ಲಿ ಕ್ರಾಂತಿವಿರೋಧಿ ಸಂಚುಗಳನ್ನು ರೂಪಿಸಲಾಗುತ್ತಿದೆ. ಕ್ಯಾಡೆಟ್ ಪಾರ್ಟಿಯದ್ದು ಉಗ್ರವಾದ ಪ್ರತಿಕ್ರಾಂತಿಕಾರಿ ನಿಲುವು. ಇನ್ನೊಂದು ಕಡೆ ಸೋವಿಯತ್‌ಗಳು ಜನತೆಯ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತವೆ. ಈ ಎರಡು ಶಿಬಿರಗಳ ಮಧ್ಯದಲ್ಲಿ ಗಣನೀಯವಾದ ಯಾವ ಗುಂಪುಗಳೂ ಉಳಿದಿಲ್ಲ. ಇದು ಇಂಟರ್‌ನ್ಯಾಷನಲ್ ಗೀತೆಯಲ್ಲಿ ಹೇಳೋ ಹಾಗೇ 'ಲೂತ್ ಫ಼ಿನಾಲ್' – ಅಂತಿಮ ಕದನ. ಬೂರ್ಶ್ವಾ ಪ್ರತಿಕ್ರಾಂತಿಯು ತನ್ನ ಎಲ್ಲಾ ಶಕ್ತಿಯನ್ನೂ ಒಟ್ಟುಗೂಡಿಸಿ ನಮ್ಮ ಮೇಲೆ ಬೀಳಲು ಸರಿಯಾದ ಕ್ಷಣಕ್ಕೆ ಕಾಯುತ್ತಾ ಇದೆ. ನಮ್ಮ ಉತ್ತರ ನಿರ್ಣಾಯಕವಾಗಿರುತ್ತೆ. ನಾವು ಮಾರ್ಚ್ ತಿಂಗಳಲ್ಲಿ ಕೊಂಚ ಕೊಂಚ ಆರಂಭವಾದ ಹಾಗೂ ಕೊರ್ನಿಲೊವ್ ಘಟನೆಯ ಸಂದರ್ಭದಲ್ಲಿ ಇನ್ನಷ್ಟು ಮುಂದಕ್ಕೆ ಕೊಂಡೊಯ್ದ ಕೆಲಸವನ್ನು ಈ ಬಾರಿ ಪೂರ್ಣಗೊಳಿಸ್ತೀವಿ..."

ಆಮೇಲೆ ಆತ ಹೊಸ ಸರ್ಕಾರದ ವಿದೇಶಾಂಗ ನೀತಿಯ ಬಗ್ಗೆ ಮಾತನಾಡಿದರು.

"ಎಲ್ಲ ರಣಾಂಗಣಗಳಲ್ಲೂ ಕದನ ವಿರಾಮವನ್ನು ಘೋಷಿಸುವುದೇ ನಮ್ಮ ಸರ್ಕಾರದ ಮೊದಲ ಕೆಲಸವಾಗಿರುತ್ತದೆ. ನಂತರ ಜನತಾಂತ್ರಿಕವಾದ ಶಾಂತಿ ಷರತ್ತುಗಳನ್ನು ಚರ್ಚಿಸಲು ಜನತೆಯ ಸಮ್ಮೇಳನವೊಂದನ್ನು ಕರೆಯಲಾಗುವುದು. ಯುರೋಪಿನಲ್ಲಿ ಕ್ರಾಂತಿಗೆ ಎಷ್ಟರ ಮಟ್ಟಿಗೆ ಪ್ರತಿಕ್ರಿಯೆ ದೊರಕುತ್ತದೋ ಅಷ್ಟರಮಟ್ಟಿಗೆ ಶಾಂತಿ ಷರತ್ತುಗಳು ಜನತಾಂತ್ರಿಕ ಆಶಯಗಳನ್ನು ಹೊಂದಿರುತ್ತವೆ. ನಾವು ಇಲ್ಲಿ ಸೋವಿಯತ್ ಸರ್ಕಾರವೊಂದನ್ನು ಸ್ಥಾಪಿಸಲು ಸಾಧ್ಯವಾದರೆ ಯುರೋಪಿನಲ್ಲಿ ಶಾಂತಿಸ್ಥಾಪನೆಗೆ ನೆರವಾಗುತ್ತದೆ. ಆದ್ದರಿಂದಲೇ ಹೊಸ ಸರ್ಕಾರವು ಎಲ್ಲಾ ಸರ್ಕಾರಗಳನ್ನು ಬದಿಗಿರಿಸಿ ವಿವಿಧ ದೇಶಗಳ ಜನತೆಗೆ ಕದನವಿರಾಮದ ಮನವಿಯನ್ನು ಕೂಡಲೇ ನೇರವಾಗಿ ಮಾಡಿಕೊಳ್ಳಲಿದೆ. ಶಾಂತಿ ಸ್ಥಾಪನೆಯ ಅಂತಿಮ ಹಂತದಲ್ಲಿ ರಷ್ಯನ್ ಕ್ರಾಂತಿಯು 'ಬೇರೆಯವರ ನೆಲವನ್ನು ಆಕ್ರಮಿಸಕೂಡದು, ಯುದ್ಧ ಪರಿಹಾರ ಎಂದು ಹಣವಸೂಲಿ ಮಾಡಬಾರದು. ಎಲ್ಲಾ ಜನತೆಗೂ ತಾವು ತಮ್ಮದೇ ರಾಷ್ಟ್ರವನ್ನು ರಕ್ಷಿಸಿಕೊಳ್ಳಬಲ್ಲ ಸ್ವಯಂ ನಿರ್ಣಯದ ಹಕ್ಕನ್ನು ಖಾತ್ರಿಪಡಿಸಬೇಕು' ಮತ್ತು ಯುರೋಪಿಯನ್ ರಾಷ್ಟ್ರಗಳ ಗಣರಾಜ್ಯ ಒಕ್ಕೂಟವನ್ನು ಸ್ಥಾಪಿಸುವತ್ತ ಇರುತ್ತದೆ...

"ಈ ಯುದ್ಧದ ನಂತರ ಯುರೋಪನ್ನು ಪುನರ್‌ಸೃಷ್ಟಿ ಮಾಡಲಾಗುತ್ತದೆ. ಆದರೆ ಅದನ್ನು ಮಾಡುವುದು ರಾಜತಂತ್ರಜ್ಞರಲ್ಲ, ಕಾರ್ಮಿಕ ವರ್ಗ. ಇದು ನನ್ನ ಮುನ್ನೋಟ. ಅದು ಯುರೋಪಿಯನ್ ಸಂಯುಕ್ತ ಸಂಸ್ಥಾನ ಎನ್ನುವಂಥ ಗಣರಾಜ್ಯ ಒಕ್ಕೂಟವಾಗ ಬೇಕು. ರಾಷ್ಟ್ರೀಯ ಸ್ವಾಯತ್ತತೆ ಇನ್ನು ಸಾಕಾಗದು. ಆರ್ಥಿಕ ವಿಕಾಸದ ಸ್ವರೂಪ ಹೇಗಿದೆ ಎಂದರೆ ಇನ್ನು ಮುಂದೆ ರಾಷ್ಟ್ರೀಯ ಗಡಿಗಳ ಅಸ್ತಿತ್ವ ಸರಿಹೋಗುವುದಿಲ್ಲ. ಯುರೋಪಿನಲ್ಲಿ ಸಣ್ಣ ರಾಷ್ಟ್ರಗಳಿದ್ದರೆ ಸಾಮ್ರಾಜ್ಯಶಾಹಿಗಳು ಮತ್ತೆ ತಮ್ಮ ಆಟವನ್ನು ಶುರುಮಾಡಿಕೊಳ್ಳುತ್ತಾರೆ.

ಯುರೋಪಿಯನ್ ಗಣರಾಜ್ಯ ಮಾತ್ರ ವಿಶ್ವಶಾಂತಿಯನ್ನು ಖಾತ್ರಿಪಡಿಸಬಲ್ಲದು." ಸುಂದರವಾಗಿಯೂ, ವ್ಯಂಗ್ಯವಾಗಿಯೂ ನಗುತ್ತ ಆತ ಹೇಳಿದ "ಆದರೆ ಇದನ್ನು ಯುರೋಪಿನ ಜನ ನಿರ್ಧರಿಸಬೇಕು, ಇಲ್ಲದಿದ್ದರೆ ಸಾಧ್ಯವಾಗದು."

[ಇದರಲ್ಲಿ ಕೂಡಲೇ ಕದನವಿರಾಮವನ್ನು ಘೋಷಿಸಬೇಕು ಎಂಬುದು ಬೋಲ್ಶೆವಿಕರ ಅಧಿಕೃತ ನಿಲುವೇ ಆಗಿತ್ತು. ಆದರೆ ಯುರೋಪಿಯನ್ ಗಣರಾಜ್ಯದ ಸ್ಥಾಪನೆಯಾಗಲೇಬೇಕು, ಅದಕ್ಕಾಗಿ ಯುರೋಪಿಯನ್ ಸಂಯುಕ್ತ ಸಂಸ್ಥಾನ ಸ್ಥಾಪಿಸಬೇಕಾಗುತ್ತದೆ. ಇವೆಲ್ಲಾ ಟ್ರಾಟ್‌ಸ್ಕಿಯವರ ವೈಯಕ್ತಿಕ ನಿಲುವಾಗಿರಬೇಕು. ಯುರೋಪಿನಲ್ಲಿ ಕ್ರಾಂತಿಯಾಗದಿದ್ದರೆ ರಷ್ಯನ್ ಕ್ರಾಂತಿಯನ್ನು ಕಾಪಾಡಿಕೊಳ್ಳಲಾಗದು ಎಂಬಂಥ ವಿವಾದಾತ್ಮಕ ನಿಲುವುಗಳನ್ನು ಟ್ರಾಟ್‌ಸ್ಕಿ ಹೊಂದಿದ್ದರು. ಇದನ್ನು ಬೋಲ್ಶೆವಿಕ್ ಪಕ್ಷ ಒಪ್ಪಿಕೊಂಡಿರಲಿಲ್ಲ.]

ಒಂದು ದಿನ ಬೆಳಿಗ್ಗೆ ಇದ್ದಕ್ಕಿದ್ದಂತೆ ರಸ್ತೆಯ ಮೇಲೆ ಬೋಲ್ಶೆವಿಕರು ಕಾಣಿಸಿಕೊಂಡು ಮಧ್ಯಮ ವರ್ಗದವರು, ಶ್ರೀಮಂತರು ಎಲ್ಲರನ್ನೂ ಗುಂಡಿಟ್ಟು ಕೊಲ್ಲುತ್ತಾರೆ. ಹಾಗೆ ಕ್ರಾಂತಿ ಆರಂಭವಾಗುತ್ತದೆ ಎಂಬ ಕಥೆಗಳು ಚಲಾವಣೆಯಲ್ಲಿದ್ದವಷ್ಟೇ. ಆದರೆ ನಿಜವಾದ ಸಶಸ್ತ್ರ ಬಂಡಾಯ ಅಂಥ ಯಾವುದೇ ಪಿತೂರಿಯ ಲಕ್ಷಣಗಳಿಲ್ಲದೆ ಸಹಜವಾಗಿ ಬಹಿರಂಗವಾಗಿ ಆರಂಭವಾಯಿತು.

ಸರ್ಕಾರವು ಇದ್ದಕ್ಕಿದ್ದಂತೆ ಪೆತ್ರೋಗ್ರಾಡ್‌ನಲ್ಲಿದ್ದ ಸೈನಿಕ ಶಿಬಿರದ ಎಲ್ಲ ಸೈನ್ಯಗಳನ್ನೂ ರಣಾಂಗಣಕ್ಕೆ ಕಳಿಸಲು ನಿರ್ಧರಿಸಿತು. ಈ ಸೈನ್ಯದ ಸಂಖ್ಯೆ ಸುಮಾರು ಅರವತ್ತು ಸಾವಿರ. ಇವರೆಲ್ಲರೂ ಈ ಮುಂಚಿನ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದವರು. ಮಾರ್ಚ್‌ನ ಕ್ರಾಂತಿಯ ಭವ್ಯವಾದ ದಿನಗಳಲ್ಲಿ ಪರಿಸ್ಥಿತಿಯನ್ನು ಕ್ರಾಂತಿಯ ಪರವಾಗಿ ತಿರುಗಿಸಿದ್ದ ಜನ ಅವರು. ಸೈನಿಕ ಪ್ರತಿನಿಧಿಗಳ ಸೋವಿಯತ್‌ಅನ್ನು ಸ್ಥಾಪಿಸಿದವರು. ಕ್ರಾಂತಿವಿರೋಧಿ ಕೊರ್ನಿಲೊವ್‌ನ ದಾಳಿಯನ್ನು ಹಿಮ್ಮೆಟ್ಟಿಸಿದವರು ಸಹ ಅವರೇನೆ.

ಇನ್ನೊಂದು ಮುಖ್ಯ ಸಂಗತಿ ಎಂದರೆ ಅವರಲ್ಲಿ ಬಹುಪಾಲು ಜನ ಬೋಲ್ಶೆವಿಕರು. ಹಂಗಾಮಿ ಸರ್ಕಾರ ರಾಜಧಾನಿಯನ್ನು ಪೆತ್ರೋಗ್ರಾಡ್‌ನಿಂದ ವರ್ಗಾಯಿಸುತ್ತೇವೆ ಎಂದು ತಂತ್ರ ಹೂಡಿದಾಗ ಈ ಸೈನಿಕರು "ರಾಜಧಾನಿಯನ್ನು ರಕ್ಷಿಸಲಾಗದಿದ್ದರೆ ಯುದ್ಧ ನಿಲ್ಲಿಸಿ, ಶಾಂತಿಯನ್ನು ಘೋಷಿಸಿ. ಮತ್ತೆ ಶಾಂತಿ ಸ್ಥಾಪನೆ ಮಾಡಲು ನಿಮಗೆ ಸಾಧ್ಯವಿಲ್ಲದಿದ್ದರೆ, ಜನತೆಯ ಸರ್ಕಾರಕ್ಕೆ ಅನುವು ಮಾಡಿಕೊಟ್ಟು ತೊಲಗಿಹೋಗಿ, ಜನತೆಯ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡೂ ಕರ್ತವ್ಯಗಳನ್ನು ಪೂರೈಸುತ್ತದೆ" ಎಂದು ಅಬ್ಬರಿಸಿದ್ದರು.

ಪೆತ್ರೋಗ್ರಾಡ್ ಸೈನಿಕ ಶಿಬಿರವು ಏನು ತೀರ್ಮಾನಿಸುತ್ತದೆಯೋ ಅದರ ಮೇಲೆ ಸಶಸ್ತ್ರ ಕ್ರಾಂತಿಯ ಭವಿಷ್ಯ ಅವಲಂಬಿತವಾಗಿರುತ್ತದೆ ಎಂಬುದು ಎಲ್ಲರಿಗೂ ಸ್ಪಷ್ಟವಾಗಿದ್ದ ಸಂಗತಿ. ಆದ್ದರಿಂದಲೇ ಈ ಕ್ರಾಂತಿಪರವಾದ ಸೈನಿಕದಳಗಳನ್ನು ಯಾವುದಾದರೂ ನೆಪದಲ್ಲಿ ಹೊರಹಾಕಿ ಆ ಜಾಗದಲ್ಲಿ ಕ್ರಾಂತಿವಿರೋಧಿಯೂ, ಹಂಗಾಮಿ ಸರ್ಕಾರಕ್ಕೆ ನಿಷ್ಠೆ ಇರುವಂಥವೂ ಆದ 'ಕೊಸ್ಸಾಕ್' ದಳಗಳನ್ನು, 'ಮೃತ್ಯುದಳ'ಗಳನ್ನು ತರಬೇಕು ಎಂಬುದು ಈ ಕ್ರಮದ ಹಿಂದಿದ್ದ ಹುನ್ನಾರ. ಸೈನ್ಯಾಧಿಕಾರಿಗಳ ಸಮಿತಿಗಳು ಮಂದಗಾಮಿ ಸಮಾಜವಾದಿಗಳು, ಹಳೆಯ ತ್ಸೆ-ಇ-ಕಾ ಸರ್ಕಾರದ ನಿಲವನ್ನು ಬೆಂಬಲಿಸುತ್ತಿದ್ದವು. ತಮ್ಮ ಮಿತ್ರರೇ ಆದ ಸೈನಿಕರು ಕಂದಕಗಳಲ್ಲಿ ಹೋರಾಡುತ್ತಾ ಉಪವಾಸ ಬಿದ್ದು

ನರಳುತ್ತಿರುವಾಗ, ಈ ಪೆತ್ರೋಗ್ರಾಡ್ ಶಿಬಿರದ ಸೈನಿಕರು ಆರಾಮವಾಗಿ ಮಜಾ ಉಡಾಯಿಸುತ್ತಿದ್ದಾರೆ ಎಂಬ ಪ್ರಚಾರವನ್ನು ರಾಜಧಾನಿಯಲ್ಲೂ, ರಣರಂಗದಲ್ಲೂ ಆರಂಭಿಸಲಾಯಿತು.

ರಾಜಧಾನಿಯ ಸೈನಿಕ ಶಿಬಿರದಲ್ಲಿ ಚಳಿಗಾಲದ ಯುದ್ಧದಲ್ಲಿ ಭಾಗವಹಿಸುವುದರ ಬಗ್ಗೆ ಅಂಥಾ ಉತ್ಸಾಹವಿರಲಿಲ್ಲ ಎಂಬುದರಲ್ಲಿ ಸತ್ಯವಿರಬಹುದು. ಆದರೆ ಅವರು ಯುದ್ಧಕ್ಕೆ ಹೋಗಲು ಸಮ್ಮತಿಸದೇ ಇದ್ದದ್ದಕ್ಕೆ ಇನ್ನೂ ಮುಖ್ಯ ಕಾರಣಗಳಿದ್ದವು. ಸೈನಿಕರಲ್ಲಿ ಸರ್ಕಾರದ ತಂತ್ರೋಪಾಯದ ಬಗ್ಗೆ ತೀವ್ರ ಆತಂಕವಿತ್ತು. ಇದಲ್ಲದೆ ರಣಾಂಗಣದಿಂದ ಬಂದ ನೂರಾರು ಪ್ರತಿನಿಧಿಗಳು, ಸಾಮಾನ್ಯ ಸೈನಿಕರ ಸಂದೇಶವನ್ನು ಹೊತ್ತು ತಂದವರು ಘೋಷಿಸಿದರು, "ನಿಜ, ನಮಗೆ ರಣಾಂಗಣದಲ್ಲಿ ನೆರವು ಬೇಕಾಗಿದೆ. ಆದರೆ ಅದಕ್ಕಿಂತ ಮುಖ್ಯವೆಂದರೆ – ರಾಜಧಾನಿ ಮತ್ತು ಕ್ರಾಂತಿಯನ್ನು ಸಂಪೂರ್ಣವಾಗಿ ರಕ್ಷಿಸಬೇಕು... ನೀವು ಹಿಂಬದಿಯ ಪ್ರದೇಶವನ್ನು ರಕ್ಷಿಸಿ ನಾವು ಮುಂಚೂಣಿಯನ್ನು ರಕ್ಷಿಸುತ್ತೇವೆ."

ಅಕ್ಟೋಬರ್ 25ರಂದೇ, ಪೆತ್ರೋಗ್ರಾಡ್ ಸೋವಿಯತ್‌ನ ಕೇಂದ್ರ ಸಮಿತಿಯು ತನ್ನ ಗುಪ್ತ ಸಭೆಯಲ್ಲಿ ಇಡೀ ಪ್ರಶ್ನೆಯನ್ನು ಚರ್ಚಿಸಿ ನಿರ್ಧರಿಸಲು ವಿಶೇಷ ಸೈನಿಕ ಸಮಿತಿಯೊಂದನ್ನು ರಚಿಸಿತ್ತು. ಮಾರನೆಯ ದಿನವೇ ಪೆತ್ರೋಗ್ರಾಡ್ ಸೋವಿಯತ್‌ನ ಸೈನಿಕ ವಿಭಾಗವು ಸಮಿತಿಯೊಂದನ್ನು ರಚಿಸಿತು. ಆ ಸಮಿತಿಯು ಎಲ್ಲಾ ಬೂರ್ಶ್ವಾ ಪತ್ರಿಕೆಗಳನ್ನೂ ಬಹಿಷ್ಕರಿಸಬೇಕೆಂದು ಘೋಷಿಸಿದ್ದಲ್ಲದೆ, ಸೋವಿಯತ್‌ಗಳ ಮಹಾಧಿವೇಶನವನ್ನು ವಿರೋಧಿಸಿದ್ದಕ್ಕಾಗಿ ತ್ಸೆ–ಇ–ಕಾವನ್ನು ಖಂಡಿಸಿತು. 29ನೆಯ ತಾರೀಕು ಪೆತ್ರೋಗ್ರಾಡ್ ಸೋವಿಯತ್‌ನ ಬಹಿರಂಗ ಅಧಿವೇಶನದಲ್ಲಿ ಹೋರಾಟವನ್ನು ಮುನ್ನಡೆಸಲು ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ರಚಿಸಬೇಕೆಂಬ ಗೊತ್ತುವಳಿಯನ್ನು ಟ್ರಾಟ್‌ಸ್ಕಿ ಮಂಡಿಸಿದರು. ರಣಾಂಗಣದಲ್ಲಿರುವ ಸೈನಿಕರನ್ನೂ, ಅಧಿಕಾರಿಗಳನ್ನೂ ಈ ಕುರಿತು ಒಪ್ಪಿಸಲಿಕ್ಕೆಂದು ನಿಯೋಗಗಳನ್ನು ಕಳುಹಿಸಬೇಕೆಂದೂ ನಿರ್ಧಾರವಾಯಿತು.

ಈ ವಿಷಯಗಳ ಬಗ್ಗೆ ಮಾತನಾಡಲು ಪ್‌ಸ್ಕೊವ್ ನಗರಕ್ಕೆ ಹೋದ ಸೋವಿಯತ್ ಪ್ರತಿನಿಧಿಗಳನ್ನು ಸರ್ಕಾರದ ಪರವಾಗಿ ಉತ್ತರ ರಣಾಂಗಣದ ಜನರಲ್ ಆಗಿದ್ದ ಚೆರೆಮಿಸೊವ್ ಎಂಬುವನು ಭೇಟಿಯಾದ. ಆತ ಪೆತ್ರೋಗ್ರಾಡ್‌ನ ಸೈನ್ಯವು ರಣಾಂಗಣಕ್ಕೆ ಹೋಗಲೇಬೇಕೆಂದು ಕಡ್ಡಿತುಂಡು ಮಾಡಿದ ಹಾಗೆ ಹೇಳಿಬಿಟ್ಟ, ಬೇರೆ ಮಾತಿಗೆ ಅವಕಾಶವೇ ಕೊಡಲಿಲ್ಲ. ಇತ್ತ ಪೆತ್ರೋಗ್ರಾಡ್‌ನಲ್ಲಿ ಸೈನಿಕ ಶಿಬಿರದ ಸಮಿತಿಯು ರಾಜಧಾನಿಯನ್ನು ಬಿಟ್ಟು ಹೊರಬರಲು ಅನುಮತಿ ನೀಡಲಿಲ್ಲ.

ಇನ್ನೊಂದು ಕಡೆ ಪೆತ್ರೋಗ್ರಾಡ್ ಸೋವಿಯತ್‌ನ ಸೈನಿಕ ಸಮಿತಿಯು ತಮ್ಮ ಪರವಾಗಿ ಪ್ರತಿನಿಧಿಯೊಬ್ಬರನ್ನು ಪೆತ್ರೋಗ್ರಾಡ್ ಅಧಿಕಾರಿಗಳ ಸಮಿತಿಯಲ್ಲಿ ಸೇರಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿತು. ಸರ್ಕಾರದ ಉತ್ತರ – 'ಸಾಧ್ಯವಿಲ್ಲ'. ಪೆತ್ರೋಗ್ರಾಡ್ ಸೋವಿಯತ್ ಇನ್ನೊಂದು ಬೇಡಿಕೆಯನ್ನು ಮುಂದಿಟ್ಟಿತು. ನಮ್ಮ ಸೈನಿಕರ ವಿಭಾಗದ ಅನುಮೋದನೆ ಇಲ್ಲದೆ ಹೊಸ ಆಜ್ಞೆಗಳನ್ನು ನೀಡಕೂಡದು. ಸರ್ಕಾರದ ಉತ್ತರ – 'ಸಾಧ್ಯವಿಲ್ಲ'. "ನಾವು ಮನ್ನಣೆ ನೀಡುವುದು ತ್ಸೆ–ಇ–ಕಾಗೆ ಮಾತ್ರ. ನಿಮಗೆ ಯಾವ ಮಾನ್ಯತೆಯನ್ನೂ ನೀಡುವುದಿಲ್ಲ. ನೀವೇನಾದರೂ ಕಾನೂನನ್ನು ಕೈಗೆ ತೆಗೆದುಕೊಂಡರೆ, ನಿಮ್ಮನ್ನೇ ಬಂಧಿಸಿ ಒಳಗೆ ಹಾಕುತ್ತೇವೆ."

ಹೀಗಾಗಿ ಇದಕ್ಕೆಲ್ಲಾ ಸೂಕ್ತ ಮಾರುತ್ತರ ನೀಡಲು ಪೆತ್ರೋಗ್ರಾಡ್‌ನ ಎಲ್ಲ ಸೈನಿಕದಳಗಳೂ ಒಂದಾಗಿ ಗೊತ್ತುವಳಿಯೊಂದನ್ನು ಅಂಗೀಕರಿಸಿದವು :

*"ಪೆತ್ರೋಗ್ರಾಡ್‌ನ ಸೈನಿಕನೆಲೆಯು ಹಂಗಾಮಿ ಸರ್ಕಾರಕ್ಕೆ ಮನ್ನಣೆ ನೀಡುವುದಿಲ್ಲ. ಪೆತ್ರೋಗ್ರಾಡ್‌ನ ಸೋವಿಯತ್ ಜನಸಮಿತಿಯೇ ಇನ್ನು ಮುಂದೆ ನಮ್ಮ ಸರ್ಕಾರವಾಗಿರುತ್ತದೆ. ಪೆತ್ರೋಗ್ರಾಡ್ ಸೋವಿಯತ್ತು, ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಮೂಲಕ ಜಾರಿ ಮಾಡುವ ಆಜ್ಞೆಗಳನ್ನು ಮಾತ್ರವೇ ನಾವು ಪಾಲಿಸುತ್ತೇವೆ."*

"ಪೆತ್ರೋಗ್ರಾಡ್ ಸೋವಿಯತ್‌ಸ ಸೈನಿಕ ವಿಭಾಗವು ಹೊರಡಿಸುವ ಆಜ್ಞೆಗಳನ್ನು ನಿರೀಕ್ಷಿಸಿ" ಎಂದು ಎಲ್ಲಾ ಸ್ಥಳೀಯ ಸೈನಿಕ ಘಟಕಗಳಿಗೆ ತಿಳಿಸಲಾಯಿತು.

ಇದಕ್ಕೆ ವಿರುದ್ಧವಾಗಿ ಕ್ರಾಂತಿವಿರೋಧಿಯಾದ ತ್ಸೆ–ಇ–ಕಾವು ತನ್ನದೇ ಆದ ಸೈನ್ಯಾಧಿಕಾರಿಗಳ ಸಭೆಯನ್ನು ನಡೆಸಿ, ಅವರೊಂದಿಗೆ ಸಹಕರಿಸಲು ಸಮಿತಿಯೊಂದನ್ನು ರಚಿಸಿಕೊಂಡು, ನಗರದ ವಿವಿಧ ಭಾಗಗಳಲ್ಲಿ ತನ್ನ ಸಚಿವರನ್ನು ನೇಮಿಸಿಕೊಂಡು ಅವರಿಗೆ ಸೂಚನೆಗಳನ್ನು ನೀಡಿತು.

ಆದರೆ ಕ್ರಾಂತಿಯ ಸಿದ್ಧತೆ ಮುಂದುವರೆದಿತ್ತು. ಸ್ಮೋಲ್ನಿ ಭವನದಲ್ಲಿ ನವೆಂಬರ್ 3ರಂದೇ ಸೈನಿಕರ ಮಹತ್ವದ ಸಭೆ ನಡೆಯಿತು. ಅದರಲ್ಲಿ ಕೆಳಕಂಡ ನಿರ್ಣಯವನ್ನು ಸ್ವೀಕರಿಸಲಾಗಿತ್ತು :

"ಮಿಲಿಟರಿ ಕ್ರಾಂತಿಕಾರಿ ಸಮಿತಿ ಅಸ್ತಿತ್ವಕ್ಕೆ ಬಂದಿರುವುದಕ್ಕೆ ನಮ್ಮ ಅಭಿನಂದನೆಗಳು. ಅದರ ಎಲ್ಲ ಕಾರ್ಯಾಚರಣೆಗಳಿಗೂ ಪೆತ್ರೋಗ್ರಾಡ್ ಸೈನಿಕ ನೆಲೆಯು ತನ್ನ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತದೆ. ಅದೇ ರೀತಿಯಲ್ಲಿ ಕ್ರಾಂತಿಯ ಹಿತಾಸಕ್ತಿಯನ್ನು ಕಾಪಾಡಲಿಕ್ಕಾಗಿ ರಣಾಂಗಣದ ಮುಂಚೂಣಿಯಲ್ಲಾಗಲೀ, ಹಿಂಬದಿಯ ಪ್ರದೇಶಗಳಲ್ಲಾಗಲೀ ನಾವು ಸಮಿತಿಯೊಂದಿಗೆ ಅತ್ಯಂತ ನಿಕಟವಾಗಿ ಒಗ್ಗೂಡಿಸುತ್ತೇವೆ.

"ಇದಲ್ಲದೆ, ಪೆತ್ರೋಗ್ರಾಡ್‌ನಲ್ಲಿ ಕ್ರಾಂತಿಕಾರಿ ಸುವ್ಯವಸ್ಥೆಯನ್ನು ಸ್ಥಾಪಿಸಲು ನಮ್ಮ ಸೈನಿಕ ನೆಲೆಯು ಕ್ರಾಂತಿಕಾರಿ ಕಾರ್ಮಿಕ ವರ್ಗದೊಂದಿಗೆ ಒಂದಾಗಿರುತ್ತದೆ ಎಂದು ಭರವಸೆ ನೀಡುತ್ತೇವೆ. ಕೊರ್ನಿಲೊವ್‌ನ ಭಂಟರಾಗಲೀ, ಬೂರ್ಶ್ವಾ ವರ್ಗವಾಗಲೀ ಯಾವುದೇ ರೀತಿಯ ಪ್ರಚೋದನಕಾರಿ ಯತ್ನಗಳನ್ನು ಮಾಡಿದ್ದೇ ಆದರೆ, ಅದನ್ನು ನಿರ್ದಯವಾಗಿ ಹತ್ತಿಕ್ಕಲಾಗುವುದು."

ತನ್ನ ಶಕ್ತಿಯ ಅರಿವಾದ ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಈಗ ಪೆತ್ರೋಗ್ರಾಡ್ ಸೈನ್ಯಾಧಿಕಾರಿಗಳನ್ನು ಕರೆದು ತನ್ನ ನಿಯಂತ್ರಣಕ್ಕೆ ಅವರೆಲ್ಲಾ ಬರಬೇಕೆಂದು ಕಠಿಣವಾಗಿ ಆಜ್ಞೆಮಾಡಿತು. ತನ್ನ ಅನುಮತಿ ಇಲ್ಲದೆ ಯಾವುದೇ ಘೋಷಣೆಗಳನ್ನಾಗಲೀ, ಆಜ್ಞೆಗಳನ್ನಾಗಲೀ ಮುದ್ರಿಸಲೇಕೂಡದು ಎಂದು ಅದು ಎಲ್ಲಾ ಮುದ್ರಣಾಲಯಗಳಿಗೆ ಕಟ್ಟೆಚ್ಚರಿಕೆಯನ್ನು ನೀಡಿತು. ಕ್ರಾಂತಿವಿರೋಧಿಯಾದ ಕಲೆಡಿನ್‌ಗೆ ಶಸ್ತ್ರಾಸ್ತ್ರ ಸಂಗ್ರಹಾಲಯದಿಂದ ಹೊರಟಿದ್ದ ಸಾವಿರಾರು ಬಂದೂಕಗಳನ್ನು, ಮದ್ದುಗುಂಡುಗಳನ್ನು, ಶಸ್ತ್ರಧಾರಿ ಕಮಿಸಾರ್‌ಗಳು ತಮ್ಮ ವಶಕ್ಕೆ ತೆಗೆದುಕೊಂಡುಬಿಟ್ಟರು.

ಇದೆಲ್ಲಾ ಆದ ಮೇಲೆ, ಈಗ ಸರ್ಕಾರ ಇದ್ದಕ್ಕಿದ್ದಂತೆ ಎಚ್ಚೆತ್ತುಕೊಂಡಿತು. ಮಿಲಿಟರಿ ಕ್ರಾಂತಿಕಾರಿ ಸಮಿತಿಯು ತಾನಾಗೇ ವಿಸರ್ಜಿಸಿಕೊಂಡುಬಿಟ್ಟರೆ ಅವರಿಗೆ ದಯಾಭಿಕ್ಷೆ ನೀಡಲಾಗುವುದು ಎಂದು ಘೋಷಿಸಿತು. ಆದರೆ ಕಾಲ ಮಿಂಚಿಹೋಗಿತ್ತು. ನವೆಂಬರ್

5ರಂದು ಪ್ರಧಾನಿ ಕೆರೆನ್‌ಸ್ಕಿಯು ಪೆತ್ರೋಗ್ರಾಡ್ ಸೋವಿಯತ್‌ನ ಪ್ರತಿನಿಧಿಯನ್ನು ಅಧಿಕಾರಿಗಳ ಸಮಿತಿಯೊಳಗೆ ಸೇರಿಸಿಕೊಳ್ಳಲು ಒಪ್ಪುತ್ತೇನೆ ಎಂದು ಹೇಳಿಕಳಿಸಿದ. ಆಗಲೂ ಮಿಲಿಟರಿ ಕ್ರಾಂತಿಕಾರಿ ಸಮಿತಿ ಅದನ್ನು ಮನ್ನಿಸಿತು. ಆದರೆ ಕೇವಲ ಒಂದು ತಾಸಿನ ನಂತರ ರಕ್ಷಣಾ ಸಚಿವ ಈ ಒಂದು ಪ್ರಸ್ತಾಪವನ್ನು ವಾಪಸ್ ತೆಗೆದುಕೊಂಡುಬಿಟ್ಟ.

ನವೆಂಬರ್ 6, ಮಂಗಳವಾರ ಬೆಳಿಗ್ಗೆ ಆಗಮಿಸಿತು. ಕಾರ್ಮಿಕರು ಹಾಗೂ ಸೈನಿಕರ ಪೆತ್ರೋಗ್ರಾಡ್ ಸೋವಿಯತ್‌ಗೆ ಸೇರಿದ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಭಿತ್ತಿಪತ್ರವೊಂದು ಎಲ್ಲೆಡೆ ಕಾಣಿಸಿಕೊಂಡು ಇಡೀ ನಗರದಲ್ಲಿ ವಿದ್ಯುತ್ಸಂಚಾರವಾದಂತಾಯಿತು.

**ಪೆತ್ರೋಗ್ರಾಡ್‌ನ ಜನತೆಗೆ,**

*ನಾಗರಿಕರೇ !*

*ಪ್ರತಿಕ್ರಾಂತಿಯು ತನ್ನ ಪಾತಕೀ ಹೆಡೆಯನ್ನು ಮೇಲೆತ್ತಿದೆ. ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನವನ್ನು ಭಗ್ನಗೊಳಿಸಲು ಹಾಗೂ ಸಂವಿಧಾನಾತ್ಮಕ ಶಾಸನಸಭೆಯನ್ನು ವಿಸರ್ಜಿಸಲು ಕೊರ್ನಿಲೊವ್‌ನ ಭಂಟರು ತಮ್ಮ ಶಕ್ತಿಯನ್ನು ಒಗ್ಗೂಡಿಸಿಕೊಳ್ಳುತ್ತಿದ್ದಾರೆ. ಅದೇ ಸಂದರ್ಭದಲ್ಲಿ ದಂಗೆಕೋರರು ಪೆತ್ರೋಗ್ರಾಡಿನ ಜನತೆಯನ್ನು ರಕ್ತಪಾತಕ್ಕೆ ಮತ್ತು ಗಲಭೆಗೆ ಪ್ರಚೋದಿಸಬಹುದು. ಪ್ರತಿಕ್ರಾಂತಿಯಿಂದ ಹಾಗೂ ದಂಗೆಕೋರರಿಂದ ರಾಜಧಾನಿಯನ್ನು, ಅಲ್ಲಿನ ಸುವ್ಯವಸ್ಥೆಯನ್ನು, ರಕ್ಷಿಸುವ ಹೊಣೆಯನ್ನು ಪೆತ್ರೋಗ್ರಾಡಿನ ಕಾರ್ಮಿಕ ಹಾಗೂ ಸೈನಿಕ ಪ್ರತಿನಿಧಿಗಳ ಸೋವಿಯತ್ ವಹಿಸಿಕೊಂಡಿದೆ.*

*ಪೆತ್ರೋಗ್ರಾಡಿನ ಸೇನಾ ನೆಲೆಯು ಯಾವುದೇ ಅವ್ಯವಸ್ಥೆ ಅಥವಾ ಹಿಂಸೆಯನ್ನು ಸಹಿಸುವುದಿಲ್ಲ. ಗೂಂಡಾಗಳನ್ನು ಹಾಗೂ 'ಕರಾಳ ಶತಕ' ಪಡೆಯ ಖೂಳರನ್ನು ಜನತೆ ತಾವೇ ಬಂಧಿಸಿ ಹತ್ತಿರದ ಸೈನಿಕ ನೆಲೆಗಳಲ್ಲಿ ಇರುವ ಸೋವಿಯತ್ ಕಮಿಸಾರ್‌ಗಳಿಗೆ ಒಪ್ಪಿಸತಕ್ಕದ್ದು. ಪೆತ್ರೋಗ್ರಾಡಿನ ರಸ್ತೆಯ ಮೇಲೆ ಯಾವುದೇ ದುಷ್ಟಶಕ್ತಿಗಳು ದರೋಡೆಯನ್ನಾಗಲೀ, ಹೊಡೆದಾಟವನ್ನಾಗಲೀ ಆರಂಭಿಸಿದಲ್ಲಿ ಒಡನೆಯೇ ಅವರನ್ನು ನಿರ್ನಾಮ ಮಾಡಲಾಗುತ್ತದೆ.*

*ನಾಗರಿಕರೇ, ತಾವು ಸಂಪೂರ್ಣ ಶಾಂತಿಯನ್ನು, ಸ್ವಯಂ ನಿಯಂತ್ರಣವನ್ನು ಪ್ರದರ್ಶಿಸಬೇಕಾಗಿದೆ. ಕ್ರಾಂತಿಯ ಹಿತಾಸಕ್ತಿಯು ಶಕ್ತಿಶಾಲಿ ಕೈಗಳಲ್ಲಿ ಭದ್ರವಾಗಿದೆ."*

ನವೆಂಬರ್ ಮೂರರಂದೇ ಬೋಲ್ಶೆವಿಕರು ಇನ್ನೊಂದು ಐತಿಹಾಸಿಕ ರಹಸ್ಯ ಸಭೆಯನ್ನು ನಡೆಸಿದರು. ಸುದ್ದಿ ಸಿಕ್ಕಿದ್ದರಿಂದ ನಾನು ಬಾಗಿಲ ಬಳಿಯೇ ಕಾಯುತ್ತಿದ್ದೆ. ವೊಲೊಡಾರ್ಸ್ಕಿ ಎಂಬಾತ ನನಗೆ ನಡೆಯುತ್ತಿರುವುದು ಏನು ಎಂಬುದರ ಬಗ್ಗೆ ಮಾಹಿತಿ ನೀಡಿದರು.

ಲೆನಿನ್ ಘೋಷಿಸಿದ್ದರು :

"ನವೆಂಬರ್ 6ನೇ ತಾರೀಕು ಕ್ರಾಂತಿಯನ್ನು ಆರಂಭಿಸಹೊರಟರೆ ಅದು ತೀರಾ ಆತುರದ ಕ್ರಮವಾಗುತ್ತದೆ. ನಮಗೆ ಬಂಡಾಯಕ್ಕೆ ಇಡಿಯ ರಷ್ಯಾಮಟ್ಟದಲ್ಲಿ ಬೆಂಬಲ ಬೇಕು. ಆರನೆಯ ತಾರೀಕು ಎಲ್ಲಾ ಪ್ರತಿನಿಧಿಗಳೂ ಬಂದಿರುವುದಿಲ್ಲ... ಆದರೆ, ನವೆಂಬರ್ ಎಂಟು, ತೀರ ತಡವಾಗಿಬಿಡುತ್ತದೆ. ಅಷ್ಟು ಹೊತ್ತಿಗೆ ಮಹಾಧಿವೇಶನ ಆರಂಭವಾಗಿರುತ್ತದೆ. ಅಂಥ ದೊಡ್ಡದಾದ ಸಭೆಗೆ ಕ್ಷಿಪ್ರವಾದ, ನಿರ್ಣಾಯಕವಾದ

ತೀರ್ಮಾನವನ್ನು ತೆಗೆದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ನಾವು ನವೆಂಬರ್ ಏಳನೆಯ ತಾರೀಕಿನಿಂದೇ, ಎಂದರೆ ಮಹಾಧಿವೇಶನವು ಆರಂಭವಾಗುವ ದಿನವೇ ಕಾರ್ಯಪ್ರವೃತ್ತರಾಗಬೇಕು. ಆಗ ನಾವು 'ಇಗೋ ನೋಡಿ, ರಾಜ್ಯಾಧಿಕಾರ ನಮ್ಮ ಕೈಯಲ್ಲಿದೆ, ನೀವೇ ಹೇಳಿ ಈಗ ಇದನ್ನು ಏನು ಮಾಡೋಣ' ಎನ್ನಬಹುದು."

ಮೇಲು ಮಹಡಿಯ ಕೋಣೆಯೊಂದರಲ್ಲಿ, ಹಿಂದೆ ಝಾರ್‌ನ ಸೈನ್ಯದಲ್ಲಿ ಅಧಿಕಾರಿಯಾಗಿದ್ದು, ನಂತರ ಕ್ರಾಂತಿಕಾರಿಯಾಗಿ ದೇಶಭ್ರಷ್ಟನಾದ ಆಂಟೊನೊವ್ ಎಂಬಾತ ಸಶಸ್ತ್ರ ಬಂಡಾಯದ ರೂಪುರೇಷೆಗಳನ್ನು ಸಿದ್ಧಪಡಿಸುತ್ತಿದ್ದ. ಗಣಿತಶಾಸ್ತ್ರಜ್ಞನೂ, ಒಳ್ಳೆಯ ಚೆಸ್ ಆಟಗಾರನೂ ಆದ ಅವನದ್ದು ಬಡಕಲು ಮುಖ, ನೀಳವಾದ ಕೇಶರಾಶಿ. ಆತ ರಾಜಧಾನಿಯನ್ನು ವಶಕ್ಕೆ ತೆಗೆದುಕೊಳ್ಳಲು ಬಹಳ ಎಚ್ಚರಿಕೆಯ ಯೋಜನೆಯೊಂದನ್ನು ಸಿದ್ಧಪಡಿಸುತ್ತಿದ್ದ.

ಇನ್ನೊಂದು ಕಡೆ ಸರ್ಕಾರವೂ ತನ್ನ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿತ್ತು. ಬೇರೆ ಬೇರೆ ಸೈನ್ಯಗಳಿಗೆ ಸೇರಿದ ಅತ್ಯಂತ ನಿಷ್ಠಾವಂತ ತುಕಡಿಗಳನ್ನು ಆಯ್ದುಕೊಂಡು ಅವುಗಳನ್ನು ಪೆತ್ರೋಗ್ರಾಡಿಗೆ ಬರಲು ಹೇಳಿಕಳಿಸಲಾಗಿತ್ತು. ಕುಲೀನ ಮನೆತನಗಳಿಂದ ತರುಣರನ್ನು ಆಯ್ದು ಅಧಿಕಾರಿಗಳನ್ನಾಗಿ ಮಾಡಲು ತರಬೇತಿ ನೀಡಲಾಗುತ್ತಿದ್ದ 'ಯಂಕರ್' ಶಾಲೆಗಳಿಂದ ತರುಣ ಯೋಧರ ಫಿರಂಗಿ ದಳವನ್ನು ವಿಂಟರ್ ಪ್ಯಾಲೇಸ್ (ಚಳಿಗಾಲದ ಅರಮನೆ)ಅನ್ನು ರಕ್ಷಿಸಲು ನಿಯೋಜಿಸಲಾಯಿತು. ಜುಲೈ ತಿಂಗಳ ಗಲಭೆಗಳ ನಂತರ, ಮೊದಲಬಾರಿಗೆ ಈಗ ಸರ್ಕಾರಕ್ಕೆ ಕುರುಡು ವಿಧೇಯತೆ ತೋರಿಸುತ್ತಿದ್ದ ಕೊಸ್ಸಾಕ್ ಗಸ್ತುದಳಗಳನ್ನು ರಾಜಧಾನಿಯ ರಸ್ತೆಗಳಿಗೆ ಬಿಡಲಾಯಿತು. ಎಲ್ಲಾ ರೀತಿಯ ಅವಿಧೇಯತೆಯನ್ನು ಹೊಸಕಿಹಾಕಿಬಿಡುತ್ತೇವೆ ಎಂದು ಬೆದರಿಸುವ ಆಜ್ಞೆಗಳನ್ನು ಪುಂಖಾನುಪುಂಖವಾಗಿ ಘೋಷಿಸಲಾಯಿತು. ಇಡಿಯ ಸಚಿವ ಸಂಪುಟದಲ್ಲಿಯೇ ಅತಿ ಹೆಚ್ಚಿನ ಮಟ್ಟದಲ್ಲಿ ಜನತೆಯ ದ್ವೇಷಕ್ಕೆ ಪಾತ್ರನಾಗಿದ್ದ ರೆಶ್ಕಿನ್ ಎಂಬುವನನ್ನು ಪೆತ್ರೋಗ್ರಾಡ್‌ನಲ್ಲಿ ಸುವ್ಯವಸ್ಥೆಯನ್ನು ಕಾಪಾಡಲು ನಿಯೋಜಿಸಲಾಯಿತು. ಆತ ತನ್ನಷ್ಟೇ ಕುಖ್ಯಾತರಾದ ಇಬ್ಬರು ಸಹಾಯಕರನ್ನು ನೇಮಿಸಿಕೊಂಡ. ಪೆತ್ರೋಗ್ರಾಡ್ ಮಾತ್ರವಲ್ಲ, ಕ್ರಾನ್‌ಸ್ಟಾಟ್, ಫಿನ್‌ಲೆಂಡ್‌ಗಳೂ ಸಹ ಮುತ್ತಿಗೆಗೆ ಒಳಗಾದ ಪ್ರದೇಶಗಳು ಎಂದು ಘೋಷಿಸಲಾಯಿತು. ಇದರ ಬಗ್ಗೆ ಬಂಡವಾಳಗಾರರ ಪತ್ರಿಕೆಯೇ ಆಗಿದ್ದ ನೋವಯೆ ವ್ರೆಮ್ಯಾ (ಹೊಸ ಯುಗ) ವ್ಯಂಗ್ಯವಾಗಿ ನುಡಿಯಿತು:

"ಮುತ್ತಿಗೆಯ ಸ್ಥಿತಿ ಎಂದು ಘೋಷಿಸಿರುವುದೇಕೆ? ಏಕೆಂದರೆ ಸರ್ಕಾರದ ಕೈಯಲ್ಲಿ ಯಾವ ಅಧಿಕಾರವೂ ಉಳಿದಿಲ್ಲ. ಸರ್ಕಾರಕ್ಕೆ ನೈತಿಕ ಬಲವೂ ಇಲ್ಲ, ಅವಶ್ಯ ಬಿದ್ದಾಗ ಬಲಪ್ರಯೋಗ ಮಾಡುವ ಸಾಮರ್ಥ್ಯವೂ ಇಲ್ಲ.... ಅತ್ಯಂತ ಅನುಕೂಲಕರ ಪರಿಸ್ಥಿತಿಯಲ್ಲಿ ಸಹ, ಅದು ಯಾರಾದರೂ ಮಾತುಕತೆಗೆ ಒಪ್ಪಿದರೆ ಅವರೊಡನೆ ಮಾತನಾಡಬಲ್ಲದು ಅಷ್ಟೇ ! ಅದರ ಅಧಿಕಾರದ ವ್ಯಾಪ್ತಿಯ ಮಿತಿ ಇರುವುದು ಅಷ್ಟೇ..."

ನವೆಂಬರ್ 5, ಸೋಮವಾರ. ಅಂದು ಬೆಳಿಗ್ಗೆ ನಾನು ಮಾರಿನ್‌ಸ್ಕಿ ಅರಮನೆಗೆ ಭೇಟಿಕೊಟ್ಟೆ. ರಷ್ಯನ್ ಗಣರಾಜ್ಯ ಮಂಡಳಿಯಲ್ಲಿ ಏನು ನಡೆಯುತ್ತಿದೆಯೋ ನೋಡೋಣ ಎಂಬ ಉದ್ದೇಶವಿತ್ತು. ಅಲ್ಲಿ ತೆರೆಶ್ಚೆಂಕೋನ ವಿದೇಶಾಂಗ ನೀತಿಯ ಬಗ್ಗೆ ಉಗ್ರವಾದಂಥ ಚರ್ಚೆ ನಡೆಯುತ್ತಿತ್ತು.

ನಾನು ಒಳಗೆ ಪ್ರವೇಶಿಸಿದಾಗ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಯಾದ ಕರೆಲಿನ್ ಎಂಬಾತ 'ಲಂಡನ್ ಟೈಮ್ಸ್' ಪತ್ರಿಕೆಯ ಸಂಪಾದಕೀಯವನ್ನು ಓದುತ್ತಿದ್ದ. "ಬೋಲ್ಶೆವಿಸಂಗೆ ಉತ್ತರ ಎಂದರೆ ಗುಂಡೇಟು" ಎಂಬುದು ಅದರ ಒಕ್ಕಣೆ. ಆತ ಕ್ಯಾಡೆಟ್ ಪಕ್ಷದವರತ್ತ ತಿರುಗಿ "ನಿಮ್ಮ ಅಭಿಪ್ರಾಯವೂ ಇದೇ ತಾನೆ?" ಎಂದ. ಬಲಪಂಥೀಯರು "ಹೌದು, ಹೌದು" ಎನ್ನುತ್ತಿದ್ದರು.

ಮುದ್ದಾಗಿ ಕಾಣುತ್ತಿದ್ದ ಸ್ಕೊಬೆಲೆವ್, ಸೋವಿಯತ್‌ಗಳ ನಕಾಜ್ (ಮಿತ್ರರಾಷ್ಟ್ರಗಳ ಜೊತೆಗೆ ಮಾಡಬೇಕಾಗಿದ್ದ ಸಂಧಾನಕ್ಕೆ ನೀಡಿದ್ದ ಸೂಚನೆಗಳು) ಸರಿ ಎಂದು ವಾದಿಸಿದ. ಆದರೆ ನಂತರ ಮಾತನಾಡಿದ ತೆರೆಶ್ಚೆಂಕೊ, ನಮ್ಮ ಕಡೆಯಿಂದ ಹೋಗುವ ಪ್ರತಿನಿಧಿಗಳಲ್ಲಿ ಒಮ್ಮತವಿರಬೇಕು ಎಂದೂ, ಸೈನ್ಯದಲ್ಲಿ ಶಿಸ್ತಿದ್ದರೆ ಯುದ್ಧ ಗೆಲ್ಲಬಹುದು ಇತ್ಯಾದಿ ಹೇಳುತ್ತಿದ್ದರೆ, ಎಡಪಂಥೀಯ ಸದಸ್ಯರು 'ರಾಜಿನಾಮೆ ಕೊಡು' ಎಂದು ಅಬ್ಬರಿಸುತ್ತಿದ್ದರು.

ಬೋಲ್ಶೆವಿಕರು ಸದನದಿಂದ ಹೊರನಡೆದ ಮೇಲೆ ಅಲ್ಲಿನ ಕಾರ್ಯಕಲಾಪಗಳಲ್ಲಿ ಮೊದಲಿನ ಜೀವಂತಿಕೆ ಇರಲಿಲ್ಲ. ಇಲ್ಲಿ ಏನೇ ಸಣ್ಣಪುಟ್ಟ ವಾಗ್ವಾದ ನಡೆಯುತ್ತಿರಲಿ, ಹೊರಗಿನ ಪ್ರಪಂಚದಲ್ಲಿ ಆಗುತ್ತಿರುವ ಅಲ್ಲೋಲ ಕಲ್ಲೋಲ ಇಲ್ಲಿ ಪ್ರತಿಫಲನವಾಗುತ್ತಲೇ ಇಲ್ಲ ಎನಿಸಿತು. ಯಾವ ಯುದ್ಧ ಮತ್ತು ಶಾಂತಿಯ ಪ್ರಶ್ನೆಯ ಕಾರಣದಿಂದಾಗಿ ಈ ಹಿಂದಿನ ಸರ್ಕಾರದ ಪತನವಾಯಿತೋ ಅದೇ ಕಾರಣದಿಂದಲೇ ಇಂದಿನ ಹಂಗಾಮಿ ಸರ್ಕಾರವೂ ಕುಸಿದು ಬೀಳುತ್ತದೆ ಎಂದು ನನಗನ್ನಿಸಿತು.

ಹೊರಗಡೆ ಪಡಸಾಲೆಯಲ್ಲಿ ಪ್ರೊಫೆಸರ್ ಶಾಟ್‌ಸ್ಕಿ ಎಂಬಾತ ಎದುರಾದ. ಹೆಗ್ಗಣದ ಮುಖವಿದ್ದ ಈತ ಕ್ಯಾಡೆಟ್ ಪಾರ್ಟಿಯ ನಾಯಕ. "ಬೋಲ್ಶೆವಿಕರ ಬಂಡಾಯ ಏನಾಗಬಹುದು ?" ಎಂದು ಅವನನ್ನು ಕೇಳಿದೆ.

"ಅವರು ದನಗಳು. ಏನು ಮಾಡಕ್ಕೂ ಅವರಿಗೆ ಧೈರ್ಯ ಇಲ್ಲ. ಅವರೇನಾದರೂ ಶುರು ಮಾಡಿದ್ರೆ ಅವರನ್ನು ಒದ್ದೋಡಿಸ್ತೀವಿ. ನಮಗೇನೂ ತೊಂದರೆ ಇಲ್ಲ. ಅವರೇ ಸರ್ವನಾಶ ಆಗ್ತಾರೆ."

ಅವನ ಬೊಗಳೆ ಮುಂದುವರೆದಿತ್ತು : "ಸಂವಿಧಾನಾತ್ಮಕ ಶಾಸನ ಸಭೆಯ ಮುಂದೆ ಹೊಸ ಸರ್ಕಾರ ರಚನೆ ಬಗ್ಗೆ ನನ್ನ ಯೋಜನೆಯನ್ನು ಮುಂದಿಡ್ತೀವಿ. ಅದೇನಪ್ಪ ಅಂದ್ರೆ, ನಿಮ್ಮ ಅಮೆರಿಕಾದಲ್ಲಿದ್ದ ಹಾಗೆ ಒಂದು ಸಂಸತ್ ಇರಬೇಕು. ಕೆಳಗಿನ ಮನೆಯಲ್ಲಿ ಪ್ರಾದೇಶಿಕ ಪ್ರತಿನಿಧಿಗಳು, ಮೇಲ್ಮನೆಯಲ್ಲಿ ವೃತ್ತಿಪರರು, ಸಹಕಾರಿ ಸಂಘದ ಪ್ರತಿನಿಧಿಗಳು..."

ನಾನು ಅವನನ್ನು ಬಿಟ್ಟು ಹೊರಬಂದೆ. ಪಶ್ಚಿಮದಿಂದ ಕುಳುರ್ಗಾಳಿ ಬೀಸುತ್ತಿತ್ತು. ಎರಡು ತುಕಡಿ ಯಂಕರ್ ಹುಡುಗರು ಝಾರ್ ಚಕ್ರವರ್ತಿಯ ಕಾಲದ ಬ್ಯಾಂಡ್‌ಸೆಟ್ ಹಾಡೊಂದನ್ನು ಕಿರುಚಿಕೊಳ್ಳುತ್ತಾ, ಹೆಜ್ಜೆ ಹಾಕುತ್ತಿದ್ದರು. ಅಲ್ಲೊಂದು ಅಡ್ಡರಸ್ತೆಯ ಬಳಿ ಶಸ್ತ್ರಸಜ್ಜಿತ ಅಶ್ವಾರೋಹಿ ಮಿಲಿಶಿಯಾ ಸೈನಿಕರು ನಿಂತಿದ್ದರು. ರಾಜಧಾನಿ ಮುಖ್ಯರಸ್ತೆ ನೆವ್‌ಸ್ಕಿ ಪ್ರಾಸ್‌ಪೆಕ್ಟ್‌ನ ಮೂಲೆಯಲ್ಲಿ ನಾನು ಲೆನಿನ್‌ರ 'ಬೋಲ್ಶೆವಿಕರು ರಾಜ್ಯಾಧಿಕಾರವನ್ನು ಉಳಿಸಿಕೊಳ್ಳಬಲ್ಲರೇ' ಎಂಬ ಕಿರುಹೊತ್ತಿಗೆಯನ್ನು ಖರೀದಿಸಿದೆ. ಟ್ರಾಮ್‌ಗಳು ಮಾಮೂಲಿಯಾಗಿ ಚಲಿಸುತ್ತಿದ್ದವು. ಯಾವುದೇ ಸರ್ಕಸ್ ಕಲಾವಿದರೂ ನಾಚುವಂತೆ ಜನ ಅವುಗಳಿಗೆ ಜೋತುಬಿದ್ದಿದ್ದರು! ರಸ್ತೆಬದಿಯಲ್ಲಿ ಯುದ್ಧ ತೊರೆದು ಬಂದಿದ್ದ ಸೈನಿಕರು ತಿಂಡಿತಿನಿಸು, ಸಿಗರೇಟುಗಳನ್ನು ಮಾರುತ್ತ ನಿಂತಿದ್ದರು.

ಮುಖ್ಯ ಬೀದಿಯ ಉದ್ದಕ್ಕೂ ಜನರು ಎಲ್ಲೆಂದರಲ್ಲಿ ಅಂಟಿಸಿದ್ದ ಭಿತ್ತಿಪತ್ರಗಳನ್ನು, ಕರಪತ್ರಗಳನ್ನು ಓದುತ್ತಾ ಏನಾಗಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆ ದಿನಗಳಲ್ಲಿ ತ್ಸೆ-ಇ-ಕಾ, ಮಂದಗಾಮಿ ಸಮಾಜವಾದಿಗಳು, ರೈತರ ಸೋವಿಯತ್‌ಗಳು, ಸ್ವನ್ಯಾಧಿಕಾರಿಗಳ ಸಮಿತಿಗಳು ಎಲ್ಲವೂ ಕೂಡ ಸೈನಿಕರನ್ನು ಹಾಗೂ ಕಾರ್ಮಿಕರನ್ನು 'ಯಾರೂ ಹೊರಗೆ ಬರಬೇಡಿ, ಸರ್ಕಾರವನ್ನು ಬೆಂಬಲಿಸಿ' ಎಂದು ಬೆದರಿಸುವ ಪ್ರಕಟಣೆಗಳನ್ನು ಹೊರಡಿಸುತ್ತಿದ್ದರು.

ಸೈರನ್ ಕಿರುಚಿಸುತ್ತಾ ಸಶಸ್ತ್ರ ವಾಹನವೊಂದು ನಿಧಾನವಾಗಿ ರಸ್ತೆಯಲ್ಲಿ ಮೇಲೆ ಕೆಳಗೆ ಚಲಿಸುತ್ತಿತ್ತು. ಎಲ್ಲೆಡೆ ಸೈನಿಕರು, ವಿದ್ಯಾರ್ಥಿಗಳು, ಜನತೆ ಗುಂಪುಗಟ್ಟಿಕೊಂಡು ಚರ್ಚಿಸುತ್ತಿದ್ದರು. ರಾತ್ರಿಯಾಗುತ್ತಿತ್ತು. ಕೊನೆಯಿಲ್ಲದ ಅಲೆಗಳ ಮೇಲೆ ಅಲೆಗಳಂತೆ ಜನ ಓಡಾಡುತ್ತಲೇ ಇದ್ದರು. ಯಾವುದೇ ಪ್ರಕ್ಷೋಭೆಗೆ ಮುನ್ನ ಪೆತ್ರೋಗ್ರಾಡ್ ಇರುವುದೇ ಹಾಗೆ...

ಇಡೀ ನಗರ ಆತಂಕದಲ್ಲಿತ್ತು. ಸಣ್ಣ ಸದ್ದಿಗೂ ಬೆಚ್ಚಿ ಬೀಳುವಂತಿತ್ತು. ಆದರೂ ಬೋಲ್ಶೆವಿಕರ ಸುಳಿವಿರಲಿಲ್ಲ. ಸೈನಿಕರು ಶಿಬಿರಗಳಲ್ಲಿದ್ದರೆ, ಕಾರ್ಮಿಕರು ಕಾರ್ಖಾನೆಗಳಲ್ಲೇ ಇದ್ದರು. ಇನ್ನೂ ಸಿನಿಮಾ ನಡೆಯುತ್ತಿತ್ತು. ನಾನು ಒಂದು ಚಿತ್ರವನ್ನು ನೋಡಿ ಬಂದೆ.

ಅಲ್ಲಿಂದ ನಾನು ತರಾತುರಿಯಲ್ಲಿ ಸ್ಮೋಲ್ನಿ ಭವನದತ್ತ ಧಾವಿಸಿದೆ. ಮೇಲಿನ ಮಹಡಿಯ ಕೋಣೆಯಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಸಭೆ ಎಡಬಿಡದೆ ನಡೆಯುತ್ತಿತ್ತು. ಅಧ್ಯಕ್ಷತೆ ವಹಿಸಿದ್ದ ಹದಿನೆಂಟು ವರ್ಷದ ಹುಡುಗ ಲಾಛೆಮಿರ್ ಸಂಕೋಚದಿಂದಲೇ ಕೈಕುಲುಕಿ ಹೇಳಿದ :

"ಈಗ ಪೀಟರ್ – ಪಾಲ್ ಕೋಟೆ ನಮ್ಮ ವಶಕ್ಕೆ ಬಂದಿದೆ." ಅವನು ಖುಷಿಯಾಗಿ ಮುಗುಳ್ನಗುತ್ತಾ ಮುಂದುವರೆಸಿದ. "ಈಗ ತಾನೆ ಬಂದ ಸುದ್ದಿ. ಸರ್ಕಾರದೋರು ಒಂದು ದೊಡ್ಡ ಸೈನಿಕ ದಳಕ್ಕೆ ರಾಜಧಾನಿಗೆ ಬನ್ನಿ ಎಂದು ಆಜ್ಞೆ ಮಾಡಿದ್ದರು. ಆದರೆ ಸೈನಿಕರಿಗೆ ಸಂದೇಹ ಬಂತು. ಅವರು ದಾರಿಯಲ್ಲೇ ನಿಂತು "'ನಾವು ಎಲ್ಲಾ ಅಧಿಕಾರ ಸೋವಿಯತ್‌ಗೆ' ಅನ್ನೋ ನಿರ್ಣಯ ತಗೊಂಡಿದ್ದೀವಿ. ಈಗ ಏನು ಮಾಡಬೇಕು ಹೇಳು' ಅಂತ ಮಿಲಿಟರಿ ಕ್ರಾಂತಿಕಾರಿ ಸಮಿತಿಗೆ ಸಂದೇಶ ಕಳಿಸಿದ್ರು. ನಾವು 'ಕ್ರಾಂತಿಯ ಹೆಸರಲ್ಲಿ ಶುಭಾಶಯ ಹೇಳ್ತೀದ್ದೀವಿ. ಮುಂದಿನ ಸೂಚನೆ ತಲುಪೋವರೆಗೂ ಅಲ್ಲೇ ಇರಿ' ಅಂತ ಹೇಳಿದ್ದೀವಿ."

ಎಲ್ಲಾ ದೂರವಾಣಿಗಳನ್ನೂ ಕತ್ತರಿಸಲಾಗಿದೆಯಾದರೂ, ಮಿಲಿಟರಿಯ ತಾಂತ್ರಿಕ ಸಹಾಯದಿಂದ ಸೈನಿಕ ಶಿಬಿರಗಳು ಮತ್ತು ಕಾರ್ಖಾನೆಗಳ ಜೊತೆ ಮಾತ್ರ ಸಂಪರ್ಕ ಜೀವಂತವಾಗಿದೆ ಎಂದು ಆ ಹುಡುಗ ವಿವರಿಸಿದ.

ಕಮಿಸಾರ್‌ಗಳು ಮತ್ತು ಪತ್ರವಾಹಕರು ನಿರಂತರವಾಗಿ ಬಂದು ಹೋಗುತ್ತಿದ್ದರು. ನಗರದ ಮೂಲೆ ಮೂಲೆಗೂ ಸುದ್ದಿ ತಲುಪಿಸಲು ಕಾರ್ಯಕರ್ತರು ಬಾಗಿಲಿನ ಹೊರಗೆ ಕಾಯುತ್ತಿದ್ದರು. ಜಿಪ್ಸಿಯಂತೆ ಕಾಣುತ್ತಿದ್ದವನೊಬ್ಬ ಮಿಲಿಟರಿ ಲೆಫ್ಟಿನೆಂಟ್‌ನ ಸಮವಸ್ತ್ರದಲ್ಲಿದ್ದವನು, ಫ್ರೆಂಚ್ ಭಾಷೆಯಲ್ಲಿ "ಎಲ್ಲಾ ತಯಾರಿದೆ, ಒಂದು ಗುಂಡಿ ಒತ್ತಿದರೆ ಸಾಕು ಕ್ರಿಯೆ ಆರಂಭವಾಗುತ್ತದೆ" ಎಂದ.

ಕೃಶವಾಗಿದ್ದ ಗಡ್ಡಧಾರಿ ಪದ್ವೋಯ್‌ಸ್ಕಿ ಅಲ್ಲಿ ಓಡಾಡುತ್ತಿದ್ದ. ಸಶಸ್ತ್ರ ದಂಗೆಯ ಯೋಜನೆಯನ್ನು ಆತ ಸಿದ್ಧಪಡಿಸಿದ್ದನಂತೆ. ಸತತವಾಗಿ ನಿದ್ರಾಹೀನನಾಗಿ ಅಮಲೇರಿದಂತೆ

ಕಾಣುತ್ತಿದ್ದ. ಕೊಳೆ ಬಟ್ಟೆ, ಕ್ಷೌರವಿಲ್ಲದ ಮುಖವಿದ್ದ ಆಂಟೊನೊವ್, ಯಾವಾಗಲೂ ನಗುಮುಖದ ತಡವರಿಸುತ್ತಾ ಮಾತನಾಡುವ ಕ್ರೈಲೆಂಕೊ, ದೈತ್ಯಾಕಾರದ ಗಡ್ಡಧಾರಿ ಡೈಬೆಂಕೊ ಇವರೆಲ್ಲಾ ಆ ಘಳಿಗೆಯ ಘಟನೆಯ ಸೂತ್ರಧಾರಿಗಳು.

ಕೆಳಗಡೆ ಕಾರ್ಖಾನೆ ಕಾರ್ಮಿಕ ಸಮಿತಿಯ ಕಛೇರಿಯಲ್ಲಿ ಸೆರಬೊವ್ ಎಂಬಾತ ಕುಳಿತಿದ್ದ. ಪ್ರತಿ ಕಾರ್ಖಾನೆಗೆ ಸರ್ಕಾರಿ ಶಸ್ತ್ರಾಗಾರದಿಂದ ನೂರೈವತ್ತು ಬಂದೂಕುಗಳನ್ನು ವಿತರಿಸಬೇಕೆಂಬ ಆಜ್ಞೆಗೆ ಆತ ಸಹಿ ಹಾಕುತ್ತಿದ್ದ. ಅಲ್ಲಿ ನಲವತ್ತು ಮಂದಿ ಕಾರ್ಮಿಕ ಪ್ರತಿನಿಧಿಗಳು ಬಂದೂಕಿಗಾಗಿ ಕಾಯುತ್ತಾ ಸಾಲಾಗಿ ನಿಂತಿದ್ದರು.

ಸಭಾಂಗಣದಲ್ಲಿ ಕೆಲವರು ಕೆಳಹಂತದ ಬೋಲ್ಶೆವಿಕ್ ನಾಯಕರು ನನಗೆ ಸಿಕ್ಕಿದರು. ಅವರಲ್ಲೊಬ್ಬ ನನಗೆ ರಿವಾಲ್ವರೊಂದನ್ನು ತೋರಿಸುತ್ತಾ, “ಇನ್ನು ಸಮರ ಶುರುವಾದ ಹಾಗೇನೆ. ನಾವು ಸುಮ್ಮನಿದ್ದರೂ, ಎದುರು ಪಾಳೆಯ ಒಂದೋ ನಮ್ಮನ್ನ ಮುಗಿಸ್ಬೇಕು, ಇಲ್ಲಾ ತಮ್ಮ ಅಂತ್ಯ ಖಂಡಿತ ಅಂತ ಅರ್ಥ ಮಾಡ್ಕೊಂಡಿದೆ” ಎಂದ. ದೊಡ್ಡ ಸಭಾಂಗಣದಲ್ಲಿ ಪೆತ್ರೋಗ್ರಾಡ್ ಸೋವಿಯತ್ ಬೈಗು ಬೆಳಗೆನ್ನದೆ ನಿರಂತರವಾಗಿ ಸಭೆ ನಡೆಸುತ್ತಿತ್ತು. ಟ್ರಾಟ್ಸ್ಕಿಯ ಭಾಷಣ ಮುಕ್ತಾಯಕ್ಕೆ ಬಂದಿತ್ತು.

“ಬಂಡಾಯ ಆರಂಭಿಸ್ತೀವಾ ಅಂತ ನಮ್ಮನ್ನು ಕೇಳ್ತಾರೆ, ಇನ್ನು ಅಧಿಕಾರ ಸೋವಿಯತ್‌ಗಳ ಕೈಗೆ ಬರಲೇಬೇಕು ಅನ್ನೋದು ಪೆತ್ರೋಗ್ರಾಡ್ ಸೋವಿಯತ್‌ನ ತೀರ್ಮಾನ. ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನವು ಅಧಿಕಾರದ ಹಸ್ತಾಂತರದ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತೆ. ಸಶಸ್ತ್ರ ಪ್ರದರ್ಶನ ಅಗತ್ಯವೇ? ಯಾರಾದ್ರೂ ಮಹಾಧಿವೇಶನದ ತೀರ್ಮಾನಕ್ಕೆ ಅಡ್ಡಿ ಉಂಟುಮಾಡ್ತಾರೋ ಇಲ್ವೋ ಅನ್ನೋದರ ಮೇಲೆ ಅದು ಅವಲಂಬಿಸಿದೆ.

“ಹಂಗಾಮಿ ಸಚಿವ ಸಂಪುಟದ ಕೈಯಲ್ಲಿರುವ ಈ ಸರ್ಕಾರ ಅತ್ಯಂತ ದಯನೀಯವೂ ಅಸಹಾಯಕವೂ ಆಗಿದೆ. ಅದನ್ನು ಚರಿತ್ರೆಯ ಕಸಪೊರಕೆಯು ಗುಡಿಸಿಹಾಕಿ ನಿಜವಾದ ಜನಪ್ರಿಯ ಸರ್ಕಾರಕ್ಕೆ ಹಾದಿಯನ್ನು ಸುಗಮಗೊಳಿಸಬೇಕಾಗಿದೆ. ಆದರೆ ನಾವಂತೂ ಸಾಧ್ಯವಾದರೆ ಇಂದೂ ಸಹ ಘರ್ಷಣೆಯನ್ನು ತಪ್ಪಿಸಬೇಕೆಂದೇ ಇದ್ದೇವೆ. ಸಂಘಟಿತ ಜನತೆಯ ಸ್ವಾತಂತ್ರ್ಯದಿಂದಲೇ ಹುಟ್ಟುವ ರಾಜ್ಯಾಧಿಕಾರವನ್ನು ಅಖಿಲ ರಷ್ಯನ್ ಸೋವಿಯತ್ ಮಹಾಧಿವೇಶನವು ತನ್ನ ಕೈಗಳಲ್ಲಿ ಎತ್ತಿಕೊಳ್ಳಬೇಕೆಂಬುದು ನಮ್ಮ ನಿರೀಕ್ಷೆ. ಇನ್ನು ಒಂದೋ, ಎರಡೋ ಹೆಚ್ಚೆಂದರೆ ಮೂರು ದಿನವೋ ಬದುಕಿರಬಹುದಾದ ಈ ಸರ್ಕಾರ, ಆ ಅವಧಿಯನ್ನು ಉಪಯೋಗಿಸಿಕೊಂಡು ನಮ್ಮ ಮೇಲೆ ದಾಳಿ ಮಾಡಬೇಕೆಂದಿದ್ದರೆ ನಾವು ಏಟಿಗೆ ಪ್ರತಿಏಟನ್ನೂ, ಶಸ್ತ್ರಕ್ಕೆ ಪ್ರತಿಶಸ್ತ್ರವನ್ನೂ ಉಪಯೋಗಿಸಲು ಸಿದ್ಧರಿದ್ದೇವೆ.”

ಅಪಾರ ಹರ್ಷೋದ್ಗಾರಗಳ ನಡುವೆ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ಸೇರಲು ಬಯಸಿದ್ದಾರೆ ಎಂಬುದನ್ನು ಘೋಷಿಸಲಾಯಿತು.

ನಾನು ಸ್ಮೋಲ್ನಿ ಭವನದಿಂದ ಹೊರಟಾಗ ಮುಂಜಾನೆ ಮೂರು ಘಂಟೆಯಾಗಿಬಿಟ್ಟಿತ್ತು. ದ್ವಾರದಲ್ಲಿ ಆಗಲೇ ವೇಗವಾಗಿ ಗುಂಡುಹಾರಿಸಬಲ್ಲ ಎರಡು ಫಿರಂಗಿಗಳನ್ನು ತಂದು ನಿಲ್ಲಿಸಿದ್ದರು. ಬಲಿಷ್ಠ ಸೈನಿಕದಳಗಳು ಗೇಟ್‌ಗಳನ್ನು ಹಾಗೂ

ಸುತ್ತಮುತ್ತಲಿನ ಚೌಕಗಳನ್ನು ರಕ್ಷಿಸುತ್ತಿದ್ದವು. ಅಮೆರಿಕಾದ ಕಾರ್ಮಿಕ ಚಳುವಳಿಯಲ್ಲಿಯೂ ಪರಿಚಿತನಾಗಿದ್ದ ಬಿಲ್ ಶಾಟೊವ್ ಎಂಬಾತ ಮೆಟ್ಟಿಲು ಹತ್ತುತ್ತಾ ಓಡಿಬಂದವನು ನನ್ನನ್ನು ನೋಡಿ "ಇನ್ನು ಶುರುವಾದ ಹಾಗೇ, ಕೆರೆನ್‌ಸ್ಕಿ ನಮ್ಮ 'ಸೊಲ್ಡಾತ್' ಮತ್ತು 'ರೊಬೊಚಿ ಪುತ್' ಪತ್ರಿಕೆಗಳಿಗೆ ಯಂಕರ್‌ಗಳನ್ನು ಕಳಿಸಿ ಬೀಗ ಹಾಕಿಸಿದ್ದ. ನಮ್ಮ ಸೈನ್ಯ ಬಂದು ಬೀಗ ಒಡೆಯಿತು. ಈಗ ಬೂರ್ಶ್ವಾ ಪತ್ರಿಕೆಗಳ ಕಛೇರಿಗಳನ್ನು ವಶಮಾಡಿಕೊಳ್ಳಲಿದ್ದೇವೆ" ಎನ್ನುತ್ತಾ ನನ್ನ ಭುಜದ ಮೇಲೆ ಖುಷಿಯಾಗಿ ಪೆಟ್ಟು ಕೊಟ್ಟು ಓಡಿದ....

ನವೆಂಬರ್ 6, ಆ ದಿನ ಬೆಳಿಗ್ಗೆ ನನಗೆ ಸೆನ್ಸಾರ್ ಅಧಿಕಾರಿಗಳೊಂದಿಗೆ ಕೊಂಚ ಕೆಲಸವಿತ್ತು. ಅದರ ಕಛೇರಿ ಇದ್ದದ್ದು ವಿದೇಶಾಂಗ ಸಚಿವಾಲಯದಲ್ಲಿ. ಅಲ್ಲಿ ಎಲ್ಲ ಗೋಡೆಗಳ ಮೇಲೆ ಜನತೆಗೆ 'ಶಾಂತಿಯಿಂದಿರಿ' ಎಂದು ಉದ್ವಿಗ್ನತೆಯಿಂದ ಕರೆನೀಡುವ ಭಿತ್ತಪತ್ರಗಳನ್ನು ಅಂಟಿಸಲಾಗಿತ್ತು. ಒಂದು ಆಜ್ಞೆ ಕೆಳಕಂಡಂತಿತ್ತು :

*"ಎಲ್ಲ ಮಿಲಿಟರಿ ದಳಗಳೂ ತಮ್ಮ ನೆಲೆಗಳಲ್ಲೇ ಇರತಕ್ಕದ್ದು. ಅಧಿಕಾರಿಗಳ ಅನುಮತಿ ಇಲ್ಲದೆ ಯಾರೇ ಕಾರ್ಯೋನ್ಮುಖರಾದರೂ ಅವರನ್ನು ಬಂಡುಕೋರರೆಂದು ಮಿಲಿಟರಿ ವಿಚಾರಣೆಗೊಳಪಡಿಸಲಾಗುತ್ತದೆ. ಯಾರೂ ಹೊರಗಿನ ಶಕ್ತಿಗಳ ಆದೇಶಗಳನ್ನು ಅನುಸರಿಸಕೂಡದು."*

ಮುಂಜಾನೆಯ ಪತ್ರಿಕೆಗಳ ಪ್ರಕಾರ, ಸರ್ಕಾರ ಒಂದೆರಡು ಪ್ರತಿಗಾಮಿ ಪತ್ರಿಕೆಗಳನ್ನೂ ಮುಚ್ಚುತ್ತಿದ್ದೇವೆ ಎಂಬಂತೆ ತೋರಿಸಿಕೊಳ್ಳುತ್ತಾ, ಎಲ್ಲಾ ಮುಖ್ಯ ಬೋಲ್ಶೆವಿಕ್ ವೃತ್ತಪತ್ರಿಕೆಗಳನ್ನು ನಿಷೇಧಿಸಿತು. ಜೊತೆಗೆ ಪೆತ್ರೋಗ್ರಾಡ್ ಸೋವಿಯತ್‌ನ ನಾಯಕರನ್ನು ಹಾಗೂ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಸದಸ್ಯರನ್ನೂ ಬಂಧಿಸಲು ಆದೇಶ ಹೊರಡಿಸಿತು... ಇದರೊಂದಿಗೆ ಸರ್ಕಾರದ ಆಕ್ರಮಣ ಹಾಗೂ ಸಂಘರ್ಷ ಆರಂಭವಾದಂತಾಯಿತು.

ಆ ಹೊತ್ತಿನಲ್ಲಿ ನಾನು ಅರಮನೆ ಚೌಕವನ್ನು ಹಾದು ಹೋಗುತ್ತಿದ್ದೆ. ಸರ್ಕಾರದ ಪರವಾಗಿದ್ದ ಯಂಕರ್‌ಗಳ ಅನೇಕ ಫಿರಂಗಿದಳಗಳು ಅಲ್ಲಿನ ಕೆಂಪು ಕಮಾನನ್ನು ಹಾದು ಬಂದವು. ಸೈನ್ಯಾಧಿಕಾರಿಗಳ ಕಛೇರಿಯಿದ್ದ ಬೃಹತ್ ಕೆಂಪು ಸೌಧದಲ್ಲಿ ವಿಪರೀತ ಚಟುವಟಿಕೆಯಿತ್ತು. ಬಹಳಷ್ಟು ವಾಹನಗಳು. ಅದರಲ್ಲೆಲ್ಲಾ ಅಧಿಕಾರಿಗಳು ಬಂದುಹೋಗುವುದು ನಡೆಯುತ್ತಿತ್ತು. ಸೆನ್ಸಾರ್ ಅಧಿಕಾರಿ ಎಳೆಯ ಹುಡುಗನಂತೆ ಉದ್ರಿಕ್ತನಾಗಿದ್ದ. ಕೆರೆನ್‌ಸ್ಕಿ ರಾಜಿನಾಮೆ ಕೊಡಲು ಗಣರಾಜ್ಯ ಮಂಡಳಿಗೆ ಹೋಗಿದ್ದಾನೆ ಎಂದ. ನಾನು ಬೇಗ ಬೇಗ ಮಾರಿನ್‌ಸ್ಕಿ ಅರಮನೆಗೆ ಹೋಗಿ ನೋಡಿದರೆ ಕೆರೆನ್‌ಸ್ಕಿಯ ಭಾಷಣ ಮುಕ್ತಾಯಕ್ಕೆ ಬರುತ್ತಿತ್ತು. ಆತನ ಮಾತು ಅಸಂಬದ್ಧವಾಗಿತ್ತು. ತುಂಬ ಭಾವೋದ್ವಿಗ್ನವಾಗಿತ್ತು. ಅದರ ಭರ್ತಿ ಇದ್ದದ್ದು ಆತ್ಮ ಸಮರ್ಥನೆ ಮತ್ತು ಎದುರಾಳಿಗಳ ಭರ್ತ್ಸನೆ.

"ಉಲ್ಯಾನೊವ್ – ಲೆನಿನ್ ಎಂಬ ಪ್ರಭುತ್ವ ವಿರೋಧಿ ಅಪರಾಧಿ 'ರಬೋಚಿ ಪುತ್'ನಲ್ಲಿ ಸರಣಿಯಾಗಿ ಬರೆದಿರುವ ಲೇಖನಗಳಲ್ಲಿನ ಒಂದು ವೈಶಿಷ್ಟ್ಯಪೂರ್ಣ ಲೇಖನವನ್ನು ನಾನಿಲ್ಲಿ ಉದ್ಧರಿಸುತ್ತೇನೆ. ಆತ ಬಚ್ಚಿಟ್ಟುಕೊಂಡಿದ್ದಾನೆ. ಇನ್ನೂ ನಮ್ಮ ಕೈಗೆ ಸಿಕ್ಕಿಲ್ಲ. ಆತ ಕಾರ್ಮಿಕರಿಗೂ ಪೆತ್ರೋಗ್ರಾಡ್‌ನ ಸೈನಿಕ ಪಾಳೆಯಕ್ಕೂ ಜುಲೈ 16–18ರಂದು ದಂಗೆ ಎದ್ದಂತೆಯೇ ಸಶಸ್ತ್ರವಾಗಿ ದಂಗೆ ಏಳಲು ಕರೆ ನೀಡಿದ್ದಾನೆ. ಈತ ಮಾತ್ರ ಅಲ್ಲ, ಇನ್ನೂ ಅನೇಕ ಬೋಲ್ಶೆವಿಕ್ ನಾಯಕರು ಇದೇ ಮಾದರಿಯ ಬಂಡಾಯಕ್ಕೆ ಕರೆ ನೀಡಿದ್ದಾರೆ.

ಈಗಿನ ಪೆತ್ರೋಗ್ರಾಡ್ ಸೋವಿಯತ್‌ನ ಅಧ್ಯಕ್ಷ ಟ್ರಾಟ್‌ಸ್ಕಿಯ ಹೆಸರನ್ನೂ ಇಲ್ಲಿ ಹೇಳಬೇಕಾಗುತ್ತದೆ.

"ಬೋಲ್ಶೆವಿಕ್ ವೃತ್ತಪತ್ರಿಕೆಗಳು ಅಥವಾ ಪ್ರತಿಗಾಮಿ ಪತ್ರಿಕೆಗಳು ಎಲ್ಲವೂ ಸಹ ಜನತೆಯ ನಡುವೆ ಇರತಕ್ಕಂಥ ಪಾತಕಿ ಮನೋಭಾವವುಳ್ಳವರನ್ನು ಪ್ರಚೋದಿಸುತ್ತಿವೆ. ರಾಜಕೀಯ ಅಜ್ಞಾನವನ್ನು ದುರುಪಯೋಗಪಡಿಸಿಕೊಳ್ಳಲು ಯತ್ನಿಸುತ್ತಿವೆ. ಇದರಿಂದ ಇಡೀ ರಷ್ಯಾದಲ್ಲಿ ಗಲಭೆ, ಲೂಟಿ ಆರಂಭವಾಗಿ, ದೇಶದಾದ್ಯಂತ ನರಮೇಧಗಳು ನಡೆದು ಸ್ವತಂತ್ರ ರಷ್ಯಾದ ಹೆಸರಿಗೆ ಶಾಶ್ವತವಾದ ಅಪಮಾನವನ್ನೇ ಉಂಟುಮಾಡುತ್ತವೆ.

"ಲೆನಿನ್ ತಾನೇ ಕೊಚ್ಚಿಕೊಳ್ಳುವ ಹಾಗೆ ರಷ್ಯಾದ ಇಂದಿನ ಪರಿಸ್ಥಿತಿ ಅತ್ಯಂತ ತೀವ್ರಗಾಮಿ ಎಡಪಂಥೀಯರಿಗೆ ಅನುಕೂಲಕರವಾಗಿದೆ. ಅವನೆನ್ನುವುದು ಹೀಗೆ :

"ಗಮನಿಸಿ, ಜರ್ಮನ್ ಸಂಗಾತಿಗಳು ಅವಲಂಬಿಸಬೇಕಾದದ್ದು ಒಬ್ಬ ಕ್ರಾಂತಿಕಾರಿ ಕಾರ್ಲ್ ಲೀಬ್‌ನೆಕ್ಟ್ ಮೇಲೆ. ಆದರೆ ಆತನ ನೆರವಿಗೆ ವೃತ್ತಪತ್ರಿಕೆಗಳಿಲ್ಲ, ಸಭೆ ನಡೆಸುವ ಸ್ವಾತಂತ್ರ್ಯವಿಲ್ಲ. ನೆರವಿಗೆ ಸೋವಿಯತ್ ಜನಸಮಿತಿಗಳಿಲ್ಲ. ಸಮಾಜದ ಎಲ್ಲಾ ವರ್ಗಗಳ ಕಡುದ್ವೇಷವನ್ನು ಅವರು ಎದುರಿಸಬೇಕಾಗಿದೆ. ಇಷ್ಟಾಗಿಯೂ ಜರ್ಮನ್ ಸಂಗಾತಿಗಳು ಕಾರ್ಯಾಚರಣೆಗೆ ಇಳಿಯಲು ಯತ್ನಿಸುತ್ತಿದ್ದಾರೆ. ಆದರೆ ನಾವು? ನಮ್ಮ ಕೈಯಲ್ಲಿ ಡಜ಼ನ್‌ಗಟ್ಟಲೆ ವೃತ್ತಪತ್ರಿಕೆಗಳಿವೆ. ಸಭೆಗಳನ್ನು ಸಂಘಟಿಸುವ ಸ್ವಾತಂತ್ರ್ಯವಿದೆ, ಸೋವಿಯತ್‌ಗಳಲ್ಲಿ ಬಹುಪಾಲು ನಮ್ಮ ಕಡೆಗಿವೆ. ಇಡೀ ಜಗತ್ತಿನಲ್ಲಿ ಅತ್ಯಂತ ಅನುಕೂಲಕರ ಪರಿಸ್ಥಿತಿಯಲ್ಲಿರುವ ಕಾರ್ಮಿಕವರ್ಗವೆಂದರೆ ನಾವೇ. ನಾವು ಜರ್ಮನ್ ಕ್ರಾಂತಿಕಾರಿಗಳನ್ನು, ಸಶಸ್ತ್ರ ಹೋರಾಟಗಾರರನ್ನು ಬೆಂಬಲಿಸುವುದಿಲ್ಲ ಎನ್ನುವುದು ಸಾಧ್ಯವೇ?"

ಕೆರೆನ್‌ಸ್ಕಿ ಮುಂದುವರೆಸುತ್ತಾ ಹೋದ : "ರಷ್ಯಾದಲ್ಲಿ ರಾಜಕೀಯ ಪಕ್ಷವೊಂದು ಅತ್ಯಂತ ಮುಕ್ತವಾಗಿ ಕೆಲಸಮಾಡಲು ಈಗ ಅವಕಾಶವಿದೆ ಎಂಬುದನ್ನು ಬಂಡುಕೋರರೇ ಒಪ್ಪಿಕೊಳ್ಳುತ್ತಾರೆ. ಇಲ್ಲಿ ಆಡಳಿತ ನಡೆಸುತ್ತಿರುವ ಹಂಗಾಮಿ ಸರ್ಕಾರದ ನೇತಾರ ಯಾರು? ಅವರ ಪ್ರಕಾರ ನಾನು, ಅಧಿಕಾರ ಕಬಳಿಸಿರುವ, ಬೂರ್ಶ್ವಾಗಳಿಗೆ ತನ್ನನ್ನೇ ಮಾರಿಕೊಂಡ ಪ್ರಧಾನಿ ಕೆರೆನ್‌ಸ್ಕಿ.

"ಹೀಗೆ ಹೇಳುವ ಈ ಬಂಡಾಯಗಾರರೇನೂ ಜರ್ಮನ್ ಕಾರ್ಮಿಕವರ್ಗದ ನೆರವಿಗೆ ಹೋಗಿಲ್ಲ. ಆದರೆ ಜರ್ಮನಿಯ ಆಳುವ ವರ್ಗದ ನೆರವಿಗೆ ನಿಂತಿದ್ದಾರೆ. ಆದ್ದರಿಂದಲೇ ಅವರು ರಷ್ಯಾದ ಗಡಿಯೊಳಕ್ಕೆ ಜರ್ಮನಿಯ ಚಕ್ರವರ್ತಿ ವಿಲ್‌ಹೆಲ್ಮ್ ಮತ್ತು ಆತನ ಮಿತ್ರರನ್ನು ಸ್ವಾಗತಿಸುತ್ತಿದ್ದಾರೆ. ಈ ಜನಗಳ ಉದ್ದೇಶವೇನು, ಅವರು ಇದನ್ನೆಲ್ಲಾ ಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದಾರೋ ಇಲ್ಲವೋ ಅದು ನಮ್ಮ ಹಂಗಾಮಿ ಸರ್ಕಾರಕ್ಕೆ ಮುಖ್ಯವಲ್ಲ. ನಾನಂತೂ ನನ್ನ ಜವಾಬ್ದಾರಿಯುತ ಸ್ಥಾನದಿಂದ ಹೇಳುವುದೇನೆಂದರೆ ಇದು ರಷ್ಯಾಗೆ ಬಗೆಯುತ್ತಿರುವ ದ್ರೋಹ.

"ಬಲಪಂಥೀಯರ ಧೋರಣೆಯೊಂದಿಗೆ ದನಿ ಸೇರಿಸಿ ನಾನು ಹೇಳುವುದೇನೆಂದರೆ, ನಾವು ಕೂಡಲೇ ವಿಚಾರಣೆ ನಡೆಸಿ, ಬಂಧನಗಳನ್ನು ಶುರುಮಾಡುತ್ತೇವೆ." (ಇದಕ್ಕೆ ಎಡಪಂಥೀಯರಿಂದ ಜೋರಾಗಿ ಪ್ರತಿಭಟನೆ ಬಂತು). ಅವನು ಗಟ್ಟಿಯಾದ ಧ್ವನಿಯಲ್ಲಿ ಅರಚುತ್ತಾ ಹೋದ : "ರಾಷ್ಟ್ರವೇ ಅಪಾಯದಲ್ಲಿರುವಾಗ, ಗೊತ್ತಿದ್ದೋ ಗೊತ್ತಿಲ್ಲದೆಯೋ ರಾಜದ್ರೋಹಕ್ಕೆ ಬಲಿಯಾಗಿರುವಾಗ, ಹಂಗಾಮಿ ಸರ್ಕಾರ, ನಾನು, ಇನ್ನೂ ಅನೇಕರು

ಜೀವ ತೆತ್ತಾದರೂ, ರಷ್ಯಾದ ಜೀವನ, ಸ್ವಾತಂತ್ರ್ಯ, ಗೌರವಗಳನ್ನು ರಕ್ಷಿಸುವುದೇ ವಾಸಿ ಎಂದು ಭಾವಿಸಿದ್ದೇವೆ."

ಅಷ್ಟು ಹೊತ್ತಿಗೆ ಸರಿಯಾಗಿ ಯಾರೋ ಕೆರೆನ್‌ಸ್ಕಿಯ ಕೈಗೆ ಕಾಗದವೊಂದನ್ನು ಕೊಟ್ಟರು.

"ಆ ಜನ, ಅಂದರೆ, ಬೋಲ್ಶೆವಿಕರು, ಸೈನಿಕದಳಗಳಿಗೆ ವಿತರಿಸುತ್ತಿರೋ ಘೋಷಣೆ ಈಗಷ್ಟೆ ನನ್ನ ಕೈ ಸೇರಿದೆ. ನಾನು ಅದನ್ನು ಓದುತ್ತೀನಿ.

*"ಕಾರ್ಮಿಕರ ಹಾಗೂ ಸೈನಿಕರ ಪೆತ್ರೋಗ್ರಾಡ್ ಸೋವಿಯತ್‌ಗೆ ಈಗ ಗಂಡಾಂತರ ಬಂದೊದಗಿದೆ. ಎಲ್ಲ ಸೈನ್ಯದಳಗಳೂ ಈಗ ಸಮರ ಸನ್ನದ್ಧವಾಗಿ ಆಜ್ಞೆಗಳನ್ನು ನಿರೀಕ್ಷಿಸಬೇಕು. ಈ ಆಜ್ಞೆಯನ್ನು ಅನುಸರಿಸುವುದರಲ್ಲಿ ನಿರಾಕರಣೆಯಾಗಲೀ, ವಿಳಂಬವಾಗಲೀ ಮಾಡಿದಲ್ಲಿ ಅದನ್ನು ಕ್ರಾಂತಿಗೆ ಬಗೆದ ದ್ರೋಹ ಎಂದು ಪರಿಗಣಿಸಬೇಕಾಗುತ್ತದೆ. ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಪರವಾಗಿ, ಅಧ್ಯಕ್ಷ ಪದ್ವೋಯ್‌ಸ್ಕಿ ಮತ್ತು ಕಾರ್ಯದರ್ಶಿ ಆಂಟೊನೊವ್."*

"ವಾಸ್ತವದಲ್ಲಿ ಇದು ಸಂವಿಧಾನಾತ್ಮಕ ಶಾಸನಸಭೆಗೆ ಭಂಗತರಲು, ಈಗಿರುವ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹಾಗೂ ಯುದ್ಧಭೂಮಿಯಲ್ಲಿ ವ್ಯೂಹವನ್ನು ಮುರಿದು ಜರ್ಮನ್ ಸಾಮ್ರಾಟ ವಿಲ್‌ಹೆಲ್ಮ್‌ನನ್ನು ಒಳಗೆ ಬಿಟ್ಟುಕೊಳ್ಳಲು ಜನರ ಮಂದೆಯನ್ನು ಉದ್ರೇಕಿಸುವ ಪ್ರಯತ್ನ.

"ನಾನು ಬೇಕೆಂದೇ 'ಜನಗಳ ಮಂದೆ' ಎಂಬ ಪದವನ್ನು ಪ್ರಯೋಗಿಸುತ್ತಿದ್ದೇನೆ. ಏಕೆಂದರೆ ಪ್ರಜ್ಞಾವಂತ ಜನತಂತ್ರ, ಅದನ್ನು ಪ್ರತಿನಿಧಿಸುವ ತ್ಸೆ-ಇ-ಕಾ, ಸೈನ್ಯದ ಸಂಘಟನೆಗಳು ಇದನ್ನು ವಿರೋಧಿಸುತ್ತವೆ. ಮಹಾನ್ ರಷ್ಯನ್ ಪ್ರಜಾತಂತ್ರದ ಆತ್ಮಸಾಕ್ಷಿ, ಗೌರವ, ಸದ್‌ವಿವೇಕ ಹೀಗೆ ಸ್ವತಂತ್ರ ರಷ್ಯಾ ವೈಭವೀಕರಿಸುವ ಎಲ್ಲವೂ ಅದನ್ನು ಪ್ರತಿಭಟಿಸುತ್ತವೆ.

"ನಾನಿಲ್ಲಿ ಬಂದಿರುವುದು ಪ್ರಾರ್ಥಿಸುವುದಕ್ಕಲ್ಲ. ನಮ್ಮ ನವ ಸ್ವಾತಂತ್ರ್ಯವನ್ನು ರಕ್ಷಿಸುವ ಹಂಗಾಮಿ ಸರ್ಕಾರವನ್ನು ನೀವೆಲ್ಲರೂ ಬೆಂಬಲಿಸಿಯೇ ತೀರುತ್ತೀರಿ ಎಂಬ ದೃಢ ವಿಶ್ವಾಸದಿಂದ ಬಂದಿದ್ದೇನೆ.

"ಹಂಗಾಮಿ ಸರ್ಕಾರವು ನಾಗರಿಕರ ಹಕ್ಕುಗಳನ್ನು ಮೊಟಕುಗೊಳಿಸಿಲ್ಲ. ಆದರೆ ಈಗ ಸರ್ಕಾರವು, ರಷ್ಯನ್ ಜನತೆಯ ಸ್ವತಂತ್ರ ಸಂಕಲ್ಪವನ್ನು ವಿರೋಧಿಸುತ್ತಾ, ಶತ್ರುಗಳಿಗೆ ಹೆಬ್ಬಾಗಿಲನ್ನು ತೆರೆಯಲು ಹೊರಟಿರುವವರನ್ನು ಮುಗಿಸಿಹಾಕಲು ಬದ್ಧವಾಗಿದೆ."

ಕೆರೆನ್‌ಸ್ಕಿಯ ಭಾಷಣದುದ್ದಕ್ಕೂ ಸಭೆಯಲ್ಲಿ ಗಲಾಟೆ ನಡೆಯುತ್ತಲೇ ಇತ್ತು. ಭಾಷಣ ಮುಗಿಸಿ ಬೆವರು ಸುರಿಸುತ್ತಾ, ಬಿಳಿಚಿಕೊಂಡ ಮುಖ ಹೊತ್ತ ಆತ ತನ್ನ ಅಧಿಕಾರಿಗಳೊಂದಿಗೆ ಹೊರಗೆ ಹೋದ. ನಂತರ ಎಲ್ಲಾ ಎಡಪಂಥೀಯರೂ, ಮಧ್ಯಮಮಾರ್ಗಿಗಳೂ ಬಲಪಂಥೀಯರನ್ನು ಟೀಕಿಸಲಾರಂಭಿಸಿದರು. ಕಡೆಗೆ ಸರ್ಕಾರದ ಮಿತ್ರರಾಗಿದ್ದ ಸೋಷಲಿಸ್ಟ್ ರೆವಲ್ಯೂಶನರಿಗಳೂ ಹಿಂದೆ ಬೀಳಲಿಲ್ಲ.

"ಬೋಲ್ಶೆವಿಕರ ನೀತಿಗಳಲ್ಲಿ ಮಂದೆಯನ್ನು ಉದ್ರೇಕಿಸುವ ಗುಣವಿದೆ, ಪಾತಕಿ ಪ್ರವೃತ್ತಿಯಿದೆ. ಆದರೆ ಜನಪರ ಬೇಡಿಕೆಗಳಿಗೆ ಸರ್ಕಾರದಿಂದ ಸೂಕ್ತ ಪ್ರತಿಕ್ರಿಯೆಯೂ ಸಿಕ್ಕಿಲ್ಲವಲ್ಲ. ಶಾಂತಿಯ ಸ್ಥಾಪನೆ, ಭೂಮಿಯನ್ನು ಹಂಚುವುದು, ಸೈನ್ಯದಲ್ಲಿ ಜನತಂತ್ರವಾದಿ ಕ್ರಮಗಳನ್ನು ಆರಂಭಿಸುವುದು ಇವುಗಳನ್ನು ಎಷ್ಟು ಚೆನ್ನಾಗಿ ಮುಂದಿಡಬೇಕೆಂದರೆ, ಜನರ ಮನಸ್ಸಿನಲ್ಲಿ ಯಾವ ಸಂಶಯವೂ ಉಳಿಯಬಾರದು."

ಅದೇ ರೀತಿಯಲ್ಲಿ ಮಾತು ಮುಂದುವರೆದಿತ್ತು : "ನಾವು ಮೆನ್ಶೆವಿಕರು, ಸರ್ಕಾರದಲ್ಲಿ ಬಿಕ್ಕಟ್ಟನ್ನು ಸೃಷ್ಟಿಸಲು ಇಷ್ಟಪಡುವುದಿಲ್ಲ. ನಾವು ನಮ್ಮ ರಕ್ತದ ಕೊನೆಯ ತೊಟ್ಟು ಇರುವವರೆಗೂ ಹಂಗಾಮಿ ಸರ್ಕಾರವನ್ನು ರಕ್ಷಿಸುತ್ತೀವಿ. ಆದರೆ ಜನ ತಾಳ್ಮೆಗೆಡ್ತಾ ಇದ್ದಾರೆ. ಎಲ್ಲಾ ಪ್ರಶ್ನೆಗಳ ಬಗ್ಗೆ ಸರ್ಕಾರ ಸರಿಯಾಗಿ ಉತ್ತರಿಸಬೇಕು."

ಆಮೇಲೆ ಮಾರ್ಟೊವ್ ಸಿಟ್ಟಿನಿಂದಲೇ ಮಾತನಾಡಿದ : "ಕಾರ್ಮಿಕರು, ಸೈನ್ಯ ಆಂದೋಲನದಲ್ಲಿ ಇರೋವಾಗ ಕೆರೆನ್‌ಸ್ಕಿಯವರು ಮಂದೆ ಅನ್ನೋ ಪದ ಉಪಯೋಗಿಸಬಾರದಿತ್ತು. ಹೀಗೆ ಮಾತಾಡಿದ್ರೆ ಅಂತರ್ಯುದ್ಧ ಆರಂಭವಾಗುತ್ತೆ ಅಷ್ಟೇ."

ನಂತರ ಅಲ್ಲಿದ್ದ ಎಡಪಂಥೀಯರು ಮಂಡಿಸಿದ ನಿರ್ಣಯವೊಂದನ್ನು ಅಂಗೀಕರಿಸಲಾಯಿತು. ಅದರ ಮುಖ್ಯಾಂಶಗಳು ಹೀಗಿದ್ದವು :

1. ಸಶಸ್ತ್ರ ದಂಗೆಯೊಂದಕ್ಕೆ ಕೆಲವು ದಿನಗಳಿಂದ ತಯಾರಿ ನಡೆಯುತ್ತಿದೆ. ಅದು ಅಂತರ್ಯುದ್ಧವನ್ನು, ಕ್ಷಿಪ್ರ ಕ್ರಾಂತಿಯನ್ನು ಪ್ರಚೋದಿಸುತ್ತದೆ. ಅದು ಸೈನ್ಯದ ಸೋಲು, ಆರ್ಥಿಕತೆಯ ಅಲ್ಲೋಲಕಲ್ಲೋಲ ಹಾಗೂ ರಷ್ಯಾದ ಸರ್ವನಾಶಕ್ಕೆ ಕಾರಣವಾಗುತ್ತದೆ.
2. ಯುದ್ಧ, ಅವ್ಯವಸ್ಥೆಯ ಜೊತೆಗೆ ಸರ್ಕಾರವು ಅವಶ್ಯವಾಗಿ ತೆಗೆದುಕೊಳ್ಳಬೇಕಾಗಿದ್ದ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳದಿರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಕೂಡಲೇ ರೈತರಿಗೆ ಭೂಮಿಯನ್ನು ಹಂಚುವ ಆಜ್ಞೆಯನ್ನು ಘೋಷಿಸ ಬೇಕು. ಶಾಂತಿ ಸ್ಥಾಪನೆಗೆ ಕ್ರಿಯಾಶೀಲವಾದ ಕಾರ್ಯಕ್ರಮವನ್ನು ರೂಪಿಸಬೇಕು.
3. ರಾಜಪ್ರಭುತ್ವದ ಪರವಾಗಿರುವವರನ್ನಾಗಲೀ, ದಂಗೆಕೋರರನ್ನಾಗಲೀ ಸದೆಬಡಿಯಲು ರಾಜಧಾನಿಯಲ್ಲಿ ಸಾರ್ವಜನಿಕ ರಕ್ಷಣಾ ಸಮಿತಿಯೊಂದನ್ನು ರಚಿಸಬೇಕು. ಇದರಲ್ಲಿ ನಗರಸಭೆ, ಕ್ರಾಂತಿಕಾರಿ ಜನತಂತ್ರದ ಪ್ರತಿನಿಧಿಗಳು ಇದ್ದು, ಅವರು ಹಂಗಾಮಿ ಸರ್ಕಾರದ ಸಂಪರ್ಕದಲ್ಲಿರಬೇಕು.

ಈ ಸೂತ್ರವನ್ನು ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಶನರಿಗಳು ಬೆಂಬಲಿಸಿದರು. ಆದರೆ ಕೆರೆನ್‌ಸ್ಕಿಗೆ ಇದರಲ್ಲಿ ಸರ್ಕಾರದ ಬಗ್ಗೆ ಅವಿಶ್ವಾಸ ಪ್ರಕಟವಾಗಿದೆ ಎನ್ನಿಸಿ, 'ಹಾಗಿದ್ದರೆ ನೀವೇ ಸರ್ಕಾರ ರಚಿಸಿ' ಎಂದ. ರಾಜಿಪರವಾಗಿದ್ದ ನಾಯಕರು ತಾವು ಸರ್ಕಾರವನ್ನು ಟೀಕಿಸುತ್ತಿಲ್ಲ ಎಂದು ಸಮಜಾಯಿಷಿ ನೀಡಿದರು ! ಇಂಥ ಪ್ರಹಸನ ಮುಂದುವರೆದಿತ್ತು.

ರಾಜಧಾನಿಯ ಮುಖ್ಯಬೀದಿ ನೆವ್‌ಸ್ಕಿ ಪ್ರಾಸ್‌ಪೆಕ್ಟ್. ಅದು ಮತ್ತು ಮೊರ್‌ಸ್ಕಾಯಾ ರಸ್ತೆ ಕೂಡುವ ಕಡೆಯಲ್ಲಿ ಸೈನಿಕರು ನಿಂತು ಖಾಸಗಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದರು. ಅವರು ಸರ್ಕಾರದ ಕಡೆಯವರೋ ಅಥವಾ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಡೆಯವರೋ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಎಲ್ಲಾ ಕಡೆ ವಿಪರೀತ ಜನ. ಕಝಾನ್ ಕೆಥೆಡ್ರಲ್ ಚರ್ಚಿನ ಬಳಿಯಲ್ಲೂ ಹೀಗೆಯೇ ನಡೆಯುತ್ತಿತ್ತು. ನೆವ್‌ಸ್ಕಿ ಬೀದಿಯ ಕಡೆಗೆ ಮೆಶಿನ್‌ಗನ್‌ಗಳನ್ನು ತಿರುಗಿಸಿದ್ದರು. ಅಷ್ಟರಲ್ಲಿ ಉದ್ರಿಕ್ತರಾಗಿ ನಗುತ್ತಾ ಬಂದೂಕು ಹಿಡಿದು ಐದಾರು ಜನ ನಾವಿಕರು ಅಲ್ಲಿಗೆ ಬಂದರು. ನಾವಿಕರು ಧರಿಸಿದ್ದ ಹ್ಯಾಟುಗಳ ಮೇಲೆ 'ಅರೋರಾ' ಮುಂತಾದ ಬೋಲ್ಶೆವಿಕರ ಪರವಾದ ಹಡಗುಗಳ ಹೆಸರಿದ್ದವು. ಅದರಲ್ಲಿ ಒಬ್ಬಾತ 'ಕ್ರಾನ್‌ಸ್ಟಾಟ್' ಬರುತ್ತಿದೆ ಎಂದ. 1792ರಲ್ಲಿ ಕ್ರಾಂತಿಕಾರಿ ಫ್ರಾನ್ಸ್ ದೇಶದಲ್ಲಿ 'ಮಾರ್ಸೈ' ಹಾಡುತ್ತಾ ಸ್ವಯಂಸೇವಕರು ಬರುತ್ತಿದ್ದಾರೆ ಎಂದರೆ ಎಂಥ ಪರಿಣಾಮ ಉಂಟಾಗುತ್ತಿತ್ತೋ ಅಂಥದೇ ಪರಿಣಾಮ ಉಂಟಾಯಿತು. ಅಂದು ಮಾರ್ಸೈ ನಗರದಿಂದ

ರಾಜಧಾನಿ ಪ್ಯಾರಿಸ್‌ಗೆ ಕ್ರಾಂತಿಕಾರಿಗಳು ಹಾಡುತ್ತಾ ಮೆರವಣಿಗೆ ಬಂದಿದ್ದರು. ಇಂದು 'ಕ್ರಾನ್‌ಸ್ಟಾಟ್' ಬರುತ್ತಿದೆ ಎಂದರೆ, ಆ ನಗರದಿಂದ ಇಪ್ಪತ್ತೈದು ಸಾವಿರ ಬೋಲ್ಶೆವಿಕ್ ನಾವಿಕರು ಬರುತ್ತಿದ್ದಾರೆ ಎಂದೇ ಅರ್ಥ. ಅವರು ಸಾವಿಗೆ ಹೆದರದ ಜನ....

ಆಗತಾನೆ 'ರಬೋಚಿ ಇ ಸೊಲ್ದಾತ್' ಪತ್ರಿಕೆಯ ಪ್ರತಿಗಳು ಮಾರಾಟಕ್ಕೆ ರಸ್ತೆಗೆ ಬಂದಿದ್ದವು. ಅದರ ಮುಖಪುಟದಲ್ಲಿದ್ದ ಪ್ರಕಟಣೆ ಇದು:

ಸೈನಿಕರೇ ! ಕಾರ್ಮಿಕರೇ ! ನಾಗರಿಕರೇ !

*ಜನತೆಯ ಶತ್ರುಗಳು ನೆನ್ನೆಯಿಂದ ಆಕ್ರಮಣವನ್ನು ಆರಂಭಿಸಿದ್ದಾರೆ. ಕ್ರಾಂತಿವಿರೋಧಿ ಕೊರ್ನಿಲೊವ್ ಅನುಯಾಯಿಗಳು ರಾಜಧಾನಿಯ ಸುತ್ತಮುತ್ತಲಿಂದ ಯಂಕರ್‌ಗಳನ್ನು, ಇತರರನ್ನು ಒಟ್ಟುಗೂಡಿಸಿಕೊಂಡಿದ್ದಾರೆ. ಪೆತ್ರೋಗ್ರಾಡ್ ಸೋವಿಯತ್ ವಿರುದ್ಧ ಪಿತೂರಿ ಆರಂಭವಾಗಿದೆ. ಕ್ರಾಂತಿವಿರೋಧಿಗಳ ಕಾರ್ಯಾಚರಣೆಯ ಗುರಿ ಇನ್ನೇನು ಆರಂಭವಾಗಲಿರುವ ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನ. ಸಂವಿಧಾನಾತ್ಮಕ ಶಾಸನ ಸಭೆ ಮತ್ತು ಜನತೆ, ಪೆತ್ರೋಗ್ರಾಡ್ ಸೋವಿಯತ್ ಕ್ರಾಂತಿಯನ್ನು ರಕ್ಷಿಸುತ್ತಿವೆ. ಮಿಲಿಟರಿ ಕ್ರಾಂತಿಕಾರಿ ಸಮಿತಿಯು ದಾಳಿಯನ್ನು ಹಿಮ್ಮೆಟ್ಟಿಸಲಿದೆ. ರಾಜಧಾನಿಯ ಕಾರ್ಮಿಕರು, ಸೈನಿಕರು ಶತ್ರುಗಳಿಗೆ ಪ್ರಚಂಡ ಸೋಲನ್ನು ಖಚಿತಪಡಿಸುತ್ತಾರೆ. ಮಿಲಿಟರಿ ಕ್ರಾಂತಿಕಾರಿ ಸಮಿತಿ ಕೆಳಕಂಡಂತೆ ಆಜ್ಞೆ ಮಾಡುತ್ತದೆ:*

1. *ಎಲ್ಲಾ ಸೈನ್ಯದಳಗಳ ಸಮಿತಿಗಳು, ಸೋವಿಯತ್ ಸಚಿವರು, ಕ್ರಾಂತಿಕಾರಿ ಸಂಘಟನೆಗಳು ಪಿತೂರಿಗಾರರ ಯೋಜನೆಯನ್ನು ಹಿಮ್ಮೆಟ್ಟಿಸಲು ಸತತ ಸಮಾಲೋಚನೆಯಲ್ಲಿರತಕ್ಕದ್ದು.*
2. *ಸಮಿತಿಯ ಅನುಮತಿ ಇಲ್ಲದೆ ಯಾವ ಸೈನಿಕರೂ ಕಾರ್ಯಕ್ಷೇತ್ರದಿಂದ ಹೊರಗೆ ತೆರಳುವಂತಿಲ್ಲ.*
3. *ಎಲ್ಲಾ ಸೋವಿಯತ್‌ಗಳೂ, ಮಿಲಿಟರಿ ಘಟಕಗಳೂ ಈ ಕೂಡಲೇ ಸ್ಮೋಲ್ನಿ ಭವನಕ್ಕೆ ಇಬ್ಬರು ಪ್ರತಿನಿಧಿಗಳನ್ನು ಕಳಿಸತಕ್ಕದ್ದು.*
4. *ಪೆತ್ರೋಗ್ರಾಡ್ ಸೋವಿಯತ್ ಹಾಗೂ ಅಖಿಲ ರಷ್ಯಾ ಮಹಾಧಿವೇಶನದ ಪ್ರತಿನಿಧಿಗಳೂ ಕೂಡಲೇ ಸ್ಮೋಲ್ನಿಗೆ ಬರಬೇಕು.*

*ಪ್ರತಿಕ್ರಾಂತಿಯು ತನ್ನ ಬೀಭತ್ಸ ರೂಪವನ್ನು ಬಹಿರಂಗಪಡಿಸಿದೆ. ಆದರೆ ಕ್ರಾಂತಿಯ ಶಕ್ತಿಗಳು ಬಲಿಷ್ಠವಾಗಿದ್ದು ಪ್ರತಿಕ್ರಾಂತಿಯನ್ನು ಹೊಸಕಿಹಾಕಲಾಗುತ್ತದೆ.*

*ಕ್ರಾಂತಿ ಚಿರಾಯುವಾಗಲಿ !*

ಮಿಲಿಟರಿ ಕ್ರಾಂತಿಕಾರಿ ಸಮಿತಿ

ಕ್ರಾಂತಿ ಎಂಬ ಚಂಡಮಾರುತದ ಕೇಂದ್ರವಾದ ಸ್ಮೋಲ್ನಿಯಲ್ಲಿ ಪೆತ್ರೋಗ್ರಾಡ್ ಸೋವಿಯತ್ ನಿರಂತರವಾಗಿ ಸಭೆ ನಡೆಸುತ್ತಿತ್ತು. ಎಷ್ಟೋ ಪ್ರತಿನಿಧಿಗಳು ನಿತ್ರಾಣರಾಗಿ ನೆಲದ ಮೇಲೆ ಉರುಳಿಕೊಳ್ಳುತ್ತಿದ್ದರು. ಮತ್ತೆ ಮೇಲೆದ್ದು ಕಲಾಪದಲ್ಲಿ ಭಾಗವಹಿಸುತ್ತಿದ್ದರು. ಬೋಲ್ಶೆವಿಕ್ ನಾಯಕರು ದಿನವೊಂದಕ್ಕೆ ಎಂಟು – ಹತ್ತು ಘಂಟೆ ಭಾಷಣ ಮಾಡಬೇಕಾಗುತ್ತಿತ್ತು.

ನಾನು ಕೆಳಗೆ ಹೋಗಿ ಮೊದಲನೇ ಅಂತಸ್ತಿನಲ್ಲಿ ನಡೆಯುತ್ತಿದ್ದ ಬೋಲ್ಶೆವಿಕ್ ಪ್ರತಿನಿಧಿಗಳ ಪ್ರತ್ಯೇಕ ಸಭೆಯನ್ನು ಗಮನಿಸಿದೆ. ಅಲ್ಲೊಬ್ಬ ಭಾಷಣಕಾರ ಅಬ್ಬರಿಸುತ್ತಿದ್ದ: "ರಾಜಿಪರವಾಗಿರುವವರು ನಾವು ಜನತೆಯಿಂದ ಪ್ರತ್ಯೇಕಗೊಂಡಿದ್ದೇವೆ ಎಂದು ಪ್ರಚಾರ ಮಾಡುತ್ತಾರೆ. ಅದಕ್ಕೆ ಕಿವಿಕೊಡಬೇಕಾದ ಅಗತ್ಯವಿಲ್ಲ. ಒಮ್ಮೆ ಕ್ರಾಂತಿ ಆರಂಭವಾದರೆ, ಅವರು ಸುಮ್ಮನೆ ನಮ್ಮನ್ನು ಹಿಂಬಾಲಿಸಬೇಕಾಗುತ್ತದೆ. ಇಲ್ಲ ಜನಬೆಂಬಲವನ್ನು ಅವರು ಕಳೆದುಕೊಳ್ಳುತ್ತಾರೆ." ಆತ ಕಾಗದವೊಂದನ್ನು ತೆಗೆದು ಓದಲಾರಂಭಿಸಿದ "ಇಗೋ ನೋಡಿ, ಆಗಲೇ ನಾವು ಅವರನ್ನೂ ನಮ್ಮತ್ತ ಸೆಳೆಯುತ್ತಿದ್ದೇವೆ. ಮೆನ್ಶೆವಿಕರು ಹಾಗೂ ಸೋಷಲಿಸ್ಟ್ ರೆವಲ್ಯೂಶನರಿಗಳು ಸಂದೇಶ ಕಳಿಸಿದ್ದಾರೆ! ಅವರು ನಮ್ಮ ಕಾರ್ಯಾಚರಣೆಯನ್ನು ಖಂಡಿಸುತ್ತಾರಂತೆ, ಆದರೆ ಸರ್ಕಾರ ನಮ್ಮ ಮೇಲೆ ದಾಳಿ ಮಾಡಿದರೆ ಅವರು ಕಾರ್ಮಿಕ ವರ್ಗದ ಹಿತಾಸಕ್ತಿಯನ್ನು ವಿರೋಧಿಸುವುದಿಲ್ಲವಂತೆ..." ಕೂಡಲೇ ಜೋರಾಗಿ ಹರ್ಷೋದ್ಗಾರ ಆರಂಭವಾಯಿತು.

* * *

ರಾತ್ರಿಯಾಗುತ್ತಿದ್ದಂತೆ ಆ ಬೃಹತ್ ಸಭಾಂಗಣದ ತುಂಬ ಸೈನಿಕರು, ಕಾರ್ಮಿಕರು ತುಂಬಿಕೊಂಡರು. ಅದೊಂದು ಭೂತಾಕಾರದ ಕಂದು ಬಣ್ಣದ ಜನಜಂಗುಳಿ. ನೀಲಿ ಬಣ್ಣದ ತಂಬಾಕಿನ ಹೊಗೆಯ ರಾಶಿಯಲ್ಲಿ ಜುಂಯ್ಯೆನ್ನುವ ಸದ್ದು ಕೇಳಿ ಬರುತ್ತಿತ್ತು. ಕಡೆಗೂ ಹೊಸ ಅಧಿವೇಶನಕ್ಕೆ ಪ್ರತಿನಿಧಿಗಳನ್ನು ಸ್ವಾಗತಿಸಲು ತ್ಸೆ-ಇ-ಕಾ ಸಮ್ಮತಿಸಿತ್ತು. ಈ ಅಧಿವೇಶನದ ಮೂಲಕವೇ ತ್ಸೆ-ಇ-ಕಾ ಮತ್ತು ಅದು ಕಟ್ಟಿಕೊಂಡಿದ್ದ ವ್ಯವಸ್ಥೆ ಮಣ್ಣುಗೂಡಲೂಬಹುದಾಗಿತ್ತು.

ಮಧ್ಯರಾತ್ರಿಯನಂತರ ಬಲಪಂಥೀಯ ಎಸ್. ಆರ್. ಗಳಿಗೆ ಗೋಟ್ಸ್ ಎಂಬಾತ ಅಧ್ಯಕ್ಷತೆ ವಹಿಸಿದ. ಸಭೆ ಶುರುವಾಯಿತು. ಆತಂಕ ಹುಟ್ಟಿಸುವಂಥ ಮೌನದಲ್ಲಿ ಮೆನ್ಶೆವಿಕರ ನಾಯಕ ಡ್ಯಾನ್ ಎಂಬಾತ ಮಾತನಾಡಲು ನಿಂತುಕೊಂಡ.

"ನಾವು ಬದುಕಿರುವ ಈ ಘಳಿಗೆಗಳು ಅತ್ಯಂತ ದುರಂತಮಯವಾಗಿವೆ. ಹೊರದೇಶದ ಶತ್ರುಗಳು ರಾಜಧಾನಿಯ ದ್ವಾರದಲ್ಲಿದ್ದಾರೆ. ಬೋಲ್ಶೆವಿಕರು ಏನಾದರೂ ಗಲಭೆ ಆರಂಭಿಸಿದರೆ ಅಲ್ಲಿಗೆ ಕ್ರಾಂತಿ ನಾಶವಾದಂತೆ ("ಇದು ಸುಳ್ಳು" ಎಂಬ ಕೂಗಾಟ ಆರಂಭವಾಯಿತು). ಬೋಲ್ಶೆವಿಕರು ಏನಾದರೂ ಶುರುಹಚ್ಚಿಕೊಂಡರೆ ಸಾಕೆಂದು ಪ್ರತಿಕ್ರಾಂತಿಕಾರಿಗಳು ಕಾಯುತ್ತಿದ್ದಾರೆ. ಅವರು ನರಮೇಧವನ್ನೇ ಆರಂಭ ಮಾಡುತ್ತಾರೆ. ಸಶಸ್ತ್ರ ಪ್ರದರ್ಶನ, ಮೆರವಣಿಗೆ ಆರಂಭವಾದರೆ, ಸಂವಿಧಾನಾತ್ಮಕ ಶಾಸನಸಭೆ ಎನ್ನುವುದೇ ಉಳಿಯುವುದಿಲ್ಲ. (ಮತ್ತೆ ಕೂಗಾಟ 'ಸುಳ್ಳು', 'ನಾಚಿಕೆಗೇಡು' ಇತ್ಯಾದಿ)"

ಯುದ್ಧಭೂಮಿ ಹತ್ತಿರದಲ್ಲಿದೆ. ಪೆತ್ರೋಗ್ರಾಡಿನ ಸೈನ್ಯ, ಅಧಿಕಾರಿಗಳ ಆಜ್ಞೆಯನ್ನು ಪಾಲಿಸಬೇಕಾಗುತ್ತದೆ. ಸೋವಿಯತ್‌ಗೆ ಎಲ್ಲಾ ಅಧಿಕಾರ ಅಂದರೆ ಸಾವನ್ನು ಆಹ್ವಾನಿಸಿದ ಹಾಗೆ. "ಬೂರ್ಶ್ವಾಗಳ ಮನೆಗೆ ನುಗ್ಗಿ, ಲೂಟಿ ಹೊಡೀರಿ ಅಂತ ಘೋಷಣೆ ಹಾಡ್ತೀರಲ್ಲ, ದರೋಡೆಕೋರರು, ಪಾತಕಿಗಳು ಅದಕ್ಕೋಸ್ಕರಾನೆ ಕಾಯ್ತಿದ್ದಾರೆ, ಹೀಗೆಲ್ಲಾ ಮಾತನಾಡೋರು ಅಪರಾಧ ಮಾಡ್ತಿದ್ದಾರೆ" ಎಂದೆಲ್ಲಾ ಅವನು ಕಿರುಚುತ್ತಿದ್ದ.

ಆದರೆ ಸಭಾಂಗಣದಲ್ಲಿ ಜನತೆ "ಅಂಥ ಘೋಷಣೆಯನ್ನು ಯಾರೂ ಎತ್ತಿಲ್ಲ. ಇದೆಲ್ಲಾ ಸುಳ್ಳು" ಎಂದು ಜೋರಾಗಿ ಅಬ್ಬರಿಸುತ್ತಿದ್ದರು. ಒಂದು ಧ್ವನಿ ಕೇಳಿ ಬಂತು-

"ಅಪರಾಧವನ್ನು ಮಾಡಿದ್ದು ನೀವು, ಝಾರ್‌ನಿಂದ ಕಸಿದುಕೊಂಡು ನಮ್ಮ ಬಳಿ ಇದ್ದ ರಾಜ್ಯಾಧಿಕಾರವನ್ನು ಬಂಡವಾಳಗಾರರಿಗೆ ಒಪ್ಪಿಸಿದ್ದು ನೀವು." ಅಧ್ಯಕ್ಷ "ಸುಮ್ಮನಿರಿ. ಇಲ್ಲದಿದ್ದರೆ ಹಾಗೆ ಕೂಗಿದವರನ್ನು ಹೊರಗೆ ಹಾಕುತ್ತೇನೆ" ಎಂದ. ಜನ "ಪ್ರಯತ್ನಿಸು ನೋಡೋಣ" ಎಂದರು. ಕೇಕೆಗಳು, ಶಿಳ್ಳೆಗಳು ಕಿವಿಗಡಚಿಕ್ಕುವಂತೆ ಕೇಳಿಬಂದವು.

ಡ್ಯಾನ್ ದಯನೀಯವಾಗಿ ಮುಂದುವರೆಸಿದ : "ಈಗ ಶಾಂತಿಯ ಬಗ್ಗೆ ಹೇಳುತ್ತೀನಿ ಕೇಳಿ. ರಷ್ಯಾ ಇನ್ನು ಯುದ್ಧ ಮುಂದುವರೆಯೋದನ್ನು ಬೆಂಬಲಿಸೋಲ್ಲಪ್ಪ. ಸಾಕಾಗಿದೆ. ಮತ್ತೆ ಯಾವುದೇ ರಕ್ತಪಾತ ಆಗದಿರಲಿ ಅಂತ ನಾವು ಭೂಮಿಯನ್ನ ರೈತರಿಗೆ ಹಂಚೋದಿಕ್ಕೆ ಇವತ್ತು ಆಜ್ಞೆ ಮಾಡಿದ್ದೀವಿ."

ಸಭಾಂಗಣದಲ್ಲಿ ನಗೆಯ ಬುಗ್ಗೆ, ಕೂಗಾಟ, "ತುಂಬ, ತುಂಬ ತಡವಾಯ್ತು" ನಂತರ ಅಲೆಗಳ ಮೇಲೆ ಅಲೆಗಳಂತೆ, ಘರ್ಜನೆಯಂತೆ ಕೇಳುತ್ತಿದ್ದ ಕರತಾಡನದ ನಡುವೆ ಬೋಲ್ಶೆವಿಕರ ಪರವಾಗಿ ಟ್ರಾಟ್‌ಸ್ಕಿ ವ್ಯಂಗ್ಯಮಿಶ್ರಿತ ಮಾತನ್ನು ಆರಂಭಿಸಿದ :

"ಡ್ಯಾನ್‌ನ ತಂತ್ರಗಾರಿಕೆ ಏನು ತೋರಿಸುತ್ತೆ ಅಂದರೆ ಕಡೆಗೂ ಜನ – ದಡ್ಡ, ಜಡವಾದ ವಿಶಾಲ ಜನತೆ, ಪಾಪ ಡ್ಯಾನ್‌ರ ಕಡೆಗೆ ಸೇರಿಕೊಂಡುಬಿಟ್ರು ! (ಸಭಾಂಗಣದಲ್ಲಿ ಜೋರಾಗಿ ನಗು) ರೈತರಿಗೆ ಜಮೀನು ಕೊಡಿ ಅಂದ್ವಿ, ನೀವು ಕೊಡಲಿಲ್ಲ. ಈಗ ಅವರು ಅದನ್ನು ಕಸಕೊಂಡು ಆರು ತಿಂಗಳಾಯ್ತು. ನೀವು ಕಡೆಗೂ ಅದನ್ನೇ ದಯಪಾಲಿಸ್ತಿದ್ದೀರ!

"ಸೈನ್ಯದಲ್ಲಿ ಮರಣದಂಡನೆ ರದ್ದು ಮಾಡಿ ಅಂದ್ರೆ, ಹೇಳಿದ ಮಾತು ಕೆರೆನ್‌ಸ್ಕಿ ಕೇಳಲಿಲ್ಲ. ಈಗ ಸೈನಿಕರು, ಅವಿಧೇಯ ಸೈನಿಕರು ಕೆರೆನ್‌ಸ್ಕಿ ಕೈಲಿ ಅದನ್ನೇ ಮಾಡಿಸಿದ್ದಾರೆ. ಇನ್ನುಮೇಲೆ ಸೈನ್ಯದಲ್ಲಿ ಶಿಸ್ತನ್ನು ಕಟ್ಟುನಿಟ್ಟಾಗಿ ಜಾರಿ ಮಾಡ್ತೀವಿ ಅನ್ನೋ ಮಾತೂ ಡ್ಯಾನ್ ಬಾಯಲ್ಲಿ ಬರೋದಿಲ್ಲ !

"ಕಳೆದ ಏಳು ತಿಂಗಳ ಇತಿಹಾಸ ಏನು ತೋರಿಸುತ್ತೆ ಅಂದ್ರೆ ಜನತೆ ಮೆನ್ಶೆವಿಕರನ್ನು ತೊರೆದಿದ್ದಾರೆ. ಕೈಗೆ ಸಿಕ್ಕ ಅಧಿಕಾರಾನ ಮೆನ್ಶೆವಿಕರು – ಸೋಷಲಿಸ್ಟ್ ರೆವಲ್ಯೂಶನರಿಗಳು ತಾವಾಗೇ ತಗೊಂಡ್ಹೋಗಿ ಬಂಡವಾಳಗಾರರ ಪಕ್ಷದ ಕ್ಯಾಡೆಟ್‌ಗಳಿಗೆ ಒಪ್ಪಿಸಿದ್ದಾರೆ. ಆದರೆ ಸಶಸ್ತ್ರ ಬಂಡಾಯ ಜನತೆಯ ಹಕ್ಕು..."

ಕ್ರೂರ ನಾಲಿಗೆಯ ಲೀಬರ್ ಎನ್ನುವವನು ಎದ್ದುನಿಂತುಕೊಂಡು "ಮಾರ್ಕ್ಸ್, ಎಂಗೆಲ್ಸ್ ಹೇಳಿದ್ದಾರೆ, ಪೂರ್ಣ ಸಿದ್ಧತೆ ಇಲ್ಲದೆ ಕಾರ್ಮಿಕವರ್ಗ ರಾಜ್ಯಾಧಿಕಾರವನ್ನು ಕೈಗೆತ್ತಿಕೊಳ್ಳಬಾರದು ಅಂತ..." ಎನ್ನುತ್ತಿದ್ದಂತೆ ಸಭೆಯಿಂದ ವಿಪರೀತ ವಿರೋಧ ಕಂಡುಬಂತು. "ನಾವು ಇಂಟರ್‌ನ್ಯಾಷನಲಿಸ್ಟ್ ಪಕ್ಷದವರು ಅಧಿಕಾರದ ಹಸ್ತಾಂತರಕ್ಕೆ ವಿರೋಧಿಗಳಲ್ಲ. ಆದರೆ ಬೋಲ್ಶೆವಿಕರ ವಿಧಾನ ಸರಿ ಇಲ್ಲ, ಸಮಯ ಕೂಡಿ ಬಂದಿಲ್ಲ" ಹೀಗೆ ಒಂದೇ ಸಮನೆ ಮಧ್ಯೆ ಮಧ್ಯೆ ಮಾತಾಡುತ್ತಲೇ ಇದ್ದ.

ಡ್ಯಾನ್ ಮತ್ತೆ ಎದ್ದು ನಿಂತು ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಕೆಲವು ಪತ್ರಿಕಾಲಯಗಳನ್ನು ಮುಚ್ಚಿಸಿರುವುದನ್ನು ಖಂಡಿಸಲೆತ್ನಿಸಿದ. ಆದರೆ ಸೈನ್ಯದ ಪ್ರತಿನಿಧಿಗಳು ಹಾಗೂ ಬಾಲ್ಟಿಕ್ ನೌಕಾದಳದಿಂದ ಬಂದಿದ್ದವರು ಇಡೀ ಸಭಾಂಗಣದಲ್ಲಿ ಎದ್ದು ನಿಂತುಬಿಟ್ಟರು. ಅವರದ್ದು ಒಂದೇ ಘೋಷಣೆ : "ಸೋವಿಯತ್‌ಗಳೇ ನಮ್ಮ ಸರ್ಕಾರ."

ನಂತರ ವೊಲೊದಾರ್‌ಸ್ಕಿ ಚಿಮ್ಮಿ ನಿಂತುಕೊಂಡ. ಇನ್ನೇನು ಸೋವಿಯತ್ ಮಹಾಧಿವೇಶನ ಆರಂಭವಾಗುತ್ತಿದೆ. ಹೀಗಿರುವಾಗ ಅದರ ಬದಲು ತಾನೇ ಅದರ

ಕಾರ್ಯಗಳನ್ನು ಮಾಡಲು ತ್ಸೆ – ಇ – ಕಾ ಪ್ರಯತ್ನಿಸುತ್ತಿರುವುದು ತಪ್ಪು ಎಂದು ಆತ ಜೋರಾಗಿ ವಾದಿಸಿದ. ವಾಸ್ತವದಲ್ಲಿ ತ್ಸೆ – ಇ – ಕಾ ಸತ್ತುಹೋಗಿದೆ. ಈಗ ನಿರ್ಣಯ ಮಂಡಿಸುವುದು ಕೇವಲ ತಂತ್ರಗಾರಿಕೆ ಎಂದು ಆರ್ಭಟಿಸಿದ. "ನಾವಂತೂ ಈ ಗೊತ್ತುವಳಿಯನ್ನು ಅನುಮೋದಿಸುವುದಿಲ್ಲ" ಎಂದು ಆತ ಘೋಷಿಸಿದ ಮೇಲೆ ಎಲ್ಲಾ ಬೋಲ್ಶೆವಿಕರು ಸಭಾಂಗಣದಿಂದ ಹೊರನಡೆದರು.

ಬೆಳಗಿನ ಜಾವ ಸುಮಾರು ನಾಲ್ಕು ಘಂಟೆಯ ಹೊತ್ತಿಗೆ ನಾನು ಹೊರಗಿನ ಮೊಗಸಾಲೆಯಲ್ಲಿ ಝೊರಿನ್ ಎಂಬ ಬೋಲ್ಶೆವಿಕನನ್ನು ಭೇಟಿ ಮಾಡಿದೆ. ಆತ ಹೆಗಲಿಗೆ ಬಂದೂಕೊಂದನ್ನು ತೂಗಿಹಾಕಿಕೊಂಡಿದ್ದ.

"ನಾವು ಮುನ್ನಡೆಯುತ್ತಿದ್ದೇವೆ. ನಾವು ಧಾರ್ಮಿಕ ಇಲಾಖೆಯ ಸಚಿವನನ್ನು, ನ್ಯಾಯಾಂಗ ಇಲಾಖೆಯ ಉಪಸಚಿವನನ್ನು ಹಿಡಿದು ಬುಟ್ಟಿಗೆ ಹಾಕಿಕೊಂಡು ನೆಲಮಾಳಿಗೆಯಲ್ಲಿ ಇಟ್ಟಿದ್ದೇವೆ." ಆರಾಮವಾಗಿ, ತೃಪ್ತಿಯಿಂದ ಅವನು ಮಾತನಾಡುತ್ತಿದ್ದ: "ದೂರವಾಣಿ ಕೇಂದ್ರವನ್ನು ಹಿಡಿಯೋಕೆ ಒಂದು ಸೈನ್ಯದ ತುಕಡಿಯನ್ನು ಕಳಿಸಿದ್ದೀವಿ. ಇನ್ನೊಂದು ಸರ್ಕಾರಿ ಬ್ಯಾಂಕ್‌ನ ಹಿಡಿಯೋಕೆ ಹೋಗಿದೆ..."

ಚಳಿ ತುಂಬಿದ ಅಂಧಕಾರದಲ್ಲಿ ನಾವು ಮೊದಲಬಾರಿಗೆ ಸ್ಮೋಲ್ನಿಯ ಮೆಟ್ಟಿಲಿನ ಮೇಲೆ ರೆಡ್‌ಗಾರ್ಡ್‌ಗಳನ್ನು ನೋಡಿದೆವು. ಕಾರ್ಮಿಕರ ಉಡುಪಿನಲ್ಲಿದ್ದ ಹದಿಹರೆಯದ ಹುಡುಗರು ಅವರು. ಬಯೊನೆಟ್ ಸಿಕ್ಕಿಸಿದ ಬಂದೂಕಗಳನ್ನು ಹಿಡಿದುಕೊಂಡು ಆತಂಕದಿಂದ ಒಟ್ಟಾಗಿ ಮಾತಾಡಿಕೊಳ್ಳುತ್ತಿದ್ದರು.

ಪಶ್ಚಿಮ ದಿಕ್ಕಿನಿಂದ, ನಿಶ್ಚಲ ಚಾವಣಿಗಳ ಮೇಲಿಂದ, ಅಲ್ಲಲ್ಲಿ ಗುಂಡಿನ ಸಪ್ಪಳ ಕೇಳಿ ಬರುತ್ತಿತ್ತು. ಅಲ್ಲಿ ಯಂಕರ್‌ಗಳು ನೇವಾ ನದಿಯ ಮೇಲಿನ ಸೇತುವೆಗಳನ್ನು ತೆರವುಗೊಳಿಸಲು ಯತ್ನಿಸುತ್ತಿದ್ದರು. ವೈಬೊರ್ಗ್ ಪ್ರದೇಶದ ಕಾರ್ಖಾನೆ ಕಾರ್ಮಿಕರು ಮತ್ತು ಸೈನಿಕರು ರಾಜಧಾನಿಯ ಮಧ್ಯದಲ್ಲಿರುವ ಕ್ರಾಂತಿಯ ದಳಗಳನ್ನು ಸೇರದಂತೆ ಮಾಡುವುದು ಅವರ ಉದ್ದೇಶ. ಆದರೆ ಕ್ರಾನ್‌ಸ್ಟಾಟ್‌ನ ನಾವಿಕರು ಆಗಲೇ ಅದನ್ನು ಮುಚ್ಚಿಸುವಲ್ಲಿ ಯಶಸ್ವಿಯಾಗಿದ್ದರು.

ನಮ್ಮ ಹಿಂದೆ ಉಜ್ವಲವಾದ ದೀಪಗಳಿಂದ ಬೆಳಗುತ್ತಿದ್ದ ವಿಶಾಲವಾದ ಸ್ಮೋಲ್ನಿ ಭವನ ಜೇನುಗೂಡಿನಂತೆ ವಿಪರೀತ ಚಟುವಟಿಕೆಯಿಂದಾಗಿ ಗುಂಯ್ಯೆನ್ನುತ್ತಿತ್ತು....

## ಅಧ್ಯಾಯ – 4

# ಹಂಗಾಮಿ ಸರ್ಕಾರದ ಪತನ

ನವೆಂಬರ್ 7, ಬುಧವಾರ. ನಾನು ತುಂಬ ತಡವಾಗಿ ಎದ್ದೆ. ನೆವ್‌ಸ್ಕಿ ರಸ್ತೆಯಲ್ಲಿ ನಡೆಯುತ್ತಾ ಹೋದಾಗ ಪೀಟರ್–ಪಾಲ್ ಕೋಟೆಯಿಂದ ಮಧ್ಯಾಹ್ನ ಕ್ಲುಪ್ತ ಸಮಯದಲ್ಲಿ ಸಿಡಿಸುವ ಫಿರಂಗಿಯ ಸದ್ದು ಕೇಳಿಸಿತು. ವಿಪರೀತ ಚಳಿಯ ದಿನ ಅದು. ಸ್ಟೇಟ್ ಬ್ಯಾಂಕ್‌ನ ಎದುರು ಬಂದೂಕು ಹಿಡಿದ ಸೈನಿಕರು ನಿಂತಿದ್ದರು.

"ನೀವೇನು ಸರ್ಕಾರದ ಕಡೆಯವರಾ?" ಎಂದು ಅವರನ್ನು ಕೇಳಿದೆ. ಅವನು ನಗುತ್ತಾ, "ಇನ್ನೆಲ್ಲಿಯ ಸರ್ಕಾರ. ದೇವರ ದಯೆ" ಎಂದ. ಅದರ ಆಚೆಗೆ ಮಾತನಾಡಲು ಅವನು ಇಷ್ಟಪಡಲಿಲ್ಲ.

ನೆವ್‌ಸ್ಕಿ ರಾಜಮಾರ್ಗದ ಉದ್ದಕ್ಕೂ ಟ್ರಾಮ್‌ಗಳು ಓಡಾಡುತ್ತಿದ್ದವು. ಜನ ಅವುಗಳ ಉದ್ದಕ್ಕೂ ನೇತಾಡುತ್ತಿದ್ದರು. ಅಂಗಡಿಗಳು ತೆರೆದಿದ್ದವು. ರಸ್ತೆಯಲ್ಲಿ ಗುಂಪು ಸೇರಿದ್ದವರಲ್ಲಿ ನೆನ್ನೆಯಷ್ಟು ಆತಂಕ ಕಾಣಲಿಲ್ಲ. ಗೋಡೆಗಳ ಮೇಲೆಲ್ಲಾ ಹಿಂದಿನ ರಾತ್ರಿ ಅಂಟಿಸಿದ ರಾಶಿ ರಾಶಿ ಭಿತ್ತಿಪತ್ರಗಳಿದ್ದವು. ಅವೆಲ್ಲಾ ರೈತರಿಗೆ, ಯುದ್ಧಭೂಮಿಯ ಸೈನಿಕರಿಗೆ, ಪೆತ್ರೋಗ್ರಾಡ್‌ನ ಕಾರ್ಮಿಕರಿಗೆ ಸಶಸ್ತ್ರ ಬಂಡಾಯವನ್ನು ಬೆಂಬಲಿಸಬೇಡಿ ಎಂಬ ಮನವಿಗಳು. ಅದರಲ್ಲಿ ಒಂದು ಹೀಗಿತ್ತು :

### ಪೆತ್ರೋಗ್ರಾಡ್ ಮುನಿಸಿಪಲ್ ಡ್ಯೂಮಾದ ಮನವಿ

ಮುನಿಸಿಪಲ್ ಡ್ಯೂಮಾ ನಾಗರಿಕರಿಗೆ ತಿಳಿಸಲು ಇಚ್ಛಿಸುವುದೇನೆಂದರೆ, ನವೆಂಬರ್ 6ರ ವಿಶೇಷ ಸಭೆಯಲ್ಲಿ ಸಾರ್ವಜನಿಕ ರಕ್ಷಣಾ ಸಮಿತಿಯನ್ನು ರಚಿಸಲಾಗಿದೆ. ಇದರಲ್ಲಿ ಡ್ಯೂಮಾಗಳ ಸದಸ್ಯರು, ತ್ಸೆ–ಇ–ಕಾ, ರೈತರ ಅಖಿಲ ರಷ್ಯಾ ಕಾರ್ಯಕಾರಿ ಸಮಿತಿ, ಸೈನ್ಯಾಧಿಕಾರಿಗಳ ಸಮಿತಿ ಮುಂತಾದ ಕ್ರಾಂತಿಕಾರಿ ಸಂಘಟನೆಗಳ ಪ್ರತಿನಿಧಿಗಳು ಇರುತ್ತಾರೆ. ಸಮಿತಿಯ ಸದಸ್ಯರು ಯಾವಾಗಲೂ ಡ್ಯೂಮಾ ಕಟ್ಟಡದಲ್ಲಿದ್ದು ದೂರವಾಣಿ ಸಂಪರ್ಕಕ್ಕೆ ಸಿಗುತ್ತಾರೆ.

ನವೆಂಬರ್ 7, 1917

ಇದು ನಿಜಕ್ಕೂ ಬೋಲ್ಶೆವಿಕರ ವಿರುದ್ಧದ ಯುದ್ಧ ಘೋಷಣೆಯಾಗಿತ್ತು. ಆದರೆ ಆ ಸಂದರ್ಭದಲ್ಲಿ ನನಗದು ಅರಿವಿಗೆ ಬರಲಿಲ್ಲ.

ನಾನು 'ರಬೋಚಿ ಪುತ್' ಪತ್ರಿಕೆಯ ಪ್ರತಿಯೊಂದನ್ನು ಕೊಂಡುಕೊಂಡೆ. ಅದನ್ನು ಬಿಟ್ಟರೆ ಬೇರೆ ಯಾವುದೂ ಸಿಗುವಂತಿರಲಿಲ್ಲ. ಆಮೇಲೆ ವಿಪರೀತ ಹಣ ಕೊಟ್ಟು

ಸೈನಿಕನೊಬ್ಬನಿಂದ, ಆತ ಓದಿ ಮುಗಿಸಿದ್ದ 'ದಿಯೆನ್' ಪತ್ರಿಕೆಯನ್ನು ಕೊಂಡುಕೊಂಡೆ. ಬೋಲ್ಶೆವಿಕರು ಕೈವಶ ಮಾಡಿಕೊಂಡಿದ್ದ ಮುದ್ರಣಾಲಯವೊಂದರಲ್ಲಿ ಪ್ರಕಟಗೊಂಡಿದ್ದ ಪತ್ರಿಕೆ ಅದು. ದೊಡ್ಡ ಕಾಗದದ ಹಾಳೆಗಳ ಮೇಲೆ ಬೃಹದಾಕಾರದ ಅಕ್ಷರಗಳಲ್ಲಿ,

**"ಕಾರ್ಮಿಕರ, ಸೈನಿಕರ, ರೈತರ ಸೋವಿಯತ್ ಜನಸಮಿತಿಗಳಿಗೆ ಸಂಪೂರ್ಣ ಅಧಿಕಾರ ! ಬೇಕೇ ಬೇಕು – ಶಾಂತಿ, ಅನ್ನ, ಭೂಮಿ"**

ಎಂದು ಮುದ್ರಿಸಲಾಗಿತ್ತು.

ಪತ್ರಿಕೆಯಲ್ಲಿ ಮುಖ್ಯ ಲೇಖನವನ್ನು ಬರೆದಿದ್ದಾತನ ಹೆಸರು ಝಿನೊವೀವ್. ಈತ ಲೆನಿನ್ ಅಡಗಿಕೊಂಡಿದ್ದಾಗ ಅವರ ಸಹವರ್ತಿಯಾಗಿದ್ದವ.

*"ಪ್ರತಿಯೊಬ್ಬ ಸೈನಿಕ, ಕಾರ್ಮಿಕ, ನಿಜವಾದ ಸಮಾಜವಾದಿ, ಪ್ರಾಮಾಣಿಕ ಜನತಂತ್ರವಾದಿಗೆ ಒಂದು ಸತ್ಯ ಸ್ಪಷ್ಟವಾಗಿ ಅರ್ಥವಾಗುತ್ತದೆ. ಅದೆಂದರೆ ಇಂದಿನ ಪರಿಸ್ಥಿತಿಯಲ್ಲಿ ಇರುವುದು ಎರಡೇ ಪರ್ಯಾಯಗಳು.*

*"ಒಂದು – ಅಧಿಕಾರವು ಬಂಡವಾಳಶಾಹಿ ಮತ್ತು ಜಮೀನ್ದಾರರ ದುಷ್ಟಕೂಟದ ಕೈಯಲ್ಲೇ ಉಳಿಯುತ್ತದೆ. ಇದರರ್ಥ ಕಾರ್ಮಿಕರು, ರೈತರು, ಸೈನಿಕರ ಮೇಲಿನ ದಬ್ಬಾಳಿಕೆ ನಡೆಯುತ್ತಾ ಹೋಗುತ್ತದೆ. ಯುದ್ಧ, ಹಸಿವು, ಸಾವು ಮುಂದುವರೆಯುತ್ತವೆ.*

*"ಇಲ್ಲವೆಂದರೆ – ಅಧಿಕಾರವು ಕ್ರಾಂತಿಕಾರಿ ಕಾರ್ಮಿಕರು, ಸೈನಿಕರು ಹಾಗೂ ರೈತರಿಗೆ ಹಸ್ತಾಂತರವಾಗುತ್ತದೆ. ಹಾಗಾದಲ್ಲಿ ಜಮೀನ್ದಾರರ ದೌರ್ಜನ್ಯ ಕೊನೆಯಾಗುತ್ತದೆ. ಬಂಡವಾಳಗಾರರಿಗೆ ಅಂಕುಶ ಹಾಕಲಾಗುತ್ತದೆ ಮತ್ತು ನ್ಯಾಯಯುತವಾದ ಶಾಂತಿಯ ಸ್ಥಾಪನೆಗಾಗಿ ತುರ್ತಾಗಿ ಪ್ರಸ್ತಾಪಿಸಲಾಗುತ್ತದೆ. ಹೀಗಾದಲ್ಲಿ ರೈತರಿಗೆ ಭೂಮಿ, ಕಾರ್ಮಿಕರಿಗೆ ಕೈಗಾರಿಕೆಯ ಮೇಲೆ ನಿಯಂತ್ರಣ, ಹಸಿದವರಿಗೆ ಅನ್ನ ಹಾಗೂ ಅವಿವೇಕದ ಯುದ್ಧಕ್ಕೊಂದು ಅಂತ್ಯ – ಇವೆಲ್ಲಾ ಖಚಿತವಾಗುತ್ತವೆ."*

ಆ ಒಂದು ಕ್ಷೋಭೆ ತುಂಬಿದ ಹಿಂದಿನ ರಾತ್ರಿಯ ಅನೇಕ ಘಟನಾವಳಿಗಳ ಬಗ್ಗೆಯೂ ಪತ್ರಿಕೆಯಲ್ಲಿ ಅಷ್ಟಿಷ್ಟು ಸುದ್ದಿ ಇತ್ತು. ಬೋಲ್ಶೆವಿಕರು ದೂರವಾಣಿ ಕೇಂದ್ರ, ಬಾಲ್ಟಿಕ್ ಸ್ಟೇಷನ್, ತಂತಿ ಕಛೇರಿಗಳನ್ನು ವಶಪಡಿಸಿಕೊಂಡಿದ್ದರು. ಪೀಟರ್‌ಹಾಫ್‌ನ ಕ್ರಾಂತಿವಿರೋಧಿಗಳಾದ ಯಂಕರ್ ಸೈನಿಕರಿಗೆ ರಾಜಧಾನಿಯನ್ನು ತಲುಪಲು ಸಾಧ್ಯ ವಾಗಿರಲಿಲ್ಲ. ಕೊಸ್ಸಾಕರು ತಾವು ಯಾರ ಕಡೆ ಸೇರಬೇಕೆಂಬುದರ ಬಗ್ಗೆ ಇನ್ನೂ ಅನಿಶ್ಚಿತ ಸ್ಥಿತಿಯಲ್ಲೇ ಇದ್ದರು. ಕೆಲವೊಂದು ಸಚಿವರನ್ನು ಬಂಧಿಸಲಾಗಿತ್ತು. ನಗರ ಮಿಲಿಶಿಯಾದ ಮುಖಂಡನ ಮೇಲೆ ಗುಂಡು ಹಾರಿಸಲಾಗಿತ್ತು. ಇವರ ಕಡೆಯವರನ್ನು ಅವರು, ಅವರ ಕಡೆಯವರನ್ನು ಇವರು ಬಂಧಿಸುತ್ತಿದ್ದರು. ಗಸ್ತು ಹಾಕುತ್ತಿದ್ದ ಸೈನಿಕರು – ರೆಡ್‌ಗಾರ್ಡ್‌ಗಳು ಮತ್ತು ಯಂಕರ್‌ಗಳ ನಡುವೆ ಕಲಹಗಳು, ಕಾಳಗಗಳು ನಡೆಯುತ್ತಿದ್ದವು.

ಮೊರ್‌ಸ್ಕಯಾ ರಸ್ತೆಯ ಮೂಲೆಯಲ್ಲಿ ನಾನು ನನಗೆ ಪರಿಚಿತನಾಗಿದ್ದ ಮೆನ್ಶೆವಿಕ್ ಮಿಲಿಟರಿ ಮುಖಂಡನೊಬ್ಬನನ್ನು ಭೇಟಿಯಾದೆ. ಸಶಸ್ತ್ರ ಬಂಡಾಯ ನಡೆದಿದೆಯೇ ಎಂದು ಕೇಳಿದೆ. ಅವನು 'ಯಾವನಿಗೆ ಗೊತ್ತು. ಬೋಲ್ಶೆವಿಕರು ಅಧಿಕಾರ ಹಿಡಿಯಬಹುದೇನೋ. ಆದರೆ ಅವರ ಕೈಲಿ ಅದನ್ನು ಮೂರು ದಿನ ಉಳಿಸಿಕೊಳ್ಳೋಕೂ

ಆಗಲ್ಲ. ಸರ್ಕಾರ ನಡೆಸೋಕೆ ಅವರ ಹತ್ರ ಜನ ಎಲ್ಲಿದ್ದಾರೆ? ಏನಾದ್ರೂ ಮಾಡ್ಕೊಳ್ಳಿ ಅಂತ ಬಿಟ್ಟುಬಿಟ್ರೆ, ಅವರೇ ನಾಶ ಆಗಿ ಹೋಗ್ತಾರೆ" ಎಂದು ಹತಾಶೆಯಲ್ಲಿ ನುಡಿದ.

ಮಿಲಿಟರಿ ಹೋಟೆಲಿನಲ್ಲಿದ್ದಂಥ ಅನೇಕ ಸೈನ್ಯಾಧಿಕಾರಿಗಳಿಗೆ ಸಾಮಾನ್ಯ ನಾವಿಕರು ಮುತ್ತಿಗೆ ಹಾಕಿದ್ದರು. ಅಲ್ಲಿ ಬಂಧಿತರಾಗಿದ್ದ ಸುಂದರ, ತರುಣ ಅಧಿಕಾರಿಗಳು ಅಸಹಾಯಕರಾಗಿ ಗೊಣಗಾಡಿಕೊಂಡಿದ್ದರು.

ಇದ್ದಕ್ಕಿದ್ದಂತೆ ಹೊರಗೆ ಗುಂಡು ಹಾರಿದ ಸದ್ದಾಯಿತು. ಇನ್ನಷ್ಟು ಗುಂಡಿನ ಪ್ರತ್ಯುತ್ತರದ ಶಬ್ದ. ನಾನು ಹೊರಗೆ ಓಡಿ ನೋಡತೊಡಗಿದೆ. ಮಾರಿನ್‌ಸ್ಕಿ ಅರಮನೆಯ ಬಳಿ ಅಸಾಧಾರಣವಾದದ್ದೇನೋ ನಡೆಯುತ್ತಿದೆ ಎನಿಸಿತು. ಅದು ರಷ್ಯನ್ ಗಣರಾಜ್ಯ ಮಂಡಳಿ ಸಭೆ ಸೇರುವ ಸ್ಥಳ. ಅತ್ತ ರಸ್ತೆಗಳು ಕೂಡುವ ಚೌಕದ ಒಂದು ಕಡೆ ಸೈನಿಕರು ಬಂದೂಕನ್ನು ಹಾರಿಸಲು ಸಿದ್ಧರಾಗಿ ಹೊಟೇಲಿನ ಚಾವಣಿಯ ಕಡೆಗೆ ದಿಟ್ಟಿಸಿ ನೋಡುತ್ತಿದ್ದರು. ಒಬ್ಬ ಸೈನಿಕ "ಬೇಕೆಂದೇ ಪ್ರಚೋದಿಸುತ್ತಿದ್ದಾರೆ" ಎನ್ನುತ್ತಾ ಬಾಗಿಲಿನ ಕಡೆಗೆ ಓಡಿದ.

ಅರಮನೆಯ ಪಶ್ಚಿಮ ಭಾಗದಲ್ಲಿ ಕೆಂಪು ಧ್ವಜವನ್ನು ಹಾರಿಸಿಕೊಂಡಿದ್ದ ಮಿಲಿಟರಿ ವಾಹನವೊಂದು ನಿಂತಿತ್ತು. ಅದರಲ್ಲಿನ ಬಂದೂಕುಗಳೆಲ್ಲಾ ಹೊಟೇಲಿನ ಕಡೆಗೆ ತಿರುಗಿದ್ದವು. ಇನ್ನೊಂದು ಕಡೆಯಲ್ಲಿ ಹೋರಾಟಗಾರರು ಕೈಗೆ ಸಿಕ್ಕಿದ ಪೆಟ್ಟಿಗೆ, ಪೀಪಾಯಿ, ಮಂಚ, ಗಾಡಿಗಳನ್ನು ಸೇರಿಸಿ ರಕ್ಷಣಾತ್ಮಕವಾಗಿ ತಡೆಗೋಡೆಯೊಂದನ್ನು ಅವಸರವಸರವಾಗಿ ನಿರ್ಮಿಸಿಕೊಳ್ಳುತ್ತಿದ್ದರು.

"ಹೊಡೆದಾಟ ಆಗುತ್ಯೇ?" ನಾನು ಕೇಳಿದೆ.

ಅಲ್ಲಿದ್ದ ಸೈನಿಕ ಆತಂಕದಲ್ಲಿ ಉತ್ತರಿಸಿದ : "ಸದ್ಯದಲ್ಲೇ. ಸದ್ಯದಲ್ಲೇ ಆಗುತ್ತೆ ಕಾಮ್ರೇಡ್, ಏಟು ಬೀಳುತ್ತೆ ಹೊರಟುಹೋಗು" ಎಂದ.

ಅರಮನೆಯ ದ್ವಾರದ ಎದುರು ಸೈನಿಕರು, ನಾವಿಕರು ಗುಂಪಾಗಿ ನಿಂತಿದ್ದರು. ಅದರಲ್ಲಿ ಒಬ್ಬ ರಷ್ಯನ್ ಗಣರಾಜ್ಯ ಮಂಡಳಿಯ ಕಥೆ ಮುಗಿದದ್ದು ಹೇಗೆ ಎಂದು ವಿವರಿಸುತ್ತಿದ್ದ. "ನಾವು ಅಲ್ಲಿಗೆ ಹೋಗಿ ಎಲ್ಲಾ ಬಾಗಿಲಲ್ಲೂ ಕಾಮ್ರೇಡ್‌ಗಳನ್ನು ನಿಲ್ಲಿಸಿದ್ವಿ. ಅಧ್ಯಕ್ಷ ಸ್ಥಾನದಲ್ಲಿ ಒಬ್ಬ ಕೊರ್ನಿಲೊವ್ ಭಂಟ ಕೂತಿದ್ದ. ನಾನು ಅಲ್ಲಿಗೆ ಹೋಗಿ 'ಇನ್ನು ಮಂಡಳಿ-ಗಿಂಡಳಿ ಏನೂ ಇರಲ್ಲ. ಎಲ್ಲಾ ಮನೆ ಕಡೆಗೆ ಹೋಗಿ' ಅಂದೆ."

ಜೋರಾಗಿ ನಗು. ನಾನು ನನ್ನ ಅಧಿಕೃತ ಪ್ರಮಾಣಪತ್ರಗಳನ್ನು ತೋರಿಸುತ್ತಾ ಪತ್ರಕರ್ತರಿಗೆ ಮೀಸಲಿದ್ದ ಗ್ಯಾಲರಿಗೆ ಹೋದೆ. ಆದರೆ ಬಾಗಿಲಿನಲ್ಲಿ ಒಬ್ಬ ದೊಡ್ಡ ಶರೀರದ ನಾವಿಕ ನಗುತ್ತಲೇ ನನ್ನನ್ನು ಅಡ್ಡಗಟ್ಟಿದ. ನಾನು ಅವನಿಗೆ ನನ್ನ ಪಾಸ್‌ಅನ್ನು ತೋರಿಸಿದೆ. ಅವನು 'ನೀನು ದೇವದೂತನಾದರೂ ಇವತ್ತು ಒಳಗೆ ಹೋಗೋದು ಸಾಧ್ಯವಿಲ್ಲ' ಎಂದುಬಿಟ್ಟ.

ಭವನದ ಮುಂಭಾಗದಲ್ಲಿ ಬಿಳಿಮೀಸೆಯ ವ್ಯಕ್ತಿಯೊಬ್ಬ ಕೋಪದಿಂದ ಮುಖವೆಲ್ಲಾ ಕೆಂಪಾಗಿ ಕೂಗಾಡುತ್ತಿದ್ದ. "ನಾನು ಜನರಲ್ ಅಲೆಕ್ಸಿಯೆವ್. ನಿಮ್ಮ ಮೇಲಿನ ಅಧಿಕಾರಿ, ಗೊತ್ತೇ? ಗಣರಾಜ್ಯ ಮಂಡಳಿ ಸದಸ್ಯ. ನನ್ನನ್ನು ನೀವು ಒಳಗೆ ಬಿಡಲೇಬೇಕು !" ಅಲ್ಲಿದ್ದ ರಕ್ಷಕ ಭಟ ತಲೆಕೆರೆದುಕೊಂಡು ತನ್ನ ಮೇಲಿನವನಿಗೆ ವರದಿ ಮಾಡಿದ. ಆತ ಜನರಲ್‌ನನ್ನು ನೋಡಿದೊಡನೆ ಹಳೆಯ ಅಭ್ಯಾಸದಿಂದಾಗಿ ಸಲ್ಯೂಟ್ ಏನೋ ಮಾಡಿದ.

ಆದರೆ ತೊದಲುತ್ತಲೇ, "ಮಹಾಸ್ವಾಮಿ, ಅರಮನೆಗೆ ಪ್ರವೇಶ ನಿಷಿದ್ಧ, ನನಗೆ ಅಧಿಕಾರ ಇಲ್ಲ..." ಎಂದುಬಿಟ್ಟ.

ಹೊರಗಡೆ ವಾಹನವೊಂದರಲ್ಲಿ ಹಂಗಾಮಿ ಸರ್ಕಾರದ ಸದಸ್ಯರನ್ನೆಲ್ಲಾ ಹಿಂದಿನ ಸೀಟಿನಲ್ಲಿ ಕೂಡಿಸಿಕೊಂಡಿದ್ದ ವಾಹನವೊಂದು ಬಂದಿತು. ಮುಂದಿನ ಸೀಟಿನಲ್ಲಿ ಆಯುಧಪಾಣಿಗಳಾದ ಸೈನಿಕರು ಕುಳಿತಿದ್ದರು. ಅಷ್ಟರಲ್ಲಿ ಚೌಕದ ಇನ್ನೊಂದು ಮೂಲೆಯಿಂದ ಮಿಲಿಟರಿ ಕ್ರಾಂತಿಕಾರಿ ಸಮಿತಿಯಲ್ಲಿ ಲಾಟ್ವಿಯಾ ಪ್ರದೇಶದಿಂದ ಸದಸ್ಯನಾಗಿದ್ದವನೂ, ನನಗೆ ಪರಿಚಿತನಾಗಿದ್ದವನೂ ಆದ ಪೀಟರ್ಸ್ ಎನ್ನುವನು ಅವರಸದಿಂದ ಬಂದ.

"ರಾತ್ರಿಯೇ ಇವರನ್ನೆಲ್ಲಾ ಬೋನಿನಲ್ಲಿ ಹಾಕಿಬಿಟ್ಟದ್ರಿ ಅಂತ ಅಂದ್ಕೊಂಡಿದ್ದೆ" ಎಂದೆ ನಾನು. ಅವನು ಎಳೆಯ ಹುಡುಗನಂತೆ ಕೊಂಚ ನಿರಾಶೆಯಿಂದ "ಏನು ಮಾಡೋದು ಅಂತ ನಿರ್ಧಾರ ಮಾಡೋ ಅಷ್ಟರಲ್ಲಿ ನಮ್ಮಲ್ಲಿನ ಕೆಲವು ಮೂರ್ಖರು ಎಷ್ಟೋ ಜನಾನ್ನ ಬಿಟ್ಟುಬಿಟ್ಟಿದ್ರು" ಎಂದ.

ಇನ್ನೊಂದು ಕಡೆ ವೊಸ್‌ಕ್ರೆಸೆನ್‌ಸ್ಕಿ ಪ್ರಾಸ್ಪೆಕ್ಟ್ ಎಂಬ ರಸ್ತೆಯ ಕಡೆಯಿಂದ ವಿಪರೀತ ಸಂಖ್ಯೆಯಲ್ಲಿ ನಾವಿಕರು ಬರುತ್ತಿದ್ದರು. ಅವರ ಹಿಂದೆ ಕಣ್ಣು ಕಾಣಿಸೋವರೆಗೂ ಸೈನಿಕರು ಸಾಲುಸಾಲಾಗಿ ಬರುತ್ತಿದ್ದರು.

ನಾವು ಈಗ ಚಳಿಗಾಲದ ಅರಮನೆಯ ಕಡೆ ಹೊರಟೆವು. ಅರಮನೆ ಬಳಿಯ ವೃತ್ತಕ್ಕೆ ಯಾರೂ ಹೋಗಲಾಗದಂತೆ ಸೆಂಟ್ರಿಗಳು ಕಾವಲು ಕಾಯುತ್ತಿದ್ದರು. ಪಶ್ಚಿಮದ ಕೊನೆಯವರೆಗೂ ಸೈನಿಕರು ಅಡ್ಡ ನಿಂತುಬಿಟ್ಟಿದ್ದರು. ಆತಂಕದಲ್ಲಿದ್ದ ಜನ ಅವರನ್ನು ಸುತ್ತುವರೆದಿದ್ದರು. ದೂರದಲ್ಲಿ ಸೈನಿಕರು ಅರಮನೆಯ ಒಳಗಿನಿಂದ ಮರಮುಟ್ಟು ತಂದು ದ್ವಾರದ ಎದುರು, ಅರಮನೆಯ ಆವರಣದಲ್ಲಿ ರಾಶಿ ಹಾಕುತ್ತಿದ್ದರು. ಆ ಒಂದು ಸದ್ದನ್ನು ಬಿಟ್ಟರೆ ಎಲ್ಲಾ ಕಡೆ ನೀರವ ಮೌನ.

ಸೆಂಟ್ರಿಗಳು ಸರ್ಕಾರದ ಪರವೋ, ಸೋವಿಯತ್‌ಪರವೋ ಎಂಬುದು ನಮಗೆ ತಿಳಿಯಲಿಲ್ಲ. ಸ್ಮೋಲ್ನಿ ಭವನದಲ್ಲಿ ನಮಗೆ ನೀಡಿದ್ದ ಪಾಸುಗಳನ್ನು ಅವರಿಗೆ ತೋರಿಸಿದರೆ ಏನೂ ಉಪಯೋಗವಾಗಲಿಲ್ಲ. ಸರಿ, ನಾವು ಇನ್ನೊಂದು ಕಡೆ ಹೋಗಿ ಶ್ರೀಮದ್ಗಾಂಭೀರ್ಯದಿಂದ ನಮ್ಮಗಳ ಅಮೆರಿಕನ್ ಅಧಿಕೃತ ಪತ್ರಗಳನ್ನು ತೋರಿಸಿ "ಅಧಿಕೃತ ಕೆಲಸದ ಮೇಲೆ" ಎಂದು ಘೋಷಿಸಿ ನುಸುಳಿಕೊಂಡುಬಿಟ್ಟೆವು. ಬಾಗಿಲಿನಲ್ಲಿ ಇನ್ನೂ ಹಳೆಯ ರಕ್ಷಕ ಭಟರೇ ಇದ್ದರು. ನೀಲಿ ಸಮವಸ್ತ್ರ, ಹಿತ್ತಾಳೆ ಗುಂಡಿ, ಕೆಂಪು ಮತ್ತು ಹೊನ್ನಿನ ಬಣ್ಣದ ಕಾಲರ್‌ಪಟ್ಟಿಗಳಿದ್ದ ಈ ಭಟರು ವಿನಯಪೂರ್ವಕವಾಗಿ ನಮ್ಮ ಕೋಟು, ಹ್ಯಾಟುಗಳನ್ನು ತೆಗೆದುಕೊಂಡು ಮಹಡಿ ಹತ್ತಿದರು. ನಾವು ಕೆರೆನ್‌ಸ್ಕಿಯ ಕೋಣೆಯ ಬಳಿ ಬಂದು ಅಲ್ಲಿದ್ದ ತರುಣ ಅಧಿಕಾರಿಯನ್ನು ಕೆರೆನ್‌ಸ್ಕಿಯವರನ್ನು ಸಂದರ್ಶಿಸಲು ಬಿಡಬೇಕು ಎಂದು ಕೇಳಿಕೊಂಡೆವು.

ಅವನು ಫ್ರೆಂಚ್ ಭಾಷೆಯಲ್ಲಿ "ಅವರು ಈಗ ಯಾರನ್ನೂ ನೋಡುವ ಸ್ಥಿತಿಯಲ್ಲಿಲ್ಲ" ಎಂದವನು, ಸ್ವಲ್ಪ ತಡೆದು, "ನಿಜಕ್ಕೂ ಹೇಳಬೇಕೆಂದರೆ ಅವರು ಇಲ್ಲಿಲ್ಲ" ಎಂದು ವಿವರಣೆ ನೀಡಿದ.

"ಎಲ್ಲಿಗೆ ಹೋಗಿದ್ದಾರೆ?"

"ಅವರು ರಣಾಂಗಣಕ್ಕೆ ಹೋಗಿದ್ದಾರೆ. ಅವರ ಕಾರಿಗೆ ಸಾಕಷ್ಟು ಪೆಟ್ರೋಲ್ ಕೂಡ ಇರಲಿಲ್ಲ, ಗೊತ್ತೆ ? ನಾವು ಬ್ರಿಟಿಷ್ ಆಸ್ಪತ್ರೆಯಿಂದ ಎರವಲು ತರಬೇಕಾಯ್ತು."

"ಸಚಿವರೆಲ್ಲಾ ಇಲ್ಲೇ ಇದಾರಾ?"

"ಇಲ್ಲೇ ಯಾವುದೋ ಕೋಣೆಯಲ್ಲಿ ಸಭೆ ಮಾಡುತ್ತಿರಬೇಕು. ನಂಗೆ ಗೊತ್ತಿಲ್ಲ."

"ಬೋಲ್ಶೆವಿಕರು ಬರ್ತಿದಾರಾ?"

"ಖಂಡಿತ ಬರ್ತಿದಾರೆ. ಹಾಗಂತ ಯಾವುದೇ ಕ್ಷಣದಲ್ಲಿ ದೂರವಾಣಿ ಬರಬಹುದು. ಆದ್ರೆ ನಾವು ತಯಾರಿದೀವಿ. ಅರಮನೆ ಮುಂದೆ ಯಂಕರ್ಸ್ ರಕ್ಷಣೆ ನಿಂತಿದ್ದಾರೆ. ಆ ಬಾಗಿಲಾಚೆ ಕಾಣಿಸ್ತಾರೆ."

"ನಾವು ಅಲ್ಲಿಗೆ ಹೋಗಬಹುದೇ?"

"ಖಂಡಿತ ಇಲ್ಲ. ಅನುಮತಿ ಇಲ್ಲ" ಎನ್ನುತ್ತಾ ಅವನು ಇದ್ದಕ್ಕಿದ್ದಂತೆ ನಮ್ಮ ಕೈಕುಲುಕಿ ಹೊರಟೇಹೋದ. ನಾವು ಅನುಮತಿ ಇಲ್ಲದಿದ್ದ ಬಾಗಿಲತ್ತ ಹೋದೆವು. ಅದು ಹಜಾರವನ್ನು ತಾತ್ಕಾಲಿಕವಾಗಿ ವಿಭಜಿಸಿ ಮಧ್ಯದಲ್ಲಿ ಇರಿಸಿದ್ದ ಬಾಗಿಲು, ಬಾಗಿಲಿನ ಅತ್ತಕಡೆ ಧ್ವನಿಗಳು ಕೇಳಿಬಂದವು. ಅದುಬಿಟ್ಟರೆ ನೀರವಮೌನ. ನಾವು ಅಲ್ಲಿದ್ದ ಪರಿಚಾರಕನೊಬ್ಬನ ಸೂಚನೆಯನ್ನು ಲೆಕ್ಕಿಸದೆ ಬಾಗಿಲನ್ನು ತೆರೆದುಬಿಟ್ಟೆವು.

ನಾವೊಂದು ದೊಡ್ಡ ಹಜಾರವನ್ನು ಪ್ರವೇಶಿಸಿದೆವು. ದೊಡ್ಡ ಮತ್ತು ಸಣ್ಣ ದೀಪದ ಗೊಂಚಲುಗಳು, ಸುಂದರವಾದ ಗೋಡೆಗಳು ಎಲ್ಲವೂ ಇದ್ದ ಸ್ಥಳ ಅದು. ಎರಡು ಬದಿಗಳಲ್ಲೂ ಕೊಳೆಯಾದ ಜಮಖಾನಗಳು, ಕಂಬಳಿಗಳು ರಾಶಿಯಾಗಿ ಬಿದ್ದಿದ್ದವು. ಅದರ ಮೇಲೆಲ್ಲಾ ಸೈನಿಕರು ಉರುಳಿಕೊಂಡಿದ್ದರು. ನೆಲದ ಮೇಲೆ ಸಿಗರೇಟ್ ತುಂಡುಗಳು, ಬ್ರೆಡ್ ತುಣುಕುಗಳು, ಕುಡಿದು ಬಿಸಾಕಿದ ದುಬಾರಿಯಾದ ವಿದೇಶಿ ಮದ್ಯದ ಬಾಟಲ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ತಂಬಾಕಿನ ಹೊಗೆಯೂ ಕೊಳಕಾದ ಮಾನವ ದೇಹಗಳಿಂದ ಹೊರಟ ದುರ್ವಾಸನೆಯೂ ತುಂಬಿದ್ದ ವಾತಾವರಣದಲ್ಲಿ ಯಂಕರ್ ಮಿಲಿಟರಿ ಶಾಲೆಗಳಿಂದ ಬಂದಿದ್ದ ಶ್ರೀಮಂತ ತರುಣರು ಓಡಾಡಿಕೊಂಡಿದ್ದರು. ಓಡಾಡುತ್ತಾ ನಾವು ಯುದ್ಧಭೂಮಿಯ ತೈಲಚಿತ್ರಗಳಿದ್ದ ದಿವಾನಖಾನೆಗಳನ್ನು ಹಾದುಹೋದೆವು.

ಇಡೀ ಸ್ಥಳವೇ ಅನೇಕ ದಿನಗಳಿಂದ ಒಂದು ಮಿಲಿಟರಿ ಪಾಳೆಯವಾಗಿದೆ ಎಂಬುದು ನೋಡಿದರೆ ತಿಳಿಯುತ್ತಿತ್ತು. ಕಿಟಕಿಗಳಲ್ಲಿ ಮೆಶಿನ್‌ಗನ್‌ಗಳಿದ್ದರೆ, ನೆಲದ ಮೇಲೆ ಬಂದೂಕುಗಳನ್ನು ಪೇರಿಸಲಾಗಿತ್ತು.

ನಾವು ತೈಲಚಿತ್ರಗಳತ್ತ ನೋಡುತ್ತಿದ್ದಾಗ ಪಕ್ಕದಲ್ಲಿ ಮದ್ಯದ ವಾಸನೆ ಬಂತು. ಒಬ್ಬ ಬೋಳುತಲೆಯ ಕುಳ್ಳ ನಮ್ಮನ್ನು ನೋಡಿ "ಕಲಾಕೃತಿಗಳನ್ನು ಮೆಚ್ಚುಕೊಳ್ಳುತ್ತಿರುವ ರೀತಿಯನ್ನು ನೋಡಿದರೆ ನೀವು ವಿದೇಶೀಯರಂತಿದ್ದೀರಿ" ಎಂದ. "ಓಹೋ, ಅಮೆರಿಕನ್ನರೇ, ಬಹಳ ಸಂತೋಷ. ನಾನು ಕ್ಯಾಪ್ಟನ್ ವ್ಲಾಡಿಮಿರ್ ಆರ್ಟ್ಸ್‌ಬಿಶೇವ್ – ನಿಮ್ಮ ಸೇವೆಯಲ್ಲಿದ್ದೇನೆ ಸ್ವಾಮಿ" ಎಂದು ಪರಿಚಯ ಮಾಡಿಕೊಂಡ. ನಾಲ್ಕು ಜನ ಅಪರಿಚಿತರು, ಅದರಲ್ಲಿ ಒಬ್ಬ ಮಹಿಳೆಯೂ ಇದ್ದಾರೆ. ಇವರೆಲ್ಲಾ ಇನ್ನೇನು ಆಕ್ರಮಣಕ್ಕೆ ಒಳಗಾಗಲಿರುವ ಸೈನಿಕರಿರುವ ಜಾಗವೊಂದರಲ್ಲಿ ಓಡಾಡುತ್ತಿದ್ದಾರೆ. ಇದೊಂದು ವಿಚಿತ್ರ ಅಸಾಧಾರಣ ಸನ್ನಿವೇಶ ಎಂಬುದೂ ಅವನಿಗೆ ಅರ್ಥವಾಗಲಿಲ್ಲ. ಅವನು ರಷ್ಯಾದ ಪರಿಸ್ಥಿತಿಯನ್ನು ದೂರಲಾರಂಭಿಸಿದ.

"ಬರೀ ಬೋಲ್ಶೆವಿಕರ ಮಟ್ಟಿಗೆ ಹೇಳುವುದಲ್ಲ. ನಮ್ಮ ರಷ್ಯನ್ ಸೇನೆಯ ಅತ್ಯುತ್ತಮ ಪರಂಪರೆಯೇ ಹಾಳಾಗಿಬಿಟ್ಟಿದೆ. ಇನ್ನು ಇವರೋ ಯಂಕರ್‌ಗಳು, ಇವರೆಲ್ಲಾ ಸೈನ್ಯಾಧಿಕಾರಿಗಳ ತರಬೇತಿ ಶಾಲೆಗಳ ವಿದ್ಯಾರ್ಥಿಗಳು. ಆದರೆ ಇವರೆಲ್ಲಾ ದೊಡ್ಡ ಮನುಷ್ಯರು ಅನ್ನಬಹುದೇ? ಈ ಕೆರೆನ್‌ಸ್ಕಿ, ಪರೀಕ್ಷೇಲಿ ಪಾಸ್ ಆದವರನ್ನೆಲ್ಲಾ ಈ ಶಾಲೆಗಳಿಗೆ ಸೇರಿಸಿಕೊಂಡುಬಿಟ್ಟ, ಸಹಜವಾಗೇ ಇದರಲ್ಲಿ ಅನೇಕರು ಕ್ರಾಂತಿಯ ಪ್ರಭಾವದಿಂದ ಹಾಳಾಗಿಹೋದವರಿದ್ದಾರೆ..."

ಮಾತು ಬದಲಾಯಿಸಿ ಅವನು ಹೇಳಿದ: "ನಾನಂತೂ ರಷ್ಯಾ ಬಿಟ್ಟು ಹೋಗಬೇಕೂಂತ ಇದೀನಿ. ಅಮೆರಿಕನ್ ಸೈನ್ಯ ಸೇರಬೇಕು. ನಿಮ್ಮ ರಾಯಭಾರ ಕಛೇರೀಲಿ ನನ್ನ ಬಗ್ಗೆ ಒಂದು ಮಾತು ಹೇಳ್ತೀರಾ?" ಎನ್ನುತ್ತಾ ನಾವು ಬೇಡವೆಂದರೂ ಕೇಳದೇ ಒಂದು ಕಾಗದದಲ್ಲಿ ತನ್ನ ವಿಳಾಸವನ್ನು ಗೀಚಿ ನಮ್ಮ ಕೈಯಲ್ಲಿ ತುರುಕಿದ.

ಆಮೇಲೆ ಮಾತು ಮುಂದುವರೆಸುತ್ತಾ ಹೋದ : "ಸೈನ್ಯದ ಮಹಿಳಾ ತುಕಡಿ ಸರ್ಕಾರಕ್ಕೆ ನಿಷ್ಠವಾಗಿಯೇ ಉಳಿದಿದೆ."

"ಮಹಿಳಾ ಸೈನಿಕರು ಅರಮನೆಯಲ್ಲಿಯೇ ಇದ್ದಾರೆಯೇ?" ನಾವು ಕೇಳಿದೆವು.

"ಏನೇ ಗಲಭೆ ತೊಂದರೆ ಬಂದರೂ ಅವರಿಗೆ ಪೆಟ್ಟು ಬೀಳಬಾರದು ಅಂತ ಹಿಂದಿನ ಕೋಣೆಗಳಲ್ಲಿ ಇರಿಸಿದ್ದೀವಿ. ಬಹಳ ದೊಡ್ಡ ಜವಾಬ್ದಾರಿ" ಎನ್ನುತ್ತಾ ಅವನು ನಿಟ್ಟುಸಿರುಬಿಟ್ಟ.

ಕಿಟಕಿಯ ಬಳಿ ನಿಂತು ಸ್ವಲ್ಪಹೊತ್ತು ಅರಮನೆಯ ಎದುರಿನ ಚೌಕದತ್ತ ನೋಡಿದೆವು. ಅಲ್ಲಿ ಸರ್ಕಾರಕ್ಕೆ ನಿಷ್ಠರಾದ 'ಯಂಕರ್' ಸೈನಿಕರು ಆಯುಧಗಳನ್ನು ಧರಿಸಿ ನಿಂತಿದ್ದರು. ಹಂಗಾಮಿ ಸರ್ಕಾರದ ಸೇನಾ ಮುಖ್ಯಸ್ಥರಲ್ಲಿ ಒಬ್ಬ ಅವರನ್ನು ಉದ್ದೇಶಿಸಿ ಉದ್ರೇಕಕಾರಿ ಭಾಷಣ ಬಿಗಿಯುತ್ತಿದ್ದ. ಸ್ವಲ್ಪಹೊತ್ತಿನ ನಂತರ ಅದರಲ್ಲಿ ಎರಡು ತುಕಡಿಗಳು ಕೈ ಬೀಸಿ ನಡೆಯುತ್ತಾ ಚೌಕ ದಾಟಿ, ಕೆಂಪು ಕಮಾನನ್ನು ಹಾದು ನೀರವವಾಗಿದ್ದ ನಗರದಲ್ಲಿ ಲೀನವಾದವು.

"ಅವರು ದೂರವಾಣಿ ಕೇಂದ್ರವನ್ನು ವಶಪಡಿಸಿಕೊಳ್ಳಲು ಹೊರಟಿದ್ದಾರೆ" ಎಂದು ಯಾರೋ ನುಡಿದರು. ನಮ್ಮ ಹತ್ತಿರದಲ್ಲಿಯೇ ಮೂವರು ತರಬೇತಿಯಲ್ಲಿದ್ದ ತರುಣ ಸೈನಿಕರು ನಿಂತಿದ್ದರು. ಅವರೂ ಸಹ ಅಧಿಕಾರಿಗಳಾಗಬೇಕೆಂಬ ಆಸೆಯಿಂದಲೇ ಯಂಕರ್ ಶಾಲೆಯನ್ನು ಸೇರಿದ್ದರಂತೆ. ಆದರೆ ಈಗ ಅಧಿಕಾರಿಗಳಿಗೆ ಒಳ್ಳೆಯ ಹೆಸರಿಲ್ಲವಾದ್ದರಿಂದ ಇನ್ನು ಅಧಿಕಾರಿಗಳಾಗುವ ಅಪೇಕ್ಷೆ ಉಳಿದಿಲ್ಲ ಎಂದರು. ಏನು ಮಾಡಬೇಕೋ ತಿಳಿಯದೆ ಅವರು ಗೊಂದಲದಲ್ಲಿದ್ದವರಂತೆ ಅನಿಸಿತು. ಅವರು ಖಂಡಿತವಾಗಿಯೂ ಸಂತೋಷದಿಂದಂತೂ ಇರಲಿಲ್ಲ.

ಆಮೇಲೆ ಅವರು ಜಂಭಕೊಚ್ಚಿಕೊಳ್ಳಲು ಆರಂಭಿಸಿದರು : "ಬೋಲ್ಶೆವಿಕರು ಬರಲಿ, ನಾವು ಅವರಿಗೆ ಯುದ್ಧ ಅಂದ್ರೆ ಏನು ಅಂತ ತೋರಿಸ್ತೀವಿ. ಅವರೆಲ್ಲಿ ಹೋಗ್ತಾರೆ ಹೇಡಿಗಳು? ಆದರೆ ಅವರ ಕೈ ಮೇಲಾದ್ರೆ, ನಾವಂತೂ ಗುಂಡು ಹೊಡಕೊಂಡು ಜೀವತ್ಯಾಗ ಮಾಡ್ತೀವಿ..."

ಅಷ್ಟರಲ್ಲಿ ಹತ್ತಿರದಲ್ಲೆಲ್ಲೋ ಗುಂಡು ಹಾರಿಸಿದ ಸದ್ದು, ಚೌಕದಲ್ಲಿದ್ದ ಜನ ದಿಕ್ಕಾಪಾಲಾಗಿ ಓಡಿದರು. ಕೆಲವರು ತಮ್ಮನ್ನೇ ರಕ್ಷಿಸಿಕೊಳ್ಳಲು ಮುಖಾಡೆಯಾಗಿ ನೆಲದ ಮೇಲೆ ಬಿದ್ದರು. ಚೌಕದ ಮೂಲೆಗಳಲ್ಲಿ ನಿಂತಿದ್ದ ಟಾಂಗಾ ಹೊಡೆಯುವವರು ಎಲ್ಲಾ ದಿಕ್ಕುಗಳಲ್ಲಿಯೂ

ನಾಗಾಲೋಟದಿಂದ ಓಡಿ ಮಾಯವಾದರು. ಇನ್ನು ನಾವಿದ್ದ ಕಟ್ಟಡದ ಒಳಗಂತೂ ಎಲ್ಲಾ ಕಡೆ ಕೋಲಾಹಲ ಶುರುವಾಯಿತು. ಸೈನಿಕರು ಬಂದೂಕುಗಳನ್ನು, ಗುಂಡಿನ ಪಟ್ಟಿಗಳನ್ನು, ಕೈಗೆತ್ತಿಕೊಂಡು "ಬಂದುಬಿಟ್ರು, ಬಂದುಬಿಟ್ರು" ಎಂದು ಕಿರುಚಾಡಲಾರಂಭಿಸಿದರು. ಆದರೆ ಏನೂ ಆಗಲಿಲ್ಲ. ಕೆಲವೇ ನಿಮಿಷಗಳಲ್ಲಿ ಎಲ್ಲಾ ಶಾಂತವಾಯಿತು. ನೆಲದ ಮೇಲೆ ಮುಖಾಡೆಯಾಗಿ ಬಿದ್ದಿದ್ದವರು ಎದ್ದುನಿಂತರು. ಟಾಂಗಾ ಚಾಲಕರು ಸ್ವಸ್ಥಾನಕ್ಕೆ ವಾಪಸಾದರು. ಕೆಂಪು ಕಮಾನಿನ ಮೂಲಕ ಯಂಕರ್ ತುಕಡಿಯವರು ಕೊಂಚ ತಪ್ಪಾಗಿ ಹೆಜ್ಜೆಹಾಕುತ್ತಾ ನಡೆದುಬಂದರು. ಅದರಲ್ಲಿ ಒಬ್ಬನಿಗೆ ಇಬ್ಬರು ಸಹಾಯ ನೀಡಿ ನಡೆಸುತ್ತಿದ್ದರು.

ನಾವು ಅರಮನೆ ಬಿಟ್ಟು ಹೊರಟಾಗ ಹೊತ್ತಾಗಿತ್ತು. ಚೌಕದಲ್ಲಿದ್ದ ಸೆಂಟ್ರಿಗಳು ಈಗ ಕಾಣೆಯಾಗಿದ್ದರು. ಚೌಕದ ಬಳಿ ಇದ್ದ ಸರ್ಕಾರಿ ಭವನಗಳಲ್ಲಿ ಒಂದು ನರಪಿಳ್ಳೆಯೂ ಕಾಣಲಿಲ್ಲ. ನಾವು ರಾತ್ರಿ ಊಟಕ್ಕೆ ಹೋಟೆಲ್ ಫ್ರಾನ್ಸ್‌ಗೆ ಹೋದೆವು. ಊಟದ ಮಧ್ಯದಲ್ಲೇ ಬಿಳಿಚಿಕೊಂಡ ಮುಖದಿಂದ ವೇಟರ್ ಬಂದು ನಾವು ಹಿಂಭಾಗದಲ್ಲಿರುವ ಔತಣದ ಹಜಾರಕ್ಕೆ ಹೋಗುವುದು ಒಳ್ಳೆಯದು ಎಂದು ಒತ್ತಾಯ ಮಾಡಿದ. ಕಾರಣ, "ಭಯಂಕರ ಗುಂಡಿನ ಕಾಳಗ ಆರಂಭವಾಗುತ್ತೆ. ಅದಕ್ಕೆ ಮುಂದುಗಡೆ ಭಾಗದ ದೀಪಗಳನ್ನೆಲ್ಲಾ ಆರಿಸಿಬಿಡ್ತೀವಿ" ಎಂದ.

ನಾವು ಮತ್ತೆ ಮೋರ್‌ಸ್ಕಯಾ ರಸ್ತೆಗೆ ಬಂದಾಗ, ನೆವ್‌ಸ್ಕಿ ರಸ್ತೆಯ ಮೂಲೆಯಲ್ಲಿ ಮಿಣಕ ಮಿಣಕ ಎನ್ನುತ್ತಿದ್ದ ಬೀದಿ ದೀಪವನ್ನು ಬಿಟ್ಟರೆ ಪೂರ್ತಿ ಅಂಧಕಾರ ಆವರಿಸಿತ್ತು. ಬೀದಿ ದೀಪದ ಕೆಳಗೆ ಒಂದು ಮಿಲಿಟರಿ ವಾಹನ ಚೆನ್ನಾಗಿ ಹೊಗೆ ಉಗುಳುತ್ತಾ ಅದರ ಎಂಜಿನ್ ಓಡುತ್ತಲೇ ಇತ್ತು. ಚಿಕ್ಕ ಹುಡುಗನೊಬ್ಬ ಅದರ ಮೇಲೆ ಹತ್ತಿ ಮೆಶಿನ್‌ಗನ್‌ನ ಕೊಳವೆಯೊಳಗೆ ಬಗ್ಗಿ ಇಣುಕಿ ನೋಡುತ್ತಿದ್ದ. ಸೈನಿಕರು, ನಾವಿಕರು ಎಲ್ಲಾ ಯಾವುದೋ ನಿರೀಕ್ಷೆಯಲ್ಲಿ ಸುಮ್ಮನೆ ನಿಂತಿದ್ದರು. ನಾವು ಮತ್ತೆ ಕೆಂಪು ಕಮಾನಿನತ್ತ ಹೋದೆವು. ಅಲ್ಲಿ ಒಂದಷ್ಟು ಜನ ಸೈನಿಕರು ಗುಂಪುಕಟ್ಟಿಕೊಂಡು ಉಜ್ವಲವಾಗಿ ಬೆಳಗುತ್ತಿದ್ದ ಚಳಿಗಾಲದ ಅರಮನೆಯ ಕಡೆ ನೋಡುತ್ತಾ ಗಟ್ಟಿಯಾಗಿ ಮಾತನಾಡಿಕೊಳ್ಳುತ್ತಿದ್ದರು.

ಅದರಲ್ಲಿ ಒಬ್ಬ ಹೇಳುತ್ತಿದ್ದ : "ಬೇಡ ಕಾಮ್ರೇಡ್ಸ್, ನಾವು ಆ ಕಡೆ ಗುಂಡು ಹಾರಿಸೋದು ಹೇಗೆ? ಅಲ್ಲಿ ಮಹಿಳೆಯರ ಬೆಟಾಲಿಯನ್ ಸಹ ಇದೆ. ಆಮೇಲೆ, ನಾವು ರಷ್ಯನ್ ಹೆಂಗಸರ ಮೇಲೆ ಗುಂಡು ಹಾರಿಸಿದೆವು ಅಂತ ಪ್ರಚಾರ ಮಾಡ್ತಾರೆ."

ನಾವು ನೆವ್‌ಸ್ಕಿ ಮಾರ್ಗದ ಬಳಿ ಬರುತ್ತಿದ್ದಂತೆ ಇನ್ನೊಂದು ಮಿಲಿಟರಿ ವಾಹನ ಅಲ್ಲಿಗೆ ಬಂತು. ಅದರ ಚಾವಣಿಯಲ್ಲಿನ ತೂತಿನಿಂದ ತಲೆಹಾಕಿ ಒಬ್ಬಾತ ಕೂಗಿದ:

"ಬನ್ನಿ, ನಾವು ಮುನ್ನುಗ್ಗಿ ದಾಳಿ ನಡೆಸೋಣ."

ಅಷ್ಟರಲ್ಲಿ ಅಲ್ಲಿಗೆ ಬಂದ ಇನ್ನೊಂದು ವಾಹನದ ಚಾಲಕ, ಎಂಜಿನ್‌ನ ಶಬ್ದವನ್ನು ಮೀರುವಂತೆ ಕೂಗಿಕೊಂಡ : "ಸಮಿತಿಯವರು ಕಾಯಲಿಕ್ಕೆ ಹೇಳಿದ್ದಾರೆ. ಅಲ್ಲಿ ಮರಮುಟ್ಟಿನ ರಾಶಿಯ ಹಿಂದೆ ಅವರು ಫಿರಂಗಿಗಳನ್ನು ಅಡಗಿಸಿದ್ದಾರೆ."

ಈ ಸ್ಥಳದಲ್ಲಿ ಟ್ರಾಮ್‌ಗಳ ಓಡಾಟ ನಿಂತಿತ್ತು. ಕೆಲವೇ ಕೆಲವು ಜನ ರಸ್ತೆಯಲ್ಲಿ ಓಡಾಡುತ್ತಿದ್ದರು. ದೀಪಗಳು ಉರಿಯುತ್ತಿರಲಿಲ್ಲ. ಆದರೆ ಕೆಲವೇ ಕೆಲವು ರಸ್ತೆಗಳ ಆಚೆ ಟ್ರಾಮು, ಜನಜಂಗುಳಿ, ದೀಪಗಳು, ಚಲನಚಿತ್ರದ ಕುರಿತಾದ ಝಗಮಗಿಸುವ

ಜಾಹಿರಾತುಗಳು, ಬೆಳಗುತ್ತಿದ್ದ ಅಂಗಡಿಗಳು ಇದ್ದು ಬದುಕು ಮಾಮೂಲಾಗಿದೆಯೇನೋ ಎನಿಸುತ್ತಿತ್ತು. ನಮ್ಮ ಬಳಿ ಮಾರಿನ್‌ಸ್ಕಿ ಥಿಯೇಟರ್‌ನಲ್ಲಿ ನಡೆಯುವ ಬ್ಯಾಲೆ ನೃತ್ಯದ ಟಿಕೆಟ್‌ಗಳಿದ್ದವು. ಎಲ್ಲಾ ರಂಗಮಂದಿರಗಳೂ ತೆರೆದಿದ್ದವು. ಆದರೆ ಬದುಕು ರಸ್ತೆಗಳಲ್ಲಿಯೇ ರೋಮಾಂಚನಕಾರಿಯಾಗಿತ್ತು.

ಪೊಲೀಸ್ ಸೇತುವೆಯ ಬಳಿ ನಾವು ಅಡ್ಡಹಾಕಿದ್ದ ಮರಮಟ್ಟಿನ ರಾಶಿಯನ್ನು ಎಡವಿದೆವು. ಸ್ಟೋಗನೊವ್ ಅರಮನೆಯ ಬಳಿ ಕೆಲವು ಸೈನಿಕರು ಫಿರಂಗಿಯೊಂದನ್ನು ಉರುಳಿಸಿಕೊಂಡು ಬಂದು ಆಯಕಟ್ಟಿನ ಜಾಗದಲ್ಲಿ ಇರಿಸುತ್ತಿದ್ದರು. ಅನೇಕ ರೀತಿಯ ಸಮವಸ್ತ್ರಗಳನ್ನು ಧರಿಸಿದ ಜನ ಜೋರಾಗಿ ಮಾತನಾಡುತ್ತಾ ಗೊತ್ತುಗುರಿ ಇಲ್ಲದೆ ಓಡಾಡಿಕೊಂಡಿದ್ದರು.

ನೆವ್‌ಸ್ಕಿ ಮುಖ್ಯರಸ್ತೆಯಲ್ಲಿ ಇಡೀ ನಗರವೇ ಎದ್ದು ತನ್ನನ್ನೇ ಪ್ರದರ್ಶಿಸಿಕೊಳ್ಳುತ್ತ ಮೆರೆದಾಡುತ್ತಿದೆಯೇನೋ ಅನಿಸುವಂತಿತ್ತು. ಪ್ರತಿ ರಸ್ತೆಬದಿಯಲ್ಲೂ ಬಿಸಿಬಿಸಿ ಚರ್ಚೆ ನಡೆಸುತ್ತಾ ಜನಜಂಗುಳಿ ನೆರೆದಿತ್ತು. ಪ್ರತಿ ರಸ್ತೆಯ ಮೂಲೆಯಲ್ಲೂ ಒಂದು ಡಜನ್‌ನಷ್ಟು ಸೈನಿಕರು ಬಯೊನೆಟ್ ಸಿಕ್ಕಿಸಿಕೊಂಡ ಬಂದೂಕು ಹಿಡಿದು ಗಸ್ತು ಹಾಕುತ್ತಿದ್ದರು. ದುಬಾರಿ ತುಪ್ಪಳದ ಕೋಟ್‌ಗಳನ್ನು ಧರಿಸಿಕೊಂಡ ಕೆಂಪು ಮೋರೆಯ ವೃದ್ಧರು, ಕೋಪದಿಂದ ಅವರ ಮೇಲೆ ಕೂಗಾಡುತ್ತಿದ್ದರು. ಚೆನ್ನಾಗಿ ಸಿಂಗಾರ ಮಾಡಿಕೊಂಡಿದ್ದ ಹೆಂಗಸರು ಅವರನ್ನು ಬೈಯ್ಯುತ್ತಿದ್ದರು. ಸೈನಿಕರಾದರೋ ಕೊಂಚ ಸಂಕೋಚದಿಂದ ಮುಗುಳ್ನಗುತ್ತಾ ಅವರೊಂದಿಗೆ ಮೆಲ್ಲಗೆ ವಾದಕ್ಕಿಳಿಯುತ್ತಿದ್ದರು. ಆರ್.ಎಸ್.ಡಿ.ಎಲ್.ಪಿ. (ರಷ್ಯನ್ ಸೋಷಿಯಲ್ ಡೆಮಾಕ್ರೆಟಿಕ್ ಲೇಬರ್ ಪಾರ್ಟಿ) ಎಂದು ಬರೆದಿದ್ದ ಮಿಲಿಟರಿ ವಾಹನಗಳು ರಸ್ತೆಯಲ್ಲಿ ಮೇಲಕ್ಕೂ ಕೆಳಕ್ಕೂ ಓಡಾಡಿಕೊಂಡಿದ್ದವು. ಒಂದು ಕಡೆ ಕೈತುಂಬ ವೃತ್ತಪತ್ರಿಕೆ ಗಳನ್ನು ಹೊತ್ತುಕೊಂಡು ಮನುಷ್ಯನೊಬ್ಬ ಕಾಣಿಸಿಕೊಂಡ. ಕೂಡಲೇ ಗಲಾಟೆ ಮಾಡುತ್ತಾ ಜನ ಅವನನ್ನು ಸುತ್ತುವರೆದರು. ಒಂದು ಪತ್ರಿಕೆಗೆ ಒಂದು ರೂಬಲ್, ಐದು ರೂಬಲ್, ಕಡೆಗೆ ಹತ್ತು ರೂಬಲ್ ಕೂಡ ಕೊಟ್ಟು ಪ್ರಾಣಿಗಳಂತೆ ಅವರು ಒಬ್ಬರೊಂದಿಗೊಬ್ಬರು ಕಿತ್ತಾಡುತ್ತಿದ್ದರು. ಆ ಪತ್ರಿಕೆ 'ರಬೋಚಿ ಇ ಸೊಲ್ಡಾತ್.' ಅದು ಕಾರ್ಮಿಕ ವರ್ಗದ ಕ್ರಾಂತಿಯನ್ನು ಘೋಷಿಸಿತ್ತು. ಬೋಲ್ಶೆವಿಕರನ್ನು ಜೈಲಿನಿಂದ ಬಿಡುಗಡೆ ಮಾಡಿರುವುದು, ರಣಾಂಗಣದಲ್ಲೂ, ಒಳಗಿನ ಪ್ರದೇಶಗಳಲ್ಲೂ ಸೈನ್ಯದ ಬೆಂಬಲಕ್ಕೆ ಮನವಿ ಮಾಡಿ ಕೊಂಡಿರುವುದು ಮುಂತಾದ ಸುದ್ದಿಗಳಿದ್ದ, ಭಾವೋದ್ವೇಗದ ನಾಲ್ಕು ಪುಟಗಳ ಈ ಪತ್ರಿಕೆಯ ತುಂಬ ಇದ್ದದ್ದು ದೊಡ್ಡ ಅಕ್ಷರಗಳ ತಲೆಬರೆಹಗಳಷ್ಟೇ. ಸುದ್ದಿಯ ವಿವರಗಳು ಇರಲಿಲ್ಲ...

ಸದೋವಯಾ ಮುಖ್ಯರಸ್ತೆಯ ಮೂಲೆಯಲ್ಲಿ ಸುಮಾರು ಎರಡು ಸಾವಿರ ಜನ ನೆರೆದಿದ್ದರು. ಅವರೆಲ್ಲ ಎತ್ತರವಾದ ಕಟ್ಟಡವೊಂದರ ಚಾವಣಿಯತ್ತ ನೋಡುತ್ತಿದ್ದರು. ಅಲ್ಲೊಂದು ಕೆಂಪು ಕಿಡಿ ಮಿನುಗುತ್ತಿತ್ತು, ಮಂಕಾಗುತ್ತಿತ್ತು.

ಅತ್ತ ಕೈ ತೋರಿಸಿ ಎತ್ತರವಾದ ರೈತನೊಬ್ಬ ಹೇಳುತ್ತಿದ್ದ : "ಅಲ್ಲಿ ನೋಡಿ, ಅಲ್ಲಿರುವವನೊಬ್ಬ ಪ್ರಚೋದಿಸಲಿಕ್ಕಾಗೇ ನೇಮಿಸಲ್ಪಟ್ಟವನು. ಇನ್ನೇನು ಜನರ ಮೇಲೆ ಗುಂಡು ಹಾರಿಸುತ್ತಾನೆ..." ಅದನ್ನು ಪರೀಕ್ಷಿಸಿ ನೋಡಲು ಹೋಗಬೇಕೆಂದು ಯಾರಿಗೂ ಅನಿಸಲಿಲ್ಲ.

*   *   *

ಸ್ಮೋಲ್ನಿ ಭವನದ ಬೃಹದಾಕಾರದ ಮುಂಭಾಗವು ಉಜ್ವಲವಾಗಿ ದೀಪಗಳಿಂದ ಬೆಳಗುತ್ತಿತ್ತು. ನಾವು ಅತ್ತಲೇ ವಾಹನದಲ್ಲಿ ಚಲಿಸಿದೆವು. ಪ್ರತಿಯೊಂದು ರಸ್ತೆಯಿಂದಲೂ ಮಬ್ಬಾದ ಆಕೃತಿಗಳು ಕತ್ತಲೆಯಲ್ಲಿ ಅತ್ತ ಬಂದು ಸೇರುತ್ತಿದ್ದವು. ವಾಹನಗಳು, ಮೋಟಾರ್‌ಸೈಕಲ್‌ಗಳು ಬಂದುಹೋಗುತ್ತಿದ್ದವು. ಎರಡು ಕೆಂಬಾವುಟಗಳನ್ನು ಸಿಕ್ಕಿಸಿಕೊಂಡ ಆನೆಯ ಬಣ್ಣದ ಬೃಹದಾಕಾರದ ಮಿಲಿಟರಿ ವಾಹನವೊಂದು ಜೋರಾಗಿ ಸೈರನ್ ಕಿರುಚಿಸುತ್ತಾ, ತಟ್ಟಾಡಿಕೊಂಡು ಹೊರಗೆ ಬಂತು. ಹೊರಗಿನ ಗೇಟ್ ಬಳಿ ರೆಡ್‌ಗಾರ್ಡ್‌ಗಳು ಚಳಿಯಲ್ಲಿ ಮೈ ಕಾಯಿಸಿಕೊಳ್ಳಲು ಬೆಂಕಿ ಹಾಕಿಕೊಂಡಿದ್ದರು. ಸೆಂಟ್ರಿಗಳು ಪಾಸ್ ನೋಡಿ ನಮ್ಮನ್ನು ಒಳಗೆ ಬಿಟ್ಟರು. ಬಾಗಿಲಲ್ಲಿ ನಾಲ್ಕು ಕ್ಷಿಪ್ರವಾಗಿ ಗುಂಡು ಹಾರಿಸಬಲ್ಲ ಫಿರಂಗಿಗಳನ್ನು ಇರಿಸಿದ್ದರು. ಅನೇಕ ಮಿಲಿಟರಿ ವಾಹನಗಳು ಅಂಗಳದಲ್ಲಿ ನಿಂತಿದ್ದವು. ಎಂಜಿನ್ ಓಡುತ್ತಲೇ ಇದ್ದ ಗುಂಡು ನಿರೋಧಕ ಕಾರ್‌ಗಳು ಅವು. ದೊಡ್ಡ ಹಜಾರಗಳಲ್ಲಿ ಗುಡುಗುವ ಹೆಜ್ಜೆಗಳ ಘರ್ಷಣೆ, ಗಟ್ಟಿಯಾದ ಕೂಗು, ಮಾರ್ದನಿ. ಯಾವುದಕ್ಕೂ ಹೆದರದ ಕೆಚ್ಚಿನ ವಾತಾವರಣ. ಕರಿಯ ಉಡುಗೆ, ಕಪ್ಪು ಉಣ್ಣೆಯ ಟೋಪಿ ಧರಿಸಿದ ಕಾರ್ಮಿಕರು, ಧೂಳಿನ ಬಣ್ಣದ ಬಟ್ಟೆ, ಬೂದು ಟೋಪಿ ಧರಿಸಿದ ಸೈನಿಕರು ಮೆಟ್ಟಿಲಿನಿಂದ ಪ್ರವಾಹದಂತೆ ಧುಮುಕುತ್ತಿದ್ದರು. ಒಂದು ಗುಂಪಿನಲ್ಲಿ ಲೂನಚಾರ್‌ಸ್ಕಿ, ಕಮೆನೇವ್ ಕಂಡುಬಂದರು. ಎಲ್ಲರೂ ಮಾತನಾಡುತ್ತಿದ್ದರು. ಉದ್ವಿಗ್ನವಾದ ಮುಖಗಳು. ಆಗಷ್ಟೇ ಪೆತ್ರೋಗ್ರಾಡ್ ಸೋವಿಯತ್‌ನ ಅಸಾಧಾರಣ ಸಭೆ ಮುಗಿದಿತ್ತು. ನಾನು ಕಮೆನೇವ್‌ನನ್ನು ಮಾತನಾಡಲು ನಿಲ್ಲಿಸಿದೆ. ಆತ ಮರುಮಾತಾಡದೆ ಆಗ ತಾನೆ ಅಂಗೀಕರಿಸಿದ್ದ ನಿರ್ಣಯವನ್ನು ವೇಗವಾಗಿ ಓದಿಹೇಳಿದ.

*ಕಾರ್ಮಿಕರು ಹಾಗೂ ಸೈನಿಕರ ಪ್ರತಿನಿಧಿಗಳ ಪೆತ್ರೋಗ್ರಾಡ್ ಸೋವಿಯತ್, ನಗರದ ಕಾರ್ಮಿಕರು ಹಾಗೂ ಸೈನಿಕರು ಸಾಧಿಸಿರುವ ಕ್ರಾಂತಿಯ ವಿಜಯಕ್ಕೆ ಕೆಂಪು ನಮನಗಳನ್ನು ಸಲ್ಲಿಸುತ್ತದೆ ಮತ್ತು ಬಂಡಾಯದ ಸಂದರ್ಭದಲ್ಲಿ ಜನತೆ ಪ್ರದರ್ಶಿಸಿರುವ ಒಗ್ಗಟ್ಟು, ಸಂಘಟಿತ ಶಕ್ತಿ, ಶಿಸ್ತು, ಸಹಕಾರಗಳನ್ನು ಶ್ಲಾಘಿಸುತ್ತದೆ. ಇಷ್ಟು ಕಡಿಮೆ ರಕ್ತ ಚೆಲ್ಲಿ ಇಷ್ಟೊಂದು ಯಶಸ್ಸನ್ನು ಒಂದು ಸಶಸ್ತ್ರ ಹೋರಾಟವು ಗಳಿಸಿಕೊಳ್ಳುವುದು ಅಪರೂಪ.*

*ಕ್ರಾಂತಿಯು ರೈತ–ಕಾರ್ಮಿಕರ ಸೋವಿಯತ್ ಸರ್ಕಾರವನ್ನು ಸ್ಥಾಪಿಸುತ್ತದೆ ಎಂಬುದು ನಮ್ಮ ದೃಢವಿಶ್ವಾಸ. ಅದೇ ರೀತಿ ಕೈಗಾರಿಕಾ ಕಾರ್ಮಿಕ ವರ್ಗಕ್ಕೆ ಎಲ್ಲ ಬಡರೈತ ಸಮುದಾಯವೂ ಬೆಂಬಲ ನೀಡುತ್ತದೆ ಮತ್ತು ಸರ್ಕಾರವು ಸಮಾಜವಾದದತ್ತ ಮುನ್ನಡೆಯುತ್ತದೆ; ಮತ್ತು ಇದು ಮಾತ್ರವೇ ಯುದ್ಧ ತಂದಿರುವ ಸಂಕಟಗಳಿಂದ, ಭಯಾನಕ ಪರಿಸ್ಥಿತಿಯಿಂದ ದೇಶವನ್ನು ಕಾಪಾಡಬಲ್ಲದು ಎಂಬುದರ ಬಗ್ಗೆ ಕೂಡ ನಮಗೆ ದೃಢವಿಶ್ವಾಸವಿದೆ. ಹೊಸ ಸರ್ಕಾರವು ಎಲ್ಲಾ ಯುದ್ಧನಿರತ ದೇಶಗಳಿಗೆ ಕೂಡಲೇ ಶಾಂತಿಯನ್ನು ಸ್ಥಾಪಿಸಬೇಕೆಂಬ ಪ್ರಸ್ತಾಪವನ್ನು ಮುಂದಿಡುತ್ತದೆ.*

*ಸರ್ಕಾರವು ಕೂಡಲೇ ಎಲ್ಲಾ ದೊಡ್ಡ ಜಮೀನುದಾರಿಗಳನ್ನು ವಶಕ್ಕೆ ತೆಗೆದುಕೊಂಡು ರೈತರಿಗೆ ಭೂಮಿಯನ್ನು ಹಂಚುತ್ತದೆ. ಎಲ್ಲ ಉತ್ಪಾದನೆ ಹಾಗೂ ಉತ್ಪಾದಿತ ವಸ್ತುಗಳ ಮೇಲೆ ಕಾರ್ಮಿಕರ ನಿಯಂತ್ರಣವನ್ನು ಸ್ಥಾಪಿಸುತ್ತದೆ. ಬ್ಯಾಂಕುಗಳನ್ನು ಸರ್ಕಾರದ ಸ್ವಾಮ್ಯಕ್ಕೆ ಒಳಪಡಿಸಲಾಗುತ್ತದೆ. ಈ ಕಾರ್ಮಿಕ ವರ್ಗದ ಕ್ರಾಂತಿಯನ್ನು ಎಲ್ಲಾ ರೈತ ಕಾರ್ಮಿಕರು ಶ್ರದ್ಧಾಪೂರ್ವಕವಾಗಿ, ಎಲ್ಲ ಶಕ್ತಿಯೊಂದಿಗೆ ಬೆಂಬಲಿಸಬೇಕೆಂದು ಕರೆ ನೀಡುತ್ತೇವೆ."*

"ಹಾಗಿದ್ದರೆ ಕ್ರಾಂತಿಯನ್ನು ಗೆದ್ದಾಯಿತು ಎನ್ನುತ್ತೀರಾ?" ನಾನು ಕೇಳಿದೆ.

ಆತ ಆತಂಕದಿಂದಲೇ ಹೇಳಿದ, "ಮಾಡಬೇಕಾದದ್ದು ತುಂಬ ಇದೆ. ತುಂಬ, ತುಂಬ ಉಳಿದಿದೆ. ಇದಿನ್ನೂ ಆರಂಭ ಅಷ್ಟೇ."

ಮೆಟ್ಟಿಲಿನ ಬಳಿ ಕಾರ್ಮಿಕ ಸಂಘದ ಉಪಾಧ್ಯಕ್ಷ ರಿಯಾಝನೊವ್ ಸಿಕ್ಕಿದ. ಮುಖದಲ್ಲಿ ಅಸಮಾಧಾನವಿತ್ತು. ಗಟ್ಟಿಯಾಗಿ ಕೂಗುತ್ತಿದ್ದ: "ಹುಚ್ಚಾಟ, ಇದೆಲ್ಲಾ ಹುಚ್ಚಾಟ. ಯುರೋಪಿಯನ್ ಕಾರ್ಮಿಕ ವರ್ಗ ನಮ್ಮ ಪರವಾಗಿ ಮಿಸುಕಾಡೋದೂ ಇಲ್ಲ. ನಾವು ರಷ್ಯನ್ನರು ಮಾತ್ರ..." ಎಂದು ಅವನು ಅಲ್ಲಿಂದ ಹೊರಟುಹೋದ. ರಿಯಾಝನೊವ್, ಕಮೆನೇವ್ ಇಬ್ಬರೂ ಸಶಸ್ತ್ರ ಬಂಡಾಯವನ್ನು ವಿರೋಧಿಸಿ ಲೆನಿನ್‌ರವರ ತೀಕ್ಷ್ಣ ವಾಗ್ಬಾಣಗಳ ರುಚಿ ಕಂಡವರು !

ಸಭಾಂಗಣದೊಳಗೆ ಅದೊಂದು ಐತಿಹಾಸಿಕ ಕ್ಷಣವಾಗಿತ್ತಂತೆ, ಹಂಗಾಮಿ ಸರ್ಕಾರ ಬಿದ್ದದ್ದನ್ನು ಘೋಷಿಸುತ್ತ ಟ್ರಾಟ್‌ಸ್ಕಿ ಹೇಳಿದ್ದು, "ರೈತ–ಕಾರ್ಮಿಕ–ಸೈನಿಕರ ಪ್ರತಿನಿಧಿಗಳಾಗಿ ನಾವು ಅವರ ಹಿತಾಸಕ್ತಿಯನ್ನು ಪೂರೈಸುವಂಥ ಇತಿಹಾಸದಲ್ಲಿ ಅನನ್ಯವಾದ ಪ್ರಯೋಗವೊಂದನ್ನು ಜಾರಿಗೊಳಿಸುತ್ತಿದ್ದೇವೆ."

ನಂತರ ಲೆನಿನ್ ಕಾಣಿಸಿಕೊಂಡಿದ್ದರು. ಅವರು ಬಂದಾಗ ಭಾರಿ ಹರ್ಷೋದ್ಗಾರ. ಅಲ್ಲಿದ್ದ ಜನರ ನಡುವೆಯೇ ಜಾಗತಿಕ ಕ್ರಾಂತಿಯೇ ಭವಿಷ್ಯ ಎಂದು ಅವರು ಘೋಷಿಸಿದ್ದರು.

ಕ್ರಾಂತಿ ಯಶಸ್ವಿಯಾಗಿರುವುದರ ಬಗ್ಗೆ ರಣಾಂಗಣದಲ್ಲಿರುವ ಯೋಧರಿಗೆ ತಿಳಿಸಲಾಗಿದೆಯೆಂದೂ, ರಾಜಧಾನಿಯತ್ತ ಬರುತ್ತಿರುವ ಸೈನ್ಯಗಳಿಗೆ ವಾಸ್ತವಿಕ ಪರಿಸ್ಥಿತಿಯನ್ನು ವರದಿ ಮಾಡಲು ನಿಯೋಗವನ್ನು ಕಳಿಸಲಾಗುವುದೆಂದೂ ಘೋಷಿಸಲಾಯಿತಂತೆ.

ನಾವೀಗ ಜನಜಂಗುಳಿಯ ನಡುವೆ ಜಾಗ ಮಾಡಿಕೊಳ್ಳುತ್ತಾ ಬೃಹತ್ ಸಭಾಂಗಣಕ್ಕೆ ಬಂದೆವು. ಈಗ ಇಲ್ಲಿ ಐತಿಹಾಸಿಕ ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನ ಆರಂಭವಾಗುತ್ತದೆ. ಕುರ್ಚಿಗಳಲ್ಲಿ, ಓಡಾಡುವ ದಾರಿಗಳಲ್ಲಿ, ವೇದಿಕೆಯವರೆಗೂ, ಕಿಟಕಿಕಟ್ಟೆಗಳಲ್ಲಿ ಎಲ್ಲೆಡೆ ಕಿಕ್ಕಿರಿದ ಸೈನಿಕ–ಕಾರ್ಮಿಕ ಪ್ರತಿನಿಧಿಗಳು ಸಭೆ ಆರಂಭವಾಗುವುದಕ್ಕೆ ಕಾಯುತ್ತಿದ್ದರು. ಸ್ನಾನ ಕಾಣದ ದೇಹದಿಂದ ಹೊರಹೊಮ್ಮುವ ಶಾಖದಿಂದಲೇ ಸಭಾಂಗಣ ಬಿಸಿಯಾಗಿಬಿಟ್ಟಿತ್ತು. ತಂಬಾಕಿನ ನೀಲಿ ಹೊಗೆ ಆವರಿಸಿಕೊಂಡಿತ್ತು. ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಸದಸ್ಯನೊಬ್ಬ ನನಗೆ ಪರಿಚಯವಿದ್ದವನು, ಕೂರಲು ಜಾಗ ಕೊಡಿಸಿದ. ಮೂರು ದಿನ ನಿದ್ದೆಗೆಟ್ಟು ಅವನೇ ಜೋಲಿ ಹೊಡೆಯುತ್ತಿದ್ದ.

ರಷ್ಯನ್ ಕ್ರಾಂತಿಯ ಮೊದಲ ಹಂತಕ್ಕೆ ಆದಷ್ಟು ಲಗಾಮು ಹಾಕಿ ಜಾಗರೂಕವಾಗಿ ನಡೆಸಿಕೊಂಡು ಹೋಗಲು ಯತ್ನಿಸಿದ್ದ ಮೊದಲನೆಯ ತ್ಸೆ–ಇ–ಕಾದ ನಾಯಕರು ವೇದಿಕೆಯ ಮೇಲಿದ್ದರು. ಒಂದು ಕಾಲದಲ್ಲಿ ಅವರ ಹತೋಟಿಯಲ್ಲಿದ್ದ ಸೋವಿಯತ್‌ಗಳು ಈಗ ಅವರಿಗೇ ತಿರುಗಿಬಿದ್ದಿದ್ದವು. ನಾಯಕರಲ್ಲಿ ಮುಖ್ಯರಾಗಿದ್ದ ಕೆರೆನ್‌ಸ್ಕಿ, ತ್ಸೆರೆತೆಲಿ ಇಂದು ಅಲ್ಲಿರಲಿಲ್ಲ. ಕೆರೆನ್‌ಸ್ಕಿ, ಬೆಂಬಲ ಅರಸಿಕೊಂಡು ರಣಾಂಗಣದತ್ತ ಹಾರಿಹೋಗಿದ್ದ. ಈಗ ಇಲ್ಲಿ ಉಳಿದಿದ್ದವರೆಂದರೆ ಡ್ಯಾನ್, ಗೋಟ್ಸ್ ಮುಂತಾದವರು. ವೇದಿಕೆಯ ಕೆಳಗೆ ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನ ಕುದಿಯುತ್ತಿತ್ತು. ಅದಕ್ಕೆ ಮೇಲಿನಿಂದ ನೇತೃತ್ವ

ನೀಡುತ್ತಿದ್ದುದು ಜ್ವಾಲಾಮುಖಿಯಂತೆ ಕ್ರಿಯಾಶೀಲವಾಗಿದ್ದ ಮಿಲಿಟರಿ ಕ್ರಾಂತಿಕಾರಿ ಸಮಿತಿ. ಸಶಸ್ತ್ರ ದಂಗೆಯ ಎಲ್ಲ ಸೂತ್ರಗಳನ್ನೂ ಹಿಡಿದಿದ್ದ ಸಮಿತಿಯ ಆಕ್ರಮಣಶೀಲ ಬಾಹುಗಳು ಬಲು ದೀರ್ಘವಾಗಿದ್ದವು. ಸಮಯ : ರಾತ್ರಿ 10:40 !

ಸೌಮ್ಯ ಮುಖದ ಡ್ಯಾನ್ ಗಂಟೆ ಬಾರಿಸಿ ಸಭೆಯನ್ನು ಆರಂಭಿಸಿದ : "ಕಾಮ್ರೇಡ್ಸ್, ತುಂಬ ಅಸಾಮಾನ್ಯವಾದ, ಅಸಾಧಾರಣವಾದ ಸನ್ನಿವೇಶದಲ್ಲಿ ಈ ಸೋವಿಯತ್ ಮಹಾಧಿವೇಶನ ಆರಂಭವಾಗುತ್ತಿದೆ. ಆದ್ದರಿಂದ ಯಾವುದೇ ರಾಜಕೀಯ ಭಾಷಣ ಮಾಡದೆ ಅಧಿವೇಶನವನ್ನು ಆರಂಭಿಸಲು ನಿರ್ಧರಿಸಿದ್ದೇವೆ. ಪರಿಸ್ಥಿತಿ ಹೇಗಿದೆಯೆಂದರೆ ನನ್ನ ಅನೇಕ ಸಂಗಾತಿಗಳು ತ್ಸೆ–ಇ–ಕಾ ನೀಡಿದ ಕರ್ತವ್ಯವನ್ನು ನಿರ್ವಹಿಸುತ್ತಲೇ ಚಳಿಗಾಲದ ಅರಮನೆಯಲ್ಲಿ ಗುಂಡಿನ ದಾಳಿಯನ್ನು ಎದುರಿಸುತ್ತಿದ್ದಾರೆ" ಎಂದ. ಇದರಿಂದ ಸಭಾಂಗಣದಲ್ಲಿ ಗದ್ದಲ ಪ್ರಾರಂಭವಾಯಿತು. ಅವನು ಎರಡನೆಯ ಮಹಾಧಿವೇಶನದ ಮೊದಲನೆಯ ಗೋಷ್ಠಿಯ ಆರಂಭ ಎಂದು ಘೋಷಿಸಿದ. ಅಧಿವೇಶನವನ್ನು ನಡೆಸಿಕೊಂಡು ಹೋಗಲು ಈಗ ಅಧ್ಯಕ್ಷ ಮಂಡಳಿಯ ಆಯ್ಕೆ. ಪ್ರತಿನಿಧಿಗಳ ಸಂಖ್ಯೆಗೆ ಅನುಗುಣವಾಗಿ ಪ್ರತಿಯೊಂದು ಪಕ್ಷಕ್ಕೂ ಅಧ್ಯಕ್ಷೀಯ ಮಂಡಳಿಯಲ್ಲಿ ತಕ್ಕ ಸಂಖ್ಯೆಯಲ್ಲಿ ಸ್ಥಾನಗಳನ್ನು ನೀಡಲಾಗುವುದು ಎಂದು ಘೋಷಿಸಲಾಯಿತು. ಇದಕ್ಕೆ ಬೋಲ್ಶೆವಿಕರು, ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ಹಾಗೂ ಮೆನ್ಶೆವಿಕ ಇಂಟರ್‌ನ್ಯಾಷನಲಿಸ್ಟರು ಒಪ್ಪಿಕೊಂಡಿದ್ದರು. ಮೆನ್ಶೆವಿಕ್‌ಗಳಿಗೆ ಇದು ಇಷ್ಟವಿರಲಿಲ್ಲ. ಒಟ್ಟಿನಲ್ಲಿ ಕೊನೆಗೆ ಅಧ್ಯಕ್ಷೀಯ ಮಂಡಳಿಯಲ್ಲಿ 14 ಬೋಲ್ಶೆವಿಕರು, 7 ಸೋಷಲಿಸ್ಟ್ ರೆವಲ್ಯೂಶನರಿಗಳು, 3 ಮೆನ್ಶೆವಿಕರು ಹಾಗೂ ಒಬ್ಬಾತ ಮ್ಯಾಕ್ಸಿಂ ಗಾರ್ಕಿಯವರ ಇಂಟರ್‌ನ್ಯಾಷನಲಿಸ್ಟ್ ಗುಂಪಿಗೆ ಸೇರಿದವರು ಆಯ್ಕೆಯಾದರು. ಇದಾದ ನಂತರ ಹಳೆಯ ತ್ಸೆ–ಇ–ಕಾ ಕೆಳಗಿಳಿಯಿತು. ಆ ಜಾಗದಲ್ಲಿ ಟ್ರಾಟ್‌ಸ್ಕಿ, ಕಮೆನೇವ್ ಲೂನಚಾರ್‌ಸ್ಕಿ, ಮೇಡಮ್ ಕೊಲಂತೈ, ನೊಗಿನ್ ಮುಂತಾದವರು ಹೋಗಿ ಕುಳಿತರು. ಇಡೀ ಸಭಾಂಗಣದಲ್ಲಿದ್ದ ಪ್ರತಿನಿಧಿಗಳು ಕಿವಿಗಡಚಿಕ್ಕುವಂತೆ ಹರ್ಷೋದ್ಗಾರ ಮಾಡಿದರು.

ಅಬ್ಬಾ, ಈ ಬೋಲ್ಶೆವಿಕರು ಎಲ್ಲಿಂದ ಎಲ್ಲಿಗೆ ಮೇಲೇರಿ ಬಂದಿದ್ದಾರೆ. ಕೇವಲ ನಾಲ್ಕು ತಿಂಗಳ ಹಿಂದೆ ಅವರನ್ನು ಬೇಟೆಯಾಡಿ ಬಲಿ ಹಾಕಲಾಗುತ್ತಿತ್ತು. ಈ ದಿನ ಅವರು ಕ್ರಾಂತಿಯ ನೇತೃತ್ವ ವಹಿಸಿ ಈ ಶಿಖರವನ್ನು ಏರಿದ್ದಾರೆ !

ಕಮೆನೇವ್ ಅಂದಿನ ಕಾರ್ಯಕ್ರಮವನ್ನು ವಿವರಿಸಿದ. ಮೊದಲನೆಯ ಚರ್ಚೆಯ ವಿಷಯ ಅಧಿಕಾರದ ಸಂಘಟನೆ. ಎರಡನೆಯದಾಗಿ ಯುದ್ಧ ಮತ್ತು ಶಾಂತಿಯ ಪ್ರಶ್ನೆ. ಮೂರನೆಯ ವಿಷಯ ಸಂವಿಧಾನಾತ್ಮಕ ಶಾಸನಸಭೆಯ ಬಗ್ಗೆ. ನಂತರ ಲೊಜೊವ್‌ಸ್ಕಿ ಎದ್ದುನಿಂತು ಎಲ್ಲಾ ಪಕ್ಷಗಳು, ಬಣಗಳು ತೀರ್ಮಾನಿಸಿರುವ ಪ್ರಕಾರ ಮೊದಲು ಪೆತ್ರೋಗ್ರಾಡ್ ಸೋವಿಯತ್‌ನ ವರದಿಯನ್ನು ಚರ್ಚಿಸಬೇಕು. ಆಮೇಲೆ ತ್ಸೆ–ಇ–ಕಾದ ಸದಸ್ಯರಿಗೆ, ವಿವಿಧ ಪಕ್ಷಗಳ ಪ್ರತಿನಿಧಿಗಳಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು; ನಂತರ ಮೇಲೆ ಹೇಳಿದ ಕಾರ್ಯಕ್ರಮವನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ನುಡಿದ.

ಅಷ್ಟರಲ್ಲಿ ಬಂದೂಕುಗಳಿಂದ ಗುಂಡುಹಾರುತ್ತಿರುವ ಸದ್ದು ಕೇಳಿ ಬಂತು. ಎಲ್ಲರ ಗಮನ ಹೊಗೆಯಿಂದ ಮಬ್ಬಾಗಿದ್ದ ಕಿಟಕಿಗಳ ಕಡೆಗೆ ತಿರುಗಿತು. ಎಲ್ಲರೂ ಉದ್ವಿಗ್ನರಾಗಿದ್ದರು. ಅಷ್ಟರಲ್ಲಿ ಮೆನ್ಶೆವಿಕ್ ಇಂಟರ್‌ನ್ಯಾಷನಲಿಸ್ಟ್ ಪಕ್ಷದ ನಾಯಕ

ಮಾರ್ಟೋವ್ ಮಾತನಾಡಲು ನಿಂತ. ಕರಕರ ಎನ್ನುತ್ತಿದ್ದ ಕಟ್ಟಿದ ಗಂಟಲಿನಿಂದ ಕಿರುಚುತ್ತಾ ಅವನು ಆರಂಭಿಸಿದ : "ಕಾಮ್ರೇಡ್ಸ್, ಈಗ ದೇಶದೊಳಗೆ ಅಂತರ್ಯುದ್ಧ ಆರಂಭವಾಗಿದೆ. ತೀರ್ಮಾನ ಮಾಡಬೇಕಾಗಿರುವ ಮೊದಲ ಪ್ರಶ್ನೆ ರಾಜ್ಯಾಧಿಕಾರದ್ದು ಎನ್ನುತ್ತೀರಿ. ನಾವು ಮೊದಲು ಈ ಅಂತರ್ಯುದ್ಧವನ್ನು ನಿಲ್ಲಿಸುವುದು ಹೇಗೆ ಎಂಬುದನ್ನು ತೀರ್ಮಾನಿಸಬೇಕಾಯಿತು. ಅಧಿಕಾರದ ಬಗ್ಗೆ ಚರ್ಚಿಸೋಣ ಎನ್ನುತ್ತಲೇ, ನಮ್ಮಲ್ಲೇ ಇರುವ ಕ್ರಾಂತಿಕಾರಿ ಪಕ್ಷಗಳಲ್ಲಿ ಒಂದು ಪಕ್ಷ ಮಿಲಿಟರಿ ಸಂಚಿನ ಮೂಲಕ ಅಧಿಕಾರವನ್ನು ಕೈಗೆತ್ತಿಕೊಳ್ಳುತ್ತಿದೆ" ಎಂದ ಅವನ ಮಾತು ಗದ್ದಲದಲ್ಲಿ ಮುಳುಗಿಹೋಯಿತು. ಆದರೂ ಆತ ಮತ್ತೆ ಮುಂದುವರೆಸಿ ಹೇಳಿದ : "ನಾವು, ಎಲ್ಲರೂ ಮಾನ್ಯಮಾಡುವಂಥ ಅಧಿಕಾರವೊಂದನ್ನು ಸೃಷ್ಟಿ ಮಾಡಬೇಕು. ಇಲ್ಲದಿದ್ದರೆ ಈ ಅಂತರ್ಯುದ್ಧ ಪ್ರತಿಕ್ರಾಂತಿಯಲ್ಲಿ ಸಮಾಪ್ತಿಯಾಗುತ್ತದೆ" ಎಂದ.

ಅದೇನೇ ಇರಲಿ ಹೊರಗೆ ನಿಯತವಾಗಿ ಫಿರಂಗಿಯ ಸದ್ದು ಕೇಳಿಸುತ್ತಿತ್ತು. ಸಭಾಂಗಣದಲ್ಲಿದ್ದ ಪ್ರತಿನಿಧಿಗಳು ಏರುಧ್ವನಿಯಲ್ಲಿ ಪರಸ್ಪರ ವಾಗ್ವಾದ ಮಾಡುತ್ತಿದ್ದರು. ಆ ಭಯಂಕರ ಅಂಧಕಾರದಲ್ಲಿ, ಆ ಫಿರಂಗಿಗಳ ಸದ್ದಿನ ನಡುವೆ ದ್ವೇಷ, ಭಯ, ಅಂಜಿಕೆಯೇ ಇಲ್ಲದ ಧೀರೋದಾತ್ತತೆ ಇವೆಲ್ಲವುಗಳೊಂದಿಗೂ ಒಂದು ಹೊಸ ರಷ್ಯಾ ಆಗತಾನೇ ಕಣ್ಣುಬಿಡುತ್ತಿತ್ತು.

ಏತನ್ಮಧ್ಯೆ, ಮಾರ್ಟೋವ್‌ನ ಸೂಚನೆಯನ್ನು ಒಪ್ಪಿಕೊಳ್ಳಲಾಯಿತು. ಸೈನಿಕನೊಬ್ಬ ಅಖಿಲ ರಷ್ಯಾ ರೈತರ ಸೋವಿಯತ್ ಪ್ರತಿನಿಧಿಗಳನ್ನು ಕಳಿಸಲು ನಿರಾಕರಿಸಿದೆ. ಅವರಿಗೆ, ನಿಯೋಗವೊಂದು ಹೋಗಿ ಅಧಿಕೃತವಾದ ಆಹ್ವಾನವನ್ನು ಕೊಡಬೇಕು. ಸದ್ಯಕ್ಕೆ ಇಲ್ಲಿರುವ ರೈತ ಪ್ರತಿನಿಧಿಗಳಿಗೆ ಅಧಿವೇಶನದಲ್ಲಿ ಮತದಾನದ ಹಕ್ಕನ್ನು ನೀಡಬೇಕು. ಸಭೆ ಇದನ್ನೂ ಅಂಗೀಕರಿಸಿತು.

ಸೈನಿಕರ ಕ್ಯಾಪ್ಟನ್‌ನ ಸಮವಸ್ತ್ರದಲ್ಲಿದ್ದ ಖರಾಶ್ ಎಂಬುವನು ವೇದಿಕೆ ಏರಿ ಕೂಗಾಡಲಾರಂಭಿಸಿದ : "ನಾವು ರಾಜ್ಯಾಧಿಕಾರದ ಪ್ರಶ್ನೆಯನ್ನು ಇಲ್ಲಿ ನಿರ್ಧರಿಸೋಣ ಅಂತ ಹೇಳ್ತಿರೋ ಆಷಾಢಭೂತಿಗಳು ಈಗಾಗಲೇ ನಮ್ಮ ಬೆನ್ನ ಹಿಂದೆ ಆ ಪ್ರಶ್ನೆಯನ್ನು ನಿರ್ಣಯಿಸ್ತಾ ಇದ್ದಾರೆ. ಚಳಿಗಾಲದ ಅರಮನೆ ಮೇಲೆ ಗುಂಡಿನ ದಾಳಿ ನಡೀತಾ ಇದೆ. ಇಂಥ ತಂತ್ರ ಮಾಡೋ ರಾಜಕೀಯ ಪಕ್ಷ ಶವಪೆಟ್ಟಿಗೆಗೆ ಆ ದಾಳಿಗಳೇ ಮೊಳೆಗಳಾಗ್ತಾವೆ." ಅವನ ಮಾತಿನಿಂದ ವಿಪರೀತ ಗದ್ದಲ ಶುರುವಾಯ್ತು. ನಂತರ ಫರ್‍ರಾ ಎನ್ನುವವನು ಮಾತನಾಡಿದ, "ನಾವು ಶಾಂತಿ ಬಗ್ಗೆ ಮಾತಾಡ್ತಿದೀವಿ. ಆದರೆ ಹೊರಗೆ ರಸ್ತೇಲಿ ಕಾಳಗ ನಡೀತಿದೆ. ನಾವುಗಳು – ಅಂದರೆ ಸೋಷಲಿಸ್ಟ್ ರೆವಲ್ಯೂಶನರಿಗಳು ಮತ್ತು ಮೆನ್ಶೆವಿಕರು ಇದರಲ್ಲಿ ಭಾಗವಹಿಸ್ತಾ ಇಲ್ಲ. ಅಧಿಕಾರವನ್ನು ಹಿಡಿಯೋ ಪ್ರಯತ್ನಗಳನ್ನು ನಾವು ವಿರೋಧಿಸ್ತೀವಿ." ಆಮೇಲೆ ಟ್ರುಡೋವಿಕ್ ಎಂಬ 12ನೇ ಸೈನ್ಯದ ಪ್ರತಿನಿಧಿ ಮಾತನಾಡಿದ, "ಪರಿಸ್ಥಿತಿಯನ್ನು ನೋಡಲಿಕ್ಕೆ ನನ್ನನ್ನು ಇಲ್ಲಿಗೆ ಕಳಿಸಲಾಗಿತ್ತು. ನಾನೀಗ ವಾಪಸ್ ಹೋಗ್ತೀನಿ. ಸಂವಿಧಾನಾತ್ಮಕ ಶಾಸನಸಭೆಯ ಅಧಿವೇಶನ ಪ್ರಾರಂಭ ಆಗೋದಿಕ್ಕೆ ಕೇವಲ ಮೂರು ವಾರ ಮುಂಚೆ ಸೋವಿಯತ್‌ಗಳು ಈ ರೀತಿ ಅಧಿಕಾರವನ್ನು ತಮ್ಮ ಕೈವಶ ಮಾಡಿಕೊಳ್ತಿರೋದು ಸೈನ್ಯಕ್ಕೆ, ಜನತೆಗೆ, ಬಗೆದ ದ್ರೋಹ ಅಂತ ನಮ್ಮ ಸೈನ್ಯಗಳ ಎಲ್ಲಾ

ಸಮಿತಿಗಳೂ ಭಾವಿಸುತ್ವೆ" ಎಂದ. ಅದಕ್ಕೆ ಪ್ರತಿಯಾಗಿ "ಸುಳ್ಳು, ಸುಳ್ಳು" ಎಂಬ ಕೂಗಾಟ ಗಟ್ಟಿಯಾಗಿ ಕೇಳಿಸಿತು. ಸದ್ದು ಕಡಿಮೆಯಾದ ಮೇಲೆ ಅವನು ಮತ್ತೆ ಹೇಳಿದ : "ಈ ಪೆತ್ರೋಗ್ರಾಡಿನ ದುಸ್ಸಾಹಸವನ್ನು ಇಲ್ಲಿಗೆ ಮುಗಿಸೋಣ. ದೇಶವನ್ನು, ಕ್ರಾಂತಿಯನ್ನು, ಉಳಿಸಬೇಕು ಅಂದ್ರೆ ಮೊದಲು ಎಲ್ಲರೂ ಈ ಸಭಾಂಗಣದಿಂದ ಹೊರಗೆ ನಡೀರಿ." ಅವನು ವಾಪಸ್ಸಾಗುವ ದಾರಿಯುದ್ದಕ್ಕೂ ವಿಪರೀತ ಗದ್ದಲ. ಪ್ರತಿನಿಧಿಗಳು ಅವನನ್ನು ಬೆದರಿಸುವಂತೆ ನುಗ್ಗಲೆತ್ನಿಸುತ್ತಿದ್ದರು. ನಂತರ ತುಂಬ ನಯವಾಗಿ ಮಾತನಾಡುವ ಖಿನ್‌ಚುಕ್ ಎಂಬ ಮಿಲಿಟರಿ ಅಧಿಕಾರಿ ಶುರುಮಾಡಿದ: "ಈ ಸೋವಿಯತ್‌ಗಳ ಮಹಾಧಿವೇಶನಕ್ಕೆ ಯಾವ ಮಾನ್ಯತೆಯೂ ಇಲ್ಲ ಎಂದು ಸೈನ್ಯವು ಭಾವಿಸುತ್ತದೆ. ಇದರ ಅವಶ್ಯಕತೆಯೇ ಇಲ್ಲ..." ಭಯಂಕರವಾದ ಕೂಗಾಟ, ಬೂಟುಗಳನ್ನು ನೆಲಕ್ಕೆ ಅಪ್ಪಳಿಸುವುದು ಪ್ರಾರಂಭವಾಯಿತು. ಸಭಾಂಗಣದ ಎಲ್ಲಾ ಮೂಲೆಗಳಿಂದ ಸೈನಿಕ ಪ್ರತಿನಿಧಿಗಳು ಎದ್ದುನಿಂತು ಪ್ರಶ್ನಿಸಲಾರಂಭಿಸಿದರು.

"ನೀನು ಯಾರ ಪರವಾಗಿ ಮಾತನಾಡೋಕೆ ಬಂದಿದ್ದೀಯ? ಯಾರ ಪ್ರತಿನಿಧಿ ನೀನು?" ಅವನು ನಾನು ಇಂಥ ಸೈನ್ಯದ, ಇಂಥ ದಳದ, ಇಂಥ ತುಕಡಿಗೆ ಸೇರಿದ್ದೇನೆ. ಐದನೇ ಸೈನ್ಯದ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಪ್ರತಿನಿಧಿಸಿ ಮಾತಾಡುತ್ತಿದ್ದೇನೆ ಎಂದು ಹೇಳಿಕೊಂಡ. ಅವನನ್ನು ಗೇಲಿ ಮಾಡುತ್ತ, ಅಣಕಿಸುತ್ತ, ಸೈನಿಕರು ಕೂಗಲಾರಂಭಿಸಿದರು.

"ನೀನು ಚುನಾಯಿತನಾದದ್ದು ಯಾವಾಗ ? ನೀನು ಸೈನಿಕರ ಪ್ರತಿನಿಧಿ ಅಲ್ಲ. ಸೈನ್ಯದ ಅಧಿಕಾರಿಗಳ ಪ್ರತಿನಿಧಿ, ನಿಮ್ಮ ಸೈನಿಕರ ಅಭಿಪ್ರಾಯ ಏನು?"

ಅವನು ಮುಂದುವರೆಸಿದ, "ನಡೀತಿರೋ ಘಟನೆಗಳಿಗೆ ನಾವು – ರಣಾಂಗಣದ ಸಮಿತಿಯೋರು – ಯಾವ ರೀತಿಯೂ ಜವಾಬ್ದಾರರಲ್ಲ. ನಾವು ಕ್ರಾಂತಿಯನ್ನು ರಕ್ಷಿಸೋಕೆ ಎಲ್ಲಾ ಪ್ರಜ್ಞಾವಂತ ಶಕ್ತಿಗಳನ್ನು ಒಟ್ಟುಗೂಡಿಸ್ತೀವಿ. ನಮ್ಮ ರಣಾಂಗಣದ ಗುಂಪು ಅಧಿವೇಶನವನ್ನು ಬಿಟ್ಟು ಹೊರಡ್ತಾರೆ. ಹೋರಾಟ ಆಗಬೇಕಾಗಿರೋದು ಈಗ ರಸ್ತೆಗಳಲ್ಲಿ." ಆತನ ಮಾತಿಗೆ ಪ್ರತಿನಿಧಿಗಳಿಂದ ಸಿಕ್ಕಾಪಟ್ಟೆ ವಿರೋಧ, ಕೂಗಾಟ ವ್ಯಕ್ತವಾಯಿತು.

"ನೀನು ಮಾತಾಡ್ತಿರೋದು ಸೈನ್ಯದ ಅಧಿಕಾರಿಗಳ ಪರವಾಗಿ. ನೀವೆಲ್ಲಾ ಕೊರ್ನಿಲೊವ್‌ನ ಏಜೆಂಟರು, ಗಲಭೆ ಪ್ರಚೋದಕರು, ಕ್ರಾಂತಿ ವಿರೋಧಿಗಳು."

ಮತ್ತೊಮ್ಮೆ ಮೆನ್ಶೆವಿಕರ ಪರವಾಗಿ ಖಿನ್‌ಚುಕ್ ಮುಂದುವರೆಸಿದ : "ಸದ್ಯದ ಪರಿಸ್ಥಿತಿಯಲ್ಲಿ ಮತ್ತೆ ಶಾಂತಿಯುತ ವಾತಾವರಣ ಸ್ಥಾಪನೆಯಾಗಬೇಕೆಂದರೆ ಹಂಗಾಮಿ ಸರ್ಕಾರದೊಂದಿಗೆ ರಾಜಿ ಮಾಡಿಕೊಂಡು ಹೊಸ ಸಚಿವ ಸಂಪುಟವನ್ನು ರಚಿಸಬೇಕು. ಅದಕ್ಕೆ ಎಲ್ಲಾ ಜನರ ಬೆಂಬಲ ಇರುತ್ತದೆ." ಇಷ್ಟು ಹೇಳಿ ಅವನು ಬೋಲ್ಶೆವಿಕರ ಮಿಲಿಟರಿ ಸಂಚನ್ನು ವಿರೋಧಿಸುವುದಾಗಿ ಹೇಳಿ ಅಧಿವೇಶನದಿಂದ ಹೊರನಡೆದುಬಿಟ್ಟ. "ಪಲಾಯನವಾದಿ, ಓಡಿಹೋಗಿಬಿಟ್ಟ" ಎಂದು ಜನ ಕೂಗುತ್ತಲೇ ಇದ್ದರು. ಸೋಷಲಿಸ್ಟ್ ರೆವಲ್ಯೂಶನರಿಗಳ ಪರವಾಗಿ ಹೆಂಡಲ್‌ಮ್ಯಾನ್ ಎನ್ನುವನು ಚಳಿಗಾಲದ ಅರಮನೆಯ ಮೇಲೆ ನಡೆಯುತ್ತಿರುವ ದಾಳಿಯನ್ನು ವಿರೋಧಿಸುತ್ತೇವೆ ಎನ್ನುತ್ತಲೇ ಇದ್ದ.

ಅಷ್ಟರಲ್ಲಿ ಒಬ್ಬ ತರುಣ ಸೈನಿಕ ವೇದಿಕೆಯನ್ನೇರಿದ. ಅವನ ಕಣ್ಣುಗಳು ಮಿನುಗುತ್ತಿದ್ದವು.

ಗಮನ ಸೆಳೆಯಲು ಕೈ ಎತ್ತಿ ಅವನು ಹೇಳಲಾರಂಭಿಸಿದ, "ಕಾಮ್ರೇಡ್ಸ್," ಜನ ಶಾಂತರಾಗಿ ಆಲಿಸಲಾರಂಭಿಸಿದರು. "ನಾನು ಪೀಟರ್ಸನ್. ನಾನು ಲ್ಯಾಟ್ವಿಯಾದ ಎರಡನೆಯ ಬಂದೂಕು ದಳದ ಪರವಾಗಿ ಮಾತನಾಡುತ್ತಿದ್ದೇನೆ. ಇಲ್ಲಿ ಇಬ್ಬರು ಸೈನಿಕ ಸಮಿತಿಯ ಪ್ರತಿನಿಧಿಗಳು ಮಾತನಾಡಿದರು. ಅವರು ನಿಜಕ್ಕೂ ಸೈನ್ಯವನ್ನು ಪ್ರತಿನಿಧಿಸಿದ್ದರೆ ಅದಕ್ಕೆ ಕೊಂಚ ಬೆಲೆ ಇರುತ್ತಿತ್ತು." ಕೂಡಲೇ ಹರ್ಷೋದ್ಗಾರ, ಗಟ್ಟಿಯಾಗಿ ಕರತಾಡನ. ಆತ ಮುಂದುವರೆಸಿದ:

"ಆದರೆ ಅವರು ಸಾಮಾನ್ಯ ಸೈನಿಕರನ್ನು ಪ್ರತಿನಿಧಿಸುತ್ತಿಲ್ಲ. ನಮ್ಮ ಸೈನ್ಯ ದಳಗಳು ಬಹಳ ಕಾಲದಿಂದಲೂ ನಮ್ಮ ಮಹಾನ್ ಸೋವಿಯತ್‌ಅನ್ನು ಹಾಗೂ ಸೈನ್ಯ ಸಮಿತಿಯನ್ನು ಪುನರ್‌ರಚಿಸಲು ಒತ್ತಾಯಿಸುತ್ತಲೇ ಇವೆ. ಆದರೆ ಇಲ್ಲಿ ನಿಮ್ಮ ತ್ಸೆ-ಇ-ಕಾ ಹೇಗೆ ಚುನಾವಣೆ ಮುಂದೂಡುತ್ತಾ ಭಂಡತನದಿಂದ ಕುರ್ಚಿಗಂಟಿಕೊಂಡಿದೆಯೋ ಅದೇ ರೀತಿಯಲ್ಲಿ ನಮ್ಮ ಸಮಿತಿಯೂ ಚುನಾವಣೆ ಮುಂದೂಡುತ್ತಾ ಕಾಲ ಕಳೆದಿದೆ. ಅವರ ಉದ್ದೇಶ ಈ ಮಹಾಧಿವೇಶನಕ್ಕೆ ದ್ರೋಹಿಗಳನ್ನು ಪ್ರತಿನಿಧಿಗಳಾಗಿ ಕಳಿಸುವುದು. ನಾವು ಹೇಳುತ್ತಲೇ ಬಂದಿದ್ದೇವೆ. 'ಚರ್ಚೆ ಸಾಕು, ನಿರ್ಣಯಗಳು ಸಾಕು. ಈಗ ಕಾರ್ಯಾಚರಣೆಯ ಕಾಲ. ನಮ್ಮ ಕೈಗೆ ಅಧಿಕಾರ ಬರಬೇಕು' ಎಂದು. ಹೊರಗೆ ಹೋಗುವವರು ತೊಲಗಲಿ. ಸೈನ್ಯಕ್ಕೂ ಅವರಿಗೂ ಸಂಬಂಧವಿಲ್ಲ."

ಸಭೆಯಲ್ಲಿ ಸಂತಸದ ವಿದ್ಯುತ್ಸಂಚಾರವಾಯಿತು. ಬಹಳ ಕಾಲ ಸಭೆ ವೇಗವಾಗಿ ನಡೆಯುತ್ತಿದ್ದ ಬೆಳವಣಿಗೆಗಳಿಂದ, ಗುಂಡು ಹಾರುತ್ತಿರುವ ಸದ್ದಿನಿಂದ, ವೇದಿಕೆಯ ಮೇಲಿನವರು ಮೇಜು ಕುಟ್ಟಿ ಎಲ್ಲರನ್ನೂ ಸುಮ್ಮನಾಗಿಸುತ್ತಿದ್ದರಿಂದ ಏನೂ ತೋಚದೆ ದಿಙ್ಮೂಢವಾಗಿತ್ತು. ನಾವು ಒಂಟಿಯಾಗಿದ್ದೇವೇನೋ, ಇಡಿಯ ರಷ್ಯಾವನ್ನೇ ಎದುರುಹಾಕಿಕೊಂಡಿದ್ದೇವೇನೋ ಎಂಬ ಆತಂಕ ಅವರನ್ನು ಕಾಡಿತ್ತು. ಆದರೆ ಈಗ ಈ ತರುಣ ಮಾತನಾಡಿದ ಮೇಲೆ ಅವರಿಗೆ ಸತ್ಯ ಸ್ಪಷ್ಟವಾಯಿತು. ಸಮವಸ್ತ್ರ ಧರಿಸಿದ ಸೈನಿಕರೂ ಸಹ, ಮಿಲಿಯಾಂತರ ರೈತ – ಕಾರ್ಮಿಕರಂತೆಯೇ ಮನುಷ್ಯರು. ಅವರೆಲ್ಲರ ಭಾವನೆಗಳು, ಚಿಂತನೆಗಳೂ ಒಂದೇ ಆಗಿವೆ!

ನಂತರ ಇನ್ನಷ್ಟು ಸೈನಿಕರು ಮಾತನಾಡಿದರು. ಝೆಲ್‌ಶಾಕ್ ಎಂಬಾತ "ಸೈನ್ಯ ಸಮಿತಿಗಳು ಸಾಮಾನ್ಯ ಸೈನಿಕರನ್ನು ಪ್ರತಿನಿಧಿಸುತ್ತಿಲ್ಲ" ಎಂದರೆ, ಲುಕಿಯಾನೊವ್ ಎಂಬಾತ "ರಣಾಂಗಣದ ಕಂದಕಗಳಲ್ಲಿ ಹೋರಾಡುತ್ತಿರುವ ಸೈನಿಕರಿಗೆ ಎಲ್ಲಾ ಅಧಿಕಾರ ಸೋವಿಯತ್‌ಗಳಿಗೆ ಹಸ್ತಾಂತರವಾಗುವುದೇ ಬೇಕಾಗಿದೆ. ನಮಗೆ ಸೋವಿಯತ್‌ನಿಂದ ಬಹಳಷ್ಟು ನಿರೀಕ್ಷೆಗಳಿವೆ" ಎಂದು ಘೋಷಿಸಿದ.

ನಂತರ ಯಹೂದಿ ಸೋಷಲ್ ಡೆಮಾಕ್ರಟ್‌ಗಳ ಪತ್ರಿಕೆಯಾದ 'ಬಂಡ್'ನ ಪರವಾಗಿ ಮಾತನಾಡಲು ಅಬ್ರಮೋವಿಚ್ ಎಂಬಾತ ಬಂದ. ಆತ ತಾವು ಸೋಷಲಿಸ್ಟ್ ರೆವಲ್ಯೂಶನರಿಗಳು ಹಾಗೂ ಮೆನ್ಶೆವಿಕ್‌ರ ಜೊತೆಯಲ್ಲಿ ಅಧಿವೇಶನವನ್ನು ತೊರೆಯುವುದಾಗಿ ಘೋಷಿಸಿದ.

ಕಮೆನೇವ್ ಸಭೆಯನ್ನು ನಿಯಂತ್ರಣಕ್ಕೆ ತರಲು ಯತ್ನಿಸಿದ. ನಂತರ ಟ್ರಾಟ್‌ಸ್ಕಿ ಘೋಷಿಸಿದ್ದು : "ಇವರೆಲ್ಲಾ ಶರಣಾಗತಿಯ ಪರವಾದವರು, ಹೋಗುವವರೆಲ್ಲಾ ಹೋಗಲಿ, ಚರಿತ್ರೆಯ ಕಸದಬುಟ್ಟಿಗೆ."

ಬೋಲ್ಶೆವಿಕ್‌ರ ಪರವಾಗಿ ಮಾತನಾಡುತ್ತಾ ರಿಯಾಜ್ಞಿನೊವ್ ಘೋಷಿಸಿದ : "ಸಿಟಿ ಡ್ಯೂಮಾ ಮಾಡಿಕೊಂಡ ಮನವಿಯ ಪ್ರಕಾರ ನಾವು ಸಂಧಾನಕ್ಕಾಗಿ ಚಳಿಗಾಲದ ಅರಮನೆಗೆ ನಿಯೋಗವೊಂದನ್ನು ಕಳಿಸಿದ್ದೇವೆ. ಈ ರೀತಿ ರಕ್ತಪಾತವನ್ನು ತಪ್ಪಿಸಲು ನಮ್ಮ ಕೈಲಿ ಸಾಧ್ಯವಾದದ್ದನ್ನೆಲ್ಲಾ ಮಾಡಿದ್ದೇವೆ.

* * *

ನಾವು ಅಲ್ಲಿಂದ ಅವಸರದಲ್ಲಿ ಹೊರಬಿದ್ದೆವು. ಒಂದು ಕ್ಷಣ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕೋಣೆಯ ಬಳಿ ನಿಂತು ಒಳಗೆ ನೋಡಿದೆವು. ಅಲ್ಲಿ ವಿಪರೀತ ವೇಗದಲ್ಲಿ ಕೆಲಸ ನಡೆಯುತ್ತಿತ್ತು. ಏದುಸಿರು ಬಿಡುತ್ತಿರುವ ಪತ್ರವಾಹಕರು ನಗರದ ಮೂಲೆಮೂಲೆಗೆ ಆಜ್ಞೆಗಳನ್ನು ಹೊತ್ತು ಒಳಗೂ ಹೊರಗೂ ಓಡಾಡುತ್ತಿದ್ದರು. ಬಾಗಿಲು ತೆರೆದಾಗ ಸಿಗರೇಟ್ ಹೊಗೆ ನಮ್ಮ ಮುಖಕ್ಕೆ ಅಪ್ಪಳಿಸಿತು. ಒಳಗೆ ದೀಪದ ಕೆಳಗೆ ಮುಗುಳ್ನಗುವ ತರುಣ, ಕಾಮ್ರೇಡ್ ಜೋಸೆಫ್ ದುಖ್‌ವಿನ್‌ಸ್ಕಿ ಒಂದು ಭೂಪಟ ಹರಡಿಕೊಂಡು ಕೆಲಸಮಾಡುತ್ತಿದ್ದ.

ನಾವು ಹೊರಗೆ ಬಂದಾಗ ಚಳಿಯ ರಾತ್ರಿ. ಸ್ಮೋಲ್ನಿ ಭವನದ ಎದುರು ಭಾರೀ ಸಂಖ್ಯೆಯಲ್ಲಿ ವಾಹನಗಳು ನಿಂತಿದ್ದವು. ಅವುಗಳ ಸದ್ದನ್ನೂ ಮೀರಿಸಿ ಆಗಾಗ ಫಿರಂಗಿ ಸದ್ದು ಕೇಳಿಸುತ್ತಿತ್ತು. ಒಂದು ದೊಡ್ಡ ಟ್ರಕ್‌ನೊಳಕ್ಕೆ ಕೆಲವರು ಹೊರೆಗಳನ್ನು ತುಂಬಿಸುತ್ತಿದ್ದರು. ಪಕ್ಕದಲ್ಲಿ ಬಂದೂಕಗಳಿದ್ದವು.

ನಾನು ಜೋರಾಗಿ ಕೂಗಿಕೇಳಿದೆ "ಎಲ್ಲಿಗೆ ಹೊರಟಿರಿ?" ಒಬ್ಬ ಸೈನಿಕ ನಗುತ್ತಾ ಹೇಳಿದ "ನಗರದ ಮಧ್ಯಕ್ಕೆ, ಬೇರೆಕಡೆ, ಎಲ್ಲಾಕಡೆ." ನಾವು ಅವರಿಗೆ ನಮ್ಮ ಪಾಸುಗಳನ್ನು ತೋರಿಸಿದೆವು. ಅವರು "ಬನ್ನಿ, ಆದರೆ ಗುಂಡಿನ ಕಾಳಗ ಆರಂಭವಾಗಬಹುದು" ಎಂದರು. ಇದ್ದಕ್ಕಿದ್ದಂತೆ, ನಮ್ಮನ್ನೆಲ್ಲಾ ಆಯತಪ್ಪಿಸಿ ಬೀಳಿಸುತ್ತಾ ಟ್ರಕ್ ಸರ್ರನೆ ಹೊರಟೇಬಿಟ್ಟಿತು. ದ್ವಾರಗಳಲ್ಲಿ ಬೆಂಕಿಯಲ್ಲಿ ಚಳಿಕಾಯಿಸಿಕೊಳ್ಳುತ್ತಿದ್ದ ಸೈನಿಕರನ್ನು ದಾಟಿ ಹೋದೆವು. ಮುಖ್ಯರಸ್ತೆಗಳನ್ನು ಹಾದು ನಮ್ಮ ಗಾಡಿ ವೇಗವಾಗಿ ಸಾಗುತ್ತಿತ್ತು. ಒಬ್ಬಾತ ಹೊರೆಯೊಂದನ್ನು ಬಿಚ್ಚಿ ಅದರಲ್ಲಿದ್ದ ಕರಪತ್ರಗಳನ್ನು ಗಾಳಿಗೆ ತೂರಿದ. ನಾವೂ ಸಹ ಅವನು ಮಾಡಿದಂತೆಯೇ ಮಾಡಿದೆವು. ಕತ್ತಲಲ್ಲಿ ಬಿಳಿ ಕಾಗದಗಳು ಗಾಳಿಯಲ್ಲಿ ತಿರುಗುತ್ತಾ ಹೋದವು. ತಡರಾತ್ರಿಯಲ್ಲೂ ಓಡಾಡುತ್ತಿದ್ದ ಕೆಲವು ಜನ, ಗಸ್ತು ಹಾಕುತ್ತಿದ್ದ ಸೈನಿಕರು ಓಡಿಬಂದು ಅವುಗಳನ್ನು ಹೆಕ್ಕಿಕೊಂಡರು. ಅಲ್ಲಲ್ಲಿ ಕೆಲವು ಸೈನಿಕರು ಬಂದೂಕು ಎತ್ತಿ "ನಿಲ್ಲಿ, ನಿಲ್ಲಿ" ಎಂದರೂ ನಮ್ಮ ಚಾಲಕ ಉತ್ತರವಾಗಿ ಏನೋ ಅರಚುತ್ತಿದ್ದ. ನಮ್ಮ ಟ್ರಕ್ ಅಂತೂ ನಿಲ್ಲದೆ ಮುನ್ನುಗ್ಗುತ್ತಿತ್ತು.

ನಾನು ಒಂದು ಕರಪತ್ರವನ್ನು, ಬಂದು ಹೋಗುತ್ತಿದ್ದ ದೀಪದ ಕಂಬಗಳ ಮಂದ ಬೆಳಕಿನಲ್ಲಿ ಓದಿದೆ; ಅದನ್ನು ಸ್ವತಃ ಲೆನಿನ್‌ರವರೇ ಬರೆದಿದ್ದರು.

### ರಷ್ಯಾದ ನಾಗರಿಕರಿಗೆ

*ಹಂಗಾಮಿ ಸರ್ಕಾರವನ್ನು ಪದಚ್ಯುತಗೊಳಿಸಲಾಗಿದೆ. ಪೆತ್ರೋಗ್ರಾಡಿನ ಕಾವಲು ಸೈನಿಕ ದಳ ಹಾಗೂ ಕಾರ್ಮಿಕ ವರ್ಗದ ನಾಯಕತ್ವವನ್ನು ವಹಿಸಿರುವ ಮಿಲಿಟರಿ ಕ್ರಾಂತಿಕಾರಿ ಸಮಿತಿ ಹಾಗೂ ಕಾರ್ಮಿಕರ ಮತ್ತು ಸೈನಿಕರ ಪ್ರತಿನಿಧಿಗಳ ಪೆತ್ರೋಗ್ರಾಡ್ ಸೋವಿಯತ್‌ನ ಕೈಗೆ ರಾಜಕೀಯ ಅಧಿಕಾರವು ಹಸ್ತಾಂತರಗೊಂಡಿದೆ.*

*ಯಾವ ಉದ್ದೇಶಕ್ಕಾಗಿ ಜನತೆ ಹೋರಾಡುತ್ತಾ ಬಂದಿದ್ದರೋ, ಎಂದರೆ, ಜನತಾಂತ್ರಿಕ ಶಾಂತಿಯ ಸ್ಥಾಪನೆಗೆ ಕೂಡಲೇ ಪ್ರಸ್ತಾಪ ಮಾಡುವುದು, ಭೂಮಿಯ ಮೇಲೆ ಭೂಮಾಲೀಕರಿಗೆ ಇರುವ ಒಡೆತನದ ಹಕ್ಕುಗಳನ್ನು ರದ್ದುಪಡಿಸುವುದು, ಉತ್ಪಾದನೆಯ ಮೇಲೆ ಶ್ರಮಿಕರ ನಿಯಂತ್ರಣ, ಸೋವಿಯತ್ ಸರ್ಕಾರದ ಸ್ಥಾಪನೆ, ಇವೆಲ್ಲವನ್ನೂ ಈಗಾಗಲೇ ಭದ್ರವಾಗಿ ಸಾಧಿಸಿಕೊಳ್ಳಲಾಗಿದೆ.*

**ಕಾರ್ಮಿಕರ, ಸೈನಿಕರ ಹಾಗೂ ರೈತರ ಕ್ರಾಂತಿ ಚಿರಾಯುವಾಗಲಿ**

***ಮಿಲಿಟರಿ ಕ್ರಾಂತಿಕಾರಿ ಸಮಿತಿ***

**ಪೆತ್ರೋಗ್ರಾಡ್‌ನ ಕಾರ್ಮಿಕರ ಹಾಗೂ ಸೈನಿಕರ ಪ್ರತಿನಿಧಿಗಳ ಸೋವಿಯತ್**

ನನ್ನ ಪಕ್ಕದಲ್ಲಿ ಕುಳಿತಿದ್ದವನು ಆಡಿನ ಚರ್ಮದ ಮೇಲಂಗಿ ಧರಿಸಿದ್ದ ಮಂಗೋಲರ ಮುಖಚಹರೆಯವನು. ಅವನು "ಜಾಗ್ರತೆ, ಇಲ್ಲಿ ಗಲಾಟೆ ಶುರು ಮಾಡಬೇಕೆಂದು ಕಾಯುತ್ತಿರುವವರು ರಸ್ತೆಯ ಪಕ್ಕದ ಕಟ್ಟಡಗಳ ಕಿಟಕಿಗಳಿಂದ ಗುಂಡು ಹಾರಿಸುತ್ತಾರೆ" ಎಂದು ಎಚ್ಚರಿಸಿದ. ನಾವು ಅನೇಕ ರಸ್ತೆಗಳನ್ನೂ ಚೌಕಗಳನ್ನೂ ಹಾದು ಅಗಲವಾದ ನೆವ್‌ಸ್ಕಿ ಮುಖ್ಯಬೀದಿಗೆ ವೇಗವಾಗಿ ಬಂದೆವು. ಮೂವರು ಬಂದೂಕು ಹಿಡಿದು ಕಿಟಕಿಗಳತ್ತ ನೋಡುತ್ತಿದ್ದರು. ನಮ್ಮ ಹಿಂದೆ ರಸ್ತೆ ಲವಲವಿಕೆಯಿಂದಿತ್ತು. ಜನ ಬಗ್ಗಿಕೊಂಡು ಓಡುತ್ತಿದ್ದರು. ಫಿರಂಗಿಯ ಸದ್ದು ನಿಂತಿತ್ತು. ಚಳಿಗಾಲದ ಅರಮನೆ ಹತ್ತಿರವಾದಂತೆ ರಸ್ತೆಗಳು ಹೆಚ್ಚು ನಿಶ್ಶಬ್ದವೂ, ನಿರ್ಜನವೂ ಆದವು. ನಗರ ಡ್ಯೂಮಾ ಸೌಧವು ದೀಪಗಳಿಂದ ಬೆಳಗುತ್ತಾ ಉಜ್ವಲವಾಗಿತ್ತು. ಅದರಾಚೆ ಮಬ್ಬಾದ ಜನರ ಗುಂಪು. ಅಲ್ಲಿದ್ದ ಒಂದು ಸಾಲು ನಾವಿಕರು ನಮಗೆ ಗಾಡಿ ನಿಲ್ಲಿಸಲು ಗದರಿದರು. ನಾವು ಕೆಳಗಿಳಿದೆವು.

ಅಲ್ಲಿ ನಾವು ಕಂಡ ದೃಶ್ಯ ತುಂಬ ವಿಶೇಷವಾದದ್ದು. ಎಕಟೆರಿನಾ ಕಾಲುವೆಯ ಮೂಲೆಯಲ್ಲಿ, ವಿದ್ಯುದ್ದೀಪಗಳ ಕೆಳಗೆ ನೆವ್‌ಸ್ಕಿ ಮುಖ್ಯರಸ್ತೆಗೆ ಅಡ್ಡವಾಗಿ ಸಶಸ್ತ್ರ ನಾವಿಕರ ತಂಡವೊಂದು ನಿಂತಿತ್ತು. ನಾಲ್ಕು ನಾಲ್ಕು ಜನರ ಸಾಲಿನಲ್ಲಿ ನಿಂತ ಅವರು ಒಂದು ದೊಡ್ಡ ಜನರ ಗುಂಪನ್ನು ತಡೆಗಟ್ಟಲು ಪ್ರಯತ್ನಿಸುತ್ತಿದ್ದರು. ಅವರೆಲ್ಲಾ ಒಳ್ಳೆಯ ಫ್ರಾಕ್ ಕೋಟುಗಳನ್ನು ಧರಿಸಿದ ಗಂಡಸರು, ಅಧಿಕಾರಿಗಳು, ಚೆನ್ನಾಗಿ ಒಡವೆ ಬಟ್ಟೆ ಧರಿಸಿದ ಹೆಂಗಸರು. ಅವರಲ್ಲಿ ಕೆಲವರನ್ನು ನಾವು ಅಧಿವೇಶನದಲ್ಲಿ ಹಾಜರಿದ್ದ ಮೆನ್ಶೆವಿಕ್ ಮತ್ತು ಸೋಷಲಿಸ್ಟ್ ರೆವಲ್ಯೂಶನರಿ ಪಕ್ಷಗಳ ನಾಯಕರು ಎಂದು ಗುರುತಿಸಿದೆವು: ಒಂದಿಬ್ಬರು ಪದಚ್ಯುತ ಸಚಿವರು, ಊರಿನ ಮೇಯರ್ ಸಹ ಇದ್ದರು. ಪತ್ರಕರ್ತನೊಬ್ಬ ನನ್ನನ್ನು ಕಂಡು ನಗುತ್ತಾ "ಚಳಿಗಾಲದ ಅರಮನೆಯಲ್ಲಿ ಸಾಯಲಿಕ್ಕೆ ಹೋಗುತ್ತಿದ್ದೀರಾ" ಎಂದು ತಮಾಷೆ ಮಾಡಿದ. ನಾವಿಕರು ಎದುರಾದಾಗ ಮೆರವಣಿಗೆ ನಿಂತು, ವಾಗ್ವಾದ ಆರಂಭವಾಗಿತ್ತು. ಈ ನಾಯಕರುಗಳು, ಅಲ್ಲಿ ಅಡ್ಡ ನಿಂತಿದ್ದ ಕಟ್ಟುಮಸ್ತಾದ ನಾವಿಕನೊಬ್ಬನ ಮೇಲೆ ಹರಿಹಾಯುತ್ತಿದ್ದರು.

"ನಮ್ಮನ್ನ ಒಳಕ್ಕೆ ಬಿಡಲೇಬೇಕು. ಇಲ್ಲಿ ನೋಡಿ, ಈ ಸಂಗಾತಿಗಳು ನೇರವಾಗಿ ಸೋವಿಯತ್ ಅಧಿವೇಶನದಿಂದಾನೇ ಬರ್ತಿದ್ದಾರೆ. ಅವರ ಪಾಸುಗಳನ್ನು ನೋಡಿ. ನಾವು ಚಳಿಗಾಲದ ಅರಮನೆಯ ಒಳಗೆ ಹೋಗಲೇಬೇಕು" ಎಂದು ಅವರು ಆರ್ಭಟಿಸಿದರು.

ಆ ನಾವಿಕನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಅವನು ತಲೆ ಕೆರೆದುಕೊಂಡು "ಅರಮನೆಗೆ ಯಾರನ್ನೂ ಬಿಡಬಾರದೆಂದು ಆಜ್ಞೆಯಾಗಿದೆ. ಸ್ಮೋಲ್ನಿಗೆ ಫೋನ್ ಮಾಡಿ ಕೇಳ್ತೀವಿ" ಎಂದ.

"ನೋಡಿ, ನಾವು ಹೋಗಲೇಬೇಕು. ನಮ್ಮ ಕೈಲೇನೂ ಆಯುಧಗಳಿಲ್ಲ. ನೀವು ಅನುಮತಿ ಕೊಡಿ, ಬಿಡಿ, ನಾವು ಹೋಗೋರೆ" ಎಂದ, ಮುದುಕ ಮೇಯರ್ ಶ್ರೈಡರ್.

"ನನಗೆ ನಿಮ್ಮನ್ನ ಬಿಡೋಕೆ ಅನುಮತಿ ಇಲ್ಲ," ನಾವಿಕ ಸಿಡುಕಿದ. "ಬೇಕಿದ್ರೆ ನಮ್ಮ ಮೇಲೆ ಗುಂಡು ಹಾರಿಸಿ, ಚಿಂತೆಯಿಲ್ಲ. ನಾವು ಹೋಗಲೇಬೇಕು. ನಾವು ಸಾಯಕ್ಕೆ ತಯಾರಿದ್ದೀವಿ. ನಾವೂ ರಷ್ಯನ್ನರೇ. ಕಾಮ್ರೇಡ್‌ಗಳೇ ಹಾರಿಸಿ ಗುಂಡು ನೋಡೋಣ." ಎಲ್ಲಾ ಕಡೆಯಿಂದ ಅವರುಗಳು ಕೂಗುತ್ತಲೇ ಇದ್ದರು.

"ನಾವು ಮುಂದಕ್ಕೆ ಹೋಗೇ ಹೋಗ್ತೀವಿ. ನೀವೇನು ಮಾಡ್ತೀರ? ಕೊಲ್ತೀರಾ?"

"ಇಲ್ಲ, ನಿರಾಯುಧರಾದವರನ್ನ, ರಷ್ಯನ್ನರನ್ನ ನಾವು ಹೊಡೆಯೋಲ್ಲ."

"ನಾವು ಹೋಗೇ ಹೋಗ್ತೀವಿ. ಏನು ಮಾಡ್ತೀರ"?

"ಏನೋ ಒಂದು ಮಾಡ್ತೀವಿ. ನಿಮ್ಮನ್ನ ಬಿಡಕ್ಕಾಗಲ್ಲ. ಏನಾದ್ರೂ ಮಾಡೇ ಮಾಡ್ತೀವಿ."

"ಏನ್ಮಾಡ್ತೀರ? ಏನು, ಏನು ಮಾಡ್ತೀರ ಅಂತ?"

ಅಷ್ಟರಲ್ಲಿ ಅಲ್ಲಿಗೆ ಇನ್ನೊಬ್ಬ ನಾವಿಕ ಬಂದ. ಅವನಿಗೆ ರೇಗಿಹೋಗಿತ್ತು.

"ನಾಲಕ್ಕು ಬಾರಿಸ್ತೀವಿ." ಅವನು ಕೂಗಾಡಲಾರಂಭಿಸಿದ. ಮತ್ತೆ ಗುಂಡು ಹೊಡೀಲೇಬೇಕು ಅಂದ್ರೆ ಹೊಡೀತೀವಿ. ಈಗ ಸುಮ್ಮನೆ ಮನೆಗೆ ಹೋಗಿ. ನಮ್ಮ ಪಾಡಿಗೆ ನಮ್ಮನ್ನ ಬಿಡಿ." ಇದನ್ನ ಕೇಳಿ ಅವರಿಗೆಲ್ಲಾ ವಿಪರೀತ ಅಸಮಾಧಾನವಾಯ್ತು, ಸಿಟ್ಟೂ ಬಂತು. ಅದರಲ್ಲಿ ಒಬ್ಬ ಪ್ರಪೊಕೋವಿಚ್ ಅನ್ನೋನು ಒಂದು ಪೆಟ್ಟಿಗೆ ಮೇಲೆ ಹತ್ತಿ, ಕೈಯಲ್ಲಿದ್ದ ಕೆಂಡೆಯನ್ನು ಆಡಿಸುತ್ತಾ ಒಂದು ಭಾಷಣವನ್ನೇ ಬಿಗಿದ:

"ಕಾಮ್ರೇಡರೇ, ನಾಗರಿಕರೇ! ನಮ್ಮ ಮೇಲೆ ಬಲಪ್ರಯೋಗ ಮಾಡ್ತಿದ್ದಾರೆ. ಈ ಅಜ್ಞಾನಿಗಳು ನಮ್ಮ ಮುಗ್ಧರಕ್ತವನ್ನ ಹರಿಸೋಕೆ ನಾವು ಅವಕಾಶ ಕೊಡಬಾರದು. ಇಂಥವರ ಕೈಯಲ್ಲಿ ಹೀಗೆ ರಸ್ತೆಯಲ್ಲಿ ಗುಂಡು ಹೊಡೆಸಿಕೊಳ್ಳೋದು ನಮ್ಮ ಘನತೆಗೆ ತಕ್ಕದ್ದಲ್ಲ. ನಾವೀಗ ಡ್ಯೂಮಾಗೆ ವಾಪಸ್ ಹೋಗೋಣ. ಅಲ್ಲಿ ಕೂತು ದೇಶವನ್ನ, ಕ್ರಾಂತಿಯನ್ನ ಕಾಪಾಡೋದು ಹೇಗೆ ಅಂತ ಚರ್ಚಿಸೋಣ."

ಇದಾದನಂತರ ಅವರೆಲ್ಲಾ ಮೌನವಾಗಿ, ಸಾಧ್ಯವಾದಷ್ಟು ಘನತೆಯಿಂದ ಮತ್ತೆ ನೆವ್‌ಸ್ಕಿ ಮಾರ್ಗವಾಗೇ ಮೆರವಣಿಗೆಯಲ್ಲಿ ವಾಪಸಾದರು. ಹೀಗೆ ನಾವಿಕರ ಗಮನ ಬೇರೆ ಕಡೆಗೆ ತಿರುಗಿದ್ದಾಗ ನಾವು ಸದ್ದಿಲ್ಲದೆ ಚಳಿಗಾಲದ ಅರಮನೆಯ ಕಡೆಗೆ ನುಸುಳಿಕೊಂಡು ಹೋಗೇಬಿಟ್ಟೆವು.

ಅಲ್ಲೋ ಸಂಪೂರ್ಣ ಕತ್ತಲು. ಅಲ್ಲಿ ಗಸ್ತು ಹಾಕುತ್ತಿದ್ದ ಸೈನಿಕರು ಮತ್ತು ರೆಡ್‌ಗಾರ್ಡ್‌ಗಳನ್ನು ಬಿಟ್ಟರೆ ಇನ್ಯಾರೂ ಚಲಿಸುತ್ತಿರಲಿಲ್ಲ. ಕಜ಼ಾನ್ ಕೆಥಡ್ರಲ್‌ನ ಮುಂದೆ ಒಂದು ಫಿರಂಗಿ ಇತ್ತು. ಅದರಿಂದ ಚಾವಣಿಗಳ ಕಡೆಗೆ ಆಗಷ್ಟೇ ಗುಂಡು ಹಾರಿಸಿದ್ದರು. ಪ್ರತಿಯೊಂದು ಬಾಗಿಲಿನಲ್ಲೂ ಸೈನಿಕರು ನಿಂತು ಮೆಲ್ಲಗೆ ಮಾತಾಡಿಕೊಳ್ತಿದ್ದರು. ಯಾರೋ "ನಾವು ಮಾಡಿದ್ದು ಸರಿಹೋಗಲಿಲ್ಲವೇನೋ..." ಎಂದು ಗೊಣಗಿಕೊಳ್ಳುತ್ತಿದ್ದರು. ಮೂಲೆಗಳಲ್ಲಿ ತಪಾಸಣಾ ದಳಗಳು ಬರಹೋಗುವವರನ್ನು ಪರೀಕ್ಷಿಸುತ್ತಿದ್ದವು. ಪ್ರತಿ

ದಳದಲ್ಲೂ ಇದ್ದ ಸೈನಿಕರಿಗೆ ಒಬ್ಬ ರೆಡ್‌ಗಾರ್ಡ್ ನೇತೃತ್ವ ನೀಡಿದ್ದುದು ವಿಶೇಷವಾಗಿತ್ತು. ಗುಂಡು ಹಾರಿಸುವುದು ನಿಂತಿತ್ತು.

ನಾವು ಮೋರ್‌ಸ್ಕಯಾ ಬಳಿ ಬರುತ್ತಿದ್ದಂತೆ ಯಾರೋ ಕೂಗಿದರು, "ಆ ಯಂಕರ್‌ಗಳು ಸವಾಲು ಹಾಕಿದಾರೆ. ಅವರು ಶರಣಾಗಲ್ಲ. ತಾಕತ್ತಿದ್ರೆ ಬಂದು ಎಳಕೊಂಡು ಹೋಗಿ ನಮ್ಮನ್ನ ಅಂತ ಹೇಳಿಕಳಿಸಿದ್ದಾರೆ." ಕೂಡಲೇ ಆಜ್ಞೆಗಳು ಕೇಳಿಬಂದವು. ಕತ್ತಲಿನಲ್ಲಿ ಕಪ್ಪಾದ ಪಡೆಗಳು ದಾಳಿಗೆ ಹೊರಟವು. ನಾವೂ ಅವರೊಂದಿಗೆ ಸೇರಿಕೊಂಡೆವು. ಕಪ್ಪಾದ ನದಿಯೊಂದು ಹರಿದಂತೆ ನಾವೆಲ್ಲಾ ಕೆಂಪು ಕಮಾನನ್ನು ದಾಟಿ ಬಂದೆವು. ಯಾವುದೇ ಕ್ಷಣ ಗುಂಡು ಹಾರಿಸಬಹುದೆಂಬ ಎಚ್ಚರಿಕೆಯ ನಡುವೆ ನಾವು ಬಾಗುತ್ತಾ ಓಡಿ ಒಂದು ಪೀಠದ ಹಿಂದೆ ಜಾಗ್ರತೆಯಿಂದ ಕಾಯುತ್ತಾ ನಿಂತೆವು. ಏನೂ ದಾಳಿ ನಡೆಯದಿದ್ದಾಗ ಮತ್ತೆ ಮುಂದೆ ಹೊರಟೆವು.

ಚಳಿಗಾಲದ ಅರಮನೆ ಹತ್ತಿರವಾಯಿತು. ಅದರ ಬೆಳಕಿನಲ್ಲಿ ನಾನು ಅತ್ತ ಇತ್ತ ನೋಡಿದೆ. ದಾಳಿಯ ಮುಂಚೂಣಿಯಲ್ಲಿದ್ದ ಇನ್ನೂರು ಮುನ್ನೂರು ಜನ ಶಸ್ತ್ರಧಾರಿ ಕಾರ್ಮಿಕರು – ರೆಡ್‌ಗಾರ್ಡ್ಸ್. ಕೆಲವೇ ಜನ ಸೈನಿಕರಿದ್ದರಷ್ಟೇ. ಅವರು ಕಟ್ಟಿಗೆಯಿಂದ ಮಾಡಿದ್ದ ಅಡ್ಡಗೋಡೆಯನ್ನು ಎಗರಿಕೊಂಡು ಹೋದರು. ಅಲ್ಲಿ ಯಂಕರ್‌ಗಳು ಬಿಸಾಕಿದ್ದ ಬಂದೂಕಗಳ ರಾಶಿಯೇ ಇತ್ತು. ಹೆಬ್ಬಾಗಿಲು ಪೂರ್ತಿ ತೆರೆದಿತ್ತು. ಬೆಳಕು ಹೊರಗೆ ಹರಿದು ಬಂದಿತ್ತು. ಆದರೆ ಯಾವ ಸದ್ದೂ ಕೇಳುತ್ತಿರಲಿಲ್ಲ.

ಈ ಜನರ ಪ್ರವಾಹ ನಮ್ಮನ್ನೂ ತಳ್ಳಿಕೊಂಡು ಬಲಪಾರ್ಶ್ವದ ಬಾಗಿಲ ಮೂಲಕ ಸೌಧದ ಪೂರ್ವಭಾಗದ ನೆಲಮಾಳಿಗೆಯೊಳಗೆ ನುಗ್ಗಿತು. ಅಲ್ಲಿ ಪಡಸಾಲೆಗಳು, ಮಹಡಿ ಮೆಟ್ಟಿಲುಗಳೂ ಇದ್ದವು. ಎದುರಿಗೆ ಅನೇಕ ಪೆಟ್ಟಿಗೆಗಳು. ಕೆಲವು ಸೈನಿಕರು ಉತ್ಸಾಹದಿಂದ ಮೇಲೆ ಬಿದ್ದು ಬಂದೂಕದ ಹಿಡಿಯಿಂದ ಅವುಗಳನ್ನು ಒಡೆದು ತೆರೆದರು. ಅದರೊಳಗೆ ಬೆಲೆಬಾಳುವ ಬಟ್ಟೆಗಳು, ಪಾತ್ರೆಗಳು, ಅಲಂಕಾರದ ಸಾಮಾನುಗಳನ್ನು ಪೇರಿಸಲಾಗಿತ್ತು. ಒಬ್ಬ ಕಂಚಿನ ಗಡಿಯಾರವೊಂದನ್ನು ಹೆಗಲ ಮೇಲಿಟ್ಟುಕೊಂಡು ವಿಚಿತ್ರವಾಗಿ ಓಡಾಡ ತೊಡಗಿದರೆ, ಇನ್ನೊಬ್ಬ ಬೆಲೆಬಾಳುವ ಹಕ್ಕಿಪುಕ್ಕಗಳನ್ನು ತನ್ನ ಟೋಪಿಗೆ ಸಿಕ್ಕಿಸಿಕೊಂಡ. ಲೂಟಿ ಆರಂಭವಾಗತೊಡಗಿತ್ತು. ಅಷ್ಟರಲ್ಲಿ ಯಾರೋ ಕೂಗಿದರು. "ಕಾಮ್ರೇಡ್ಸ್, ಯಾರೂ ಏನನ್ನೂ ತೆಗೆದುಕೊಳ್ಳಬಾರದು. ಇದು ಜನತೆಯ ಆಸ್ತಿ. ವಾಪಸ್ ಅದೇ ಜಾಗದಲ್ಲಿಡಿ." ಮರುಕ್ಷಣವೇ ಅದೇ ಮಾತು ಪ್ರತಿಧ್ವನಿಸುತ್ತಾ ಹೋಯಿತು. ಸಾಮಾನು ಗಳನ್ನು ಸಂಗ್ರಹಿಸಿ ಮತ್ತೆ ಅಲ್ಲೇ ಇರಿಸಲಾಯಿತು. "ಕ್ರಾಂತಿಕಾರಿ ಶಿಸ್ತು, ಜನತೆಯ ಆಸ್ತಿ" ಎಂಬ ಮಾತುಗಳೇ ಎಲ್ಲೆಡೆ ಕೇಳಿಸಲಾರಂಭಿಸಿದವು. ಅನೇಕರು ಆಸ್ತಿಯ ರಕ್ಷಕರಾಗಿ ತಾವೇ ನಿಂತುಬಿಟ್ಟರು. ಎಡಗಡೆಯ ದ್ವಾರಕ್ಕೆ ಬಂದೆವು. ಅಲ್ಲಿ "ಬನ್ನಿ ಕಾಮ್ರೇಡರೇ, ನಾವು ಕಳ್ಳಕಾಕರಲ್ಲ, ಲೂಟಿಕೋರರಲ್ಲ ಎಂಬುದನ್ನು ಜಗತ್ತಿಗೆ ಸಾರಿಹೇಳೋಣ. ಕಮಿಸಾರ್‌ಗಳನ್ನು ಬಿಟ್ಟು ಉಳಿದವರೆಲ್ಲರೂ ಹೊರನಡೆಯೋಣ" ಎಂದು ಒಬ್ಬ ರೆಡ್‌ಗಾರ್ಡ್ ಕೂಗಿಹೇಳಿದ.

ಅಲ್ಲೇ ಪಕ್ಕದಲ್ಲಿ ರೆಡ್‌ಗಾರ್ಡ್‌ಗಳು, ಒಬ್ಬ ಅಧಿಕಾರಿ ಪಿಸ್ತೂಲುಗಳನ್ನು ಹಿಡಿದು ತಪಾಸಣೆಗೆ ನಿಂತಿದ್ದರು. ಅಲ್ಲೊಂದು ಮೇಜಿನ ಮೇಲೆ ಕಾಗದ ಪೆನ್ನು ಹಿಡಿದು ಕೆಲವರು ಸಾಮಾನಿನ ಪಟ್ಟಿಮಾಡಲು ಕುಳಿತಿದ್ದರು. ಸೈನಿಕರು ಹೊರಬರುತ್ತಿದ್ದಂತೆ ತಪಾಸಣೆಗೆ ತಮ್ಮನ್ನೇ ನಿಯೋಜಿಸಿಕೊಂಡಿದ್ದ ಸ್ವಯಂಸೇವಕರು ಪ್ರತಿಯೊಬ್ಬರನ್ನೂ ನಿಲ್ಲಿಸಿ

ಶೋಧಿಸಲಾರಂಭಿಸಿದರು. ಅವರದಲ್ಲ ಎನಿಸಿದ ಪ್ರತಿ ವಸ್ತುವನ್ನೂ ಹೊರತೆಗೆದು ಲೆಕ್ಕ ಬರೆದಾದ ಮೇಲೆ ಪಕ್ಕದ ಕೋಣೆಗೆ ಸಾಗಿಸಲಾಯಿತು. ಅಲ್ಲಿ ಸಿಕ್ಕಿದ ವಸ್ತುಗಳ ವೈವಿಧ್ಯತೆ ಅಚ್ಚರಿ ಹುಟ್ಟಿಸುವಂತಿತ್ತು. ವಿಗ್ರಹಗಳು, ಇಂಕ್‌ಬಾಟಲಿ, ಬೆಡ್‌ಶೀಟು, ತೈಲಚಿತ್ರ, ಚಿನ್ನದ ಹಿಡಿ ಇದ್ದ ಕತ್ತಿ, ಕಡೆಗೆ ಸಾಬೂನುಗಳು ಸಹ! ಇದನ್ನು ಜೇಬಿನಲ್ಲಿ ತುರುಕಿಕೊಂಡು ಬಂದು ಈಗ ಸಿಕ್ಕಿಹಾಕಿಕೊಂಡವರು ಶಾಲಾಮಕ್ಕಳ ಹಾಗೆ ಬೇಸರದ ಮುಖದಿಂದಲೇ ಅವುಗಳನ್ನು ಒಪ್ಪಿಸಿದರು ಅಥವಾ ಬೇಡಿಕೊಳ್ಳುತ್ತಿದ್ದರು. ಸಮಿತಿಯ ಸದಸ್ಯರು ಜನತೆಯ ಪರವಾದ ಹೋರಾಟಗಾರರಿಗೆ ಇಂಥ ಕಳುವು ಮಾಡುವ ಪ್ರವೃತ್ತಿ ಸರಿಹೊಂದದೆಂದು ವಿವರಿಸುತ್ತಿದ್ದರು. ಕೆಲವರು ಮನಸ್ಸು ಬದಲಾಯಿಸಿಕೊಂಡು ತಾವೂ ತಪಾಸಣೆಯಲ್ಲಿ ಸ್ವಯಂಸೇವಕರಾದದ್ದೂ ಉಂಟು!

ಯಂಕರ್‌ಗಳು ಶರಣಾಗಿ ಗುಂಪು ಗುಂಪಾಗಿ ಹೊರಬಂದರು. ಸಮಿತಿಯು ಉತ್ಸಾಹದಿಂದ ಅವರನ್ನು "ಕೊರ್ನಿಲೊವ್‌ನ ಏಜಂಟರು, ಕ್ರಾಂತಿವಿರೋಧಿಗಳು" ಎಂದು ಬಯ್ಯುತ್ತಾ ತಪಾಸಣೆ ಮಾಡಿತು. ಅವರ ಜೇಬಿನಲ್ಲೂ ಕದ್ದವಸ್ತುಗಳು ದೊರಕಿದವು. ಸುತ್ತ ನೆರೆದವರು "ಇನ್ನೊಂದು ಸಲ ಜನತೆಯ ವಿರುದ್ಧ ಆಯುಧಗಳನ್ನು ಹಿಡೀತೀರಾ ಹೇಳಿ" ಎಂದು ದಬಾಯಿಸಿ ಕೇಳುತ್ತಿದ್ದರು. ಪ್ರತಿಯೊಬ್ಬ ಯಂಕರ್‌ನೂ 'ಇಲ್ಲ' ಎಂದ ಮೇಲೆ ಅವರನ್ನು ನಿರಾಯುಧರನ್ನಾಗಿಸಿ ಬಿಟ್ಟುಬಿಡಲಾಯಿತು.

ನಾವು ಒಳಗೆ ಹೋಗಲು ಅನುಮತಿ ಕೇಳಿದೆವು. ಸಮಿತಿಗೆ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಯಿತು. 'ನೀವು ಕೊರ್ನಿಲೊವ್‌ನ ಕಡೆಯವರಲ್ಲ ಎಂದು ನಮಗೆ ಹೇಗೆ ಗೊತ್ತು' ಎಂದು ಒಬ್ಬ ರೆಡ್‌ಗಾರ್ಡ್ ಪ್ರಶ್ನಿಸಿದ. ನಮ್ಮ ಗುಂಪಿನಲ್ಲಿ ಐವರು ಪತ್ರಕರ್ತರಿದ್ದೆವು, ಅದರಲ್ಲಿ ಇಬ್ಬರು ಮಹಿಳೆಯರು.

'ಕಾಮ್ರೇಡ್ಸ್, ದಾರಿಬಿಡಿ, ದಾರಿಬಿಡಿ' ಎನ್ನುತ್ತಾ ಬಯೋನೆಟ್ ಸಿಕ್ಕಿಸಿಕೊಂಡ ಸೈನಿಕರು ಬಾಗಿಲಿನಲ್ಲಿ ಕಾಣಿಸಿಕೊಂಡರು. ಅವರ ಹಿಂದೆ ಹಂಗಾಮಿ ಸರ್ಕಾರದ ಆರು ಜನ ನಾಯಕರು ಬಂದರು. ಬಿಳಿಚಿಕೊಂಡ, ತಣ್ಣಗಿದ್ದ ಮೋರೆಗಳು, ವಿಜಯೀ ಕ್ರಾಂತಿಕಾರಿಗಳು ಅವರನ್ನು ನೋಡಲು ಸುತ್ತುವರೆದರೂ ಕೂಡ ಒಂದೆರಡು ಸಿಟ್ಟಿನ ಗೊಣಗಾಟ ಬಿಟ್ಟರೆ ಅಹಿತಕರವಾದದ್ದೇನೂ ನಡೆಯಲಿಲ್ಲ. ರಸ್ತೆಯಲ್ಲೇನೋ ಅವರನ್ನು ಜನ ಬಲಿಹಾಕಲು ಯತ್ನಿಸಿದರಂತೆ. ಆದರೆ ನಾವಿಕರು ಗುಂಡು ಹಾರಿಸಿ, ಪರಿಸ್ಥಿತಿಯನ್ನು ನಿಯಂತ್ರಿಸಿ ಅವರನ್ನು ಸುರಕ್ಷಿತವಾಗಿ ಪೀಟರ್–ಪಾಲ್ ಕೋಟೆಗೆ ಒಯ್ದರೆಂಬುದನ್ನು ನಾವು ಆಮೇಲೆ ತಿಳಿದುಕೊಂಡೆವು.

ಅಷ್ಟರಲ್ಲಿ ನಾವು ಅಡ್ಡಿಪಡಿಸುವವರಿಲ್ಲದೆ ಸುಲಭವಾಗಿ ಅರಮನೆಯನ್ನು ಪ್ರವೇಶಿಸಿದೆವು. ವರ್ಣಚಿತ್ರಗಳು, ಶಿಲ್ಪಗಳು, ರತ್ನಗಂಬಳಿಗಳು ಮುಂತಾದ ಬೆಲೆಬಾಳುವ ವಸ್ತುಗಳನ್ನು ಯಾರೂ ಮುಟ್ಟಿರಲಿಲ್ಲ. ಕಛೇರಿಗಳಲ್ಲಿ ಮಾತ್ರ ಕಾಗದಗಳು, ದಾಖಲೆಗಳು ಅಸ್ತವ್ಯಸ್ತವಾಗಿ ಬಿದ್ದಿದ್ದವು. ವಾಸದ ಕೋಣೆಗಳಲ್ಲಿ ಮಾತ್ರ ಹಾಸಿಗೆಯ ಮೇಲಿನ ಬಟ್ಟೆಗಳನ್ನು ಹರಿದು ಕೊಂಡಿದ್ದರು. ತುಂಬ ಲೂಟಿಯಾಗಿದ್ದ ಅಮೂಲ್ಯ ವಸ್ತುವೆಂದರೆ ಬಟ್ಟೆ ! ಅಂದಿನ ದಿನಗಳಲ್ಲಿ ದುಡಿಯುವ ಜನಕ್ಕೆ ಅದು ತೀರಾ ಅಗತ್ಯವಾಗಿತ್ತು. ಇನ್ನೊಂದು ಕಡೆ ಇಬ್ಬರು ಸೈನಿಕರು ಕುರ್ಚಿಯ ಚರ್ಮದ ಹೊದಿಕೆಗಳನ್ನು ಬೂಟು ಹೊಲಿದುಕೊಳ್ಳಲಿಕ್ಕಾಗಿ ಹರಿದುಕೊಳ್ಳುತ್ತಿದ್ದರು.

ಅಲ್ಲಲ್ಲಿ ನಮ್ಮನ್ನು ಪ್ರವೇಶಿಸಬೇಡಿ ಎಂದು ವ್ಯರ್ಥವಾಗಿ ಮನವಿಮಾಡಿಕೊಳ್ಳುತ್ತಿದ್ದ ಅರಮನೆಯ ಸೇವಕರು ನಿಂತಿದ್ದರು. ಹಳೆಯ ಕಾಲದ ಸಮವಸ್ತ್ರ ಧರಿಸಿದ್ದ ಅವರೆಲ್ಲಾ ಹೆದರಿಹೋಗಿದ್ದರು. ನಾವು ಆ ಹೊತ್ತಿನವರೆಗೂ ಸಚಿವ ಸಂಪುಟದ ಸಭೆ ನಡೆದಿದ್ದ ಭವ್ಯವಾದ ಕೋಣೆಗೆ ಬಂದೆವು. ಉದ್ದವಾದ ಮೇಜು, ಸುತ್ತಲೂ ಕುರ್ಚಿಗಳು. ಅದರಲ್ಲಿ ಕುಳಿತಿದ್ದ ಮಂತ್ರಿಗಳ ಎದುರಿನಲ್ಲಿರಿಸಿದ್ದ ಕಾಗದದ ಮೇಲೆ ಅವರು ಏನೇನೋ ಬರೆದಿದ್ದರು. ಮೊದಲೆಲ್ಲಾ ಕಾರ್ಯಕ್ರಮಗಳು, ಆಜ್ಞೆಗಳು, ಪ್ರಣಾಲಿಕೆಗಳು ಮುಂತಾದ ಗಂಭೀರ ವಿಷಯಗಳನ್ನು ಬರೆಯುತ್ತಿದ್ದ ಅವರೆಲ್ಲಾ ನಂತರ ತಮ್ಮ ಯೋಜನೆಗಳೆಲ್ಲ ನಿಷ್ಫಲ ಎಂದು ತಿಳಿದ ಮೇಲೆ ಅನ್ಯಮನಸ್ಕರಾಗಿ ಏನೇನೋ ಚಿತ್ರಗಳನ್ನು ಅವುಗಳಲ್ಲಿ ಗೀಚಿದ್ದರು.

ಈ ಇಡೀ ಸಮಯದಲ್ಲಿ ಚಳಿಗಾಲದ ಅರಮನೆಯ ಸುತ್ತ ಮುತ್ತಿಗೆಯಿದ್ದರೂ ಹಂಗಾಮಿ ಸರ್ಕಾರವು ಯುದ್ಧಭೂಮಿಯಲ್ಲಿನ ಮಿಲಿಟರಿ ಅಧಿಕಾರಿಗಳ ಜೊತೆಯಲ್ಲಿ, ರಷ್ಯಾದ ದೂರದ ಪ್ರದೇಶಗಳೊಡನೆ ನಿರಂತರ ಸಂಪರ್ಕದಲ್ಲಿತ್ತು. ಅರಮನೆಯ ಅಟ್ಟದಲ್ಲೊಬ್ಬ ತರುಣ ಅಧಿಕಾರಿ ಟೆಲಿಗ್ರಾಫ಼ಿನ ಮೂಲಕ ಸರ್ಕಾರಿ ಆಜ್ಞೆಗಳನ್ನು ಪ್ರಸಾರ ಮಾಡುತ್ತಲೇ ಇದ್ದ. ಅರಮನೆ ರೆಡ್‌ಗಾರ್ಡ್‌ಗಳ ವಶವಾದದ್ದು ತಿಳಿದಾಗ ಎದ್ದು ತಲೆಯ ಮೇಲೆ ಹ್ಯಾಟು ಧರಿಸಿ ಆತ ಆರಾಮವಾಗಿ ಹೊರಗೆ ನಡೆದೇಬಿಟ್ಟ!

*    *    *

ಸುತ್ತಲಿನ ದೃಶ್ಯಗಳನ್ನು ನೋಡುವುದರಲ್ಲಿ ತನ್ಮಯರಾಗಿದ್ದ ನಮಗೆ, ನಮ್ಮ ಕುರಿತು ಅಲ್ಲಿದ್ದ ಸೈನಿಕರು ಹಾಗೂ ರೆಡ್‌ಗಾರ್ಡ್‌ಗಳ ಧೋರಣೆ ಬದಲಾಗುತ್ತಿದೆ ಎಂಬುದು ಬಹಳ ಹೊತ್ತು ಅರಿವಿಗೆ ಬರಲೇ ಇಲ್ಲ. ಕೋಣೆಯಿಂದ ಕೋಣೆಗೆ ನಾವು ಹೋಗುತ್ತಿದ್ದಾಗ ನಮ್ಮನ್ನು ಹಿಂಬಾಲಿಸಿ ಬರುತ್ತಿದ್ದ ಗುಂಪು ಹಿಗ್ಗುತ್ತಾ ಹೋಯಿತು. ಕಡೆಗೆ ನಾವು ಚಿತ್ರಪಟಗಳ ಗ್ಯಾಲರಿಯನ್ನು ತಲುಪಿದಾಗ ನಮ್ಮ ಹಿಂದೆ ಸುಮಾರು ನೂರು ಜನ ನಮ್ಮನ್ನು ತಳ್ಳಿಕೊಂಡೇ ಬಂದರು. ನಮಗೆ ಅಡ್ಡವಾಗಿ ನಿಂತ ದೈತ್ಯಾಕಾರದ ಸೈನಿಕನ ಮುಖದಲ್ಲಿ ರೋಷ, ಸಂಶಯ ತುಂಬಿ ತುಳುಕುತ್ತಿದ್ದವು.

"ಯಾರು ನೀವು? ಇಲ್ಲಿ ಏನು ಮಾಡುತ್ತಿದ್ದೀರ?" ಅವನು ಗದರಿಸಿದ. ನಮ್ಮ ಸುತ್ತಲೂ ನೆರೆದಿದ್ದ ಜನ ಸಿಟ್ಟಿನಿಂದ ಒತ್ತೊತ್ತಿಕೊಂಡು ಬರುತ್ತಿದ್ದರು. ಯಾರೋ "ಶತ್ರುಗಳ ಏಜೆಂಟರು" ಎಂದರು. ಇನ್ಯಾರೋ 'ಲೂಟಿಕೋರರು' ಎಂದರು. ನಾನು ನಮ್ಮ ಬಳಿ ಇದ್ದಂಥ ಮಿಲಿಟರಿ ಕ್ರಾಂತಿಕಾರಿ ಸಮಿತಿ ನೀಡಿದ್ದ ಪಾಸುಗಳನ್ನು ಆ ಸೈನಿಕನಿಗೆ ನೀಡಿದೆ. ಅವನೋ ಅನಕ್ಷರಸ್ಥ. ಅದನ್ನು ತಲೆಕೆಳಗಾಗಿ ಹಿಡಿದು ನೋಡಿದ. 'ಕಾಗದ ಪತ್ರಗಳು' ಎಂದು ತಿರಸ್ಕಾರದಿಂದ ಬೈದು ನೆಲದ ಮೇಲೆ ಉಗುಳಿದ. ರೋಷಗೊಂಡ ದನಗಳ ಮಧ್ಯದಲ್ಲಿ ಸಿಕ್ಕಿಕೊಂಡ ದನಕಾಯುವವನ ಪರಿಸ್ಥಿತಿಯಲ್ಲಿ ನಾವಿದ್ದೆವು. ಇವರುಗಳ ಆಚೆ ಅವರ ಅಧಿಕಾರಿಯೊಬ್ಬನನ್ನು ಕಂಡು ನಾನು ಅವನನ್ನು ಇತ್ತ ಕರೆದೆ.

"ನಾನೊಬ್ಬ ಕಮಿಸಾರ್. ನೀವು ಯಾರು? ಏನು ನಡೆಯುತ್ತಿದೆ?" ಎಂದು ಅವನು ಕೇಳಿದ. ಎಲ್ಲರೂ ನಮ್ಮತ್ತ ನೋಡುತ್ತಾ ನಿಂತರು. ನಾನು ನಮ್ಮ ಪಾಸುಗಳನ್ನು ಆತನಿಗೆ ತೋರಿಸಿದೆ.

"ನೀವು ವಿದೇಶೀಯರೇನು?" ಎಂದು ಫ್ರೆಂಚ್ ಭಾಷೆಯಲ್ಲಿ ಕೇಳಿದ. "ಇದು ವಿಪರೀತ ಅಪಾಯಕಾರಿ..." ಎನ್ನುತ್ತಾ ಜನರತ್ತ ತಿರುಗಿ, ನಮ್ಮ ಪಾಸುಗಳನ್ನು ಎತ್ತಿತೋರಿಸಿ

ಜೋರಾಗಿ ಹೇಳಿದ: "ಕಾಮ್ರೇಡ್ಸ್, ಇವರೆಲ್ಲಾ ವಿದೇಶದಿಂದ ಬಂದಿರುವ ಸಂಗಾತಿಗಳು. ಅಮೆರಿಕಾದವರು. ಅವರು ಇಲ್ಲಿನ ಕಾರ್ಮಿಕ ವರ್ಗದ ಸೈನ್ಯದ ಧೈರ್ಯದ ಬಗ್ಗೆ, ಕ್ರಾಂತಿಕಾರಿ ಶಿಸ್ತಿನ ಬಗ್ಗೆ ತಮ್ಮ ದೇಶದ ಜನರಿಗೆ ವರದಿ ಮಾಡಲು ಬಂದಿದ್ದಾರೆ."

ಆದರೆ ಆ ದೈತ್ಯ ಸೈನಿಕ ಸುಮ್ಮನಾಗಲಿಲ್ಲ. "ಹೇಗೆ ಹೇಳ್ತಿಯಾ? ನಾನು ಹೇಳ್ತೀನಿ ಕೇಳು, ಅವರು ಏಜೆಂಟರು. ಶಿಸ್ತು ನೋಡಕ್ಕೆ ಬಂದೋರು ಅರಮನೆ ಪೂರ್ತಿ ಸುತ್ತಾಡ್ತಿದ್ದಾರೆ. ಅವರ ಜೇಬು ತುಂಬ ಲೂಟಿ ಹೊಡೆದ ಏನೇನು ಸಾಮಾನು ಇದೆಯೋ ಯಾರಿಗೆ ಗೊತ್ತು."

"ಸರಿಯಾಗಿ ಹೇಳಿದೆ" ಎನ್ನುತ್ತಾ ಜನ ಇನ್ನಷ್ಟು ಹತ್ತಿರ ಬಂದರು. ಅಧಿಕಾರಿಯ ಮುಖದಲ್ಲಿ ಬೆವರು ಕಾಣಿಸತೊಡಗಿತು. ಆತ ಜನರಿಗೆ ಮನವಿ ಮಾಡಿಕೊಳ್ಳಲಾರಂಭಿಸಿದ. "ನೋಡಿ, ನಾನು ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಮಿಸಾರ್. ನೀವು ನನ್ನನ್ನು ನಂಬುತ್ತೀರ ಅಲ್ವಾ? ಇಲ್ನೋಡಿ, ನನ್ನನ್ನು ನೇಮಕ ಮಾಡಿದ ಪಾಸ್ ಮೇಲಿರೋ ರುಜುಗಳೇ ಇವರ ಪಾಸ್‌ಗಳ ಮೇಲೂ ಇವೆ."

ಅಂತೂ ಇಂತೂ ಆತ ನಮ್ಮನ್ನು ಬಿಡಿಸಿಕೊಂಡು ಅರಮನೆಯಿಂದ ಹೊರಗೆ ಕರೆತಂದ, ದಾರಿಯುದ್ದಕ್ಕೂ ಮೆಲ್ಲನೆ ಅವನು ಗೊಣಗುತ್ತಲೇ ಇದ್ದ.

"ಕೂದಲ ಎಳೆಯ ಅಂತರದಲ್ಲಿ ನಿಮ್ಮ ಜೀವ ಉಳೀತು ಅಷ್ಟೇ."

"ಅದೇನೋ ಮಹಿಳಾ ಯೋಧರ ಪಡೆಗಳಿವೆ ಅಂತಿದ್ರಲ್ಲಾ, ಅವೆಲ್ಲಾ ಏನಾಯ್ತು?" ಎಂದು ನಾವು ಅವನನ್ನು ಕೇಳಿದೆವು.

"ಓಹ್ ಆ ಹೆಂಗಸರಾ?" ಅವನು ನಗುತ್ತಾ ಮುಂದುವರೆಸಿದ. "ಅವರೆಲ್ಲಾ ಹಿಂದಿನ ಕೋಣೇಲಿ ಸೇರಿಕೊಂಡಿದ್ರು. ನಮಗೆ ಅವರನ್ನ ಏನು ಮಾಡೋದೂ ಅಂತ ತೋಚಲಿಲ್ಲ. ಕೆಲವರು ತುಂಬ ಭಾವೋದ್ರೇಕದಲ್ಲಿದ್ರು. ಕಡೆಗೆ ರೈಲು ಹತ್ತಿಸಿ ಅವರಿಗೇಂತ ಶಿಬಿರ ಇರೋ ಕಡೆಗೆ ಕಳಿಸಿದ್ವಿ."

ನಾವು ಹೊರಗೆ ತಣ್ಣಗಿದ್ದ, ಬೆದರಿಕೆ ತುಂಬಿದ್ದ ರಾತ್ರಿಗೆ ಕಾಲಿಟ್ಟೆವು. ಅಸ್ಪಷ್ಟವಾಗಿ ಕಾಣುತ್ತಿದ್ದ ಸೈನ್ಯಗಳ ಚಲಿಸುವ ಸದ್ದು. ಗಸ್ತುಪಡೆಗಳಿಂದ ವಿದ್ಯುತ್ ಸಂಚಾರವಾದಂಥ ವಾತಾವರಣ, ನದಿಯ ಆಚೆ ಮಬ್ಬಾಗಿ ಕಾಣುವ ಪೀಟರ್ – ಪಾಲ್ ಕೋಟೆ. ಅಲ್ಲಿಂದ ಯಾರೋ ಒಡೆದ ದನಿಯಲ್ಲಿ ಕೂಗಿದ ಸದ್ದು. ರಸ್ತೆಯ ಪಕ್ಕದ ಕಾಲುದಾರಿಯ ಮೇಲೆ ಅರಮನೆಯಿಂದ ಉದುರಿದ ಗಾರೆಯ ಪುಡಿ. ನದಿಯ ಕಡೆಯಿಂದ ಕ್ರಾಂತಿಕಾರಿಗಳ ಅರೋರಾ ಹಡಗು ಫಿರಂಗಿ ಹಾರಿಸಿದಾಗ ಗುಂಡೇಟಿನಿಂದ ಉದುರಿದ್ದದ್ದು. ದಾಳಿಯಲ್ಲಿ ಅರಮನೆ ಅನುಭವಿಸಿದ ಪೆಟ್ಟು ಅಷ್ಟು ಮಾತ್ರ.

ಇಷ್ಟು ಹೊತ್ತಿಗೆ ಮುಂಜಾವು ಮೂರು ಘಂಟೆಯಾಗಿತ್ತು. ಆಗಲೇ ನೆವ್‌ಸ್ಕಿ ರಾಜಮಾರ್ಗದಲ್ಲಿ ಮತ್ತೆ ಬೀದಿದೀಪಗಳು ಉರಿಯುತ್ತಿದ್ದವು. ಫಿರಂಗಿಗಳನ್ನು ಆಗಲೇ ಸಾಗಿಸಿಬಿಟ್ಟಿದ್ದರು. ಅಲ್ಲಿ ಯುದ್ಧ ನಡೆದಿತ್ತು ಎಂಬುದಕ್ಕೆ ಗುರುತೆಂದರೆ ಚಳಿಯಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತಿದ್ದ ಸೈನಿಕರು ಮತ್ತು ರೆಡ್‌ಗಾರ್ಡ್‌ಗಳು ಮಾತ್ರ. ನಗರ ನಿಃಶಬ್ದವಾಗಿತ್ತು. ಪ್ರಾಯಶಃ ಇತಿಹಾಸದಲ್ಲೇ ಎಂದೂ ಇಷ್ಟು ನಿಃಶಬ್ದವಾಗಿರಲಿಕ್ಕಿಲ್ಲ. ಆ ದಿನ ರಾತ್ರಿ ಇಡೀ ನಗರದಲ್ಲಿ ಎಲ್ಲೂ ಕಳ್ಳರು ಅಡ್ಡಗಟ್ಟಿದ್ದಿಲ್ಲ, ಢಕಾಯಿತಿ ಇಲ್ಲ.

ಆದರೆ ನಗರದ ಡ್ಯೂಮಾ ಸೌಧದಲ್ಲಿ ದೀಪಗಳು ಉರಿಯುತ್ತಿದ್ದವು. ನಾವು ಗ್ಯಾಲರಿಯಿದ್ದ ಅಲೆಗ್ಸಾಂಡರ್ ಸಭಾಂಗಣಕ್ಕೆ ಪ್ರವೇಶಿಸಿದೆವು. ಗೋಡೆಗಳ ಮೇಲೆ ಚಿನ್ನದ ಕಟ್ಟು, ಇಳಿಬಿಟ್ಟ ಕೆಂಪು ಪರದೆಗಳು ಇದ್ದ ರಾಜಮಹಾರಾಜರ ಚಿತ್ರಗಳಿದ್ದವು. ಸ್ಕೊಬೆಲೆವ್ ವೇದಿಕೆಯ ಮೇಲೆ ಮಾತನಾಡುತ್ತಿದ್ದ. ಸುತ್ತಲೂ ಸುಮಾರು ನೂರು ಜನ ಸೇರಿದ್ದರು. ಸಾರ್ವಜನಿಕ ಸುರಕ್ಷತಾ ಸಮಿತಿಯಲ್ಲಿ ಎಲ್ಲಾ ಬೋಲ್ಶೆವಿಕ್ ವಿರೋಧಿ ಶಕ್ತಿಗಳನ್ನು ಸೇರಿಸಿಕೊಂಡು ಅದಕ್ಕೆ 'ದೇಶದ ಹಾಗೂ ಕ್ರಾಂತಿಯ ವಿಮೋಚನಾ ಸಮಿತಿ' ಎಂದು ಹೆಸರಿಡಬೇಕು ಎಂಬುದು ಅವನ ಸಲಹೆ. ನೋಡು ನೋಡುತ್ತಿದ್ದಂತೆಯೇ ಅಂಥದೊಂದು ಸಮಿತಿಯ ರಚನೆಯೂ ಆಗೇಹೋಯಿತು. ಅದು ಮುಂದಿನ ದಿನಗಳಲ್ಲಿ ಪ್ರಬಲ ಬೋಲ್ಶೆವಿಕ್ ವಿರೋಧಿ ಶಕ್ತಿಯಾಯಿತು. ಒಮ್ಮೊಮ್ಮೆ ಅದು 'ಸಾರ್ವಜನಿಕ ಸುರಕ್ಷತಾ ಸಮಿತಿ'ಯ ಹೆಸರಿನಲ್ಲಿ ಕೆಲಸ ಮಾಡಿದ್ದೂ ಉಂಟು.

ಆ ಸಭೆಯಲ್ಲಿ ಡ್ಯಾನ್, ಗೋಟ್ಸ್, ಅವ್‌ಕ್‌ಸೆಂಟಿಯೆವ್ ಎಲ್ಲಾ ಇದ್ದರು. ಕೆಲವು ಬಂಡಾಯದ ಪರವಾಗಿದ್ದ ಸೋವಿಯತ್ ಪ್ರತಿನಿಧಿಗಳೂ ಹಾಜರಿದ್ದರು. ಮುದುಕ ಪ್ರವೊಕೋವಿಚ್ ಮತ್ತು ಕೆಲವು ಗಣರಾಜ್ಯ ಮಂಡಳಿಯ ಸದಸ್ಯರೂ ಸಹ ಅಲ್ಲಿದ್ದರು. ಲೀಬರ್ ಎಂಬಾತ ಸೋವಿಯತ್‌ಗಳ ಮಹಾಧಿವೇಶನವು ಕಾನೂನುಬದ್ಧವಾಗಿ ನಡೆದದ್ದಲ್ಲ ಎಂದು ಅರಚಿಕೊಳ್ಳುತ್ತಿದ್ದ. ಅವನ ಪ್ರಕಾರ ಹಳೆಯ ತ್ಸೆ-ಇ-ಕಾವೇ ಇನ್ನೂ ಅಧಿಕಾರದಲ್ಲಿದೆ. ಎಲ್ಲಾ ಸೇರಿ ದೇಶಕ್ಕೆ ಒಂದು ಮನವಿಯನ್ನು ತಯಾರಿಸಿದರು.

ನಾವು ಹೊರಗೆ ಬಂದು ಗಾಡಿಯೊಂದನ್ನು ಕರೆದೆವು. ಅವನು ನಾವು ಎಲ್ಲಿಗೆ ಹೋಗಬೇಕಾಗಿದೆ ಎಂದು ವಿಚಾರಿಸಿದ. ನಾವು 'ಸ್ಮೋಲ್ನಿ' ಎಂದಕೂಡಲೇ ಅವನು ತಲೆಯಾಡಿಸಿ "ಇಲ್ಲ, ಅಲ್ಲಿ ಪಿಶಾಚಿಗಳಿವೆ" ಎಂದ. ತುಂಬ ಹುಡುಕಾಡಿ ಸುಸ್ತಾಗುವ ಹೊತ್ತಿಗೆ ಸಿಕ್ಕ ಒಬ್ಬ ಟಾಂಗಾಚಾಲಕ ನಮ್ಮನ್ನು ಕರೆದೊಯ್ಯಲು ಒಪ್ಪಿಕೊಂಡ. ಆದರೆ ಬಾಡಿಗೆ ಮೂವತ್ತು ರೂಬಲ್, ಅದರಲ್ಲೂ ಎರಡು ರಸ್ತೆ ಈಚೆಯೇ ನಿಲ್ಲಿಸಿಬಿಟ್ಟ!

ಸ್ಮೋಲ್ನಿಯಲ್ಲಿ ದೀಪಗಳು ಈಗಲೂ ಪ್ರಜ್ವಲಿಸುತ್ತಿದ್ದವು. ವಾಹನಗಳು ಬರುತ್ತಿದ್ದವು, ಹೋಗುತ್ತಿದ್ದವು. ಭಗಭಗನೆ ಉರಿಯುತ್ತಿದ್ದ ಬೆಂಕಿಯ ಮುಂದೆ ಮೈಕಾಯಿಸಿಕೊಳ್ಳುತ್ತಿದ್ದ ರಕ್ಷಣಾ ಪಡೆಯವರು ಸಿಕ್ಕಿದವರನ್ನೆಲ್ಲಾ ಹೊಸ ಸುದ್ದಿಗಾಗಿ ವಿಚಾರಿಸುತ್ತಿದ್ದರು. ಕಾರಿಡಾರುಗಳಲ್ಲಿ ಅವಸರದಿಂದ ಓಡಾಡುತ್ತಿದ್ದ ಜನರಿಗೆ ಆಯಾಸದಿಂದ ಕಣ್ಣುಗಳು ಗುಳಿ ಬಿದ್ದಿದ್ದವು, ಮೈಯೆಲ್ಲಾ ಹೊಲಸಾಗಿತ್ತು. ಸಮಿತಿಗಳ ಸಭೆ ನಡೆಯುವ ಕೋಣೆಗಳಲ್ಲಿ ಬಂದೂಕಗಳನ್ನು ಪಕ್ಕದಲ್ಲಿರಿಸಿಕೊಂಡೇ ಸೈನಿಕರು ನೆಲದ ಮೇಲೆ ಮಲಗಿಬಿಟ್ಟಿದ್ದರು. ಅನೇಕರು ಸಭೆಯನ್ನು ತೊರೆದಿದ್ದರೂ ಮುಖ್ಯ ಸಭಾಂಗಣವಂತೂ ಜನರಿಂದ ಕಿಕ್ಕಿರಿದು ತುಂಬಿತ್ತು. ಸಮುದ್ರದ ಅಬ್ಬರದಂಥ ಸದ್ದು. ನಾವು ಒಳಗೆ ಹೋದಾಗ ಕಮೆನೇವ್ ದಸ್ತಗಿರಿಯಾಗಿದ್ದ ಮಂತ್ರಿಗಳ ಹೆಸರನ್ನು ಓದುತ್ತಿದ್ದ. ತೆರೆಶ್ಚೆಂಕೊ ಹೆಸರನ್ನು ಪಟ್ಟಿಯಲ್ಲಿ ಓದಿದಾಗ ಜನ ಸಂತೋಷದಿಂದ ಹುಚ್ಚೆದ್ದು ಕುಣಿದರು.

ಆಗೊಂದು ನಾಟಕೀಯ ಬೆಳವಣಿಗೆ ಘಟಿಸಿತು. ಒಬ್ಬ ದೊಡ್ಡದೇಹದ ಗಡ್ಡಧಾರಿ ರೈತ ವೇದಿಕೆಯನ್ನು ಹತ್ತಿದ. ಅವನ ಮುಖ ರೋಷದಿಂದ ಕಂಪಿಸುತ್ತಿತ್ತು. ಅವನು ಅಧ್ಯಕ್ಷಮಂಡಳಿಯ ಮುಂದಿದ್ದ ಮೇಜನ್ನೇ ಕುಟ್ಟಿ ಭಾಷಣ ಬಿಗಿದ: "ಚಳಿಗಾಲದ ಅರಮನೆಯಲ್ಲಿ ಬಂಧಿಸಿಟ್ಟಿರುವ ಸೋಷಲಿಸ್ಟ್ ರೆವಲ್ಯೂಶನರಿ ಸಚಿವರನ್ನು ಕೂಡಲೇ

ಬಿಡುಗಡೆ ಮಾಡಬೇಕು ಅಂತ ನಾವು ಆಗ್ರಹಿಸ್ತೀವಿ. ಜ಼ಾರನ ವಿರುದ್ಧ ಜೀವದ ಹಂಗು ತೊರೆದು ಕಾದಾಡಿದ ನಾಲ್ಕು ಜನ ಸಂಗಾತಿಗಳನ್ನು ಈಗ ಪೀಟರ್ ಪಾಲ್ ಕೋಟೆಯಲ್ಲಿ ಬಂಧಿಸಿಟ್ಟಿದ್ದಾರೆ ಗೊತ್ತಾ? ಅದು ಇತಿಹಾಸದಲ್ಲಿ ಸ್ವಾತಂತ್ರ್ಯದ ಗೋರಿ ಅಂತ ಹೆಸರುವಾಸಿಯಾಗಿರೋ ಜೈಲು," ಅವನು ಅಬ್ಬರಿಸುತ್ತಿದ್ದ. ಅಷ್ಟರಲ್ಲಿ ಇನ್ನೊಬ್ಬ ಪ್ರತಿನಿಧಿ ವೇದಿಕೆ ಏರಿ ಅಧ್ಯಕ್ಷೀಯ ಮಂಡಳಿಯತ್ತ ಬೊಟ್ಟುಮಾಡಿ "ತಮ್ಮ ನಾಯಕರನ್ನು ಬೋಲ್ಶೆವಿಕರು ಚಿತ್ರಹಿಂಸೆ ಮಾಡುವಾಗ ಕ್ರಾಂತಿಕಾರಿ ಜನಸಮುದಾಯ ಸುಮ್ಮನಿರುತ್ತೋ" ಎಂದ. ಟ್ರಾಟ್ಸ್ಕಿ, "ಈ ನಮ್ಮ 'ಕಾಮ್ರೇಡರು' ಎನಿಸಿಕೊಂಡವರು ಕೆರೆನ್‌ಸ್ಕಿ ಜೊತೆ ಸೇರಿ ಸೋವಿಯತ್‌ಗಳನ್ನು ನಾಶಮಾಡಬೇಕೆಂದು ಸಂಚುಮಾಡಿದವರ ಬಗ್ಗೆ ನಾವು ಯಾಕೆ ಮೆದುವಾಗಿ ವರ್ತಿಸಬೇಕು. ಜುಲೈ ತಿಂಗಳಲ್ಲಿ ಅವರು ನಮಗೆ ಯಾವ ದಯೆ ತೋರಿಸಿದ್ರು? ದುರ್ಬಲ ಜನ ಹೊರಗೆ ಹೋಗಿದ್ದಾರೆ. ಕ್ರಾಂತಿಯನ್ನು ನಾವು ರಕ್ಷಿಸಬೇಕಾಗಿದೆ" ಎಂದು ಗಟ್ಟಿಯಾಗಿ ಘೋಷಿಸಿದ.

ನಂತರ ತ್ಸಾರ್‌ಸ್ಕೊಯೆ ಸೆಲೋದಿಂದ ಬಂದ ಕಮಿಸಾರ್ ಏದುಸಿರು ಬಿಡುತ್ತಾ ಮಾತನಾಡಿದ. ಪ್ರಯಾಣದಿಂದಾಗಿ ಅವನ ಬಟ್ಟೆ ಎಲ್ಲಾ ಕೆಸರಾಗಿತ್ತು. "ನಮ್ಮ ಊರಿನ ರಕ್ಷಣಾಪಡೆ ಪೆತ್ರೋಗ್ರಾಡಿನ ದ್ವಾರಗಳ ಹತ್ತಿರ ಬಂದು ಕಾವಲು ನಿಂತಿದೆ. ನಾವು ಸೋವಿಯತ್‌ಗಳನ್ನು ಹಾಗೂ ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ರಕ್ಷಿಸೋಕೆ ಬಂದಿದೀವಿ. ಸೈಕಲ್ ತುಕಡಿಯೂ ಬಂದಿದೆ. ನಾವು ಸೋವಿಯತ್‌ಗಳ ಅಧಿಕಾರವನ್ನು ಮಾನ್ಯ ಮಾಡ್ತೀವಿ. ರೈತರಿಗೆ ಭೂಮಿ ಸಿಗಬೇಕು. ಕಾರ್ಮಿಕರ ಕೈಗೆ ಕೈಗಾರಿಕೆಗಳು ಬರಬೇಕು..." ಭಯಂಕರ ಹರ್ಷೋದ್ಗಾರ.

ನಂತರ ಮೂರನೇ ಸೈಕಲ್ ಬೆಟಾಲಿಯನ್‌ನ ಪ್ರತಿನಿಧಿ ಮಾತನಾಡಿದ. ಅವರಿಗೆ ಮೂರು ದಿನ ಮುಂಚೆಯೇ ಬರಲು ಆಜ್ಞೆಯಾಗಿತ್ತಂತೆ. ಆದರೆ ಅವರು ಇದರಲ್ಲಿ ಏನೋ ಸಂಚಿದ್ದ ಹಾಗಿದೆ ಅಂದುಕೊಂಡು ದಾರಿಯಲ್ಲೇ ತ್ಸಾರ್‌ಸ್ಕೊಯೆಯಿಂದ ಬರುತ್ತಿದ್ದ ಐದನೆಯ ಬೆಟಾಲಿಯನ್‌ನವರನ್ನು ಭೇಟಿಯಾಗಿ ಮಾತಾಡಿಕೊಂಡರಂತೆ. ಅವರಲ್ಲಿ ಒಬ್ಬ ಯೋಧನೂ ಬಂಡವಾಳಗಾರ – ಭೂಮಾಲಿಕರ ಸರ್ಕಾರವನ್ನು ಬೆಂಬಲಿಸೋಕೆ ಸಿದ್ಧವಿರಲಿಲ್ಲ.

ಮೆನ್ಶೆವಿಕಿ ಇಂಟರ್‌ನ್ಯಾಷನಲಿಸ್ಟರ ಪ್ರತಿನಿಧಿಯೊಬ್ಬ ಈ ಅಂತರ್ಯುದ್ಧಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕು ಎಂದ ಕೂಡಲೇ ಇಡೀ ಸಭಾಂಗಣ "ಯಾವ ಶಾಂತಿಯುತ ಪರಿಹಾರವೂ ಕಾಣುತ್ತಿಲ್ಲ, ಸಂಪೂರ್ಣ ವಿಜಯ ಒಂದೇ ದಾರಿ" ಎಂದು ಕೂಗಿತು. ಮೆನ್ಶೆವಿಕಿ ಇಂಟರ್‌ನ್ಯಾಷನಲಿಸ್ಟರು ಇದಾದಮೇಲೆ ಸಭೆಯನ್ನು ತೊರೆದುಹೋದರು. ಹೀಗೆ ಹೊರಗೆ ಹೋದವರನ್ನೆಲ್ಲಾ ಪಕ್ಕಕ್ಕಿಟ್ಟು ರೈತ ಕಾರ್ಮಿಕರು ಹಾಗೂ ಸೈನಿಕರಿಗೆ ನೇರವಾಗಿ ಮನವಿ ಮಾಡಿಕೊಳ್ಳಲು ಅಧಿವೇಶನವು ನಿರ್ಧರಿಸಿತು. (ಇದನ್ನು ಲೆನಿನ್‌ರವರೇ ಸ್ವತಃ ಬರೆದರಂತೆ – ಅನು.)

## ಕಾರ್ಮಿಕರು, ಸೈನಿಕರು ಹಾಗೂ ರೈತರಿಗೆ

*ಕಾರ್ಮಿಕರು, ಸೈನಿಕರು ಹಾಗೂ ರೈತರ ಎರಡನೆಯ ಮಹಾಧಿವೇಶನವು ಆರಂಭವಾಗಿದೆ. ಇದು ಸೋವಿಯತ್‌ಗಳಲ್ಲಿನ ಅತ್ಯಧಿಕ ಬಹುಮತವನ್ನು ಪ್ರತಿನಿಧಿಸುತ್ತದೆ. ರೈತರ ಪ್ರತಿನಿಧಿಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕಾರ್ಮಿಕರು, ರೈತರು ಹಾಗೂ*

ಸೈನಿಕರ ಅತ್ಯಧಿಕ ಬಹುಮತದ ಸಂಕಲ್ಪವನ್ನು ಆಧರಿಸಿ ಹಾಗೂ ಪೆತ್ರೋಗ್ರಾಡಿನ ಕಾರ್ಮಿಕ ಸೈನಿಕರ ವಿಜಯೀ ಬಂಡಾಯವನ್ನು ಆಧರಿಸಿ ಅಧಿವೇಶನವು ಅಧಿಕಾರವನ್ನು ವಹಿಸಿಕೊಳ್ಳುತ್ತದೆ.

ಹಂಗಾಮಿ ಸರ್ಕಾರವನ್ನು ಪದಚ್ಯುತಗೊಳಿಸಲಾಗಿದೆ. ಬಹುತೇಕ ಹಂಗಾಮಿ ಸರ್ಕಾರದ ಸಚಿವರನ್ನು ಬಂಧಿಸಲಾಗಿದೆ.

ಸೋವಿಯತ್‌ಗಳ ಪ್ರಾಧಿಕಾರವು ಈ ಕೂಡಲೇ ಎಲ್ಲಾ ರಾಷ್ಟ್ರಗಳೊಂದಿಗೆ ಶಾಂತಿಯನ್ನು ಪ್ರಸ್ತಾಪಿಸುತ್ತದೆ ಮತ್ತು ಎಲ್ಲಾ ಸಮರಭೂಮಿಗಳಲ್ಲೂ ಈ ಕೂಡಲೇ ಯುದ್ಧವನ್ನು ನಿಲ್ಲಿಸಲು ಸಹ ಸೂಚಿಸುತ್ತದೆ. ಉಚಿತವಾಗಿ ಎಲ್ಲಾ ಜಮೀನ್ದಾರರ, ರಾಜರ ಹಾಗೂ ಧಾರ್ಮಿಕ ಸಂಸ್ಥೆಗಳ ಜಮೀನನ್ನು ಭೂಸಮಿತಿಗಳಿಗೆ ಹಸ್ತಾಂತರ ಮಾಡುವುದಾಗಿ ಆಶ್ವಾಸನೆ ನೀಡುತ್ತದೆ, ಸಾಧಾರಣ ಸೈನಿಕರ ಎಲ್ಲ ಹಕ್ಕುಗಳನ್ನು ಖಾತ್ರಿಪಡಿಸುತ್ತಾ, ಇಡಿಯ ಸೈನ್ಯದಲ್ಲಿ ಜನತಾಂತ್ರಿಕ ಪ್ರಕ್ರಿಯೆಯನ್ನು ಜಾರಿಗೊಳಿಸುತ್ತದೆ. ಅದೇ ರೀತಿ ಉತ್ಪಾದನೆಯ ಮೇಲೆ ಕಾರ್ಮಿಕರ ನಿಯಂತ್ರಣವನ್ನು ಸ್ಥಾಪಿಸುತ್ತದೆ. ಸೂಕ್ತ ದಿನಾಂಕದಂದು ಸಂವಿಧಾನಾತ್ಮಕ ಶಾಸನಸಭೆಯನ್ನು ಕರೆಯಲಾಗುತ್ತದೆ. ನಗರಗಳಲ್ಲಿ ಆಹಾರ ಸರಬರಾಜನ್ನು ಹಾಗೂ ಹಳ್ಳಿಗಳಿಗೆ ಎಲ್ಲಾ ಅವಶ್ಯಕ ವಸ್ತುಗಳನ್ನು ತಲುಪಿಸಲು ಕ್ರಮ ಕೈಗೊಳ್ಳಲಾಗುತ್ತದೆ. ರಷ್ಯಾದಲ್ಲಿರುವ ಎಲ್ಲಾ ರಾಷ್ಟ್ರೀಯತೆಗಳಿಗೂ ಸ್ವತಂತ್ರವಾದ ಅಸ್ತಿತ್ವದ ನೈಜ ಹಕ್ಕನ್ನು ಭದ್ರಪಡಿಸಲಾಗುವುದು.

ಕ್ರಾಂತಿಕಾರಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಎಲ್ಲಾ ಸ್ಥಳೀಯ ಅಧಿಕಾರವನ್ನು ಕಾರ್ಮಿಕರ, ಸೈನಿಕರ ಹಾಗೂ ರೈತರ ಪ್ರತಿನಿಧಿಗಳ ಸೋವಿಯತ್‌ಗೆ ಹಸ್ತಾಂತರಿಸಬೇಕು ಎಂದು ಮಹಾಧಿವೇಶನವು ತೀರ್ಮಾನಿಸುತ್ತದೆ.

ಸಮರಾಂಗಣದಲ್ಲಿ ಯುದ್ಧನಿರತರಾಗಿರುವ ಸೈನಿಕರು ಜಾಗೃತರಾಗಿಬೇಕು ಹಾಗೂ ಆತ್ಮಸ್ಥೈರ್ಯದಿಂದಿರಬೇಕು ಎಂದು ಮಹಾಧಿವೇಶನವು ಕರೆ ನೀಡುತ್ತದೆ. ಹೊಸ ಸರ್ಕಾರವು ಈ ಕೂಡಲೇ ಪ್ರಸ್ತಾಪಿಸಿರುವ ಜನತಾಂತ್ರಿಕ ಶಾಂತಿಯು ಜಾರಿಗೆ ಬರುವವರೆಗೂ ಸಾಮ್ರಾಜ್ಯಶಾಹಿ ದಾಳಿಗಳಿಂದ ಕ್ರಾಂತಿಯನ್ನು ಹೇಗೆ ರಕ್ಷಿಸಬೇಕೆಂಬುದು ಕ್ರಾಂತಿಕಾರಿ ಸೈನ್ಯದ ಅರಿವಿನಲ್ಲಿದೆ ಎಂಬುದು ಸೋವಿಯತ್‌ಗಳ ಮಹಾಧಿವೇಶನಕ್ಕೆ ಖಚಿತವಾಗಿ ತಿಳಿದಿದೆ. ಆಸ್ತಿವಂತ ವರ್ಗಗಳ ಮೇಲೆ ಸೂಕ್ತವಾದ ತೆರಿಗೆಗಳನ್ನು ವಿಧಿಸಿ, ಅವಶ್ಯವಾದದ್ದನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವ ಮೂಲಕ, ಸೈನ್ಯಕ್ಕೆ ಅಗತ್ಯವಿರುವ ಎಲ್ಲವನ್ನೂ ದೊರಕಿಸಿಕೊಡಲು ಹಾಗೂ ಸೈನಿಕರ ಕುಟುಂಬಗಳ ಪರಿಸ್ಥಿತಿಯನ್ನು ಸುಧಾರಿಸಲು ಹೊಸ ಸರ್ಕಾರವು ಎಲ್ಲಾ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಲಿದೆ.

ಕೊರ್ನಿಲೊವ್‌ನ ಏಜೆಂಟರು, ಕೆರೆನ್‌ಸ್ಕಿ, ಕಲೆಡಿನ್ ಮುಂತಾದವರು ಪೆತ್ರೋಗ್ರಾಡಿನ ವಿರುದ್ಧ ದಂಡೆತ್ತಿಬರಲು ಯತ್ನಿಸುತ್ತಿದ್ದಾರೆ. ಕೆರೆನ್‌ಸ್ಕಿಯಿಂದ ಮೋಸ ಹೋದ ಕೆಲವು ಸೈನ್ಯದಳಗಳು ಬಂಡುಕೋರರ ಜೊತೆಗೆ ಸೇರಿವೆ.

ಸೈನಿಕರೇ, ಕೊರ್ನಿಲೊವ್‌ನ ಅನುಯಾಯಿಗಳಿಗೆ, ಕೆರೆನ್‌ಸ್ಕಿಗೆ, ಸಕ್ರಿಯ ಪ್ರತಿರೋಧವನ್ನು ಸಂಘಟಿಸಿ.

ರೈಲು ಕಾರ್ಮಿಕರೇ, ಕೆರೆನ್‌ಸ್ಕಿ ಪೆತ್ರೋಗ್ರಾಡಿನ ವಿರುದ್ಧ ಕಳಿಸುತ್ತಿರುವ ಎಲ್ಲಾ ಸೈನಿಕ ರೈಲುಗಳನ್ನು ನಿಲ್ಲಿಸಿಬಿಡಿ.

*ಸೈನಿಕರೇ, ಕಾರ್ಮಿಕರೇ, ಗುಮಾಸ್ತ ನೌಕರರೇ! ಕ್ರಾಂತಿ ಮತ್ತು ಜನತಾಂತ್ರಿಕ ಶಾಂತಿಯ ಭವಿಷ್ಯ ನಿಮ್ಮ ಕೈಗಳಲ್ಲಿದೆ.*

*ಕ್ರಾಂತಿ ಚಿರಾಯುವಾಗಲಿ!*

*ರೈತ ಸೋವಿಯತ್ ಪ್ರತಿನಿಧಿಗಳು, ಕಾರ್ಮಿಕ ಸೈನಿಕ ಪ್ರತಿನಿಧಿಗಳ ಸೋವಿಯತ್‌ನ ಅಖಿಲ ರಷ್ಯಾ ಮಹಾಧಿವೇಶನ.*

* * *

ಸರಿಯಾಗಿ ಬೆಳಗಿನ ಜಾವ 5.17ಕ್ಕೆ ಕ್ರೈಲೆಂಕೊ ಸುಸ್ತಾಗಿ, ಮುಗ್ಗರಿಸಿ ನಡೆಯುತ್ತಾ, ಕೈಯಲ್ಲಿ ಒಂದು ಟೆಲಿಗ್ರಾಂ ಹಿಡಿದು ವೇದಿಕೆಯನ್ನೇರಿದ.

"ಕಾಮ್ರೇಡರೇ, ಉತ್ತರ ರಣಾಂಗಣದಿಂದ ಹನ್ನೆರಡನೇ ಸೈನ್ಯವು, ಉತ್ತರ ರಣಾಂಗಣದ ನಿಯಂತ್ರಣವನ್ನು ಕೈಗೆತ್ತಿಕೊಂಡಿರುವ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ರಚನೆಯನ್ನು ಘೋಷಿಸಿರುವ ಸೋವಿಯತ್‌ಗಳ ಮಹಾಧಿವೇಶನಕ್ಕೆ ಶುಭಾಶಯಗಳನ್ನು ತಿಳಿಸುತ್ತದೆ." ಕೂಡಲೇ ಸಭಾಂಗಣದಲ್ಲಿ ವಿಪರೀತ ಹರ್ಷದ ಗಲಾಟೆ. ಜನ ಒಬ್ಬರನ್ನೊಬ್ಬರು ಆಲಿಂಗಿಸಿ ಕೊಳ್ಳುತ್ತಾ ಅಳಲಾರಂಭಿಸಿದರು. "ಜನರಲ್ ಚೆರ್‌ಮಿಸೊವ್, ಸಮಿತಿಗೆ ಮನ್ನಣೆ ನೀಡಿದ್ದಾರೆ. ಹಂಗಾಮಿ ಸರ್ಕಾರದ ಕಮಿಷನರ್ ಆಗಿದ್ದ ವಾಯಿಟೆನ್‌ಸ್ಕಿ ರಾಜಿನಾಮೆ ಸಲ್ಲಿಸಿದ್ದಾರೆ."

ಒಟ್ಟಿನಲ್ಲಿ ಲೆನಿನ್ ಹಾಗೂ ಪೆತ್ರೋಗ್ರಾಡ್ ಕಾರ್ಮಿಕರು ಸಶಸ್ತ್ರ ಬಂಡಾಯವನ್ನು ನಿರ್ಧರಿಸಿದ್ದರು, ಹಂಗಾಮಿ ಸರ್ಕಾರವನ್ನು ಪೆತ್ರೋಗ್ರಾಡ್ ಸೋವಿಯತ್ ಕಿತ್ತೆಸೆದಿತ್ತು. ತನ್ಮೂಲಕ ಸೋವಿಯತ್ ಮಹಾಧಿವೇಶನದ ಮೇಲೆ ಪ್ರಭುತ್ವದ ಬದಲಾವಣೆಯನ್ನು ಹೇರಿಬಿಟ್ಟಿತ್ತು. ಈಗ ವಿಶಾಲ ರಷ್ಯಾವನ್ನು ಇನ್ನು ಗೆಲ್ಲಬೇಕಾಗಿದೆ – ಪ್ರಾಯಶಃ ಜಗತ್ತನ್ನೂ ಸಹ! ಇಡೀ ರಷ್ಯಾ ಈಗ ಎದ್ದುನಿಂತು ಇದನ್ನು ಬೆಂಬಲಿಸುವುದೇ? ಮತ್ತೆ ಜಗತ್ತು – ಅದಾದರೂ ಏನು ಮಾಡಲಿದೆ? ಜನತೆ ಇದಕ್ಕೆ ಸ್ಪಂದಿಸಿ ಮೇಲೇಳುತ್ತಾರೆಯೇ, ಒಂದು ಜಾಗತಿಕ ಕೆಂಪು ಅಲೆ ಉಕ್ಕೇರಲಿದೆಯೇ?

ಬೆಳಿಗ್ಗೆ ಆರು ಘಂಟೆಯಾದರೂ ರಾತ್ರಿ ಇನ್ನೂ ದಟ್ಟವಾಗಿತ್ತು. ತಣ್ಣಗೆ ಕೊರೆಯುತ್ತಿತ್ತು. ನಿಶ್ಶಬ್ದ ರಸ್ತೆಗಳನ್ನು ಒಂದು ಅಲೌಕಿಕ ಮಬ್ಬು ಕವಿಯುತ್ತಿತ್ತು. ಕಾವಲಿನವರ ಬೆಂಕಿಗಳನ್ನು ಮಂಕಾಗಿಸುತ್ತಿತ್ತು, ರಷ್ಯಾದ ಮೇಲೊಂದು ಭಯಾನಕ ಸೂರ್ಯೋದಯದ ನೆರಳು ಕವಿಯುತ್ತಿತ್ತು....

## ಅಧ್ಯಾಯ – 5

# ನಾಗಾಲೋಟದ ಮುನ್ನಡೆ

ಗುರುವಾರ, ನವೆಂಬರ್ 8.

ಗೊಂದಲದಲ್ಲೂ, ಭಾವೋದ್ರಿಕ್ತತೆಯಲ್ಲೂ ಮುಳುಗಿದ್ದ ನಗರದಲ್ಲಿ ಸೂರ್ಯ ಉದಯಿಸಿದ. ಇಡೀ ದೇಶ ಒಂದು ಚಂಡಮಾರುತದಲ್ಲಿ ಸಿಲುಕಿದಂತಿತ್ತು. ಜನ ಮೇಲ್ನೋಟಕ್ಕೆ ತಮ್ಮ ದಿನಚರಿಯಲ್ಲೇ ಮುಳುಗಿದಂತಿದ್ದರು. ಹೊಟೇಲು, ಕಲಾಪ್ರದರ್ಶನ, ರಂಗಭೂಮಿ ಎಲ್ಲಾ ನಡೆಯುತ್ತಿದ್ದವು. ಯುದ್ಧ ಸಮಯದಲ್ಲೂ ಮಾಮೂಲಿ ಬದುಕು ನಡೆಯುತ್ತಿರುತ್ತದಷ್ಟೇ. ಅದೆಂಥ ಭಯಂಕರ ಉತ್ಪಾತಗಳೇ ನಡೆಯಲಿ, ಎಂದಿನಂತೆ ಬದುಕು ನಡೆಯುತ್ತಾ ಹೋಗುವಂತಹ ಸಾಮಾಜಿಕ ಬದುಕಿನ ಅಂತಃಶಕ್ತಿ ಮಾತ್ರ ನಿಜಕ್ಕೂ ಅಚ್ಚರಿ ಹುಟ್ಟಿಸುವಂಥದ್ದು.

ಓಡಿಹೋದ ಕೆರೆನ್‌ಸ್ಕಿ ದಂಡುಕಟ್ಟಿಕೊಂಡು ರಾಜಧಾನಿಯತ್ತ ಬರುತ್ತಿದ್ದಾನೆ ಎಂಬ ವದಂತಿಗಳೂ ಹಬ್ಬಿದ್ದವು. ಪತ್ರಿಕೆಯೊಂದು ಆತನ ಆಜ್ಞೆಯನ್ನು ಪ್ರಕಟಿಸಿತ್ತು. ಅದರ ತಾತ್ಪರ್ಯ ಹೀಗಿತ್ತು:

*"ಬೋಲ್ಶೆವಿಕರ ಹುಚ್ಚು ಪ್ರಯತ್ನಗಳಿಂದ ದೇಶ ಸರ್ವನಾಶದ ಅಂಚಿನಲ್ಲಿದೆ. ನಾವೆಲ್ಲಾ ಧೈರ್ಯ, ಶ್ರದ್ಧೆಗಳಿಂದ ಈ ಅಗ್ನಿಪರೀಕ್ಷೆಯನ್ನು ಗೆಲ್ಲಬೇಕು. ಹೊಸ ಸರ್ಕಾರ ರಚನೆ ಆಗುವವರೆಗೂ ಎಲ್ಲರೂ ತಮ್ಮ ಜವಾಬ್ದಾರಿಯುತ ಸ್ಥಾನಗಳಲ್ಲೇ ಇರಿ. ಈಗಿರುವ ಸೈನ್ಯ ಸಂಘಟನೆಯಲ್ಲಿ ಯಾರೂ ಯಾವುದೇ ರೀತಿಯಲ್ಲಿಯೂ ಬದಲಾವಣೆ ತರಲೆತ್ನಿಸಬಾರದು. ಅಧಿಕಾರಿಗಳು, ಸೈನಿಕರು ಮುಂಚಿನಂತೆಯೇ ಇದ್ದು ಶತ್ರುದೇಶಗಳಿಂದ ದೇಶವನ್ನು ರಕ್ಷಿಸಬೇಕು. ಹಂಗಾಮಿ ಸರ್ಕಾರವು ಯಾವುದೇ ಬದಲಾವಣೆ ತರುವವರೆಗೂ ನಾನೇ ಸೇನೆಯ ಮಹಾದಂಡನಾಯಕನಾಗಿರುತ್ತೇನೆ."*

ಇದಕ್ಕುತ್ತರವಾಗಿ ಗೋಡೆಗಳ ಮೇಲೆ ಭಿತ್ತಿಪತ್ರಗಳು ಕಾಣಿಸಿಕೊಂಡವು.

### ಅಖಿಲ ರಷ್ಯಾ ಮಹಾಧಿವೇಶನದ ಮನವಿ.

**"ಹಂಗಾಮಿ ಸರ್ಕಾರದ ಅನೇಕ ಸಚಿವರನ್ನು ಆಗಲೇ ಬಂಧಿಸಲಾಗಿದೆ. ಕೆರೆನ್‌ಸ್ಕಿ ತಪ್ಪಿಸಿಕೊಂಡು ಹೋಗಿದ್ದಾನೆ. ಅವನನ್ನು ಬಂಧಿಸಿ ಪೆತ್ರೋಗ್ರಾಡ್‌ಗೆ ತರಲಾಗುವುದು. ಆತನಿಗೆ ಯಾರೇ ನೆರವು ನೀಡಿದರೂ ಅದನ್ನು ರಾಜದ್ರೋಹ ಎಂದು ಶಿಕ್ಷಿಸಲಾಗುವುದು"**

ಈಗ ಯಾವ ಅಡೆತಡೆಯೂ ಇಲ್ಲದೆ ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಬೆಂಕಿಯ ಕಿಡಿಗಳನ್ನು ಉಗುಳುವಂತೆ ಹೊಸ ಹೊಸ ಆಜ್ಞೆ, ನಿರ್ದೇಶನಗಳನ್ನು ನೀಡುತ್ತಾ

ಹೋಯಿತು. ದ್ರೋಹಿ ಕೊರ್ನಿಲೊವ್‌ನನ್ನು ರಾಜಧಾನಿಗೆ ಕರೆತರಲಾಯಿತು. ಬಂಧಿಯಾಗಿದ್ದ ರೈತರ ಭೂಸಮಿತಿಗಳ ನಾಯಕರನ್ನು ಬಿಡುಗಡೆ ಮಾಡಲಾಯಿತು. ಸೈನ್ಯದಲ್ಲಿ ಚಾಲ್ತಿಯಲ್ಲಿದ್ದ ಮರಣದಂಡನೆ ಶಿಕ್ಷೆಯನ್ನು ರದ್ದುಪಡಿಸಲಾಯಿತು. ಸರ್ಕಾರಿ ಉದ್ಯೋಗಿಗಳು ಕೆಲಸಕ್ಕೆ ಬಾರದಿದ್ದಲ್ಲಿ ಶಿಕ್ಷಿಸಲಾಗುವುದು ಎಂದು ಘೋಷಿಸಲಾಯಿತು. ಎಲ್ಲಾ ಲೂಟಿ, ಗಲಭೆ ಉಂಟುಮಾಡುವುದು, ಅವಶ್ಯವಸ್ತುಗಳ ಕಾಳಸಂತೆ ಇವುಗಳಿಗೆ ಮರಣದಂಡನೆಯೇ ಶಿಕ್ಷೆ ಎಂದು ಘೋಷಿಸಲಾಯಿತು. ವಿವಿಧ ಇಲಾಖೆಗಳಿಗೆ ತಾತ್ಕಾಲಿಕವಾಗಿ ಸಚಿವರನ್ನು ನೇಮಿಸಲಾಯಿತು.

ಕೂಡಲೇ ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ರಚಿಸಿಕೊಳ್ಳಲು ಸೈನ್ಯಕ್ಕೆ ಹೇಳಲಾಯಿತು. ಅದೇ ರೀತಿ ರೈಲ್ವೆ ಕಾರ್ಮಿಕರು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ನಗರಗಳಿಗೆ ಹಾಗೂ ರಣಾಂಗಣಕ್ಕೆ ಆಹಾರ ಸರಬರಾಜನ್ನು ಖಾತ್ರಿಪಡಿಸಬೇಕೆಂದೂ, ಪ್ರತಿಯಾಗಿ ಸಂಚಾರ, ಸಂಪರ್ಕ ಇಲಾಖೆಗಳಲ್ಲಿ ಅವರಿಗೆ ಪ್ರಾತಿನಿಧ್ಯ ನೀಡಲಾಗುವುದೆಂದೂ ಆಶ್ವಾಸನೆ ನೀಡಲಾಯಿತು.

ಒಂದಾನೊಂದು ಪ್ರಕಟಣೆ ಕೆಳಕಂಡಂತಿತ್ತು :

*'ಕೊಸ್ಸಾಕ್ ಸೋದರರೇ! ನಿಮ್ಮನ್ನು ರಾಜಧಾನಿಯ ಕ್ರಾಂತಿಕಾರಿ ಕಾರ್ಮಿಕರು ಹಾಗೂ ಸೈನಿಕರ ವಿರುದ್ಧ ಯುದ್ಧಕ್ಕೆಳೆಸುವ ಯತ್ನ ನಡೆಯುತ್ತಿದೆ. ಭೂಮಾಲಿಕರು ಹಾಗೂ ಬಂಡವಾಳಿಗರು ನಮಗೂ – ನಿಮಗೂ ಇಬ್ಬರಿಗೂ ಶತ್ರುಗಳು. ಅವರ ಮಾತನ್ನು ನಂಬಬೇಡಿ. ನಮ್ಮ ಮಹಾಧಿವೇಶನದಲ್ಲಿ ಎಲ್ಲ ಕಾರ್ಮಿಕ–ರೈತ–ಸೈನಿಕರಿಗಿದ್ದಂತೆ ನಿಮಗೂ ಪ್ರಾತಿನಿಧ್ಯವಿದೆ.*

*ಸೋವಿಯತ್‌ಗಳು ಕೊಸ್ಸಾಕರ ಭೂಮಿಯನ್ನೂ ಕಸಿದುಕೊಳ್ಳುತ್ತವೆ ಎಂದು ಶತ್ರುಗಳು ಸುಳ್ಳು ಹೇಳುತ್ತಿದ್ದಾರೆ. ಕ್ರಾಂತಿಯು ಕೊಸ್ಸಾಕ್ ಜಮೀನ್ದಾರರಿಂದ ಮಾತ್ರ ಭೂಮಿಯನ್ನು ಕಸಿದುಕೊಳ್ಳುತ್ತದೆ. ಅದನ್ನು ಸಾಮಾನ್ಯ ಕೊಸ್ಸಾಕರಿಗೆ ಹಂಚುತ್ತದೆ.*

*ಕೊಸ್ಸಾಕ್ ಪ್ರತಿನಿಧಿಗಳ ಸೋವಿಯತ್‌ಗಳನ್ನು ಸಂಘಟಿಸಿ, ಶತ್ರುಗಳು ನೀಡುವ ಯಾವ ಆಜ್ಞೆಯನ್ನೂ ಪಾಲಿಸಬೇಡಿ. ಶತ್ರುಗಳ 'ರಪ್ತುದಳ'ಗಳೆಂಬ ಗೂಂಡಾ ಪಡೆಗಳಿಗೆ ನೀವು ಜನದ್ರೋಹಿಗಳಲ್ಲ ಎಂಬುದನ್ನು ತೋರಿಸಿಕೊಡಿ. ದಯಮಾಡಿ ರಾಜಧಾನಿಗೆ ನಿಮ್ಮ ಪ್ರತಿನಿಧಿಗಳನ್ನು ಕಳಿಸಿಕೊಡಿ. ರಷ್ಯಾದ ಎಲ್ಲಾ ರೈತ–ಕಾರ್ಮಿಕ–ಸೈನಿಕರ ಜೊತೆಗಿನ ಕೊಸ್ಸಾಕರ ಬಾಂಧವ್ಯ ಚಿರಾಯುವಾಗಲಿ."*

ಕೊಸ್ಸಾಕರನ್ನು ತನ್ನಡೆಗೆ ಸೆಳೆಯಲೆತ್ನಿಸುತ್ತಿದ್ದ ಕೆರೆನ್‌ಸ್ಕಿಯ ತಂತ್ರವನ್ನು ನಿಷ್ಫಲಗೊಳಿಸಲು ಮಾಡಿದ ಯತ್ನ ಈ ಪ್ರಕಟಣೆ. ಸೋವಿಯತ್‌ಗಳು ಎಲ್ಲಾ ಶಕ್ತಿಯನ್ನು ತಮ್ಮಲ್ಲಿ ಕ್ರೋಢೀಕರಿಸಿಕೊಂಡಿದ್ದವು. ಶತ್ರುಗಳ ಕೈಯಲ್ಲಿ ಇನ್ನೂ ಕೆಲವು ಮುದ್ರಣಾಲಯಗಳು ಉಳಿದಿದ್ದರಿಂದ ಈಗ ಕದನವು ಪತ್ರಿಕೆಗಳು, ಪ್ರಕಟಣೆಗಳ ಮೂಲಕವೇ ನಡೆಯುತ್ತಿತ್ತು. ಕ್ರಾಂತಿಯಿಂದ ಏನೋ ಬೃಹತ್ತಾದ ಕೇಡಾಗಲಿದೆಯೆಂಬ ಭವಿಷ್ಯವಾಣಿ ನುಡಿಯುವ ಪ್ರಚಾರ ಸಮರ ಕ್ರಾಂತಿಯು ವಿರೋಧಿಗಳಿಂದ ನಡೆದಿತ್ತು.

ಮೊದಲಿಗೆ ರಾಷ್ಟ್ರ ವಿಮೋಚನಾ ಸಮಿತಿಯು ರಷ್ಯಾದಲ್ಲೂ, ಯುರೋಪಿನಲ್ಲೂ ಹಂಚಿದ ಮನವಿಯನ್ನು ಗಮನಿಸೋಣ. ಅದರ ಸಾರಾಂಶ ಹೀಗಿತ್ತು :

## ರಷ್ಯಾದ ಗಣರಾಜ್ಯದ ನಾಗರಿಕರಿಗೆ ಮನವಿ

*ಕ್ರಾಂತಿಕಾರಿ ಜನತೆಯ ಆಶೋತ್ತರಗಳಿಗೆ ವಿರುದ್ಧವಾಗಿ ಬೋಲ್ಶೆವಿಕರು ನವೆಂಬರ್ 7ರಂದು ಹಂಗಾಮಿ ಸಚಿವರನ್ನು ಬಂಧಿಸಿ, ಗಣರಾಜ್ಯ ಮಂಡಳಿಯನ್ನು ವಿಸರ್ಜಿಸಿ ಕಾನೂನಿಗೆ ವಿರುದ್ಧವಾಗಿ ಅಧಿಕಾರವನ್ನು ಕೈಗೆತ್ತಿಕೊಂಡಿದ್ದಾರೆ. ಇದು ದೇಶದ ಮೇಲೆ ಎಸಗಿರುವ ಪಾತಕ. ಈ ದಂಗೆಯ ಮೂಲಕ ಹೊರಗಿನ ಶತ್ರುಗಳ ದಾಳಿ ಇರುವ ಸಂದರ್ಭದಲ್ಲಿ ದೇಶದ ರಕ್ಷಣೆಗೆ ಮಾರಣಾಂತಿಕ ಪೆಟ್ಟು ನೀಡಿದ್ದಾರೆ. ಶಾಂತಿಯ ಸಾಧ್ಯತೆಯನ್ನು ದೂರ ತಳ್ಳಿದ್ದಾರೆ. ಅಂತರ್ಯುದ್ಧ, ಅರಾಜಕತೆಗೆ ದೇಶವನ್ನು ತಳ್ಳಿದ್ದಾರೆ.*

*ರಾಷ್ಟ್ರೀಯ ವಿಮೋಚನಾ ಸಮಿತಿಯು ಹೊಸದಾದ ಹಂಗಾಮಿ ಸರ್ಕಾರವೊಂದನ್ನು ರಚಿಸಲಿದೆ. ನಾಗರಿಕರೆ, ಹಿಂಸೆಗೆ ಬಗ್ಗಬೇಡಿ, ಆ ಸರ್ಕಾರದ ಆಜ್ಞೆಯನ್ನು ಪಾಲಿಸಬೇಡಿ.*

*ರಷ್ಯನ್ ಗಣರಾಜ್ಯ ಮಂಡಳಿ, ತ್ಸೆ–ಇ–ಕಾ, ರೈತ ಸೋವಿಯತ್‌ನ ಕಾರ್ಯಕಾರಿಣಿ, ಸೋಷಲಿಸ್ಟ್ ರೆವಲ್ಯೂಶನರಿ ಬಣಗಳು, ಮೆನ್ಶೆವಿಕರು ಇತ್ಯಾದಿ.*

ಇನ್ನಷ್ಟು ಭಿತ್ತಿ ಪತ್ರಗಳು ಇದೇ ಶೈಲಿಯಲ್ಲಿ,

*"…. ಪೆತ್ರೋಗ್ರಾಡ್‌ಅನ್ನು ಕ್ಷಾಮವೇ ಹೊಸಕಿಹಾಕಿಬಿಡುತ್ತದೆ. ಜರ್ಮನ್ ಸೈನ್ಯಗಳು ನಮ್ಮನ್ನು ತುಳಿದುಹಾಕುತ್ತವೆ. 'ಬ್ಲಾಕ್ ಹಂಡ್ರೆಡ್' ಪಡೆಗಳು ನಡೆಸುವ ಗಲಭೆಗಳು ಇಡಿಯ ರಷ್ಯಾವನ್ನೇ ಆವರಿಸಲಿವೆ. ಬೋಲ್ಶೆವಿಕರ ಆಶ್ವಾಸನೆಗಳನ್ನು ನಂಬಬೇಡಿ. ಕೂಡಲೇ ಶಾಂತಿ ಬರಲಿದೆ ಎಂಬುದು ಸುಳ್ಳು ! ಎಲ್ಲರಿಗೂ ಅನ್ನ ಎಂಬುದು ವಂಚನೆ! ಭೂಮಿ ನೀಡಲಾಗುತ್ತದೆ ಎಂಬುದು ಅಡಗೂಲಜ್ಜಿ ಕಥೆ."*

ವೃತ್ತಪತ್ರಿಕೆಗಳು ತುಂಬ ತೀಕ್ಷ್ಣವಾಗಿದ್ದವು.

"ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆದ ಬೋಲ್ಶೆವಿಕರ ಮುಖವಾಡಗಳನ್ನು ಹರಿದೊಗೆಯಬೇಕು…" (ದ್ಯೇಲೋ ನರೋದ)

ಹಳೆಯ ತ್ಸೆ–ಇ–ಕಾ ಪರವಾಗಿ ಕಡೆಯ ಬಾರಿ ಕೂಗಾಡಿದ 'ಇಜ್ವೆಸ್ತಿಯಾ' ಪತ್ರಿಕೆ ಪ್ರತೀಕಾರಕ್ಕೆ ಆಗ್ರಹಿಸಿತು:

"ಸೋವಿಯತ್‌ಗಳ ಮಹಾಧಿವೇಶನಕ್ಕೆ ನಾವು ಯಾವ ಮನ್ನಣೆಯನ್ನೂ ನೀಡುವುದಿಲ್ಲ. ನಡೆದಿರುವುದು ಕೇವಲ ಬೋಲ್ಶೆವಿಕ್ ಬಣದ ಖಾಸಗಿ ಸಭೆ! ತ್ಸೆ–ಇ–ಕಾ ದ ಅಧಿಕಾರವನ್ನು ಕಸಿದುಕೊಳ್ಳಲು ಅವರಿಗೆ ಯಾವ ಹಕ್ಕೂ ಇಲ್ಲ".

'ನೋವಯಾ ಷೀಸ್ನ್' ಮಾತ್ರ ಹೊಸ ಸರ್ಕಾರ ಎಲ್ಲ ಸಮಾಜವಾದ ಪರ ಶಕ್ತಿಗಳನ್ನೂ ಒಂದುಗೂಡಿಸಲಿ ಎಂದು ಆಶಿಸಿತು. ಸೋಷಲಿಸ್ಟ್ ರೆವಲ್ಯೂಶನರಿಗಳು ಮತ್ತು ಮೆನ್ಶೆವಿಕರು ಮಹಾಧಿವೇಶನವನ್ನು ತೊರೆಯಬಾರದಿತ್ತು ಎಂದು ಉಗ್ರವಾಗಿ ಟೀಕಿಸಿತು. ಅದೇ ರೀತಿ ಬೂರ್ಶ್ವಾ ಶಕ್ತಿಗಳೊಂದಿಗೆ ಯಾವುದೇ ಮೈತ್ರಿ ಸಾಧ್ಯವಿಲ್ಲ ಎಂಬುದನ್ನು ಬೋಲ್ಶೆವಿಕ್ ದಂಗೆ ಸ್ಪಷ್ಟಪಡಿಸಿದೆ ಎಂದು ಸಾರಿತು.

'ರಬೋಚಿ ಪುತ್' ಈಗ ಜುಲೈಯಿಂದ ನಿಷೇಧಿಸಲ್ಪಟ್ಟಿದ್ದ ಲೆನಿನ್ ನೇತೃತ್ವದ 'ಪ್ರಾವ್ದಾ' ಆಗಿ ಹೊರಬಂತು. ಅದು ಆಕ್ರಮಣಶೀಲವಾಗಿ ಘರ್ಜಿಸಿತು.

"ಕಾರ್ಮಿಕರೇ, ಸೈನಿಕರೇ, ರೈತರೇ! ಮಾರ್ಚ್ ತಿಂಗಳಿನಲ್ಲಿ ನೀವು ಸಾಮಂತಪ್ರಭುಗಳ

ದುಷ್ಟಕೂಟದ ದಬ್ಬಾಳಿಕೆಯನ್ನು ಕಿತ್ತೆಸೆದಿರಿ. ನೆನ್ನೆ ನೀವು ಬೂರ್ಶ್ವಾಗಳ ದಬ್ಬಾಳಿಕೆಯನ್ನು ಉರುಳಿಸಿದ್ದೀರಿ...

"ಪೆತ್ರೋಗ್ರಾಡಿಗೆ ಬರುವ ಎಲ್ಲಾ ದಾರಿಗಳನ್ನೂ ಈಗ ರಕ್ಷಿಸಿಕೊಳ್ಳಬೇಕಾದದ್ದು ಮೊದಲನೆಯ ಕೆಲಸ. ಪೆತ್ರೋಗ್ರಾಡಿನ ಎಲ್ಲಾ ಕ್ರಾಂತಿವಿರೋಧಿಗಳಿಂದ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳಬೇಕಾದದ್ದು ಎರಡನೆಯ ಕೆಲಸ. ಕ್ರಾಂತಿಕಾರಿ ಅಧಿಕಾರವನ್ನು ಸುಸಂಘಟಿತವಾಗಿ ವ್ಯವಸ್ಥೆಮಾಡಿಕೊಂಡು, ಜನಪರ ಕಾರ್ಯಕ್ರಮವನ್ನು ಜಾರಿಗೆ ತರುವುದು ಮೂರನೆಯ ಕೆಲಸ."

ಕ್ಯಾಡೆಟ್ ಪಕ್ಷದ ಪತ್ರಿಕೆಗಳು, ಬೂರ್ಶ್ವಾಗಳು ಸಾಧಾರಣವಾಗಿ ಇಡಿಯ ಘಟನೆಯ ಬಗ್ಗೆ ನಿರ್ವಿಕಾರದಿಂದಿರುವಂತೆ ವರ್ತಿಸುತ್ತಾ "ನಮಗೆ ಗೊತ್ತಿತ್ತು. ನಾವು ಹೇಳಿರಲಿಲ್ಲವೇ" ಎನ್ನುವಂಥ ಧೋರಣೆಯನ್ನು ಅನುಸರಿಸಿದವು. ಅಧಿಕಾರದ ಸ್ಥಳಗಳಲ್ಲಿ ಕೆಲವು ಕ್ಯಾಡೆಟ್ ನಾಯಕರು ಸುಳಿದಾಡಿಕೊಂಡಿದ್ದರು. ಒಟ್ಟಿನಲ್ಲಿ ಬೂರ್ಶ್ವಾವರ್ಗ ತನ್ನ ಅನುಕೂಲಕರ ಘಳಿಗೆಗಾಗಿ ಕಾಯುತ್ತಾ ಹೊಂಚುಹಾಕಿಕೊಂಡಿತ್ತು. ಮೂರು ದಿನದ ಆಚೆಗೆ ಬೋಲ್ಶೆವಿಕರು ಅಧಿಕಾರ ಉಳಿಸಿಕೊಳ್ಳಬಹುದೆಂಬ ಭರವಸೆ ಲೆನಿನ್, ಟ್ರಾಟ್ಸ್ಕಿ, ಪೆತ್ರೋಗ್ರಾಡ್ ಕಾರ್ಮಿಕರು, ಕೆಲವು ಮುಗ್ಧ ಸೈನಿಕರು ಇವರನ್ನು ಬಿಟ್ಟರೆ ಯಾರಿಗೂ ಇರಲಿಲ್ಲ.*

ಬಯಲು ರಂಗಮಂದಿರದಂತಿದ್ದ ನಿಕೊಲಾಯ್ ಸಭಾಂಗಣದಲ್ಲಿ ಅಂದು ಮಧ್ಯಾಹ್ನ ನಾನು ವಿಪರೀತ ಗದ್ದಲವಿದ್ದ ಡ್ಯೂಮಾ ಸಭೆಯನ್ನು ನೋಡಿದೆ. ಎಲ್ಲಾ ಬೋಲ್ಶೆವಿಕ್ ವಿರೋಧಿ ಶಕ್ತಿಗಳೂ ಅಲ್ಲಿ ಜೊತೆಗೂಡಿದ್ದವು. ಮುದುಕ ಮೇಯರ್ ಹಿಂದಿನ ದಿನ ತಾನು ಹೋಗಿ ಸರ್ಕಾರದವರಿಗೆ, ರಾಜಧಾನಿಯಲ್ಲಿ ಡ್ಯೂಮಾನೇ ನಿಜವಾದ, ಜನರಿಂದ ಚುನಾಯಿತವಾದ ಸರ್ಕಾರ ಎಂದು ಹೇಳಿದ್ದಕ್ಕೆ, ಅವರು ಡ್ಯೂಮಾವನ್ನೇ ವಿಸರ್ಜಿಸುವುದಾಗಿ ಬೆದರಿಸಿದರು ಎಂದು ವರದಿ ಮಾಡುತ್ತಿದ್ದ. ಸಭಿಕರು ಅದಕ್ಕೆ ಆಕ್ರೋಶದಿಂದ ಪ್ರತಿಕ್ರಿಯಿಸಿದರು. ಮುದುಕ ಡ್ಯೂಮಾವನ್ನು ಉದ್ದೇಶಿಸಿ ತನ್ನ ಭಾಷಣವನ್ನು ಮುಂದುವರೆಸಿ, ನಾವು ಬಂದೂಕಿನ ಬೆಂಬಲದ ಸರ್ಕಾರವನ್ನಲ್ಲ ಮಾನ್ಯಮಾಡಬೇಕಾದದ್ದು, ಜನರಿಂದ ಬಹುಮತದಿಂದ ಆಯ್ಕೆಯಾದ ಸರ್ಕಾರವನ್ನು ಎಂದು ಹೇಳಿದ. ಬೋಲ್ಶೆವಿಕರನ್ನು ಬಿಟ್ಟು ಉಳಿದವರು ಅದನ್ನು ಚಪ್ಪಾಳೆ ತಟ್ಟಿ ಮೆಚ್ಚಿಕೊಂಡರು.

ಈ ಗದ್ದಲದ ನಡುವೆ ಬೋಲ್ಶೆವಿಕ್ ಭಾಷಣಕಾರನೊಬ್ಬ ಸೋವಿಯತ್ ಮಹಾಧಿವೇಶನದ ನಿರ್ಧಾರ ಎಂದರೆ ಅದು ಇಡಿಯ ರಷ್ಯಾದ ನಿರ್ಧಾರ ಎಂದು ಕೂಗಿ ಹೇಳಲು ಯತ್ನಿಸುತ್ತಿದ್ದ. "ನೀವು ಪೆತ್ರೋಗ್ರಾಡ್ ಜನತೆಯ ನೈಜ ಪ್ರತಿನಿಧಿಗಳಲ್ಲವೇ ಅಲ್ಲ" ಎಂದ ಆತ. ಅದಕ್ಕೆ ಮೇಯರ್ "ನಮ್ಮದು ಚುನಾಯಿತ ಡ್ಯೂಮಾ" ಎಂದು ನೆನಪಿಸಿದ. ಆದರೆ ಆ ಬೋಲ್ಶೆವಿಕ್ ಸುಮ್ಮನಾಗಲಿಲ್ಲ : "ಅದೆಲ್ಲಾ ತುಂಬ ಹಿಂದೆ ಆದದ್ದು. ಹಳೆಯ ಕಥೆ. ಅದೇ ರೀತಿ ತ್ಸೆ–ಇ–ಕಾ, ಸೈನಿಕ ಸಮಿತಿ ಸಹ ಆಗ ಚುನಾಯಿತವಾಗಿದ್ದವು. ಆದರೆ ಈಗ ಜನತೆ ಅವರ ಜೊತೆ ಇಲ್ಲ ಎಂಬುದು ಸ್ಪಷ್ಟವಾಗಿದೆ" ಎಂದ. ನಂತರ ಬೋಲ್ಶೆವಿಕರು

---

* ರೀಡ್‌ರ ಈ ಗ್ರಹಿಕೆ ವಾಸ್ತವವಲ್ಲ. ಇಬ್ಬರು ಸದಸ್ಯರನ್ನು ಬಿಟ್ಟರೆ ಇಡೀ ಕೇಂದ್ರ ಸಮಿತಿ ಮತ್ತು ಪಕ್ಷದ ಮುಖ್ಯ ಸಂಘಟನಾಕಾರರೆಲ್ಲರೂ ಅಪಾರ ಆತ್ಮವಿಶ್ವಾಸದಿಂದಲೇ ಮುನ್ನಡೆದಿದ್ದರು. –ಅನು.

"ನಾವು ಈ ಪ್ರತಿಕ್ರಾಂತಿಕಾರಿಗಳ ಗೂಡಿನಲ್ಲಿರಲು ಬಯಸುವುದಿಲ್ಲ. ಡ್ಯೂಮಾಗೆ ಮತ್ತೆ ಚುನಾವಣೆ ಆಗಲೇಬೇಕು" ಎಂದು ಘೋಷಿಸಿ ಹೊರನಡೆದುಬಿಟ್ಟರು.

ಆಗ ಕ್ಯಾಡೆಟ್ ಪಕ್ಷದವರು, ಡ್ಯೂಮಾದ ಪ್ರತಿನಿಧಿಗಳಾಗಿದ್ದೂ ಕೂಡ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಮಿಸಾರ್‌ಗಳಾಗಲು ಸಮ್ಮತಿಸಿರುವವರನ್ನು ಡ್ಯೂಮಾದಿಂದ ಪದಚ್ಯುತಗೊಳಿಸಿ ಅಪರಾಧಿಗಳೆಂದು ದೋಷಾರೋಪಣೆ ಮಾಡಬೇಕು ಎಂದರು. ನಂತರ ಮೇಯರ್ ಎದ್ದುನಿಂತು ಡ್ಯೂಮಾವು, ತನ್ನನ್ನು ವಿಸರ್ಜಿಸುವ ಬೋಲ್ಶೆವಿಕ್ ಪ್ರಯತ್ನವನ್ನು ವಿರೋಧಿಸಬೇಕು ಎಂದು ನಿರ್ಣಯವನ್ನು ಮಂಡಿಸಿದ....

ಹೊರಗೆ ಅಲೆಕ್ಸಾಂಡರ್ ಸಭಾಂಗಣದಲ್ಲಿ ರಾಷ್ಟ್ರೀಯ ವಿಮೋಚನಾ ಸಮಿತಿಯ ಸಭೆ ಕಿಕ್ಕಿರಿದು ತುಂಬಿತ್ತು. ಸ್ಕೊಬೆಲೆವ್ ಜೋರಾಗಿ ಭಾಷಣ ಮಾಡುತ್ತಿದ್ದ : "ರಷ್ಯಾದ ಪ್ರಭುತ್ವದ ಅಸ್ತಿತ್ವವನ್ನು, ಚರಿತ್ರೆಯನ್ನು, ಹಿಂದೆಂದೂ ಇಂಥ ಕಠಿಣವಾದ ಪರೀಕ್ಷೆಗೆ ಒಡ್ಡಿರಲಿಲ್ಲ, ಕ್ರಾಂತಿಯನ್ನು ರಕ್ಷಿಸಬೇಕಾದ ಘಳಿಗೆ ಬಂದಿದೆ. ರಾಷ್ಟ್ರವನ್ನೂ ಕ್ರಾಂತಿಯನ್ನೂ ರಕ್ಷಿಸಬಲ್ಲ ಕೇಂದ್ರವನ್ನು ಆಗಲೇ ರಚಿಸಿಕೊಳ್ಳಲಾಗಿದೆ. ನಾವು ಜೀವತ್ಯಾಗ ಮಾಡುತ್ತೇವೆ ಆದರೆ ಶರಣಾಗತರಾಗುವುದಿಲ್ಲ" ಇತ್ಯಾದಿ ಇತ್ಯಾದಿ ದೊಡ್ಡ ದೊಡ್ಡ ಮಾತುಗಳು.

ರೈಲ್ವೆ ಕಾರ್ಮಿಕರ ಸಮಿತಿಯು ವಿಮೋಚನಾ ಸಮಿತಿಯನ್ನು ಸೇರಿದೆ ಎಂದಾಗ ಅದಕ್ಕೂ ಭಾರಿ ಕರತಾಡನ ಕೇಳಿಬಂತು. ನಂತರ ಕೆಲವು ಅಂಚೆ ತಂತಿ ನೌಕರರು, ಮೆನ್ಶೆವಿಕ್ ಇಂಟರ್‌ನ್ಯಾಷನಲಿಸ್ಟರು ಬಂದಾಗಲೂ ಅದೇ ರೀತಿ ಕರತಾಡನ. ರೈಲ್ವೆ ಕಾರ್ಮಿಕರು ತಾವು ಬೋಲ್ಶೆವಿಕ್ ಅಧಿಕಾರವನ್ನು ಒಪ್ಪುವುದಿಲ್ಲ ಎಂದೂ, ಇಡೀ ಇಲಾಖೆಯನ್ನು ತಮ್ಮ ಕೈಗೆತ್ತಿಕೊಂಡಿರುವುದಾಗಿಯೂ ಘೋಷಿಸಿದರು. ತಂತಿ ಕಛೇರಿಗಳ ನೌಕರರೂ ಸಹ ತಾವು ಬೋಲ್ಶೆವಿಕರ ಕೆಳಗೆ ಕೆಲಸ ಮಾಡುವುದಿಲ್ಲವೆಂದು ಹೇಳಿಬಿಟ್ಟರು. ಬೋಲ್ಶೆವಿಕರ ಕೇಂದ್ರವಾದ ಸ್ಮೋಲ್ನಿಭವನದಲ್ಲೇ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ ಎಂದು ಕೊಚ್ಚಿಕೊಳ್ಳಲಾಯಿತು. ಸರ್ಕಾರಿ ನೌಕರರೆಲ್ಲಾ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಲಿದ್ದಾರೆ ಎಂದೂ ಹೇಳಲಾಯಿತು.

ಇದೀಗ ನಿಜವಾಗಿಯೂ ಯುದ್ಧ ಆರಂಭವಾಗಿತ್ತು. ಯುದ್ಧ ಎಂದರೆ ರಷ್ಯನ್ ಮಾದರಿಯ ಯುದ್ಧ; ಮುಷ್ಕರ, ಒಳಗಿನಿಂದಲೇ ವಿಧ್ವಂಸಕ ಕೃತ್ಯ.

ನಾವಲ್ಲಿರುವಾಗಲೇ ಅಧ್ಯಕ್ಷರು ಕೆಲಸಗಳ ಪಟ್ಟಿಯನ್ನೂ, ಅದಕ್ಕೆ ನಿಯೋಜಿತರಾದವರ ಹೆಸರುಗಳನ್ನೂ ಓದಿದರು. ಕೆಲವರು ಸಚಿವಾಲಯಗಳಿಗೆ ಭೇಟಿ ಕೊಡಬೇಕು. ಇನ್ನು ಕೆಲವರು ಬ್ಯಾಂಕುಗಳತ್ತ ತೆರಳಬೇಕು. ಕೆಲವರು ಸೈನಿಕ ಪಾಳೆಯಗಳಿಗೆ ಭೇಟಿನೀಡಿ ಅವರಿಗೆ 'ರಷ್ಯನರ ರಕ್ತವನ್ನು ಚೆಲ್ಲಬೇಡಿ' ಎಂದು ವಿನಂತಿಸಿಕೊಂಡು ತಟಸ್ಥರಾಗಿರಿ ಎಂದು ಕೇಳಿಕೊಳ್ಳಬೇಕು. ಒಂದು ನಿಯೋಗವು ಕೆರೆನ್‌ಸ್ಕಿಯೊಂದಿಗೆ ಸಮಾಲೋಚಿಸಲು ತೆರಳುವುದು. ಉಳಿದವರನ್ನು ರಷ್ಯಾದ ವಿವಿಧ ಪ್ರಾಂತ್ಯಗಳಿಗೆ ಕಳಿಸುವುದು. ಅವರು ಎಲ್ಲಾ ಬೋಲ್ಶೆವಿಕ್ ವಿರೋಧಿ ಶಕ್ತಿಗಳನ್ನೂ ಒಂದುಗೂಡಿಸಿ ವಿವೇಚನಾ ಸಮಿತಿಯ ಶಾಖೆಗಳನ್ನು ಆರಂಭಿಸಬೇಕು.

ಸಭೆಯಲ್ಲಿದ್ದ ಜನ ವಿಪರೀತ ಉತ್ಸಾಹದಲ್ಲಿದ್ದರು: "ಈ ಬೋಲ್ಶೆವಿಕರು ಬುದ್ಧಿಜೀವಿಗಳಿಗೆ ತಾಕೀತು ಮಾಡ್ತಾರಾ? ಇರಲಿ ನಾವೇನು ಅಂತ ತೋರಿಸ್ತೀವಿ." ಸೋವಿಯತ್ ಮಹಾಧಿವೇಶನದಲ್ಲಿದ್ದವರಿಗೂ, ಈ ಜನಗಳಿಗೂ ಇದ್ದ ಅಂತರ ಬಹಳ

ಸ್ಪಷ್ಟವಾಗಿತ್ತು. ಅಲ್ಲಿದ್ದವರು ಕೊಳಕಾದ ಸೈನಿಕರು, ಹೊಲಸು ಮೈ–ಉಡುಪುಗಳ ಕಾರ್ಮಿಕರು ಮತ್ತು ರೈತರು. ಅವರೆಲ್ಲಾ ಬದುಕಲಿಕ್ಕಾಗಿ ಪ್ರಾಣಿಗಳಂತೆ ಹೋರಾಟದಲ್ಲಿ ಮುಳುಗಿ ಬೆನ್ನು ಬಾಗಿದವರು, ನೋವು ತಿಂದವರು. ಇಲ್ಲಿ ಅವ್‌ಕ್ಸೆಂಕಿಯವ್, ಡ್ಯಾನ್, ಲೀಬರ್ ಮುಂತಾದ ಮೆನ್ಶೆವಿಕ್ ಹಾಗೂ ಸೋಷಲಿಸ್ಟ್ ರೆವಲ್ಯೂಶನರಿ ನಾಯಕರು ಹಳೆಯ ಸಮಾಜವಾದಿ ನಾಯಕರಾದ ಸ್ಕೊಬೆಲೆವ್, ಚೆರ್ನೊವ್‌ರಂಥವರು ಯಾವ ಅಳುಕೂ ಇಲ್ಲದೆ ಕುಟಿಲನಾದ ಶಾಚ್‌ಸ್ಕಿ, ಚಾಣಾಕ್ಷ ವಿನಾವೆರ್ ಮುಂತಾದವರೊಂದಿಗೆ ಖುಷಿಯಾಗಿದ್ದರು. ಇನ್ನುಳಿದವರು ಪತ್ರಕರ್ತರು, ವಿದ್ಯಾರ್ಥಿಗಳು ಮತ್ತು ಎಲ್ಲಾ ಬಣಗಳಿಗೆ ಸೇರಿದ ಬುದ್ಧಿಜೀವಿಗಳು. ಹೀಗೆ ಈ ಡ್ಯೂಮಾದಲ್ಲಿದ್ದ ಜನ ಚೆನ್ನಾಗಿ ತಿಂದುಂಡು, ಒಡವೆ ವಸ್ತ್ರ ಧರಿಸಿದವರು. ಇವರ ಮಧ್ಯೆ ನಾನು ಮೂರು ಜನಕ್ಕಿಂತ ಹೆಚ್ಚು ಕಾರ್ಮಿಕರನ್ನು ಕಾಣಲಿಲ್ಲ.

ಇನ್ನಷ್ಟು ಸುದ್ದಿಗಳು ಬರುತ್ತಿದ್ದವು. ಪರ, ವಿರೋಧ ಎರಡೂ ರೀತಿಯವು. ಕೊರ್ನಿಲೊವ್ ಬಂಧನದಿಂದ ತಪ್ಪಿಸಿಕೊಂಡು ಓಡಿಹೋಗಿದ್ದ. ಕಾಲೆಡಿನ್ ಉತ್ತರದ ಕಡೆಗೆ ದಾಳಿಮಾಡಲು ಧಾವಿಸುತ್ತಿದ್ದ. ಆದರೆ ಇನ್ನೊಂದು ಕಡೆ, ಮಾಸ್ಕೋದ ಸೋವಿಯತ್ ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ರಚಿಸಿಕೊಂಡು ಆಯುಧಾಗಾರದಿಂದ ಕಾರ್ಮಿಕರಿಗೆ ಶಸ್ತ್ರಾಸ್ತ್ರ ಒದಗಿಸಲು ಯತ್ನಿಸುತ್ತಿತ್ತು.

ಇಂಥ ಸುದ್ದಿಯ ಜೊತೆಗೆ ಅನೇಕ ವದಂತಿಗಳು, ವಿರೂಪಗೊಂಡ ಸುದ್ದಿಗಳು, ಅಪ್ಪಟ ಸುಳ್ಳುಗಳು. ಉದಾಹರಣೆಗೆ ಒಬ್ಬ ಕ್ಯಾಡೆಟ್ ಪಕ್ಷಕ್ಕೆ ಸೇರಿದ ಜಾಣ ತರುಣ ನಮ್ಮನ್ನು ಪಕ್ಕಕ್ಕೆ ಕರೆದು ಹೇಳಿದ,

"ನಿಮಗೆ ಗೊತ್ತೆ ಬೋಲ್ಶೆವಿಕರು ಚಳಿಗಾಲದ ಅರಮನೆಯನ್ನು ವಶಮಾಡಿಕೊಂಡಾಗ ಅವರಿಗೆ ನಾಯಕತ್ವ ನೀಡಿದ್ದು ಜರ್ಮನ್ ಮತ್ತು ಆಸ್ಟ್ರಿಯನ್ ಅಧಿಕಾರಿಗಳು!"

ನಾವು ಸವಿನಯವಾಗೇ ಪ್ರಶ್ನಿಸಿದೆವು "ನಿನಗೆ ಹೇಗೆ ಗೊತ್ತಾಯಿತು?"

"ನನ್ನ ಗೆಳೆಯ ಹೇಳಿದ, ಅವರೆಲ್ಲಾ ಜರ್ಮನ್ ಸಮವಸ್ತ್ರ ಧರಿಸಿದ್ದರಂತೆ." ಇಂಥ ನೂರಾರು ಅಸಂಬದ್ಧ ಕಥೆಗಳು ಅಲ್ಲೇ ಸುತ್ತು ಹೊಡೆಯುತ್ತಿದ್ದವು. ಅವುಗಳನ್ನು ಬೋಲ್ಶೆವಿಕ್ ವಿರೋಧಿ ಪತ್ರಿಕೆಗಳು ಅತ್ಯಂತ ಗಂಭೀರವಾಗಿ ಸತ್ಯವೆಂಬಂತೆ ಪ್ರಕಟಿಸುತ್ತಿದ್ದವು. ಮಾತ್ರವಲ್ಲ, ಸಾಮಾನ್ಯವಾಗಿ ವಾಸ್ತವಾಂಶಗಳಿಗೆ ಒತ್ತುಕೊಡುತ್ತಿದ್ದ ಸೋಷಲಿಸ್ಟ್ ರೆವಲ್ಯೂಶನರಿಗಳು ಮತ್ತು ಮೆನ್ಶೆವಿಕರು ಸಹ ಅವುಗಳನ್ನು ನಂಬುತ್ತಿದ್ದರು.

ಆದರೆ ತೀರ ಗಂಭೀರವಾದ ಪರಿಣಾಮ ಬೀರಿದ ಕಥೆಗಳೆಂದರೆ ಬೋಲ್ಶೆವಿಕ್ ದೌರ್ಜನ್ಯಗಳ ಕುರಿತಾದ ವರದಿಗಳು. ರೆಡ್‌ಗಾರ್ಡ್‌ಗಳು ಚಳಿಗಾಲದ ಅರಮನೆಯನ್ನು ಲೂಟಿ ಹೊಡೆದರು, ಅಲ್ಲಿದ್ದ ಯಂಕರ್ ತರುಣ ಯೋಧರನ್ನು ಮೊದಲು ನಿರಾಯುಧರನ್ನಾಗಿ ಮಾಡಿ ಆಮೇಲೆ ಕೊಲ್ಲಲಾಯಿತು, ಅಲ್ಲಿದ್ದ ಮಹಿಳಾ ಸೈನಿಕರ ಮೇಲೆ ಅತ್ಯಾಚಾರ ನಡೆದು ಅವರಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಇತ್ಯಾದಿ, ಇತ್ಯಾದಿ, ಇಂಥ ಕಥೆಗಳನ್ನು ಪತ್ರಿಕೆಗಳು ಪ್ರಕಟಿಸಿದ್ದೂ ಉಂಟು. ಇವುಗಳನ್ನು ಅಂಥ ತರುಣ, ತರುಣಿಯರ ತಾಯ್ತಂದೆಯರು ಓದಿಕೊಂಡು ಬಂದು ಡ್ಯೂಮಾದಲ್ಲಿ ಸೇರುತ್ತಿದ್ದರು.

ಇಂಥ ಸುಳ್ಳು ವದಂತಿಗಳಿಗೆ ಒಂದು ಉದಾಹರಣೆಯನ್ನು ಮುಂದಿಡಬಹುದು. ರಾಜಕುಮಾರ ಟುಮಾನೊವ್ ಎಂಬುವನನ್ನು ಕೊಂದು ಮೊಯಿಕಾ ಕಾಲುವೆಯಲ್ಲಿ

ಎಸೆದಿದ್ದಾರೆ ಎಂದು ಸುದ್ದಿ ಬಂತು. ವಿಚಾರಿಸಲಾಗಿ ಅವನ ಕುಟುಂಬವೇ ಆ ವಾರ್ತೆ ಸುಳ್ಳೆಂದೂ ಆತ ದಸ್ತಗಿರಿಯಾಗಿದ್ದಾನೆಂದೂ ಹೇಳಿತು. ಆಮೇಲೆ ಹೆಣ ಜನರಲ್ ಡೆಮಿಸೊವ್ ಎಂಬುವನದ್ದು ಎಂಬ ಪುಕಾರೆದ್ದಿತು. ನೋಡಿದರೆ ಜನರಲ್ ಸತ್ತೇ ಇರಲಿಲ್ಲ! ಕಾಲುವೆಯಲ್ಲಿ ಯಾವ ಹೆಣವೂ ಇರಲಿಲ್ಲ.

ನಾವು ಡ್ಯೂಮಾದಿಂದ ಹೊರಬಂದಾಗ ಬಾಗಿಲ ಬಳಿ ಭಾರೀ ಜನಜಂಗುಳಿ. ಅದರಲ್ಲಿದ್ದವರೆಲ್ಲಾ ಉದ್ದಿಮೆದಾರರು, ವರ್ತಕರು, ಗುಮಾಸ್ತರು, ಅಧಿಕಾರಿಗಳು. ಇಬ್ಬರು ಹುಡುಗರು ಅವರಿಗೆ ಹಂಚುತ್ತಿದ್ದ ಕರಪತ್ರ ಹೀಗಿತ್ತು :

ಮುನಿಸಿಪಲ್ ಡ್ಯೂಮಾದ ಮನವಿ

*ನಿಮ್ಮ ಮನೆಗಳ ಖಾಸಗಿತನವನ್ನು ಭೇದಿಸಲು ಯಾರಿಗೂ ಅವಕಾಶ ಕೊಡಬೇಡಿ. ಅವಶ್ಯವಿದ್ದರೆ ಆಯುಧಗಳನ್ನು ಉಪಯೋಗಿಸಿಯಾದರೂ ಪೆತ್ರೋಗ್ರಾಡ್ ನಾಗರಿಕರು ತಮ್ಮ ಮನೆಯೊಳಗೆ ಯಾರೇ ಪ್ರವೇಶಿಸುವುದನ್ನು ತಡೆಗಟ್ಟಬೇಕು. ಇದು ಮುನಿಸಿಪಲ್ ಡ್ಯೂಮಾದ ಡಿಕ್ರಿ.*

ಲಿಟೇನಿ ಎಂಬ ಮುಖ್ಯರಸ್ತೆಯ ಮೂಲೆಯಲ್ಲಿ ರೆಡ್‌ಗಾರ್ಡ್‌ಗಳು ವೃತ್ತಪತ್ರಿಕೆ ಮಾರುವವನಿಗೆ ಅವನು ಮೆನ್ಶೆವಿಕರ ಪತ್ರಿಕೆಯನ್ನು ತಮಗೆ ಒಪ್ಪಿಸಬೇಕೆಂದು ಆಗ್ರಹಿಸಿದರು. ಅಂಗಡಿಯವನು ಕೂಗಾಡಿದರೂ ಕೇಳದ ನಾವಿಕನೊಬ್ಬ ಅವುಗಳನ್ನು ತೆಗೆದುಕೊಂಡು ಹರಿದುಹಾಕಿದ. ಒಂದಷ್ಟು ಜನ ಜಗಳವಾಡಲು ನೆರೆದರು. ಕಾರ್ಮಿಕನೊಬ್ಬ ವಿವರಿಸುತ್ತಲೇ ಹೋದ : "ನೋಡಿ, ಇದರಲ್ಲಿ ಸುಳ್ಳು ಬರೆದಿದ್ದಾರೆ. ನಾವು ರಷ್ಯನ್ ಪ್ರಜೆಗಳನ್ನು ಕೊಂದಿದ್ದೇವೆ ಅಂತ. ಇಂಥ ಸುದ್ದಿಯಿಂದ ರಕ್ತಪಾತವಾಗುತ್ತೆ..."

ಸ್ಮೋಲ್ನಿಯಲ್ಲಿ ಮುಂಚೆಗಿಂತ ಹೆಚ್ಚು ಆತಂಕ ಕವಿದಿತ್ತು. ಕತ್ತಲು ತುಂಬಿದ ಕಾರಿಡಾರುಗಳಲ್ಲಿ ಜನ ಓಡುತ್ತಾ ಹೋಗಿಬರುತ್ತಿದ್ದರು. ಬಂದೂಕು ಹಿಡಿದ ಕಾರ್ಮಿಕರು ಅಲ್ಲೆಲ್ಲಾ ತುಂಬಿಕೊಂಡಿದ್ದರು. ನಾಯಕರು ದೊಡ್ಡ ಕಡತಗಳೊಂದಿಗೆ, ತಮ್ಮನ್ನು ಸುತ್ತುವರೆದ ಸ್ನೇಹಿತರು, ಸಹಾಯಕರೊಂದಿಗೆ ಅವಸರದಲ್ಲಿ ಸಾಗುತ್ತಿದ್ದರು. ಎಂಥ ಜನ, ನಿಜವಾಗಲೂ ಅಚ್ಚರಿ ಹುಟ್ಟಿಸುವಂಥ ಅಸಾಧಾರಣ ವ್ಯಕ್ತಿತ್ವಗಳು. ನಿದ್ದೆ ಇಲ್ಲ, ಮುಖಕ್ಷೌರ ಮಾಡಿ ಯಾವುದೋ ಕಾಲವಾಗಿದೆ, ಮೈಯೆಲ್ಲಾ ಹೊಲಸು, ನಿದ್ದೆಗೆಟ್ಟು, ವಿಶ್ರಾಂತಿ ಇಲ್ಲದೆ ಉರಿಯುತ್ತಿರುವ ಕಣ್ಣುಗಳು. ಉತ್ಕೃಷ್ಟವಾದ ಭಾವನೆಗಳಿಂದ, ತುಂಬಿ ಬಂದ ಸಂತೃಪ್ತಿಗಳಿಂದ ಸತತವಾಗಿ ನಿರ್ದಿಷ್ಟ ಗುರಿಯತ್ತ ಮುಂದೆ ಮುಂದೆ ಹೋಗುತ್ತಿರುವ ಮನುಷ್ಯರು!

ಇವರು ಮಾಡಬೇಕಾದ ಕೆಲಸವಾದರೂ ಎಷ್ಟು? ಸರ್ಕಾರವನ್ನು ಕೈಗೆತ್ತಿಕೊಂಡು ನಡೆಸಿಕೊಂಡು ಹೋಗಬೇಕು, ನಗರದಲ್ಲಿ ವ್ಯವಸ್ಥೆಯನ್ನು ಸ್ಥಾಪಿಸಬೇಕು, ಸೈನಿಕ ಶಿಬಿರಗಳ ರಕ್ಷಣಾದಳಗಳ ನಿಷ್ಠೆಯನ್ನು ಕಾಪಾಡಿಕೊಳ್ಳಬೇಕು, ಡ್ಯೂಮಾ ಮತ್ತು ರಾಷ್ಟ್ರೀಯ ವಿಮೋಚನಾ ಸಮಿತಿಗಳ ಪಿತೂರಿಗಳ ವಿರುದ್ಧ ಹೋರಾಡಬೇಕು, ಜರ್ಮನ್ ಸೈನ್ಯಗಳನ್ನು ಹೆಮ್ಮೆಟ್ಟಿಸಬೇಕು. ಇಷ್ಟೇನೇ? ಅಲ್ಲ ಕೆರೆನ್‌ಸ್ಕಿಯೊಂದಿಗೆ ಯುದ್ಧ ಮಾಡಬೇಕು, ರಷ್ಯಾದ ಎಲ್ಲ ಪ್ರಾಂತ್ಯಗಳಿಗೂ ನಡೆದದ್ದೇನೆಂಬ ವರ್ತಮಾನವನ್ನು ತಲುಪಿಸಬೇಕು, ವಿಶಾಲ ರಷ್ಯಾದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಪ್ರಚಾರವನ್ನು ಸಂಘಟಿಸಬೇಕು! ಇದರ ಮಧ್ಯೆ ಸರ್ಕಾರಿ ಉದ್ಯೋಗಿಗಳು ಮತ್ತು ಮುನಿಸಿಪಲ್ ನೌಕರರು

ಕಮಿಸಾರ್‌ಗಳ ಆಜ್ಞೆಯನ್ನು ಪಾಲಿಸುತ್ತಿಲ್ಲ. ಅಂಚೆ-ತಂತಿ ಮತ್ತು ರೈಲ್ವೆ ಕಾರ್ಮಿಕರು ಕೆಲಸ ಮಾಡುತ್ತಿಲ್ಲ, ಕೆರೆನ್‌ಸ್ಕಿ ಇನ್ನೇನು ಬಂದುಬಿಡುತ್ತಾನೆ. ನಗರದ ರಕ್ಷಣಾದಳವನ್ನು ಇನ್ನೂ ಪೂರ್ತಿ ನಂಬುವಂತಿಲ್ಲ! ಜೊತೆಗೆ ಕೊಸ್ಸಾಕರು ತಿರುಗಿಬೀಳಬಹುದು...

ಮತ್ತೆ, ವಿರುದ್ಧವಾಗಿರುವುದು ಕೇವಲ ಸುಸಂಘಟಿತವಾದ ಬೂರ್ಶ್ವಾವರ್ಗ ಮಾತ್ರವಲ್ಲ. ಬಹುತೇಕ ಎಲ್ಲಾ ಸಮಾಜವಾದಿ ಪಕ್ಷಗಳೂ ಬೋಲ್ಶೆವಿಕರಿಗೆ ತಿರುಗಿಬಿದ್ದಿವೆ. ಕೇವಲ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು, ಕೆಲವೇ ಜನ ಮೆನ್ಶೆವಿಕಿ ಇಂಟರ್‌ನ್ಯಾಷನಲಿಸ್ಟರು ಮತ್ತು ಸೋಷಿಯಲ್ ಡೆಮಾಕ್ರೆಟಿಕ್ ಇಂಟರ್‌ನ್ಯಾಷನಲಿಸ್ಟರು ಮಾತ್ರ ಜೊತೆಗಿದ್ದಾರೆ. ಆದರೆ ಅವರ ಸ್ಥಿತಿಯೂ ಡೋಲಾಯಮಾನವಾಗಿದೆ. ನಿಜಕ್ಕೂ ಜೊತೆಗಿರುವವರೆಂದರೆ ಕಾರ್ಮಿಕ ವರ್ಗ ಮತ್ತು ಸೈನಿಕರು. ರೈತರು ಏನು ಮಾಡುತ್ತಾರೆಂಬುದು ಇನ್ನೂ ಸ್ಪಷ್ಟವಿಲ್ಲ. ಬೋಲ್ಶೆವಿಕರಲ್ಲಿ ಸುಶಿಕ್ಷಿತರು, ತರಬೇತಿ ಹೊಂದಿದವರೂ ಆದ ಜನ ಯಾವತ್ತೂ ಕಡಿಮೆಯೇ.

ಬೋಲ್ಶೆವಿಕ್ ನಾಯಕತ್ವದಲ್ಲಿ ಒಬ್ಬನಾಗಿದ್ದ ರಿಯಾಜ಼ನೊವ್ ಮೆಟ್ಟಿಲಿಳಿದು ಬರುತ್ತಿದ್ದ. ಆತ ಕೊಂಚ ಹಾಸ್ಯಮಯವಾಗಿ 'ನನಗೆ ವಾಣಿಜ್ಯವೆಂದರೆ ಏನಂತಾನೆ ಗೊತ್ತಿಲ್ಲ; ನಾನೀಗ ಅದಕ್ಕೆ ಸಚಿವ' ಎಂದ. ಮಹಡಿಯಲ್ಲಿದ್ದ ಕೆಫೆಯಲ್ಲಿ ಒಬ್ಬ ಸಣ್ಣ ಆಕೃತಿಯ ಮನುಷ್ಯ ಕುಳಿತು ಕೈಲಿದ್ದ ಪೆನ್ಸಿಲ್ ಕಚ್ಚುತ್ತಾ, ಕೊಳಕಾದ ಲಕೋಟೆಯ ಮೇಲೆ ಏನೋ ಗೀಚುತ್ತಿದ್ದ. ಅನೇಕ ದಿನಗಳಿಂದ ಅದೇ ಬಟ್ಟೆಯಲ್ಲಿ ಮಲಗಿ ಏಳುತ್ತಿದ್ದಾನೇನೋ ಎನ್ನುವಂಥ ಉಡುಪು, ಆದರೆ ಅವನು ನಿದ್ದೆಗೆಟ್ಟಿದ್ದ ಎಂಬುದು ಸತ್ಯ. ಅವನೇ ಹಣಕಾಸು ಸಚಿವ ಮೆನ್‌ಜ಼ಿನ್‌ಸ್ಕಿ. ಆ ಹುದ್ದೆಗೆ ಅವನ ಅರ್ಹತೆ? ಹಿಂದೊಮ್ಮೆ ಬ್ಯಾಂಕ್ ಒಂದರಲ್ಲಿ ಗುಮಾಸ್ತನಾಗಿದ್ದುದು, ಅಷ್ಟೆ!

ಮತ್ತೆ ಇಲ್ಲಿ ಓಡುತ್ತಾ ಹೋಗುತ್ತಿರುವವರು, ಓಡುತ್ತಲೇ ಹಾಳೆಗಳ ಮೇಲೆ ಏನೋ ಬರೆದುಕೊಳ್ಳುತ್ತಿರುವವರು ಯಾರು ಗೊತ್ತೇ? ಇವರನ್ನು ಕಮಿಸಾರ್‌ಗಳಾಗಿ ಮಾಡಿ ರಷ್ಯಾದ ನಾಲ್ಕು ದಿಕ್ಕುಗಳಿಗೆ ಅಟ್ಟಲಾಗಿದೆ. ಇವರು ವಾರ್ತೆಯನ್ನು ಹರಡಬೇಕು, ಎಲ್ಲರೊಂದಿಗೆ ವಾದಿಸುತ್ತಾ, ವಿಷಯಗಳನ್ನು ಮನದಟ್ಟುಮಾಡಿಕೊಡಬೇಕು, ಕೈಗೆ ಸಿಕ್ಕ ಆಯುಧದಿಂದ, ಅಭಿಪ್ರಾಯ ಮಂಡನೆಗಳಿಂದ ಹೊಡೆದಾಡುತ್ತಾ ಹೋಗಬೇಕು!

* * *

ಮಹಾಧಿವೇಶನ ಒಂದು ಘಂಟೆಗೆ ಶುರುವಾಗಬೇಕು. ಸಭಾಂಗಣ ಕಿಕ್ಕಿರಿದು ತುಂಬಿದೆ. ಆದರೆ ಇನ್ನೂ ಅಧ್ಯಕ್ಷ ಮಂಡಳಿಯ ಸುಳಿವಿಲ್ಲ. ಬೋಲ್ಶೆವಿಕರು, ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ತಮ್ಮ ತಮ್ಮ ಕೋಣೆಗಳಲ್ಲಿ ಸಮಾಲೋಚನೆ ಮಾಡಿಕೊಂಡಿದ್ದಾರೆ. ಇಡೀ ಮಧ್ಯಾಹ್ನದುದ್ದಕ್ಕೂ ಲೆನಿನ್ ಎಲ್ಲಾ ರಾಜಿ ಪರವಾದ ನಿಲುವುಗಳನ್ನೂ ಹೊಡೆದಾಡಿಕೊಂಡು ಬಂದಿದ್ದಾರೆ. ಬೋಲ್ಶೆವಿಕರಲ್ಲಿ ಸುಮಾರು ಜನ ಯಾವುದಾದರೂ ಸಂಧಾನದ ಮೂಲಕ ಒಂದು ಸಂಯುಕ್ತ ಸಮಾಜವಾದಿ ಸರ್ಕಾರ ಸ್ಥಾಪಿಸೋಣ ಎಂಬ ಅಭಿಪ್ರಾಯದ ಪರವಾಗಿದ್ದರು. "ನಾವು ಅಧಿಕಾರವನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ನಮ್ಮ ವಿರುದ್ಧವಾದ ಶಕ್ತಿಗಳು ತುಂಬ ಬಲವಾಗಿವೆ". ಕಮೆನೇವ್, ರಿಯಜ಼ನೊವ್ ಅವರದ್ದೆಲ್ಲಾ ಇದೇ ಅಭಿಪ್ರಾಯ.

ಆದರೆ ಲೆನಿನ್ ಬಂಡೆಗಲ್ಲಿನಂತೆ ನಿಶ್ಚಲವಾಗಿ ನಿಂತರು. "ರಾಜಿ ಆಗಲು ತಯಾರಿದ್ದವರು ಬೇಕಿದ್ದರೆ ಬರಲಿ. ನಾವಂತೂ ಒಂದು ಅಂಗುಲವನ್ನೂ ಬಿಟ್ಟುಕೊಡುವುದಿಲ್ಲ. ನಾವು ಧೈರ್ಯವಾಗಿ ಮುನ್ನಡೆಯುತ್ತೇವೆ. ಯಾರಾದರೂ ಸಂಗಾತಿಗಳಿಗೆ ಅದು ಕಷ್ಟ ಎನಿಸಿದರೆ ಅವರು ಉಳಿದ ಹೇಡಿಗಳೊಂದಿಗೆ, ರಾಜಿ ಪರವಾದ ಶಕ್ತಿಗಳೊಂದಿಗೆ ಹೊರನಡೆಯಬಹುದು. ನಾವಂತೂ ಕಾರ್ಮಿಕರು, ಸೈನಿಕರೊಂದಿಗೆ ಮುಂದೆ ಸಾಗುತ್ತೇವೆ." ಟ್ರಾಟ್‌ಸ್ಕಿ ಸಹ ಈ ನಿಲುವಿನೊಂದಿಗೆ ನಿಂತ.

ಏಳು ಘಂಟೆಯಾಗುತ್ತಿದ್ದಂತೆ ಎಡವಾದಿ ಸೋಷಲಿಸ್ಟ್ ರೆವಲ್ಯೂಶನರಿಗಳು ತಾವು ಮಿಲಿಟರಿ ಕ್ರಾಂತಿಕಾರಿ ಸಮಿತಿಯೊಂದಿಗೆ ಉಳಿಯುವುದಾಗಿ ಸುದ್ದಿ ಕಳಿಸಿದರು.

"ನೋಡಿ, ಈಗ ನಮ್ಮನ್ನು ಅನುಸರಿಸಿಬರುತ್ತಾರೆ" ಎಂದರು ಲೆನಿನ್. ನಂತರ ನಾವು ಸಭಾಂಗಣದಲ್ಲಿ ಪತ್ರಕರ್ತರ ಮೇಜಿನ ಬಳಿ ಕಾಯುತ್ತಾ ಇದ್ದೆವು.

ನನ್ನ ಗೆಳೆಯನಾದ ಅರಾಜಕತಾವಾದಿ ಪತ್ರಕರ್ತನೊಬ್ಬನ ಸಲಹೆಯಂತೆ ಅಧ್ಯಕ್ಷಮಂಡಳಿ ಏಕೆ ಬರಲಿಲ್ಲವೋ ಎಂದು ನೋಡುತ್ತಾ ಹೋದೆವು. ತ್ಸೆ–ಇ–ಕಾ ಕಛೇರಿಯಲ್ಲಾಗಲೀ, ಪೆತ್ರೋಗ್ರಾಡ್ ಸೋವಿಯತ್‌ನ ಕೋಣೆಯಲ್ಲಾಗಲೀ ಯಾರೂ ಪತ್ತೆ ಇಲ್ಲ. ನಾವು ಸ್ಮೋಲ್ನಿಯಲ್ಲಿ ಹುಡುಕುತ್ತಾ ಅಲೆದಾಡಿದೆವು. ಬೋಲ್ಶೆವಿಕರು ಸೌಂದರ್ಯ ಪ್ರಜ್ಞೆಯಿಲ್ಲದ ಅಜ್ಞಾನಿಗಳು, ಒರಟರು ಎಂದು ನನ್ನ ಗೆಳೆಯ ಬೈದುಕೊಳ್ಳುತ್ತಿದ್ದ. ರಷ್ಯಾದ ಬುದ್ಧಿಜೀವಿ ವರ್ಗದ ಮಾದರಿ ಪ್ರತಿನಿಧಿ ಆತ. ಹಾಗೇ, ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಛೇರಿಗೆ ಬಂದೆವು. ಅಲ್ಲೋ ವಿಪರೀತ ಗದ್ದಲ. ಅದರ ನಡುವೆ ಕ್ರೈಲೆಂಕೋ ನಿಂತಿದ್ದ. ವಿಪರೀತ ಸುಸ್ತಾಗಿದ್ದ ಆತನ ಮೇಲೆ ಶಾಶ್ವತವಾಗಿ ಅಂಟಿಸಿದಂಥ ನಗೆ. ನನ್ನ ಗೆಳೆಯ ಆತನೊಂದಿಗೆ ಹಳೆಯ ಪರಿಚಯ ಹೇಳಿಕೊಂಡು ಮಾತನಾಡಿದ. ಇಬ್ಬರೂ ಹಿಂದೊಮ್ಮೆ ಜೈಲಿನಲ್ಲಿದ್ದರಂತೆ. ಕ್ರೈಲೆಂಕೊ ತುಂಬ ಸ್ನೇಹಭಾವದಿಂದಲೇ ಮಾತನಾಡಿದ. ನಂತರ "ನೋಡಿ ಕಾರ್ಮಿಕ ವರ್ಗದ ಕ್ರಾಂತಿ ತುಂಬ ಯಶಸ್ವಿಯಾಗಿದೆ" ಎಂದು ದೃಢ ಸಂಕಲ್ಪದಿಂದಲೇ ಹೇಳಿದ. ಆಮೇಲೆ ನಗುತ್ತಾ "ಯಶಸ್ವಿಯಾಗಿದೆ ಎಂದುಕೊಂಡಿದ್ದೇನೆ. ಯಾರಿಗೆ ಗೊತ್ತು ಮತ್ತೆ ಜೈಲಿನಲ್ಲಿ ಭೇಟಿಯಾಗುತ್ತೇವೇನೋ!" ಎಂದ.

ನಾವಿಬ್ಬರೂ ಅಲ್ಲಿಂದ ಹೊರಟೆವು. ನನ್ನ ಮಿತ್ರ ಮಾತ್ರ ಕ್ರಾಂತಿ ವಿಫಲವಾಗುತ್ತದೆಂದೂ, ಜನ ಅದಕ್ಕೆ ಸಿದ್ಧರಿಲ್ಲವೆಂದೂ ಗೊಣಗುತ್ತಲೇ ಇದ್ದ.

* * *

ಸಮಯ ಎಂಟು ಘಂಟೆ ನಲವತ್ತು ನಿಮಿಷ.

ಲೆನಿನ್! ಮಹಾನ್ ಲೆನಿನ್‌ರೊಂದಿಗೆ ಅಧ್ಯಕ್ಷೀಯ ಮಂಡಳಿ ಪ್ರವೇಶಿಸುತ್ತಿದ್ದಂತೆ ಗುಡುಗಿನಂತಹ ಹರ್ಷೋದ್ಗಾರದ ಅಲೆಗಳು ಕಿವಿಗೆ ಅಪ್ಪಳಿಸಿದವು. ಎತ್ತರವಲ್ಲದ, ಅಗಲವಾದ ಗಟ್ಟಿ ದೇಹ, ಹೆಗಲ ಮೇಲೆ ದೊಡ್ಡದಾಗಿರುವ ತಲೆ, ಬೋಳಾಗಿ ಉಬ್ಬಿದಂತಿದೆ. ಸಣ್ಣ ಕಣ್ಣುಗಳು, ಮೊಂಡು ಮೂಗು, ಅಗಲವಾದ ಬಾಯಿ, ದೃಢವಾದ ಗಲ್ಲ. ಸದ್ಯಕ್ಕೆ ಮುಖಕ್ಷೌರವಾಗಿದ್ದರೂ, ಹಿಂದೆಯೂ ಮುಂದೂ ಖ್ಯಾತಿ ಪಡೆದ ಗಡ್ಡದ ಮೊಳಕೆಗಳು ಕಾಣತೊಡಗಿವೆ. ಬಟ್ಟೆಗಳು ಅಡ್ಡಾದಿಡ್ಡಿಯಾಗಿವೆ. ಪ್ಯಾಂಟು ಅವರಿಗೆ ಅತಿ ಉದ್ದ ಎನಿಸುವಂತಿದೆ. ಮೇಲ್ನೋಟಕ್ಕೆ ಕೂಡಲೇ ಛಾಪು ಮೂಡಿಸುವ ವ್ಯಕ್ತಿತ್ವ ಎನಿಸಿದ ಈತ ಜನ ಸಮುದಾಯದ ಆರಾಧ್ಯಮೂರ್ತಿ. ಚರಿತ್ರೆಯಲ್ಲಿ ಇಷ್ಟೊಂದು ಪ್ರೀತಿಗೂ,

ಗೌರವಕ್ಕೂ ಕಾರಣರಾದ ನಾಯಕರು ಹೆಚ್ಚಿಲ್ಲ. ವಿಚಿತ್ರವಾಗಿ ಜನಪ್ರಿಯನಾದ ನಾಯಕ. ತನ್ನ ಅಸಾಧಾರಣ ಮೇಧಾಶಕ್ತಿಯಿಂದ ನಾಯಕರಾದವರು. ವರ್ಣರಂಜಿತ ವ್ಯಕ್ತಿತ್ವವಲ್ಲ. ಗಂಭೀರ, ರಾಜಿರಹಿತ, ನಿರ್ವಿಕಾರ, ಆದರೆ ಚಿತ್ತಾಕರ್ಷಕ ವ್ಯಕ್ತಿ ವೈಶಿಷ್ಟ್ಯಗಳು ಕಾಣದಿರುವವರು. ಅದೇನೇ ಇರಲಿ, ಮೂರ್ತ ಸನ್ನಿವೇಶಗಳನ್ನು ಕರಾರುವಾಕ್ಕಾಗಿ ವಿಶ್ಲೇಷಿಸಬಲ್ಲ, ಪ್ರಗಾಢ ಚಿಂತನೆಗಳನ್ನು ಸರಳವಾಗಿ ಮುಂದಿಡಬಲ್ಲ ನಾಯಕ. ಮತ್ತು ಜಾಣತನದೊಂದಿಗೆ ಅಪಾರ ಬೌದ್ಧಿಕ ಧಾರ್ಷ್ಟ್ಯವಿರುವಾತ.

ಕಮೆನೇವ್ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ವರದಿಯನ್ನು ಮಂಡಿಸುತ್ತಿದ್ದ. ಸೇನೆಯಲ್ಲಿ ಮರಣದಂಡನೆಯನ್ನು ರದ್ದುಮಾಡಲಾಗಿತ್ತು, ಪ್ರಚಾರದ ಹಕ್ಕನ್ನು ಪುನರ್ ಸ್ಥಾಪಿಸಲಾಗಿತ್ತು. ರಾಜಕೀಯ ಅಪರಾಧಕ್ಕಾಗಿ ದಸ್ತಗಿರಿಯಾಗಿದ್ದ ಸೈನಿಕರನ್ನು, ಅಧಿಕಾರಿಗಳನ್ನು ಖುಲಾಸೆ ಮಾಡಲಾಗಿತ್ತು. ಕೆರೆನ್‌ಸ್ಕಿಯನ್ನು ಬಂಧಿಸಲು ಮತ್ತು ಖಾಸಗಿ ಮಳಿಗೆಗಳಲ್ಲಿದ್ದ ಆಹಾರ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲು ಆಜ್ಞೆ ನೀಡಲಾಗಿದೆ. ... ಇತ್ಯಾದಿ. ಪ್ರಚಂಡ ಕರತಾಡನ.

'ಬಂಡ್' ಪಕ್ಷದ ಪ್ರತಿನಿಧಿಗಳು, 'ಬೋಲ್ಶೆವಿಕರು ಯಾವ ಒಡಂಬಡಿಕೆಗೂ ಒಪ್ಪುತ್ತಿಲ್ಲ. ಕ್ರಾಂತಿಗೆ ಹಾನಿಯಾಗುತ್ತಿದೆ. ಹಾಗಾಗಿ ನಾವು ಸದನವನ್ನು ಬಹಿಷ್ಕರಿಸಿ ಹೋಗುತ್ತೇವೆ' ಎಂದು ಘೋಷಿಸಿದರು. ಜನರು "ನೀವು ನೆನ್ನೆಯೇ ಬಹಿಷ್ಕರಿಸಿ ಹೋಗಿದ್ದೀರಲ್ಲ, ಇನ್ನೆಷ್ಟು ಬಾರಿ ಹೋಗುತ್ತೀರಿ!" ಎಂದು ತಮಾಷೆ ಮಾಡಿದರು. ನಂತರ ಮೆನ್ಶೆವಿಕಿ ಇಂಟರ್‌ನ್ಯಾಷನಲಿಸ್ಟರ ಸರದಿ. ಅವರಲ್ಲಿ ಕೆಲವರು ಮಾತ್ರ ಸದನದಲ್ಲಿ ಉಳಿದಿದ್ದರು. "ಸೋವಿಯತ್‌ಗಳಿಗೆ ಅಧಿಕಾರ ಹಸ್ತಾಂತರ ಮಾಡುವುದು ಅಪಾಯಕಾರಿ. ನಾವು ಅದನ್ನು ವಿರೋಧಿಸಿಯೂ ಸದನದಲ್ಲಿರುತ್ತೇವೆ" ಎಂದರು.

ನಂತರ ಅನೇಕರು ಬಂದು ಮಾತನಾಡಿದರು. ಕಲ್ಲಿದ್ದಲು ಗಣಿ ಕಾರ್ಮಿಕರ ಪ್ರತಿನಿಧಿಯೊಬ್ಬ, ಶತ್ರು ಕಲೆಡಿನ್‌ನು ಕಲ್ಲಿದ್ದಲು ಸರಬರಾಜಿಗೆ ತಡೆಯೊಡ್ಡದಂತೆ ನೋಡಿಕೊಳ್ಳಬೇಕು ಎಂದ. ಆಮೇಲೆ ಅನೇಕ ಸೈನಿಕ ಪ್ರತಿನಿಧಿಗಳು ಮಾತನಾಡಿದರು.

ಇದೀಗ ಲೆನಿನ್ ಮಾತನಾಡಲು ಬಂದರು. ಮಾತನಾಡಲು ನಿಂತು ಮೇಜಿನ ತುದಿಗಳನ್ನು ಗಟ್ಟಿಯಾಗಿ ಹಿಡಿದಿದ್ದರು. ತಮ್ಮ ಪುಟ್ಟ ಕಣ್ಣುಗಳನ್ನು ಮಿಟುಕಿಸುತ್ತಾ ಅವರು ಇಡಿಯ ಸಭಾಂಗಣವನ್ನು ದಿಟ್ಟಿಸಿನೋಡಿ, ಕಾಯುತ್ತಾ ನಿಂತರು. ಅನೇಕ ನಿಮಿಷಗಳ ಕಾಲ ಮುಂದುವರೆದ ದೀರ್ಘ ಕರತಾಡನದ ಪರಿವೆಯೇ ಇಲ್ಲದವರಂತೆ ಇದ್ದರು. ಕರತಾಡನ ಮುಗಿದ ಮೇಲೆ ಅವರು ನೇರವಾಗಿ ಸರಳವಾಗಿ ವಿಷಯಕ್ಕೆ ಬಂದರು.

**"ನಾವೀಗ ಸಮಾಜವಾದಿ ವ್ಯವಸ್ಥೆಯನ್ನು ನಿರ್ಮಿಸಲು ಪ್ರಾರಂಭ ಮಾಡೋಣ"**

ಮತ್ತೊಮ್ಮೆ ಎಲ್ಲವನ್ನೂ ಮುಳುಗಿಸುವಂತಹ ಜನಸಮುದಾಯದ ಸಂತಸದ ಘರ್ಜನೆ.

"ಮೊದಲನೆಯ ಕೆಲಸವೆಂದರೆ ಶಾಂತಿಯನ್ನು ಸ್ಥಾಪಿಸಲು ಕಾರ್ಯಸಾಧುವಾದ ಕ್ರಮಗಳನ್ನು ಕೈಗೊಳ್ಳುವುದು, ಪರರ ನಾಡನ್ನು ಆಕ್ರಮಿಸಿಕೊಳ್ಳುವಂತಿಲ್ಲ, ಯುದ್ಧ ಪರಿಹಾರದ ಪ್ರಶ್ನೆ ಇಲ್ಲ, ಪ್ರತಿಯೊಂದು ರಾಷ್ಟ್ರವೂ ತನ್ನ ಅಸ್ತಿತ್ವವನ್ನೂ, ಸ್ವಾತಂತ್ರ್ಯವನ್ನೂ ತಾನೇ ನಿರ್ಧರಿಸಿಕೊಳ್ಳಲಾಗುವಂತಹ ರಾಷ್ಟ್ರೀಯತೆಗಳ ಸ್ವಯಂ ನಿರ್ಣಯದ ಹಕ್ಕನ್ನು ಖಾತ್ರಿಪಡಿಸಬೇಕು. ಇವು ನಮ್ಮ ಸೋವಿಯತ್‌ಗಳು ಶಾಂತಿಗಾಗಿ ಮುಂದಿಡುವ ಷರತ್ತುಗಳು. ಇವುಗಳ ಆಧಾರದ ಮೇಲೆ ಶಾಂತಿ ಸ್ಥಾಪನೆಯಾಗಲಿ ಎಂಬುದನ್ನು ನಾವು

ಎಲ್ಲಾ ಯುದ್ಧನಿರತ ರಾಷ್ಟ್ರಗಳ ಜನತೆಯ ಮುಂದಿರಿಸುತ್ತೇವೆ. ನಾವು ಈಗಾಗಲೇ ನೀಡಿರುವ ವಾಗ್ದಾನಕ್ಕನುಗುಣವಾಗಿ ಎಲ್ಲ ರಹಸ್ಯ ಒಪ್ಪಂದಗಳನ್ನೂ ಬಹಿರಂಗ ಪಡಿಸುತ್ತೇವೆ. ಯುದ್ಧ ಮತ್ತು ಶಾಂತಿಯ ಪ್ರಶ್ನೆ ಅದೆಷ್ಟು ಸರಳವಾಗಿದೆಯೆಂದರೆ, ನಾನು ಯಾವ ಪೀಠಿಕೆಯೂ ಇಲ್ಲದೆ, ಎಲ್ಲಾ ಯುದ್ಧ ನಿರತ ರಾಷ್ಟ್ರಗಳ ಜನತೆಯನ್ನು ಉದ್ದೇಶಿಸಿ ಮಾಡುವ ಘೋಷಣೆಯ ಯೋಜನೆಯನ್ನು ಓದುತ್ತೇನೆ."

ಅವರ ಅಗಲವಾದ ಬಾಯಿ ಮುಗುಳ್ನಗುತ್ತಿರುವಂತೆ, ತೋರುತ್ತಿದ್ದಂತೆ ಆತ ಮಾತನಾಡಲಾರಂಭಿಸಿದರು. ಧ್ವನಿ ಗಡುಸಾಗಿತ್ತು. ವರ್ಷಗಟ್ಟಲೆ ಭಾಷಣ ಮಾಡುವುದರಿಂದ ಬರುವ ಗಡಸುತನವೇ ಹೊರತು ಕರ್ಕಶವಲ್ಲ. ಅದರಲ್ಲಿ ಕೊನೆಯೇ ಇಲ್ಲದೆ ಮುಂದುವರೆಯುವುದೇನೋ ಎಂಬಂಥ ಒಂದೇ ಲಯವಿತ್ತು... ಏನನ್ನಾದರೂ ಒತ್ತಿ ಹೇಳಬೇಕೆಂದಾಗ ಅವರು ಮುಂದೆ ಬಾಗುತ್ತಿದ್ದರು. ಆದರೆ ಅತಿಯಾದ ಕೈಚಲನೆ ಇಲ್ಲ. ಆತನ ಮುಂದೆ ಸಾವಿರ ಸರಳ ಮುಖಗಳು – ಗಾಢ ಮೆಚ್ಚುಗೆಯಲ್ಲಿ.

*ಎಲ್ಲಾ ಯುದ್ಧನಿರತ ದೇಶಗಳ ಸರ್ಕಾರಗಳಿಗೂ*
*ಜನತೆಗೂ ಒಂದು ಮನವಿ (ಸಂಗ್ರಹಿತ ರೂಪ)*

*ಕಾರ್ಮಿಕರು, ಸೈನಿಕರು ಹಾಗೂ ರೈತರ ಸೋವಿಯತ್‌ಗಳ ಪ್ರತಿನಿಧಿಗಳ ಸೋವಿಯತ್‌ನ ಮೇಲೆ ಆಧಾರವಾಗಿರುವ ಮತ್ತು ನವೆಂಬರ್ 6 ಮತ್ತು 7ರಂದು ಸಂಭವಿಸಿದ ಕ್ರಾಂತಿಯಿಂದ ಹೊರಹೊಮ್ಮಿರುವ ರೈತ–ಕಾರ್ಮಿಕರ ಸರ್ಕಾರವು ಈ ಕೂಡಲೇ ಎಲ್ಲಾ ಯುದ್ಧನಿರತ ರಾಷ್ಟ್ರಗಳ ಸರ್ಕಾರಗಳಿಗೆ ಹಾಗೂ ಜನತೆಗೆ, ವಿಳಂಬವಿಲ್ಲದೆ ಒಂದು ನ್ಯಾಯಯುತವೂ ಜನತಾಂತ್ರಿಕವೂ ಆದ ಶಾಂತಿಯನ್ನು ಸ್ಥಾಪಿಸಲೋಸುಗ ಮಾತುಕತೆಗಳನ್ನು ಆರಂಭಿಸಬೇಕೆಂದು ಸೂಚಿಸುತ್ತದೆ.*

*ಯುದ್ಧದಿಂದ ನಿತ್ರಾಣರಾದ, ಕಷ್ಟಕಾರ್ಪಣ್ಯಗಳಿಗೆ ತುತ್ತಾದ ಬಹುತೇಕ ಎಲ್ಲಾ ಕಾರ್ಮಿಕರು, ದುಡಿಯುವ ಜನ ಆಶಿಸುವಂಥ ಶಾಂತಿಯ ಬಗ್ಗೆ ನಮ್ಮ ಸರ್ಕಾರ ಪ್ರಸ್ತಾಪಿಸುತ್ತಿದೆ. ಝಾರ್ ಚಕ್ರವರ್ತಿಯನ್ನು ಕಿತ್ತೊಗೆದ ನಂತರ ರಷ್ಯಾದ ರೈತ ಕಾರ್ಮಿಕರು ಶಾಂತಿಗಾಗಿ ಖಚಿತವಾಗಿ ಆಗ್ರಹಿಸುತ್ತಾ ಬಂದಿದ್ದಾರೆ. ಆ ಶಾಂತಿಯೆಂದರೆ ಯುದ್ಧ ಪರಿಹಾರಕ್ಕೆ ಒತ್ತಾಯಿಸದ ಶಾಂತಿ; ಅತಿಕ್ರಮಣವಿಲ್ಲದ ಶಾಂತಿ, ಎಂದರೆ, ವಿದೇಶೀ ಭೂಮಿಯನ್ನು ಕಬಳಿಸದ, ಇತರ ರಾಷ್ಟ್ರೀಯತೆಗಳನ್ನು ಬಲವಂತದಿಂದ ಸ್ವಾಧೀನಪಡಿಸಿಕೊಳ್ಳದೆ ಘೋಷಿಸುವಂಥ ಶಾಂತಿ.*

*ನಮ್ಮ ರಷ್ಯಾದ ಹೊಸ ಸರ್ಕಾರದ ಪ್ರಕಾರ ವಿದೇಶಗಳ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದು ಎಂದರೆ ಯಾವುದೇ ಚಿಕ್ಕ, ದುರ್ಬಲ ರಾಷ್ಟ್ರವನ್ನು, ಸ್ಪಷ್ಟವೂ, ನಿಖರವೂ, ಸ್ವಂತ ಇಚ್ಛೆಯಿಂದ ಉಂಟಾದದ್ದಂಥದ್ದೂ ಆದ ಸಮ್ಮತಿಯಿಲ್ಲದೆ, ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಳ್ಳುವುದು....*

*ಯಾವುದೇ ರಾಷ್ಟ್ರವು ಪ್ರಕಟಪಡಿಸಿದ ಆಶೋತ್ತರಗಳಿಗೆ ವಿರುದ್ಧವಾಗಿ ಇನ್ನೊಂದು ಪ್ರಭುತ್ವವು ಬಲಾತ್ಕಾರದಿಂದ ಅದನ್ನು ವಶಪಡಿಸಿಕೊಂಡಿದ್ದರೆ...*

*... ಅದು ಆ ರಾಷ್ಟ್ರದ ಮೇಲಿನ ದಿಗ್ವಿಜಯವೂ ಹಿಂಸೆಯೂ ಆಗುತ್ತದೆ.*

*ಇಂಥ ಯುದ್ಧಗಳನ್ನು ಮುಂದುವರೆಸಿ ಬಲಿಷ್ಠವೂ, ಶ್ರೀಮಂತವೂ ಆದ ರಾಷ್ಟ್ರಗಳು, ದುರ್ಬಲ ಸೋತ ರಾಷ್ಟ್ರೀಯತೆಗಳನ್ನು ತಮ್ಮ ನಡುವೆ ಹಂಚಿಕೊಳ್ಳುವುದನ್ನು ನಮ್ಮ*

*ಸರ್ಕಾರವು ಮಾನವತೆಯ ವಿರುದ್ಧವಾದ ಅತ್ಯಂತ ಹೇಯ ಅಪರಾಧ ಎಂದು ಪರಿಗಣಿಸುತ್ತದೆ...*

*ನಮ್ಮ ಸರ್ಕಾರವು ಎಲ್ಲಾ ರಹಸ್ಯ ವಿದೇಶಾಂಗ ಮಾತುಕತೆಗಳನ್ನು ರದ್ದುಪಡಿಸುತ್ತದೆ... ಮತ್ತು ಬಂಡವಾಳಿಗರ, ಭೂಮಾಲಿಕರ ಸರ್ಕಾರವು ಇಲ್ಲಿಯವರೆಗೂ ಮಾಡಿಕೊಂಡಿರುವ ಎಲ್ಲ ಗುಪ್ತ ಸಂಧಿಗಳನ್ನು, ಒಪ್ಪಂದಗಳನ್ನೂ ಬಯಲಿಗೆ ಎಳೆಯುತ್ತದೆ...*

*ಎಲ್ಲಾ ಸರ್ಕಾರಗಳಿಗೆ, ಜನತೆಗಳಿಗೆ ನಾವು ಶಾಂತಿಗಾಗಿ ಸಾರ್ವಜನಿಕವಾಗಿ ಮಾತುಕತೆಗಳನ್ನು ನಡೆಸಲು ಹೇಳಿದ್ದೇವಷ್ಟೇ – ನಾವಂತೂ ಇದನ್ನು ಈ ಕೂಡಲೇ ಟೆಲಿಗ್ರಾಫ್ ಸಂಪರ್ಕದ ಮೂಲಕ, ಪತ್ರಗಳ ಮೂಲಕ, ವಿವಿಧ ರಾಷ್ಟ್ರಗಳ ಪ್ರತಿನಿಧಿಗಳೊಂದಿಗೆ ಪ್ರಾಥಮಿಕ ಅಭಿಪ್ರಾಯ ವಿನಿಮಯಗಳ ಮೂಲಕ ಆರಂಭಿಸಲು ಬದ್ಧರಿದ್ದೇವೆ....*

*ನಮ್ಮ ಸರ್ಕಾರದ ಸಲಹೆಯೇನೆಂದರೆ... ಎಲ್ಲಾ ಯುದ್ಧ ನಿರತ ರಾಷ್ಟ್ರಗಳೂ ಮೂರು ತಿಂಗಳ ಕಾಲ ಕದನವಿರಾಮವನ್ನು ಘೋಷಿಸುವುದು ಮತ್ತು ಆ ಅವಧಿಯಲ್ಲಿ ಪ್ರತಿನಿಧಿಗಳೊಂದಿಗೆ ಮಾತುಕತೆಗಳನ್ನು ಆರಂಭಿಸುವುದು... ಹಾಗೂ ಎಲ್ಲಾ ದೇಶಗಳಲ್ಲಿಯೂ ಜನತೆಯ ಪ್ರತಿನಿಧಿಗಳ ಸಭೆಯನ್ನು ಕರೆದು ತನ್ಮೂಲಕ ಶಾಂತಿಯ ಒಪ್ಪಂದದ ನಿಯಮಗಳನ್ನು ರೂಪಿಸುವುದು.*

*ರಷ್ಯಾದ ತಾತ್ಕಾಲಿಕ ರೈತ–ಕಾರ್ಮಿಕರ ಸರ್ಕಾರವು ಯುದ್ಧನಿರತ ರಾಷ್ಟ್ರಗಳ ಸರ್ಕಾರಗಳಿಗೆ, ಜನತೆಗೆ ಈ ಒಂದು ಶಾಂತಿಯ ಪ್ರಸ್ತಾಪವನ್ನು ಮುಂದಿಡುತ್ತಾ ಅದೇ ಸಮಯದಲ್ಲಿ... ಮೂರು ಮಹಾನ್ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯ ಪ್ರಜ್ಞಾವಂತ ಕಾರ್ಮಿಕರಿಗೆ ವಿಶಿಷ್ಟವಾದ ಮನವಿಯನ್ನು ಮಾಡಿಕೊಳ್ಳುತ್ತದೆ. ಈ ಕಾರ್ಮಿಕರು ಪ್ರಗತಿ ಹಾಗೂ ಸಮಾಜವಾದಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದವರು. ಇಂಗ್ಲೆಂಡಿನ ಚಾರ್ಟಿಸ್ಟ್ ಚಳುವಳಿ, ಫ್ರಾನ್ಸ್‌ನಲ್ಲಿ ಒಂದರ ಮೇಲೊಂದರಂತೆ ನಡೆದ ಕ್ರಾಂತಿಗಳು, ಜರ್ಮನ್ ಕಾರ್ಮಿಕರು ನಡೆಸಿರುವ ನಿದರ್ಶನೀಯ ದೀರ್ಘಕಾಲೀನ, ರಾಜಿರಹಿತ ಹೋರಾಟಗಳು... ಇವೆಲ್ಲವೂ ಕೂಡ... ವಿವಿಧ ದೇಶಗಳ ಕಾರ್ಮಿಕರಿಗೆ ಮಾನವೀಯತೆಯನ್ನು ಯುದ್ಧದ ಭೀಕರತೆಯಿಂದ ಪಾರುಮಾಡಬೇಕಾದ ಅಗತ್ಯತೆಯನ್ನು ಮನವರಿಕೆ ಮಾಡಿಸುತ್ತವೆ... ಮತ್ತು ಈ ಕಾರ್ಮಿಕರು ತಮ್ಮ ಉತ್ಸಾಹಪೂರ್ಣ, ಅವಿರತ, ನಿರ್ಣಾಯಕ ಪ್ರಯತ್ನಗಳ ಮೂಲಕ ಶಾಂತಿ ಸ್ಥಾಪನೆಗೂ, ಶೋಷಿತ ದುಡಿಯುವ ಜನತೆಯನ್ನು ಎಲ್ಲಾ ಗುಲಾಮಗಿರಿ ಹಾಗೂ ಶೋಷಣೆಯಿಂದ ಬಿಡುಗಡೆ ಮಾಡುವ ಧ್ಯೇಯಕ್ಕೂ ಸಹಾಯ ಮಾಡುತ್ತಾರೆ ಎಂಬುದು ನಮಗೆ ಖಾತ್ರಿಯಾಗಿದೆ."*

ಗಂಭೀರ ಕರತಾಡನದ ಕಿವಿಗಡಚಿಕ್ಕುವ ಸದ್ದು ನಿಂತನಂತರ ಲೆನಿನ್ ಮತ್ತೆ ಮಾತನಾಡಿದರು :

"ಈ ಘೋಷಣೆಯನ್ನು ಮಹಾಧಿವೇಶನವು ಅಂಗೀಕರಿಸಬೇಕೆಂದು ನಾವು ಸೂಚಿಸುತ್ತೇವೆ. ಯುದ್ಧನಿರತ ದೇಶಗಳ ಜನತೆಗೆ ಮಾತ್ರ ನಾವು ಮನವಿ ಮಾಡಿಕೊಂಡರೆ ಶಾಂತಿ ಸ್ಥಾಪನೆಯಲ್ಲಿ ವಿಳಂಬವಾಗುತ್ತದೆ. ಆದ್ದರಿಂದ ನಾವು ಅಲ್ಲಿನ ಸರ್ಕಾರಗಳಿಗೂ ಮನವಿ ಮಾಡಿಕೊಳ್ಳುತ್ತಿದ್ದೇವೆ. ಕದನ ವಿರಾಮದ ಸಮಯದಲ್ಲಿ ಶಾಂತಿಯ ಕುರಿತು ನಾವು ರೂಪಿಸುವ ನಿಬಂಧನೆಗಳನ್ನು ನಂತರ ಸಂವಿಧಾನಾತ್ಮಕ ಶಾಸನಸಭೆಯ ಮುಂದೆ ಅದರ

ಸಮ್ಮತಿಗಾಗಿ ಮಂಡಿಸುತ್ತೇವೆ. ಕದನ ವಿರಾಮದ ಸಮಯವನ್ನು ಮೂರು ತಿಂಗಳು ಎಂದು ನಿಗದಿಮಾಡಿರುವುದೇಕೆಂದರೆ ಜನತೆಗೆ ರಕ್ತಪಾತದ ಕಗ್ಗೊಲೆಯ ನಂತರ ವಿಶ್ರಾಂತಿ ಬೇಕಾಗಿದೆ ಹಾಗೂ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಲು ಸಮಯಾವಕಾಶ ಅಗತ್ಯವಿದೆ. ಶಾಂತಿಯ ಪ್ರಸ್ತಾಪದ ಬಗ್ಗೆ ಸಾಮ್ರಾಜ್ಯಶಾಹಿ ಸರ್ಕಾರಗಳಿಂದ ಪ್ರತಿರೋಧ ಬರುವುದು ಖಂಡಿತ. ಅದರ ಬಗ್ಗೆ ನಮಗೆ ಯಾವ ಭ್ರಮೆಯೂ ಇಲ್ಲ.

"ಆದರೆ ಎಲ್ಲಾ ಯುದ್ಧ ನಿರತ ರಾಷ್ಟ್ರಗಳಲ್ಲೂ ಶೀಘ್ರದಲ್ಲೇ ಕ್ರಾಂತಿಗಳು ಶುರುವಾಗಲಿವೆ ಎಂಬ ಭರವಸೆ ನಮ್ಮದು. ಆದ್ದರಿಂದಲೇ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯ ಕಾರ್ಮಿಕರಿಗೆ ನಾವು ವಿಶೇಷವಾಗಿ ಮನವಿ ಮಾಡಿಕೊಂಡಿದ್ದೇವೆ."

ತಮ್ಮ ಮಾತನ್ನು ಮುಗಿಸುತ್ತಾ ಅವರು ಹೇಳಿದರು. "ನವೆಂಬರ್ 6 ಮತ್ತು 7ರ ಕ್ರಾಂತಿಯು ಸಾಮಾಜಿಕ ಹೊಸ ಯುಗವನ್ನು ಆರಂಭಿಸಿದೆ... ಕಾರ್ಮಿಕ ಚಳುವಳಿಯು ಶಾಂತಿ ಮತ್ತು ಸಮಾಜವಾದದ ಹೆಸರಿನಲ್ಲಿ ಗೆಲುವನ್ನು ಸಾಧಿಸುತ್ತದೆ ಮತ್ತು ತನ್ನ ಗುರಿಯನ್ನು ಮುಟ್ಟುತ್ತದೆ..."

ಅವರ ಮಾತಿನಲ್ಲಿ ಪ್ರಶಾಂತವಾದದ್ದು, ಶಕ್ತಿಶಾಲಿಯಾದದ್ದೂ ಆದಂಥ ಜನತೆಯ ಮನಸ್ಸನ್ನು ಕಲಕುವಂಥ ಯಾವುದೋ ಅಂಶವಿತ್ತು. ಲೆನಿನ್ ಮಾತನಾಡಿದಾಗ ಜನತೆ ಅದರಲ್ಲಿ ಅದೇಕೆ ವಿಶ್ವಾಸವನ್ನು ಬೆಳೆಸಿಕೊಳ್ಳುತ್ತಾರೆ ಎಂಬುದು ಅರ್ಥವಾಗುವಂತಿತ್ತು.

ರಾಜಕೀಯ ಬಣಗಳ ನಾಯಕರಿಗೆ ಮಾತ್ರ ಮಾತನಾಡಲು ಅವಕಾಶ ನೀಡುವುದಾಗಿಯೂ, ಅವರು ಹದಿನೈದು ನಿಮಿಷ ಮಾತ್ರ ಮಾತನಾಡಬೇಕೆಂದೂ ಸಭೆ ತೀರ್ಮಾನಿಸಿತು.

ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳ ಪರವಾಗಿ ಕರೆಲಿನ್ ಮಾತನಾಡಿದ : "ಭಿನ್ನಾಭಿಪ್ರಾಯಗಳಿದ್ದಾಗ್ಯೂ ಘೋಷಣೆಯ ಮುಖ್ಯ ತಿರುಳಿನ ಜೊತೆ ಸಹಮತವಿರುವುದರಿಂದ ನಾವು ಬೆಂಬಲಿಸಿ ಮತ ಹಾಕುತ್ತೇವೆ" ಎಂದು ಆತ ಹೇಳಿದ. ಸೋಷಲ್ ಡೆಮಾಕ್ರೆಟಿಕ್ ಇಂಟರ್‌ನ್ಯಾಷನಲಿಸ್ಟ್ ಪರವಾಗಿ ಮಾತನಾಡಿದ ಕ್ರಮರೊವ್ ಎಂಬಾತ ವಿರೋಧಿ ಬಣದ ವಿದೂಷಕನೆಂದೇ ಹೆಸರು ಮಾಡಿದವನು. ಎಲ್ಲಾ ಸಮಾಜವಾದಿಗಳ ಒಕ್ಕೂಟ ರಚನೆಯಾದರೆ ತಾವು ಕಾರ್ಯಕ್ರಮವನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ಹೇಳಿದ. ಅದಾದ ನಂತರ ಉಕ್ರೇನಿನ ಸೋಷಲ್ ಡೆಮಾಕ್ರೆಸಿ, ಲಿಥುವೇನಿಯನ್ ಸೋಷಲ್ ಡೆಮಾಕ್ರೆಸಿ, ಪಾಪ್ಯುಲಿಸ್ಟ್ ಸೋಷಲಿಸ್ಟರು, ಪೋಲಿಶ್ ಸೋಷಲ್ ಡೆಮಾಕ್ರೆಸಿ, ಪೋಲಿಶ್ ಸೋಷಲಿಸ್ಟರು, ಲೆಟಿಶ್ ಸೋಷಲ್ ಡೆಮಾಕ್ರೆಸಿ, ಎಲ್ಲರೂ ತಮ್ಮ ಬೆಂಬಲವನ್ನು ಘೋಷಿಸಿದರು.

ಅವರೆಲ್ಲರಲ್ಲೂ ಯಾವುದೋ ಬೆಳಕಿನ ಕಿಡಿ ಹೊತ್ತಿಕೊಂಡಂತಿತ್ತು. ಅವರಲ್ಲಿ ಒಬ್ಬಾತ "ಬರಲಿರುವ ಜಾಗತಿಕ ಕ್ರಾಂತಿಯ ಮುಂಚೂಣಿದಳ ನಾವೇ" ಎಂದ. ಇನ್ನೊಬ್ಬಾತ "ಇದೊಂದು ಹೊಸ ಸೋದರತ್ವದ ಯುಗ. ಇದರಲ್ಲಿ ಎಲ್ಲಾ ಜನತೆಯೂ ಒಂದು ಕುಟುಂಬವಾಗುತ್ತಾರೆ" ಎಂದ. ಒಬ್ಬಾತ ಮಾತ್ರ ಪ್ರಶ್ನಿಸಿದ : "ಇಲ್ಲೊಂದು ವೈರುಧ್ಯ ಇದೆ. ಮೊದಲು, ನೀವು ಯಾವುದೇ ಅತಿಕ್ರಮಣ, ಯುದ್ಧ ಪರಿಹಾರ ಇಲ್ಲದ ಶಾಂತಿ ಎನ್ನುತ್ತೀರಿ. ಆಮೇಲೆ ಶಾಂತಿಯು ಯಾವುದೇ ಪ್ರಸ್ತಾಪವನ್ನಾದರೂ

ಗಣನೆಗೆ ತಗೊಳ್ಳೋಕೆ ತಯಾರಿದೀವಿ ಅಂತೀರಿ. ಗಣನೆಗೆ ತಗೊಳ್ಳೋದು ಅಂದ್ರೆ, ಒಪ್ಕೊಳ್ಳೋದು ಅಂತಾನೇ..."

ಲೆನಿನ್ ಕೂಡಲೇ ನಿಂತುಕೊಂಡರು. "ನಮಗೆ ನ್ಯಾಯಯುತವಾದ ಶಾಂತಿ ಬೇಕು. ಆದರೆ ನಮಗೆ ಕ್ರಾಂತಿಕಾರಿ ಯುದ್ಧ ಎಂದರೆ ಭಯವಿಲ್ಲ... ಪ್ರಾಯಶಃ ನಮ್ಮ ಶಾಂತಿಯ ಮನವಿಗೆ ಸಾಮ್ರಾಜ್ಯಶಾಹಿ ಸರ್ಕಾರಗಳು ಓಗೊಡುವುದಿಲ್ಲ – ಆದರೆ ನಾವು ಇದೇ ಕೊನೆ ಮಾತು, ಇದೇ ಗಡುವು ಅಂತ ಯಾವುದನ್ನೂ ಘೋಷಿಸೋದಿಲ್ಲ. ಯಾಕೆಂದರೆ ಅಂಥ ಘೋಷಣೆಗೆ 'ಸಾಧ್ಯವಿಲ್ಲ' ಅಂತ ಮಾರುತ್ತರ ಕೊಡೋದು ಸುಲಭವಾಗುತ್ತೆ... ಜರ್ಮನಿಯ ಕಾರ್ಮಿಕ ವರ್ಗಕ್ಕೆ ನಾವು ಶಾಂತಿಪರವಾದ ಯಾವುದೇ ಪ್ರಸ್ತಾಪವನ್ನಾದರೂ ಗಣನೆಗೆ ತೆಗೆದುಕೊಳ್ಳಲು ಸಿದ್ಧರಿದ್ದೇವೆ ಅನಿಸಿದರೆ ಆಗ ಪ್ರಾಯಶಃ ಅವರ ಸಹನೆಯ ಕಟ್ಟೆ ಒಡೆದೀತು – ಜರ್ಮನಿಯಲ್ಲಿ ಕ್ರಾಂತಿ ಶುರುವಾಗುತ್ತದೆ.

"ಶಾಂತಿಯ ಎಲ್ಲ ನಿಬಂಧನೆಗಳನ್ನೂ ನಾವು ಪರೀಕ್ಷಿಸಲು ತಯಾರಿದ್ದೇವೆ. ಆದರೆ ಅದರರ್ಥ ನಾವು ಅವುಗಳನ್ನು ಒಪ್ಪಿಕೊಳ್ಳುತ್ತೇವೆ ಎಂದಲ್ಲ. ನಾವು ನಮ್ಮ ಕೆಲವು ಷರತ್ತುಗಳಿಗಾಗಿ ಕೊನೆಯವರೆಗೂ ಹೋರಾಡಲು ಸಿದ್ಧ. ಆದರೆ ಕೆಲವಕ್ಕೋಸ್ಕರ ಯುದ್ಧವನ್ನು ಮುಂದುವರೆಸುವುದು ಅಸಾಧ್ಯವಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ನಮಗೆ ಯುದ್ಧಕ್ಕೆ ಕೊನೆ ಹಾಡುವುದು ಅಗತ್ಯವಾಗಿದೆ..."

ಸರಿಯಾಗಿ ಹತ್ತು ಘಂಟೆ ಮೂವತ್ತೈದು ನಿಮಿಷಕ್ಕೆ, ಕಮೆನೇವ್ ಘೋಷಣೆಯ ಪರವಾಗಿರುವವರೆಲ್ಲರೂ ಕೈ ಎತ್ತಬೇಕೆಂದು ಘೋಷಿಸಿದ. ಒಬ್ಬ ವಿರೋಧಿಸಲು ಕೈ ಎತ್ತಿದವನೂ ಹಿಂಜರಿದ. ಘೋಷಣೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಇದ್ದಕ್ಕಿದ್ದಂತೆ, ಏಕಕಾಲದಲ್ಲಿ ಹುಟ್ಟಿದ ಪ್ರೇರಣೆಯಿಂದ ನಾವೆಲ್ಲರೂ ನಿಂತು ನಯವಾಗಿ ಮೇಲೇಳುತ್ತಿದ್ದ 'ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್' ಗೀತೆಯ ಸ್ವರಮೇಳದಲ್ಲಿ ತೊದಲುತ್ತಾ ಸೇರಿಕೊಂಡುಬಿಟ್ಟಿದ್ದೆವು. ಮುಖದಲ್ಲಿ ಬಿಳಿಕಪ್ಪು ಕಲೆಗಳಿದ್ದ ವೃದ್ಧ ಸೈನಿಕನೊಬ್ಬ ಮಗುವಿನಂತೆ ಬಿಕ್ಕುತ್ತಿದ್ದ. ಹೆಸರಾಂತ ಮಹಿಳಾ ನಾಯಕಿ, ಅಲೆಕ್ಸಾಂಡ್ರಾ ಕೊಲಂತಾಯ್ ತನ್ನ ಉಕ್ಕಿಬರುತ್ತಿದ್ದ ಕಣ್ಣೀರನ್ನು ತಡೆಯಲು ಒಂದೇ ಸಮನೆ ರೆಪ್ಪೆಗಳನ್ನು ಮುಚ್ಚಿ ತೆಗೆಯುತ್ತಿದ್ದಳು. ಅದರ ಉದ್ಘೋಷ ಸಭಾಂಗಣವನ್ನು ತುಂಬಿ, ಬಾಗಿಲು ಕಿಟಕಿಗಳನ್ನು ಸೀಳಿಕೊಂಡು ಹೊರಗಿನ ನಿಶ್ಶಬ್ದ ಆಕಾಶವನ್ನೇ ತುಂಬಿಬಿಟ್ಟಿತ್ತು. ಅದು ಮುಗಿದಾಗ ಒಂದು ರೀತಿಯ ಮುಜುಗರದ ಮೌನ ಆವರಿಸಿಕೊಂಡಿತ್ತು. ಇದ್ದಕ್ಕಿದ್ದಂತೆ ಹಿಂದುಗಡೆಯಿಂದ ಯಾರೋ ಕೂಗಿಕೊಂಡರು, "ಕಾಮ್ರೇಡ್ಸ್, ಸ್ವಾತಂತ್ರ್ಯಕ್ಕಾಗಿ ಮಡಿದವರನ್ನು ನೆನಪಿಗೆ ತಂದುಕೊಳ್ಳೋಣ."

ಆಗ ನಾವು ಶವಯಾತ್ರೆಯ ಸಂದರ್ಭದ ಕ್ರಾಂತಿಗೀತೆಯೊಂದನ್ನು ಒಟ್ಟಾಗಿ ಹಾಡಲಾರಂಭಿಸಿದೆವು. ಅದೊಂದು ನಿಧಾನವಾದ, ವೇದನೆಯ, ವಿದಾಯದ ಹಾಡು, ಆದರೆ ವಿಜಯದ ಲಹರಿಯೂ ಇರುವ ಹಾಡು, ಮನಕಲಕುವ ಹಾಗೂ ರಷ್ಯನ್ ವೈಶಿಷ್ಟ್ಯತೆಯಿರುವ ಹಾಡು. ಎಷ್ಟೇ ಆಗಲಿ 'ಇಂಟರ್‌ನ್ಯಾಷನಲ್'ಗೆ ಒಂದು ಪರಕೀಯ ಗುಣವಿದೆ. ಕತ್ತಲಲ್ಲಿ ಹುದುಗಿಹೋದ ಆ ಹುತಾತ್ಮರನ್ನು ಇಂದು ಇಲ್ಲಿ ಪ್ರತಿನಿಧಿಸುವವರ ಹೃದಯಾಂತರಾಳದಿಂದ ಆ ಹಾಡು ಮೂಡಿಬಂದಂತಿತ್ತು. ಹೊಸ ರಷ್ಯಾದ ಕುರಿತಾದ

ಅಸ್ಪಷ್ಟ ಮುನ್ನೋಟದಿಂದಲೂ ಅಥವಾ ಅದಕ್ಕಿಂತ ಹೆಚ್ಚಿನ ಮುಂಗಾಣ್ಕೆಯಿಂದಲೂ ಅದು ಬಂದಿರಬಹುದು.

**ಮಾರಣಾಂತಿಕ ಕದನದಲಿ ಕುಸಿದಿದ್ದೆ ನೀನು**
**ಜನರ ಬಿಡುಗಡೆಗಾಗಿ, ಘನತೆಗಾಗಿ**
**ಜೀವವನು, ಒಲಿದ ಎಲ್ಲವನೂ ತ್ಯಜಿಸಿದ್ದೆ ನೀನು**
**ಕ್ರೂರ ಜೈಲು, ಗಡಿಪಾರು ಸರಪಳಿಯ ತೂಗಿ ತೂಗಿ**
**ನೊಂದ ಸೋದರರಿಗಾಗಿ ಹೊತ್ತೆ ಬೇಡಿಗಳನು**
**ನ್ಯಾಯ ಕತ್ತಿಗಿಂತಲೂ ಅಜೇಯ ಎಂಬ ನಂಬಿಕೆಯಲಿ**
**ಬಲಿದಾನದಾ ಲೆಕ್ಕ ಕೇಳುವ ದಿನ ಬರಲಿ**
**ದರ್ಪಧೂಳಾಗಿ ಜನರೆ ದೊರೆಯಾಗೋ ಕಾಲ ಹತ್ತಿರವಿರಲಿ**
**ವಿದಾಯ ಸೋದರನೆ ಉದಾತ್ತ ಹಾದಿಯವನೆ**
**ಹಿಂದೆ ಬರಲಿದೆ ಹೊಸ ಸೈನ್ಯ ಸಾವಿನಾ ಭಯವಿಲ್ಲದವರು**
**ವಿದಾಯ ಸೋದರನೆ ಗೋರಿ ಬಳಿಇದುವೆ ಸಂಕಲ್ಪ**
**ಜನರ ಸ್ವಾತಂತ್ರ್ಯ ಸಂತಸಕೇ ನಮ್ಮ ಸಮರ...**

ಇದಕ್ಕಾಗಿ, ಕೇವಲ ಇದಕ್ಕಾಗಿ ಅಲ್ಲವೇ ರಾಜಧಾನಿಯ ಮಾರ್ಸ್‌ಫೀಲ್ಡ್ ಉದ್ಯಾನದಲ್ಲಿನ 'ಬ್ರದರ್‌ಹುಡ್ ಗ್ರೇವ್' (ಸೋದರರ ಗೋರಿ)ನಲ್ಲಿ ಚಿರನಿದ್ರೆಯಲ್ಲಿರುವ ಹುತಾತ್ಮರು ಮಾರ್ಚ್ ತಿಂಗಳಿನಲ್ಲಿ ಬಲಿದಾನ ಮಾಡಿದ್ದು! ಇದಕ್ಕಾಗಿಯೇ ಜೈಲುಗಳಲ್ಲಿ ಸಾವಿರಾರು ಜನ, ದಶಸಹಸ್ರಗಟ್ಟಲೆ ಜನ ಜೀವತ್ಯಾಗ ಮಾಡಿದ್ದು! ಗಡಿಪಾರಿನ ಶಿಕ್ಷೆಯಲಿ, ಸೈಬೀರಿಯಾದ ಗಣಿಗಳಲ್ಲಿ ಅಸು ನೀಗಿದ್ದು! ಕ್ರಾಂತಿ ಯಥಾವತ್ ಅವರಂದುಕೊಂಡಂತೆ ಆಗಮಿಸಿಲ್ಲ – ಬುದ್ಧಿಜೀವಿಗಳು ಬಯಸಿದಂತೆಯೂ ಬಂದಿಲ್ಲ! ಆದರೆ ಒರಟಾಗಿ, ಶಕ್ತಿಶಾಲಿಯಾಗಿ, ಸೂತ್ರಗಳನ್ನು ಅಸಹನೆಯಿಂದ ಪಕ್ಕಕ್ಕೆ ಸರಿಸಿ, ಭಾವಾತಿರೇಕದ ಬಗ್ಗೆ ತಿರಸ್ಕಾರ ತೋರುತ್ತಾ ಬಂದೇಬಿಟ್ಟಿದೆ; ವಾಸ್ತವ ರೂಪದಲ್ಲಿ...

ಇದೀಗ, ಲೆನಿನ್ ಭೂಮಿಯ ಕುರಿತಾದ ಡಿಕ್ರಿಯನ್ನು ಓದಲಾರಂಭಿಸಿದರು: (ಸಂಗ್ರಹ)

(1) ಎಲ್ಲಾ ಜಮೀನಿನ ಖಾಸಗಿ ಒಡೆತನವನ್ನು, ಈ ಕೂಡಲೇ ಯಾವ ಪರಿಹಾರವೂ ನೀಡದೆ, ರದ್ದುಪಡಿಸಲಾಗಿದೆ.

(2) ಜಮೀನ್ದಾರರ, ರಾಜರ, ಮಠಗಳ, ಚರ್ಚುಗಳ ಜಮೀನನ್ನು ಅದರಲ್ಲಿರುವ ಯಾವುದೇ ಕಟ್ಟಡ ಮತ್ತು ಜಾನುವಾರುಗಳೊಂದಿಗೆ ಈ ಕೂಡಲೇ ಪಟ್ಟಣಗಳ ಭೂಸಮಿತಿಗಳಿಗೆ ಹಾಗೂ ರೈತ ಪ್ರತಿನಿಧಿಗಳ ಸೋವಿಯತ್‌ಗಳಿಗೆ ವರ್ಗಾಯಿಸಲಾಗಿದೆ.

(3) ಇನ್ನು ಮುಂದೆ ಜನತೆಗೆ ಸೇರಿದ ಈ ಆಸ್ತಿಗೆ ಯಾರೇ ಧಕ್ಕೆ ತಂದರೂ ಅದನ್ನು ಅಪರಾಧ ಎಂದು ಪರಿಗಣಿಸಿ ಶಿಕ್ಷಿಸಲಾಗುತ್ತದೆ. ರೈತ ಪ್ರತಿನಿಧಿಗಳ ಜಿಲ್ಲಾ ಸೋವಿಯತ್‌ಗಳು ವಶಪಡಿಸಿಕೊಂಡ ಎಲ್ಲಾ ಆಸ್ತಿಯ ಲೆಕ್ಕವನ್ನು ಪಟ್ಟಿಮಾಡಿಡ ತಕ್ಕದ್ದು. ವರ್ಗಾವಣೆಯ ಸಮಯದಲ್ಲಿ ಸಂಪೂರ್ಣ ಶಿಸ್ತು, ವ್ಯವಸ್ಥೆಯನ್ನು ಕಾಪಾಡಿಕೊಳ್ಳತಕ್ಕದ್ದು.

(4) ಈ ಮಹಾನ್ ಭೂಸುಧಾರಣೆಯನ್ನು ಹೊಸ ಶಾಸನ ರಚಿಸುವವರೆಗೂ, ಅಖಿಲ

ರಷ್ಯಾ ರೈತ ಪ್ರತಿನಿಧಿಗಳ ಸೋವಿಯತ್ ನೀಡಿರುವ ನಕಾಜ್ (ಸೂಚನೆ)ಗಳಿಗೆ ಅನುಗುಣವಾಗಿ ಮಾಡತಕ್ಕದ್ದು.

ಲೆನಿನ್ ವಿವರಿಸುತ್ತಾ ಹೋದರು : "ಹಿಂದಿನ ಸಚಿವ ಚೆರ್ನೋವ್ ಮಾಡಲೆತ್ನಿಸಿದಂತೆ ಇದು ಮೇಲಿನಿಂದ ಹೇರುವ ಸುಧಾರಣೆ ಅಲ್ಲ. ಇದನ್ನು ಬುಡಮಟ್ಟದಲ್ಲಿ ಆಯಾ ಸ್ಥಳದಲ್ಲೇ ನಿರ್ಧರಿಸಲಾಗುತ್ತದೆ. ಆಯಾ ಪ್ರದೇಶಕ್ಕನುಗುಣವಾಗಿ ಪ್ರತಿ ರೈತನಿಗೆ ದೊರಕುವ ಭೂಮಿಯ ವಿಸ್ತೀರ್ಣ ತೀರ್ಮಾನವಾಗುತ್ತದೆ.

"ಹಂಗಾಮಿ ಸರ್ಕಾರದ ಆಡಳಿತದ ಕಾಲದಲ್ಲಿ, ಪ್ರಧಾನಿ ಕೆರೆನ್‌ಸ್ಕಿ ಮತ್ತು ಅವನ ಗೆಳೆಯರು ರಚಿಸಿದ ಭೂಸಮಿತಿಗಳನ್ನೇ ಎಸ್ಟೇಟುಗಳ ಮಾಲಿಕರಾಗಿದ್ದ ಸಾಮಂತರು ಧಿಕ್ಕರಿಸಿದ್ದರು." ಈ ಬಾರಿ ಹೀಗಾಗುವುದು ಅಸಾಧ್ಯವಾಗಿತ್ತು.

ಚರ್ಚೆಗಳು ಆರಂಭವಾಗುವ ಮುನ್ನ ರೈತ ಸೋವಿಯತ್‌ಗಳ ಕಾರ್ಯಕಾರಿಣಿಯ ಸದಸ್ಯನಾಗಿದ್ದ ಪಿಯಾನಿಕ್ ಎಂಬುವವನು ಸಿಟ್ಟಿನಿಂದ ವೇದಿಕೆ ಹತ್ತಿ ಕೂಗಾಡಿದ : "ನಮ್ಮ ಕಡೆಯ ಸಚಿವರಾದ ಸಲಾಝ್‌ಕಿನ್, ಮಾಸ್ಲೊವ್‌ರನ್ನು ಇನ್ನೂ ಪೀಟರ್-ಪಾಲ್ ಕೋಟೆಯಲ್ಲಿ ಬಂಧಿಸಿಡಲಾಗಿದೆ. ಅವರನ್ನು ಬಿಡುಗಡೆ ಮಾಡಿ." ಇನ್ನೊಬ್ಬ ಸೈನಿಕ ಎದ್ದು "ಅವರ ಕೂದಲೂ ಕೊಂಕಬಾರದು. ಇಲ್ಲದಿದ್ದರೆ ಬಂಡಾಯ ಶುರುವಾಗುತ್ತದೆ" ಎಂದು ಬೆದರಿಸಿದ. ಜನ ಸ್ವಲ್ಪ ಕಕ್ಕಾಬಿಕ್ಕಿಯಾದರು. ಪಿಯಾನಿಕ್ "ಯಾವ ಕ್ರಾಂತಿಯಲ್ಲೂ ಹೀಗಾಗಿಲ್ಲ" ಎಂದು ಕೂಗಿದ.

ಟ್ರಾಟ್‌ಸ್ಕಿ ಶಾಂತವಾಗಿ ಎದ್ದು ಹೇಳಿದ : "ಕ್ರಾಂತಿಯುದ್ಧಕ್ಕೂ ಇಂಥ ಘಟನೆಗಳು ನಡೆದಿವೆ. ನಮ್ಮ ಸಂಗಾತಿ ಅಲೆಕ್ಸಾಂಡ್ರಾ ಕೊಲಂತಾಯ್‌ರನ್ನು ವೈದ್ಯರ ಆಜ್ಞೆಯ ಮೇಲೆ ಬಿಡುಗಡೆ ಮಾಡಿದಾಗಲೂ ಅವರ ಬಾಗಿಲ ಬಳಿ ಗುಪ್ತ ಪೊಲೀಸರಿದ್ದರು. ಅದಿರಲಿ, ನಿಮ್ಮ ಸ್ನೇಹಿತರನ್ನು ಬಿಡುಗಡೆ ಮಾಡಲು ಮಿಲಿಟರಿ ಕ್ರಾಂತಿಕಾರಿ ಸಮಿತಿ ನೆನ್ನೆಯೇ ನಿರ್ಧರಿಸಿದ್ದು, ಕೆಲಸದ ಒತ್ತಡದಿಂದ ತಡವಾಗಿದೆ ಅಷ್ಟೇ. ಆದರೆ ಅವರು ಕೆರೆನ್‌ಸ್ಕಿಯ ಜೊತೆ ಸೇರಿ ಮಾಡಿದ ಪಿತೂರಿಯ ಬಗ್ಗೆ ಪೂರ್ಣ ವಿಚಾರಣೆ ಆಗುವವರೆಗೂ ಅವರು ಗೃಹಬಂಧನದಲ್ಲಿರುತ್ತಾರೆ." ರೈತ ನಾಯಕರೆನಿಸಿಕೊಂಡವರು ಗೊಣಗುತ್ತಾ ಹಿಂದೆ ಸರಿದರು.

ಎಡಪಂಥೀಯ ಸೋಷಿಯಲಿಸ್ಟ್ ರೆವಲ್ಯೂಶನರಿಗಳ ಪ್ರತಿನಿಧಿಯು, ತಾವು ಡಿಕ್ರಿಯನ್ನು ತಾತ್ವಿಕವಾಗಿ ಬೆಂಬಲಿಸುವುದಾಗಿಯೂ, ರೈತ ಸೋವಿಯತ್‌ಗಳೊಂದಿಗೆ ಸಮಾಲೋಚಿಸಿ ನಂತರ ಮತ ಚಲಾಯಿಸುವುದಾಗಿಯೂ ಹೇಳಿದ. ಮೆನ್ಶೆವಿಕ ಇಂಟರ್‌ನ್ಯಾಷನಲಿಸ್ಟರೂ ಸಹ ತಮ್ಮ ಪಕ್ಷದ ಸಮಾಲೋಚನೆ ಅಗತ್ಯ ಎಂದರು.

ನಂತರ ಮಾತಾಡಿದ್ದು ಮ್ಯಾಕ್ಸಿಮಲಿಸ್ಟ್ ಸಂಘಟನೆಯ ಪ್ರತಿನಿಧಿ. ಆತ ರೈತರ ಅರಾಜಕತಾವಾದಿ ಬಣದವನು. "ನಾವು ಸುಮ್ಮನೆ ಆಕ್ಷೇಪ ತೆಗೆಯದೆ, ತನ್ನ ಆಡಳಿತದ ಮೊದಲನೆಯ ದಿನವೇ ಇಂಥ ಆಜ್ಞೆಯನ್ನು ಜಾರಿಗೊಳಿಸಲು ಹೊರಟಿರುವ ರಾಜಕೀಯ ಪಕ್ಷವನ್ನು ಗೌರವಿಸಬೇಕು" ಎಂದ ಆತ.

ನಂತರ ಒಬ್ಬ ಪಕ್ಕಾ ರೈತ ಮಾತನಾಡಲು ನಿಂತ. ಉದ್ದುದ್ದ ಕೂದಲು, ಆಡಿನ ಚರ್ಮದ ಕೋಟು, ಉದ್ದವಾದ ಬೂಟುಗಳನ್ನು ಅವನು ಧರಿಸಿದ್ದ. ಸಭಾಂಗಣದ ಎಲ್ಲ

ಮೂಲೆಗೂ ತಿರುಗಿ ವಂದಿಸುತ್ತಾ ಅವನೆಂದ : "ನಾಗರಿಕರೆ, ಕಾಮ್ರೇಡರೇ, ಹೊರಗೆ ಕ್ಯಾಡೆಟ್ ಪಕ್ಷದವರು ಓಡಾಡುತ್ತಿದ್ದಾರೆ. ಸಮಾಜವಾದಿ ರೈತರನ್ನು ಬಂಧಿಸುವ ನೀವು ಅವರನ್ನು ಯಾಕೆ ಹಿಡಿದುಹಾಕಿಲ್ಲ?" ಕೂಡಲೇ ಭಾವೋದ್ರಿಕ್ತರಾದ ರೈತರು ಕೂಗಾಡಲು ಶುರುಮಾಡಿಕೊಂಡರು, ಹಿಂದಿನ ರಾತ್ರಿ ಸೈನಿಕರು ಕೂಗಾಡುತ್ತಿದ್ದಂತೆ. ನಿಜಕ್ಕೂ ಈ ನೆಲದ ಶ್ರಮಜೀವಿಗಳು ಇವರು....

"ನಮ್ಮ ಹಳೇ ಕಾರ್ಯಕಾರಿ ಸಮಿತಿ ಸದಸ್ಯರು, ಅವ್‌ಕ್ಸೆಂತಿಯೇವ್‌ನಂತಹವರು, ಅವರೂ ಕ್ಯಾಡೆಟ್‌ಗಳೇ. ನಾವು ಅವರನ್ನು ರೈತರ ರಕ್ಷಕರು ಅಂತ ಅಂದ್ಕೊಂಡಿದ್ವಿ ಅವರನ್ನು ಮೊದಲು ಬಂಧಿಸಿ."

"ಯಾರು ಈ ಪಿಯಾನಿಕ್, ಅವ್‌ಕ್ಸೆಂತಿಯೇವ್? ಇವರೆಲ್ಲ ರೈತರೇ ಅಲ್ಲ. ಬಾಲ ಬಿಚ್ಕೋಕೆ ಬಿಡ್ಬೇಡಿ."

ಈಗ ಇಡೀ ಸಭಾಂಗಣ ಹೀಗೆ ಮಾತನಾಡಿದವರನ್ನು ತಮ್ಮ ಅಣ್ಣ ತಮ್ಮಂದಿರು ಅಂತ ಗುರುತಿಸಿ ಸ್ಪಂದಿಸಲಾರಂಭಿಸಿತು. ಅರ್ಧ ಘಂಟೆ ವಿರಾಮದ ಘೋಷಣೆ. ಲೆನಿನ್ ಎದ್ದು ನಿಂತು ಅಲ್ಲಿಂದಲೇ ನುಡಿದರು :

"ಕಾಮ್ರೇಡ್ಸ್, ನಾವಿನ್ನು ವಿಳಂಬ ಮಾಡಬಾರದು. ಇಡೀ ರಷ್ಯಾಗೆ ಮಹತ್ವದ ಸುದ್ದಿ ಇದೆ. ತಡ ಆಗದಿರಲಿ".

ಬಿಸಿಬಿಸಿಯಾದ ವಾಗ್ವಾದಗಳ ನಡುವೆ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ದೂತ ಬಂದು ಘೋಷಿಸಿದ : "ಸಮರ ಭೂಮಿಗೆ ಹೋಗಲು 15 ಜನ ಪ್ರಚಾರಕರ ಅಗತ್ಯವಿದೆ. ತಯಾರಿರೋರು ಕೊಠಡಿ ಸಂಖ್ಯೆ 17ಕ್ಕೆ ಕೂಡಲೇ ಬನ್ನಿ."

* * *

ಸುಮಾರು ಎರಡೂವರೆ ಘಂಟೆಗಳನಂತರ ಸಭೆ ಮತ್ತೆ ಸೇರಿತು. ಅನೇಕ ರೆಜಿಮೆಂಟುಗಳೂ ಮಿಲಿಟರಿ ಕ್ರಾಂತಿಕಾರಿ ಸಮಿತಿಗೆ ಬೆಂಬಲ ಸೂಚಿಸಿ ಕಳಿಸಿದ್ದ ಟೆಲಿಗ್ರಾಮುಗಳನ್ನು ಓದಲಾಯಿತು.

ಮ್ಯಾಸಿಡೋನಿಯಾದಲ್ಲಿದ್ದ ರಷ್ಯನ್ ಸೈನ್ಯದ ಪ್ರತಿನಿಧಿ "ನಮಗೆ ಶತ್ರುಗಳಿಗಿಂತ ಮಿತ್ರರಾಷ್ಟ್ರಗಳ ಕಾಟವೇ ಹೆಚ್ಚಾಗಿದೆ" ಎಂದು ವರದಿ ಮಾಡಿದ. ಹತ್ತು ಮತ್ತು ಹನ್ನೆರಡನೆಯ ಸೈನ್ಯಗಳ ಪ್ರತಿನಿಧಿಗಳೂ ಬಂದು ಬೆಂಬಲವನ್ನು ಘೋಷಿಸಿದರು. ಒಬ್ಬ ರೈತ ಸೈನಿಕ ಬಂದು 'ಸಮಾಜವಾದಿ' ಸಚಿವರೆನಿಸಿಕೊಂಡ ಮಾಸ್ಲೋವ್ ಮತ್ತು ಸಾಲಾಝ್‌ಕಿನ್‌ರನ್ನು ಬಿಡುಗಡೆ ಮಾಡಿದ್ದನ್ನು ವಿರೋಧಿಸಿದ. ಪರ್ಷಿಯಾದಲ್ಲಿ ನೆಲೆಯಾಗಿದ್ದ ರಷ್ಯನ್ ಸೇನೆಯ ಪ್ರತಿನಿಧಿ ಬಂದು ಕ್ರಾಂತಿಯನ್ನು ಬೆಂಬಲಿಸಿದ. ಒಟ್ಟಿನಲ್ಲಿ ಅಲ್ಲಿ ಸುಡುಸುಡುವಂಥ ಹಾಗೂ ಉನ್ನತವಾದ ವಿಚಾರಗಳ ಮಹಾಪೂರವೇ ಹರಿಯಿತು. ರಷ್ಯಾ ಇನ್ನೆಂದಿಗೂ ಮೂಕವಾಗಿರುವುದಿಲ್ಲ!

ಕಮೆನೇವ್ ಬೋಲ್ಶೆವಿಕ್ ವಿರೋಧಿ ಶಕ್ತಿಗಳು ಒಂದಾಗಿ ಅವ್ಯವಸ್ಥೆಯನ್ನು ಸೃಷ್ಟಿಸಲು ನಡೆಸುತ್ತಿರುವ ಯತ್ನಗಳನ್ನು ವಿವರಿಸಿ, ಮಹಾಧಿವೇಶನವು ರಷ್ಯಾದ ಎಲ್ಲಾ ಸೋವಿಯತ್‌ಗಳಿಗೆ ಮಾಡಿಕೊಂಡಿರುವ ವರದಿಯನ್ನು ಓದಿದ. (ಸಂಗ್ರಹಿತ ರೂಪ) *ಕಾರ್ಮಿಕರ, ಸೈನಿಕರ ಹಾಗೂ ಕೆಲವೊಬ್ಬ ರೈತ ಪ್ರತಿನಿಧಿಗಳ ಸೋವಿಯತ್‌ನ ಅಖಿಲ*

*ರಷ್ಯಾ ಮಹಾಧಿವೇಶನವು ಎಲ್ಲ ಪ್ರತಿಕ್ರಾಂತಿಕಾರಿ ಚಟುವಟಿಕೆಗಳನ್ನು ಹಾಗೂ ಯಹೂದಿ ವಿರೋಧಿ ದಂಗೆಗಳನ್ನು ಮಟ್ಟಹಾಕಲು ಕರೆ ನೀಡುತ್ತದೆ.*

*ಪೆತ್ರೋಗ್ರಾಡಿನ ರೆಡ್‌ಗಾರ್ಡ್‌ಗಳು, ರಕ್ಷಣಾದಳ ರಾಜಧಾನಿಯಲ್ಲಿ ಸಂಪೂರ್ಣ ಸುವ್ಯವಸ್ಥೆಯನ್ನು ಸ್ಥಾಪಿಸಿದ್ದಾರೆ. ಇದು ಎಲ್ಲ ಕಡೆಗೂ ಮಾದರಿಯಾಗಬೇಕು. ಇಡಿಯ ರಷ್ಯಾ ಮತ್ತು ಜಗತ್ತು ನಮ್ಮತ್ತ ನೋಡುತ್ತಿದೆ...*

* * *

ಜಮೀನಿನ ಕುರಿತಾದ ಆಜ್ಞೆಯನ್ನು ಎರಡು ಘಂಟೆಗೆ ಮತಕ್ಕೆ ಹಾಕಲಾಯಿತು. ಒಂದೇ ಒಂದು ವಿರೋಧದ ಮತ ಬಿದ್ದದ್ದು, ರೈತ ಪ್ರತಿನಿಧಿಗಳಿಗೆ ಆನಂದೋನ್ಮಾದದಿಂದ ಕುಣಿದಾಡುವಂತಾಯಿತು. ಈ ಬೋಲ್ಶೆವಿಕರು ಎಲ್ಲ ಹಿಂಜರಿಕೆ, ವಿರೋಧಗಳನ್ನು ಮೆಟ್ಟಿನಿಂತು, ಯಾರೂ ತಡೆಯಲಾಗದಂತೆ ಮುನ್ನುಗ್ಗುತ್ತಿದ್ದರು. ಉಳಿದವರು ಎಂಟು ತಿಂಗಳು ಬರೇ ಮಾತನಾಡುತ್ತಿದ್ದಾಗ, ಈ ಜನ ಒಂದು ನಿರ್ದಿಷ್ಟ ಕಾರ್ಯಕ್ರಮದ ಮೂಲಕ ಕ್ರಿಯಾಶೀಲರಾಗಿದ್ದರು.

ಈಗೊಬ್ಬ ಸೈನಿಕ ಎದ್ದುನಿಂತ. ಸಣಕಲನೂ, ಗೂನನೂ ಆದ ಆತ ಒರಟೊರಟಾಗಿ ಕಾಣುತ್ತಿದ್ದ. ಆದರೆ ಮಾತುಗಾರ. ಸೈನ್ಯ ಬಿಟ್ಟು ಓಡಿ ಬಂದಂಥವರಿಗೆ ಹಳ್ಳಿಯಲ್ಲಿ ಜಮೀನು ಕೊಡಲಾಗದು ಎಂದು ಡಿಕ್ರಿಯ ಭಾಗವಾಗಿರುವ ಆಜ್ಞೆಯನ್ನು ಆತ ವಿರೋಧಿಸಿದ. ಮೊದಮೊದಲು ಅವನಿಗೆ ವಿರೋಧ, ಕೂಗಾಟ ಬಂದರೂ ನಂತರ ಎಲ್ಲರೂ ಶಾಂತರಾಗಿ ಕೇಳಿಸಿಕೊಳ್ಳಲಾರಂಭಿಸಿದರು. ಅವನದ್ದು ಸರಳವಾದ ಮಾತು. ಅವನು ಹೇಳಿದ "ನಮ್ಮನ್ನು ನಮ್ಮ ಇಷ್ಟಕ್ಕೆ ವಿರುದ್ಧವಾಗಿ ಕಂದಕಗಳಲ್ಲಿ ಕೊಲೆಯಾಗೋದಿಕ್ಕೆ ತಳ್ಳಿದ್ರು. ನಾವು ಶಾಂತಿ, ಸ್ವಾತಂತ್ರ್ಯ ಸಿಕ್ತವೆ ಅಂತ ಫೆಬ್ರವರಿ ಕ್ರಾಂತಿಗೆ ಸೇರ್ಕಂಡೋ, ಅವನು ಕೆರೆನ್‌ಸ್ಕಿ ಅನ್ನಿಸ್ಕೊಂಡೋನು ಮತ್ತೆ ನಮ್ಮನ್ನು ಯುದ್ಧಕ್ಕೆ ತಳ್ದ. ನಮ್ಮ ಸೈನಿಕರ ಸಮಿತಿನ ತುಳಿದು ಹಾಕಿದ್ರು. ನಮ್ಮ ಪೇಪರ್‌ಗೋಳ್ನ ರದ್ದು ಮಾಡಿದ್ರು. ನಾಯಕ್ರನ್ನು ಜೈಲಿಗೆ ಹಾಕಿದ್ರು. ಅದು ತಲೆಕೆಟ್ಟ ಯುದ್ಧ ಅಂಥ ನೀವೇ ಯೋಳ್ತೀರಾ! ಇನ್ನು ಹಳ್ಳಿಲೋ, ನಮ್ಮ ಭೂಮಿ ಸಮಿತಿನೇ ದೊಡ್ಡ ಜಮೀನ್ದಾರರು ಲೆಕ್ಕಕ್ಕೆ ತಗೊಳ್ಳಿಲ್ಲ. ನಮ್ ಕಾಮ್ರೇಡ್‌ಗೋಳ್ನ ಜೈಲಿಗಾಕಿದ್ರು. ಇನ್ನು ರಾಜಧಾನಿಲಿರೋ ಬೂರ್ಶ್ವಾಗಳು ಜರ್ಮನರ ಜೊತೆ ಶಾಮೀಲಾಗಿ ನಮಗೆ ಅನ್ನ ನೀರಿಲ್ದಂಗೆ, ಮದ್ದು ಗುಂಡು ಇಲ್ದಂಗೆ ಮಾಡಿದ್ರು. ಹಿಮದಲ್ಲಿ ಕಾಲಿಗೆ ಬೂಟಿರ್ಲಿಲ್ಲ. ನಾನು ಸೈನ್ಯ ಬಿಡೋಕೆ ಕಾರಣ ಯಾರು? ನೀವೇ ಈಗ ಅಧಿಕಾರದಿಂದ ಕಿತ್ತುಹಾಕಿರೋ ಕೆರೆನ್‌ಸ್ಕಿ." ಜನ ಈಗ ಅವನಿಗೆ ಚಪ್ಪಾಳೆ ಹೊಡೆದರು.

ಆದರೆ ಇನ್ನೊಬ್ಬ ಸೈನಿಕ "ಏನೇ ಆಗಲಿ, ಸಂಗಾತಿಗಳನ್ನು ಕಂದಕಗಳಲ್ಲಿ ಸಾಯೋಕೆ ಬಿಟ್ಟು ಬರೋದು ಕೇಡಿಗತನ" ಎಂದು ಕೂಗಾಡಿದ. ಜೀವಂತವಾದ, ಬಾಯಿ ಸತ್ತ ಜನಸಾಮಾನ್ಯರ ಚರ್ಚೆ.

ಎರಡು ಘಂಟೆ ಮೂವತ್ತು ನಿಮಿಷಕ್ಕೆ ಕಮೆನೇವ್ ಅಧಿಕಾರ ರಚನೆಯ ಕುರಿತಾದ ಡಿಕ್ರಿಯನ್ನು ಮುಂದಿಟ್ಟ. ಹಿಂದಿನ ಡಿಕ್ರಿಯಂತೆಯೇ ಇದನ್ನೂ ಲೆನಿನ್‌ರವರು ಸ್ವತಃ ಬರೆದಿದ್ದರು. (ಸಂಗ್ರಹಿತ ರೂಪದಲ್ಲಿ ಕೊಟ್ಟಿದ್ದೇವೆ – ಅನು.)

*ಸಾಂವಿಧಾನಿಕ ಶಾಸನಸಭೆಯು ಭೇಟಿಯಾಗುವವರೆಗೂ ಒಂದು ಹಂಗಾಮಿ ರೈತ – ಕಾರ್ಮಿಕ ಸರ್ಕಾರವನ್ನು ರಚಿಸಲಾಗುವುದು.*

*ವಿವಿಧ ಇಲಾಖೆಗಳ ಮೂಲಕ ಕೆಲಸಕಾರ್ಯಗಳನ್ನು ನಿರ್ವಹಿಸಲು ಒಂದೊಂದು ಆಯೋಗವನ್ನು ರಚಿಸಲಾಗುವುದು. ಈ ಆಯೋಗಗಳು ದುಡಿಯುವ ಪುರುಷರು, ಮಹಿಳೆಯರು, ಸೈನಿಕರು, ರೈತರು ಮತ್ತು ಗುಮಾಸ್ತರ ಸಂಘಟನೆಗಳೊಂದಿಗೆ ಸತತ ಸಂಪರ್ಕದಲ್ಲಿರಬೇಕು. ಈ ಎಲ್ಲಾ ನಿಯೋಗಗಳ ಅಧ್ಯಕ್ಷರನ್ನು ಸೇರಿಸಿ ಜನತೆಯ ಕಮಿಸಾರ್‌ಗಳ (ಸಚಿವರು ಎನ್ನುವಂತೆ) ಮಂಡಳಿ ಇದ್ದು ಅದು ಸರ್ಕಾರವಾಗಿ ಅಧಿಕಾರ ಚಲಾಯಿಸುತ್ತದೆ. ಈ ಕಮಿಸಾರ್‌ಗಳನ್ನು ನಿಯಂತ್ರಿಸುವ, ಬದಲಾಯಿಸುವ ಅಧಿಕಾರ ಸೋವಿಯತ್ ಮಹಾಧಿವೇಶನಕ್ಕೆ ಸೇರಿರುತ್ತದೆ. ಮಂಡಳಿಯ ಅಧ್ಯಕ್ಷರು ವ್ಲಾದಿಮೀರ್ ಉಲ್ಯಾನೊವ್ (ಲೆನಿನ್)*

*ಆಂತರಿಕ ವ್ಯವಹಾರ – ರೈಕೊವ್. ಎ. ಐ.*

*ಕೃಷಿ : ವಿ. ಪಿ. ಮಿಲಿಯುಟಿನ್*

*ಸೇನೆ ಮತ್ತು ನೌಕಾದಳ : ವಿ. ಎ. ಅವ್ಸೀಂಕೊ (ಆಂಟೊನೊವ್), ಎನ್. ವಿ. ಕ್ರೈಲೆಂಕೊ ಮತ್ತು ಪಿ. ಇ. ಡೈಬೆಂಕೊ ಇರುವ ಸಮಿತಿ.*

*ವಾಣಿಜ್ಯ ಮತ್ತು ಕೈಗಾರಿಕೆ – ವಿ. ಪಿ. ನೋಗಿನ್*

*ಜನತೆಯ ಶಿಕ್ಷಣ : ಎ. ವಿ. ಲೂನಚಾರ್ಸ್ಕಿ*

*ಹಣಕಾಸು : ಐ. ಐ. ಸ್ಕೊಟ್ಸೊರ್ವ್ (ಸ್ಟೆಪಾನೊವ್)*

*ವಿದೇಶಾಂಗ ವ್ಯವಹಾರ : ಎಲ್. ಡಿ. ಬ್ರಾನ್‌ಸ್ಟೆಯಿನ್ (ಟ್ರಾಟ್‌ಸ್ಕಿ)*

*ನ್ಯಾಯಾಂಗ – ಜಿ. ಐ. ಓಪೊಕೊವ್ (ಲೊಮೊವ್)*

*ಸರಬರಾಜು – ಐ. ಎ. ಟಿಯೊಡೊರೊವಿಚ್*

*ಅಂಚೆ ಮತ್ತು ತಂತಿ – ಎನ್. ಪಿ. ಅವಿಲೋವ್ (ಗ್ಲೆಬೋವ್)*

*ರಾಷ್ಟ್ರೀಯತೆಗಳ ಅಧ್ಯಕ್ಷ – ಐ. ವಿ. ಜುಗಾಶ್‌ವಿಲಿ (ಸ್ಟಾಲಿನ್)*

*ರೈಲ್ವೆ – ನಂತರ ನೇಮಕಾತಿ ಮಾಡಲಾಗುವುದು.*

ಸಭಾಂಗಣ ಸೇರಿದಂತೆ ಎಲ್ಲೆಡೆ ಬಂದೂಕಗಳು ಕಾಣಿಸುತ್ತಿದ್ದವು. ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಎಲ್ಲರನ್ನೂ ಶಸ್ತ್ರಧಾರಿಗಳನ್ನಾಗಿ ಮಾಡುತ್ತಿತ್ತು. ಕಾರಣ ಬೋಲ್ಶೆವಿಕರು ಕೆರೆನ್‌ಸ್ಕಿಯೊಂದಿಗೆ ನಿರ್ಣಾಯಕ ಹೋರಾಟಕ್ಕೆ ಸಜ್ಜಾಗುತ್ತಿದ್ದರು. ಕಹಳೆಯ ಧ್ವನಿ ಕೇಳಿ ಬರುತ್ತಿತ್ತು.

ಇನ್ನೊಂದೆಡೆ ಯಾರೂ ಮನೆಗೆ ವಾಪಸಾಗುತ್ತಿರಲಿಲ್ಲ. ಹೊಸಬರು ಸಭಾಂಗಣದಲ್ಲಿ ತುಂಬಿಕೊಳ್ಳುತ್ತಿದ್ದರು. ಗಡಸು ಮುಖದ ಕಾರ್ಮಿಕರು, ಸೈನಿಕರು, ಮನುಷ್ಯರ ಉಸಿರಾಟ, ಕೊಳೆ ಮೈ ಮತ್ತು ಬಟ್ಟೆಗಳ ಬೆವರಿನ ವಾಸನೆ ಹಾಗೂ ತಂಬಾಕಿನ ಹೊಗೆ ವಾತಾವರಣವನ್ನು ತುಂಬಿದ್ದವು.

ಅವಿಲೋವ್ ಎಂಬ ಮೆನ್ಶೆವಿಕ್ ಇಂಟರ್‌ನ್ಯಾಷನಲಿಸ್ಟರ ಪರವಾದ ಸಂಪಾದಕನೊಬ್ಬ ಮಾತನಾಡುತ್ತಿದ್ದ. ಬುದ್ಧಿವಂತ ಮುಖದವನೂ, ಬೆಲೆಬಾಳುವ ಕೋಟು ತೊಟ್ಟವನೂ ಆದ ಅವನು ಈ ಸ್ಥಳಕ್ಕೆ ಹೊಂದುತ್ತಿರಲಿಲ್ಲ. ಅವನೆಂದ : "ಹಳೆಯ ಸರ್ಕಾರ ಅಷ್ಟು ಸುಲಭವಾಗಿ ಬಿದ್ದುಹೋದದ್ದಕ್ಕೆ ಕಾರಣ ಎಡಪಂಥೀಯರ ಶಕ್ತಿ ಅಲ್ಲ. ಸರ್ಕಾರ ಅನ್ನ ಮತ್ತು ಶಾಂತಿಯ ಪ್ರಶ್ನೆಯನ್ನು ಪರಿಹರಿಸದೇ ಇದ್ದದ್ದು. ಇದನ್ನು ಪರಿಹರಿಸಕ್ಕಾಗದಿದ್ರೆ ಇವರು ತಾನೆ ಅಧಿಕಾರದಲ್ಲಿ ಉಳಿಯಕ್ಕಾಗಲ್ಲ. ಧಾನ್ಯದ ಅಭಾವ ಇದೆ. ರೈತರು ಸರ್ಕಾರದ ಜೊತೆಗೆ ಇಲ್ಲ.

ಉರುವಲು ಸಿಗ್ತಾಯಿಲ್ಲ. ಇನ್ನು ಶಾಂತಿಯ ಪ್ರಶ್ನೆ. ಮಿತ್ರರಾಷ್ಟ್ರಗಳು ನಿಮ್ಮ ವಂತಿಗೆಗೆ ಮನ್ನಣೆ ನೀಡ್ತಿಲ್ಲ. ಇನ್ನು ಮಿತ್ರರಾಷ್ಟ್ರಗಳಲ್ಲಿನ ಕಾರ್ಮಿಕರು ನಿಮ್ಮ ಸಹಾಯಕ್ಕೆ ಬರ್ತಾರ? ಅದೂ ಇಲ್ಲ. ಜರ್ಮನಿಯಲ್ಲಿ ಯುದ್ಧ ನಡೀತಿರೋವಾಗ ಕ್ರಾಂತಿಯ ಯಾವ ಸಾಧ್ಯತೆಯೂ ಇಲ್ಲವಂತೆ. ನಾವೆಷ್ಟು ಒಂಟಿಯಾಗಿದ್ದೀವಿ ಅಂದ್ರೆ ಮೊದಲನೆಯದಾಗಿ ನಾವು ಜರ್ಮನರ ಕೈಲಿ ಸೋಲ್ತೀವಿ. ಮತ್ತೆ ಜರ್ಮನಿ, ಇಂಗ್ಲೆಂಡ್ ಅವರೆಲ್ಲಾ ಪ್ರತ್ಯೇಕವಾಗಿ ಶಾಂತಿ ಒಪ್ಪಂದ ಮಾಡ್ಕೊತಾರೆ. ರಾಷ್ಟ್ರೀಯ ವಿಮೋಚನಾ ಸಮಿತಿ ನೋಡಿದ್ರೆ ರಷ್ಯಾದ ಎಲ್ಲಾ ಕಡೆ ತನ್ನ ಶಾಖೆಗಳನ್ನ ಆರಂಭಿಸ್ತಾ ಇದೆಯಂತೆ. ಹೀಗಿರೋವಾಗ ಸಮಾಜವಾದದ ಪರವಾಗಿರೋ ಎಲ್ಲಾ ಶಕ್ತಿಗಳು ಒಂದಾಗಿ ಕ್ರಾಂತಿಯನ್ನು ನೆರವೇರಿಸ್ಬೇಕೇ ಹೊರತು ಯಾವುದೇ ಒಂದು ಪಕ್ಷ ಇದನ್ನು ಮಾಡಕ್ಕಾಗಲ್ಲ." ಇದಕ್ಕೆ ಸಂಬಂಧಿಸಿದಂತೆ ಅವನು ಗೊತ್ತುವಳಿಯೊಂದನ್ನು ಮಂಡಿಸಿದ. ಕ್ರಾಂತಿಕಾರಿ ಹರ್ಷೋನ್ಮತ್ತತೆಯಲ್ಲಿದ್ದರೂ, ಆ ವಿಜಯೀ ಜನಸಮುದಾಯ ಅವಿಲೋವ್‌ನ ತಣ್ಣನೆಯ ತರ್ಕವನ್ನು ಕೇಳಿ ಭೂಮಿಗೆ ಬಂತು. ಒಂದೆರಡು ಚಪ್ಪಾಳೆಗಳೂ ಬಿದ್ದವು.

ನಂತರ ಮಾತನಾಡಿದವನು ಕರೆಲಿನ್. ಅವನೂ ತರುಣ ಮತ್ತೆ ಭಯವರಿಯದವನು. ಅವನ ಪ್ರಾಮಾಣಿಕತೆ ಪ್ರಶ್ನಾತೀತ, ಅವನು ಬೋಲ್ಶೆವಿಕರನ್ನು ಏಕಾಕಿಯಾಗಿ ಹಿಂಬಾಲಿಸಿದ ಲೆಫ್ಟ್ ಸೋಷಲಿಸ್ಟ್ ರೆವಲ್ಯೂಶನರಿಗಳಿಗೆ ಸೇರಿದವನು. ಅದು ಮರಿಯಾ ಸ್ಪಿರಿದನೋವಾಳ ಪಕ್ಷವೂ ಹೌದು.

"ನಾವು ಮಂತ್ರಿಮಂಡಲವನ್ನು ಸೇರಿಲ್ಲ. ಏಕೆಂದರೆ ಹೊರಗೆ ಹೋದ ಕ್ರಾಂತಿಕಾರಿ ಸೈನ್ಯದ ಭಾಗಗಳನ್ನೂ ಕರೆತರುವುದು ನಮ್ಮ ಕರ್ತವ್ಯ. ನಾವು ಅವರಿಗೂ ಬೋಲ್ಶೆವಿಕರಿಗೂ ಮಧ್ಯದ ಕೊಂಡಿ. ಎಲ್ಲಾ ಸಮಾಜವಾದಿಗಳು ಒಂದಾಗಿ ಸೇರದಿದ್ದರೆ ಸರ್ಕಾರ ಉಳಿಯುವುದಿಲ್ಲ. ಅಲ್ಲದೆ ನಾವು ಬೋಲ್ಶೆವಿಕರ ದಮನಕಾರಿ ಪ್ರವೃತ್ತಿಯನ್ನೂ ಪ್ರತಿಭಟಿಸುತ್ತೇವೆ. ನಮ್ಮ ಪಕ್ಷದ ಕಮಿಸಾರ್‌ಗಳನ್ನು ಹುದ್ದೆಗಳಿಂದ ಹೊರಗಟ್ಟಿದ್ದಾರೆ. ನೆನ್ನೆ ನಮ್ಮ ಪತ್ರಿಕೆ ಹೊರಬರಲು ಬಿಟ್ಟಿಲ್ಲ.

"ಕೇಂದ್ರ ಡ್ಯೂಮಾ ಪ್ರಬಲವಾದ ವಿಮೋಚನಾ ಸಮಿತಿಯನ್ನು ರಚಿಸುತ್ತಿದೆ. ನೀವು ಒಂಟಿಯಾಗಿದ್ದೀರ."

ನಂತರ ಟ್ರಾಟ್‌ಸ್ಕಿ ಮಾತನಾಡಲು ನಿಂತ. ಅವನ ಮುಖದಲ್ಲಿ ಆತ್ಮವಿಶ್ವಾಸವೂ, ತಿರಸ್ಕಾರವೂ ಪ್ರತಿಬಿಂಬಿತವಾಗಿದ್ದವು. ಆತ ಕಂಚಿನ ಕಂಠದಲ್ಲಿ ಮಾತನಾಡಿದ. ಜನ ಸ್ಪಂದಿಸಲಾರಂಭಿಸಿದರು. "ಒಂಟಿಯಾಗಿದ್ದೇವೆ. ಅಪಾಯದಲ್ಲಿದ್ದೇವೆ ಎಂಬ ಮಾತು ಹೊಸದಲ್ಲ. ಇಂಥ ಮಾತು ಸಶಸ್ತ್ರದಂಗೆಯ ಸಮಯದಲ್ಲೂ ಕೇಳಿಬಂದಿತ್ತು. ಆದರೆ ಹೆಚ್ಚು ಕಮ್ಮಿ ರಕ್ತಪಾತವಿಲ್ಲದೆ ಸರ್ಕಾರವನ್ನು ನಾವು ಪದಚ್ಯುತ ಮಾಡಿದ್ದು ಹೇಗೆ? ಕೇವಲ ಎಡವಾದಿ ಸೋಷಲಿಸ್ಟ್ ರೆವಲ್ಯೂಶನರಿಗಳು ಮಾತ್ರ, ನಮ್ಮ ಜೊತೆಗಿದ್ದವರು. ಜನರಿಂದ ಪ್ರತ್ಯೇಕವಾಗಿರುವುದು ನಾವಲ್ಲ. ಹಂಗಾಮಿ ಸರ್ಕಾರ ಮತ್ತು ನಮ್ಮನ್ನು ವಿರೋಧಿಸಿದ ಪಕ್ಷಗಳು ಜನರಿಂದ ದೂರವಾಗಿವೆ. ಕಾರ್ಮಿಕ ವರ್ಗದಿಂದ ಎಂದೆಂದಿಗೂ ಪ್ರತ್ಯೇಕಗೊಂಡಿವೆ.

"ಐಕ್ಯರಂಗದ ಮಾತನಾಡುತ್ತೀರಿ. ಯಾರ ಜೊತೆ ಐಕ್ಯತೆ? ಜನದ್ರೋಹಿಗಳೂ, ಹಂಗಾಮಿ ಸರ್ಕಾರದ ಜೊತೆಯೂ ಒಂದಾಗುವುದೇ? ಐಕ್ಯತೆಯಿಂದ ಬಲ ಹೆಚ್ಚುತ್ತದೆ ಎಂಬುದು ಯಾವಾಗಲೂ ಸತ್ಯವೇನಲ್ಲ. ಉದಾಹರಣೆ ಡ್ಯಾನ್ ಮತ್ತು ಅವ್‌ಕ್ಸೆಂಟಿಯೇವ್

ನಂತಹವರನ್ನು ಪಕ್ಕದಲ್ಲಿಟ್ಟುಕೊಂಡಿದ್ದರೆ ಸಶಸ್ತ್ರ ದಂಗೆಯನ್ನು ಸಂಘಟಿಸಲಾಗುತ್ತಿತ್ತೇ?"

ಸಭಾಂಗಣದಲ್ಲಿ ಜೋರಾಗಿ ನಗು.

"ಉಳಿದ ಪಕ್ಷಗಳೊಂದಿಗೆ ಒಪ್ಪಂದಕ್ಕೆ ತಯಾರಿರಲಿಲ್ಲ ಎಂದು ನಮ್ಮ ಮೇಲೆ ಆಪಾದಿಸಲಾಗುತ್ತಿದೆ. ತಪ್ಪು ನಮ್ಮದೇನು? ಕ್ರಾಂತಿಯ ಅಲೆಯ ಉತ್ತುಂಗದಲ್ಲಿರುವ ಒಂದು ರಾಜಕೀಯ ಪಕ್ಷ, ರಣಭೂಮಿ ಸಿಡಿ ಮದ್ದಿನ ಹೊಗೆಯಲ್ಲಿ ಮುಳುಗೆದ್ದಿರುವ ಪಕ್ಷ ಮುಂದೆ ಬಂದು 'ಇಗೋ, ರಾಜ್ಯಾಧಿಕಾರ ಇಲ್ಲಿದೆ, ತೆಗೆದುಕೊಳ್ಳಿ' ಎಂದಾಗ ಕೆಲವರು ಅದನ್ನೊಪ್ಪದೆ ಶತ್ರುಗಳ ಜೊತೆ ಹೋದರೆ ಏನು ಮಾಡುವುದು? ಅದು ಸಮರಕ್ಕೆ ಆಹ್ವಾನ ಕೊಟ್ಟಂತೆ ಅಲ್ಲವೇ?"

ಜನತೆ ಇದಕ್ಕೆ ಯುದ್ಧೋತ್ಸಾಹದಿಂದ ಸ್ಪಂದಿಸಿದರು. ಇಡೀ ಮನುಕುಲದ ಹಿತವನ್ನು ಎತ್ತಿಹಿಡಿಯುವ ಆಲೋಚನೆ, ಅದರಲ್ಲಿದ್ದ ಧೈರ್ಯ ಅವರನ್ನು ಆವರಿಸಿತು.

ಆದರೆ ಯುದ್ಧ ಇನ್ನೊಂದು ದಿಕ್ಕಿನಿಂದಲೂ ಬರುತ್ತಿತ್ತು. ರೈಲ್ವೆ ಕಾರ್ಮಿಕರ ಪ್ರತಿನಿಧಿಯೊಬ್ಬ ಗಡುಸು ಮುಖದಿಂದ ನಿಂತಿದ್ದ. ಅವನೊಂದು ಬಾಂಬನ್ನೇ ಸಿಡಿಸಿದ. "ರಷ್ಯಾದ ಅತಿದೊಡ್ಡ ಸಂಘಟನೆಯ ಪರವಾಗಿ ನಾನು ಮಾತನಾಡುತ್ತಿದ್ದೇನೆ. ಬೋಲ್ಶೆವಿಕರು ಇದೇ ರೀತಿ ಪ್ರತ್ಯೇಕವಾಗಿ ಉಳಿಯುವುದನ್ನು ಮುಂದುವರೆಸಿದರೆ ವಿಕ್‌ಜೆಲ್‌ನ ಕೇಂದ್ರ ಸಮಿತಿಯು ಅವರನ್ನು ಬೆಂಬಲಿಸುವುದಿಲ್ಲ." ಸಭಾಂಗಣದಲ್ಲಿ ಅಲ್ಲೋಲಕಲ್ಲೋಲ.

"1905ರಲ್ಲಾಗಲೀ, ಕೊರ್ನಿಲೊವ್‌ನ ಕ್ರಾಂತಿವಿರೋಧಿ ಬಂಡಾಯದ ಸಂದರ್ಭದಲ್ಲಾಗಲೀ ಕ್ರಾಂತಿಯನ್ನು ಅತ್ಯುತ್ತಮವಾಗಿ ಬೆಂಬಲಿಸಿದವರು ನಾವು – ರೈಲ್ವೆ ಕಾರ್ಮಿಕರು. ನೀವು ನಮ್ಮನ್ನು ಮಹಾಧಿವೇಶನಕ್ಕೆ ಕರೆದಿಲ್ಲ (ಸಭಾಂಗಣದಲ್ಲಿ 'ನಿಮ್ಮನ್ನು ಕರೆಯದೆ ಇದ್ದದ್ದು ಹಳೆಯ ತ್ಸೆ – ಇ – ಕಾ' ಎಂದು ಕೂಗಿದ್ದನ್ನು ಅವನು ಲೆಕ್ಕಿಸಲಿಲ್ಲ). ಸೋಷಲಿಸ್ಟ್ ರೆವಲ್ಯೂಶನರಿಗಳು, ಮೆನ್ಶೆವಿಕರು ಹೊರನಡೆದ ಮೇಲೆ ಈ ಸಭೆಗೆ ಅಗತ್ಯ ಕೋರಂ ಇಲ್ಲ. ಇದು ಕಾನೂನುಬದ್ಧವಲ್ಲ.

"ಅಧಿಕಾರಕ್ಕೆ ಬರುವ ಹೊಸ ಶಕ್ತಿಯು ಸಮಾಜವಾದಿಯೂ ಕ್ರಾಂತಿಕಾರಿಯೂ ಆಗಿರಬೇಕು. ಕ್ರಾಂತಿಯ ಪರವಾದ ಎಲ್ಲ ಜನತಾಂತ್ರಿಕ ಶಕ್ತಿಗಳಿಗೂ ಅದು ಉತ್ತರದಾಯಿಯಾಗಿರಬೇಕು. ಅಂಥ ಒಂದು ಅಧಿಕಾರ ಏರ್ಪಡುವವರೆಗೂ, ನಾವು ಪೆತ್ರೋಗ್ರಾಡಿಗೆ ಕ್ರಾಂತಿವಿರೋಧಿ ಶಕ್ತಿಗಳನ್ನೇನೋ ರೈಲ್ವೆಯಲ್ಲಿ ಪ್ರಯಾಣ ಮಾಡಲು ಬಿಡುವುದಿಲ್ಲ. ಆದರೆ ನಮ್ಮ ವಿಕ್‌ಜೆಲ್ ಸಂಘಟನೆಯದ್ದಲ್ಲದೆ ಇನ್ನು ಯಾರ ಆಜ್ಞೆಯನ್ನೂ ಪಾಲಿಸುವುದೂ ಇಲ್ಲ. ಇಡೀ ರೈಲ್ವೆ ಆಡಳಿತ ನಮ್ಮ ಕೈಯಲ್ಲೇ ಇರುತ್ತದೆ."

ಅವನ ಮಾತು ಮುಗಿದಾಗ ಅವನ ಮೇಲೆ ಬೈಗುಳದ ಚಂಡಮಾರುತವೇ ಸುರಿಯಿತು. ಆದರೆ ಅವನು ನೀಡಿದ ಪೆಟ್ಟೂ ದೊಡ್ಡದಾಗಿತ್ತು. ಅಧ್ಯಕ್ಷ ಮಂಡಳಿಯೇ ಚಿಂತಾಕ್ರಾಂತವಾಗಿತ್ತು. ಕಮೆನೇವ್ ಮಾತ್ರ ಕೋರಂ ಇದೆಯೆಂದೂ, ಮಹಾಧಿವೇಶನ ಕಾನೂನುಬದ್ಧವೆಂದೂ ಸಮರ್ಥಿಸಿಕೊಂಡ.

ಹೊಸ ಕಮಿಸಾರ್‌ಗಳ ಮಂಡಳಿಯನ್ನು ಭಾರೀ ಬಹುಮತದಿಂದ ಆಯ್ಕೆ ಮಾಡಲಾಯಿತು. ನಂತರ ಹೊಸ ತ್ಸೆ–ಇ–ಕಾವನ್ನು ಎಂದರೆ ರಷ್ಯಾದ ಹೊಸ ಸಂಸತ್ತನ್ನು ಆಯ್ಕೆ ಮಾಡಲಾಯಿತು. ಅದರಲ್ಲಿದ್ದ ನೂರು ಸದಸ್ಯರಲ್ಲಿ ಎಪ್ಪತ್ತು ಜನ ಬೋಲ್ಶೆವಿಕರು. ರೈತ ಪ್ರತಿನಿಧಿಗಳು ಬಂದಾಗ ಸೇರಿಸಿಕೊಳ್ಳಲು ಕೆಲವೊಂದು ಸ್ಥಾನಗಳನ್ನು

ಕಾದಿರಿಸಲಾಗಿತ್ತು. ಬೋಲ್ಶೆವಿಕರ ಕಾರ್ಯಕ್ರಮವನ್ನು ಒಪ್ಪುವ ಎಲ್ಲಾ ಪಕ್ಷಗಳನ್ನೂ, ಗುಂಪುಗಳನ್ನೂ ಸರ್ಕಾರ ಸೇರಲು ಆಹ್ವಾನಿಸಲಾಯಿತು.

ಇಲ್ಲಿಗೆ ಎರಡನೇ ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನವನ್ನು ವಿಸರ್ಜಿಸಲಾಯಿತು. ಇನ್ನು ಪ್ರತಿನಿಧಿಗಳು ರಷ್ಯಾದ ನಾಲ್ಕು ದಿಕ್ಕುಗಳಿಗೂ ತೆರಳಿ ಇಲ್ಲಿ ನಡೆದ ಮಹಾನ್ ವಿದ್ಯಮಾನಗಳ ಕುರಿತು ಪ್ರಚಾರ ಮಾಡಬೇಕಲ್ಲ.

* * *

ಸ್ಟ್ರೀಟ್ ರೈಲ್ವೆ ಕಾರ್ಮಿಕರ ಯೂನಿಯನ್‌ನ ಚಾಲಕ, ನಿರ್ವಾಹಕ ಸಿಬ್ಬಂದಿ ಕೆಲವು ಸ್ಟ್ರೀಟ್ ಕಾರ್‌ಗಳನ್ನು (ಟ್ರಾಮ್‌ನಂಥವು) ಸ್ಮೋಲ್ನಿಯ ಬಳಿ ಯಾವಾಗಲೂ ನಿಲ್ಲಿಸಿಕೊಂಡೇ ಇರುತ್ತಿದ್ದರು. ಎಷ್ಟು ಹೊತ್ತಾದರೂ ಸೋವಿಯತ್ ಪ್ರತಿನಿಧಿಗಳನ್ನು ಕರೆದೊಯ್ಯಬೇಕು ಎಂಬುದು ಅವರ ಉದ್ದೇಶ. ನಾವು ಹೋಗಿ ಅವರನ್ನು ಎಬ್ಬಿಸಿದಾಗ ಬೆಳಿಗ್ಗೆ ಏಳು ಘಂಟೆಯಾಗಿತ್ತು! ಹಿಂದಿನ ದಿನಕ್ಕಿಂತ ಇವತ್ತು ಹರ್ಷೋಲ್ಲಾಸ ಕಡಿಮೆಯೇನೋ ಎಂದು ಸ್ಟ್ರೀಟ್‌ಕಾರ್‌ನ ವಾತಾವರಣವನ್ನು ನೋಡಿದಾಗ ನನಗನ್ನಿಸಿತು. ಅನೇಕರು ಆತಂಕದಲ್ಲಿದ್ದರು. ಪ್ರಾಯಶಃ ಅವರಿಗನ್ನಿಸಿರಬೇಕು "ಇನ್ನು ಮೇಲೆ ನಾವೇ ನೇತಾರರು. ನಮ್ಮ ಸಂಕಲ್ಪವನ್ನು ಕಾರ್ಯರೂಪಕ್ಕೆ ತರುವುದು ಹೇಗೆ?"

* * *

ನಾವಿದ್ದ ಅಪಾರ್ಟ್‌ಮೆಂಟ್ ತಲುಪಿದಾಗ ನಮ್ಮನ್ನು ಕತ್ತಲಿನಲ್ಲೇ ನಿಲ್ಲಿಸಿ ನಾಗರಿಕರ ತಪಾಸಣಾದಳವೊಂದು ಜಾಗರೂಕತೆಯಿಂದ ನಮ್ಮನ್ನು ವಿಚಾರಿಸಿಕೊಂಡಿತು. ಡ್ಯೂಮಾ ಮಾಡಿದ್ದ ಘೋಷಣೆ ಕಾರ್ಯರೂಪಕ್ಕೆ ಬಂದಂತಿತ್ತು. ಅಲ್ಲಿದ್ದವರು ಕ್ರಾಂತಿಯ ಬೆಂಬಲಿಗರಲ್ಲ.

ಮನೆಯ ಒಡತಿ ಸದ್ದು ಕೇಳಿ ಹೊರಗೆ ಬಂದವಳು "ನೋಡಿ ಅಪಾರ್ಟ್‌ಮೆಂಟ್ ಸಮಿತಿಯು, ನೀವೂ ಎಲ್ಲರಂತೆ ಸರತಿಯ ಮೇಲೆ ರಕ್ಷಣಾದಳದ ಕೆಲಸ ಮಾಡಬೇಕು ಎಂದು ಹೇಳಿದೆ" ಎಂದಳು.

"ರಕ್ಷಣಾದಳದ ಅವಶ್ಯಕತೆ ಏನು?" ನಾವು ಕೇಳಿದೆವು.

"ಮನೆಗಳನ್ನೂ, ಹೆಂಗಸರು ಮಕ್ಕಳನ್ನೂ ಕಾಪಾಡಬೇಕಲ್ಲ."

"ಯಾರಿಂದ?"

"ಕೊಲೆಗಡುಕರು, ಡಕಾಯಿತರಿಂದ."

"ಯಾರಾದರೂ ಬಂದು 'ನಾವು ಮಿಲಿಟರಿ ಕ್ರಾಂತಿಕಾರಿ ಸಮಿತಿಯಿಂದ ಬಂದವರು' ಎಂದರೆ?"

"ಬಂದವರು ಹೇಳುವುದೇ ಹಾಗೆ, ಅದಿರಲಿ ಇಬ್ಬರಿಗೂ ವ್ಯತ್ಯಾಸ ಏನು ಅಂತೀನಿ?"

ನಾನಂತೂ ನಮ್ಮ ಅಮೆರಿಕನ್ ಕಾನ್ಸುಲ್ ಕಛೇರಿಯು ತನ್ನ ನಾಗರಿಕರು ಶಸ್ತ್ರಾಸ್ತ್ರಗಳನ್ನು ಹೊತ್ತು ತಿರುಗಬಾರದು ಎಂದು ಸೂಚಿಸಿದೆ ಎಂದೆ. ಅದೂ ರಷ್ಯಾದ ಬುದ್ಧಿಜೀವಿ ಜನತೆಯ ನೆರೆಹೊರೆಯಲ್ಲಿ!...

* * *

## ಅಧ್ಯಾಯ – 6

# ವಿಮೋಚನಾ ಸಮಿತಿ

### ಪ್ರತಿಕ್ರಾಂತಿಗೆ ಸಿದ್ಧತೆ

ಶುಕ್ರವಾರ, ನವೆಂಬರ್ 9...

ಪ್ರತಿಕ್ರಾಂತಿಗೂ ಸಿದ್ಧತೆಗಳು ಆರಂಭವಾದವು.

ನೋವೊಚೆರ್‌ಕಾಸ್ಕ್ ನಗರ, ನವೆಂಬರ್ 8

*ಹಂಗಾಮಿ ಸರ್ಕಾರವನ್ನು ಕಿತ್ತೊಗೆದು ಅಧಿಕಾರವನ್ನು ಕೈವಶಮಾಡಿಕೊಂಡ ಬೋಲ್ಶೆವಿಕರ ಬಂಡಾಯವನ್ನು ಕೊಸ್ಸಾಕ್ ಸರ್ಕಾರವು ಒಂದು ಪಾತಕಿ ಕೃತ್ಯ ಎಂದು ಪರಿಗಣಿಸುತ್ತದೆ. ರಷ್ಯಾದಲ್ಲಿ ಹಂಗಾಮಿ ಸರ್ಕಾರವು ಪುನರ್‌ಸ್ಥಾಪಿತವಾಗಿ, ವ್ಯವಸ್ಥೆ ನೆಲೆಗೊಳ್ಳುವವರೆಗೂ ಡಾನ್ ನದಿಯ ಪ್ರದೇಶದಲ್ಲಿ ಎಲ್ಲ ಅಧಿಕಾರವನ್ನು ನಾನು ಸ್ವತಃ ಕೈಗೆತ್ತಿಕೊಳ್ಳುತ್ತೇನೆ.*

ಸಹಿ ಅಟಾಮನ್ ಕಾಲೆಡಿನ್

ಕೊಸ್ಸಾಕ್ ಸೈನಿಕ ಸರ್ಕಾರದ ಅಧ್ಯಕ್ಷ

ಹೀಗೆ ಡಾನ್ ನದಿಯ ಪ್ರದೇಶದಲ್ಲಿ ಕಾಲೆಡಿನ್ ಬೋಲ್ಶೆವಿಕರ ವಿರುದ್ಧ ಬಂಡಾಯ ಸಾರಿದಾಗ ಇನ್ನೊಂದು ಕಡೆ ಮಂತ್ರಿ ಅಧ್ಯಕ್ಷ ಕೆರೆನ್‌ಸ್ಕಿ ಇನ್ನೊಂದು ಆಜ್ಞೆ ಹೊರಡಿಸಿದ್ದ.

*ಹಂಗಾಮಿ ಸರ್ಕಾರದ ಮಂತ್ರಿ – ಅಧ್ಯಕ್ಷ ಸೈನ್ಯದ ಸರ್ವೋಚ್ಚ ದಂಡನಾಯಕನೂ ಆಗಿ ನಾನು ಎಲ್ಲಾ ನಿಷ್ಠಾವಂತ ರಷ್ಯನ್ ಪಡೆಗಳ ನಾಯಕತ್ವವನ್ನು ವಹಿಸಿಕೊಂಡಿದ್ದೇನೆ. ಸರಿಯಾದ ತಿಳಿವಳಿಕೆ ಇಲ್ಲದೆ ಕ್ರಾಂತಿಗೂ, ದೇಶಕ್ಕೂ ದ್ರೋಹ ಬಗೆದವರ ಮನವಿಗೆ ಓಗೊಟ್ಟವರೆಲ್ಲರೂ ತಮ್ಮ ಕರ್ತವ್ಯಕ್ಕೆ ಕೂಡಲೇ ಹಿಂತಿರುಗುವುದು.*

ಸಹಿ : ಎ. ಎಫ್. ಕೆರೆನ್‌ಸ್ಕಿ

ಅದೇ ರೀತಿ ಉತ್ತರ ರಣಾಂಗಣಕ್ಕೂ ಕೆರೆನ್‌ಸ್ಕಿ ಟೆಲಿಗ್ರಾಂ ಕಳಿಸಿದ್ದ:

*ಗಾಚ್ಚಿನ ಪಟ್ಟಣವನ್ನು ವಶಮಾಡಿಕೊಂಡಿದ್ದೇವೆ. ಕ್ರಾನ್‌ಸ್ಟಾಟ್ ನಾವಿಕರು ಮೊದಲಾದ ದಳಗಳು ಶರಣಾಗಿವೆ. ನಮ್ಮ ಸರ್ಕಾರದ ಕಡೆಗೆ ಸೇರಿಕೊಂಡಿವೆ. ಮಿಲಿಟರಿ ಕ್ರಾಂತಿಕಾರಿ ಸಮಿತಿ ಸೈನ್ಯಗಳನ್ನು ವಾಪಸ್ ಕರೆಸಿಕೊಳ್ಳುತ್ತಿದೆ. ನಾವು ಹೆಸರಿಸಿರುವ ದಳಗಳು ಕೂಡಲೇ ಮುನ್ನಡೆಯಬೇಕು.*

ಗಾಚ್ಚಿನ ರಾತ್ರಿ ಕೈವಶವಾಗಿದ್ದದ್ದು ನಿಜ. ಆದರೆ ನಾವಿಕದಳ ಶರಣಾಗಿರಲಿಲ್ಲ. ಬೇರೆ ಎರಡು ತುಕಡಿಗಳು ಗೊತ್ತುಗುರಿಯಿಲ್ಲದೆ ಸುತ್ತಾಡಿಕೊಂಡಿದ್ದಾಗ ಅವರನ್ನು ಕೊಸ್ಸಾಕರು ಸುತ್ತುವರೆದು ನಿರಾಯುಧಗೊಳಿಸಿದ್ದರು. ಆದರೆ ಅವರು ಹಳೇ ಸರ್ಕಾರದ ಜೊತೆ ಸೇರಿದ್ದರೆಂಬುದೂ ಸುಳ್ಳು. ಈ ಹೊತ್ತಿನಲ್ಲೇ ಆ ಜನ ಸ್ಮೋಲ್ನಿಗೆ ಬಂದು ಕೊಸ್ಸಾಕರು ಅಷ್ಟು ಹತ್ತಿರದಲ್ಲಿರುವುದು ತಿಳಿಯದೆ ಅಚಾತುರ್ಯವಾಯಿತೆಂದು ನಾಚಿಕೆಯಿಂದ ವರದಿ ಸಲ್ಲಿಸುತ್ತಿದ್ದರು.

ಕ್ರಾಂತಿಕಾರಿ ರಣಾಂಗಣದಲ್ಲಿ ನಿಜಕ್ಕೂ ವಿಪರೀತ ಗೊಂದಲವಿತ್ತು. ದಕ್ಷಿಣದ ಎಲ್ಲಾ ಪಟ್ಟಣಗಳಲ್ಲೂ ರಕ್ಷಣೆಗೆ ಇಟ್ಟಿದ್ದ ಸೈನ್ಯಗಳು ಎರಡು ಮೂರು ಭಾಗಗಳಾಗಿ ಒಡೆದುಹೋಗಿದ್ದವು. ಅಧಿಕಾರಿಗಳು ಕೆರೆನ್‌ಸ್ಕಿ ಕಡೆಗೆ. ಬಹುತೇಕ ಸಾಮಾನ್ಯ ಸೈನಿಕರು ಸೋವಿಯತ್‌ಗಳ ಕಡೆಗೆ, ಉಳಿದವರ ಸ್ಥಿತಿ ಡೋಲಾಯಮಾನ.

ಕೂಡಲೇ ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಪೆತ್ರೋಗ್ರಾಡ್‌ನ ರಕ್ಷಣೆಯನ್ನು ಮಹತ್ವಾಕಾಂಕ್ಷಿ ಕ್ಯಾಪ್ಟನ್ ಮುರಾವಿಯೊವ್‌ಗೆ ವಹಿಸಿತು. ಅವನು ಹಿಂದೊಮ್ಮೆ ಬೋಲ್ಶೆವಿಕ್ ವಿರೋಧಿಯಾಗಿದ್ದವನು. ಆದರೆ ಅವನು ಯುದ್ಧ ಕೌಶಲ್ಯವನ್ನೂ, ಧಾರ್ಷ್ಟ್ಯವನ್ನೂ, ಪ್ರಾಯಶಃ ಪ್ರಾಮಾಣಿಕತೆಯನ್ನೂ ಹೊಂದಿದ್ದಂಥವನು...

ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಇನ್ನೆರಡು ಆಜ್ಞೆಗಳನ್ನು ಹೊರಡಿಸಿತ್ತು. ಒಂದು ಎಲ್ಲಾ ಅಂಗಡಿ ಮುಂಗಟ್ಟುಗಳು ಎಂದಿನಂತೆ ಕಾರ್ಯ ನಿರ್ವಹಿಸಬೇಕು. ಎರಡನೆಯದು ಎಲ್ಲಾ ಖಾಲಿ ಮನೆಗಳನ್ನೂ, ಕೋಣೆಗಳನ್ನೂ ಸಮಿತಿಯ ಸುಪರ್ದಿಗೆ ಒಪ್ಪಿಸಬೇಕು.

ಕಳೆದ ಒಂದೂವರೆ ದಿನದಿಂದ ಬೋಲ್ಶೆವಿಕರಿಗೂ ರಷ್ಯಾದ ಎಲ್ಲಾ ಪ್ರಾಂತ್ಯಗಳಿಗೂ, ಹೊರಗಿನ ಜಗತ್ತಿಗೂ ಸಂಪರ್ಕ ಕಡಿದುಹೋಗಿತ್ತು. ರೈಲ್ವೆ, ಅಂಚೆ-ತಂತಿ ಕಾರ್ಮಿಕರು ತಮ್ಮ ಕರ್ತವ್ಯಗಳನ್ನು ನೆರವೇರಿಸಲು ನಿರಾಕರಿಸಿದ್ದರು. ತ್ಸಾರ್‌ಸ್ಕೊಯೆ ಸೆಲೊದಲ್ಲಿದ್ದ ವೈರ್‌ಲೆಸ್ ಸೇವೆ ಮಾತ್ರ ಅರ್ಧ ಘಂಟೆಗೊಂದು ಪ್ರಕಟಣೆಯನ್ನು ಬಿತ್ತರಿಸುತ್ತಿತ್ತು. ಸ್ಮೋಲ್ನಿಯಿಂದ ನಗರ ಡ್ಯೂಮಾದ ಕಮಿಸಾರ್‌ಗಳು ಸಂದೇಶ ಹೊತ್ತು ಜಗತ್ತಿನ ಅರ್ಧ ಭಾಗವನ್ನೇ ಪ್ರಯಾಣ ಮಾಡಿ ರಷ್ಯಾದ ಕಟ್ಟಕಡೆಯ ಮೂಲೆಗಳಿಗೆ ತಲುಪುತ್ತಿದ್ದರು. ಎರಡು ವಿಮಾನಗಳು ಪ್ರಚಾರ ಸಾಮಗ್ರಿಯನ್ನು ಹೊತ್ತು ಯುದ್ಧಭೂಮಿಯತ್ತ ಹಾರಿದವು.

ಆದರೆ ಸಶಸ್ತ್ರ ಬಂಡಾಯದ ಅಲೆಗಳು ಯಾವ ಮಾನವ ಎಣಿಕೆಗೂ ಸಿಗದ ವೇಗದಲ್ಲಿ ರಷ್ಯಾದ ಉದ್ದಗಲಕ್ಕೂ ಹಬ್ಬುತ್ತಿದ್ದವು. ಫಿನ್‌ಲೆಂಡ್‌ನ ಹೆಲ್‌ಸಿಂಗ್‌ಫೋರ್ಸ್‌ದಲ್ಲಿನ ಸೋವಿಯತ್, ಕ್ರಾಂತಿಯನ್ನು ಬೆಂಬಲಿಸಿ ನಿರ್ಣಯವನ್ನು ಅಂಗೀಕರಿಸಿತ್ತು. ಉಕ್ರೇನ್‌ನ ಕೀವ್ ನಗರದಲ್ಲಿ ಬೋಲ್ಶೆವಿಕರು ಶಸ್ತ್ರಾಗಾರವನ್ನೂ, ಟೆಲಿಗ್ರಾಫ್ ಕಛೇರಿಯನ್ನೂ ಗೆದ್ದು, ಮತ್ತೆ ಮಹಾಧಿವೇಶನಕ್ಕೆ ಪ್ರತಿನಿಧಿಗಳಾಗಿದ್ದ ಕೊಸ್ಸಾಕರಿಗೆ ಒಪ್ಪಿಸುವಂತಾಗಿತ್ತು. ಕಝಾನ್ ರಷ್ಯಾದ ಟಾಟರ್‌ಸ್ತಾನ್‌ನಲ್ಲಿರುವ ನಗರದಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯು ನಗರ ರಕ್ಷಣಾ ದಳ ಹಾಗೂ ಹಂಗಾಮಿ ಸರ್ಕಾರದ ಅಧಿಕಾರಿಗಳನ್ನು ಸೆರೆಹಿಡಿದಿತ್ತು. ಸೈಬೀರಿಯಾದಲ್ಲೂ ಕ್ರಾಸ್‌ನೊಯಾರ್ಸ್ಕ್ ಮುನಿಸಿಪಾಲಿಟಿ ವಶವಾಗಿತ್ತು. ಬಹಳ ಮುಖ್ಯವಾಗಿ ಮಾಸ್ಕೋದ ಸೋವಿಯತ್ ಬೋಲ್ಶೆವಿಕರ ಪರವಾಗಿ ಮತ ಚಲಾಯಿಸಿತು. ಅಲ್ಲಿ ಆಗಲೇ ಮಿಲಿಟರಿ ಕ್ರಾಂತಿಕಾರಿ ಸಮಿತಿ ಅಸ್ತಿತ್ವಕ್ಕೆ ಬಂದಿತ್ತು.

ಎಲ್ಲೆಡೆ ಘಟನೆಗಳು ಒಂದೇ ಮಾದರಿಯಲ್ಲಿ ನಡೆದಿದ್ದವು. ಕಾರ್ಮಿಕರು, ಸೈನಿಕರು

ಬಹುತೇಕ ಸೋವಿಯತ್ ಕಡೆಗೆ. ಅಧಿಕಾರಿಗಳು, ಯಂಕರ್‌ಗಳು ಮತ್ತು ಮಧ್ಯಮ ವರ್ಗ ಸರ್ಕಾರದ ಕಡೆಗೆ. ಅದೇ ರೀತಿ ಕ್ಯಾಡೆಟ್‌ಗಳು, 'ಮಂದಗಾಮಿ' ಸಮಾಜವಾದಿ ಪಕ್ಷಗಳೂ ಸಹ ಹಳೆಯ ಸರ್ಕಾರದ ಪರವೇ. ಹೀಗಾಗಿ ಈ ಎಲ್ಲ ಊರುಗಳಲ್ಲೂ ರಾಷ್ಟ್ರ ಹಾಗೂ ಕ್ರಾಂತಿಯ ವಿಮೋಚನಾ ಸಮಿತಿಗಳು ಅಸ್ತಿತ್ವಕ್ಕೆ ಬಂದು ಆಂತರಿಕ ಯುದ್ಧಕ್ಕೆ ಶಸ್ತ್ರಾಸ್ತ್ರ ಸಮೇತ ಸಜ್ಜಾದವು.

ವಿಶಾಲ ರಷ್ಯಾ ಕುದಿಯುತ್ತಿತ್ತು. 1905ರಷ್ಟು ಹಿಂದೆಯೇ ಆರಂಭವಾದ ಪ್ರಕ್ರಿಯೆ ಅದು. ಮಾರ್ಚ್ ತಿಂಗಳಲ್ಲಿ ನಡೆದ ಕ್ರಾಂತಿ ಈ ಪ್ರಕ್ರಿಯೆಯನ್ನು ತ್ವರಿತಗೊಳಿಸುತ್ತಾ ಬರಲಿರುವ ಹೊಸ ವ್ಯವಸ್ಥೆಯ ಮುನ್ಸೂಚನೆಯನ್ನು ನೀಡಿತ್ತು. ಆದರೆ ಅದು ಟೊಳ್ಳು ಬಿದ್ದಿದ್ದ ಹಳೆಯ ಪ್ರಭುತ್ವದ ರಚನೆಯನ್ನು ಹಾಗೇ ಉಳಿಸಿತ್ತು. ಆದರೆ ಕೇವಲ ಒಂದು ರಾತ್ರಿಯಲ್ಲಿ ಬೋಲ್ಶೆವಿಕರು ಅದನ್ನೆಲ್ಲಾ ಹೊಗೆಯನ್ನು ಊದಿ ಪಕ್ಕಕ್ಕೆ ಸರಿಸುವಂತೆ ಒಗೆದುಬಿಟ್ಟಿದ್ದರು. ಹಳೆಯ ರಷ್ಯಾ ಇನ್ನಿಲ್ಲ ! ಮಾನವ ಸಮಾಜ ಭಯಂಕರ ಶಾಖದಲ್ಲಿ ಕರಗಿ ಲಾವಾದಂತೆ ಹರಿಯುತ್ತಿತ್ತು. ಅಗ್ನಿಜ್ವಾಲೆಗಳ ಸಮುದ್ರದಿಂದ ಸ್ಪಷ್ಟವಾಗಿ, ನಿರ್ದಯವಾಗಿ ವರ್ಗಹೋರಾಟ ಹೊರಹೊಮ್ಮುತ್ತಿತ್ತು – ಹೊಸದಾಗಿ ಹುಟ್ಟಿದ ಗ್ರಹವೊಂದರ ನಿಧಾನವಾಗಿ ತಣ್ಣಗಾಗುತ್ತಿರುವ, ಇನ್ನೂ ಗಟ್ಟಿಯಾಗಿರದ ಹೊರಕವಚದಂತೆ ಹೊಸ ವ್ಯವಸ್ಥೆಯೊಂದು ಮೂಡುತ್ತಿತ್ತು.

ಇತ್ತ ಪೆತ್ರೋಗ್ರಾಡ್‌ನಲ್ಲಿ ಸರಬರಾಜು ಮತ್ತು ಕಾರ್ಮಿಕ ಇಲಾಖೆಯೂ ಸೇರಿದಂತೆ ಹದಿನಾರು ಇಲಾಖೆಗಳು ಮುಷ್ಕರ ಹೂಡಿ ಅಸಹಕಾರವನ್ನು ಸೂಚಿಸುತ್ತಿದ್ದವು.

ಆ ಹೊತ್ತಿನಲ್ಲಿ, ಜಗತ್ತಿನಲ್ಲಿ ಯಾರಾದರೂ ಏಕಾಂಗಿಯಾಗಿ ನಿಂತಿದ್ದರು ಎಂದರೆ ಅವರು ಬೋಲ್ಶೆವಿಕರೇ ! ಆ ಶೀತಲ, ಮಬ್ಬು ಮುಂಜಾವಿನಲ್ಲಿ ಅವರ ಸುತ್ತ ಬಿರುಗಾಳಿಗಳು ಸುತ್ತುತ್ತಿದ್ದಾಗ ಅವರು ಒಂಟಿಯಾಗಿಬಿಟ್ಟಿದ್ದರು. ಹಿಂಜರಿಯಲು ಜಾಗವೇ ಇಲ್ಲದಂಥ ಸ್ಥಳದಿಂದ, ಸಾವನ್ನು ಗೆದ್ದು ಬದುಕಲಿಕ್ಕಾಗಿ ಮಿಲಿಟರಿ ಕ್ರಾಂತಿಕಾರಿ ಸಮಿತಿ ಪ್ರತಿಹೋರಾಟವನ್ನು ಆರಂಭಿಸಿತು. ಫ್ರಾನ್ಸ್‌ನ ಮಹಾಕ್ರಾಂತಿಕಾರಿ ದಾಂತೋನ್ ನುಡಿದಂತೆ, 'ಧೈರ್ಯ, ಇನ್ನಷ್ಟು ಧೈರ್ಯ, ಯಾವಾಗಲೂ ಧೈರ್ಯವೊಂದೇ...'

ಬೆಳಿಗ್ಗೆ ಐದು ಘಂಟೆಗೆ ರೆಡ್‌ಗಾರ್ಡ್‌ಗಳು ನಗರ ಡ್ಯೂಮಾದ ಪ್ರತಿಭಟನಾ ಮನವಿಯ ಪ್ರತಿಗಳನ್ನೆಲ್ಲಾ ಮುದ್ರಣಾಲಯದಿಂದ ವಶಪಡಿಸಿಕೊಂಡರು. ಅವರ ಅಧಿಕೃತ ಪತ್ರಿಕೆಯನ್ನೂ ನಿಷೇಧಿಸಲಾಯಿತು. ಬೂರ್ಶ್ವಾವರ್ಗದ ಎಲ್ಲಾ ಪತ್ರಿಕೆಗಳಿಗೂ ಇದೇ ಗತಿಯಾಯಿತು. ಹಳೆಯ ತ್ಸೆ–ಇ–ಕಾ ದ ಪತ್ರಿಕೆಯನ್ನು ನಿಷೇಧಿಸಿದರೂ, ಅದು ಇನ್ನೊಂದು ಹೆಸರಿನಲ್ಲಿ ಹೊರ ಬರಲಾರಂಭಿಸಿತು. "ರಾತ್ರಿಯಲ್ಲಿ ದ್ರೋಹದ ಕಾರ್ಯಗಳನ್ನು ಆರಂಭಿಸಿದ ಜನ ವೃತ್ತಪತ್ರಿಕೆಗಳನ್ನು ದಮನಮಾಡಿದ್ದಾರೆ. ಆದರೆ ದೇಶವನ್ನು ಅಜ್ಞಾನದಲ್ಲಿಡಲಾಗುವುದಿಲ್ಲ" ಎಂದು ಅದು ಕೂಗಾಡಿತು.

ಮಧ್ಯಾಹ್ನ ನಾವು ಡ್ಯೂಮಾ ಕಟ್ಟಡದ ಬಳಿ ಬಂದಾಗ ಅಲ್ಲಿ ವಿಪರೀತ ಜನಸಂದಣಿ ಇತ್ತು. ಅಲ್ಲಲ್ಲಿ ರೆಡ್‌ಗಾರ್ಡ್‌ಗಳು, ನಾವಿಕರು ಬಯೋನೆಟ್ ಸಿಕ್ಕಿಸಿಕೊಂಡ ಬಂದೂಕು ಹಿಡಿದು ನಿಂತಿದ್ದರು. ಪ್ರತಿಯೊಬ್ಬ ಸೈನಿಕನ ಸುತ್ತಲೂ ಒಂದು ನೂರು ಜನ ಗಂಡಸರ ಹೆಂಗಸರ ಗುಂಪು ಇತ್ತು. ಬಹುತೇಕರು ಗುಮಾಸ್ತರು, ವಿದ್ಯಾರ್ಥಿಗಳು, ಅಂಗಡಿಮಾಲೀಕರು. ಅವರೆಲ್ಲ ಸೈನಿಕರನ್ನು ಬೈಯುತ್ತಾ ಹೆದರಿಸುತ್ತಾ ನಿಂತಿದ್ದರು.

ತೋಳಿನ ಸುತ್ತಲೂ ಕೆಂಪುಪಟ್ಟಿ ಸುತ್ತಿಕೊಂಡಿದ್ದ ಕಾರ್ಮಿಕನೊಬ್ಬ ತ್ಸೆ-ಇ-ಕಾ ದ ಹೊಸ ಪತ್ರಿಕೆಯನ್ನು ವಿತರಿಸುತ್ತಿದ್ದ ಅಧಿಕಾರಿಗಳು ಮತ್ತು ಬಾಯ್ ಸ್ಕೌಟ್‌ಗಳಿಗೆ ಕೂಡಲೇ ಪತ್ರಿಕೆಗಳನ್ನು ನಮಗೊಪ್ಪಿಸಿ ಎಂದು ಸಿಟ್ಟಿನಿಂದಲೂ, ಆತಂಕದಿಂದಲೂ ರಿವಾಲ್ವರ್ ಹಿಡಿದು ಆಗ್ರಹಿಸುತ್ತಿದ್ದ. ಇತಿಹಾಸದಲ್ಲಿ ಹಿಂದೆಂದೂ ಇಂಥ ಘಟನೆ ಸಂಭವಿಸಿರಲಿಕ್ಕಿಲ್ಲ. ಒಂದು ಕಡೆ ಕೆಲವೇ ಮಂದಿ ಸಾಮಾನ್ಯ ಸೈನಿಕರು ಮತ್ತು ಕಾರ್ಮಿಕರು ಸಶಸ್ತ್ರ ಬಂಡಾಯದಿಂದ ಗಳಿಸಿದ ಅಧಿಕಾರವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಇನ್ನೊಂದೆಡೆ ರಾಜಬೀದಿಗಳಲ್ಲಿ ಮಧ್ಯಾಹ್ನ ಶೋಕಿ ಮಾಡಿಕೊಂಡು ಓಡಾಡುವ ದೊಡ್ಡ ಮನುಷ್ಯರು ಇವರುಗಳನ್ನು 'ದ್ರೋಹಿಗಳು, ಏಜೆಂಟರು, ಅನಾಗರಿಕರು' ಎಂದೆಲ್ಲಾ ಬಯ್ಯುತ್ತಾ ತಿರಸ್ಕಾರದಿಂದ ಕೂಗುತ್ತಿದ್ದಾರೆ.

ತೋಳಿನ ಮೇಲೆ 'ಸಾರ್ವಜನಿಕ ರಕ್ಷಣಾ ಸಮಿತಿಯ ದಳ' ಎಂದು ಕೆಂಪು ಅಕ್ಷರದಲ್ಲಿ ಮುದ್ರಿಸಿದ್ದ ಬಿಳಿಯ ತೋಳಿನ ಪಟ್ಟಿಗಳನ್ನು ಧರಿಸಿದ್ದ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳು ಇಲ್ಲಿ ಬಾಗಿಲುಗಳನ್ನು ಕಾಯುತ್ತಿದ್ದರು. ಎಲ್ಲ ಕಡೆ ಡ್ಯೂಮಾವನ್ನು ವಿಸರ್ಜಿಸುತ್ತಾರೆ ಎಂಬ ಗದ್ದಲ. ಜನತೆಯ ಕಮಿಸಾರ್‌ಗಳ ಮಂಡಳಿಯನ್ನು ಮಾನ್ಯ ಮಾಡಿ ಎಂದು ಕೇಳಲು ಬಂದಿದ್ದ ರಿಯಾಜ಼ನೊವ್‌ನನ್ನು ಮೇಯರ್ ಖಡಾಖಂಡಿತವಾಗಿ ಆಗುವುದಿಲ್ಲ ಎಂದು ಹೇಳಿ ಕಳಿಸಿದ.

ಕಛೇರಿಗಳಲ್ಲಿ ಸರ್ಕಾರಿ ಉದ್ಯೋಗಿಗಳು, ಬುದ್ಧಿಜೀವಿಗಳು, ಪತ್ರಕರ್ತರು, ವಿದೇಶಿ ಬಾತ್ಮೀದಾರರು, ಫ್ರೆಂಚ್ ಮತ್ತು ಬ್ರಿಟಿಷ್ ಅಧಿಕಾರಿಗಳು ಅವಸರದಿಂದ ಓಡಾಡುತ್ತ, ಕೂಗಾಡುತ್ತ ಇದ್ದರು. ಅಲ್ಲೊಬ್ಬ ಇಂಜಿನಿಯರ್ ಎನ್ನುತ್ತಿದ್ದ – "ರಾಯಭಾರ ಕಛೇರಿಗಳಲ್ಲಿ ಡ್ಯೂಮಾಗೆ ಮಾತ್ರ ಮನ್ನಣೆ ನೀಡಲಾಗುತ್ತಿದೆ. ಈ ಬೋಲ್ಶೆವಿಕ್ ಡಕಾಯಿತರು, ಕೊಲೆಗಡುಕರು ಕೆಲವೇ ಘಂಟೆಗಳಲ್ಲಿ ಉರುಳಿಹೋಗಲಿದ್ದಾರೆ. ಇಡೀ ರಷ್ಯಾ ನಮ್ಮ ಹಿಂದೆ ಬರಲಿದೆ..."

ಅಲೆಕ್ಸಾಂಡರ್ ಸಂಭಾಗಣದಲ್ಲಿ ಭಾರೀ ದೊಡ್ಡ ಸಭೆ ನಡೆಯುತ್ತಿತ್ತು. ಯಾರೆಲ್ಲಾ ತಮ್ಮ ಜೊತೆ ಸೇರುತ್ತಿದ್ದಾರೆ ಎಂಬುದನ್ನು ಕುರಿತು ಸ್ಕೊಬೆಲೆವ್ ವರದಿ ಸಲ್ಲಿಸುತ್ತಿದ್ದ. ರೈತರ ಸೋವಿಯತ್‌ಗಳ ಕಾರ್ಯಕಾರಿ ಸಮಿತಿ, ಹಳೆಯ ತ್ಸೆ-ಇ-ಕಾ, ಸೈನ್ಯದ ಕೇಂದ್ರ ಸಮಿತಿ, ಟ್ಸೆಂಟ್ರೊಫ್ಲೊಟ್, ಮಹಾಧಿವೇಶನದಿಂದ ಹಿಂದಿರುಗಿರುವ ಮೆನ್ಶೆವಿಕರ ಹಾಗೂ ಸೋಷಲಿಸ್ಟ್ ರೆವಲ್ಯೂಶನರಿಗಳ ಪ್ರತಿನಿಧಿಗಳು, ಅದೇ ಪಕ್ಷಗಳ ಕೇಂದ್ರ ಸಮಿತಿಗಳು, ಜನಪ್ರಿಯ ಸಮಾಜವಾದಿ ಪಕ್ಷಗಳು, ಯೆಡಿನ್‌ಸ್ಟ್ವೊ ಗುಂಪು, ರೈತರ ಒಕ್ಕೂಟ, ಸಹಕಾರಿ ಸಂಘಗಳು, ಜ಼ೆಮ್‌ಸ್ಟ್ವೊಗಳು, ಮುನಿಸಿಪಾಲಿಟಿಗಳು, ಅಂಚೆ – ತಂತಿ ಕಾರ್ಮಿಕರ ಸಂಘ, ರೈಲ್ವೆ ಕಾರ್ಮಿಕರ ಸಂಘ, ರಷ್ಯನ್ ಗಣರಾಜ್ಯದ ಮಂಡಳಿ, ವರ್ತಕರು ಮತ್ತು ಕೈಗಾರಿಕೋದ್ಯಮಿಗಳ ಸಂಘ ಇತ್ಯಾದಿ.

"... ಸೋವಿಯತ್‌ಗಳ ಅಧಿಕಾರ ಜನತಾಂತ್ರಿಕವಾದದ್ದಲ್ಲ, ಸರ್ವಾಧಿಕಾರಿಯಾದದ್ದು. ಅದು ಕಾರ್ಮಿಕ ವರ್ಗದ ಸರ್ವಾಧಿಕಾರ ಅಲ್ಲ, ಕಾರ್ಮಿಕರ ವಿರುದ್ಧವಾಗಿರುವ ಸರ್ವಾಧಿಕಾರ. ಕ್ರಾಂತಿಗಾಗಿ ಉತ್ಸಾಹ ಇರುವವರೆಲ್ಲಾ ಈಗ ಕ್ರಾಂತಿಯನ್ನು ರಕ್ಷಿಸಲು ಬನ್ನಿ...

"ನಾವೀಗ ಕೇವಲ ವಂಚಕ ವಾಗ್ಮಿಗಳನ್ನಲ್ಲ ಎದುರಿಸಬೇಕಾಗಿರುವುದು, ಪ್ರತಿಕ್ರಾಂತಿಯನ್ನು. ದೂರ ಪ್ರಾಂತ್ಯಗಳಲ್ಲಿರುವ ಸೇನಾ ದಂಡನಾಯಕರು ಪರಿಸ್ಥಿತಿಯ

ಲಾಭ ಪಡೆಯಲು ರಾಜಧಾನಿಯತ್ತ ಹೊರಟಿದ್ದಾರಂತೆ. ನಾವು ಬೇಗ ಬಲವಾದ ಜನತಂತ್ರವನ್ನು ಸ್ಥಾಪಿಸದಿದ್ದರೆ ಮೊದಲು ಎಡಪಂಥೀಯರೊಂದಿಗೆ ನಂತರ ಬಲಪಂಥೀಯರೊಂದಿಗೆ ಸಮಸ್ಯೆ ಶುರುವಾಗುತ್ತದೆ.

"ನಮ್ಮ ಪತ್ರಿಕೆಗಳನ್ನು ಮಾರುವ ಹುಡುಗರನ್ನು, ಕೊಂಡು ಓದುವ ಜನರನ್ನೂ ರಸ್ತೆಗಳಲ್ಲಿ ಬಂಧಿಸುತ್ತಿರುವಾಗ ಪೆತ್ರೋಗ್ರಾಡ್‌ನ ರಕ್ಷಣಾದಳವು ಕೈಕಟ್ಟಿಕೊಂಡು ಕುಳಿತಿರುವುದು ಹೇಗೆ? ಒಂದೋ ಕ್ರಾಂತಿಯನ್ನು ರಕ್ಷಿಸಬೇಕು, ಇಲ್ಲ ನಾವೂ ನಾಶವಾಗಬೇಕು."

ಇಂಥ ಭಾಷಣಗಳಿಗೆ ಚಪ್ಪಾಳೆ ಹೊಡೆಯುತ್ತಾ, ಕೂಗುತ್ತಿದ್ದ ಜನರಲ್ಲಿ ಒಬ್ಬ ಕಾರ್ಮಿಕನೂ ಇರಲಿಲ್ಲ. ವೈನ್‌ಸ್ಟೈನ್ ಎಂಬುವನು ಜನರ ಬೆಂಬಲ ಸಿಕ್ಕಿದ ಕೂಡಲೇ ಕಾರ್ಯಪ್ರವೃತ್ತರಾಗೋಣ ಎಂದ. ಇನ್ನೊಂದು ಕಡೆ ರೈಲ್ವೆ ಕಾರ್ಮಿಕ ಸಂಘ ವಿಕ್‌ಜೆಲ್‌ನ ಪ್ರತಿನಿಧಿ ತಮ್ಮ ಸಂಘಟನೆ ಹೊಸ ಸರ್ಕಾರವನ್ನು ರಚಿಸುವುದೆಂದೂ ಅದಕ್ಕಾಗಿ ಸ್ಮೋಲ್ನಿಯಲ್ಲಿರುವ ಬೋಲ್ಶೆವಿಕರೊಂದಿಗೆ ಮಾತುಕತೆ ನಡೆಯುತ್ತಿದೆ ಎಂದೂ ಹೇಳಿದ. ಬೋಲ್ಶೆವಿಕರನ್ನು ಸರ್ಕಾರದಲ್ಲಿ ಸೇರಿಸಿಕೊಳ್ಳಬೇಕೆ ಎಂಬುದರ ಬಗ್ಗೆ ಬಿಸಿಬಿಸಿ ಚರ್ಚೆಗಳಾದವು. ಮಾರ್ಟೋವ್ ಮಾತ್ರ ಅದರ ಪರವಾಗಿದ್ದ. ಆದರೆ ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಶನರಿಗಳು, ಬೂರ್ಶ್ವಾ ಪ್ರತಿನಿಧಿಗಳು ಅದಕ್ಕೆ ಸಂಪೂರ್ಣ ವಿರೋಧ ವ್ಯಕ್ತಪಡಿಸಿದರು. ಒಬ್ಬ ಭಾಷಣಕಾರನಂತೂ "ಬೋಲ್ಶೆವಿಕರು ದೇಶದ್ರೋಹಿಗಳು. ಅವರು ಜರ್ಮನರು ಒಳಗೆ ಬರಲು ರಣಾಂಗಣವನ್ನು ತೆರೆದಿಟ್ಟಿದ್ದಾರೆ. ಅವರನ್ನು ನಿರ್ದಯವಾಗಿ ಬಗ್ಗುಬಡಿಯಬೇಕು" ಎಂದ.

ತರುಣ ಸೋಷಲಿಸ್ಟ್ ರೆವಲ್ಯೂಶನರಿಯೊಬ್ಬನೊಡನೆ ನಾನು ಮಾತಿಗಿಳಿದೆ.

"ನೀನೇನು ಇಲ್ಲಿದ್ದೀಯ?" ಎಂದು ಕೇಳಿದೆ.

ಅವನು ಸಿಟ್ಟಿನಿಂದ "ಹೌದು, ನಾನು ನನ್ನ ಪಕ್ಷದೊಂದಿಗೆ ಮಹಾಧಿವೇಶನದಿಂದ ಹೊರಕ್ಕೆ ಬಂದೆ. ನಾನು ಇಪ್ಪತ್ತು ವರ್ಷ ಜೀವದ ಹಂಗು ತೊರೆದು ಹೋರಾಡಿದ್ದು ಈ ಕರಾಳ ಜನರ ದೌರ್ಜನ್ಯವನ್ನು ಒಪ್ಪಿಕೊಳ್ಳುವುದಕ್ಕಲ್ಲ. ಬೋಲ್ಶೆವಿಕರ ವಿಧಾನಗಳನ್ನು ಸಹಿಸುವುದು ಸಾಧ್ಯವೇ ಇಲ್ಲ. ಅವರಿಗೆ ರೈತರು ಎದ್ದುನಿಂತರೆ ಏನಾಗುತ್ತದೆ ಎಂಬ ಅರಿವಿಲ್ಲ" ಎಂದ.

"ಆದರೆ ರೈತರು ಬೋಲ್ಶೆವಿಕರ ವಿರುದ್ಧ ಹೋಗುತ್ತಾರೆಯೇ? ಜಮೀನಿನ ಕುರಿತಾದ ಡಿಕ್ರಿಯು ಅವರ ಬೇಡಿಕೆಗಳನ್ನೆಲ್ಲಾ ಉತ್ತರಿಸುವುದಿಲ್ಲವೇ?"

"ಜಮೀನಿನ ಡಿಕ್ರಿ ನಮ್ಮದು, ರೈತರೊಂದಿಗೆ ಸಮಾಲೋಚನೆ ಮಾಡಿ ತುಂಬ ಕಾಳಜಿಯಿಂದ ನಮ್ಮ ಪಕ್ಷ ರೂಪಿಸಿದ ಕಾರ್ಯಕ್ರಮ ಅದು," ಅವನೆಂದ.

"ಅದು ನಿಮ್ಮದೇ ಕಾರ್ಯಕ್ರಮವಾಗಿರುವಾಗ ನೀವು ವಿರೋಧಿಸುವುದು ಏಕೆ? ಅದು ರೈತರ ಹಿತಾಸಕ್ತಿಯನ್ನು ಎತ್ತಿಹಿಡಿಯುವ ಹಾಗಿದ್ದರೆ ಅವರಾದರೂ ಏಕೆ ಅದನ್ನು ವಿರೋಧಿಸುತ್ತಾರೆ?" ಎಂದು ನಾನು ಮತ್ತೆ ಪ್ರಶ್ನಿಸಿದೆ.

ಅವನೆಂದ, "ನಿಮಗೆ ಅರ್ಥವಾಗುವುದಿಲ್ಲ. ಇದೆಲ್ಲ ಒಂದು ಕುತಂತ್ರ, ಇದು ಸೋಷಲಿಸ್ಟ್ ರೆವಲ್ಯೂಶನರಿಗಳ ಕಾರ್ಯಕ್ರಮವನ್ನೇ ಕದ್ದಿರುವಂಥದ್ದು ಎಂಬುದು ರೈತರಿಗೆ ಅರ್ಥವಾಗುತ್ತದೆ." ಈ ವಿತಂಡವಾದಕ್ಕೆ ಉತ್ತರ ಹೇಳುವುದು ಅವಶ್ಯಕವಿರಲಿಲ್ಲ.

ಕಲೆಡಿನ್ ಸೈನ್ಯ ತೆಗೆದುಕೊಂಡು ಉತ್ತರ ದಿಕ್ಕಿಗೆ ಬರುತ್ತಿರುವುದು ಸತ್ಯವೇ ಎಂದು ನಾನು ಅವನನ್ನು ಕೇಳಿದೆ. ಆತ ಒಂದು ರೀತಿಯ ತೃಪ್ತಿಯ ದನಿಯಿಂದ "ನೋಡಿ

ಬೋಲ್ಶೆವಿಕರು ನಮ್ಮ ವಿರುದ್ಧ ಕ್ರಾಂತಿವಿರೋಧಿ ಶಕ್ತಿಗಳನ್ನು ಎಬ್ಬಿಸಿದರು. ಈಗ ಕ್ರಾಂತಿಯೇ ನಾಶವಾಯಿತು" ಎಂದ.

"ಆದರೆ ಕಲೆಡಿನ್, ಪೆತ್ರೋಗ್ರಾಡಿನ ಮೇಲೆ ದಾಳಿ ಮಾಡಿದರೆ ನೀವು ಕ್ರಾಂತಿಯನ್ನೂ, ಪೆತ್ರೋಗ್ರಾಡನ್ನು ರಕ್ಷಿಸುವುದಿಲ್ಲವೇ? ಬೋಲ್ಶೆವಿಕರು ಆಗ ರಾಜಧಾನಿಯನ್ನು ರಕ್ಷಿಸಲು ಹೋರಾಡುತ್ತಿದ್ದರೆ ನೀವು ಅವರೊಂದಿಗೆ ಸೇರುವುದಿಲ್ಲವೇ?" ನಾನು ಕೇಳಿದೆ.

"ನಾವೂ ರಾಜಧಾನಿಯನ್ನು ರಕ್ಷಿಸುತ್ತೇವೆ. ಆದರೆ ಏನೇ ಆದರೂ ಬೋಲ್ಶೆವಿಕರೊಂದಿಗೆ ಸೇರುವುದಿಲ್ಲ. ನಮಗೆ ಬೋಲ್ಶೆವಿಕರು ಮತ್ತು ಕಲೆಡಿನ್ ಇಬ್ಬರೂ ಶತ್ರುಗಳೇ."

"ಇಬ್ಬರಲ್ಲಿ ಯಾರು ಹೆಚ್ಚಿನ ಶತ್ರು?" ನಾನು ಬಿಡದೆ ಕೇಳಿದೆ.

"ಇದು ಚರ್ಚೆಯ ವಿಷಯವಲ್ಲ." ಅವನು ತಾಳ್ಮೆ ಕಳೆದುಕೊಂಡು ಕೂಗುತ್ತಿದ್ದ. "ಕ್ರಾಂತಿಯ ಕತೆ ಮುಗಿಯಿತು. ಮತ್ತೆ ಇದಕ್ಕೆ ಬೋಲ್ಶೆವಿಕರೇ ಕಾರಣ. ಅದೆಲ್ಲಾ ಇರಲಿ. ಈಗ ಕೆರೆನ್‌ಸ್ಕಿ ಬರುತ್ತಿದ್ದಾರೆ. ನಾಡಿದ್ದು ನಾವು ಆಕ್ರಮಣವನ್ನು ಶುರುಮಾಡುತ್ತೇವೆ. ಈಗ ಬೋಲ್ಶೆವಿಕರೇ ಸರ್ಕಾರ ರಚನೆಗೆ ನಮ್ಮನ್ನು ಕರೆಯುತ್ತಿದ್ದಾರೆ. ಅವರೀಗ ಅಸಹಾಯಕರಾಗಿದ್ದಾರೆ. ನಾವಂತೂ ಸಹಕರಿಸುವುದಿಲ್ಲ." ಸೋಷಲಿಸ್ಟ್ ರೆವಲ್ಯೂಶನರಿಗಳು ಇಷ್ಟು ಕುರುಡಾಗಿಬಿಟ್ಟಿದ್ದರು.

ಹೊರಗೆ ಗುಂಡಿನ ಸದ್ದು. ನಾವು ಕಿಟಕಿಗಳತ್ತ ಓಡಿದೆವು. ತಾಳ್ಮೆ ಕಳೆದುಕೊಂಡ ರೆಡ್‌ಗಾರ್ಡ್ ಒಬ್ಬ ಗುಂಡು ಹಾರಿಸಿ ಹುಡುಗಿಯೊಬ್ಬಳಿಗೆ ಪೆಟ್ಟಾಗಿತ್ತು. ಜನ ಗದ್ದಲ ಮಾಡುತ್ತಿರುವಾಗಲೇ ಒಂದು ಗುಂಡು ನಿರೋಧಕ ಕವಚವಿದ್ದು, ತನ್ನ ಫಿರಂಗಿಗಳನ್ನು ಅತ್ತಿಂದ ಇತ್ತ ತಿರುಗಿಸುತ್ತಿದ್ದ ಸೈನ್ಯದ ಆರ್ಮರ್ಡ್ ಕಾರ್ ಒಂದು ಬಂತು. ಕೂಡಲೇ ಜನರೆಲ್ಲಾ ಚೆಲ್ಲಾಪಿಲ್ಲಿಯಾದರು, ರಸ್ತೆಗಳಲ್ಲಿ ಚರಂಡಿಗಳಲ್ಲಿ ನಿಶ್ಚಲವಾಗಿ ಮಖಾಡೆಯಾಗಿ ಬಿದ್ದುಕೊಂಡರು. ಕಾರ್‌ನಲ್ಲಿದ್ದವರು 'ಪತ್ರಿಕೆಗಳನ್ನೆಲ್ಲಾ ಒಪ್ಪಿಸಿಬಿಡಿ' ಎಂದು ಆಜ್ಞೆ ಮಾಡಿದರು. ಆದರೆ ಹುಡುಗರು ಕಟ್ಟಡದೊಳಗೆ ಬಚ್ಚಿಟ್ಟುಕೊಂಡರು. ದಾಳಿ ಮಾಡಲು ಮನಸ್ಸಿಲ್ಲದ ಮಿಲಿಟರಿ ವಾಹನ ವಾಪಸ್ ಹೋಯಿತು. ಅಷ್ಟರಲ್ಲಿ ಪತ್ರಕರ್ತನೊಬ್ಬ ಓಡಿಬಂದು "ಕ್ರಾಸ್‌ನೊವ್‌ನ ಘೋಷಣೆ ಇದೆ. ಬೇಗ ಮುದ್ರಿಸಿ. ಇದನ್ನು ಸೈನಿಕರ ನಡುವೆ ಕೂಡಲೇ ಹಂಚಬೇಕಾಗಿದೆ" ಎಂದ.

* * *

ಆ ಒಂದು ಆಜ್ಞೆಯ ಸಂಗ್ರಹಿತ ರೂಪ ಹೀಗಿತ್ತು :

*ಮಹಾದಂಡನಾಯಕರ ಆಜ್ಞೆಯಿಂದಾಗಿ ನಾನು ಪೆತ್ರೋಗ್ರಾಡಿನ ಎಲ್ಲ ಸೈನ್ಯಗಳ ಸೇನಾಪತಿಯಾಗಿ ನೇಮಿಸಲ್ಪಟ್ಟಿದ್ದೇನೆ. ನಾಗರಿಕರೆ, ಧೀರ ಡಾನ್ ಕೊಸ್ಸಾಕರೇ, ಕುಬಾನ್ ಮತ್ತಿತರ ಪ್ರದೇಶಗಳ ಕೊಸ್ಸಾಕರೇ !*

*ಯಾರೆಲ್ಲಾ ಕೊಸ್ಸಾಕರ ಪವಿತ್ರ ಪ್ರತಿಜ್ಞೆಗೆ ಬದ್ಧರಾಗಿದ್ದೀರ, ಅವರಿಗೆಲ್ಲ ನಾನು ಕೇಳುವುದು ರಾಜಧಾನಿಯನ್ನು ಅರಾಜಕತೆ, ಕ್ಷಾಮ ಹಾಗೂ ದೌರ್ಜನ್ಯದಿಂದ ರಕ್ಷಿಸಿ, ಜರ್ಮನಿಯ ಸಾಮ್ರಾಟನ ಹಣಕ್ಕೆ ತಮ್ಮನ್ನೇ ಮಾರಿಕೊಂಡ ಲಜ್ಜೆಗೇಡಿಗಳಿಂದ ರಷ್ಯಾವನ್ನು ರಕ್ಷಿಸಿ.*

*ಮಾರ್ಚ್ ತಿಂಗಳ ಮಹಾನ್ ದಿನಗಳಿಂದಲೂ ತಾವು ನಿಷ್ಠೆ ತೋರಿಸುತ್ತಿದ್ದ ಹಂಗಾಮಿ ಸರ್ಕಾರವು ಹಿಂಸಾತ್ಮಕ ಕ್ರಮಗಳಿಂದ ಸ್ಥಳಾಂತರಗೊಂಡಿದೆಯೇ ಹೊರತು ಪದಚ್ಯುತಗೊಂಡಿಲ್ಲ. ಆದರೆ ಸರ್ಕಾರಕ್ಕೆ ರಣಾಂಗಣದಲ್ಲಿರುವ ಸೈನ್ಯ ಪಡೆಗಳ*

*ಬೆಂಬಲವಿದೆ. ಚಾರಿತ್ರಿಕವಾಗಿ ಮಾಸ್ಕೊ ಅಪಾಯದಲ್ಲಿದ್ದಾಗಲೆಲ್ಲಾ ಸರ್ಕಾರವನ್ನು ಕಾಪಾಡಿದ ಡಾನ್ ಕೊಸ್ಸಾಕರು ಈಗಲೂ ನಮ್ಮೊಂದಿಗೆ ಇದ್ದಾರೆ. ನಿಮ್ಮ ಸರ್ಕಾರ ಈಗಲೂ ಅಸ್ತಿತ್ವದಲ್ಲಿದೆ.*

*ಜರ್ಮನರ ಏಜೆಂಟರಂತೆ ಕೆಲಸ ಮಾಡಲು ಬೋಲ್ಶೆವಿಕರು ಜನರಿಂದ ದೂರವಾಗಿದ್ದಾರೆ. ಸೈನಿಕರೇ, ಕೊಸ್ಸಾಕರೆ, ನಾಗರಿಕರೆ, ನಿಮ್ಮ ಪ್ರತಿನಿಧಿಗಳನ್ನು ನಮ್ಮ ಬಳಿ ಕಳಿಸಿ. ಹಾಗೆ ಮಾಡಿದಲ್ಲಿ ಅನವಶ್ಯಕ ರಕ್ತಪಾತವಾಗುವುದು ತಪ್ಪುತ್ತದೆ.*

ಅಷ್ಟರಲ್ಲೇ ಕಟ್ಟಡಕ್ಕೆ ರೆಡ್‌ಗಾರ್ಡ್‌ಗಳು ಮುತ್ತಿಗೆ ಹಾಕಿದ್ದಾರೆಂಬ ಸುದ್ದಿ ಹರಡಲಾರಂಭಿಸಿತು. ತೋಳಿಗೆ ಕೆಂಪುಪಟ್ಟಿ ಸುತ್ತಿಕೊಂಡಿದ್ದ ಅಧಿಕಾರಿಯೊಬ್ಬ ಬಂದು ತಾನು ಮೇಯರ್‌ನನ್ನು ನೋಡಲೇಬೇಕೆಂದು ಘೋಷಿಸಿದ. ಅವನು ಮಾತನಾಡಿಹೋದ ಮೇಲೆ ವೃದ್ಧ ಮೇಯರ್ ಶ್ರೈಡರ್ ತನ್ನ ಕಛೇರಿಯಿಂದ ಹೊರಬಂದ. ಅವನ ಮುಖ ಕೆಂಪಾಗುತ್ತಿತ್ತು. ಮತ್ತೆ ಬಿಳಿಚಿಕೊಳ್ಳುತ್ತಿತ್ತು ಸಹ.

"ಡ್ಯೂಮಾದ ವಿಶೇಷ ಸಭೆಯನ್ನು ಕರೆಯುತ್ತಿದ್ದೇನೆ." ಆತ ಹೇಳಿದ.

ಯಾರೋ ಕೇಳಿದರು, "ಏನಂತೆ ವಿಷಯ ?"

"ಗೊತ್ತಿಲ್ಲ, ನಮ್ಮನ್ನು ಬಂಧಿಸುತ್ತಾರಂತೆ, ಡ್ಯೂಮಾವನ್ನು ವಿಸರ್ಜಿಸುತ್ತಾರಂತೆ."

ನಿಕೊಲಾಯ್ ಸಭಾಂಗಣದಲ್ಲಿ ನಿಲ್ಲಲೂ ಜಾಗವಿಲ್ಲದಂತೆ ಜನ ಕಿಕ್ಕಿರಿದಿದ್ದರು. "ಎಲ್ಲಾ ಬಾಗಿಲುಗಳಲ್ಲೂ ಸೈನಿಕರು ನಿಂತಿದ್ದಾರೆ. ಯಾರನ್ನೂ ಒಳಗೆ ಬಿಡುತ್ತಿಲ್ಲ. ಒಳಗಿರುವವರನ್ನು ಹೊರಗೆ ಹೋಗಲು ಬಿಡುತ್ತಿಲ್ಲ. ಎಲ್ಲರನ್ನೂ ದಸ್ತಗಿರಿ ಮಾಡುವುದಾಗಿ ಮತ್ತು ಡ್ಯೂಮಾವನ್ನು ವಿಸರ್ಜಿಸುವುದಾಗಿ ಹೇಳುತ್ತಿದ್ದಾರೆ" ಎಂದು ಮೇಯರ್ ಸಭೆಗೆ ತಿಳಿಸಿದ.

ನಂತರ ಅನೇಕ ಉದ್ವೇಗದ ಭಾಷಣಗಳಾದವು. "ಏನೇ ಆಗಲಿ ಚುನಾಯಿತ ಡ್ಯೂಮಾವನ್ನು ವಿಸರ್ಜಿಸಲು ಬಿಡುವುದಿಲ್ಲ. ಮೇಯರ್ ಅವರ ಅಧಿಕಾರವನ್ನು ಯಾರೂ ಕಸಿದುಕೊಳ್ಳಲಾಗದು. ಜರ್ಮನರ ಏಜೆಂಟರಿಗೆ ನಾವು ಯಾವುದೇ ಮಾನ್ಯತೆಯನ್ನು ನೀಡುವುದಿಲ್ಲ. ನಮ್ಮ ಹೆಣಗಳ ಮೇಲೆ ಅವರು ಒಳ ಪ್ರವೇಶಿಸಿ ಡ್ಯೂಮಾವನ್ನು ವಿಸರ್ಜಿಸ ಬೇಕಾಗುತ್ತದೆ. ಚರಿತ್ರೆಯಲ್ಲಿ ಗೋಥರು ಒಳಗೆ ನುಗ್ಗಿದಾಗ ರೋಮನ್ ಸೆನೆಟರ್‌ಗಳು ಘನತೆಯಿಂದ ನಿಂತಿರಲಿಲ್ಲವೇ, ನಾವೂ ಹಾಗೇ ನಿಲ್ಲೋಣ" ಇತ್ಯಾದಿ ಇತ್ಯಾದಿ.

ರಷ್ಯಾದ ಎಲ್ಲಾ ಡ್ಯೂಮಾಗಳಿಗೆ ಸುದ್ದಿ ಕಳಿಸಬೇಕೆಂಬ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಮೇಯರ್ ಅವರು ಬೋಲ್ಶೆವಿಕರೊಂದಿಗೆ ಸಂಧಾನ ಮಾಡಕೂಡದು ಎಂದು ಇನ್ನೊಂದು ನಿರ್ಣಯ.

ಪೆತ್ರೋಗ್ರಾಡ್ ಜನ ಎದ್ದುನಿಂತು ಡ್ಯೂಮಾವನ್ನು ರಕ್ಷಿಸಬೇಕು ಎಂಬ ಮತ್ತೊಂದು ನಿರ್ಣಯ. ಒಟ್ಟಿನಲ್ಲಿ ಭಾಷಣಗಳು, ನಿರ್ಣಯಗಳು...!

ಅಷ್ಟರಲ್ಲಿ ಯಾರೋ ಬಂದು "ಸ್ಮೋಲ್ನಿಯಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯವರು ಹೇಳುವುದು ಮುತ್ತಿಗೆಯನ್ನು ಹಾಕುವುದಿಲ್ಲವಂತೆ, ಡ್ಯೂಮಾವನ್ನು ವಿಸರ್ಜಿಸುವುದೂ ಇಲ್ಲವಂತೆ" ಎಂದು ಹೇಳಿದರು.

ನಾನು ಕೆಳಗೆ ಬರುವಾಗ ಬಹಳ ಉದ್ವೇಗದಿಂದ ನುಗ್ಗುತ್ತಿದ್ದ ರಿಯಾಜ಼ನೊವ್‌ನನ್ನು ಕೇಳಿದೆ, "ಡ್ಯೂಮಾವನ್ನು ವಿಸರ್ಜಿಸುತ್ತೀರಾ?" ಆತ, "ಅಯ್ಯೋ, ಅದೆಲ್ಲಾ ತಪ್ಪು ವರ್ತಮಾನ. ನಾನು ಬೆಳಿಗ್ಗೆಯೇ ಮೇಯರ್‌ಗೆ ಹೇಳಿದ್ದೆ. ಡ್ಯೂಮಾವನ್ನು ಮುಟ್ಟುತ್ತಿಲ್ಲ

ಅಂತ" ಎಂದು ವಿವರಿಸಿದ. ಹೊರಗೆ ನೆವ್‌ಸ್ಕಿ ರಾಜಮಾರ್ಗದಲ್ಲಿ ಹೆಗಲಿಗೆ ಬಂದೂಕು ತಗುಲಿಸಿಕೊಂಡ ಎರಡು ಸಾಲು ಸೈಕಲ್ ಸವಾರರು ಬಂದರು. ವಿಪರೀತ ಜನ ಸೇರಿ ಪ್ರಶ್ನಿಸಲಾರಂಭಿಸಿದರು. ಒಬ್ಬ ದಪ್ಪ ಸಿಗಾರ್ ಸೇದುತ್ತಿದ್ದ ಮನುಷ್ಯ ಕೇಳಿದ : "ಯಾರು ನೀವು ? ಎಲ್ಲಿಂದ ಬರ್ತಿದೀರ?"

"ನಾವು ಹನ್ನೆರಡನೇ ಸೈನ್ಯದವರು. ಬೂರ್ಶ್ವಾ ಕೇಡಿಗಳ ವಿರುದ್ಧ ಬೋಲ್ಶೆವಿಕ್‌ರನ್ನು ಬೆಂಬಲಿಸಲು ಬಂದಿದ್ದೇವೆ."

ತಕ್ಷಣ ಎಲ್ಲರೂ ಅವರನ್ನು ಶಪಿಸಲಾರಂಭಿಸಿದರು.

ಅಷ್ಟರಲ್ಲಿ ಸಣ್ಣ ಆಕಾರದ ಅಧಿಕಾರಿಯೊಬ್ಬ ಡ್ಯೂಮಾ ಸೌಧದ ಮೆಟ್ಟಿಲುಗಳಿಂದ ದುಡುದುಡುನೆ ಇಳಿದುಬಂದ. "ರಾಜಧಾನಿಯ ಸೈನ್ಯ ರಕ್ಷಣಾದಳ ಬೋಲ್ಶೆವಿಕರ ವಿರುದ್ಧ ತಿರುಗಿಬಿದ್ದಿದೆ. ಪ್ರವಾಹ ದಿಕ್ಕು ಬದಲಿಸುತ್ತಿದೆ. ಬೋಲ್ಶೆವಿಕರ ಅಂತ್ಯವು ಈಗ ಶುರುವಾಗ್ತದೆ. ನೋಡಕ್ಕೆ ಬರ್ತಿರೇನು?"

ನಾವು ಮಿಖೈಲೋವ್‌ಸ್ಕಿ ರಸ್ತೆಯಲ್ಲಿ ಅವನೊಂದಿಗೆ ಓಡುತ್ತಾ ಹೊರಟೆವು.

"ಯಾವ ರೆಜಿಮೆಂಟು ತಿರುಗಿ ಬಿದ್ದಿರುವುದು?" ನಾವು ಕೇಳಿದೆವು.

"ಬ್ರೊನೋವಿಕಿ" ಎಂದ ಆತ. ಅದು ನಿಜವಾದರೆ ಬೋಲ್ಶೆವಿಕರಿಗೆ ಅಪಾಯ ಖಂಡಿತ.

ಬ್ರೊನೋವಿಕಿ ಎಂದರೆ ಫಿರಂಗಿ ಇರುವ, ಗುಂಡು ನಿರೋಧಕವಿರುವ ವಾಹನಗಳ ದಳ. ಅವರು ಯಾರ ಕಡೆ ಇರುತ್ತಾರೋ ಅವರ ಕೈ ಮೇಲಾಗುವುದು ಖಂಡಿತ. ನಗರ ಅವರ ನಿಯಂತ್ರಣಕ್ಕೆ ಬಂದುಬಿಡುತ್ತದೆ. ಆತ ಮುಂದುವರೆಸಿದ – "ನಮ್ಮ ನಾಯಕರು ಅವರೊಂದಿಗೆ ಮಾತನಾಡುತ್ತಿದ್ದಾರೆ. ಇನ್ನೇನು ನಿರ್ಣಯ ಹೊರಬೀಳುತ್ತೆ..."

"ನಿರ್ಣಯ ಏನು? ಅವರು ಯಾರ ಕಡೆ ಹೋರಾಡುತ್ತಾರೆ?"

"ಹಾಗಲ್ಲ, ಹಾಗಲ್ಲ. ಅವರು ಏನೇ ಆದರೂ ಬೋಲ್ಶೆವಿಕರ ವಿರುದ್ಧ ಹೋರಾಡುವುದಿಲ್ಲ.

ಅವರು ತಟಸ್ಥರಾಗಲು ನಿರ್ಣಯಿಸುತ್ತಾರೆ. ಅಷ್ಟಾದರೆ ನಮ್ಮ ಕೊಸ್ಸಾಕರು, ಯಂಕರ್‌ಗಳು..."

ಅವರ ಬಡಾಯಿ ಮುಂದುವರೆದಿತ್ತು.

ಇನ್ನೊಂದು ಕಡೆ ಮಿಖೈಲೋ ಸವಾರರ ಶಾಲೆಯ ಬಾಗಿಲು ತೆರೆದಿತ್ತು. ಆದರೆ ಇಬ್ಬರು ರಕ್ಷಣಾದಳದವರು ನಮ್ಮನ್ನು ತಡೆಯಲೆತ್ನಿಸಿದರು. ನಾವು ಅವರನ್ನು ಪಕ್ಕಕ್ಕೆ ಸರಿಸಿ ಒಳಗೆ ನುಗ್ಗಿದೆವು.

ಎತ್ತರವಾದ ಹಾಲ್‌ನಲ್ಲಿ ಮಧ್ಯದೊಳಗೊಂದು ದೀಪ ಉರಿಯುತ್ತಿತ್ತು. ಸುತ್ತಲೂ ಒಂದಷ್ಟು ಆರ್ಮರ್ಡ್ ಕಾರ್ ವಾಹನಗಳು ನಿಂತಿದ್ದವು. ಮಧ್ಯದಲ್ಲಿ ಒಂದು ಅಂಥ ವಾಹನದ ಮೇಲೆ ಸುಮಾರು ಒಂದು ಡಜನ್ ಮಂದಿ ಅಧಿಕಾರಿಗಳು, ಸೈನಿಕರು ನಿಂತಿದ್ದರು. ಮಧ್ಯದಲ್ಲಿ ನಿಂತು ಖಂಜುನೊವ್ ಎಂಬ ಸೈನಿಕ ಮಾತನಾಡುತ್ತಿದ್ದ. ಅವನು ಕಳೆದ ಬೇಸಿಗೆಯಲ್ಲಿ ಬ್ರೊನೋವಿಕಿ ಮಹಾಧಿವೇಶನದಲ್ಲಿ ಅಧ್ಯಕ್ಷನಾಗಿದ್ದವನು. ಲೆಫ್ಟಿನೆಂಟ್ ಗತ್ತಿನಲ್ಲಿ ಚೆಲುವಾಗಿ ಕಾಣುತ್ತಿದ್ದ. ಅವನು ತಟಸ್ಥವಾಗಿರೋಣ ಎಂದು ವಾದಿಸುತ್ತಿದ್ದ.

"ರಷ್ಯನ್ನರು ರಷ್ಯನ್ನರನ್ನು ಕೊಲ್ಲುವುದು ಭಯಾನಕ. ಝಾರ್ ವಿರುದ್ಧ, ಹೊರಗಿನ ಶತ್ರುಗಳ ವಿರುದ್ಧ, ಚರಿತ್ರಾರ್ಹವಾಗಿ ಹೆಗಲಿಗೆ ಹೆಗಲುಕೊಟ್ಟು ಹೋರಾಡಿದ ನಾವು ಈಗ ಅಂತರ್‌ಯುದ್ಧದಲ್ಲಿ ತೊಡಗುವುದು ಬೇಡ. ನಮಗೆ ಈ ರಾಜಕೀಯ ಪಕ್ಷಗಳಿಂದ

ಏನಾಗಬೇಕಾಗಿದೆ? ನಾನೇನೂ ಹಂಗಾಮಿ ಸರ್ಕಾರ ಜನತಾಂತ್ರಿಕವಾಗಿತ್ತು ಎಂದು ವಾದ ಮಾಡುವುದಿಲ್ಲ. ನಮಗೆ ಬೂರ್ಶ್ವಾವರ್ಗದೊಂದಿಗೆ ಯಾವ ಮೈತ್ರಿಯೂ ಬೇಡ. ಆದರೆ ಎಲ್ಲರೂ ಒಂದಾಗಿ ರಚಿಸುವ ಜನತಂತ್ರಬೇಕು. ಇಲ್ಲದಿದ್ದರೆ ರಷ್ಯಾ ನಾಶವಾಗುತ್ತದೆ."

ಇದು ಎಷ್ಟೋ ಜನರಿಗೆ ತಾರ್ಕಿಕವಾಗಿ ಸರಿ ಎನ್ನಿಸಿತು. ಸಭಾಂಗಣದಲ್ಲಿ ಚಪ್ಪಾಳೆ, ಬೆಂಬಲದ ಮಾತು ಕೇಳಿಬಂತು. ಅಷ್ಟರಲ್ಲಿ ಒಬ್ಬ ಸೈನಿಕ ಮೇಲೆ ಹತ್ತಿ ನಿಂತ. ಅವನ ಮುಖ ಬಿಳಿಚಿಕೊಂಡಿತ್ತು. ಸುಸ್ತಾದಂತಿತ್ತು. ಆತ ನುಡಿದ : "ಕಾಮ್ರೇಡ್ಸ್, ನಾನು ರುಮಾನಿಯಾ ಬಳಿಯ ರಣಾಂಗಣದಿಂದ ಬರುತ್ತಿದ್ದೇನೆ. ನಿಮಗೆಲ್ಲಾ ತುರ್ತಾಗಿ ತಿಳಿಸಲೇಬೇಕು. ಶಾಂತಿ ಬೇಕೇ ಬೇಕು. ಕೂಡಲೇ ಶಾಂತಿ ಬೇಕು. ಅದನ್ನು ಬೋಲ್ಶೆವಿಕರಾದರೂ ಖಾತ್ರಿಪಡಿಸಲಿ, ಹೊಸ ಸರ್ಕಾರವಾದರೂ ಖಾತ್ರಿ ಪಡಿಸಲಿ. ನಾವು ಅವರನ್ನು ಬೆಂಬಲಿಸುತ್ತೇವೆ. ರಣಾಂಗಣದಲ್ಲಿರುವ ನಮಗಿನ್ನು ಹೋರಾಡಲು ಸಾಧ್ಯವಿಲ್ಲ..." ಅವನು ಮಾತು ಮುಗಿಸಿ ಕೆಳಕ್ಕೆ ಧುಮುಕಿ ಬಂದ. ಗೊಂದಲವೂ, ಯಾತನೆಯೂ ಅಲ್ಲಿನ ಸಭಿಕರ ಮಾತುಗಳಲ್ಲಿ ಕೇಳಿ ಬರುತ್ತಿತ್ತು. ಆದರೆ ನಂತರ ಮೆನ್ಶೆವಿಕ್ ಪ್ರತಿನಿಧಿಯೊಬ್ಬ ಮಿತ್ರಪಕ್ಷಗಳು ಗೆಲ್ಲುವವರೆಗೂ ಯುದ್ಧ ಮುಂದುವರೆಯಬೇಕು ಎಂದಾಗ ಜನ ಸಿಟ್ಟಿಗೆದ್ದರು.

"ನಿನ್ನ ಮಾತು ಕೆರೆನ್‌ಸ್ಕಿಯ ಮಾತಿನಂತೆಯೇ ಇದೆ," ಒರಟಾದ ಧ್ವನಿಯಲ್ಲಿ ಯಾರೋ ಕೂಗಿದರು. ನಂತರ ಒಬ್ಬ ಡ್ಯೂಮಾ ಪ್ರತಿನಿಧಿ ತಟಸ್ಥವಾಗಿರಬೇಕೆಂದು ವಾದಿಸಿದ. ಜನರಿಗೆ ಅವನು ತಮ್ಮಲ್ಲಿ ಒಬ್ಬನೆಂದು ಅನ್ನಿಸಲೇ ಇಲ್ಲ. ವಿಷಯಗಳನ್ನು ಅರ್ಥಮಾಡಿಕೊಳ್ಳಲು, ನಿರ್ಣಯ ತೆಗೆದುಕೊಳ್ಳಲು, ಅಷ್ಟೊಂದು ಕಷ್ಟಪಡುತ್ತಿದ್ದ ಇನ್ನೊಂದು ಜನಸಮುದಾಯವನ್ನು ನಾನು ನೋಡಿಲ್ಲ. ಪ್ರತಿಯೊಬ್ಬ ಭಾಷಣಕಾರರನ್ನೂ ಅವರು ಅಲ್ಲಾಡದೆ ಶಿಲಾಪ್ರತಿಮೆಗಳಂತೆ ನಿಂತು ಕೇಳಿಸಿಕೊಳ್ಳುತ್ತಿದ್ದರು. ಗಂಟಿಕ್ಕಿದ ಹುಬ್ಬು, ಬೆವರಿನಿಂದ ಒದ್ದೆಯಾದ ಹಣೆ. ದೈತ್ಯ ರೂಪದ ಮಾನವರು, ಕಣ್ಣುಗಳೋ ಮಕ್ಕಳಂತೆ, ಮುಖ ಪುರಾಣಯುಗದ ಸಮರ ಯೋಧನಂತೆ...

ಈಗೊಬ್ಬ ಬೋಲ್ಶೆವಿಕ್ ಕಟುವಾಗಿ ಮಾತನಾಡುತ್ತಿದ್ದ. ಮಾತಿನಲ್ಲಿ ದ್ವೇಷವಿತ್ತು. ಅವನು ಅವರಲ್ಲೊಬ್ಬನೇ ಅನಿಸಿದರೂ ಅವರೇನೂ ಅವನಿಗೆ ವಿಶೇಷ ಪ್ರಾಶಸ್ತ್ಯ ನೀಡಲಿಲ್ಲ. ಆ ಕ್ಷಣ ಅವರ ಮನಸ್ಸು ದಿನನಿತ್ಯದ ಸಾಮಾನ್ಯ ವಿಷಯಗಳಿಂದ ಮೇಲೇರಿ ರಷ್ಯಾ, ಸಮಾಜವಾದ, ಜಗತ್ತು ಇವುಗಳ ಬಗ್ಗೆ ಮತ್ತು ಕ್ರಾಂತಿಯ ಅಳಿವು-ಉಳಿವು ತಮ್ಮ ಮೇಲೆಯೇ ಅವಲಂಬಿಸಿದೆ ಎನ್ನುವಂತೆ ಅಸಾಮಾನ್ಯ ವಿಷಯಗಳಲ್ಲಿ ತಲ್ಲೀನವಾಗಿಬಿಟ್ಟಿತ್ತು.

ಕ್ರಾಂತಿಯಲ್ಲಿ ಉಳಿಯಬೇಕೋ ಹೊರಬರಬೇಕೋ ಎಂಬುದರ ಕುರಿತು ಒಬ್ಬರ ನಂತರ ಒಬ್ಬರು ಮಾತನಾಡುತ್ತಲೇ ಹೋದರು. ಸಭೆ ನಿಶ್ಶಬ್ದವಾಗಿ ಆಲಿಸುತ್ತಿತ್ತು. ಆಗಾಗ ಬೆಂಬಲದ ಅಥವಾ ವಿರೋಧದ ಭಾರಿ ಸದ್ದು. ಖಿಂಚುನೊವ್ ಮಾತನಾಡಲು ಮತ್ತೆ ಬಂದ. ಮಾತಿನ ತುಂಬ ಅನುನಯ, ಸಹಾನುಭೂತಿ, ಆದರೇನು ಅವನೆಷ್ಟೇ ಮಾತನಾಡಲಿ ಅವನು ಒಬ್ಬ ದೊಡ್ಡ ಮನುಷ್ಯ, ಅಧಿಕಾರಿ. ನಂತರ ಒಬ್ಬ ಕಾರ್ಮಿಕ ಮಾತನಾಡಿದ. ನಮ್ಮ ಹತ್ತಿರದಲ್ಲೇ ಒಂದು ಗುಂಪು ಅಧಿಕಾರಿಗಳು ನಿಂತು ಪದೇ ಪದೇ "ಖಿಂಚುನೊವ್, ಖಿಂಚುನೋವ್" ಎಂದು ಕಿರಿಚುತ್ತಲೇ ಇದ್ದರು. ಬೋಲ್ಶೆವಿಕರು ಮಾತನಾಡುವಾಗೆಲ್ಲ ಶಿಳ್ಳೆ ಹೊಡೆದು ಅವಮಾನಿಸುತ್ತಿದ್ದರು.

ಇದ್ದಕ್ಕಿದ್ದಂತೆ ವಾಹನದ ಚಾವಣಿಯ ಮೇಲಿದ್ದ ಅಧಿಕಾರಿಗಳ ಗುಂಪಿನಲ್ಲಿ ಗಲಾಟೆ ಆರಂಭವಾಯಿತು. ನೆರೆದಿದ್ದ ಸಭಿಕರಿಗೆ ಏನು ನಡೆಯುತ್ತಿದೆ ಎಂದು ತಿಳಿಯುವ

ಕುತೂಹಲ. ತನ್ನನ್ನು ತಡೆಯಲೆತ್ನಿಸಿದ ಅಧಿಕಾರಿಯಿಂದ ಬಿಡಿಸಿಕೊಂಡು ಸಾಮಾನ್ಯ ಸೈನಿಕನೊಬ್ಬ ಮುಂದೆ ಬಂದು ಹೇಳಿದ.

"ಕಾಮ್ರೇಡ್ಸ್, ನಿಮ್ಮನ್ನು ಉದ್ದೇಶಿಸಿ ಮಾತನಾಡಲು ಈಗ ಕಾಮ್ರೇಡ್ ಕ್ರೈಲೆಂಕೊ ಬಂದಿದ್ದಾರೆ." ಕೆಲವರು 'ಧಿಕ್ಕಾರ' ಹಾಕಿದರೆ ಬಹುತೇಕ ಜನ 'ಆತ ಮಾತನಾಡಲಿ ಬಿಡಿ' ಎಂದರು. ಸ್ವಾಗತಿಸುವ ಹರ್ಷೋದ್ಗಾರವೂ ಕೇಳಿಬಂತು. ಈ ಗಲಾಟೆಯಲ್ಲಿ ಸೈನ್ಯ ವ್ಯವಹಾರದ ಸಚಿವರು – ಪೀಪಲ್ಸ್ ಕಮಿಸಾರ್ – ವಾಹನದ ಪಕ್ಕಕ್ಕೆ ಬಂದು ನಿಂತರು. ಕೆಳಗಿನಿಂದ ಕೆಲವರು ಅವರನ್ನು ಮೇಲೆತ್ತಿದರೆ ಇನ್ನೂ ಕೆಲವರು ಚಾವಣಿಯಿಂದ ಕೈಚಾಚಿ ಮೇಲಕ್ಕೆ ಎಳೆದುಕೊಂಡರು. ಆತ ರೇಡಿಯೇಟರ್ ಮೇಲೆ ಬಂದು ಸೊಂಟದ ಮೇಲೆ ಕೈ ಇಟ್ಟು ಮುಗುಳ್ನಗುತ್ತಾ ನಿಂತರು. ಅಗಲವಾದ ಎತ್ತರವಲ್ಲದ ದೇಹ. ತಲೆಯ ಮೇಲೆ ಟೋಪಿ ಇಲ್ಲ. ಸಮವಸ್ತ್ರದ ಮೇಲೆ ಅಧಿಕಾರದ ಚಿಹ್ನೆಗಳಿಲ್ಲ.

ಇತ್ತ ಅಧಿಕಾರಿಗಳ ಗುಂಪು ನಮ್ಮ ಬಳಿಯೇ ನಿಂತು 'ಖಂಜುನೊವ್' ಎಂದು ಕೂಗುತ್ತಲೇ ಇದ್ದಿತು. ಇದ್ದಕ್ಕಿದ್ದಂತೆ ಸಭಾಂಗಣ ಅಲ್ಲಾಡುತ್ತಿರುವಂತೆ ಭಾಸವಾಯಿತು. ಒಂದಷ್ಟು ಜನ ಹಿಮಪಾತದಂತೆ ವೇಗವಾಗಿ ನಮ್ಮ ಕಡೆ ಬಂದು "ಯಾರು ಸಭೆಗೆ ಭಂಗ ತರುತ್ತಿರುವುದು? ಶಿಳ್ಳೆ ಹೊಡೆದದ್ದು ಯಾರು?" ಎಂದರು. ಆಗ ಚದುರಿ ಮಾಯವಾದ ಆ ಅಧಿಕಾರಿಗಳ ತಂಟೆಕೋರ ಗುಂಪು ಮತ್ತೆ ಕಾಣಿಸಿಕೊಳ್ಳಲೇ ಇಲ್ಲ. ಕ್ರೈಲೆಂಕೊ ಮಾತು ಆರಂಭವಾಯಿತು.

"ಸೈನಿಕ ಸಂಗಾತಿಗಳೇ, ಕ್ಷಮಿಸಿ, ನಾನು ಚೆನ್ನಾಗಿ ಮಾತನಾಡಲಾರೆ. ನಾಲ್ಕು ರಾತ್ರಿಗಳಿಂದ ನಾನು ನಿದ್ದೆಗೆಟ್ಟಿದ್ದೇನೆ...

"ನಾನೊಬ್ಬ ಸೈನಿಕ ಎಂಬುದನ್ನು ನಿಮಗೆ ಹೇಳುವ ಅಗತ್ಯವಿಲ್ಲ. ನನಗೆ ಶಾಂತಿ ಬೇಕು ಎಂಬುದನ್ನು ಹೇಳುವ ಅಗತ್ಯವೂ ಇಲ್ಲ. ಆದರೆ ನಾನು ಹೇಳಲೇಬೇಕಾದ ಒಂದು ಮಾತಿದೆ. ಅದೆಂದರೆ ಬೋಲ್ಶೆವಿಕ್ ಪಕ್ಷವು ನಿಮ್ಮಂಥ ಎಲ್ಲಾ ಧೀರ ಸಂಗಾತಿಗಳ ನೆರವಿನಿಂದ ರಕ್ತಪಿಪಾಸು ಬೂರ್ಶ್ವಾವರ್ಗವನ್ನು ಕಿತ್ತೆಸೆದು ರೈತ–ಕಾರ್ಮಿಕರ ಕ್ರಾಂತಿಯನ್ನು ಯಶಸ್ವಿಗೊಳಿಸಿದೆ ಮತ್ತು ಎಲ್ಲಾ ಜನತೆಗೆ ಶಾಂತಿಯ ಪ್ರಸ್ತಾಪವನ್ನು ಮುಂದಿಡಲಾಗುವುದು ಎಂದು ವಾಗ್ದಾನ ಮಾಡಿದ್ದೆವು. ಅದನ್ನು ನೆರವೇರಿಸಲಾಗಿದೆ – ಇಂದು ನೆರವೇರಿಸಲಾಗಿದೆ !" ಇದಕ್ಕೆ ಪ್ರಚಂಡ ಕರತಾಡನ ಕೇಳಿಬಂತು.

"ನಿಮಗೆ ತಟಸ್ಥವಾಗಿರಿ ಎಂದು ಕರೆ ನೀಡುತ್ತಿದ್ದಾರೆ. ನಾವು ತಟಸ್ಥರಾಗಿ ಉಳಿದಾಗ ಯಂಕರ್‌ಗಳು ಹಾಗೂ ಸಾವಿನ ಬೆಟಾಲಿಯನ್‌ಗಳು ನಮ್ಮನ್ನು ರಸ್ತೆಗಳಲ್ಲಿ ಗುಂಡಿಟ್ಟು ಕೊಲ್ಲುತ್ತಾರೆ. ಕೆರೆನ್‌ಸ್ಕಿ ರಣರಂಗದಿಂದ ಇತ್ತ ಬರುತ್ತಿದ್ದಾನೆ. ಅವನನ್ನು ರಾಜಧಾನಿಗೆ ಸ್ವಾಗತಿಸುತ್ತಾರೆ. ಡಾನ್ ನದಿಯ ಕಡೆಯಿಂದ ಕಲೆಡಿನ್ ಬರುತ್ತಿದ್ದಾನೆ. ಕೊರ್ನಿಲೊವ್ ಆಗಸ್ಟ್‌ನಲ್ಲಿ ಪ್ರಯತ್ನಿಸಿದ್ದ ದಂಗೆಯನ್ನು ಮತ್ತೆ ಪ್ರಯತ್ನಿಸುತ್ತಾನೆ. ಈಗ ಅಂತರ್ಯುದ್ಧ ನಿಲ್ಲಿಸಿ ಎನ್ನುವ ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಶನರಿಗಳು ಅಂತರ್ಯುದ್ಧದಿಂದಲೇ ಅಲ್ಲವೇ ಅಧಿಕಾರ ಉಳಿಸಿಕೊಂಡಿದ್ದು. ಆ ಅಂತರ್ಯುದ್ಧ ಜುಲೈ ತಿಂಗಳಿನಿಂದಲೂ ನಡೆಯುತ್ತಿದೆ ಮತ್ತು ಮೇಲೆ ಹೇಳಿದ ಜನ ಆ ಇಡೀ ಅವಧಿಯಲ್ಲಿ ಬೂರ್ಶ್ವಾವರ್ಗದ ಜೊತೆಯಲ್ಲೇ ಇದ್ದರು."

"ನೀವು ಈಗಾಗಲೇ ನಿರ್ಧಾರ ಮಾಡಿಬಿಟ್ಟಿದ್ದರೆ ನಾನು ನಿಮ್ಮನ್ನು ಹೇಗೆ ಒಪ್ಪಿಸಲಿ ?

ಒಂದು ಕಡೆ ಕೆರೆನ್‌ಸ್ಕಿ, ಕಲೆಡಿನ್, ಕೊರ್ನಿಲೊವ್, ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಶನರಿಗಳು, ಕ್ಯಾಡೆಟ್ ಪಕ್ಷದವರು, ಡ್ಯೂಮಾಗೆ ಸೇರಿದವರು ಇದ್ದಾರೆ. ಇನ್ನೊಂದು ಕಡೆ ರೈತರು, ಕಾರ್ಖಾನೆ ಕಾರ್ಮಿಕರು, ಸೈನಿಕರು, ಬಡ ರೈತ ಕಾರ್ಮಿಕರು ಇದ್ದಾರೆ. ಸರ್ಕಾರ ನಿಮ್ಮ ಕೈಯಲ್ಲಿದೆ. ನೀವೇ ಈಗ ಒಡೆಯರು. ಮಹಾನ್ ರಷ್ಯಾ ನಿಮಗೆ ಸೇರಿದೆ. ನೀವು ಅಧಿಕಾರವನ್ನು ಶತ್ರುಗಳಿಗೆ ವಾಪಸ್ ಕೊಡುತ್ತೀರೋ?"

ಆತ ತೀರಾ ಸುಸ್ತಾಗಿದ್ದ. ಆದರೆ ಕೇವಲ ಸಂಕಲ್ಪಶಕ್ತಿಯಿಂದ ಮಾತನಾಡುತ್ತಿದ್ದ. ಮಾತು ಮುಂದುವರೆದಂತೆಲ್ಲಾ ಆ ನಿತ್ರಾಣವಾದ ಧ್ವನಿಯ ಹಿಂದೆ ಇದ್ದ ಆಳವಾದ ಪ್ರಾಮಾಣಿಕ ಭಾವನೆಗಳು ಹೊರಬಂದವು. ಮುಗಿಯುವ ಹೊತ್ತಿಗೆ ಅವನು ತಟ್ಟಾಡುತ್ತಾ ಬೀಳುವಂತಾದ. ನೂರಾರು ಕೈಗಳು ಆತನನ್ನು ಇಳಿಸಿಕೊಂಡವು.

ಖಂಜುನೊವ್ ಮತ್ತೆ ಮಾತನಾಡಲು ಇಚ್ಛಿಸಿದ. ಆದರೆ ಜನ ಈಗ "ವೋಟಿಗೆ ಹಾಕಿ, ಮತದಾನ, ಮತದಾನ" ಎಂದು ಕೂಗಿದರು. ಕಡೆಗೆ ಅವನು ಮಣಿದು ನಿರ್ಣಯವನ್ನು ಮತಕ್ಕೆ ಹಾಕಿದ. ನಿರ್ಣಯದ ಪ್ರಕಾರ ಆರ್ಮರ್ಡ್ ಕಾರ್‌ಗಳ ದಳವು, ಎಂದರೆ ಬ್ರೊನೋವಿಕಿಯು, ಮಿಲಿಟರಿ ಕ್ರಾಂತಿಕಾರಿ ಸಮಿತಿಯಿಂದ ಹೊರಬಂದು ಪ್ರಸಕ್ತ ಅಂತರ್ಯುದ್ಧದಲ್ಲಿ ತಟಸ್ಥವಾಗಿರಬೇಕು. ನಿರ್ಣಯದ ಪರ ಇದ್ದವರು ಬಲಕ್ಕೆ ಹೋಗಲಿ. ವಿರೋಧಿಸುವವರು ಎಡಕ್ಕೆ ಹೋಗಲಿ ಎಂದಾಯಿತು. ಒಂದು ಕ್ಷಣ ಇಡಿಯ ಸಭಾಂಗಣದಲ್ಲಿ ಏನೋ ಹಿಂಜರಿಕೆ. ಏನೋ ಕಾತರ. ನಂತರ ಜನ ದೊಡ್ಡ ಗುಂಪುಗಳಲ್ಲಿ ಎಡವುತ್ತಾ ತಟ್ಟಾಡುತ್ತಾ ಚಲಿಸಲಾರಂಭಿಸಿದರು. ನೂರಾರು ಜನ ದೈತ್ಯ ಸೈನಿಕರು ಮಬ್ಬಾದ ಬೆಳಕಿನಲ್ಲಿ ಎಡಕ್ಕೆ ಚಲಿಸುತ್ತಲೇ ಹೋದರು. ನಾವಿದ್ದ ಕಡೆಯಲ್ಲಿ ಎಂದರೆ ಬಲಭಾಗದಲ್ಲಿ ಉಳಿದವರು ಐವತ್ತೇ ಮಂದಿ. ವಿಜಯದ ಘರ್ಜನೆ ಕಟ್ಟಡವನ್ನೇ ಅದುರುವಂತೆ ಮೊಳಗುತ್ತಿದ್ದಾಗ ಅವರೆಲ್ಲ ಹೊರಟುಹೋದರು. ಕೆಲವರು ಕಟ್ಟಡದಿಂದ ಹೊರಕ್ಕೆ, ಇನ್ನು ಕೆಲವರು ಕ್ರಾಂತಿಯಿಂದಲೇ ಹೊರಕ್ಕೆ...!

ಊಹಿಸಿಕೊಳ್ಳಿ, ಈ ಹೋರಾಟ ಪ್ರತಿ ನಗರದ ಪ್ರತಿ ಸೈನಿಕ ಶಿಬಿರಗಳಲ್ಲೂ ಪುನರಾವರ್ತನೆಗೊಂಡಿತು ಎಂಬುದನ್ನು. ಪ್ರತಿ ಜಿಲ್ಲೆಯಲ್ಲಿ, ಇಡೀ ರಣಭೂಮಿಯಲ್ಲಿ, ವಿಶಾಲ ರಷ್ಯಾದಾದ್ಯಂತ ನಿದ್ದೆಗೆಟ್ಟ ಕ್ರೈಲೆಂಕೊನಂಥವರು ವಾದಿಸುತ್ತ, ಬೆದರಿಸುತ್ತ, ಮನವಿ ಮಾಡಿಕೊಳ್ಳುತ್ತಾ ಹೋದರು. ಮತ್ತೆ ಊಹಿಸಿಕೊಳ್ಳಿ, ಈ ದೃಶ್ಯವು ಪ್ರತಿ ಕೈಗಾರಿಕೆಯಲ್ಲಿ, ಪ್ರತಿಯೊಂದು ಕಾರ್ಮಿಕ ಸಂಘದಲ್ಲಿ, ಹಳ್ಳಿಗಳಲ್ಲಿ, ಯುದ್ಧದ ಹಡಗುಗಳ ಮೇಲೆ ಇದೇ ರೀತಿ ಮತ್ತೆ ಮತ್ತೆ ಮರುಕಳಿಸಿತು. ಲಕ್ಷಾಂತರ ರಷ್ಯನ್ನರು, ರೈತರು, ಕಾರ್ಮಿಕರು, ಸೈನಿಕರು ಭಾಷಣಕಾರರನ್ನು ದಿಟ್ಟಿಸಿ ನೋಡುತ್ತಾ ನಿಂತರು – ಅರ್ಥ ಮಾಡಿಕೊಳ್ಳಲು ಕಷ್ಟಪಟ್ಟು ತೀರ್ಮಾನ ತೆಗೆದುಕೊಳ್ಳಲು. ಗಾಢವಾಗಿ ಚಿಂತಿಸುತ್ತಾ ನಿಶ್ಚಯಿಸಲು, ಮತ್ತೆ ಕಡೆಗೂ ಸರ್ವಾನುಮತದಿಂದ ತೀರ್ಮಾನಿಸಲು! ರಷ್ಯಾದ ಕ್ರಾಂತಿ ನಡೆದದ್ದು ಹೀಗೆ... ಇತ್ತ ಸ್ಮೋಲ್ನಿಯ ಭವನದಲ್ಲಿ 'ಜನತೆಯ ಕಮಿಸಾರ್‌ಗಳ ಮಂಡಳಿ'ಯು ಸುಮ್ಮನೆ ಕೂತಿರಲಿಲ್ಲ. ಆಗಲೇ ಮೊದಲನೇ ಡಿಕ್ರಿ ಮುದ್ರಿತವಾಗಿ ರಷ್ಯಾದಾದ್ಯಂತ ಹಂಚಲ್ಪಡುತ್ತಿತ್ತು.

"ಕಾರ್ಮಿಕರ, ಸೈನಿಕರ ಸೋವಿಯತ್‌ಗಳ ಪ್ರತಿನಿಧಿಗಳು ಹಾಗೂ ರೈತರ ಪ್ರತಿನಿಧಿಗಳು ಇದ್ದಂಥ ಅಖಿಲ ರಷ್ಯಾ ಮಹಾಧಿವೇಶನವು ಆಯ್ಕೆ ಮಾಡಿದ ರಷ್ಯನ್ ಗಣರಾಜ್ಯದ ಸರ್ಕಾರವು ಈ ಕೆಳಗಿನ ಡಿಕ್ರಿಯನ್ನು ಬಿಡುಗಡೆ ಮಾಡಿದೆ :

1. ನವೆಂಬರ್ 12ರಂದು ಸಾಂವಿಧಾನಿಕ ಶಾಸನಸಭೆಗೆ ಚುನಾವಣೆಗಳು ನಡೆಯಲಿವೆ.
2. ಅದೇ ದಿನಾಂಕಕ್ಕೆ ಸರಿಹೊಂದುವಂತೆ ಎಲ್ಲಾ ಸ್ಥಳೀಯ ಸ್ವಯಂ ಆಡಳಿತ ಘಟಕ ಗಳಲ್ಲಿ ರೈತ, ಕಾರ್ಮಿಕ, ಸೈನಿಕ ಪ್ರತಿನಿಧಿಗಳು ಸೋವಿಯತ್‌ಗಳಲ್ಲಿ, ರಣಾಂಗಣದಲ್ಲಿನ ಸೈನಿಕ ಸಂಘಟನೆಗಳಲ್ಲಿ ಮುಕ್ತ ಹಾಗೂ ನಿಯತವಾದ ಚುನಾವಣೆಗಳನ್ನು ನಡೆಸಲು ಆಯಾ ಚುನಾವಣಾ ಆಯೋಗಗಳು ಸಿದ್ಧತೆ ಮಾಡಿಕೊಳ್ಳತಕ್ಕದ್ದು.

**ರಷ್ಯನ್ ಗಣರಾಜ್ಯದ ಸರ್ಕಾರದ ಹೆಸರಿನಲ್ಲಿ**
**ಜನತೆಯ ಕಮಿಸಾರ್‌ಗಳ ಮಂಡಳಿಯ ಅಧ್ಯಕ್ಷರು**
**ವ್ಲದಿಮೀರ್ ಉಲ್ಯಾನೋವ್ – ಲೆನಿನ್**

ಇನ್ನೊಂದು ಕಡೆ ಮುನಿಸಿಪಲ್ ಡ್ಯೂಮಾದಲ್ಲಿ ಆರ್ಭಟ ಮುಂದುವರೆದಿತ್ತು. ಅವರಲ್ಲಿ ಒಬ್ಬನಂತೂ ಗಣರಾಜ್ಯ ಮಂಡಳಿಯು ವಿಸರ್ಜನೆಯಾಗೇ ಇಲ್ಲವೆಂದೂ ತಮಗೆ ಹೊಸ ಕಟ್ಟಡ ಸಿಕ್ಕಿದೊಡನೆಯೇ ಕೆಲಸ ಮುಂದುವರೆಯುವುದೆಂದೂ ಹೇಳಿಕೊಳ್ಳುತ್ತಿದ್ದ. ಏತನ್ಮಧ್ಯೆ ಡ್ಯೂಮಾದ ಹಿರಿಯರ ಮಂಡಳಿಯು ಸಾರಾಸಗಟಾಗಿ ವಿಮೋಚನಾ ಸಮಿತಿಯನ್ನು ಸೇರಲು ನಿರ್ಧರಿಸಿತ್ತು. ಇತಿಹಾಸದಲ್ಲಿ ರಷ್ಯನ್ ಗಣರಾಜ್ಯ ಮಂಡಳಿಯ ಹೆಸರು ಮತ್ತೆ ಎಲ್ಲೂ ಕೇಳಿಬರುವುದಿಲ್ಲ !

ನಂತರ ಸಂಪ್ರದಾಯವೋ ಎಂಬಂತೆ ರೈಲ್ವೆ ಕಾರ್ಮಿಕರ ಸಂಘ, ಅಂಚೆ ಮತ್ತು ತಂತಿ ಕಾರ್ಮಿಕರ ಸಂಘ, ಇತ್ಯಾದಿಗಳು ಪ್ರಾಯಶಃ ನೂರನೆಯ ಬಾರಿ ತಾವು ಬೋಲ್ಶೆವಿಕರೊಂದಿಗೆ ಕೆಲಸ ಮಾಡಲು ಸಿದ್ಧವಿಲ್ಲ ಎಂದು ಘೋಷಿಸಿದರು. ಒಬ್ಬ ಯಂಕರ್ ಹುಡುಗ ಚಳಿಗಾಲದ ಅರಮನೆಯಲ್ಲಿ ತಾನು ಎಂಥ ಧೀರ ಸಾಹಸಗಳನ್ನು ಮಾಡಿದೆ ಮತ್ತು ರೆಡ್‌ಗಾರ್ಡ್‌ಗಳು ಎಷ್ಟು ಹೇಯವಾಗಿ ನಡೆದುಕೊಂಡರು ಎಂದು ರೆಕ್ಕೆಪುಕ್ಕ ಸೇರಿಸಿ ಕತೆ ಹೇಳಿದ. ಇನ್ನೊಬ್ಬರು ಚಳಿಗಾಲದ ಅರಮನೆಯಲ್ಲಿ ಐದುನೂರು ಮಿಲಿಯನ್ ರೂಬಲ್‌ಗಳಷ್ಟು ಬೆಲೆಯ ಅಪರೂಪದ ವಸ್ತುಗಳು ನಾಶವಾಗಿವೆ ಎಂದು ಒಂದು ಪಟ್ಟಿಯನ್ನೇ ಓದಿದರು. ಅದೆಲ್ಲಾ ಸೋಷಲಿಸ್ಟ್ ರೆವಲ್ಯೂಶನರಿಗಳ ಪತ್ರಿಕೆಯಲ್ಲಿ ಪ್ರಕಟವಾದಂಥದ್ದು. ಅಲ್ಲಿ ಸೇರಿದ್ದವರೆಲ್ಲಾ ಇದನ್ನು ಆಸೆಪಟ್ಟು ನಂಬುವಂಥವರೇ.

ಮಧ್ಯೆ ಮಧ್ಯೆ ವಾರ್ತಾವಾಹಕರು ಬಂದು ವರದಿ ಒಪ್ಪಿಸುತ್ತಿದ್ದರು. ನಾಲ್ಕು ಜನ ಸಮಾಜವಾದಿ ಸಚಿವರನ್ನೂ ಬಂಧನದಿಂದ ಬಿಡುಗಡೆ ಮಾಡಲಾಗಿದೆ. ಕ್ರೈಲೆಂಕೊ ಪೀಟರ್ – ಪಾಲ್ ಕೋಟೆಗೆ ಹೋಗಿದ್ದನಂತೆ. ನೌಕಾಸೇನೆಯ ಕಛೇರಿಯಲ್ಲಿ ನೌಕರರು ಯಾರೂ ಇಲ್ಲ, ಎಲ್ಲರೂ ಜಾಗ ಖಾಲಿ ಮಾಡಿದ್ದಾರೆ. ಇಂಥ ಸಮಯದಲ್ಲಿ ತಾವು ರಷ್ಯಾದ ಹಿತದ ದೃಷ್ಟಿಯಿಂದ ಕೂಡಲೇ ಸಚಿವ ಸಂಪುಟದ ನೇತೃತ್ವದಲ್ಲಿ ಇಲಾಖೆಯ ಜವಾಬ್ದಾರಿ ತೆಗೆದುಕೊಳ್ಳಿ ಎಂದು ಹಳೆಯ ಅಡ್ಮಿರಲ್ ವರ್ದೆರೆವ್‌ಸ್ಕಿಯನ್ನು ಕೇಳಿಕೊಂಡನಂತೆ. ಆತ ಒಪ್ಪಿದ್ದಾನಂತೆ... ಕೆರೆನ್‌ಸ್ಕಿ ಗ್ಯಾಟ್‌ಚಿನ್ ಊರಿನಿಂದ ಉತ್ತರಕ್ಕೆ ದಂಡೆತ್ತಿ ಬರುತ್ತಿದ್ದಾನಂತೆ. ಬೋಲ್ಶೆವಿಕರ ರಕ್ಷಣಾ ದಳಗಳೆಲ್ಲಾ ಒಂದಾದಮೇಲೆ ಒಂದು ಕುಸಿದುಹೋಗುತ್ತಿವೆಯಂತೆ. ಸ್ಮೋಲ್ನಿಯಲ್ಲಿನ ಕ್ರಾಂತಿಕಾರಿ ಸರ್ಕಾರವು ನಗರ ಡ್ಯೂಮಾಗಳಿಗೆ ಹೆಚ್ಚಿನ ಅಧಿಕಾರ ನೀಡಿ ಆಹಾರದ ಸರಬರಾಜನ್ನು ನಿಯಂತ್ರಿಸಲು ಹೇಳಿದೆಯಂತೆ –ಇತ್ಯಾದಿ ಸೇರಿದ್ದವರ ಆತ್ಮವಿಶ್ವಾಸವನ್ನು ಹೇಗಾದರೂ ಮಾಡಿ ಹೆಚ್ಚಿಸಿ, ಅವರನ್ನು ಜೊತೆಯಲ್ಲಿ ಉಳಿಸಿಕೊಳ್ಳಲು ಹೇಳುವ ಕತೆಗಳು !

ಕಡೆಯ ಸುದ್ದಿಯಂತೂ ದುರಹಂಕಾರದ ಪರಮಾವಧಿಯಲ್ಲವೇ, ಎನಿಸಿ ಸೇರಿದವರಲ್ಲಿ ಬಹಳ ಆಕ್ರೋಶ ಕಂಡುಬಂತು. ಈ ಲೆನಿನ್ – ಅಧಿಕಾರವನ್ನು ಅನ್ಯಾಯಯುತವಾಗಿ ಕಬಳಿಸಿರುವವನು, ಸರ್ವಾಧಿಕಾರಿ, ಈತ ಸ್ವತಂತ್ರವೂ, ಸ್ವಾಯತ್ತವೂ ಆದ ನಗರ ಸರ್ಕಾರದ ಅಧಿಕಾರದ ಮಿತಿಗಳನ್ನು ನಿಗದಿಪಡಿಸಲು ಹೊರಡುವುದೇ? ಈತನ ಕಮಿಸಾರ್‌ಗಳು ಈಗಾಗಲೇ ಅನೇಕ ಮುನಿಸಿಪಲ್ ಕಾರ್ಯಗಳಿಗೆ ತಡೆ ಒಡ್ಡಿದ್ದಾರೆ. ಮಧ್ಯಪ್ರವೇಶ ಮಾಡಿದ್ದಾರೆ ! ಹೀಗೆ ಅವರು ಕೋಪವನ್ನು ಸೃಷ್ಟಿಮಾಡಿಕೊಳ್ಳುತ್ತಿದ್ದರು.

ದೀದೊನೆಂಕೊ ಎಂಬ ಸದಸ್ಯ ರಕ್ಷಣಾದಳಗಳು ಎತ್ತಕಡೆ ಸೇರಬೇಕೆಂದು ತಿಳಿಯದೆ ಡೋಲಾಯಮಾನ ಪರಿಸ್ಥಿತಿಯಲ್ಲಿವೆ ಎಂದು ನಾಟಕೀಯವಾಗಿ ಘೋಷಿಸಿದ. ಸಾಲದೆಂಬಂತೆ ಒಂದು ಸೈನಿಕದಳ ಸೋಷಲಿಸ್ಟರ ನಾಯಕತ್ವವನ್ನು ಒಪ್ಪಿಕೊಂಡಿದೆಯೆಂದೂ, ನೇವಾ ನದಿಯ ಮೇಲಿನ ಟಾರ್ಪೆಡೊ ದೋಣಿಗಳು ಸಹ ಏನು ಮಾಡುವುದೆಂದು ತಿಳಿಯದೆ ಒದ್ದಾಡುತ್ತಿವೆ ಎಂದೂ ವರದಿ ಮಾಡಿದ. ಒಟ್ಟಿನಲ್ಲಿ ಬೋಲ್ಶೆವಿಕ್ ವಿರೋಧಿಗಳಿಗೆ ಒಳ್ಳೆಯ ಕಾಲ ಬರಲಿದೆ ಎಂಬ ಆಶಾವಾದವನ್ನು ಹುಟ್ಟಿಸುವ ಪ್ರಯತ್ನ ಅದು.

ಈಗ ವೃದ್ಧ ಮೇಯರ್‌ನ ಸರದಿ. "ಕಾಮ್ರೇಡ್‌ರೇ, ನಾಗರಿಕರೇ, ಈಗ ತಾನೆ ಬಂದಿರುವ ಸುದ್ದಿಯ ಪ್ರಕಾರ ಪೀಟರ್ – ಪಾಲ್ ಕೋಟೆಯಲ್ಲಿರುವ ಬಂದಿಗಳೆಲ್ಲರ ಜೀವಕ್ಕೆ ಅಪಾಯ ಬಂದಿದೆ. ಹದಿನಾಲ್ಕು ಜನ ಯಂಕರ್ ತರುಣರಿಗೆ ಬೋಲ್ಶೆವಿಕರು ಚಿತ್ರಹಿಂಸೆ ನೀಡಿದ್ದಾರೆ. ಅವರಲ್ಲಿ ಒಬ್ಬನಿಗೆ ಹುಚ್ಚು ಹಿಡಿದಿದೆ. ನಮ್ಮ ಸಚಿವರನ್ನೆಲ್ಲಾ ಅವರು ಸಾರ್ವಜನಿಕವಾಗಿ ನೇಣಿಗೆ ಹಾಕುತ್ತಾರಂತೆ" ಎಂದು ಅವನು ಬೊಬ್ಬಿಟ್ಟ. ಸಭಿಕರು ಸಿಟ್ಟಿನಿಂದ, ಭೀತಿಯಿಂದ ಕೂಗಾಡಲಾರಂಭಿಸಿದರು.

ಆಗ ದೃಢವಾದ ಆದರೆ ಪುಟ್ಟ ದೇಹದ ಮಹಿಳೆಯೊಬ್ಬರು ಮಾತನಾಡುವ ಹಕ್ಕಿಗೆ ಒತ್ತಾಯಪಡಿಸಿ ಮುಂದೆ ಬಂದರು. ಆಕೆ ವೆರಾ ಸ್ಲುತ್‌ಸ್ಕಯಾ. ಡ್ಯೂಮಾದಲ್ಲಿನ ಹಿರಿಯ ಬೋಲ್ಶೆವಿಕ್ ಸದಸ್ಯೆ. ಅವರು ಗಟ್ಟಿಯಾಗಿ ತಮ್ಮ ಕಂಚಿನ ಕಂಠದಲ್ಲಿ ಅಬ್ಬರಿಸಿದರು : "ಇದು ಸುಳ್ಳು ಮತ್ತು ಪ್ರಚೋದನೆ." ಕೂಡಲೇ ಬೈಗುಳದ ಪ್ರವಾಹವೇ ತೇಲಿಬಂತು. ಆಕೆ ಅದಕ್ಕೆ ತಲೆಕೆಡಿಸಿಕೊಳ್ಳಲಿಲ್ಲ. "ಮರಣದಂಡನೆಯನ್ನೇ ರದ್ದು ಮಾಡಿರುವ ರೈತ ಕಾರ್ಮಿಕರ ಸರ್ಕಾರವು ಇಂಥ ಹೇಯಕೃತ್ಯಗಳಿಗೆ ಆಸ್ಪದ ನೀಡುವುದಿಲ್ಲ. ಈ ಆಪಾದನೆಗಳಲ್ಲಿ ಏನಾದರೂ ಸತ್ಯವಿದೆಯೇ ಎಂಬುದು ಮೊದಲು ತೀರ್ಮಾನವಾಗಬೇಕು. ವಿಚಾರಣೆಯಾಗಲಿ ಎಂಬುದೇ ನಮ್ಮ ಬೇಡಿಕೆ. ಅದರಲ್ಲಿ ಸತ್ಯವಿದ್ದರೆ ಸರ್ಕಾರವು ಕ್ಷಿಪ್ರ ಕ್ರಮಗಳನ್ನು ಕೈಗೊಳ್ಳುತ್ತದೆ."

ಕೂಡಲೇ ಮೇಯರ್‌ನ ಜೊತೆಯಲ್ಲಿ ಎಲ್ಲಾ ಪಕ್ಷಗಳ ಸದಸ್ಯರಿರುವ ನಿಯೋಗವೊಂದನ್ನು ಪೀಟರ್–ಪಾಲ್ ಕೋಟೆಗೆ ಕಳಿಸಲಾಯಿತು. ನಾವೂ ಅವರೊಂದಿಗೆ ಹೊರಟೆವು. ರಾಜಧಾನಿ ಪ್ರವೇಶಿಸಿದಾಗ ರಕ್ತಪಾತ ಬೇಡ ಎಂದು ಕೆರೆನ್‌ಸ್ಕಿಗೆ ಮನವಿ ಮಾಡಿಕೊಳ್ಳಲು ಡ್ಯೂಮಾದವರು ಇನ್ನೊಂದು ನಿಯೋಗವನ್ನು ಸಿದ್ಧಮಾಡಿಕೊಳ್ಳುತ್ತಿದ್ದರು.

ಕೋಟೆಯ ದ್ವಾರದ ಬಳಿ ಇದ್ದ ರಕ್ಷಕ ದಳದವರನ್ನು ಹೇಗೊ ಏಮಾರಿಸಿ ನಾವು ಒಳಗೆ ಹೋದಾಗ ಸುಮಾರು ಮಧ್ಯರಾತ್ರಿ. ಮಬ್ಬು ಬೆಳಕಿನಲ್ಲಿ ಜ಼ಾರ್ ಚಕ್ರವರ್ತಿಯ ವಂಶದವರ ಗೋರಿಗಳು ಕಾಣುತ್ತಿದ್ದವು. ಸಾಮಾನ್ಯವಾಗಿ ಅಲ್ಲೇ ಗೋಪುರಗಳ, ಬುರುಜುಗಳ ಕೆಳಗೆ 'ದೇವರು ಜ಼ಾರ್ ದೊರೆಯನ್ನ ರಕ್ಷಿಸಲಿ' ಎಂಬ ಹಾಡನ್ನು ಬ್ಯಾಂಡ್‌ಸೆಟ್‌ನವರು ಬಾರಿಸುತ್ತಿದ್ದದ್ದು. ಇಡೀ ಸ್ಥಳ ನಿರ್ಜನವಾಗಿತ್ತು.

ಎಡಭಾಗದಲ್ಲಿ ಕಾಣುತ್ತಿದ್ದದ್ದೇ ಟ್ರುಬೆಟ್ಸ್‌ಕೊಯಿ ಕೋಟೆ ಮತ್ತು ಅದರೊಳಗಿನ ಜೈಲು. ಅದು ನಿಜಕ್ಕೂ ಜೀವಂತವಾಗಿರುವವರನ್ನೇ ಹೂಳುವಂಥ ಗೋರಿ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಷ್ಟೋ ಜನ ಹುತಾತ್ಮರು ಅಲ್ಲಿ ತಮ್ಮ ಜೀವವನ್ನು, ಬುದ್ಧಿ ಸ್ಥಿಮಿತವನ್ನು, ಕಳೆದುಕೊಂಡಿದ್ದರು. ಅದೆಲ್ಲಾ ಝಾರ್‌ನ ಕಾಲದಲ್ಲಿ. ನಂತರ ಹಂಗಾಮಿ ಸರ್ಕಾರ ಅಧಿಕಾರಕ್ಕೆ ಬಂದಾಗ ಝಾರ್‌ನ ಮಂತ್ರಿಗಳನ್ನು ಅಲ್ಲಿ ಬಂಧಿಸಿಡಲಾಗಿತ್ತು. ಈಗ ಬೋಲ್ಶೆವಿಕರು ಹಂಗಾಮಿ ಸರ್ಕಾರದ ಸಚಿವರನ್ನು ಅಲ್ಲಿ ಕೂಡಿಹಾಕಿದ್ದರು.

**ಜಾನ್ ರೀಡ್‌ರಿಗೆ ಕೊಟ್ಟಿದ್ದ ಪಾಸ್**

**ಸೋವಿಯತ್ ಸರ್ಕಾರದ ಜೈಲು ಇಲಾಖೆಯಿಂದ ಪೆತ್ರೋಗ್ರಾಡ್ ಹಾಗೂ ಕ್ರಾನ್‌ಸ್ಟಾಟ್‌ನಲ್ಲಿರುವ ಎಲ್ಲಾ ಜೈಲುಗಳಿಗೂ ಭೇಟಿ ನೀಡಲು ಕೊಟ್ಟಿರುವ ಅನುಮತಿ ಪತ್ರ (ಅನುವಾದ)**

**ಕಮಿಸಾರ್** — 6 ನವೆಂಬರ್, 1917

**ಜೈಲುಗಳ ಮುಖ್ಯಬ್ಯೂರೋ** — ಪೆತ್ರೋಗ್ರಾಡ್, ಸ್ಮೋಲ್ನಿ ಇನ್‌ಸ್ಟಿಟ್ಯೂಟ್

ನಂ 213 — **ಕೋಣೆ ಸಂಖ್ಯೆ 216**

**ಪಾಸ್**

ಜೈಲಿನಲ್ಲಿರುವ ಬಂಧಿಗಳ ಪರಿಸ್ಥಿತಿಯನ್ನು ತನಿಖೆಮಾಡಲು, ವೃತ್ತಪತ್ರಿಕೆಗಳಲ್ಲಿ ಬರುತ್ತಿರುವ ಸುಳ್ಳಿನ ಪ್ರವಾಹವನ್ನು ತಡೆಗಟ್ಟಿ ಸಾರ್ವಜನಿಕರಿಗೆ ಸೂಕ್ತ ಮಾಹಿತಿ ನೀಡಲು, ಇದನ್ನು ಜಾನ್ ರೀಡ್‌ರಿಗೆ ನೀಡಲಾಗಿದೆ. ಅವರು ಅಮೆರಿಕಾದ ಸಮಾಜವಾದಿ ಪತ್ರಿಕೋದ್ಯಮಕ್ಕೆ ಸೇರಿದವರು. ಅವರು ಪೆತ್ರೋಗ್ರಾಡ್ ಹಾಗೂ ಕ್ರಾನ್‌ಸ್ಟಾಟ್‌ಗಳ ಯಾವುದೇ ಬಂಧಿಸಿಡುವ ಜಾಗಗಳಿಗೆ ಭೇಟಿ ನೀಡಬಹುದು.

ಮುಖ್ಯ ಕಮಿಸಾರ್

ಕಾರ್ಯದರ್ಶಿ

ಒಬ್ಬ ಸ್ನೇಹಮಯಿ ನಾವಿಕ ಅಲ್ಲಿನ ಕಮಾಂಡೆಂಟ್‌ನ ಕಛೇರಿಗೆ ಕರೆದೊಯ್ದ. ಹೊಗೆಯಿಂದ ತುಂಬಿದ ಕೋಣೆಯಲ್ಲಿ ರೆಡ್‌ಗಾರ್ಡ್‌ಗಳು, ಸೈನಿಕರು, ಕೂತಿದ್ದರು. ಟೀ ಕುದಿಸುವ ಸಮೋವರ್‌ನ ಸದ್ದು ಆಹ್ಲಾದಕರವಾಗಿತ್ತು. ಅವರು ಖುಷಿಯಿಂದ ನಮ್ಮನ್ನು ಸ್ವಾಗತಿಸಿ ಟೀ ಕೊಟ್ಟರು.

ಕಮಾಂಡೆಂಟ್ ಅಲ್ಲಿರಲಿಲ್ಲ. ಸೆರೆಹಿಡಿದ ಯಂಕರ್‌ಗಳನ್ನು ಕೊಲ್ಲುತ್ತಿರುವುದನ್ನು ತನಿಖೆ ಮಾಡಲು ಡ್ಯೂಮಾ ಕಳಿಸಿದ ನಿಯೋಗದೊಂದಿಗೆ ಆತ ಹೋಗಿದ್ದ. ಇವೆಲ್ಲಾ ಅವರುಗಳಿಗೆ ವಿನೋದವೆನಿಸುತ್ತಿತ್ತು. ಕೋಣೆಯಲ್ಲಿ ಒಬ್ಬ ಆತಂಕದಲ್ಲಿದ್ದ, ಒಳ್ಳೆಯ ಬಟ್ಟೆ ಧರಿಸಿದ್ದಾತ ಮೀಸೆಯ ತುದಿಗಳನ್ನು ಕಡಿಯುತ್ತಾ ಕೂತಿದ್ದ. ಬೋಳುತಲೆಯ ಸಣ್ಣ ಆಕಾರದ ಅವನು ಮೂಲೆಯಲ್ಲಿ ಸಿಕ್ಕಿಹಾಕಿಕೊಂಡ ಇಲಿಯಂತಿದ್ದ. ಆತ ಒಬ್ಬ ಸಚಿವ ಎಂದು ಯಾರೋ ಪಿಸುಗುಟ್ಟಿದರು. ಅಲ್ಲಿರುವವರು ಯಾವ ವೈರತ್ವವನ್ನು ತೋರಿಸದಿದ್ದರೂ ಅವನು ಮಾತ್ರ ಹೆದರಿದ್ದ.

ನಾನು ಅವನತ್ತ ಹೋಗಿ ಫ್ರೆಂಚ್ ಭಾಷೆಯಲ್ಲಿ ವಿಚಾರಿಸಿಕೊಂಡೆ. ಅವನು ವಿನಯದಿಂದ ವಂದಿಸುವಂತೆ ಬಾಗಿ, "ನಾನು ಕೌಂಟ್ ಟಾಲ್‌ಸ್ಟಾಯ್ ಅಂತ. ನಾನು ಸೇತುವೆ ಮೇಲೆ ಹೋಗ್ತಾ ಇರೋವಾಗ ಈ .... ಈ ಜನ ನನ್ನನ್ನು ಹಿಡ್ಕೊಂಬಂದಿದಾರೆ. ನಾನೇನೂ ಹಂಗಾಮಿ ಸರ್ಕಾರದ ಭಾಗ ಅಲ್ಲ" ಎಂದು ಹೇಳಿಕೊಂಡ

ನಾವಿಕನೊಬ್ಬ "ನಿರುಪದ್ರವಿ ಅನ್ನಿಸ್ತಾನೆ ಬಿಟ್ಬುಡು" ಎಂದ.

ಆದರೆ ಅವನನ್ನು ಹಿಡಿದುಕೊಂಡು ಬಂದಿದ್ದ ಸೈನಿಕ "ಕಮಾಂಡಂಟ್‌ನ ಕೇಳಬೇಕು" ಎಂದ.

"ಓಹೋ ಪ್ರತಿಯೊಂದಕ್ಕೂ ಕಮಾಂಡೆಂಟಾ?" ತಿರಸ್ಕಾರದಿಂದ ನಾವಿಕ "ನಾವು ಅಧಿಕಾರಿಗಳು ಹೇಳಿದ್ದನ್ನು ಮಾಡ್ಕೊಂಡು ಬಿದ್ದಿರೋದಿಕ್ಕಾ ಕ್ರಾಂತಿ ಮಾಡಿದ್ದು?" ಎಂದ.

ಇನ್ನೊಂದು ಕಡೆ ಪಾವ್‌ಲೋವ್‌ಸ್ಕಿ ರೆಜಿಮೆಂಟಿನ ಕಿರಿಯ ಅಧಿಕಾರಿಯೊಬ್ಬ ಸಶಸ್ತ್ರ ದಂಗೆ ಹೇಗೆ ಆರಂಭವಾಯಿತೆಂಬುದನ್ನು ವಿವರಿಸುತ್ತಿದ್ದ. "ಪ್ರೋಲ್ಕ್ ದಳದವರು 6ನೇ ತಾರೀಕು ರಾತ್ರಿ ಹಂಗಾಮಿ ಸರ್ಕಾರದ ಪರವಾಗಿದ್ದ ಜನರಲ್ ಸ್ಟಾಫ್ ಕಛೇರಿಯ ಬಳಿ ಕರ್ತವ್ಯ ನಿರ್ವಹಿಸುತ್ತಾ ಇದ್ವಿ, ನಾನು, ನನ್ನ ಕಾಮ್ರೇಡರು ರಕ್ಷಣಾ ದಳದಲ್ಲಿದ್ವಿ, ನನ್ನ ಸ್ನೇಹಿತರು ಕಿಟಕಿಗೆ ಪರದೆ ಹಾಕಿರ್ತಾರಲ್ಲಾ ಅದರ ಹಿಂದೆ ನಿಂತು ಅನೇಕ ವಿಷಯಗಳನ್ನು ಕೇಳಿಸಿಕೊಂಡರು. ರಾತ್ರೋರಾತ್ರಿ ಗ್ಯಾಟ್‌ಚಿನ್‌ನಿಂದ ಪೆತ್ರೋಗ್ರಾಡ್‌ಗೆ ಯಂಕರ್‌ಗಳನ್ನು ಕರಕೊಂಡು ಬರಬೇಕು ಅನ್ನೋದು ಒಂದು ಆಜ್ಞೆ, ಅದೇ ರೀತಿ ಕೊಸ್ಸಾಕರು ಬೆಳಗ್ಗೆ ಹೊರಟುಬರಲಿ ಅಂತ ಇನ್ನೊಂದು ಆಜ್ಞೆ, ಬೆಳಗಿನ ಜಾವದ ಒಳಗೆ ರಾಜಧಾನಿಯ ಎಲ್ಲಾ ಆಯಕಟ್ಟಿನ ಜಾಗಗಳನ್ನು ಹಿಡ್ಕೊಬೇಕು ಅನ್ನೋದೂ ಯೋಜನೆಯಲ್ಲಿತ್ತು. ಆದ್ರೆ ಸ್ಮೋಲ್ನಿಯಲ್ಲಿರೋ ಕ್ರಾಂತಿಕಾರಿ ಸರ್ಕಾರದೋರನ್ನ ಸುತ್ತುವರೀಬೇಕು ಅಂತ ಅವರು ತೀರ್ಮಾನಿಸಿದಾಗ ನಮ್ಮ ಸ್ನೇಹಿತರಿಗೆ ತಡಕೊಳ್ಳಕ್ಕೆ ಆಗಲಿಲ್ಲ. ಆದೇ ಸಮಯದಲ್ಲಿ ಕೋಣೆ ಒಳಗೆ ಬರೋರು ಹೋಗೋರು ತುಂಬಾ ಇದ್ರಂತೆ. ಪರಿಸ್ಥಿತಿ ತಪ್ಪಿಸ್ಕೊಂಡು ಹೊರಗೆ ಬರಕ್ಕೆ ಅನುಕೂಲಕರವಾಗಿತ್ತು. ನನ್ನ ಒಬ್ಬ ಗೆಳೆಯ ಇನ್ನೊಬ್ಬನ್ನ ಅಲ್ಲೇ ಇದ್ದು ಕೇಳಿಸ್ಕೊಳಕ್ಕೆ ಹೇಳಿ ಮೆತ್ತಗೆ ಹೊರಗೆ ಬಂದ.

"ನಂಗೆ ಅಷ್ಟೊತ್ತಿಗಾಗಲೇ ಸಂದೇಹ ಬಂದಿತ್ತು. ಯಾಕೆ ಅಂದ್ರೆ ತುಂಬ ಜನ ಸೈನ್ಯದ ಅಧಿಕಾರಿಗಳು ವಾಹನಗಳಲ್ಲಿ ಬಂದು ಸೇರ್ತಾ ಇದ್ರು, ಎಲ್ಲಾ ಸಚಿವರೂ ಬಂದಿದ್ರು, ಬೆಳಿಗ್ಗೆ ಎರಡೂವರೆ ಆಗ. ನಾನೂ ನನ್ನ ಗೆಳೆಯ ಹೋಗಿ ರೆಜಿಮೆಂಟ್‌ನ ದಳಪತಿಗೆ ಎಲ್ಲಾ ಹೇಳಿ ಏನು ಮಾಡೋದು ಅಂತ ಕೇಳಿದ್ವಿ."

"ಬರೋವ್ರನ್ನ ಹೋಗೋವ್ರನ್ನ ಹಿಡಿದುಹಾಕಿ, ಅಂದ್ರು ಅವರು. ಒಂದಷ್ಟು ಅಧಿಕಾರಿಗಳನ್ನ, ಸಚಿವರನ್ನ ಹಿಡಿದು ಸ್ಮೋಲ್ನಿಗೆ ಕಳಿಸಿದರೆ, ಅವರಿನ್ನೂ ಖೈದಿಗಳನ್ನು ಕೂಡಿ ಹಾಕಕ್ಕೆ ತಯಾರೇ ಇರಲಿಲ್ಲ. 'ಎಲ್ಲಾರನ್ನೂ ಬಿಟ್ಟಿಡಿ' ಅಂದರು. ಸರಿ ನಾವು ಆಗ ಸ್ಮೋಲ್ನಿಗೆ ಓಡಿಹೋಗಿ ಒಂದು ಘಂಟೆ ಎಲ್ಲಾ ವಿವರವಾಗಿ ಅರ್ಥ ಆಗೋ ಹಾಗೆ ಹೇಳಿದ್ವಿ, ಅವರಿಗೂ ಯುದ್ಧ ಶುರುವಾಗಿದೆ ಅಂತ ಗೊತ್ತಾಯ್ತು. ಅವತ್ತೇ ರಕ್ಷಣಾ ದಳ ಹೊರಗಡೆ ಬಂದು ಕಾರ್ಯಪ್ರವೃತ್ತವಾಯ್ತು."

ವ್ಯಾಸಿಲಿ ಜಸ್ಟ್ರೊವ್ ಅನ್ನೋ ಜಾಗದಿಂದ ಬಂದ ರೆಡ್‌ಗಾರ್ಡ್ ಒಬ್ಬ ಆ ಮಹಾನ್ ದಿನದಂದು ಸಶಸ್ತ್ರ ಬಂಡಾಯ ಶುರು ಆದದ್ದು ಹೇಗೆ ಅಂತ ವಿವರಿಸೋದಕ್ಕೆ ಶುರು

ಮಾಡಿದ. ನಗುತ್ತಾ ಹೇಳಿದ, "ನಮ್ಮ ಹತ್ರ ಮೆಶಿನ್‌ಗನ್‌ಗಳೇ ಇರಲಿಲ್ಲ. ಸ್ಮೋಲ್ನಿಯಿಂದ ನಮಗೆ ಏನೂ ಕೊಡಲಿಲ್ಲ. ಆಗ ನಮ್ಮ ಸಂಗಾತಿ ಒಬ್ಬನಿಗೆ ನೆನಪಿಗೆ ಬಂತು, ನಮ್ಮ ವಾರ್ಡ್ ಡ್ಯೂಮಾ ಕಛೇರೀಲಿ ಜರ್ಮನರಿಂದ ಕಸಿದುಕೊಂಡ ಒಂದು ಮೆಶಿನ್‌ಗನ್ ಇದೆ ಅಂತ. ಆಗ ನಾನು, ಆತ ಮತ್ತೆ ಇನ್ನೊಬ್ಬ ಸಂಗಾತಿ ಅಲ್ಲಿಗೆ ಹೋದ್ವಿ. ಅಲ್ಲಿ ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಶನರಿಗಳು ಕೂತ್ಕೊಂಡು ಸಭೆ ನಡೆಸ್ತಿದ್ರು. ನಾವು ಒಳಗೆ ಹೋದಾಗ ಅವರು ಮಾತು ನಿಲ್ಲಿಸಿ ನಮ್ಮನ್ನೇ ನೋಡುತ್ತಿದ್ದರು. ಅವರು ಹದಿನೈದು ಜನ, ನಾವು ಮೂರು ಜನ. ನಾವು ಕೋಣೇಲಿ ಈ ಮೂಲೆಯಿಂದ ಆ ಮೂಲೆಗೆ ಹೋದ್ವಿ, ಮೆಶಿನ್‌ಗನ್‌ನ ಬಿಚ್ಕೊಂಡ್ವಿ, ಅದನ್ನ ಹೆಗಲಿನ ಮೇಲೇರಿಸ್ಕೊಂಡಿದ್ದು ಹೊರಗೆ ಬಂದ್ವಿ. ಒಬ್ಬನೂ ಒಂದು ಮಾತು ಆಡಲಿಲ್ಲ!"

ನಾವಿಕನೊಬ್ಬ ಮೂರನೆಯವನಾಗಿ ಮಾತಿಗೆ ಸೇರಿಕೊಂಡ. "ಚಳಿಗಾಲದ ಅರಮನೆಯನ್ನು ಗೆದ್ದುಕೊಂಡಿದ್ದು ಹೇಗೆ ಅಂತ ಗೊತ್ತಾ ನಿಮಗೆ? ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ನೇವಾ ನದಿಯ ಹತ್ತಿರ ಯಾವ ಯಂಕರ್‌ಗಳೂ ಇಲ್ಲ ಅಂತ ನಮಗೆ ಗೊತ್ತಾಯ್ತು. ನಾವು ಬಾಗಿಲು ಮುರ್ಕೊಂಡು ಒಳಗೆ ಹೋದ್ವಿ. ಎಲ್ಲಾ ಮಹಡಿ ಮೆಟ್ಟಿಲುಗಳ ಮೇಲೂ ಸಣ್ಣ ಗುಂಪುಗಳಲ್ಲಿ ಅಥವಾ ಒಬ್ಬೊಬ್ರೆ ಮೇಲೆ ಹೋದ್ವಿ. ಆದರೆ ಮೇಲೆ ಹೋಗ್ತಿದ್ದ ಹಾಗೆ ಯಂಕರ್‌ಗಳು ನಮ್ಮ ಬಂದೂಕುಗಳನ್ನು ಕಸಿದುಕೊಂಡ್ರು. ಆದರೆ ಅವರು ತಾನೆ ಏನು ಮಾಡ್ತಾರೆ! ನಮ್ಮವರು ಬರ್ತಾನೆ ಇದ್ರು. ಕಡೆಗೆ ನಮ್ಮ ಸಂಖ್ಯೆ ತುಂಬ ಜಾಸ್ತಿ ಆದಾಗ ನಾವೇ ಮೇಲೆಬಿದ್ದು ಅವರ ಬಂದೂಕುಗಳನ್ನು ಕಸಿದುಕೊಂಡ್ವಿ."

ಅಷ್ಟು ಹೊತ್ತಿಗೆ ಅವರ ಕಮಾಂಡೆಂಟ್ ಒಳಗೆ ಬಂದ. ಅವನೊಬ್ಬ ತರುಣ ಖುಷಿಖುಷಿಯಾಗಿದ್ದ ಅಧಿಕಾರಿ. ಅವನ ಒಂದು ಕೈಗೆ ಪೆಟ್ಟು ಬಿದ್ದು ಪಟ್ಟಿಯೊಳಗೆ ಕೈಯನ್ನು ತೂಗುಬಿಡಲಾಗಿತ್ತು. ನಿದ್ದೆ ಇಲ್ಲವಾದ್ದರಿಂದ ಕಣ್ಣಿನ ಸುತ್ತಲೂ ಕಪ್ಪುವರ್ತುಲಗಳು ಮೂಡಿದ್ದವು. ಮೊಟ್ಟಮೊದಲಿಗೇ ಆತನ ಕಣ್ಣು ಬಿದ್ದದ್ದು ಬಂಧಿಯಾಗಿದ್ದ ಆ ಶ್ರೀಮಂತ, ಟಾಲ್‌ಸ್ಟಾಯ್ ಎಂಬ ವ್ಯಕ್ತಿಯ ಮೇಲೆ. ಗೋಳಾಡುತ್ತಾ ತಾನು ಮುಗ್ಧ ಎಂದು ಹೇಳಲು ಯತ್ನಿಸಿದ ಆತ.

ಅವನನ್ನು ಅರ್ಧದಲ್ಲೇ ತಡೆದು ಕಮಾಂಡೆಂಟ್ ಹೇಳಿದ, "ನೀನು ಶರಣಾಗಲು ಒಪ್ಪದಿದ್ದ ಸಮಿತಿಗೆ ಸೇರಿದವನು; ಬುಧವಾರ ಮಧ್ಯಾಹ್ನ ನಿನ್ನನ್ನು ಅವರ ಜೊತೆ ನೋಡಿದ್ದು ನನಗೆ ನೆನಪಿದೆ. ಆದರೆ ಸ್ವಾಮಿ, ನಮಗೆ ತಮ್ಮ ಅಗತ್ಯ ಇಲ್ಲ. ಕ್ಷಮಿಸಿ..." ಎನ್ನುತ್ತಾ ಬಾಗಿಲು ತೆರೆದು ಅವನು ಕೌಂಟ್ ಟಾಲ್‌ಸ್ಟಾಯ್‌ನನ್ನು ಕಳಿಸಿಕೊಟ್ಟ. ರೆಡ್‌ಗಾರ್ಡ್‌ಗಳು ಪ್ರತಿಭಟಿಸುವಂತೆ ಗೊಣಗಾಡುತ್ತಲೇ ಇದ್ದರು.

ನಂತರ ಅವನು ಇಬ್ಬರು ಸೈನಿಕರಿಗೆ ಗಮನ ಕೊಡಬೇಕಿತ್ತು. ಅವರು ಕೋಟೆಯ ರಕ್ಷಣಾದಳದ ಸಮಿತಿಗೆ ಚುನಾಯಿತರಾಗಿದ್ದವರು. ಅವರ ಪ್ರಶ್ನೆ ಏನೆಂದರೆ, ಖೈದಿಗಳಿಗೂ ರಕ್ಷಣಾದಳದ ಸದಸ್ಯರಿಗೂ ಒಂದೇ ರೀತಿಯ ಆಹಾರ ಕೊಡುತ್ತಿರುವುದು ಏಕೆ? ನಮ್ಮವರ ಹಸಿವನ್ನೇ ತಣಿಸಲು ಸಾಧ್ಯವಾಗುತ್ತಿಲ್ಲ. "ಹೀಗಿರುವಾಗ ಪ್ರತಿಕ್ರಾಂತಿಗೆ ಪ್ರಯತ್ನಿಸುತ್ತಿರುವವರನ್ನು ಅಷ್ಟು ಚೆನ್ನಾಗಿ ನೋಡಿಕೊಳ್ಳಬೇಕೆ?"

ಕಮಾಂಡೆಂಟ್ ನುಡಿದ "ಕಾಮ್ರೇಡ್ಸ್, ನಾವು ಕ್ರಾಂತಿಕಾರಿಗಳು. ದರೋಡೆಕೋರರಲ್ಲ." ಆಮೇಲೆ ಅವನು ನಮ್ಮತ್ತ ನೋಡಿದ. ನಾವು ನಮ್ಮ ಉದ್ದೇಶವನ್ನು ವಿವರಿಸಿದೆವು.

"ಯಂಕರ್‌ಗಳಿಗೆ ಚಿತ್ರಹಿಂಸೆ ನೀಡಲಾಗುತ್ತಿದೆ. ಸಚಿವರ ಪ್ರಾಣ ಗಂಡಾಂತರದಲ್ಲಿದೆ ಎಂಬಂಥ ವದಂತಿಗಳು ಹಬ್ಬುತ್ತಿವೆ. ನಾವು ಖೈದಿಗಳನ್ನು ನೋಡಬಹುದೇ? ಆಗ ನಾವು ಇಡೀ ಜಗತ್ತಿಗೆ ಇದು ಕೇವಲ ವದಂತಿ ಎಂದು ತಿಳಿಸಬಹುದು..."

ತರುಣ ಸೈನಿಕ ಅಸಮಾಧಾನದಿಂದ ಉತ್ತರಿಸಿದ : "ನಾನು ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಆ ಬಂಧಿತರಿಗೆ ಮತ್ತೆ ತೊಂದರೆ ಕೊಡಲು ಇಷ್ಟಪಡುವುದಿಲ್ಲ. ಈಗ ತಾನೆ ನಾನು ಅವರನ್ನು ಎಬ್ಬಿಸಲೇಬೇಕಾದ ಪರಿಸ್ಥಿತಿ ಬಂತು. ಡ್ಯೂಮಾ ನಿಯೋಗವನ್ನು ಅವರಲ್ಲಿಗೆ ಕರಕೊಂಡು ಹೋಗಿದ್ವಿ, ಅವರಂತೂ ನಾವು ಅವರನ್ನು ಕೊಲ್ಲೋಕೆ ಹೋಗಿದ್ವಿ ಅಂತ ಅಂದುಕೊಂಡು ಹೆದರಿಬಿಟ್ರು, ಪಾಪ... ಇರಲಿ, ಬಹುತೇಕ ಯಂಕರ್‌ಗಳನ್ನು ಆಗಲೇ ಹೊರಗೆ ಬಿಟ್ಟಿದ್ದೀವಿ. ಉಳಿದವರನ್ನ ನಾಳೆ ಕಳಿಸ್ತೀವಿ." ಅವನು ಥಟ್ಟನೆ ಇನ್ನೊಂದು ಕಡೆಗೆ ತಿರುಗಿಕೊಂಡ.

"ಆಯಿತು, ನಾವು ಡ್ಯೂಮಾ ನಿಯೋಗದೊಂದಿಗೆ ಮಾತನಾಡಬಹುದೇ?"

ಟೀ ಬಗ್ಗಿಸಿಕೊಳ್ಳುತ್ತಿದ್ದ ಕಮಾಂಡೆಂಟ್ ತುಂಬ ತಲೆ ಕೆಡಿಸಿಕೊಳ್ಳದೇ ಹೇಳಿದ,

"ಅವರಿನ್ನೂ ದಿವಾನಖಾನೆಯಲ್ಲಿದ್ದಾರೆ ಹೋಗಿ ನೋಡಿ."

ಅವರೆಲ್ಲಾ ನಿಜಕ್ಕೂ ಬಾಗಿಲ ಹೊರಗೆ ನಿಂತಿದ್ದರು. ಒಂದು ಎಣ್ಣೆದೀಪದ ಬೆಳಕಿನಲ್ಲಿ ಮೇಯರ್‌ನ ಸುತ್ತಲೂ ಗುಂಪುಗೂಡಿಕೊಂಡು ಉದ್ವೇಗದಿಂದ ಮಾತನಾಡುತ್ತಿದ್ದರು.

"ಸ್ವಾಮಿ ಮೇಯರ್‌ರವರೇ, ನಾವು ಅಮೆರಿಕಾದ ಪತ್ರಕರ್ತರು. ತಮ್ಮ ತನಿಖೆಯಲ್ಲಿ ಏನು ಕಂಡಿರಿ? ನಮಗೆ ಅಧಿಕೃತ ಮಾಹಿತಿ ನೀಡಬಹುದೇ?" ಎಂದು ನಾನು ಕೇಳಿದೆ. ಆತ ಬಹಳ ಮರ್ಯಾದಸ್ಥರ ಘನತೆಯೊಂದಿಗೆ ನಮ್ಮ ಕಡೆಗೆ ತಿರುಗಿ ನುಡಿದ "ವರದಿಯಲ್ಲಿ ಸತ್ಯಾಂಶವಿಲ್ಲ." ನಿಧಾನವಾಗಿ ಅವನು ಮಾತನಾಡುತ್ತಿದ್ದ. "ಸಚಿವರನ್ನು ಇಲ್ಲಿಗೆ ಕರೆದುಕೊಂಡು ಬರುವಾಗ ನಡೆದ ಒಂದೆರಡು ಘಟನೆಗಳನ್ನು ಬಿಟ್ಟರೆ ಅವರನ್ನು ಎಲ್ಲಾ ಗೌರವದೊಂದಿಗೇ ನಡೆಸಿಕೊಳ್ಳಲಾಗಿದೆ. ಇನ್ನು ಯಂಕರ್‌ಗಳ ಬಗ್ಗೆ ಹೇಳುವುದಾದರೆ, ಯಾರಿಗೂ ಒಂದು ಸಣ್ಣ ಗಾಯವೂ ಆಗಿಲ್ಲ..." ಅಲ್ಲಿಗೆ ಇದಕ್ಕೆ ಸಂಬಂಧಿಸಿದ ಪ್ರಚಾರದ ಸತ್ಯಾಸತ್ಯತೆ ಬಹಿರಂಗವಾಗಿತ್ತು.

ಮಧ್ಯರಾತ್ರಿಯ ನಂತರ ಆವರಿಸಿದ್ದ ಆ ಶೂನ್ಯವಾದ ಕತ್ತಲಿನಲ್ಲಿ ನೆವ್‌ಸ್ಕಿ ರಾಜಮಾರ್ಗದಲ್ಲಿ ಕೊನೆಯೇ ಇಲ್ಲವೇನೋ ಎನಿಸುವಂತಿದ್ದ ಸೈನಿಕರ ಸಾಲು ಮೌನವಾಗಿ ಕೆರೆನ್‌ಸ್ಕಿಯೊಂದಿಗಿನ ಯುದ್ಧಕ್ಕಾಗಿ ಹೊರಡುತ್ತಿತ್ತು. ಹಿಂಬದಿಯ ಮಬ್ಬಾದ ರಸ್ತೆಗಳಲ್ಲಿ ದೀಪವಿಲ್ಲದ ವಾಹನಗಳು ಓಡಾಡಿಕೊಂಡಿದ್ದವು. ನೆವ್‌ಸ್ಕಿ ರಾಜಮಾರ್ಗದಲ್ಲಿನ ವಸತಿ ಸಮುಚ್ಚಯವೊಂದರಲ್ಲಿ ಫ್ಲೋಂಟಾಂಕರ ಎಂಬಲ್ಲಿ ರೈತರ ಸೋವಿಯತ್‌ನ ಕೇಂದ್ರ ಕಛೇರಿಯಿತ್ತು. ಅಲ್ಲಿಯೂ ಎಂಜಿನಿಯರಿಂಗ್ ಶಾಲೆಯಲ್ಲೂ ಏನೋ ರಹಸ್ಯ ಚಟುವಟಿಕೆಗಳು ನಡೆಯುತ್ತಿರುವಂತಿತ್ತು. ಡ್ಯೂಮಾ ಕಟ್ಟಡದಲ್ಲಿ ದೀಪಗಳು ಬೆಳಗುತ್ತಿದ್ದವು.

ಇತ್ತ ಸ್ಮೋಲ್ನಿ ಇನ್‌ಸ್ಟಿಟ್ಯೂಟ್‌ನಲ್ಲಾದರೋ, ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಸ್ಫೋಟಕ್ಕೆ ಹತ್ತಿರವಿದ್ದ ಅಗ್ನಿಪರ್ವತದಂತೆ ಭಯಂಕರ ಜ್ವಾಲೆಗಳನ್ನು ಉಗುಳುತ್ತಿದೆಯೇನೋ ಅನಿಸುವಂತಿತ್ತು.

## ಅಧ್ಯಾಯ – 7

# ಕ್ರಾಂತಿಕಾರಿ ರಣಾಂಗಣ

ಶನಿವಾರ, ನವೆಂಬರ್ 10...

ನಾಗರಿಕರೇ !

ಕ್ರಾಂತಿಕಾರಿ ಕಾನೂನು ವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ಭಂಗ ಉಂಟುಮಾಡುವುದನ್ನು ಸಹಿಸಲಾಗುವುದಿಲ್ಲ ಎಂದು ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಎಚ್ಚರಿಸುತ್ತದೆ.

ಕಳ್ಳತನ, ಢಕಾಯಿತಿ, ಹೊಡೆದಾಟ, ನರಮೇಧದ ಪ್ರಯತ್ನಗಳಿಗೆ ತೀವ್ರ ಶಿಕ್ಷೆಯನ್ನು ವಿಧಿಸಲಾಗುವುದು.

ಪ್ಯಾರಿಸ್ ಕಮ್ಯೂನಿನ ಮಾದರಿಯಲ್ಲಿ* ಯಾವುದೇ ಲೂಟಿಕೋರನನ್ನು, ಕಾನೂನು ವ್ಯವಸ್ಥೆಯನ್ನು ಹದಗೆಡಿಸಲೆತ್ನಿಸುವ ಪ್ರಚೋದನಕಾರಿಯನ್ನು, ನಿರ್ದಯವಾಗಿ ನಿಶ್ಶೇಷವಾಗಿಸಲಾಗುವುದು...

ನಗರ ನಿಶ್ಶಬ್ದವಾಗಿತ್ತು. ಯಾವುದೇ ಕಳ್ಳತನವಿಲ್ಲ. ಢಕಾಯಿತಿಯಿಲ್ಲ. ಕಡೆಗೆ ಕುಡುಕರ ಜಗಳವೂ ಇಲ್ಲ. ರಾತ್ರಿಯ ವೇಳೆಯಲ್ಲಿ ಸಶಸ್ತ್ರ ರಕ್ಷಣಾ ದಳಗಳು ನಿಶ್ಶಬ್ದ ರಸ್ತೆಗಳಲ್ಲಿ ಗಸ್ತು ಹಾಕಿದವು. ರಸ್ತೆಗಳು ಸೇರುವಲ್ಲಿ ಸೈನಿಕರು ಹಾಗೂ ರೆಡ್‌ಗಾರ್ಡ್‌ಗಳು ಬೆಂಕಿಯಲ್ಲಿ ಮೈಕಾಯಿಸಿಕೊಳ್ಳುತ್ತಾ, ನಗುತ್ತಾ ಹಾಡಿಕೊಂಡಿದ್ದರು. ಹಗಲು ಹೊತ್ತಿನಲ್ಲಿ ರಸ್ತೆ ಬದಿಗಳಲ್ಲಿ ವಿದ್ಯಾರ್ಥಿಗಳು, ಸೈನಿಕರು, ವರ್ತಕರು ಮತ್ತು ಕಾರ್ಮಿಕರ ನಡುವೆ ಕೊನೆಯೇ ಇಲ್ಲದೆ ನಡೆಯುತ್ತಿದ್ದ ಚರ್ಚೆಗಳನ್ನು ಆಲಿಸುತ್ತಾ ದೊಡ್ಡ ಜನಜಂಗುಳಿ ಸೇರುತ್ತಿತ್ತು.

ನಾಗರಿಕರು ರಸ್ತೆಯಲ್ಲಿ ಎದುರುಬದುರಾದಾಗ ನಿಲ್ಲಿಸಿ ಮಾತಿಗೆ ತೊಡಗುತ್ತಿದ್ದರು.

"ಕೊಸ್ಸಾಕರು ಬರ್ತಿದಾರಂತೆ."

"ಇಲ್ಲಪ್ಪ..."

"ಹೊಸ ವರ್ತಮಾನ ಏನು?"

"ಏನೂ ಗೊತ್ತಿಲ್ಲ. ಕೆರೆನ್‌ಸ್ಕಿ ಎಲ್ಲಿದಾನಂತೋ?"

"ಪೆತ್ರೋಗ್ರಾಡ್‌ನಿಂದ ಎಂಟು ವರ್ಸ್ಟ್‌ಗಳಷ್ಟು (ಎಂಟು ಮೈಲಿ) ದೂರದಲ್ಲಿದ್ದಾನೆ ಅಂತಾರೆ."

---

* 1871ರಲ್ಲಿ 70 ದಿನಗಳ ಕಾಲ ಕಾರ್ಮಿಕರು ಫ್ರಾನ್ಸ್ ದೇಶದ ಪ್ಯಾರಿಸ್ ನಗರದಲ್ಲಿ ಅಧಿಕಾರವನ್ನು ಕೈಗೆತ್ತಿಕೊಂಡಿದ್ದರು. ಅತ್ಯಂತ ಕ್ರಾಂತಿಕಾರಿ ಕ್ರಮಗಳನ್ನು ಅಲ್ಪಕಾಲದಲ್ಲಿಯೇ ಜಾರಿಗೊಳಿಸಿದ್ದರು. ಆ ಸಂದರ್ಭದಲ್ಲಿದ್ದ ಮಾದರಿಯನ್ನು ಉದಾಹರಿಸಲಾಗುತ್ತಿದೆ. – ಅನು.

"ಬೋಲ್ಶೆವಿಕರು ಓಡಿಹೋಗಿ 'ಅರೋರಾ' ಯುದ್ಧನೌಕೇಲಿ ಸೇರ್ಕೊಂಡಿದ್ದಾರಂತೆ ಹೌದೇ?"

"ಹಾಗಂತಾರಪ್ಪಾ."

ವೃತ್ತಪತ್ರಿಕೆಗಳು ಕೆಲವೇ ಕೆಲವು. ಅದನ್ನು ಬಿಟ್ಟರೆ ಗೋಡೆಗಳ ಮೇಲೆ ಅಂಟಿಸಿದ ಭಿತ್ತಿಪತ್ರಗಳದ್ದೇ ಪಾರುಪತ್ಯ. ಖಂಡನೆಗಳು, ಮನವಿಗಳು, ಡಿಕ್ರಿಗಳು ಇವುಗಳ ಸುರಿಮಳೆ.

ರೈತರ ಸೋವಿಯತ್‌ಗಳ ನಾಯಕತ್ವದ ಒಂದು ಬೃಹತ್ತಾದ ಉನ್ಮತ್ತ ಭಿತ್ತಿಪತ್ರ ಕಾಣಿಸಿಕೊಂಡಿತು.

*...ಬೋಲ್ಶೆವಿಕರು ತಮಗೆ ರೈತರ ಸೋವಿಯತ್‌ಗಳ ಪ್ರತಿನಿಧಿಗಳ ಬೆಂಬಲವಿದೆ ಎಂದು ಹೇಳುವ ಉದ್ಧಟತನ ತೋರಿಸಿದ್ದಾರೆ. ರಷ್ಯಾದ ಇಡಿಯ ಕಾರ್ಮಿಕ ವರ್ಗಕ್ಕೆ ಗೊತ್ತಾಗಬೇಕು. ಇದು ಶುದ್ಧ ಸುಳ್ಳು. ಎಲ್ಲ ರೈತರನ್ನು ಪ್ರತಿನಿಧಿಸುವ ರೈತರ ಸೋವಿಯತ್ ಕಾರ್ಯಕಾರಿಣಿಯು, ದುಡಿಯುವ ವರ್ಗಗಳ ಸಂಕಲ್ಪವನ್ನು ಉಲ್ಲಂಘಿಸಿರುವ ಬೋಲ್ಶೆವಿಕರ ಪಾತಕಿ ಕೃತ್ಯವನ್ನು ಆಕ್ರೋಶದಿಂದ ಖಂಡಿಸುತ್ತದೆ.*

ಸೋಷಲಿಸ್ಟ್ ರೆವಲ್ಯೂಶನರಿಗಳ ಸೈನಿಕ ಘಟಕದ ಭಿತ್ತಿ ಪತ್ರ ಹೀಗೆಂದಿತು :

*"ಬೋಲ್ಶೆವಿಕರ ತಲೆಕೆಟ್ಟ ಪ್ರಯತ್ನ ಕುಸಿದುಹೋಗುತ್ತಿದೆ. ಸಚಿವಾಲಯಗಳ ಮುಷ್ಕರ. ಜನರಿಗೆ ಬ್ರೆಡ್ ಸಿಗುತ್ತಿಲ್ಲ. ಬೋಲ್ಶೆವಿಕರು ಏಕಾಂಗಿ, ದೇಶ ಮತ್ತು ಕ್ರಾಂತಿಯ ವಿಮೋಚನಾ ಸಮಿತಿಯ ನೇತೃತ್ವದಲ್ಲಿ ಎಲ್ಲರೂ ಒಂದಾಗಿ, ಕೇಂದ್ರ ಸಮಿತಿಯ ಕರೆಗೆ ಕಾಯುತ್ತಿರಿ."*

ಇನ್ನೊಂದು ಕರಪತ್ರದಲ್ಲಿ ರಷ್ಯನ್ ಗಣರಾಜ್ಯದ ಮಂಡಳಿ ಇದೇ ರೀತಿ ಕರೆನೀಡಿತ್ತು. "ಬಂದೂಕುಗಳ ಒತ್ತಡದಡಿಯಲ್ಲಿ ಮಂಡಳಿಯು ತಾತ್ಕಾಲಿಕವಾಗಿ ತನ್ನ ಕೆಲಸವನ್ನು ನಿಲ್ಲಿಸಬೇಕಾಗಿ ಬಂದಿದೆ... ಸ್ವಾತಂತ್ರ್ಯ, ಸಮಾಜವಾದದ ಬಗ್ಗೆ ಮಾತನಾಡುತ್ತಾ ಅಧಿಕಾರವನ್ನು ಕಸಿದುಕೊಂಡಿರುವ ಶಕ್ತಿಗಳು, ಹಿಂಸಾತ್ಮಕ ಆಡಳಿತವನ್ನು ಆರಂಭಿಸಿವೆ, ಹಂಗಾಮಿ ಸರ್ಕಾರದ ಸಚಿವರನ್ನು ಬಂಧಿಸಿದ್ದಾರೆ. ವೃತ್ತಪತ್ರಿಕೆಗಳನ್ನು ನಿಷೇಧಿಸಿದ್ದಾರೆ. ಇವರು ಜನತೆ ಮತ್ತು ಕ್ರಾಂತಿಯ ಶತ್ರುಗಳು... ಬೋಲ್ಶೆವಿಕರನ್ನು ಕಿತ್ತೊಗೆದು ಹೊಸ ಸರ್ಕಾರದ ರಚನೆಗೆ ಯತ್ನಿಸುತ್ತಿರುವ ದೇಶ ಮತ್ತು ಕ್ರಾಂತಿಯ ವಿಮೋಚನಾ ಸಮಿತಿಯ ಅಡಿಯಲ್ಲಿ ಎಲ್ಲರೂ ಒಂದಾಗಿ ಎಂದು ಕರೆ ನೀಡುತ್ತದೆ."

'ದ್ಯೆಲೋ ನರೋದ' ಎಂಬ ಪತ್ರಿಕೆ ಕ್ರಾಂತಿಯನ್ನು ಹೀಗೆ ಟೀಕಿಸಿತ್ತು :

"ಕ್ರಾಂತಿ ಎಂಬುದು ಎಲ್ಲ ಜನರ ಬಂಡಾಯ... ಆದರೆ ಇಲ್ಲಿ ಕೆಲವು ಬಡಮೂರ್ಖರನ್ನು ಲೆನಿನ್, ಟ್ರಾಟ್‌ಸ್ಕಿ ಮುಂತಾದವರು ರೊಚ್ಚಿಗೆಬ್ಬಿಸಿದ್ದಾರೆ."

'ನರೋದ್ನಯ ಸ್ಲೊವೊ' ಎಂಬುದು ಹೀಗೆ ಬರೆದಿತ್ತು:

"ರೈತ ಕಾರ್ಮಿಕರ ಸರ್ಕಾರ ಎಂಬುದು ಕನಸು. ಇದಕ್ಕೆ ರಷ್ಯಾದಲ್ಲೂ, ಹೊರದೇಶಗಳಲ್ಲೂ ಮನ್ನಣೆಯಿಲ್ಲ." ಬೂರ್ಶ್ವಾ ಪತ್ರಿಕೆಗಳು ಕಾಣಿಸುತ್ತಿರಲಿಲ್ಲ. ಪ್ರಾವ್ದಾ ಪತ್ರಿಕೆಯು ಹೊಸ ತ್ಸೆ–ಇ–ಕಾದ ಮೊದಲ ಸಭೆಯ ವರದಿಯನ್ನು ಪ್ರಕಟಿಸಿತ್ತು. ಅದೇ ಈಗ ಸೋವಿಯತ್ ರಷ್ಯಾದ ಸಂಪತ್ತು. ಅಖಿಲ ರಷ್ಯಾದ ರೈತರ ಸೋವಿಯತ್‌ನ ಮಹಾಧಿವೇಶನವನ್ನು ಡಿಸೆಂಬರ್ 13ಕ್ಕೆ ಕರೆಯಲು ಹಳೆಯ ನಾಯಕತ್ವದಿಂದ ನಿರ್ಧರಿಸಲಾಗಿತ್ತು. ಆದರೆ ಬೋಲ್ಶೆವಿಕರು ಮತ್ತು ಎಡಪಂಥೀಯ ಸೋಷಲಿಸ್ಟ್

ರೆವಲ್ಯೂಶನರಿಗಳು ಒಂದಾಗಿ ಅದು ತೀರಾ ತಡವಾಗುತ್ತದೆಂದೂ, ಅದನ್ನು ಕೂಡಲೇ ಸಂಘಟಿಸಬೇಕೆಂದೂ ಕೃಷಿಮಂತ್ರಿಯ ಸಲಹೆಯಂತೆ ಅಲ್ಲಿ ನಿರ್ಧರಿಸಿದರು.

ಭೂಮಿಯನ್ನು ಹೇಗೆ ವಿತರಿಸಬೇಕೆಂಬುದರ ಬಗ್ಗೆ ವಿವರಗಳನ್ನು ಸಿದ್ಧಪಡಿಸಲು ಹಾಗೂ ಕೈಗಾರಿಕೆಗಳ ಮೇಲೆ ಕಾರ್ಮಿಕರ ನಿಯಂತ್ರಣದ ಬಗ್ಗೆ ನಿರ್ಧರಿಸಲು ತಜ್ಞರ ವರದಿಗೆ ಕಾಯಲು ನಿರ್ಧರಿಸಲಾಯಿತು.

ಅದೇ ದಿನ ತ್ಸೆ-ಇ-ಕಾ ಮತ್ತೂ ಮೂರು ಡಿಕ್ರಿಗಳನ್ನು ಅಂಗೀಕರಿಸಿತು. ಮೊದಲನೆಯದು ಪತ್ರಿಕೆಗಳಿಗೆ ಕುರಿತಾದ ನಿಯಮಗಳ ಬಗ್ಗೆ. ಹೊಸ ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟುವ, ಅಪರಾಧಕ್ಕೆ ಪ್ರಚೋದನೆ ನೀಡುವ ಹಾಗೂ ವರದಿಯನ್ನು ವಿಕೃತಗೊಳಿಸುವ ಎಲ್ಲಾ ಪತ್ರಿಕೆಗಳನ್ನೂ ನಿಷೇಧಿಸಲಾಗಿತ್ತು. ಇಂಥ ನಿಷೇಧ ತಾತ್ಕಾಲಿಕವೆಂದೂ ಪರಿಸ್ಥಿತಿ ಮಾಮೂಲಾದ ಮೇಲೆ ಇದರ ಅಗತ್ಯ ಇರುವುದಿಲ್ಲವೆಂದೂ ಲೆನಿನ್ ಸ್ಪಷ್ಟಪಡಿಸಿದ್ದರು. ಇನ್ನೊಂದು ಮನೆಬಾಡಿಗೆಗಳ ನಿಷೇಧದ ಬಗ್ಗೆ ಕಾರ್ಮಿಕರ ತುರ್ತು ಸಂಗ್ರಾಮಿ ದಳಗಳನ್ನು ರಚಿಸಬೇಕೆಂಬುದು. ಎಲ್ಲಾ ಖಾಲಿ ಮನೆಗಳನ್ನು ಸುಪರ್ದಿಗೆ ತೆಗೆದುಕೊಳ್ಳುವ ಅಧಿಕಾರವನ್ನು ನಗರ ಡ್ಯೂಮಾಗಳಿಗೆ ನೀಡುವ ಆಜ್ಞೆಯನ್ನೂ, ಅವಶ್ಯಕ ಸಾಮಗ್ರಿಗಳನ್ನು ಸಮರ್ಪಕವಾಗಿ ತಲುಪಿಸಲು ರೈಲ್ವೆಗೆ ನಿರ್ದೇಶನ ನೀಡುವ ಆಜ್ಞೆಯನ್ನೂ ಸಹ ಘೋಷಿಸಲಾಯಿತು.

ಇನ್ನೊಂದು ಕಡೆ ರೈತ ಸೋವಿಯತ್‌ಗಳ ಹಳೆಯ ನಾಯಕತ್ವವೂ ಸುಮ್ಮನೆ ಕುಳಿತಿರಲಿಲ್ಲ. ಅವರು ರೈತನಾಯಕರು ತಮ್ಮ ಸ್ಥಾನಬಿಟ್ಟು ಬರಬಾರದೆಂದೂ, ಹೊಸ ಶಾಸನಸಭೆಯ ರಚನೆಗೆ ಅವರು ಅಲ್ಲೇ ಇದ್ದು ತಯಾರಿಮಾಡಿಕೊಳ್ಳಬೇಕೆಂದೂ ಟೆಲಿಗ್ರಾಂ ಕಳಿಸಿದರು. ಡಿಸೆಂಬರ್ 13ಕ್ಕೆ ರೈತ ಸೋವಿಯತ್ ಮಹಾಧಿವೇಶನ ಎಂದು ಅದರಲ್ಲಿ ಒತ್ತಿ ಹೇಳಲಾಗಿತ್ತು.

ಹೀಗೆ, ಪ್ರತಿಕ್ರಾಂತಿಯನ್ನು ಸಂಘಟಿಸುವ ಯತ್ನ ಬಿರುಸಿನಿಂದಲೇ ನಡೆದಿತ್ತು. ಮುನಿಸಿಪಲ್ ಡ್ಯೂಮಾ ಉದ್ವಿಗ್ನವಾಗಿತ್ತು. ಮೇಯರ್‌ರವರು ರಾಷ್ಟ್ರ ವಿಮೋಚನಾ ಸಮಿತಿಯ ನಾಯಕರೊಂದಿಗೆ ಸಮಾಲೋಚನೆಯಲ್ಲಿದ್ದರು. ಕೆರೆನ್‌ಸ್ಕಿಯ ಕಡೆಯವರು ವಿಮಾನದಿಂದ ಉದುರಿಸಿದ ಕರಪತ್ರಗಳನ್ನು ಹಿಡಿದು ಸದಸ್ಯನೊಬ್ಬ ಓಡಿಬಂದಿದ್ದ.

ಅದರಲ್ಲಿ ಎಲ್ಲಾ ಬಂಡುಕೋರ ಸೈನಿಕರು ಕೂಡಲೇ ಶರಣಾಗಬೇಕೆಂದೂ ಇಲ್ಲದಿದ್ದರೆ ಉಗ್ರಶಿಕ್ಷೆ ಎಂದೂ ಬೆದರಿಸಲಾಗಿತ್ತು. ಮಾನ್ಯ ಸಚಿವ-ಅಧ್ಯಕ್ಷರು (ಕೆರೆನ್‌ಸ್ಕಿ) ಆಗಲೇ ತ್ಸಾರ್‌ಸ್ಕೊಯೆ ಸೆಲೊ ಪಟ್ಟಣವನ್ನು ಗೆದ್ದಿದ್ದಾರೆ, ನಾಳೆ ಬೆಳಿಗ್ಗೆ ರಾಜಧಾನಿಯನ್ನು ಪ್ರವೇಶಿಸಲಿದ್ದಾರೆ ಎಂದು ಕೊಚ್ಚಿಕೊಳ್ಳಲಾಗಿತ್ತು. ಅನೇಕ ಸೋವಿಯತ್ ಸೈನ್ಯಗಳು ನಮ್ಮ ಕಡೆಗೆ ಬರುತ್ತಿವೆ ಎಂದೂ ಹೇಳಲಾಗಿತ್ತು.

ಅದೇ ರೀತಿ ನಗರ ರಕ್ಷಣಾದಳದವರೂ ಬೋಲ್ಶೆವಿಕರನ್ನು ತೊರೆಯುತ್ತಿದ್ದಾರಂತೆ. ಬೋಲ್ಶೆವಿಕರು ಸ್ಮೋಲ್ನಿ ಭವನವನ್ನೇ ಬಿಟ್ಟು ಓಡಿಹೋಗಿದ್ದಾರಂತೆ, ಸರ್ಕಾರಿ ಉದ್ಯೋಗಿಗಳು ಸಹಕರಿಸುತ್ತಿಲ್ಲ. ಸರ್ಕಾರಿ ಬ್ಯಾಂಕ್ ಉದ್ಯೋಗಿಗಳು ಬೋಲ್ಶೆವಿಕ್ ಕಮಿಸಾರ್‌ಗಳ ಆಜ್ಞೆಗಳನ್ನು ಪಾಲಿಸುತ್ತಿಲ್ಲ. ಖಾಸಗಿ ಬ್ಯಾಂಕುಗಳು ಬಾಗಿಲು ಹಾಕಿಕೊಂಡಿವೆ.

ಇನ್ನು ವಿದೇಶಾಂಗ ಇಲಾಖೆಗೆ ಟ್ರಾಟ್‌ಸ್ಕಿ ಹೋಗಿ ಶಾಂತಿಯ ಘೋಷಣೆಯನ್ನು ಅನುವಾದ ಮಾಡಿ ಎಂದು ಹೇಳಿದರೆ ಆರುನೂರು ಉದ್ಯೋಗಿಗಳು ಏಕ್‌ದಂ ರಾಜಿನಾಮೆ

ಪತ್ರಗಳನ್ನು ಮುಖದ ಮೇಲೆ ಬಿಸಾಡಿದರಂತೆ! ಕಾರ್ಮಿಕ ಸಚಿವನು ಎಲ್ಲಾ ಉದ್ಯೋಗಿಗಳು ಕೆಲಸಕ್ಕೆ ಬರಲೇಬೇಕು, ಇಲ್ಲದಿದ್ದರೆ ಉದ್ಯೋಗವೂ ಇಲ್ಲ, ಪಿಂಚಣಿಯೂ ಇಲ್ಲ ಎಂದು ಹೆದರಿಸಿದರೆ, ಬಂದವರು ಬಾಗಿಲು ಕಾಯುವ ಚಪರಾಸಿಗಳು ಮಾತ್ರವಂತೆ! ಆಹಾರ ಸರಬರಾಜು ಖಾತೆಯ ಉದ್ಯೋಗಿಗಳು ಕೆಲಸ ನಿಲ್ಲಿಸಿದ್ದಾರಂತೆ. ಎಷ್ಟೇ ವೇತನ ಹೆಚ್ಚಳ ಮಾಡುವ ವಾಗ್ದಾನ ಕೊಟ್ಟರೂ ಅಂಚೆ-ತಂತಿ ಇಲಾಖೆಯವರು ಸೋವಿಯತ್ ಕೇಂದ್ರಕ್ಕೆ ಸಂಪರ್ಕವನ್ನೇ ಕಲ್ಪಿಸಲಿಲ್ಲವಂತೆ!

ಇನ್ನು ಪ್ರಾಂತ್ಯಗಳ ಸುದ್ದಿ. ಮೊಘಿಲೆವ್ ನಗರವು ಬೋಲ್ಶೆವಿಕರ ವಿರುದ್ಧವಂತೆ. ಕೀವ್ ನಗರದಲ್ಲಿ ಕೊಸ್ಸಾಕರು ಬೋಲ್ಶೆವಿಕರನ್ನು ಕಿತ್ತೊಗೆದು ಬಂಡಾಯದ ನಾಯಕರನ್ನು ದಸ್ತಗಿರಿ ಮಾಡಿದ್ದಾರಂತೆ. ಲೂಗಾ ಪಟ್ಟಣದ ಸೋವಿಯತ್ ಮತ್ತು ಮೂವತ್ತು ಸಾವಿರ ರಕ್ಷಣಾದಳಗಳು, ಹಳೆಯ ಹಂಗಾಮಿ ಸರ್ಕಾರಕ್ಕೆ ನಿಷ್ಠೆಯನ್ನು ಘೋಷಿಸಿಕೊಂಡವಂತೆ. ಇತ್ತ ಕಾಲೆಡಿನ್, ಡಾನ್ ಪ್ರಾಂತ್ಯದಲ್ಲಿ ಎಲ್ಲಾ ಸೋವಿಯತ್‌ಗಳನ್ನೂ ನಿಷೇಧಿಸಿ ಉತ್ತರಕ್ಕೆ ದಂಡೆತ್ತಿ ಬರುತ್ತಿದ್ದಾನಂತೆ. ಇನ್ನೊಂದು ಕಡೆ ರೈಲ್ವೇ ಕಾರ್ಮಿಕರು ಎಲ್ಲಾ ರಾಜಕೀಯ ಪಕ್ಷಗಳಿಗೂ ಟೆಲಿಗ್ರಾಂ ಕಳಿಸಿ, ಯುದ್ಧವನ್ನು ನಿಲ್ಲಿಸಿ ಒಕ್ಕೂಟ ಸರ್ಕಾರವನ್ನು ರಚಿಸಬೇಕೆಂದೂ ಇಲ್ಲದಿದ್ದರೆ ರಾತ್ರಿಯಿಂದಲೇ ಮುಷ್ಕರ ಆರಂಭಿಸುವುದಾಗಿಯೂ ಹೇಳಿದ್ದಾರಂತೆ.

ಈ ಸುದ್ದಿಗಳೆಲ್ಲಾ ಏನೇ ಇರಲಿ, ನಾವು ಸ್ಮೋಲ್ನಿಯ ಕಡೆಗೆ ಬಂದಾಗ ಮಾತ್ರ ಅದು ನಿರ್ಜನವಾಗಿರದೆ ತುಂಬ ತೀವ್ರವಾಗಿ ಕಾರ್ಯತತ್ಪರವಾಗಿತ್ತು. ಬಾಗಿಲುಗಳಲ್ಲಿ ರಕ್ಷಣಾ ಸೈನಿಕರು ದುಪ್ಪಟ್ಟಾಗಿದ್ದರು. 'ಸೌಮ್ಯವಾದಿ ಸಮಾಜವಾದಿ' ಪರ್ತಕರ್ತರು ಹಾಗೂ ಬೂರ್ಶ್ವಾ ಪತ್ರಿಕೋದ್ಯಮಿಗಳು 'ನಮ್ಮನ್ನು ಹೊರಗಟ್ಟಿದ್ದಾರೆ, ಪತ್ರಿಕಾ ಸ್ವಾತಂತ್ರ್ಯದ ಹರಣವಾಗಿದೆ' ಎಂದು ಕೂಗಾಡುತ್ತಿದ್ದರು.

ಮೊಗಸಾಲೆಯಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕರಪತ್ರಗಳನ್ನು, ಆಜ್ಞೆಗಳನ್ನು ಪೇರಿಸಲಾಗಿತ್ತು. ಸೈನಿಕರು, ಕಾರ್ಮಿಕರು ಅವುಗಳ ಭಾರವಾದ ಹೊರೆಗಳನ್ನು ಹೊರಗೆ ನಿಂತಿದ್ದ ವಾಹನಗಳಿಗೆ ತುಂಬುತ್ತಿದ್ದರು. ಅದರಲ್ಲಿ ಒಂದರ ಸಾರಾಂಶ ಹೀಗಿತ್ತು:

## ಖಂಡನೆ!

*ರಷ್ಯಾದ ಜನತೆ ಅತ್ಯಂತ ಸಂಕಷ್ಟಮಯ ಪರಿಸ್ಥಿತಿಯಲ್ಲಿರುವಾಗ ಬಲಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ಮತ್ತು ಮೆನ್ಶೆವಿಕರು ಕೆರೆನ್‌ಸ್ಕಿ, ಕೊರ್ನಿಲೊವ್‌ನಂಥ ವರೊಂದಿಗೆ ಸೇರಿ ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆದಿದ್ದಾರೆ. ಜನರಲ್ಲಿ ಗಾಬರಿ ಹುಟ್ಟಿಸಲು ಕೆರೆನ್‌ಸ್ಕಿಯ ಆಜ್ಞೆಗಳನ್ನು ಮುದ್ರಿಸಿ ಹಂಚುತ್ತಿದ್ದಾರೆ. ಆತನ ವಿಜಯಗಳೆಂಬ ಕಟ್ಟುಕತೆಗಳನ್ನು ಹಬ್ಬಿಸುತ್ತಿದ್ದಾರೆ. ನಾಗರಿಕರೇ! ವದಂತಿಗಳನ್ನು ನಂಬಬೇಡಿ. ಜನತೆಯ ಕ್ರಾಂತಿಯನ್ನು ಸೋಲಿಸಲು ಯಾವ ಶಕ್ತಿಗೂ ಸಾಧ್ಯವಿಲ್ಲ. ನಾವು ಅವರನ್ನು ಖಂಡಿಸುತ್ತಿದ್ದೇವೆ. ಯಾವ ದುಡಿಯುವ ಜನತೆಗೆ ಅವರು ಮತ್ತೆ ಸಂಕೋಲೆ ತೊಡಿಸಲು ಹೊರಟಿದ್ದಾರೋ, ಅವರ ನಿರಂತರ ದ್ವೇಷಕ್ಕೆ ಅವರು ಪಾತ್ರರು.*

ಜನದ್ರೋಹಿಗಳಿಗೆ ನಾಚಿಕೆಯಾಗಬೇಕು, ಜನತೆಯ ಶಾಪ ತಟ್ಟಬೇಕು! ಮಿಲಿಟರಿ ಕ್ರಾಂತಿಕಾರಿ ಸಮಿತಿಗೆ ಈಗ ದೊಡ್ಡ ಕಛೇರಿ ಸಿಕ್ಕಿತ್ತು. ಅಲ್ಲಿ ಹೋಗಿ ನೋಡಿದರೆ ದೊಡ್ಡ

ಮನುಷ್ಯರು ಕಿಕ್ಕಿರಿದು ತುಂಬಿದ್ದರು. ಮೇಲೆ ವಿನಯ ತೋರಿಸುತ್ತಾ ಒಳಗೆ ಕೊಲೆ ಮಾಡುವಷ್ಟು ಕೋಪ ತುಂಬಿಕೊಂಡವರು, ಊರು ಬಿಟ್ಟುಹೋಗಲು, ತಮ್ಮ ವಾಹನ ಉಪಯೋಗಿಸಲು, ಅನುಮತಿ ಕೇಳಿ ಬಂದ ಜನ, ಇಂಥವರೇ ಅಲ್ಲಿದ್ದದ್ದು.

ನಾವು ಅಲ್ಲಿದ್ದ ಬೋಲ್ಶೆವಿಕ್ ನಾಯಕರಿಗೆ ಹೊಸ ಸುದ್ದಿ ಏನೆಂದು ಕೇಳಿದೆವು. ಅವರು ಬಂದಿದ್ದ ಸಮಾಚಾರಗಳನ್ನು ಓದಿ ಹೇಳಿದರು. '175ನೇ ರಿಸರ್ವ್‌ದಳದ ಬೆಂಬಲ, ಪುಟಿಲೋವ್ ಎಂಬ ಬಂದರಿನ ಹಡಗುಕಟ್ಟೆಗಳಿಗೆ ಸೇರಿದ ಐದು ಸಾವಿರ ಹಮಾಲಿಗಳಿಂದ ಹೊಸ ಸರ್ಕಾರಕ್ಕೆ ಬೆಂಬಲ, ಟ್ರೇಡ್ಸ್ ಯೂನಿಯನ್‌ಗಳ ಕೇಂದ್ರ ಸಮಿತಿಯ ಬೆಂಬಲ, ರೇವಲ್‌ನಲ್ಲಿ ಎಲ್ಲ ಪಡೆಗಳು, ಅದೇ ರೀತಿ ಮಿನ್ಸ್ಕ ಮತ್ತು ಪೆಸ್‌ಕೊವ್ ನಗರಗಳಿಂದ ಬೋಲ್ಶೆವಿಕರಿಗೆ ಬೆಂಬಲ, ತ್ಸಾರಿಟ್ಸಿನ್, ಸೆವಾಸ್ತಪೋಲ್ ಮುಂತಾದ ಮುಖ್ಯ ಪಟ್ಟಣಗಳಲ್ಲೂ ಮಿಲಿಟರಿ ಕ್ರಾಂತಿಕಾರಿ ಸಮಿತಿಗೆ ಉತ್ಸಾಹದ ಬೆಂಬಲ.

ಮಾಸ್ಕೋದಲ್ಲಿ ಮಾತ್ರ ಪರಿಸ್ಥಿತಿ ಸ್ಪಷ್ಟವಿಲ್ಲ. ಆಯಕಟ್ಟಿನ ಜಾಗಗಳು ಮತ್ತು ಬಹಳ ಮುಖ್ಯವಾದ ಕ್ರೆಮ್ಲಿನ್ ಕಟ್ಟಡವೇ ಬೋಲ್ಶೆವಿಕರ ಕೈಯಲ್ಲಿದೆ. ಆದರೆ ಶಸ್ತ್ರಾಗಾರವೇ ಕ್ರಾಂತಿವಿರೋಧಿಗಳ ಕೈಯಲ್ಲಿದ್ದು, ಕದನ ಆರಂಭವಾಗಿದೆ.

ಪೆತ್ರೋಗ್ರಾಡ್‌ನಲ್ಲಿ ಸಿಬ್ಬಂದಿಯು ಸ್ಮೋಲ್ನಿಯ ಕಮಿಸಾರ್‌ಗಳನ್ನು ಒಪ್ಪಿಕೊಂಡಿದ್ದಾರೆ. ಕ್ರಾಂತಿಯನ್ನು ವಿರೋಧಿಸಿದ ಟ್ರೆಂಟ್ರೊಫ್ಲೋಟ್ ಎಂಬ ನಾವಿಕರ ನಾಯಕತ್ವವನ್ನು ಡೈಬೆಂಕೋ ನೇತೃತ್ವದಲ್ಲಿ ಹೋರಾಡಿ ಗೆದ್ದು ಹೊಸ ನಾಯಕತ್ವವನ್ನು ಸ್ಥಾಪಿಸಲಾಗಿದೆ. ಅದಕ್ಕೆ ಬಾಲ್ಟಿಕ್ ಸಮುದ್ರದಲ್ಲಿರುವ ಮತ್ತು ಕಪ್ಪು ಸಮುದ್ರದಲ್ಲಿರುವ ನೌಕಾಪಡೆಗಳು ತಮ್ಮ ನಿಷ್ಠೆಯನ್ನು ಘೋಷಿಸಿವೆ.

ಆದರೆ ಇಷ್ಟೆಲ್ಲಾ ಉತ್ತೇಜನಾದಾಯಕ ಸುದ್ದಿಗಳ ನಡುವೆಯೂ ಅಪಾಯದ ಅಹಿತಕರ ನಿರೀಕ್ಷೆಯ ಆತಂಕ ಇದ್ದೇ ಇತ್ತು. ಕೆರೆನ್‌ಸ್ಕಿಯ ಕೊಸ್ಸಾಕರು ವೇಗವಾಗಿ ಬರುತ್ತಿದ್ದಾರೆ. ಅವರಲ್ಲಿ ಫಿರಂಗಿಗಳಿವೆ. ಎಲ್ಲಾ ದಳಪತಿಗಳೂ ಧೀರೋದಾತ್ತವಾಗಿ ಮಾತನಾಡುತ್ತಿದ್ದರು. ಆದರೆ ಅವರ ಮಾತಿನಲ್ಲಿ 'ನಾವು ಮಡಿಯಬಹುದು', 'ನಾವು ಏಕಾಂಗಿಗಳಾಗಿದ್ದೇವೆ', 'ನಮ್ಮದು ಜನಸಮೂಹ, ಆದರೆ ಅವರದ್ದು ತರಬೇತಿ ಹೊಂದಿದ ಸೈನ್ಯ' ಎಂಬ ಕಳವಳ ಕಾಣುತ್ತಿತ್ತು.

ದಕ್ಷಿಣದಲ್ಲಿ ಮತ್ತು ಈಶಾನ್ಯ ದಿಕ್ಕಿನಲ್ಲಿ ಸೋವಿಯತ್‌ಗಳು ಕೆರೆನ್‌ಸ್ಕಿ ಎದುರು ನಿಲ್ಲಲಾರದೆ ಓಡಿಹೋಗಿದ್ದವು. ದಾರಿಯಲ್ಲಿನ ಪಟ್ಟಣದಲ್ಲಿ ಸಾಧಾರಣ ಸೈನಿಕರಲ್ಲಿ ಅರ್ಧ ಭಾಗ ತಟಸ್ಥವಾಗಿರಲು ತೀರ್ಮಾನಿಸಿದ್ದರೆ ಇನ್ನರ್ಧ ಭಾಗ ಅಸ್ತವ್ಯಸ್ತವಾಗಿ ರಾಜಧಾನಿಗೆ ಓಡಿಬಂದಿದ್ದರು.

## ಕ್ರಾಸ್‌ನೊಯೆ ಸೆಲೊದಿಂದ

*ನವೆಂಬರ್ 10, ಬೆಳಿಗ್ಗೆ 8*

*ಎಲ್ಲಾ ದಳಪತಿಗಳಿಗೆ, ಸೇನಾ ಮುಖ್ಯಸ್ಥರಿಗೆ,*

*ಮಾಜಿ ಸಚಿವ ಕೆರೆನ್‌ಸ್ಕಿಯು, ಪೆತ್ರೋಗ್ರಾಡ್‌ನ ಕ್ರಾಂತಿಕಾರಿ ಸೈನ್ಯಗಳು ತಮಗೆ ಶರಣಾಗಿವೆ ಎಂಬ ಸುಳ್ಳುಸುದ್ದಿಯನ್ನು ಬೇಕೆಂದೇ ಹಬ್ಬಿಸುತ್ತಿದ್ದಾನೆ. ಮಿಲಿಟರಿ ಕ್ರಾಂತಿಕಾರಿ*

*ಸಮಿತಿಯು ತನ್ನ ಸೈನ್ಯಗಳನ್ನು ಹಿಂದೆ ಸರಿಯಲು ಹೇಳಿದೆ ಎಂಬ ವದಂತಿಯನ್ನು ಹಬ್ಬಿಸಲಾಗಿದೆ.*

*ಹಿಂದೆ ಸರಿಯುವ ಅಥವಾ ಶರಣಾಗುವ ಪ್ರಶ್ನೆಯೇ ಇಲ್ಲ.*

*ನಮ್ಮ ಸೈನ್ಯಗಳು ಗ್ಯಾಟ್‌ಚಿನ ಊರನ್ನು ಬಿಟ್ಟು ಬಂದದ್ದಕ್ಕೆ ಕಾರಣವೆಂದರೆ ನಮಗೆ ಸೋದರ ಕೊಸ್ಸಾಕ್ ಸೈನ್ಯಗಳೊಂದಿಗೆ ರಕ್ತಪಾತ ಬೇಕಿರಲಿಲ್ಲ. ಅದೇ ರೀತಿ ಯುದ್ಧಕ್ಕೆ ಸಜ್ಜಾಗಲು ಸೂಕ್ತ ಪ್ರದೇಶವನ್ನು ಈಗ ಆಯ್ಕೆ ಮಾಡಿಕೊಂಡಿದ್ದೇವೆ. ಕೆರೆನ್‌ಸ್ಕಿಯ ಸೈನ್ಯದ ಹತ್ತುಪಟ್ಟು ಸೈನ್ಯ ಬಂದರೂ ಚಿಂತೆಯಿಲ್ಲ. ಪೆತ್ರೋಗ್ರಾಡ್ ಶಾಂತವಾಗಿದೆ.*

*ಸಹಿ : ಲೆಫ್ಟಿನೆಂಟ್ ಕರ್ನಲ್ ಮುರಾವಿಯೊವ್*

ನಾವು ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಛೇರಿಯನ್ನು ಬಿಟ್ಟು ಹೊರಟಾಗ, ಆಂಟೊನೊವ್ ಒಂದು ಕಾಗದ ಹಿಡಿದುಕೊಂಡು ಅಲ್ಲಿಗೆ ಬಂದ. ನೋಡಲು ಪ್ರೇತದಂತೆ ಕಾಣುತ್ತಿದ್ದ. 'ಇದನ್ನು ಕಳಿಸಿ' ಎಂದು ಸಿಬ್ಬಂದಿಗೆ ಹೇಳಿದ.

## ಎಲ್ಲಾ ಕಾರ್ಮಿಕರ ಪ್ರತಿನಿಧಿಗಳ ಸೋವಿಯತ್‌ಗಳಿಗೆ ಮತ್ತು ಕಾರ್ಖಾನೆ ಕಾರ್ಮಿಕ ಸಂಘಗಳಿಗೆ ಆಜ್ಞೆ

*ಕೆರೆನ್‌ಸ್ಕಿ ಕಡೆಯಿಂದ ಬಂದಿರುವ ಕೊರ್ನಿಲೊವ್‌ನ ಪುಂಡುದಳಗಳು ರಾಜಧಾನಿಗೆ ಬರುವ ಎಲ್ಲಾ ಮಾರ್ಗಗಳನ್ನೂ ಆಕ್ರಮಿಸಿಕೊಳ್ಳುತ್ತಿದ್ದಾರೆ. ಪ್ರತಿಕ್ರಾಂತಿಯ ಎಲ್ಲ ಯತ್ನಗಳನ್ನೂ ನಿರ್ದಯವಾಗಿ ಮಟ್ಟಹಾಕಲು ಆಜ್ಞೆ ಮಾಡಲಾಗಿದೆ. ಸೈನ್ಯಕ್ಕೂ, ರೆಡ್‌ಗಾರ್ಡ್‌ಗಳಿಗೂ ಕಾರ್ಮಿಕರಿಂದ ತುರ್ತು ಬೆಂಬಲ ಬೇಕಾಗಿದೆ.*

1. *ಶತ್ರುವನ್ನು ತಡೆಯಲು ಕಂದಕ ಅಗೆಯಲು, ಮುಳ್ಳುತಂತಿ ಬೇಲಿ, ಅಡೆತಡೆಗಳನ್ನು ಸೃಷ್ಟಿಸಲು ಅತಿ ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರನ್ನು ಕಳಿಸುವುದು.*
2. *ಅವಶ್ಯವಿದ್ದರೆ ಇದಕ್ಕಾಗಿ ಕಾರ್ಖಾನೆ ಕೆಲಸ ನಿಲ್ಲಿಸುವುದು.*
3. *ಎಲ್ಲಾ ಶಸ್ತ್ರಾಸ್ತ್ರಗಳನ್ನೂ ಕೈಗೆ ತೆಗೆದುಕೊಳ್ಳುವುದು.*
4. *ಕಠೋರ ಶಿಸ್ತು ಕಾಪಾಡುವುದು ಇತ್ಯಾದಿ.*

*– ಸಚಿವ ಲಿಯಾನ್ ಟ್ರಾಟ್‌ಸ್ಕಿ*

*– ಮುಖ್ಯ ಸೇನಾನಿ ಪದ್‌ವೋಯ್‌ಸ್ಕಿ*

ನಾವು ಹೊರಬಂದಾಗ ಇನ್ನೂ ಕತ್ತಲಿದ್ದ, ಮಬ್ಬಾಗಿದ್ದ ಹಗಲಿನಲ್ಲಿ ಕಾರ್ಖಾನೆಗಳ ಸೀಟಿ ಕೇಳಿಬರುತ್ತಿತ್ತು. ಏನೋ ಆಗಲಿದೆ ಎಂಬುದನ್ನು ಸೂಚಿಸುವಂಥ ಕರ್ಕಶ ಶಬ್ದ. ನೋಡಿದರೆ ಹತ್ತಾರು ಸಾವಿರ ಗಂಡಸರು, ಹೆಂಗಸರು ಎಲ್ಲಾ ಕಾರ್ಮಿಕ ಜನ ರಸ್ತೆಗಿಳಿದಿದ್ದರು. ಕೊಳೆಗೇರಿಗಳಿಂದ ಕಷ್ಟಜೀವಿಗಳು ಹೊರಬೀಳುತ್ತಿದ್ದರು. ಕ್ರಾಂತಿಕಾರಿ ಕೆಂಪು ರಾಜಧಾನಿ ಪೆತ್ರೋಗ್ರಾಡ್ ಅಪಾಯದಲ್ಲಿದೆ. ಕೊಸ್ಸಾಕರು ಬರುತ್ತಿದ್ದಾರಂತೆ ! ಇದು ಅವರನ್ನು ಈ ಪರಿಶ್ರಮಕ್ಕೆ ಪ್ರೇರೇಪಿಸಿತ್ತು.

ಮೊಸ್ಕೊವ್‌ಸ್ಕಿ ದ್ವಾರದ ಕಡೆಗೆ ಹೊರಟ ಈ ಅಸಂಖ್ಯಾತ ಜನರಲ್ಲಿ ಮಕ್ಕಳೂ ಇದ್ದರು. ಅವರುಗಳ ಕೈಯಲ್ಲಿ ಬಂದೂಕುಗಳು, ಗಡಾರಿಗಳು, ಸನಿಕೆಗಳು, ಮುಳ್ಳುತಂತಿ ಸುರುಳಿಗಳು, ಮೈಮೇಲೆ ಕಾಡತೂಸಿನ ಪಟ್ಟಿಗಳು ಇದ್ದವು. ಯಾವ ನಗರವೂ ಈಪಾಟಿ ಜನ ಹೊರಬಿದ್ದಿರುವುದನ್ನು ಕಂಡಿರಲಿಕ್ಕಿಲ್ಲ. ಅವರು ಪ್ರವಾಹದಂತೆ ಅಲೆಅಲೆಯಾಗಿ

ಉರುಳಿ ಬಂದರು. ಅವರೊಂದಿಗೆ ಸೈನಿಕರು, ಫಿರಂಗಿಗಳು, ಟ್ರಕ್ಕುಗಳು – ಒಟ್ಟಿನಲ್ಲಿ ಕ್ರಾಂತಿಕಾರಿ ಶ್ರಮಜೀವಿ ವರ್ಗವು ತನ್ನ ಎದೆಯನ್ನೇ ಪ್ರಹಾರಕ್ಕೆ ಒಡ್ಡುತ್ತಾ ರೈತ–ಕಾರ್ಮಿಕರ ಗಣರಾಜ್ಯದ ರಾಜಧಾನಿಯನ್ನು ಕಾಪಾಡಲು ಹೊರಟಿತ್ತು.

ಸ್ಮೋಲ್ನಿಯ ಎದುರು ಒಂದು ವಾಹನ ನಿಂತಿತ್ತು. ಅದರ ಮಡ್‌ಗಾರ್ಡನ್ನು ಪರೀಕ್ಷಿಸುತ್ತಾ ಒಬ್ಬ ಸಣ್ಣ ಆಕಾರದ ಮನುಷ್ಯ ನಿಂತಿದ್ದ. ಕನ್ನಡಕದ ಗಾಜಿನಿಂದಾಗಿ ಅವನ ಕೆಂಪಾದ ಕಣ್ಣುಗಳು ದೊಡ್ಡದಾಗಿ ಕಾಣುತ್ತಿದ್ದವು. ಬಹಳ ಕಷ್ಟಪಟ್ಟು ಯಾತನೆಯಿಂದ ಮಾತನಾಡುತ್ತಿದ್ದ ಈತ ಆಂಟೊನೊವ್. ಇನ್ನೊಬ್ಬ ತರುಣ ಸಹಜ ಸ್ವಚ್ಛ ಕಣ್ಣುಗಳ ಬೃಹದಾಕಾರದ ಗಡ್ಡಧಾರಿ ಆತಂಕದಿಂದ ಅತ್ತಿತ್ತ ಓಡಾಡುತ್ತಿದ್ದ. ಅನ್ಯಮನಸ್ಕನಾಗಿ ಒಂದು ನಿಮಿಷವೂ ಬಿಡದೆ ದೊಡ್ಡ ನೀಲಿ ಉಕ್ಕಿನ ರಿವಾಲ್ವರ್‌ನೊಂದಿಗೆ ಆಟವಾಡುತ್ತಿದ್ದ ಈತನೇ ಡೈಬೆಂಕೊ.

ಕೆಲವು ಸೈನಿಕರು ಬೈಸಿಕಲ್‌ಗಳನ್ನು ಆ ವಾಹನಕ್ಕೆ ಕಟ್ಟಲೆತ್ನಿಸಿದಾಗ ಅದರ ಚಾಲಕ ಒಪ್ಪಲಿಲ್ಲ. ಹಚ್ಚಿರುವ ಬಣ್ಣವೆಲ್ಲಾ ಹಾಳಾಗುತ್ತದೆ ಎಂಬುದು ಅವನ ಕೊರಗು. ನಿಜ, ನಾನೂ ಬೋಲ್ಶೆವಿಕ್. ಸೈಕಲ್‌ಗಳು ಆರ್ಡರ್ಲಿಗಳಿಗೆ ಬೇಕಾಗಿದೆ ಗೊತ್ತು, ಈ ವಾಹನವನ್ನು ಬೂರ್ಶ್ವಾಗಳಿಂದ ಕಸಿದುಕೊಂಡದ್ದೂ ಎಂಬುದು ಗೊತ್ತು. ಆದರೆ ಗಾಡಿ ಹಾಳಾಗುವುದಕ್ಕೆ ಒಪ್ಪಿಗೆಯಿಲ್ಲ ಎಂಬುದು ಅವನ ವಾದ. ಕಡೆಗೂ ಅವನ ವೃತ್ತಿಪರ ಹೆಮ್ಮೆಯೇ ಗೆದ್ದಿತು!

ರಣಾಂಗಣ ಎಷ್ಟು ದೂರದಲ್ಲಿದೆ ಎಂಬುದು ಸ್ಪಷ್ಟವಿಲ್ಲದಿದ್ದರೂ ಯುದ್ಧದ ಸಚಿವರೂ, ನೌಕಾದಳದ ಸಚಿವರೂ ಅದರ ಮೇಲ್ವಿಚಾರಣೆಗೆ ಹೊರಟಿದ್ದರು. ನಾವೂ ಬರಬಹುದೇ ಎಂದು ಕೇಳಿದೆವು. ಖಂಡಿತ ಸಾಧ್ಯವಿಲ್ಲ ಎಂಬ ಉತ್ತರ ಬಂತು. ವಾಹನ ಹಿಡಿಯುತ್ತಿದ್ದದ್ದೇ ಐದು ಜನರನ್ನು. ಅದರಲ್ಲಿ ಇಬ್ಬರು ಸಚಿವರು, ಇಬ್ಬರು ಆರ್ಡರ್ಲಿಗಳು, ಚಾಲಕ ಆಗಲೇ ಇದ್ದರು. ಆದರೂ ನನ್ನ ಪರಿಚಯಸ್ಥ ರಷ್ಯನ್ ಒಬ್ಬ ಅದರಲ್ಲಿ ಸೇರಿಕೊಂಡೇಬಿಟ್ಟ.

ನನ್ನ ಗೆಳೆಯ ಹೇಳಿದ ಕಥೆ ಇದು. ಇದನ್ನು ನಂಬದಿರಲು ನನಗೆ ಯಾವ ಕಾರಣವೂ ಇಲ್ಲ. ಹೊರಡುತ್ತಿದ್ದಂತೆ ಯಾರೋ ದಾರಿಯಲ್ಲಿ ಆಹಾರ ಬೇಕಲ್ಲಾ ಎಂದು ನೆನಪಿಸಿದರು. ಮೂರು ನಾಲ್ಕು ದಿನದ ಪ್ರಯಾಣ, ಎಲ್ಲಿ ಏನು ಸಿಗುತ್ತದೋ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಸರಿ ಕಾರನ್ನು ನಿಲ್ಲಿಸಿದರು. ಆದರೆ ಹಣ? ಸನ್ಮಾನ್ಯ ಯುದ್ಧ ಸಚಿವರ ಜೇಬು ಖಾಲಿ! ನೌಕಾದಳದ ಸಚಿವರಲ್ಲೂ ಬಿಡಿಕಾಸಿಲ್ಲ! ಕಡೆಗೆ ನನ್ನ ಗೆಳೆಯನೇ ಒಂದಿಷ್ಟು ಆಹಾರವನ್ನು ಕೊಂಡುಕೊಂಡನಂತೆ.

ಆಯಿತು. ನೆವ್‌ಸ್ಕಿ ರಾಜಮಾರ್ಗಕ್ಕೆ ಪ್ರವೇಶಿಸುತ್ತಿದ್ದಂತೆ ಇನ್ನೊಂದು ಸಮಸ್ಯೆ ಎದುರಾಯಿತು. ಕಾರಿನ ಟೈರು ಪಂಕ್ಚರ್ ಆಯಿತು. ಆಂಟೊನೊವ್ "ಏನು ಮಾಡುವುದು" ಎಂದು ಕೇಳಿದ.

"ಯಾವುದಾದರೂ ಇಂಥದೇ ವಾಹನವನ್ನು ನಿಲ್ಲಿಸಿ, ಆಜ್ಞೆ ಮಾಡಿ ಕೈವಶ ಮಾಡಿಕೋ" ಎಂದ ಡೈಬೆಂಕೊ. ರಿವಾಲ್ವರ್ ಆಡಿಸುತ್ತಾ ರಸ್ತೆಯ ಮಧ್ಯೆ ನಿಂತು ಆಂಟೊನೊವ್ ಬಂದ ವಾಹನವೊಂದನ್ನು ನಿಲ್ಲಿಸಲು ಯತ್ನಿಸಿದ. ಅದನ್ನು ಓಡಿಸುತ್ತಿದ್ದವನು ಒಬ್ಬ ಸಾಮಾನ್ಯ ಸೈನಿಕ.

ಆಂಟೊನೊವ್ "ವಾಹನವನ್ನು ಒಪ್ಪಿಸು" ಎಂದ.

ಚಾಲಕ "ಸಾಧ್ಯವಿಲ್ಲ, ಬಿಟ್ಟುಬಿಡು" ಎಂದ.

"ನಿಂಗೆ ನಾನು ಯಾರು ಅಂತ ಗೊತ್ತಾ?" ಎಂದು ಆಂಟೊನೊವ್ ಒಂದು ಕಾಗದ ತೆಗೆದು ತೋರಿಸಿದ. ಅದರಲ್ಲಿ ಆತನನ್ನು ರಷ್ಯಾದ ಎಲ್ಲಾ ಸೇನೆಗಳಿಗೂ ಮಹಾ ದಂಡನಾಯಕನನ್ನಾಗಿ ನೇಮಿಸಲಾಗಿದೆ ಎಂದು ಪ್ರಕಟಿಸಲಾಗಿತ್ತು. ಎಲ್ಲರೂ ಅವನನ್ನು ಪ್ರಶ್ನಾತೀತವಾಗಿ ಅನುಸರಿಸಬೇಕೆಂದೂ ಹೇಳಲಾಗಿತ್ತು. "ನೀನು ಸ್ವತಃ ದೇವರೇ ಆದರೂ ನನಗೆ ಲೆಕ್ಕಕ್ಕಿಲ್ಲ. ಇದು ಮೊದಲನೇ ಮೆಶಿನ್ ಗನ್ ರೆಜಿಮೆಂಟಿಗೆ ಸೇರಿದ್ದು. ನಾವು ನಮಗೆ ಬೇಕಾದ ಮದ್ದುಗುಂಡನ್ನು ಇದರಲ್ಲಿ ಒಯ್ತಾ ಇದೀವಿ..."

ವ್ಯವಸ್ಥೆ ಸರಿಯಾಗಿ ಸ್ಥಾಪಿತವಾಗದ, ಎಲ್ಲಾ ಅಯೋಮಯವಾಗಿದ್ದ ಅಂದಿನ ಕ್ರಾಂತಿಯ ಪರಿಸ್ಥಿತಿಯನ್ನು ಇಂಥ ಸನ್ನಿವೇಶಗಳು ಚೆನ್ನಾಗಿ ಚಿತ್ರಿಸುತ್ತವೆ ! ವಿನೋದಮಯವಾದರೂ ಇದೆಲ್ಲಾ ವಾಸ್ತವದಲ್ಲಿ ನಡೆದದ್ದು ! (ಅನು.)

ಅಷ್ಟರಲ್ಲಿ ಅಲ್ಲಿಗೆ ಹಳೆಯ ಟ್ಯಾಕ್ಸಿಕಾರ್ ಒಂದು ಬಂತು. ಅದರಿಂದ ಸಮಸ್ಯೆ ಪರಿಹಾರವಾಯಿತು. ಅದರ ಮೇಲೆ ಇಟಾಲಿಯನ್ ಧ್ವಜ ಹಾರುತ್ತಿತ್ತು. ತುರ್ತು ಸಂದರ್ಭಗಳಲ್ಲಿ ಸರ್ಕಾರದವರು ವಶಪಡಿಸಿಕೊಳ್ಳದಿರಲೆಂದು ಕೆಲವು ಖಾಸಗಿ ಟ್ಯಾಕ್ಸಿಗಳನ್ನು ವಿದೇಶೀ ರಾಯಭಾರಿ ಕಛೇರಿಗಳ ಹೆಸರಿನಲ್ಲಿ ಕೆಲವರು ನೋಂದಾಯಿಸಿಕೊಂಡಿರುತ್ತಿದ್ದರು. ಹೀಗಾಗಿ ಅದನ್ನು ನಿಲ್ಲಿಸಿ ನೋಡಿದಾಗ ಅದರಲ್ಲಿ ಬೆಲೆಬಾಳುವ ಉಡುಪು ಧರಿಸಿದ ಠೊಣಪ ನಾಗರಿಕನೊಬ್ಬ ಕುಳಿತಿದ್ದ. ಅವನನ್ನು ಕೆಳಗಿಳಿಸಿ, ಕಾರನ್ನು ವಶಕ್ಕೆ ತೆಗೆದುಕೊಂಡು ಈ ತಂಡ ಪ್ರಯಾಣವನ್ನು ಮುಂದುವರೆಸಿತು.

ನರ್ವ್‌ಸ್ಕಯಾ ಜ಼ಸ್ತವಾ ಎಂಬಲ್ಲಿಗೆ, ಹತ್ತು ಮೈಲಿಯಾಚೆ ಬಂದು ಆಂಟೊನೊವ್ ಅಲ್ಲಿನ ರೆಡ್‌ಗಾರ್ಡ್‌ಗಳ ಕಮಾಂಡಂಟ್‌ನನ್ನು ಕರೆಸಿಕೊಂಡ. ಅತ ಆಂಟೊನೊವ್‌ಗೆ ಹೊರವಲಯದಲ್ಲಿ ನಡೆಯುತ್ತಿದ್ದ ಕಂದಕದ ಅಗೆತ ಮತ್ತಿತರ ರಕ್ಷಣಾತ್ಮಕ ಸಿದ್ಧತೆಗಳನ್ನು ತೋರಿಸಿದ. ಸೈನಿಕರು ಉತ್ಸಾಹದಿಂದಿದ್ದಾರೆಂದೂ, ಎಲ್ಲಾ ಚೆನ್ನಾಗಿದೆಯೆಂದೂ ಆದರೆ ಮದ್ದು ಗುಂಡುಗಳೇ ಇಲ್ಲವೆಂದೂ ಹೇಳಿದ. ಆಂಟೊನೊವ್ ಅದಕ್ಕೆ ವ್ಯವಸ್ಥೆ ಮಾಡುವುದಾಗಿ ನುಡಿದನಂತೆ. ಅದಕ್ಕಾಗಿ ಆಜ್ಞೆ ಬರೆದುಕೊಡಲು ಹೊರಟರೆ ಅವನಲ್ಲಿಯೂ, ಅವನ ಸಂಗಾತಿಗಳಲ್ಲಿಯೂ ಯಾರ ಬಳಿಯೂ ಒಂದು ತುಂಡು ಕಾಗದವೂ ಇರಲಿಲ್ಲ. ಪೆನ್ನೂ ಇರಲಿಲ್ಲ. ಕಡೆಗೆ ನನ್ನ ಸ್ನೇಹಿತನೇ ಎಲ್ಲವನ್ನೂ ಒದಗಿಸಿದನಂತೆ.

* * *

ಇನ್ನು ನಾವು ಹಿಂದೆ ಉಳಿದಿದ್ದ ಪತ್ರಕರ್ತ ಗೆಳೆಯರು ರಣಾಂಗಣವನ್ನು ನೋಡಿ ಬರೋಣ ಎಂದು ತ್ಸಾರ್‌ಸ್ಕೊಯೆ ಸೆಲೊ ನಿಲ್ದಾಣಕ್ಕೆ ಹೊರಟೆವು. ನೆವ್‌ಸ್ಕಿಯಲ್ಲಿ ಹೋಗುತ್ತಿದ್ದಾಗ ರೆಡ್‌ಗಾರ್ಡ್ಸ್ ಸಾಲುಸಾಲಾಗಿ ಹೋಗುತ್ತಿದ್ದರು. ಎಲ್ಲರ ಕೈಲೂ ಬಂದೂಕುಗಳಿದ್ದವು. ಚಳಿಗಾಲದ ಮಬ್ಬು ಸಂಜೆ ಕವಿಯುತ್ತಿತ್ತು. ಒಂದು ಕೆಂಪು ಬಾವುಟದ ಮೇಲೆ ಒಡ್ಡೊಡ್ಡಾಗಿ 'ಜಮೀನು ಮತ್ತು ಶಾಂತಿ' ಎಂದು ಬರೆಯಲಾಗಿತ್ತು. ಎಲ್ಲಾ ಚಿಕ್ಕವರು. ಅವರ ಮುಖದ ಮೇಲೆ ತಾವು ಸಾಯಬಹುದೆಂಬ ತಿಳಿವಳಿಕೆ ಅಚ್ಚೊತ್ತಿತ್ತು. ಅರ್ಧ ಭಯ, ಅರ್ಧ ಸಮರೋತ್ಸಾಹ. ಆದರೆ ರಸ್ತೆ ಬದಿಯಲ್ಲಿ ನಿಂತಿದ್ದಂಥ ರಾಜಧಾನಿಯ ಮುಖ್ಯಬೀದಿಯ ಜನರಲ್ಲಿ ಅವರ ಬಗ್ಗೆ ದ್ವೇಷವೇ ಕಾಣುತ್ತಿತ್ತು.

ರೈಲ್ವೆ ನಿಲ್ದಾಣದಲ್ಲಿ ಕೆರೆನ್‌ಸ್ಕಿ ಎಲ್ಲಿದ್ದಾನೆ, ರಣಾಂಗಣ ವಾಸ್ತವವಾಗಿ ಎಲ್ಲಿದೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ರೈಲುಗಳಂತೂ ತ್ಸಾರ್‌ಸ್ಕೊಯೆಯಿಂದ ಆಚೆ ಹೋಗುತ್ತಿರಲಿಲ್ಲ.

ರೈಲಿನಲ್ಲಿ ನಮ್ಮ ಬೋಗಿಯ ತುಂಬ ಮನೆಗೆ ಹೋಗುವ ಜನ, ಹಳ್ಳಿಯ ಜನ ಸಾಮಾನು ಸರಂಜಾಮುಗಳೊಂದಿಗೆ ತುಂಬಿದ್ದರು. ಬೋಲ್ಶೆವಿಕ್ ಬಂಡಾಯದ ಬಗ್ಗೆ ಮಾತು ನಡೆಯುತ್ತಿದ್ದರೂ ಸಹ ಇಡೀ ರಷ್ಯಾವೇ ಇಬ್ಭಾಗವಾಗುವಂಥ ಅಂತರ್ಯುದ್ಧ ಆರಂಭವಾಗಿದೆ ಎನ್ನುವಂಥ ವಾತಾವರಣ ಅಲ್ಲಿರಲಿಲ್ಲ. ಕಿಟಕಿಯಲ್ಲಿ ನೋಡಿದರೆ ಕೆಸರಿನ ರಸ್ತೆಗಳಲ್ಲಿ ರಾಜಧಾನಿಯತ್ತ ಹೋಗುತ್ತಿದ್ದದ್ದು ಕಾಣಿಸಿತು. ಇನ್ನೊಂದು ಕಡೆ ಸೈನಿಕರ ರೈಲು ನಿಂತಿದ್ದು, ಅವರು ಕೆಳಗಿಳಿದು ಬೆಂಕಿ ಹಾಕಿಕೊಂಡು ಮೈ ಕಾಯಿಸಿಕೊಳ್ಳುತ್ತಿದ್ದರು.

ತ್ಸಾರ್‌ಸ್ಕೊಯೆ ಸೆಲೋನಲ್ಲಿ ನಾವು ಇಳಿದಾಗ ನಿಲ್ದಾಣ ಖಾಲಿಯಾಗಿತ್ತು. ಕೆಲವು ಸೈನಿಕರು ಗುಂಪಾಗಿ ನಿಂತು ಗ್ಯಾಟ್‌ಚಿನಾ ಊರಿನ ಕಡೆಗೆ ಆತಂಕದಿಂದ ನೋಡುತ್ತಿದ್ದರು. 'ನೀವು ಯಾರ ಕಡೆ' ಎಂದು ಅವರನ್ನು ಕೇಳಿದೆವು. ಅವರು "ನಮಗೆ ಯಾವುದು ಸರಿಯೋ ಚೆನ್ನಾಗಿ ಗೊತ್ತಿಲ್ಲ. ಕೆರೆನ್‌ಸ್ಕಿಯಂತೂ ಯುದ್ಧ ಎಬ್ಬಿಸುತ್ತಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ರಷ್ಯನರು, ರಷ್ಯನರನ್ನೇ ಹೊಡೆದುಹಾಕಬೇಕಿರುವುದು ಸರಿ ಎನಿಸದು" ಎಂದ ಒಬ್ಬ ಸೈನಿಕ.

ನಿಲ್ದಾಣದ ಕಮಾಂಡೆಂಟ್‌ನ ಕಛೇರಿಗೆ ಹೋದೆವು. ಅಲ್ಲೊಬ್ಬ ದೊಡ್ಡ ಗಾತ್ರದ, ಖುಷಿಯಾಗಿದ್ದ ಸೈನಿಕನಿದ್ದ. ಅವನು ಸೋವಿಯತ್‌ಗಳ ಪರವೇ ಇರುವವನು. ಆದರೆ ಒಂದು ರೀತಿ ದಿಕ್ಕೆಟ್ಟಿದ್ದ. "ಒಬ್ಬ ಕಮಿಸಾರ್ ಬಂದಿದ್ದರು. ಆದರೆ ಕೊಸ್ಸಾಕರು ಬಂದಾಗ ಹೊರಟುಹೋದರು" ಎಂದ.

"ಹಾಗಿದ್ದರೆ ಕೊಸ್ಸಾಕರು ಬಂದಿದ್ದಾರೆಯೆ ?"

"ಇನ್ನೂರು ಮುನ್ನೂರು ಜನಗಳನ್ನು ಹಿಡಕೊಂಡು ಹೋದ್ರು. ಇಪ್ಪತ್ತೈದು ಜನಾನ ಸಾಯಿಸಿದ್ರು."

"ಈಗ ಕೊಸ್ಸಾಕರು ಎಲ್ಲಿದ್ದಾರೆ?"

ಅವನು ಅಸ್ಪಷ್ಟವಾಗಿ ಪಶ್ಚಿಮದ ಕಡೆಗೆ ತೋರಿಸುತ್ತಾ "ಇಲ್ಲಿಯವರೆಗೂ ಬಂದಿಲ್ಲ" ಎಂದ.

ನಾವು ನಿಲ್ದಾಣದಲ್ಲಿಯೇ ಊಟ ಮಾಡಿದೆವು. ಪೆತ್ರೋಗ್ರಾಡ್‌ನಲ್ಲಿ ಸಿಗುತ್ತಿದ್ದುದಕ್ಕಿಂತ ಅಗ್ಗವಾದ, ರುಚಿಯಾದ ಊಟ. ಅಲ್ಲಿ ಸಿಕ್ಕಿದ ಫ್ರೆಂಚ್ ಅಧಿಕಾರಿಯೊಬ್ಬ ಗ್ಯಾಟ್‌ಚಿನಾದಿಂದ ಬಂದಿದ್ದವನು; ಅದಿನ್ನೂ ಕೆರೆನ್‌ಸ್ಕಿಯ ಕೈಯಲ್ಲೇ ಇದೆ ಎಂದ.

ನಾವು ಊರಿನತ್ತ ಹೊರಟೆವು. ರೈಲ್ವೇ ನಿಲ್ದಾಣದ ದ್ವಾರದಲ್ಲಿ ಇಬ್ಬರು ಸೈನಿಕರು ನಿಂತಿದ್ದರು. ಅವರ ಬಂದೂಕುಗಳಿಗೆ ಬಯೊನೆಟ್ ಸಿಕ್ಕಿಸಲಾಗಿತ್ತು. ಅವರ ಸುತ್ತ ಸುಮಾರು ನೂರು ಜನ ಸೇರಿ ಅವರೊಂದಿಗೆ ವಾದಿಸುತ್ತ, ಬಯ್ಗುಳಗಳ ಸುರಿಮಳೆ ಮಾಡುತ್ತಿದ್ದರು. ಗುಂಪಿನಲ್ಲಿದ್ದವರಾದರೂ ಯಾರು? ವರ್ತಕರು, ಸರ್ಕಾರಿ ಅಧಿಕಾರಿಗಳು, ವಿದ್ಯಾರ್ಥಿಗಳು. ಸೈನಿಕರಿಗೆ ಅವರ ಮಾತಿನಿಂದ ನೋವಾಗುತ್ತಿತ್ತು. ಅನ್ಯಾಯವಾಗಿ ಶಿಕ್ಷೆಗೊಳಗಾದ ವಿದ್ಯಾರ್ಥಿಗಳಂತೆ ನಿಂತಿದ್ದರು. ದಾಳಿಯ ನೇತೃತ್ವ ವಹಿಸಿದ್ದವನು ಒಬ್ಬ ದುರಹಂಕಾರಿ ವಿದ್ಯಾರ್ಥಿ. ಅವನು ದರ್ಪದಿಂದ ಕೇಳಿದ,

"ನಿಮ್ಮ ಸೋದರರ ಮೇಲೆ ಗುಂಡು ಹಾರಿಸುತ್ತಾ ನೀವು ದ್ರೋಹಿಗಳ, ಕೊಲೆಗಡುಕರ ಏಜೆಂಟರಾಗುತ್ತಿದ್ದೀರಿ ಎಂಬ ಅರಿವು ನಿಮಗಿದೆಯೇ?"

ಸೈನಿಕ ತುಂಬ ಪ್ರಾಮಾಣಿಕತೆಯಿಂದ, ಶ್ರದ್ಧೆಯಿಂದ ಉತ್ತರಿಸಿದ : "ನೋಡಣ್ಣ, ನಿನಗೆ ಅರ್ಥ ಆಗ್ತಿಲ್ಲ. ಇಲ್ಲಿ ಎರಡು ವರ್ಗಗಳಿವೆ. ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗ..."

ಗರ್ವದಿಂದ ವಿದ್ಯಾರ್ಥಿ ಬಾಯಿ ಹಾಕಿದ : "ನಿನ್ನ ದಡ್ಡ ಮಾತು ನಂಗೂ ಗೊತ್ತು. ನಿಮ್ಮಂಥ ಅಜ್ಞಾನಿ ರೈತರು ಎಲ್ಲೋ ಯಾರೋ ಹೇಳಿದ ಮಂತ್ರಗಳನ್ನು ಕೇಳಿ ಇಲ್ಲಿ ಗಿಳಿಪಾಠ ಒಪ್ಪಿಸ್ತೀರ". ಜನ ನಗಲಾರಂಭಿಸಿದರು. "ನಾನು ಮಾರ್ಕ್ಸ್‌ವಾದವನ್ನೇ ಓದ್ತಿರೋನು, ಹೇಳ್ತೀನಿ ಕೇಳು; ನೀವು ಹೇಳ್ತಾ ಇರೋ ಸಮಾಜವಾದ ಇದೆಯಲ್ಲ ಅದು ಶುದ್ಧ ಜರ್ಮನ್ ಅರಾಜಕತಾವಾದ."

ಸೈನಿಕ ಮುಂದುವರೆಸಿ "ಸರಿ, ನಂಗೂ ಗೊತ್ತು, ನೀವು ವಿದ್ಯಾವಂತರು, ನಾವು ಭೋಳೆ ಜನ. ಆದರೆ ನನಗನ್ನಿಸೋದು..."

ವಿದ್ಯಾರ್ಥಿ ಮತ್ತೆ ಧಿಮಾಕಿನಿಂದ ಕೇಳಿದ : "ಪ್ರಾಯಶಃ ನೀವು ಆ ಲೆನಿನ್‌ನನ್ನು ಕಾರ್ಮಿಕರ ನಿಜವಾದ ಸ್ನೇಹಿತ ಅಂತ ಅಂದ್ಕೊಂಡಿದಿರೇನೋ!"

ಕಷ್ಟದಿಂದಲೇ ಸೈನಿಕ ಹೇಳಿದ : "ಹೌದು, ಹಾಗೇ ಅಂದ್ಕೊಂಡಿದೀವಿ."

"ಲೆನಿನ್‌ನನ್ನು ಕಾರ್‌ನಲ್ಲಿ ಗುಪ್ತವಾಗಿ ಜರ್ಮನಿಯಿಂದ ಕಳಿಸಿದ್ರು. ಲೆನಿನ್ ಜರ್ಮನರಿಂದ ಹಣ ತಗೊಂಡ. ಇದೆಲ್ಲಾ ನಿಮಗೆ ಗೊತ್ತಾ?"

ಸೈನಿಕ ಪಟ್ಟು ಬಿಡದೆ ಉತ್ತರಿಸಿದ : "ಅದೆಲ್ಲಾ ನನಗೆ ಗೊತ್ತಿಲ್ಲ. ಆತ ಹೇಳೋದು ಮಾತ್ರ ನನಗೆ, ನನ್ನಂಥ ಸರಳ ಜನಕ್ಕೆ, ಇಷ್ಟ ಆಗುತ್ತೆ. ಈಗ ನೋಡಿ ಎರಡು ವರ್ಗಗಳಿವೆ, ಒಂದು ಬೂರ್ಶ್ವಾ ವರ್ಗ, ಇನ್ನೊಂದು ಕಾರ್ಮಿಕ ವರ್ಗ..."

ವಿದ್ಯಾರ್ಥಿ ಬೈಯುತ್ತಲೇ ಹೋದ : "ನೀನೊಬ್ಬ ಮೂರ್ಖ ಕಣೋ ಗೆಳೆಯ. ನೀನು ಇನ್ನೂ ಝಾರ್ ಚಕ್ರವರ್ತೀನ ದೇವರು ಕಾಪಾಡಲಿ ಅಂತ ಪ್ರಾರ್ಥನೆ ಮಾಡ್ತಾ, ಕ್ರಾಂತಿಕಾರಿಗಳನ್ನು ಹೊಡೆದು ಹಾಕ್ತಿರೋವಾಗ್ಲೇ ನಾನು ಕ್ರಾಂತಿಕಾರಿಯಾಗಿದ್ದೆ. ಎರಡು ವರ್ಷ ಶ್ಲೂಸೆಲ್‌ಬರ್ಗ್ ಅನ್ನೋ ಊರಿನಲ್ಲಿದ್ದೆ. ನನ್ನ ಹೆಸರು ವ್ಯಾಸಿಲಿ ಜಿಯೊರ್ಗೆವಿಚ್ ಪಾನ್ಯಿನ್. ಕೇಳಿದ್ದೆಯಾ ನನ್ನ ಹೆಸರು?"

ಸೈನಿಕ ವಿನಯದಿಂದ ಹೇಳಿದ : "ಇಲ್ಲ ಸ್ವಾಮಿ. ನಾವು ವಿದ್ಯಾ ಬುದ್ಧಿ ಇಲ್ಲದೋರು, ತಾವು ಮಹಾವೀರರಿರಬೇಕು."

ಯಾವ ಹಿಂಜರಿಕೆಯೂ ಇಲ್ಲದೆ ಆ ವಿದ್ಯಾರ್ಥಿ "ಹೌದಯ್ಯಾ" ಎಂದ ! "ನಾನು ಬೋಲ್ಶೆವಿಕ್ ವಿರೋಧಿ. ಅವರು ರಷ್ಯಾನ, ನಮ್ಮ ಮುಕ್ತ ಕ್ರಾಂತಿಯನ್ನು, ಹಾಳುಮಾಡ್ತಾ ಇದಾರೆ. ಏನು ಹೇಳ್ತಿಯಾ ಅದಕ್ಕೇ?"

ಸೈನಿಕ ತಲೆಕರೆದುಕೊಂಡು, ಬೌದ್ಧಿಕ ಕಸರತ್ತಿನಿಂದ ಸುಸ್ತಾದವನಂತೆ "ನನಗನ್ನಿಸೋದು ವಿಷಯ ಸರಳವಾಗಿದೆ. ನಾನು ವಿದ್ಯಾವಂತ ಅಲ್ಲ ಬಿಡಿ. ಇರೋದು ಎರಡೇ ವರ್ಗಗಳು : ಬೂರ್ಶ್ವಾಗಳು, ಶ್ರಮಜೀವಿಗಳು ಅಂತ ನನಗನ್ನಿಸುತ್ತೆ..."

"ಮತ್ತೆ ಮಂತ್ರ ಹೇಳೋಕೆ ಶುರು ಮಾಡ್ದೇನೋ!" ಎಂದು ವಿದ್ಯಾರ್ಥಿ ಕಿರುಚಿಕೊಂಡ.

"... ಅದೇ ಎರಡೇ ವರ್ಗ. ಈ ಕಡೆ ಇಲ್ದೇ ಇದ್ದೋರು ಆ ಕಡೆಗೆ ಹೋಗೇ ಹೋಗ್ತಾರೆ..." ಆ ಮಹಾನ್ ಮಾರ್ಕ್ಸ್‌ವಾದಿ ವಿದ್ಯಾರ್ಥಿ ಹತಾಶನಾಗಿರಬೇಕು!

ನಾವು ಅಲ್ಲಿಂದ ರಸ್ತೆಯಲ್ಲಿ ನಡೆಯುತ್ತ ಹೊರಟೆವು. ದೀಪಗಳು ಕಡಿಮೆ, ಜನರಿಲ್ಲ. ಕ್ಷೌರಿಕರ ಅಂಗಡಿಗಳು ಮಾತ್ರ ಕಿಕ್ಕಿರಿದಿದ್ದವು. ಹಾಗೆಯೇ ಸಾರ್ವಜನಿಕ ಸ್ನಾನಗೃಹಗಳೂ ಸಹ. ಏಕೆಂದರೆ ಅದು ಶನಿವಾರ ರಾತ್ರಿ – ಇಡೀ ರಷ್ಯಾ ಸ್ನಾನ ಮಾಡಿ ಸುಗಂಧ ಪೂಸಿಕೊಳ್ಳುವ ದಿನ. ಸೋವಿಯತ್ ಸೈನಿಕರೂ, ಕೊಸ್ಸಾಕರು ಅಲ್ಲಿ ಒಟ್ಟಿಗೇ ಶುಚಿಯಾಗಿರುತ್ತಾರೆ ಎಂಬುದರಲ್ಲಿ ನನಗೆ ಸಂದೇಹವೇ ಇಲ್ಲ! ಅಂದಿನ ರಷ್ಯಾದ ವೈಚಿತ್ರ್ಯಗಳು ಹಾಗಿದ್ದವು.

ನಮಗೆ ಸೋವಿಯತ್ ಕಛೇರಿಯ ದಾರಿಯನ್ನು ಒಬ್ಬ ಬೆದರಿದ್ದ ಪಾದ್ರಿ ತೋರಿಸಿದ. ಕಿಟಕಿಗಳಲ್ಲಿ ಬೆಳಕಿರಲಿಲ್ಲ. ಬಾಗಿಲಿಗೆ ಬೀಗ ಜಡಿದಿತ್ತು. ಅಲ್ಲೇ ಓಡಾಡಿಕೊಂಡಿದ್ದ ಸೈನಿಕನೊಬ್ಬ ನಮ್ಮನ್ನು ಸಂದೇಹದಿಂದ ನೋಡುತ್ತ "ಸೋವಿಯತ್‌ಗಳು ಹೊರಟು ಹೋಗಿ ಎರಡು ದಿನಗಳಾಯ್ತು" ಎಂದ. ಸ್ವಲ್ಪ ದೂರದಲ್ಲಿ ಒಂದು ಸಭಾಂಗಣ. ಅದರಲ್ಲಿ ಭಾನುವಾರದ ಮನರಂಜನಾ ಕಾರ್ಯಕ್ರಮಕ್ಕೆ ಸಿದ್ಧತೆಗಳು ನಡೆಯುತ್ತಿದ್ದವು.

ನಾವು ನಡೆಯುತ್ತಾ ರಾಜರ ಅರಮನೆಗಳತ್ತ ಬಂದೆವು. ಅಲ್ಲಿನ ಮನೋಹರ ಕಾರಂಜಿಗಳನ್ನೆಲ್ಲಾ ನೋಡುತ್ತ ಬರುತ್ತಿರುವಾಗ ನಮ್ಮನ್ನು ಯರೋ ಗಮನಿಸುತ್ತಿದ್ದಾರೆ ಎನ್ನಿಸಿತು. ತಲೆ ಎತ್ತಿ ನೋಡಿದರೆ ತಾರಸಿಯಿಂದ ಒಂದು ಗುಂಪು ಸೈನಿಕರು ನಮ್ಮತ್ತಲೇ ಸಂದೇಹದಿಂದ ನೋಡುತ್ತಿದ್ದರು. ಅವರು ಯಾರು ಎಂದು ನಾನು ವಿಚಾರಿಸಿದೆ. "ನಾವು ರಕ್ಷಣಾದಳದವರು" ಎಂದ ಒಬ್ಬ. ಅವರೆಲ್ಲಾ ಖಿನ್ನರಾಗಿ ಕಂಡರು. ವಾರಗಟ್ಟಲೆ ಹಗಲು ರಾತ್ರಿ ನಡೆವ ವಾಗ್ವಾದ, ಚರ್ಚೆಗಳ ನಂತರ ಹಾಗಾಗುವುದು ಸಹಜವೇ.

"ನೀವು ಕೆರೆನ್‌ಸ್ಕಿ ಸೈನ್ಯದವರೋ, ಸೋವಿಯತ್ ಕಡೆಯವರೋ?" ನಾನು ಕೇಳಿದೆ. ಒಂದು ಕ್ಷಣ ಮೌನ. ಅವರೆಲ್ಲಾ ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿಕೊಂಡರು. ಕಡೆಗೆ ಒಬ್ಬ 'ನಾವು ತಟಸ್ಥರು' ಎಂದ.

ನಾವು ಎಕಟೆರಿನಾ ಅರಮನೆಯಲ್ಲಿ ಕೇಂದ್ರ ಕಛೇರಿಯನ್ನು ಹುಡುಕುತ್ತಾ ಹೋದೆವು. ಅಲ್ಲಿ ಒಂದು ಗುಂಪು ಅಧಿಕಾರಿಗಳು ಆತಂಕದಲ್ಲಿ ಚರ್ಚಿಸುತ್ತಾ ನಿಂತಿದ್ದರು. ನಿದ್ದೆಯಿಲ್ಲದೆ ಅವರ ಮುಖಗಳು ಬಿಳಿಚಿಕೊಂಡಿದ್ದವು. ಬಿಳಿಗಡ್ಡದ ಹಿರಿಯನೊಬ್ಬನನ್ನು ಕರ್ನಲ್ ಎಂದು ಪರಿಚಯಿಸಿದರು. ನಾನು ಆತನಿಗೆ ನಮ್ಮಲ್ಲಿದ್ದ ಬೋಲ್ಶೆವಿಕರು ಕೊಟ್ಟ ಅನುಮತಿ ಪತ್ರಗಳನ್ನು ತೋರಿಸಿದೆ.

ಆತ ತುಂಬ ಆಶ್ಚರ್ಯದಿಂದ "ನೀವು ಇಲ್ಲಿಯವರೆಗೂ ಬದುಕಿ ಬಂದಿರೋದೇ ಹೆಚ್ಚು. ಊರು ಅಪಾಯಕಾರಿಯಾಗಿದೆ. ಬೆಳಿಗ್ಗೆ ಒಂದು ಯುದ್ಧ ಆಯ್ತು. ನಾಳೆ ಬೆಳಿಗ್ಗೆ ಸಹ ಆಗುತ್ತೆ. ಕೆರೆನ್‌ಸ್ಕಿ ಬೆಳಿಗ್ಗೆ ಎಂಟು ಘಂಟೆಗೆ ಬರ್ತಾರೆ" ಎಂದ.

"ಕೊಸ್ಸಾಕರು ಎಲ್ಲಿದ್ದಾರೆ?"

"ಒಂದು ಮೈಲಿ ದೂರದಲ್ಲಿ."

"ನೀವು ಅವರಿಂದ ನಗರವನ್ನು ರಕ್ಷಿಸಿಕೊಳ್ತೀರಾ?"

ಅವನು ನಕ್ಕು, "ಇಲ್ಲಪ್ಪಾ, ನಾವು ಕೆರೆನ್‌ಸ್ಕಿಯವರು ಬರೋವರೆಗೂ ನಗರವನ್ನು ನಮ್ಮ ಕೈಲಿ ಇಟ್ಕೊಂಡಿರ್ತೀವಿ" ಎಂದ. ನನಗೆ ಎದೆ ಧಸಕ್ಕೆಂದಿತು. ನಮ್ಮ ಅನುಮತಿ ಪತ್ರಗಳ ಪ್ರಕಾರ ನಾವು ಕಟ್ಟಾ ಕ್ರಾಂತಿಕಾರಿಗಳು ಅಂತ ಆತನಿಗೆ ಗೊತ್ತಾಗಿರುತ್ತೆ. ಆಮೇಲೆ ಅವನು ಮುಜುಗರದ ಪರಿಸ್ಥಿತಿಯನ್ನು ಕೊನೆಗಾಣಿಸಿ, ಗಂಟಲು ಸರಿಪಡಿಸಿಕೊಂಡು "ನೋಡಿ,

ನಿಮ್ಮ ಪಾಸುಗಳಿಂದ ನಿಮಗೆ ಅಪಾಯ ಜಾಸ್ತಿ. ನಾನು ಬೇರೆ ಪಾಸುಗಳನ್ನು ಕೊಡ್ತೀನಿ, ಬೆಳಿಗ್ಗೆ ಏಳು ಗಂಟೆಗೆ. ಇವತ್ತು ಬೇಕಿದ್ರೆ ಅಧಿಕಾರಿಗಳ ಕೋಣೇಲಿ ತಂಗೋ ವ್ಯವಸ್ಥೆ ಮಾಡ್ತೀನಿ. ಯುದ್ಧ ನೋಡೋ ಹಾಗಿದ್ರೆ ನೋಡಿ" ಎಂದ.

"ಸರಿ, ಹಾಗಿದ್ರೆ ತಾವು ಕೆರೆನ್‌ಸ್ಕಿಯವರ ಕಡೆಗೆ ಅಂತ ಆಯ್ತು" ನಾವು ಕೇಳಿದೆವು. ಕರ್ನಲ್ ಹಿಂಜರಿಯಲಾರಂಭಿಸಿದ. "ನೋಡಿ ಸೈನಿಕರೆಲ್ಲಾ ಬೋಲ್ಶೆವಿಕರ ಕಡೆ, ಅವರು ಫಿರಂಗೀನೂ ತಗೊಂಡು ಪೆತ್ರೊಗ್ರಾಡ್ ಕಡೆಗೆ ಹೋದ್ರು, ಕೆಲವು ಸೈನಿಕರು ಯುದ್ಧ ಬೇಡ ಅಂತ ಸುಮ್ಮನಿದ್ದಾರೆ. ಒಟ್ಟಿನಲ್ಲಿ ಕೆರೆನ್‌ಸ್ಕಿ ಕಡೆಗೆ ಯಾರೂ ಇಲ್ಲ. ಅಧಿಕಾರಿಗಳಲ್ಲಿ ಹೆಚ್ಚು ಜನ ಎಲ್ಲಾ ಕೆರೆನ್‌ಸ್ಕಿ ಕಡೆಗೆ, ಕೆಲವರು ಎಲ್ಲಾ ಬಿಟ್ಟು ಹೋದ್ರು, ಒಟ್ಟಿನಲ್ಲಿ ನಮ್ಮ ಪರಿಸ್ಥಿತಿ ಕಷ್ಟದ್ದು..." ಅಲ್ಲಿ ಯುದ್ಧದ ಸಾಧ್ಯತೆ ಇದೆ ಎಂದೇ ನಮಗನ್ನಿಸಲಿಲ್ಲ. ಕರ್ನಲ್ ತನ್ನ ತಾಯಿಯನ್ನು ಬಿಟ್ಟು ಮೂರು ವರುಷ ಇರಬೇಕಾಗಿ ಬಂದದ್ದಕ್ಕೆ ನಮ್ಮೊಡನೆ ಪರಿತಪಿಸುತ್ತಾ, ನಮ್ಮನ್ನು ಜಾಗ್ರತೆಯಾಗಿ ರೈಲು ನಿಲ್ದಾಣಕ್ಕೆ ತಲುಪಿಸಲು ಜೊತೆಗೆ ಆರ್ಡರ್ಲಿಯನ್ನು ಕಳಿಸಿದ.

ನಾವು ರೈಲಿನಲ್ಲಿ ಕತ್ತಲಿನ ಚಳಿಯಲ್ಲಿ ಪೆತ್ರೋಗ್ರಾಡ್‌ಗೆ ಪ್ರಯಾಣ ಬೆಳೆಸಿದವು. ದಾರಿಯುದ್ದಕ್ಕೂ ಬೆಂಕಿಯ ಬಳಿ ಕುಳಿತ ಸೈನಿಕರು, ಆರ್ಮರ್ಡ್ ಕಾರ್‌ಗಳು ಕಾಣುತ್ತಿದ್ದವು. ಆ ಸಮಸ್ಯೆ ತುಂಬಿದ ರಾತ್ರಿಯುದ್ದಕ್ಕೂ ಸೈನಿಕರು, ರೆಡ್‌ಗಾರ್ಡ್‌ಗಳು ನಾಯಕರಿಲ್ಲದೆ ಓಡಾಡಿಕೊಂಡಿದ್ದರು. ಅದೇ ಸಮಯದಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಮಿಸಾರ್‌ಗಳು ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ಧಾವಿಸುತ್ತಾ ಶತಾಯಗತಾಯ ಒಂದು ರಕ್ಷಣಾ ವ್ಯೂಹವನ್ನು ರಚಿಸಲೇಬೇಕೆಂದು ಅವಸರದಲ್ಲಿ ಧಾವಿಸಿಕೊಂಡಿದ್ದರು....

* * *

ನಾವು ರಾಜಧಾನಿಗೆ ವಾಪಸ್ ಬಂದಾಗ ಉದ್ವಿಗ್ನ ಸ್ಥಿತಿಯಲ್ಲಿದ್ದ ಜನ ದೊಡ್ಡ ಗುಂಪುಗಳಲ್ಲಿ ನೆವ್‌ಸ್ಕಿ ಮುಖ್ಯ ಬೀದಿಯಲ್ಲಿ ಓಡಾಡಿಕೊಂಡಿದ್ದರು. ಏನೋ ಘಟನೆ ಸಂಭವಿಸಲಿದೆ ಎನ್ನುವಂಥ ವಾತಾವರಣ, ವಾರ್ಸಾ ರೈಲ್ವೇ ನಿಲ್ದಾಣದಿಂದ ಫಿರಂಗಿಯ ಸದ್ದೂ ಕೇಳಿಸುತ್ತಿತ್ತು. ಯಂಕರ್ ಶಾಲೆಗಳಲ್ಲಿ ಬಿರುಸಿನ ಚಟುವಟಿಕೆ ಕಂಡುಬಂತು. ಡ್ಯೂಮಾದ ಸದಸ್ಯರು ಸೈನಿಕರ ಶಿಬಿರಗಳಿಗೆ ಹೋಗಿ ಬೋಲ್ಶೆವಿಕರ ಹಿಂಸೆಯ ಕತೆಗಳನ್ನು ಬಣ್ಣಿಸುತ್ತಾ ವಾದಿಸುತ್ತಿದ್ದರು, ಮನವಿ ಮಾಡಿಕೊಳ್ಳುತ್ತಿದ್ದರು. ಚಳಿಗಾಲದ ಅರಮನೆಯಲ್ಲಿ ಯಂಕರ್‌ಗಳನ್ನು ಕೊಂದರಂತೆ, ಮಹಿಳಾ ಸೈನಿಕರ ಮೇಲೆ ಅತ್ಯಾಚಾರ ಎಸಗಿದರಂತೆ, ಡ್ಯೂಮಾ ಎದುರಿಗೇ ಹುಡುಗಿಯೊಬ್ಬಳನ್ನು ಗುಂಡಿಟ್ಟು ಕೊಂದರಂತೆ... ಇತ್ಯಾದಿ. ಇನ್ನೊಂದು ಕಡೆ ಡ್ಯೂಮಾ ಸಭಾಂಗಣದಲ್ಲಿ ರಾಷ್ಟ್ರ ವಿಮೋಚನಾ ಸಮಿತಿಯು ವಿಶೇಷ ಅಧಿವೇಶನದಲ್ಲಿತ್ತು. ಸ್ಮೋಲ್ನಿಯಿಂದ ಓಡಿಸಲ್ಪಟ್ಟ ಪತ್ರಕರ್ತರೆಲ್ಲಾ ಇಲ್ಲಿ ಸೇರಿದ್ದರು, ತುಂಬ ಉತ್ಸಾಹದಿಂದಲೂ ಇದ್ದರು. ಅವರ ಪ್ರಕಾರ ತ್ಸಾರ್‌ಸ್ಕೊಯೆ ಆಗಲೇ ಕೆರೆನ್‌ಸ್ಕಿಯ ವಶವಾಗಿತ್ತು. ನಾವು ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿದರೆ ಯಾರೂ ನಂಬಲು ತಯಾರಿರಲಿಲ್ಲ. ಕೆರೆನ್‌ಸ್ಕಿ ಬೆಳಿಗ್ಗೆ ಬರಲಿದ್ದಾನೆ ಎಂದು ನಂಬಿ ಅವರೆಲ್ಲಾ ಆಗಲೇ ಅವನನ್ನು ಸ್ವಾಗತಿಸಲು ಸಮಿತಿಯೊಂದನ್ನು ಚುನಾಯಿಸಿಕೊಂಡಿದ್ದರು.

ಒಬ್ಬನಂತೂ ನಮಗೆ ಗುಟ್ಟಿನಲ್ಲಿ ರಾತ್ರಿ ಹನ್ನೆರಡು ಘಂಟೆಗೆ ಪ್ರತಿ ಕ್ರಾಂತಿ ಶುರುವಾಗಲಿದೆ ಎಂದು ಹೇಳಿದ. ಅವನು ಎಲ್ಲಾ ಯಂಕರ್ ತರುಣರು ಮತ್ತು ಆರೋಗ್ಯ

ಸುಧಾರಿಸಿಕೊಳ್ಳುತ್ತಿರುವ ಸೈನಿಕರು ದಂಗೆಗೆ ತಯಾರಾಗಿ, ವಿಮೋಚನಾ ಸಮಿತಿಯ ಕರೆಗೆ ಕಾಯಬೇಕೆಂದು ಘೋಷಿಸಿದ್ದ ಪತ್ರವೊಂದನ್ನು ತೋರಿಸಿದ. ಅದಕ್ಕೆ ಪ್ರತಿ ಕ್ರಾಂತಿಯ ನಾಯಕರ ಸಹಿಯೂ ಇತ್ತು. ಇನ್ನೊಂದು ವಿಮೋಚನಾ ಸಮಿತಿಯ ಘೋಷಣಾ ಪತ್ರವನ್ನೂ ಆತ ನಮಗೆ ತೋರಿಸಿದ. ಅದು ಪೆತ್ರೋಗ್ರಾಡಿನ ನಾಗರಿಕರಿಗೆ ಮಾಡಿಕೊಂಡ ಮನವಿ.

*ಪೆತ್ರೋಗ್ರಾಡಿನ ನಾಗರಿಕರೇ, ಸೈನಿಕರೇ, ಕಾರ್ಮಿಕರೇ, ಸಂಗಾತಿಗಳೇ ! ರಣಾಂಗಣದಲ್ಲಿ ಶಾಂತಿ ಮಂತ್ರ ಜಪಿಸುತ್ತಾ ಬೋಲ್ಶೆವಿಕರು ದೇಶದಲ್ಲಿ ಅಂತರ್ಯುದ್ಧವನ್ನು ಹಬ್ಬಿಸುತ್ತಿದ್ದಾರೆ. ಅವರ ಪ್ರಚೋದನಕಾರಿ ಮಾತಿಗೆ ಕಿವಿಗೊಡಬೇಡಿ. ಕಂದಕ ತೋಡುವುದು, ಅಡೆತಡೆ ನಿರ್ಮಿಸುವುದು ಬೇಡ. ಸೈನಿಕರೇ, ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ನಿಮ್ಮ ಸೇನಾ ಶಿಬಿರಗಳಿಗೆ ಹಿಂದಿರುಗಿರಿ.*

*ಸ್ವಾತಂತ್ರ್ಯ, ಭೂಮಿ, ಶಾಂತಿಗಳಿಗಾಗಿ ರಾಷ್ಟ್ರ ಮತ್ತು ಕ್ರಾಂತಿಯ ವಿಮೋಚನಾ ಸಮಿತಿಯನ್ನು ಬೆಂಬಲಿಸಿ !*

ನಾವು ಮತ್ತೆ ಡ್ಯೂಮಾದಿಂದ ಹೊರಟೆವು. ಒಂದು ರೆಡ್‌ಗಾರ್ಡ್‌ಗಳ ದಳ – ಎಲ್ಲಾ ಉಗ್ರ, ಉದ್ವಿಗ್ನ ಮುಖದವರು, ರಸ್ತೆಯಲ್ಲಿ ಒಂದು ಡಜನ್ ಖೈದಿಗಳನ್ನು ಕರೆದುಕೊಂಡು ಬರುತ್ತಿದ್ದರು. ಅವರು ಸ್ಥಳೀಯ ಕೊಸ್ಸಾಕ್ ಮಂಡಳಿಯ ಸದಸ್ಯರು. ಪ್ರತಿ ಕ್ರಾಂತಿಯನ್ನು ಸಂಘಟಿಸುವಾಗ ಸಿಕ್ಕಿಹಾಕಿಕೊಂಡಿದ್ದರು. ಇನ್ನೊಂದು ಕಡೆ ದೊಡ್ಡ ಪ್ರಕಟಣೆಗಳನ್ನು ಅಂಟಿಸುತ್ತಿದ್ದರು.

*ಈಗ ಸದ್ಯಕ್ಕೆ ಪೆತ್ರೋಗ್ರಾಡ್ ಮುತ್ತಿಗೆಯ ಸ್ಥಿತಿಯಲ್ಲಿದೆ. ರಸ್ತೆಯಲ್ಲಾಗಲೀ, ಬಹಿರಂಗ ಸ್ಥಳಗಳಲ್ಲಾಗಲೀ ಗುಂಪು ಸೇರುವುದು, ಸಭೆ ಮಾಡುವುದನ್ನು ನಿಷೇಧಿಸಲಾಗಿದೆ.*

*ಎನ್. ಪದ್‌ವೋಯ್‌ಸ್ಕಿ*

*ಅಧ್ಯಕ್ಷರು, ಮಿಲಿಟರಿ ಕ್ರಾಂತಿಕಾರಿ ಸಮಿತಿ*

ನಾವು ಮನೆ ತಲುಪುವ ವೇಳೆಗೆ ಇಡಿಯ ವಾತಾವರಣದಲ್ಲೇ ಗೊಂದಲ, ಗಲಿಬಿಲಿ ಇದೆ ಎನ್ನಿಸುತ್ತಿತ್ತು. ವಾಹನಗಳ ಸದ್ದು, ಕೂಗಾಟ, ದೂರದಲ್ಲಿ ಗುಂಡಿನ ಸಪ್ಪಳ, ನಗರ ಅಶಾಂತವಾಗಿ ಎಚ್ಚರದಿಂದಿತ್ತು, ಒದ್ದಾಡುತ್ತಿತ್ತು.

ಬೆಳಗಿನ ಜಾವದ ಮೊದಲ ಘಳಿಗೆಗಳಲ್ಲಿ ಯಂಕರ್‌ಗಳ ಒಂದು ಪಡೆ ಬೋಲ್ಶೆವಿಕ್ ಸೈನಿಕರಂತೆಯೇ ವೇಷ ಧರಿಸಿ, ಅವರ ಗುಪ್ತ ಸಂಜ್ಞೆಯನ್ನೇ ಉಪಯೋಗಿಸಿ ರಕ್ಷಣಾದಳಗಳು ಬದಲಾಗುವ ಘಳಿಗೆಯಲ್ಲಿ ದೂರವಾಣಿ ವಿನಿಮಯ ಕೇಂದ್ರವನ್ನು ಹಿಡಿದುಬಿಟ್ಟಿತು. ಯಾರಿಗೂ ಸಂದೇಹ ಕಂಡುಬರಲಿಲ್ಲ. ಕೆಲ ನಿಮಿಷಗಳ ನಂತರ ಅಲ್ಲಿಗೆ ತಪಾಸಣೆಗೆಂದು ಬಂದ ಆಂಟೋನೊವ್‌ನನ್ನು ಬಂಧಿಸಿ ಸಣ್ಣ ಕೋಣೆಯಲ್ಲಿ ಕೂಡಿಟ್ಟರು. ಬಿಡಿಸಿಕೊಳ್ಳಲು ಸೈನ್ಯ ಬಂದಾಗ ಗುಂಡಿನ ಕಾಳಗ ನಡೆದು ಹಲವರು ಸತ್ತುಹೋದರು.

ಪ್ರತಿ ಕ್ರಾಂತಿ ಶುರುವಾಗಿಬಿಟ್ಟಿತ್ತು...

# ಅಧ್ಯಾಯ – 8

# ಪ್ರತಿ ಕ್ರಾಂತಿ

ನವೆಂಬರ್ 11, ಭಾನುವಾರ.

ಕೊಸ್ಸಾಕರ ದಳದ ಮುಂದೆ ಬಿಳಿಯ ಕುದುರೆ ಏರಿ ಕೆರೆನ್‌ಸ್ಕಿ ಚರ್ಚ್‌ಗಳ ಗಂಟಾ ನಿನಾದದೊಂದಿಗೆ ತ್ಸಾರ್‌ಸ್ಕೊಯೆ ಸೆಲೋವನ್ನೇನೋ ಪ್ರವೇಶಿಸಿದ. ಅಲ್ಲಿ ಯುದ್ಧವೇನೂ ನಡೆಯಲಿಲ್ಲ. ಆದರೆ ಕೆರೆನ್‌ಸ್ಕಿ ಭಯಂಕರ ಪ್ರಮಾದ ಮಾಡಿಕೊಂಡ. ಬೆಳಿಗ್ಗೆ ಏಳು ಘಂಟೆಗೆ ಅವನು ಅಲ್ಲಿಯೇ ಮುಂಚಿನಿಂದಲೂ ನೆಲೆಸಿದ್ದ ತ್ಸಾರ್‌ಸ್ಕೊಯೆ ರೈಫಲ್ಸ್ ಎಂಬ ತುಕಡಿಗೆ ಆಯುಧಗಳನ್ನು ಕೆಳಗಿಡಿ ಎಂದು ಹೇಳಿಕಳಿಸಿದ. ಅವರು 'ಸಾಧ್ಯವಿಲ್ಲ, ನಾವು ತಟಸ್ಥರು' ಎಂದರು. ಕೆರೆನ್‌ಸ್ಕಿ 'ಹತ್ತು ನಿಮಿಷದಲ್ಲಿ ಹೇಳಿದ್ದನ್ನು ಮಾಡಿ' ಎಂದ. ಅವರಿಗೆ ರೇಗಿಹೋಯಿತು. ಜ಼ಾರ್‌ಕಾಲದ ಆಡಳಿತದ ನೆನಪು ಬಂತು. ಏಕೆಂದರೆ ಕಳೆದ ಎಂಟು ತಿಂಗಳಿಂದ ಅವರು ತಾವೇ ರಚಿಸಿಕೊಂಡ ಸಮಿತಿಯ ಮೂಲಕ ಎಲ್ಲವನ್ನೂ ನಿರ್ವಹಿಸಿಕೊಂಡಿದ್ದವರು. ಆಮೇಲೆ ಕೆಲವೇ ನಿಮಿಷಗಳಲ್ಲಿ ಕೊಸ್ಸಾಕರು ಅವರ ಮೇಲೆ ಗುಂಡಿನ ಮಳೆಗರೆದರು. ಎಂಟು ಜನ ಸತ್ತರು. ಆ ತುಕಡಿ ಕೆರೆನ್‌ಸ್ಕಿ ವಿರುದ್ಧ ತಿರುಗಿಬಿತ್ತು. ಆ ಕ್ಷಣದಿಂದಲೇ ತ್ಸಾರ್‌ಸ್ಕೊಯೆ ಸೆಲೋನಲ್ಲಿ ತಟಸ್ಥ ಸೈನಿಕ ಅನ್ನುವವನು ಯಾರೂ ಉಳಿಯಲಿಲ್ಲ.

ಪೆತ್ರೋಗ್ರಾಡ್ ನಗರವು ಗುಂಡಿನ ಸದ್ದಿನಿಂದ ಎಚ್ಚರಗೊಂಡಿತು. ಮುಂಜಾನೆಯ ಹೊತ್ತಿಗೆ ಯಂಕರ್‌ಗಳ ದೊಡ್ಡ ಸೈನ್ಯವು ರಕ್ತಪಾತದ ಮೂಲಕ ತಂತಿ ಕಛೇರಿಯನ್ನು ವಶಪಡಿಸಿಕೊಂಡಿತ್ತು. ಟೆಲಿಫೋನ್ ಕೇಂದ್ರಕ್ಕೆ ಬೋಲ್ಶೆವಿಕ್ ನಾವಿಕರು ಮುತ್ತಿಗೆ ಹಾಕಿದ್ದರು. ಯಾರಾದರೂ ಅಲ್ಲಾಡುವುದು ಕಂಡರೆ ಗುಂಡು ಹಾರಿಸುತ್ತಿದ್ದರು. ಆದರೆ 'ರೆಡ್ ಕ್ರಾಸ್' ಚಿಹ್ನೆಯಿದ್ದ ವಾಹನಗಳಲ್ಲಿ ಗಾಯಾಳುಗಳು ಬರುತ್ತಿದ್ದಾರೆಂಬ ಕಾರಣದಿಂದ ಅವುಗಳನ್ನು ಮಾತ್ರ ಬರಲು ಹೋಗಲು ಬಿಟ್ಟಿದ್ದರು.

ನನ್ನ ಗೆಳೆಯ, ಖ್ಯಾತ ಅಮೆರಿಕನ್ ಪತ್ರಕರ್ತ ಆಲ್ಬರ್ಟ್ ರೈಸ್ ವಿಲಿಯಂಸ್, ಆಗ ಟೆಲಿಫೋನ್ ವಿನಿಮಯ ಕೇಂದ್ರದಲ್ಲಿದ್ದ. ಆತ ಇಂಥ ವಾಹನವೊಂದರಲ್ಲಿ ಗಾಯಾಳುಗಳೊಂದಿಗೆ ಹೊರಬಂದ. ಊರೆಲ್ಲಾ ಸುತ್ತಿ ಅದು ಕಡೆಗೆ ಯಂಕರ್‌ಗಳ ತರಬೇತಿ ಶಾಲೆಗೆ ಹೋಯಿತಂತೆ. ಅಲ್ಲಿ ನೋಡಿದರೆ ಫ್ರೆಂಚ್ ಅಧಿಕಾರಿಯೊಬ್ಬ ಈ ಕಾರ್ಯಾಚರಣೆಯ ನೇತೃತ್ವದಲ್ಲಿದ್ದ. ಆಂಬುಲೆನ್ಸ್ ಮೂಲಕವೇ ಅವರು ಬೋಲ್ಶೆವಿಕರಿಗೆ ಗೊತ್ತಾಗದಂತೆ ತಮ್ಮ ಸೈನಿಕರಿಗೆ ಮದ್ದು–ಗುಂಡು ಸರಬರಾಜು ಮಾಡಿಕೊಂಡಿದ್ದರು. ಇಂಥ ಅನೇಕ ವಾಹನಗಳು ಓಡಾಡಿಕೊಂಡಿದ್ದವು.

ಯಂಕರ್‌ಗಳ ಕೈಯಲ್ಲಿ ಐದಾರು ಆರ್ಮರ್ಡ್ ಕಾರ್‌ಗಳಿದ್ದವು. ಚೌಕವೊಂದರಲ್ಲಿ ಅಂಥದೊಂದು ಕೆಟ್ಟು ನಿಂತಾಗ ಬೋಲ್ಶೆವಿಕ್ ಪರ ನಾವಿಕರು ಅದರ ಮೇಲೆ ಗುಂಡು ಹಾರಿಸಿದರು. ಕಾರ್‌ನಲ್ಲಿದ್ದ ಮೆಶಿನ್‌ಗನ್‌ನಿಂದ ಗುಂಡಿನ ದಾಳಿ ಆರಂಭವಾಗಿ ಜನರ ಮೇಲೆಲ್ಲಾ ಗುಂಡು ಹಾರಿತು. ಇಬ್ಬರು ಮಕ್ಕಳೂ ಸೇರಿ ಏಳು ಜನ ಸತ್ತರು. ನಾವಿಕರು ಜೋರಾಗಿ ಕೂಗಿ, ಚಿಮ್ಮಿ ಬಂದು ಆರ್ಮರ್ಡ್ ಕಾರಿನ ಸಂದುಗಳಲ್ಲಿ ನಳಿಗೆ ಇಟ್ಟು ಬಂದೂಕು ಹಾರಿಸಿದರು. ಚಾಲಕ ಗಾಯವಾಗಿದೆ ಎಂದು ನಟಿಸಿ ಬಿಡುಗಡೆ ಹೊಂದಿ ಡ್ಯೂಮಾ ತಲುಪಿ, ಬೋಲ್ಶೆವಿಕ್ ಹಿಂಸಾಚಾರದ ಕಟ್ಟುಕಥೆಯನ್ನು ಬಿತ್ತರಿಸಿದ. ಆದರೆ ಈ ಇಡೀ ಘಟನೆಯನ್ನು ಖ್ಯಾತ ಅಮೆರಿಕನ್ ಪತ್ರಕರ್ತೆ ಲೂಯಿ ಬ್ರ್ಯಾಂಟ್ ನೋಡಿದ್ದರು ! **(ಈಕೆ ಜಾನ್ ರೀಡ್‌ರ ಮಡದಿ – ಅನು.)**

ಫ್ರೆಂಚ್ ಅಧಿಕಾರಿಯೊಬ್ಬ ಯಂಕರ್ ಕಾರ್‌ಗಳಲ್ಲಿ ಹೋಗುತ್ತಿದ್ದವನನ್ನು ಬಂಧಿಸಿದ ಸುದ್ದಿ ವೃತ್ತಪತ್ರಿಕೆಗಳಲ್ಲಿ ಬಂತು. ಫ್ರೆಂಚ್ ರಾಯಭಾರ ಕಛೇರಿ ಇದನ್ನು ಅಲ್ಲಗಳೆಯಿತು. (ಒಂದು ದೇಶದ ಆಂತರಿಕ ಸಮಿತಿಯಲ್ಲಿ ಇನ್ನೊಂದು ದೇಶ ಮೂಗು ತೂರಿಸಬಾರದು ಎಂಬುದು ರಾಜತಾಂತ್ರಿಕ ನಿಯಮ – ಅನು.). ಆದರೆ ಅವನನ್ನು ಬಿಡಿಸಿಕೊಂಡುಬಂದ ಅಧಿಕಾರಿಯೇ ನನಗೆ ಈ ವಾರ್ತೆ ತಿಳಿಸಿದ. ಅಧಿಕೃತವಾಗಿ ಬ್ರಿಟಿಷ್ ಹಾಗೂ ಫ್ರೆಂಚ್ ರಾಯಭಾರ ಕಛೇರಿಗಳು ಏನೇ ಹೇಳಲಿ, ಆ ದೇಶಗಳ ಅನೇಕ ಅಧಿಕಾರಿಗಳು ಬೋಲ್ಶೆವಿಕರ ವಿರುದ್ಧ ಸಕ್ರಿಯವಾಗಿದ್ದರು, ರಾಷ್ಟ್ರ ವಿಮೋಚನಾ ಸಮಿತಿಯ ಸಭೆಗಳಲ್ಲೂ ಭಾಗವಹಿಸಿದ್ದರು.

ಇಡೀ ದಿನ ನಗರದಾದ್ಯಂತ ರೆಡ್ ಗಾರ್ಡ್‌ಗಳಿಗೂ ಯಂಕರ್‌ಗಳಿಗೂ ಕದನಗಳು ನಡೆದೇ ಇದ್ದವು. ಅಂಗಡಿಗಳು ಬಹುತೇಕ ಮುಚ್ಚಿದ್ದವು. ಇಷ್ಟಾಗಿಯೂ ಅಲ್ಲಲ್ಲಿ ಮಾಮೂಲು ಬದುಕು ನಡೆದಿತ್ತು. ಸ್ಮೋಲ್ನಿಗೆ ಮಾತ್ರ ದೂರವಾಣಿ ಸಂಪರ್ಕ ಕಡಿತವಾಗಿತ್ತು. ಆದರೆ ಡ್ಯೂಮಾಗೂ, ಯಂಕರ್ ಶಾಲೆಗಳಿಗೂ ಕೆರೆನ್‌ಸ್ಕಿಗೂ ಸದಾ ಜೀವಂತ ಸಂಪರ್ಕವಿತ್ತು.

ಬೆಳಿಗ್ಗೆ ಏಳು ಘಂಟೆಗೆ ವ್ಲಾದಿಮಿರ್ ಯಂಕರ್ ಶಾಲೆಯಲ್ಲಿದ್ದವರಿಗೆ ಶರಣಾಗಲು ರೆಡ್ ಗಾರ್ಡ್‌ಗಳು ಇಪ್ಪತ್ತು ನಿಮಿಷ ಸಮಯ ಕೊಟ್ಟರು. ಅವರು ಅದನ್ನು ತಿರಸ್ಕರಿಸಿದರು. ಒಂದು ಘಂಟೆಯ ನಂತರ ಯಂಕರ್‌ಗಳು ಮುತ್ತಿಗೆಯನ್ನು ಸೀಳಿ ಹೊರಬರಲು ಯತ್ನಿಸಿ ಗುಂಡೇಟು ತಿಂದು ಹಿಂದೆ ಸರಿದರು. ಬೋಲ್ಶೆವಿಕ್ ಸೈನ್ಯ ಅವರನ್ನು ಸುತ್ತುವರೆಯಿತು. ಎರಡು ಆರ್ಮರ್ಡ್ ಕಾರ್‌ಗಳು ಚಲಿಸುತ್ತಾ ಗುಂಡಿನ ಮಳೆಗರೆದವು. ಯಂಕರ್‌ಗಳು ಕೊಸ್ಸಾಕರಿಗೆ ಸಹಾಯಕ್ಕೆ ಬರಲು ಹೇಳಿಕಳಿಸಿದರು. ಕೊಸ್ಸಾಕರಿಗೆ ಹೊರ ಬರುವ ಧೈರ್ಯವಿರಲಿಲ್ಲ. ಅವರೇ ಮುತ್ತಿಗೆಯಲ್ಲಿದ್ದು ಎರಡು ಫಿರಂಗಿಗಳನ್ನು ಎದುರಿಸುತ್ತಿದ್ದರು. ಅದೇ ರೀತಿ ಪಾವ್‌ಲೊವ್‌ಸ್ಕಿ ಶಾಲೆಯನ್ನೂ ಸುತ್ತುವರೆದಿದ್ದರು. ಇನ್ನುಳಿದ ಮೈಕೇಲೊವ್‌ಸ್ಕಿ ಶಾಲೆಯವರು ರಸ್ತೆಗಳಲ್ಲೇ ಬಡಿದಾಡಬೇಕಾಗಿ ಬಂದಿತ್ತು.

ಬೆಳಿಗ್ಗೆ ಏಳೂವರೆಯ ಹೊತ್ತಿಗೆ ಮೂರು ಫೀಲ್ಡ್‌ಪೀಸ್‌ಗಳು (ಪುಟ್ಟ ಫಿರಂಗಿಗಳು) ಬಂದವು. ಶರಣಾಗತರಾಗಿರಿ ಎಂಬ ಮನವಿಗೆ ಪ್ರತಿಯಾಗಿ ಯಂಕರ್‌ಗಳು ಇಬ್ಬರು ಬಿಳಿಯ ಬಾವುಟ ಹಿಡಿದಿದ್ದ ಪ್ರತಿನಿಧಿಗಳನ್ನೇ ಗುಂಡಿಟ್ಟುಕೊಂದರು. ಈಗ ನಿಜವಾದ ಗುಂಡಿನ ಕದನ ಆರಂಭವಾಯಿತು. ಶಾಲೆಯ ಗೋಡೆಗಳಲ್ಲಿ ಬಿರುಕುಗಳು, ತೂತುಗಳು

ಕಂಡುಬಂದವು. ಯಂಕರ್‌ಗಳು ಪ್ರತಿಯಾಗಿ ಗುಂಡುಹಾರಿಸಿ ಅನೇಕ ರೆಡ್‌ಗಾರ್ಡ್‌ಗಳನ್ನು ಕೊಂದರು. ಕೆರೆನ್‌ಸ್ಕಿಯು ಮಿಲಿಟರಿ ಕ್ರಾಂತಿಕಾರಿ ಸಮಿತಿಯೊಂದಿಗೆ ಯಾವ ಮಾತುಕತೆಯೂ ಬೇಡ ಎಂದು ಹೇಳಿಕಳಿಸಿದ್ದ. ಸಾವುನೋವುಗಳನ್ನು ಕಂಡು ಸೋವಿಯತ್ ಸೈನ್ಯ ಉದ್ರಿಕ್ತವಾಗಿ ಗುಂಡಿನ ಚಂಡಮಾರುತವನ್ನೇ ಆರಂಭಿಸಿಬಿಟ್ಟಿತು. ಸ್ವತಃ ಅವರ ಅಧಿಕಾರಿಗಳೇ ಕೇಳಿಕೊಂಡರೂ ಈಗ ಸೈನಿಕರು ನಿಲ್ಲಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಅವರ ರಕ್ತ ಕುದಿಯುತ್ತಿತ್ತು.

ಎರಡೂವರೆ ಘಂಟೆಗೆ ಯಂಕರುಗಳು ಬಿಳಿಯ ಬಾವುಟ ತೋರಿಸಿ, ರಕ್ಷಣೆ ನೀಡುವುದಾದರೆ ಶರಣಾಗುತ್ತೇವೆ ಎಂದರು. ಇದನ್ನು ಒಪ್ಪಿಕೊಳ್ಳಲಾಯಿತು. ಮುನ್ನುಗ್ಗುತ್ತಿದ್ದ ಸಾವಿರಾರು ರೆಡ್‌ಗಾರ್ಡ್‌ಗಳು ಮತ್ತು ಸೈನಿಕರು ಯಂಕರ್‌ಗಳನ್ನು ಹಿಡಿದು ಚಚ್ಚಲಾರಂಭಿಸಿದರು. ಯಾರಾದರೂ ಬಂದು ನಿಲ್ಲಿಸುವುದರೊಳಗೆ ಐದು ಜನ ಸತ್ತಿದ್ದರು. ಇನ್ನೂರು ಜನರನ್ನು ಬಂಧಿಸಲಾಯಿತು. ನೂರಕ್ಕೂ ಹೆಚ್ಚು ರೆಡ್‌ಗಾರ್ಡ್‌ಗಳು ಹಾಗೂ ಸೈನಿಕರು ಸತ್ತಿದ್ದರು. ಗೆದ್ದವರು ಉಳಿದ ಶಾಲೆಗಳತ್ತಲೂ ನುಗ್ಗಿದರು. ಎಲ್ಲಾ ಶಾಲೆಗಳೂ ಯಾವ ಪ್ರತಿರೋಧವನ್ನೂ ತೋರಿಸದೆ ಶರಣಾದವು. ಬಂಧಿತರನ್ನೆಲ್ಲಾ ಯಾವುದೇ ರೀತಿಯಲ್ಲಿ ಪೀಡಿಸದೆ ಪೀಟರ್–ಪಾಲ್ ಕೋಟೆಗೆ, ಕ್ರಾನ್‌ಸ್ಟಾಟ್‌ಗೆ ಕಳಿಸಿಕೊಡಲಾಯಿತು.

ದೂರವಾಣಿ ವಿನಿಮಯ ಕೇಂದ್ರವು ಮಧ್ಯಾಹ್ನದವರೆಗೂ ವಶವಾಗಿರಲಿಲ್ಲ. ನಂತರ ಒಂದು ಬೋಲ್ಶೆವಿಕ್ ಆರ್ಮರ್ಡ್ ಕಾರು ಬಂತು. ಕೂಡಲೇ ನಾವಿಕರು ಒಳನುಗ್ಗಿಬಿಟ್ಟರು. ದೂರವಾಣಿ ಮಹಿಳಾ ಕಾರ್ಮಿಕರು ಬೆದರಿ ಕಿರುಚಿಕೊಳ್ಳುತ್ತಾ ಅತ್ತಿಂದಿತ್ತ ಓಡಿದರು. ಯಂಕರ್ ತರುಣರು ರೆಡ್‌ಗಾರ್ಡ್‌ಗಳು ತಮ್ಮನ್ನು ಗುರುತು ಹಿಡಿಯದಿರಲೆಂದು ತಮ್ಮ ಸಮವಸ್ತ್ರಗಳಿಂದ ಎಲ್ಲಾ ಚಿಹ್ನೆಗಳನ್ನೂ ಹರಿದುಹಾಕಿದರು. ಒಬ್ಬನಂತೂ ವೇಷ ಮರೆಸಿಕೊಳ್ಳಲಿಕ್ಕಾಗಿ ಏನು ಬೇಕಾದರೂ ಕೊಟ್ಟು ನನ್ನ ಗೆಳೆಯ ವಿಲಿಯಮ್ಸ್‌ನ ಓವರ್‌ಕೋಟನ್ನು ಕೊಳ್ಳಲು ಸಿದ್ಧನಿದ್ದ! ಅವರಲ್ಲಿ ಕೆಲವರಂತೂ 'ಅಯ್ಯೋ, ನಮ್ಮನ್ನು ಕೊಂದುಬಿಡುತ್ತಾರೆ' ಎಂದು ಗೋಳಿಟ್ಟರು (ಅದಕ್ಕೆ ಒಂದು ಕಾರಣವಿತ್ತು. ಅವರೆಲ್ಲಾ ಹಿಂದೆ ಚಳಿಗಾಲದ ಅರಮನೆಯಲ್ಲಿ ರೆಡ್‌ಗಾರ್ಡ್‌ಗಳಿಗೆ ಬಂಧಿಯಾಗಿದ್ದು, ಇನ್ನು ಮುಂದೆ ಜನತೆಯ ಮೇಲೆ ಕೈ ಎತ್ತುವುದಿಲ್ಲ ಎಂದು ಮಾತು ಕೊಟ್ಟು ಅಲ್ಲಿಂದ ಬಿಡುಗಡೆ ಹೊಂದಿದ್ದವರು. ಆದ್ದರಿಂದ ಈ ಬಾರಿ ಕ್ಷಮೆಯಿಲ್ಲ ಎಂಬ ಭಯ. – ಅನು.). ಈಗ ಗೆಳೆಯ ವಿಲಿಯಮ್ಸ್ ಸಂಧಾನಕ್ಕೆ ಮುಂದೆ ಬಂದ. ಆಂಟೊನೊವ್‌ನನ್ನು ಬಿಟ್ಟರೆ ಮಾತ್ರ ಇವರನ್ನು ಬಿಡುತ್ತೇವೆ ಎಂದು ಹೇಳಲಾಯಿತು. ಅವರು ಕೂಡಲೇ ಆಂಟೊನೊವ್‌ನನ್ನು ಬಿಟ್ಟುಕೊಟ್ಟರು. ಆಂಟೊನೊವ್ ಮತ್ತು ವಿಲಿಯಮ್ಸ್ ಭಾಷಣ ಮಾಡಿ ಸೈನಿಕರನ್ನು ಶಾಂತಗೊಳಿಸಿ ಯಂಕರ್‌ಗಳನ್ನು ಬಿಡಿಸಿ ಕಳಿಸಿಕೊಟ್ಟರು.

ಸುಸ್ತಾಗಿ, ರಕ್ತದಿಂದ ತೋಯ್ದು, ವಿಜಯೋತ್ಸಾಹದಲ್ಲಿದ್ದ ಸೈನಿಕರು ಸ್ವಿಚ್‌ಬೋರ್ಡ್ ಇದ್ದ ಕೋಣೆಗೆ ನುಗ್ಗಿದರು. ಅಲ್ಲಿದ್ದ ಅನೇಕ ಸುಂದರ ಹುಡುಗಿಯರನ್ನು ನೋಡಿ ಇವರಿಗೆ ಮುಜುಗರ, ನಾಚಿಕೆ. ಒಬ್ಬ ಹುಡುಗಿಗೂ ಅವಮಾನವಾಗಲಿಲ್ಲ. ಒಬ್ಬಳಿಗೂ ಪೆಟ್ಟಾಗಲಿಲ್ಲ. ಮೊದಲು ಬೆದರಿ ಮೂಲೆ ಸೇರಿಕೊಂಡವರು ಆಮೇಲೆ ಹುಡುಗಿಯರೇ ಸೈನಿಕರನ್ನು ನಿಂದಿಸಿದರು : "ಛೀ ಕೊಳಕರು, ಅಜ್ಞಾನಿಗಳು, ಮೂರ್ಖರು." ನಾವಿಕರು, ಸೈನಿಕರು

ನಾಚಿಕೊಂಡು ಒದ್ದಾಡುತ್ತಿದ್ದರು. ಹುಡುಗಿಯರು "ಹಂದಿಗಳು, ಮೃಗಗಳು" ಎಂದು ಇವರನ್ನು ನಿಂದಿಸಿದರು. ಸಿಡುಕುತ್ತಾ ಮನೆಗೆ ಹೊರಡಲು ಕೋಟು, ಹ್ಯಾಟು ಧರಿಸಿದರು. ಇಲ್ಲಿಯವರೆಗೂ ಶ್ರೀಮಂತ ಯಂಕರ್‌ಗಳಿಗೆ ಮದ್ದುಗುಂಡು ಸರಬರಾಜು ಮಾಡುತ್ತಾ, ಗಾಯಗಳಿಗೆ ಮುಲಾಮು ಹಚ್ಚುತ್ತಾ ಯುದ್ಧದಲ್ಲಿ ರಮ್ಯವಾದ ಪಾತ್ರವನ್ನು ಮಾತ್ರ ಅವರು ನಿರ್ವಹಿಸಿದ್ದರು. ಶ್ರೀಮಂತ ತರುಣರೊಂದಿಗೆ ಕೆಲಸ ಮಾಡಿ ಜ್ಹಾರ್‌ನನ್ನು ಪುನರ್ ಪ್ರತಿಷ್ಠಾಪಿಸುತ್ತೇವೆಂದು ಭಾವಿಸಿದ್ದರು. ಆದರೆ, ಇವರು, "ಛೀ, ಸಾಧಾರಣ ರೈತ–ಕಾರ್ಮಿಕರು, ಕಪ್ಪು ಜನ..."

ವಿಶ್‌ನಿಯಾಕ್ ಎಂಬ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಮಿಸಾರ್ ತುಂಬ ಅನುನಯದಿಂದ ಅವರ ಮನ ಒಲಿಸಲು ಯತ್ನಿಸುತ್ತಿದ್ದ : "ನೋಡಿ ನೀವು ಡ್ಯೂಮಾ ಕೆಳಗೆ ಕೆಲಸ ಮಾಡುತ್ತಿದ್ದೀರಿ. ಹತ್ತು ಘಂಟೆ ದುಡಿಸಿ ಅರವತ್ತು ರೂಬೆಲ್ ಸಂಬಳ ಕೊಡುತ್ತಾರೆ. ಇನ್ನುಮುಂದೆ ನೀವು ಅಂಚೆ ತಂತಿ ಇಲಾಖೆಯ ಕೆಳಗೆ ಬರುತ್ತೀರಿ. ಹಾಗಾಗಿ ಸಂಬಳ ನೂರೈವತ್ತು ರೂಬೆಲ್ ಆಗುತ್ತದೆ. ದುಡಿಮೆಯ ಅವಧಿ ಕಡಿಮೆ ಯಾಗುತ್ತದೆ. ಕಾರ್ಮಿಕ ವರ್ಗಕ್ಕೆ ಸೇರಿದ ನಿಮಗೆ ಇದರಿಂದ ಖುಷಿಯಾಗಬೇಕು..."

ಆದರೆ ಅವರು ತಾವು, ಒರಟರು – ಮೃಗಗಳಂತಿರುವವರು ಆದ ಕಾರ್ಮಿಕರಿಗೆ ಸೇರಿದ ಭಾಗ ಎಂದು ಒಪ್ಪಿಕೊಳ್ಳಲು ಸಿದ್ಧರೇ ಇರಲಿಲ್ಲ. ಜಂಬದಿಂದಲೂ ಕೋಪದಿಂದಲೂ ಆ ಹುಡುಗಿಯರು ಜಾಗ ಖಾಲಿ ಮಾಡಿದರು.

ಇಲಾಖೆಯಲ್ಲಿನ ಕೆಳಮಟ್ಟದ ಕಾರ್ಮಿಕರೇನೋ ಉಳಿದಿದ್ದರು. ಆದರೆ ಈಗ ಸ್ವಿಚ್‌ಬೋರ್ಡ್‌ಗಳನ್ನು ನಡೆಸುವವರು ಯಾರು? ಅದೇ ಮುಖ್ಯವಾದ ಕೆಲಸ. ಸುಮಾರು ಆರು ಜನ ತರಬೇತಿ ಹೊಂದಿದ ಉದ್ಯೋಗಿಗಳಿದ್ದರು. ಸ್ವಯಂಸೇವಕರಿಗೆ ಕರೆ ನೀಡಿದಾಗ ಸುಮಾರು ನೂರು ಜನ ಕಾರ್ಮಿಕರು, ಸೈನಿಕರು, ನಾವಿಕರು ಮುಂದೆ ಬಂದರು. ಈ ಆರು ಜನ ಹುಡುಗಿಯರೇ ಎಲ್ಲೆಡೆ ಓಡಾಡುತ್ತಾ ಸೂಚನೆ ನೀಡುತ್ತಾ, ಸಹಾಯ ಮಾಡುತ್ತಾ, ಬೈಯ್ಯುತ್ತಾ ಕೆಲಸ ತೆಗೆದರು. ಕುಂಟುತ್ತಾ, ಎಡವುತ್ತಾ ಕಡೆಗೂ ತಂತಿಗಳಿಗೆ ಜೀವ ಬಂದು ಗುಂಯ್ ಎಂದವು. ಸ್ಮೋಲ್ನಿಯ ಜೊತೆಗೆ ಸೇನಾ ಶಿಬಿರ, ಕಾರ್ಖಾನೆಗಳಿಗೆ ಸಂಪರ್ಕವನ್ನು ಆರಂಭಿಸಲಾಯಿತು ಮತ್ತು ಯಂಕರ್ ಶಾಲೆಗಳ ಸಂಪರ್ಕವನ್ನು ಕಡಿತಗೊಳಿಸಲಾಯಿತು. ವಿಷಯ ನಗರದಾದ್ಯಂತ ಹಬ್ಬಿತು. ಬೂರ್ಶ್ವಾಗಳು "ಮೂರ್ಖರೇ, ಎಷ್ಟು ದಿನ ನಿಮ್ಮ ದರ್ಬಾರು, ನೋಡುತ್ತಿರಿ, ಕೊಸ್ಸಾಕರು ಬರುತ್ತಿದ್ದಾರೆ" ಎಂದು ಅರಚಿಕೊಂಡರು.

ಸಂಜೆಯಾಗುತ್ತಿತ್ತು. ನಿರ್ಜನವಾಗುತ್ತಿದ್ದ ನೆವ್‌ಸ್ಕಿ ಮಾರ್ಗದಲ್ಲಿ ಜನರ ಗುಂಪು ಸೇರಿತ್ತು. ಒಬ್ಬ "ಲೆನಿನ್ ಕೈಯಲ್ಲಿ ಜರ್ಮನರನ್ನು ಶಾಂತಿಗೆ ಒಪ್ಪಿಸಲು ಆಗೋಲ್ಲ" ಎನ್ನುತ್ತಿದ್ದ. ಅದಕ್ಕೆ ಇನ್ನೊಬ್ಬ "ಹಾಗಾದರೆ ಅದಕ್ಕೆ ಕಾರಣ ನಿಮ್ಮ ಬೂರ್ಶ್ವಾ ಕೆರೆನ್‌ಸ್ಕಿ. ನಮಗೆ ಅವನು ಬೇಡ. ಲೆನಿನ್ ಬೇಕು" ಎಂದ.

ಇತ್ತ ಡ್ಯೂಮಾದ ಗೋಡೆಗಳ ಮೇಲೆ ಕರಪತ್ರವೊಂದನ್ನು ಅಂಟಿಸಲಾಗಿತ್ತು. ಬೋಲ್ಶೆವಿಕ್ ಕ್ರಾಂತಿಯ ವಿರೋಧಿಯಾದ ಅಧಿಕಾರಿಯೊಬ್ಬ ಅದನ್ನು ಹರಿಯುತ್ತಿದ್ದ. ಅದರ ಸಾರಾಂಶ ಹೀಗಿತ್ತು:

*ಪೆತ್ರೋಗ್ರಾಡ್‌ನ ಜನತೆಯೇ!*

*ಈ ಅಪಾಯಕಾರಿ ಸಮಯದಲ್ಲಿ ನಗರ ಡ್ಯೂಮಾ ಜನತೆಯನ್ನು ಶಾಂತಗೊಳಿಸಲು ಅವರಿಗೆ ಬ್ರೆಡ್ ಮತ್ತಿತರ ಅವಶ್ಯಕ ವಸ್ತುಗಳನ್ನು ಖಚಿತಪಡಿಸಲು ಯತ್ನಿಸಬೇಕಿತ್ತು. ಅದನ್ನು ಬಿಟ್ಟು ಅವರು ಡ್ಯೂಮಾವನ್ನು ಪ್ರತಿ ಕ್ರಾಂತಿಯ ಕೇಂದ್ರ ಮಾಡಿಕೊಂಡಿದ್ದಾರೆ. ಬಲಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ಮತ್ತು ಕ್ಯಾಡೆಟ್ ಪಕ್ಷದವರು ರೈತ – ಕಾರ್ಮಿಕ – ಸೈನಿಕರ ಸೋವಿಯತ್‌ಗಳ ವಿರುದ್ಧ ತಿರುಗಿಬಿದ್ದು, ನಗರವನ್ನು ಕ್ಷಾಮಕ್ಕೆ, ಅಂತರ್ಯುದ್ಧಕ್ಕೆ ತಳ್ಳುತ್ತಿದ್ದಾರೆ. ಜನರಿಂದ ಚುನಾಯಿತರಾದ ಎಲ್ಲ ಬೋಲ್ಶೆವಿಕ್ ಪ್ರತಿನಿಧಿಗಳ ಪರವಾಗಿ ಇದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ.*

ಅಲ್ಲಲ್ಲಿ ದೂರದಲ್ಲಿ ಗುಂಡಿನ ಸದ್ದು ಕೇಳಿಬಂದರೂ ನಗರ ಶಾಂತವಾಗಿ ತಣ್ಣಗಿತ್ತು. ನಿಕೊಲಾಯ್ ಸಭಾಂಗಣದಲ್ಲಿ ಡ್ಯೂಮಾದ ಸಭೆ ಮುಗಿಯುತ್ತಾ ಬಂದಿತ್ತು. ಹಠಮಾರಿ ಡ್ಯೂಮಾಗೂ ಆಘಾತವಾಗಿತ್ತು. ದೂರವಾಣಿ ಕೇಂದ್ರ, ಯಂಕರ್ ಶಾಲೆಗಳು, ಬೋಲ್ಶೆವಿಕರ ಕೈವಶವಾದ ಸುದ್ದಿ ಬಂದಿತ್ತು. ಟ್ರಪ್ ಎಂಬ ನಾಯಕನ ದನಿ ಬದಲಾಗುತ್ತಿತ್ತು. "ಡ್ಯೂಮಾ ಜನತಂತ್ರದ ಪರವಾಗೇ ಇರುತ್ತೆ. ಆದರೆ ಕೊಲೆ, ಹಿಂಸೆ ಯಾರೂ ಮಾಡಬಾರದು" ಎನ್ನುತ್ತಿದ್ದ. ಕೊನೊವ್‌ಸ್ಕಿ ಎಂಬ ಕ್ಯಾಡೆಟ್ ಪಕ್ಷದ ಕ್ರೂರ ಮುಖದವನು ಮಾತ್ರ "ನಿಜವಾದ ಸರ್ಕಾರದ ಪಡೆಗಳು ನಾಳೆ ಬಂದಾಗ ವಿದ್ರೋಹಿಗಳನ್ನು ಕೊಲ್ಲಲೇಬೇಕಾಗುತ್ತೆ." ಎಂದ. ಇದಕ್ಕೆ ಅವನ ಪಕ್ಷದವರಿಂದಲೇ ತೀವ್ರ ವಿರೋಧ ಬಂತು.

ಒಟ್ಟಿನಲ್ಲಿ ಹೇಳಬೇಕೆಂದರೆ ಇಲ್ಲಿ ಗೆಲ್ಲಲಾರೆವೆಂಬ ಸಂದೇಹ ಸ್ಪಷ್ಟವಾಗುತ್ತಿತ್ತು. ಖಿನ್ನತೆ ಮೂಡಿತ್ತು. ಪ್ರತಿ ಕ್ರಾಂತಿಯನ್ನು ಬಗ್ಗು ಬಡಿಯಲಾಗಿತ್ತು. ಸೋಷಲಿಸ್ಟ್ ರೆವಲ್ಯೂಶನರಿ ಪಕ್ಷದಲ್ಲಿ ಎಡಪಂಥೀಯರೇ ನೇತೃತ್ವಕ್ಕೆ ಬಂದಿದ್ದರು. ಅವ್‌ಕ್ಸೆಂತಿಯೇವ್ ರಾಜಿನಾಮೆ ನೀಡಿದ್ದ. ಕೆರೆನ್‌ಸ್ಕಿಯನ್ನು ಸ್ವಾಗತಿಸಲು ಹೋಗಿದ್ದ ಸಮಿತಿಯನ್ನು ಬೋಲ್ಶೆವಿಕರು ಬಂಧಿಸಿದ್ದರು. ಇಷ್ಟಾದರೂ ಕೆರೆನ್‌ಸ್ಕಿ ಇನ್ನೂ ಬಂದಿಲ್ಲ...

ಪ್ರಾವ್ದಾ ಮತ್ತು ಇನ್ನೊಂದೆರಡು ಸಮಾಜವಾದಿ ವೃತ್ತಪತ್ರಿಕೆಗಳು ಮಾತ್ರ ಹೊರ ಬಂದಿದ್ದವು. ಸಮಾಜವಾದಿಗಳ ಪತ್ರಿಕೆಗಳು ಈಗಲೂ ಒಂದಲ್ಲ ಒಂದು ರೀತಿಯ ಒಕ್ಕೂಟ ಸರ್ಕಾರ ಸಾಧ್ಯವೆಂದು ಪ್ರಚಾರ ಮಾಡುತ್ತಿದ್ದವು. 'ಪ್ರಾವ್ದಾ' ಮಾತ್ರ ತಿರಸ್ಕಾರದಿಂದ, ಚಿಲ್ಲರೆ ಪತ್ರಕರ್ತರೇ ನಾಯಕರಾಗಿರುವ ಪಕ್ಷಗಳೊಂದಿಗೆ ಯಾವ ಮೈತ್ರಿಯೂ ಇಲ್ಲ; ಇರುವುದು ಒಂದೇ ಮೈತ್ರಿಕೂಟ – ಕಾರ್ಮಿಕರು, ರೈತರು, ಕ್ರಾಂತಿಕಾರಿ ಸೈನಿಕರದ್ದು ಎಂದಿತ್ತು.

ಇನ್ನೊಂದು ಕಡೆ ರೈಲ್ವೆ ಕಾರ್ಮಿಕರ ಸಂಘವಾದ ವಿಕ್‌ಜೆಲ್ ತೀರಾ ಜಂಬದಿಂದ ಎರಡೂ ಯುದ್ಧನಿರತ ಶಿಬಿರಗಳೂ ಕೂಡಲೇ ಸಂಧಾನಕ್ಕೆ ಬರದಿದ್ದರೆ ತಾವು ಮುಷ್ಕರ ಹೂಡುವುದಾಗಿ ಕೊಚ್ಚಿಕೊಂಡಿತ್ತು.

*"ಈ ಗಲಭೆಗಳಿಂದ ದೇಶವನ್ನು ಉಳಿಸುವವರು ಬೋಲ್ಶೆವಿಕರೂ ಅಲ್ಲ, ರಾಷ್ಟ್ರ ವಿಮೋಚನಾ ಸಮಿತಿಯವರೂ ಅಲ್ಲ, ನಾವು ರೈಲ್ವೆ ಕಾರ್ಮಿಕರು ದೇಶವನ್ನು ರಕ್ಷಿಸುತ್ತೇವೆ. ರೆಡ್‌ಗಾರ್ಡ್‌ಗಳ ಕೈಯಲ್ಲಿ ರೈಲ್ವೆನಂಥ ಜಟಿಲ ವ್ಯವಸ್ಥೆಯನ್ನು ನಡೆಸಲಾಗದು. ಹಂಗಾಮಿ ಸರ್ಕಾರಕ್ಕೆ ಅಧಿಕಾರ ಹಿಡಿಯುವ ತಾಕತ್ತೇ ಇಲ್ಲ. ಎಲ್ಲ ಜನತಂತ್ರವನ್ನೂ ಪ್ರತಿನಿಧಿಸುವ ಸರ್ಕಾರವನ್ನು ಮಾತ್ರ ನಾವು ಒಪ್ಪುತ್ತೇವೆ...."*

ಆದರೆ ಟ್ರೇಡ್ ಯೂನಿಯನ್ ಕೇಂದ್ರ ಕಛೇರಿಯಲ್ಲಿ ನಾನೊಬ್ಬ ರೈಲ್ವೆ ಕಾರ್ಮಿಕರ ಪ್ರತಿನಿಧಿಯನ್ನು ಭೇಟಿಯಾದೆ. ಅವನು ಬಹಳ ಸಿಟ್ಟಿನಿಂದ "ನಮ್ಮ ನಾಯಕತ್ವ ಕೊರ್ನಿಲೊವ್‌ನ ಆಟವನ್ನೇ ಆಡುತ್ತಿದೆ. ಸೋವಿಯತ್‌ಗಳಿಗೆ ಎಲ್ಲಾ ಅಧಿಕಾರ ಬರಬೇಕು. ಅಖಿಲ ರಷ್ಯಾ ಸಮಾವೇಶ ಕರೆಯಿರಿ ಎಂದರೆ ನಾಯಕರು ಒಪ್ಪುತ್ತಿಲ್ಲ" ಎಂದ. ಅವನ ಪ್ರಕಾರ ಎಲ್ಲಾ ಕಡೆ ರೈಲ್ವೆ ಕಾರ್ಮಿಕರು ತಮ್ಮ ನಾಯಕರನ್ನು ಖಂಡಿಸಿ ಬೃಹತ್ ಸಭೆಗಳನ್ನು ಸಂಘಟಿಸುತ್ತಿದ್ದರು.

ಇಡಿಯ ರಷ್ಯಾದಲ್ಲಿಯೂ ಇದೇ ಪರಿಸ್ಥಿತಿ. ಎಲ್ಲಾ ಕಡೆ ಜನತಾಂತ್ರಿಕ ಸಂಘಟನೆಗಳು ಒಡೆಯುತ್ತಿದ್ದವು. ಸಹಕಾರಿ ಸಂಘಗಳಲ್ಲೂ ಇದೇ ಕಥೆ. ರೈತರ ಕಾರ್ಯಕಾರಿಣಿಯಲ್ಲಿ ವ್ಯಾಜ್ಯಗಳು ನಡೆದು ಸಭೆ ಸ್ಥಗಿತವಾಯಿತು. ಕೊಸ್ಸಾಕರಲ್ಲೂ ಒಡಕು ಕಾಣಿಸಿಕೊಂಡಿತು.

ಸ್ಮೋಲ್ನಿಯ ಮೇಲಿನ ಮಹಡಿಯಲ್ಲಿದ್ದ ತನ್ನ ಕಛೇರಿಯಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಸಂಪೂರ್ಣ ವೇಗದಲ್ಲಿ ಕೆಲಸ ಮಾಡುತ್ತಿತ್ತು. ಆಕ್ರಮಣ ಮುಂದುವರೆಸಿತ್ತು, ಒಂದಿಷ್ಟೂ ಬಿಗಿಯನ್ನು ಸಡಿಲಿಸಿರಲಿಲ್ಲ. ಅದರೊಳಗೆ ಕಾರ್ಯಕರ್ತರು ಲವಲವಿಕೆಯಿಂದ ಕ್ರಿಯಾಶೀಲರಾಗಿ ನುಗ್ಗುತ್ತಿದ್ದರು. ರಾತ್ರಿ, ಬೆಳಿಗ್ಗೆ ತಮ್ಮನ್ನೇ ಆ ಯಂತ್ರಕ್ಕೆ ಅರ್ಪಿಸಿಕೊಂಡವರಂತೆ ದುಡಿಯುತ್ತಿದ್ದರು. ಸುಸ್ತಾಗಿ, ಕಾಲೆಳೆಯುತ್ತಾ, ಕೊಳಕಾಗಿ ಹೊರಬಂದು ನೆಲದ ಮೇಲೆ ಕುಸಿದು ನಿದ್ರಿಸುತ್ತಿದ್ದರು. ವಿಮೋಚನಾ ಸಮಿತಿಯನ್ನು ಕಾನೂನುಬಾಹಿರವೆಂದು ಘೋಷಿಸಿಯಾಗಿತ್ತು. ಹೊಸ ಘೋಷಣೆಗಳ ಮುದ್ರಿತ ಸಾಮಗ್ರಿಯ ಕಟ್ಟು ನೆಲದ ಮೇಲೆ ಬಿದ್ದಿರುತ್ತಿತ್ತು. ಅದರಲ್ಲೊಂದು ಹೀಗಿತ್ತು:

*"ಜನತೆಯ ಬೆಂಬಲವಿಲ್ಲದ ಪಿತೂರಿಗಾರರು ಕ್ಷಿಪ್ರದಾಳಿಯನ್ನು ಮಾಡಿ ಸಫಲರಾಗ ಬಹುದೆಂದುಕೊಂಡಿದ್ದರು. ರೆಡ್‌ಗಾರ್ಡ್‌ನ ಸೈನಿಕನೊಬ್ಬನ ಜಾಗರೂಕತೆಯಿಂದಾಗಿ ಪಿತೂರಿ ಬಯಲಾಗಿದೆ. ಇದನ್ನು ಸಂಘಟಿಸಿದ್ದುದು ವಿಮೋಚನಾ ಸಮಿತಿಯವರು. ಹಂಗಾಮಿ ಸರ್ಕಾರದ ಸದಸ್ಯನಾಗಿದ್ದ ಗೋಟ್ಸ್ ಪಿತೂರಿ ಮಾಡಲು ಆಜ್ಞೆಗೆ ಸಹಿಹಾಕಿದ್ದಾನೆ. ವಾಸ್ತವದಲ್ಲಿ ಅವನು ಜನವಿರೋಧಿ ಚಟುವಟಿಕೆ ಮಾಡುವುದಿಲ್ಲ ಎಂದು ನೀಡಿದ್ದ ವಾಗ್ದಾನದ ಮೇಲೆ ಅವನನ್ನು ಬಿಡುಗಡೆ ಮಾಡಲಾಗಿತ್ತು. ಇವರನ್ನು ಬಂಧಿಸಿ ಕ್ರಾಂತಿಕಾರಿ ಟ್ರಿಬ್ಯೂನಲ್ ಮುಂದೆ ಇವರೆಲ್ಲರ ವಿಚಾರಣೆ ನಡೆಯಲಿದೆ ಎಂಬುದನ್ನು ನಾವು ಪೆತ್ರೋಗ್ರಾಡ್‌ನ ಜನತೆಯ ಗಮನಕ್ಕೆ ಈ ಮೂಲಕ ತರುತ್ತಿದ್ದೇವೆ.*

ಇನ್ನು ಮಾಸ್ಕೋದಿಂದ ಬಂದ ಸುದ್ದಿ. ಕೊಸ್ಸಾಕರು ಮತ್ತು ಯಂಕರ್‌ಗಳು ಕ್ರೆಮ್ಲಿನ್ ಸೌಧವನ್ನು ಸುತ್ತುವರೆದು ಸೋವಿಯತ್ ಸೈನ್ಯಗಳಿಗೆ ಶರಣಾಗಲು ತಿಳಿಸಿದರು. ಶರಣಾದಾಗ ಅವರನ್ನು ಗುಂಡಿಟ್ಟು ಕೊಂದರು. ದೂರವಾಣಿ ಮತ್ತು ಟೆಲಿಗ್ರಾಫ್ ಕಛೇರಿಗಳನ್ನೂ ಅವರು ವಶಮಾಡಿಕೊಂಡಿದ್ದಾರೆ. ಆದರೆ ಸುತ್ತಲೂ ಸೋವಿಯತ್ ಪಡೆಗಳು ಮುತ್ತಿಗೆ ಹಾಕುತ್ತಿವೆ. ಬೀದಿ ಕಾಳಗಗಳು ಆರಂಭವಾಗಿವೆ. ಸಂಧಾನ ವಿಫಲವಾಗಿದೆ. ಸೋವಿಯತ್ ಕಡೆಗೆ ಹತ್ತು ಸಾವಿರ ಸೈನಿಕರು ಕೆಲವು ರೆಡ್‌ಗಾರ್ಡ್‌ಗಳೂ ಇದ್ದರೆ, ಹಂಗಾಮಿ ಸರ್ಕಾರದ ಕಡೆಗೆ ಯಂಕರ್‌ಗಳು, ಕೊಸ್ಸಾಕರು, ವೈಟ್‌ಗಾರ್ಡ್‌ಗಳು ಸೇರಿ ಹೆಚ್ಚು ಕಮ್ಮಿ ಅಷ್ಟೇ ಜನರಿದ್ದಾರೆ.

ಇತ್ತ ರಾಜಧಾನಿಯಲ್ಲಿ ಪೆತ್ರೋಗ್ರಾಡ್ ಸೋವಿಯತ್‌ನ ಸಭೆ ನಡೆಯುತ್ತಿತ್ತು. ಪಕ್ಕದ ಕೋಣೆಯಲ್ಲಿ ತ್ಸೆ-ಇ-ಕಾ ಕುಳಿತು ಕಮಿಸಾರ್ ಮಂಡಳಿಯಿಂದ ಬಂದ ಆಜ್ಞೆಗಳನ್ನು

ಜಾರಿಗೊಳಿಸುವುದರಲ್ಲಿ ತೊಡಗಿತ್ತು. ಅನೇಕ ಕಾನೂನುಗಳು, ನೀತಿಗಳು ರೂಪುಗೊಳ್ಳುತ್ತಿದ್ದವು. ಕಾರ್ಮಿಕರ ದುಡಿತವನ್ನು ಎಂಟು ಘಂಟೆಗೆ ಸೀಮಿತಗೊಳಿಸುವುದು, ಲೂನಚಾರ್‌ಸ್ಕಿಯವರ ಜನಪರವಾದ ಶಿಕ್ಷಣ ನೀತಿ, ಮುಂತಾದವು ಅದರಲ್ಲಿ ಅಡಕವಾಗಿದ್ದವು. ಎರಡೂ ಸಭೆಗಳಲ್ಲಿದ್ದವರೂ ಶಸ್ತ್ರಧಾರಿಗಳಾಗಿದ್ದರು. ಇವರನ್ನು ಬಿಟ್ಟರೆ ಹೆಚ್ಚುಕಮ್ಮಿ ನಿರ್ಜನವಾಗಿದ್ದ ಸ್ಮೋಲ್ನಿ ಭವನದ ಕಿಟಿಕಿಗಳಲ್ಲಿ ಸೈನಿಕರು ರಕ್ಷಣೆಗಾಗಿ ಮೆಶಿನ್‌ಗನ್‌ಗಳನ್ನು ಜೋಡಿಸುತ್ತಿದ್ದರು.

ಇನ್ನೊಂದು ಕಡೆ ತ್ಸೆ-ಇ-ಕಾದ ಸಭೆಯಲ್ಲಿ ರೈಲ್ವೆ ಕಾರ್ಮಿಕರ ಪ್ರತಿನಿಧಿಯು ತಾವು ಯಾರ ಕಡೆಯ ಸೈನಿಕರನ್ನೂ ರೈಲಿನಲ್ಲಿ ಸಾಗಿಸುವುದಿಲ್ಲವೆಂದೂ ಆದರೆ ಎಲ್ಲರನ್ನೂ ಸೇರಿಸಿ ಸರ್ಕಾರ ರಚಿಸಲು ಸಮಾಜವಾದಿ ಪಕ್ಷಗಳ ಸಭೆಯನ್ನು ಕರೆಯಬೇಕೆಂದೂ ಹೇಳಿದ. ಕಮೆನೇವ್, ಸಮ್ಮೇಳನ ನಡೆಸಲಿಕ್ಕೆ ಅಡ್ಡಿಯಿಲ್ಲ; ಆದರೆ ಅಲ್ಲಿ ಮುಖ್ಯ ಚರ್ಚೆಯ ವಿಷಯ ಸರ್ಕಾರದಲ್ಲಿ ಯಾರಿರಬೇಕೆಂಬುದನ್ನು ಕುರಿತು ಅಲ್ಲ, ಸೋವಿಯತ್ ಮಹಾಧಿವೇಶನ ಘೋಷಿಸಿರುವ ಕಾರ್ಯಕ್ರಮದ ಬಗ್ಗೆ ಆಗಬೇಕು ಅಷ್ಟೇ, ಎಂದು ನಯವಾಗಿ ಹೇಳಿದ. ಮುಖ್ಯ ಸಭಾಂಗಣದಲ್ಲಿ ಟ್ರಾಟ್‌ಸ್ಕಿ ದಿನದ ಘಟನೆಗಳನ್ನು ವಿವರಿಸಿದ. "ನಾವು ಯಂಕರ್‌ಗಳಿಗೆ ಶರಣಾಗಲು ಅವಕಾಶ ನೀಡಿದೆವು. ರಕ್ತಪಾತವಿಲ್ಲದೆ ಎಲ್ಲವೂ ತೀರ್ಮಾನವಾಗಲಿ ಎಂಬುದೇ ನಮ್ಮ ಇಚ್ಛೆಯಾಗಿತ್ತು. ಆದರೆ ರಕ್ತ ಹರಿದಿದೆ. ಇನ್ನು ನಿರ್ದಯಿ ಹೋರಾಟ ಒಂದೇ ದಾರಿ. ನಾವು ಗಳಿಸಿಕೊಂಡ ಅಧಿಕಾರವನ್ನು ಈಗ ಉಳಿಸಿಕೊಳ್ಳಬೇಕು."

ಮೆನ್ಶೆವಿಕರು ತಾತ್ವಿಕವಾದ ಚರ್ಚೆಗೆ ಮಾಡಿಕೊಂಡ ಮನವಿಯನ್ನು ತಿರಸ್ಕರಿಸಲಾಯಿತು. ನಿರ್ಣಾಯಕ ಹೆಜ್ಜೆಗಳನ್ನು ತೆಗೆದುಕೊಂಡಾಗಿದೆ, ಚರ್ಚೆ ಬೀದಿಗಳಲ್ಲಿ ನಡೆಯುತ್ತಿದೆ. ಏನು ನಡೆಯುತ್ತದೋ ಅದರ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳಬೇಕು ಎಂದು ವಿವರಿಸಲಾಯಿತು.

ನಂತರ ಗ್ಯಾಟ್‌ಚಿನ್‌ನಿಂದ, ರಣಾಂಗಣದಿಂದ ಬಂದ ಸೈನಿಕರು ತಮ್ಮ ಅನುಭವಗಳನ್ನು ಹೇಳಿಕೊಂಡರು. ಫಿರಂಗಿಪಡೆಯ ಸೈನಿಕನೊಬ್ಬ ಹೇಳಿದ "ಇಲ್ಲಿ ನಡೆದಿರುವುದನ್ನೆಲ್ಲಾ ಕೇಳಿದರೆ, ಕಂದಕಗಳಲ್ಲಿನ ನಮ್ಮ ಸಂಗಾತಿಗಳು ನಮ್ಮ ಸರ್ಕಾರ ಎಂದರೆ ಇದು" ಎನ್ನುತ್ತಾರೆ. ಒಬ್ಬ ಯಂಕರ್ ತಾನು ಸೋವಿಯತ್‌ರ ವಿರುದ್ಧ ಹೋರಾಡುವುದಿಲ್ಲವೆಂದು ಘೋಷಿಸಿಕೊಂಡಿದ್ದನೆಂದೂ, ಚಳಿಗಾಲದ ಅರಮನೆಯ ಯುದ್ಧದಲ್ಲಿ ಸೋತನಂತರ ಕೆಲವು ಯಂಕರ್ ಸ್ನೇಹಿತರು ವಾಪಸಾಗಿ, ಈತನನ್ನೇ ತಮ್ಮ ಕಮಿಸಾರ್ ಆಗಿ ಆಯ್ಕೆ ಮಾಡಿದರೆಂದೂ, ಸ್ಮೋಲ್ನಿಗೆ ಹೋಗಿ ಸೋವಿಯತ್‌ಗೆ ಬೆಂಬಲ ತಿಳಿಸಲು ಕಳಿಸಿದ್ದಾರೆಂದೂ ವರದಿ ಮಾಡಿದ.

ನಂತರ ಟ್ರಾಟ್‌ಸ್ಕಿ ಮತ್ತೊಮ್ಮೆ ತೀಕ್ಷ್ಣವಾಗಿ ಘೋಷಿಸಿದರು : "ಇನ್ನು ಕುಡಿತ ಬಂದ್ ಆಗಬೇಕು. ಎಂಟು ಘಂಟೆಯ ಮೇಲೆ ರಾತ್ರಿ ಯಾರೂ ರಸ್ತೆಯಲ್ಲಿ ಓಡಾಡಬೇಡಿ. ಎಲ್ಲೆಲ್ಲಿ ಮದ್ಯದ ದಾಸ್ತಾನು ಇದೆಯೋ ಅದನ್ನು ಹುಡುಕಿ ನಾಶಮಾಡತಕ್ಕದ್ದು. ಮದ್ಯ ಮಾರುವವರಿಗೆ ಕಠಿಣ ಶಿಕ್ಷೆ ಕಾದಿದೆ. ಸತ್ತ ಪ್ರತಿ ಕ್ರಾಂತಿಕಾರಿಗೂ ನಾವು ಹಲವರನ್ನು ಉತ್ತರವಾಗಿ ಬಲಿ ತೆಗೆದುಕೊಳ್ಳಲಿದ್ದೇವೆ."

ಮತ್ತೆ ಡ್ಯೂಮಾದಲ್ಲಿ ಏನು ನಡೆಯುತ್ತಿದೆ ನೋಡೋಣ. ಹೊಳೆಯುವ ದೀಪಗಳು, ದೊಡ್ಡ ಮನುಷ್ಯರ ದೊಂಬಿ, ಕೆಳಗಿನ ಮಹಡಿಯಲ್ಲಿ ವಿಪರೀತ ಗೋಳಾಟ. ಕಾರಣ ಕೆಳಗಡೆ ಸತ್ತ ಯಂಕರ್‌ಗಳ ಪಟ್ಟಿಯನ್ನು ಪ್ರಕಟಿಸಿದ್ದರು. ಅನೇಕ ಸತ್ತವರು ಆಮೇಲೆ ಎದ್ದು ಬಂದು ಕಾಣಿಸಿಕೊಂಡರು ಎಂಬುದು ಬೇರೆ ವಿಷಯ. ಅವರಿಗೆ ಏನೂ ಆಗಿರಲೂ ಇಲ್ಲ! ಇನ್ನೊಂದು ಕಡೆ ಅಲೆಕ್ಸಾಂಡರ್ ಹಾಲ್‌ನಲ್ಲಿ ವಿಮೋಚನಾ ಸಮಿತಿಯ ಸಭೆ ನಡೆಯುತ್ತಿತ್ತು. ಅಲ್ಲಿದ್ದವರು ಯಾರು? ಕೆಂಪುಬಣ್ಣ, ಚಿನ್ನದ ಬಣ್ಣದ ಪಟ್ಟಿಗಳನ್ನು ತೋಳಿನ ಮೇಲೆ ಧರಿಸಿದ್ದ ಸೈನ್ಯಾಧಿಕಾರಿಗಳು, ಮೆನ್ಶೆವಿಕ್ ಮತ್ತು ಸೋಷಲಿಸ್ಟ್ ರೆವಲ್ಯೂಶನರಿ ಬುದ್ಧಿಜೀವಿಗಳು, ಕ್ರೂರ ನೋಟದ, ಬೃಹತ್ ಗಾತ್ರದ ಬ್ಯಾಂಕರ್‌ಗಳು, ಹಳೆಯ ಸರ್ಕಾರದ ಅಧಿಕಾರಿಗಳು, ಭರ್ಜರಿ ಉಡುಗೆ ತೊಡುಗೆಗಳನ್ನು ಮೆರೆಸುವ ಹೆಂಗಸರು!

ಇವರ ಮುಂದೆ ಟೆಲಿಫೋನ್ ಹುಡುಗಿಯರು ತಮ್ಮ ವರದಿ ಒಪ್ಪಿಸುತ್ತಿದ್ದರು. ಅವರೆಲ್ಲರೂ ಚೆನ್ನಾಗಿ ಮುಖಕ್ಕೆ ಮೇಕಪ್ ಮಾಡಿಕೊಂಡ, ಆದರೆ ಚಿಂದಿಯಾದ ಶೂಗಳನ್ನು ಧರಿಸಿದವರು. ಪೆತ್ರೋಗ್ರಾಡ್‌ನ ಈ ಹೆಸರಾಂತ ದೊಡ್ಡ ಮನುಷ್ಯನ ಚಪ್ಪಾಳೆಗೆ ಮಾರುಹೋಗಿ ಅವರೆಲ್ಲಾ ತಮಗೆ ಬೋಲ್ಶೆವಿಕರಿಂದ ಆದ ಅನ್ಯಾಯಗಳ ಕಟ್ಟುಕತೆಗಳನ್ನು ಒಬ್ಬಳಾದ ಮೇಲೆ ಒಬ್ಬಳು ಹೇಳಿಕೊಳ್ಳುತ್ತಿದ್ದರು.

ಡ್ಯೂಮಾದಲ್ಲಿ ಸಭೆ ನಡೆಯುತ್ತಲೇ ಇತ್ತು. ಮೇಯರ್ ಆದಷ್ಟೂ ಆಶಾದಾಯಕ ಸುದ್ದಿಗಳನ್ನು ಹೇಳಲು ಯತ್ನಿಸಿದ್ದ. ಪರಿಸ್ಥಿತಿ ವಿರುದ್ಧವಾಗಿದ್ದರಿಂದ ಟ್ರಪ್ ಎಂಬ ನಾಯಕನ ಮಾತಿನ ವರಸೆಯೂ ಬದಲಾಗಿತ್ತು.

ಇನ್ನೊಂದುಕಡೆ ಕ್ರಾಂತಿಕಾರಿ ರಣಾಂಗಣದಲ್ಲಿಯೂ ಎಲ್ಲವೂ ಅನುಕೂಲವಾಗಿರಲಿಲ್ಲ. ಶತ್ರುಗಳು ಫಿರಂಗಿ ಹೊತ್ತ ಆರ್ಮರ್ಡ್ ಕಾರುಗಳನ್ನು ಸಮರಕ್ಕೆ ತಂದಿದ್ದರು. ಸೋವಿಯತ್ ಸೇನೆಯಲ್ಲಿದ್ದವರು ಬಹುತೇಕ ರೆಡ್‌ಗಾರ್ಡ್‌ಗಳು – ಎಂದರೆ ತರಬೇತಿ ಇಲ್ಲದ ಕಾರ್ಮಿಕರು. ಕೇವಲ ಐದುಸಾವಿರ ಜನ ಮಾತ್ರ ತರಬೇತಿ ಹೊಂದಿದ ಸೈನಿಕರಿದ್ದರು. ಅಧಿಕಾರಿಗಳೆಲ್ಲಾ ಓಡಿಹೋಗಿದ್ದರಿಂದ ಅವರಿಗೆ ನಾಯಕತ್ವವೂ ಇರಲಿಲ್ಲ, ಖಚಿತವಾದ ಯುದ್ಧದ ಯೋಜನೆಯೂ ಇರಲಿಲ್ಲ. ರಾತ್ರಿ ಹತ್ತು ಘಂಟೆಗೆ ಲೆನಿನ್, ನಗರದ ಸೈನ್ಯದಳಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಐದು ಜನ ಸೈನಿಕರ ಸಮಿತಿಯೊಂದನ್ನು ಚುನಾಯಿಸಿ ಅವರು ಜನರಲ್ ಸ್ಟಾಫ್ ಆಗಿ ನೇತೃತ್ವವನ್ನು ವಹಿಸ ಬೇಕೆಂದು ನಿರ್ಧರಿಸಲಾಯಿತು. ನಂತರ ಬೆಳಿಗ್ಗೆ ಆ ಸೈನ್ಯವು ಸಮರಕ್ಕೆ ಸಜ್ಜಾಗಿ ತೆರಳಿತು.

ಇತ್ತ ರೈಲ್ವೆ ಕಾರ್ಮಿಕರ ಸಂಘವಾದ ವಿಕ್‌ಜೆಲ್‌ನಲ್ಲಿ ಎಲ್ಲ ಸಮಾಜವಾದಿ ಪಕ್ಷಗಳ ಸಮ್ಮೇಳನ ನಡೆಯಿತು. ಕೆಲವು ಮೆನ್ಶೆವಿಕ್‌ಗಳು ಹಳೆಯದನ್ನೆಲ್ಲಾ ಬಿಟ್ಟು ಎಲ್ಲರೂ ಒಂದಾಗಬೇಕೆಂದರು. ಇದಕ್ಕೆ ಅನೇಕರ ಸಹಮತವಿತ್ತು. ಆದರೆ ಬಲಪಂಥೀಯ ಮೆನ್ಶೆವಿಕ್, ಡ್ಯಾನ್ ಎಂಬುವನು ಬೋಲ್ಶೆವಿಕರು ಒಪ್ಪಲಾಗದಂಥ ಷರತ್ತುಗಳನ್ನು ಹಾಕಿದ. ರೆಡ್‌ಗಾರ್ಡ್‌ಗಳನ್ನು ವಿಸರ್ಜಿಸಬೇಕು, ಪೆತ್ರೋಗ್ರಾಡ್‌ನ ರಕ್ಷಣಾದಳ ಡ್ಯೂಮಾದ ನಿಯಂತ್ರಣಕ್ಕೆ ಬರಬೇಕು. ಕೆರೆನ್‌ಸ್ಕಿಯ ಪಡೆಗಳು ಯುದ್ಧ ನಿಲ್ಲಿಸಲಿ. ಬೋಲ್ಶೆವಿಕರನ್ನು ಬಿಟ್ಟು ಸಮಾಜವಾದಿ ಪಕ್ಷಗಳ ಸರ್ಕಾರ ರಚನೆಯಾಗಬೇಕು. ಬೋಲ್ಶೆವಿಕರ ಪರವಾಗಿ ರಿಯಾಘನೊವ್ ಮತ್ತು ಕಮೆನೇವ್ ಎಲ್ಲಾ ಸಮಾಜವಾದಿ ಪಕ್ಷಗಳ ಸರ್ಕಾರವನ್ನು ರಚಿಸಲು ಒಪ್ಪಿಗೆಯಿದೆ, ಆದರೆ ಡ್ಯಾನ್‌ನ ಪ್ರಸ್ತಾಪಗಳನ್ನು ತಿರಸ್ಕರಿಸುತ್ತೇವೆ ಎಂದರು. ಕಡೆಗೆ

ಕಾರ್ಯಸಾಧುವಾದ ಯೋಜನೆಯನ್ನು ರೂಪಿಸಲು ಸಮಿತಿಯೊಂದನ್ನು ರಚಿಸಲಾಯಿತು.

ಆ ಸಮಿತಿ ಇಡೀ ರಾತ್ರಿ ವ್ಯಾಜ್ಯದಲ್ಲಿ ಮುಳುಗಿತು. ಹಿಂದೆಯೂ ಗಾರ್ಕಿ ಮತ್ತು ಮಾರ್ಟೋವ್‌ರವರುಗಳ ಮುಂದೊಡಗಿನಿಂದ ರಾಜಿ ಯತ್ನ ನಡೆದಿತ್ತು. ಆದರೆ ಕೆರೆನ್‌ಸ್ಕಿ ಬರುತ್ತಿದ್ದಾನೆಂದು ಭಾವಿಸಿ ಮೆನ್ಶೆವಿಕರು ಮತ್ತು ಸೋಷಲಿಸ್ಟ್ ರೆವಲ್ಯೂಶನರಿಗಳು ಇದ್ದಕ್ಕಿದ್ದಂತೆ ಸಂಧಾನದಿಂದ ಹಿಂದೆ ಸರಿದಿದ್ದರು. ಆದರೆ ಈಗ ಯಂಕರ್ ಬಂಡಾಯವನ್ನು ಹತ್ತಿಕ್ಕಿದ ಮೇಲೆ ಅವರು ದಿಙ್ಮೂಢರಾಗಿದ್ದರು.

* * *

ನವೆಂಬರ್ 12, ಸೋಮವಾರ

ಏನಾಗುತ್ತದೋ ಎಂಬ ಕಾತರದ ದಿನ. ಎಲ್ಲರ ಕಣ್ಣುಗಳೂ ಪೆತ್ರೋಗ್ರಾಡ್‌ನ ದ್ವಾರಗಳ ಆಚೆಗಿನ ಮೈದಾನದತ್ತ ನೆಟ್ಟಿದ್ದವು. ಅಲ್ಲಿ ಹಳೆಯ ಪ್ರಭುತ್ವದ ಎಲ್ಲ ಲಭ್ಯ ಶಕ್ತಿಯೂ ಹೊಸ ವ್ಯವಸ್ಥೆಯ ಅಸಂಘಟಿತ, ಯಾರೂ ಅರಿಯದ ಶಕ್ತಿಯ ವಿರುದ್ಧ ಸೆಣೆಸಾಟಕ್ಕೆ ಇಳಿಯಲಿತ್ತು. ಮಾಸ್ಕೋದಲ್ಲಿ ಕದನ ವಿರಾಮ ಘೋಷಿತವಾಗಿ ರಾಜಧಾನಿಯಲ್ಲಿ ಏನಾಗುತ್ತದೋ ಎಂದು ಎಲ್ಲರೂ ಕಾದು ನೋಡುತ್ತಿದ್ದರು. ಸೋವಿಯತ್ ಮಹಾಧಿವೇಶನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಈಗ ಸಮರಕ್ಕೆ ಆಹ್ವಾನ ನೀಡುವ ಸಂದೇಶವನ್ನು ಹೊತ್ತು ದೇಶದ ಎಲ್ಲ ಮೂಲೆಗಳಿಗೂ ತಲುಪಿಸಿದರು. ಕಾರ್ಮಿಕರು, ರೈತರು ಅಧಿಕಾರಕ್ಕೆ ಬಂದಂಥ ಪವಾಡವೊಂದು ಜರುಗಿದೆ ಎಂಬ ಸುದ್ದಿ ಹಳ್ಳಿಹಳ್ಳಿಗೂ ತಲುಪಿ ಎಲ್ಲೆಡೆ ಮಿಲಿಟರಿ ಕ್ರಾಂತಿಕಾರಿ ಸಮಿತಿಗಳು, ಸೋವಿಯತ್‌ಗಳು ಉದ್ಭವಿಸಿ, ಸ್ಥಳೀಯ ಡ್ಯೂಮಾಗಳ ವಿರುದ್ಧ, ವೈಟ್‌ಗಾರ್ಡ್‌ಗಳ ವಿರುದ್ಧ, ಸರ್ಕಾರಿ ಅಧಿಕಾರಿಗಳ ವಿರುದ್ಧ ಸೆಣೆಸಾಡಲಿಕ್ಕೆ ಸಜ್ಜಾದರು. ಎಲ್ಲರೂ ರಾಜಧಾನಿಯ ಸುದ್ದಿಗಾಗಿ ಕಾಯುತ್ತಿದ್ದರು.

ಡ್ಯೂಮಾದಲ್ಲಿ ಗದ್ದಲದ ಸಭೆಗಳು ಮುಂದುವರೆದಿದ್ದವು. ಮೇಯರ್ ಶ್ರೈಡರ್, ಭಾಷಣ ಬಿಗಿಯುತ್ತಾ, ಇದಕ್ಕೆ ಮುನ್ನ ಡ್ಯೂಮಾದಲ್ಲಿನ ಬೋಲ್ಶೆವಿಕ್ ಸದಸ್ಯರು, ಡ್ಯೂಮಾ ಪ್ರತಿ ಕ್ರಾಂತಿಯ ಕೇಂದ್ರವಾಗಿದೆ ಎಂದು ಜರಿದಿದ್ದ ಕರಪತ್ರವನ್ನು ಅಲ್ಲಗಳೆಯಲು ಯತ್ನಿಸುತ್ತಿದ್ದ.

"ಡ್ಯೂಮಾ ಪ್ರತಿ ಕ್ರಾಂತಿಯ ಕೇಂದ್ರವಲ್ಲ. ನಾವು ಯಾರ ಕಡೆಯೂ ಸೇರಿಲ್ಲ. ಈಗ ಕಾನೂನಾತ್ಮಕ ಸರ್ಕಾರ ಇಲ್ಲ. ಏನಾದರೂ ಇದ್ದರೆ ಅದು ಡ್ಯೂಮಾವೇ. ಇದನ್ನು ಜನರು, ವಿದೇಶಿ ಸರ್ಕಾರಗಳು ಮನ್ನಿಸುತ್ತಾರೆ. ನಮ್ಮ ಹಕ್ಕುಗಳನ್ನು ಎರಡೂ ಪಕ್ಷದವರೂ ರಕ್ಷಿಸಬೇಕು. ನಾವಂತೂ ತಟಸ್ಥರಪ್ಪ, ಬೋಲ್ಶೆವಿಕರ ದೂರವಾಣಿಗಳನ್ನು ಕತ್ತರಿಸಿದಾಗ ನಾನಂತೂ ಅದನ್ನು ವಿರೋಧಿಸಿದೆ" ಎಂದ. ಈಗ ಮಾತ್ರ ಬೋಲ್ಶೆವಿಕ್ ಸದಸ್ಯರು ತಡೆಯಲಾರದೆ ನಕ್ಕುಬಿಟ್ಟರು. ಬಲಪಂಥೀಯರೇ ತಮ್ಮನ್ನು ತಾವು ಶಪಿಸಿಕೊಳ್ಳಲಾರಂಭಿಸಿದರು.

ಮೇಯರ್ ಮುಂದುವರೆಸಿದ, "ಆದರೂ ನೋಡಿ ನಮ್ಮನ್ನು ಪ್ರತಿ ಕ್ರಾಂತಿಕಾರಿಗಳು ಎನ್ನುತ್ತಾರೆ. ನಮ್ಮ ಕಾರುಗಳನ್ನು ಕಿತ್ತುಕೊಂಡಿದ್ದಾರೆ."

ಇದಕ್ಕೆ ಉತ್ತರವಾಗಿ ಬೋಲ್ಶೆವಿಕ್ ಸದಸ್ಯ ಕೊಬೊಝೆವ್ ಮಾತನಾಡಿದ : ಮೊದಲನೆಯದಾಗಿ ಕಾರುಗಳನ್ನು ಕಿತ್ತುಕೊಳ್ಳಲು ಮಿಲಿಟರಿ ಕ್ರಾಂತಿಕಾರಿ ಆಜ್ಞೆ ನೀಡುವುದು ಸಾಧ್ಯವಿಲ್ಲ. ಮೇಯರ್ ಸಾಹೇಬರು ನಾವು ಡ್ಯೂಮಾವನ್ನು ರಾಜಕೀಯಕ್ಕೆ

ಉಪಯೋಗಿಸಿಕೊಳ್ಳಬಾರದು ಎಂದು ಉಪದೇಶಿಸುತ್ತಾರೆ. ಆದರೆ ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಶನರಿಗಳು ಡ್ಯೂಮಾದಲ್ಲೇ ತಮ್ಮ ನಿಷೇಧಿತ ವೃತ್ತಪತ್ರಿಕೆಗಳನ್ನು ವಿತರಿಸುತ್ತಾರೆ. ಅದರಲ್ಲಿ ನಮ್ಮ ವಿರುದ್ಧ ಸಶಸ್ತ್ರ ಬಂಡಾಯ ಏಳಬೇಕೆಂಬ ಕರೆ ಇರುತ್ತದೆ. ನಾವೂ ಇಂಥ ಚಟುವಟಿಕೆಗಳನ್ನು ಆರಂಭಿಸೋಣವೇ? ಆದರೆ ನಾವು ಡ್ಯಾಮಾಗೆ ಗೌರವ ಕೊಟ್ಟು ಹಾಗೆಲ್ಲಾ ಮಾಡುತ್ತಿಲ್ಲ. ನಾವು ಮುನಿಸಿಪಲ್ ಡ್ಯೂಮಾ ಮೇಲೆ ದಾಳಿ ಮಾಡಿಲ್ಲ, ಮಾಡುವುದೂ ಇಲ್ಲ. ಆದರೆ ನೀವು ನಮ್ಮ ವಿರುದ್ಧ ಮನವಿಯನ್ನು ಜನರಿಗೆ ಬಿಡುಗಡೆ ಮಾಡಿದ್ದೀರಿ. ನಾವು ಅದಕ್ಕೆ ಉತ್ತರಿಸಿದ್ದೀವಿ..."

ನಂತರ ಶಿಂಗಾರಿಯೊವ್ ಎಂಬ ಕ್ಯಾಡೆಟ್ ಪಕ್ಷದ ನಾಯಕನು, ಅಪರಾಧಿಗಳು ದ್ರೋಹಿಗಳು ಅದರೊಂದಿಗೆ ಯಾವ ಮಾತುಕತೆಯೂ ಸಾಧ್ಯವಿಲ್ಲ ; ಬೋಲ್ಶೆವಿಕ್ ಸದಸ್ಯರನ್ನು ಡ್ಯೂಮಾದಿಂದ ಹೊರಹಾಕಿ ಎಂದ. ಆದರೆ ಅದು ಕಾನೂನಿನ ರೀತ್ಯಾ ಸಾಧ್ಯವಿರಲಿಲ್ಲ. ಯಾವುದೇ ವೈಯಕ್ತಿಕ ಆರೋಪಗಳಿಲ್ಲದಿದ್ದ ಅವರೆಲ್ಲಾ ಮುನಿಸಿಪಲ್ ಕೆಲಸಗಳಲ್ಲಿ ದಕ್ಷರೆನಿಸಿಕೊಂಡಿದ್ದರು.

ಆಮೇಲೆ ಇಬ್ಬರು ಮೆನ್ಶೆವಿಕ್ ಇಂಟರ್‌ನ್ಯಾಷನಲಿಸ್ಟರು ಮಾತನಾಡಿದರು. ಅವರು ಬೋಲ್ಶೆವಿಕ್ ಸದಸ್ಯರ ಮನವಿ ನರಮೇಧಕ್ಕೆ ಎಡಮಾಡಿಕೊಡುತ್ತದೆ, ಬೋಲ್ಶೆವಿಕರನ್ನು ವಿರೋಧಿಸುವುದೆಂದರೆ ಪ್ರತಿ ಕ್ರಾಂತಿ ಅಲ್ಲ ಎಂದು ವಾದಿಸಿದರು. ಎರಡೂ ಕಡೆಯವರು ಮಾಡುವ ಹಿಂಸಾಚಾರವನ್ನೂ ಖಂಡಿಸುತ್ತೇವೆ ಎಂದು ಘೋಷಿಸಿದರು.

ನಂತರ ನಜ಼ಾಲೆವ್ ಮಾತನಾಡಿ "ನೆನ್ನೆ ನೀವು 'ಖಂಡನೆ' ಎಂಬ ಹೆಸರಿನಲ್ಲಿ ಮುದ್ರಿಸಿರುವ ಕರಪತ್ರವು ಜನತೆಯು ಉಳಿದ ರಾಜಕೀಯ ಪಕ್ಷಗಳನ್ನು ನಿರ್ಮೂಲನ ಮಾಡಬೇಕೆಂದು ಕರೆ ನೀಡುತ್ತದೆ. ನೆನ್ನೆ ಆರಂಭವಾದ ಭಯಾನಕ ಘಟನೆಗಳು ಮುಂದಿನ ಕರಾಳ ದಿನಗಳಿಗೆ ಮುನ್ಸೂಚನೆ ಆಗಿದೆಯಷ್ಟೇ. ನಿಮ್ಮನ್ನು ತಿರಸ್ಕಾರದಿಂದ ಖಂಡಿಸುತ್ತೇವೆ" ಎಂದ. ಬೋಲ್ಶೆವಿಕ್ ಸದಸ್ಯರು ಎದ್ದುನಿಂತು ಅವನನ್ನು ವಿರೋಧಿಸುತ್ತಿರುವಾಗಲೇ ನಾವಲ್ಲಿಂದ ಹೊರನಡೆದೆವು.

ಹೊರಗಡೆ ನನಗೆ ಕೆಲವರು ಮೆನ್ಶೆವಿಕರು ಮತ್ತು ಪರ್ತಕರ್ತರು ಭೇಟಿಯಾದರು. ಅವರೆಲ್ಲಾ ಅತಿಯಾದ ಉತ್ಸಾಹದಲ್ಲಿದ್ದರು. ನಮ್ಮನ್ನು ನೋಡಿ "ನೋಡಿದಿರಾ. ಅವರೆಲ್ಲಾ ಹೇಡಿಗಳು, ಅವರಿಗೆ ಡ್ಯೂಮಾನ ಬಂಧಿಸೋ ಧೈರ್ಯ ಇಲ್ಲ. ಇವತ್ತು ರಸ್ತೆಯಲ್ಲಿ ಒಬ್ಬ ಹುಡುಗ 'ಸೋಲ್ಡಾತ್ಸ್‌ಕಿ ಗಲೋಸ್' ಪತ್ರಿಕೆಯನ್ನು ಮಾರ್ತಾ ಇದ್ರೆ, ಒಬ್ಬ ರೆಡ್‌ಗಾರ್ಡ್ ಅದನ್ನು ಕಸಿದುಕೊಳ್ಳೋಕೆ ಹೋದ. ಜನ ಸುತ್ಕೊಂಡೂಬಿಟ್ರು, ಇನ್ನು ಸ್ವಲ್ಪ ಇದ್ರೆ ಆ ರೆಡ್‌ಗಾರ್ಡ್‌ನ ಅಲ್ಲೇ ಕೊಂದುಬಿಡೋರು. ಇನ್ನು ಕೆಲವೇ ಘಂಟೆ ಕೆರೆನ್‌ಸ್ಕಿ ಬರೋದು ತಡವಾದ್ರೂ ಇವರಿಗೆ ಸರ್ಕಾರ ನಡೆಸೋಕೆ ಜನ ಎಲ್ರಿ ಇದಾರೆ? ಅಯ್ಯೋ! ಆಗ್ಲೇ ಸ್ಮೋಲ್ನಿಯಲ್ಲೇ ಒಳಜಗಳ ಶುರುವಾಗಿದೆಯಂತೆ ಗೊತ್ತಾ" ಎಂದರು.

ಅಷ್ಟರಲ್ಲಿ ನನ್ನ ಸೋಷಲಿಸ್ಟ್ ರೆವಲ್ಯೂಶನರಿ ಮಿತ್ರನೊಬ್ಬ ಸಿಕ್ಕಿದ. ಅವನು "ಮಿಲಿಟರಿ ಕ್ರಾಂತಿಕಾರಿ ಸಮಿತಿ ಎಲ್ಲಿ ಭೂಗತವಾಗಿದೆ ನನಗೆ ಗೊತ್ತು. ಅವರ ಜೊತೆ ಮಾತಾಡಕ್ಕೆ ಇಷ್ಟ ಇದೆಯೇನು?" ಎಂದು ಕೇಳಿದ. ಹೊರಟೆವು.

ಆಗಲೇ ಕತ್ತಲಾಗುತ್ತಿತ್ತು. ನಗರವು ಸಹಜ ಸ್ಥಿತಿಗೆ ಮರಳಿದಂತಿತ್ತು. ನಾವು ನೆವ್‌ಸ್ಕಿ ರಸ್ತೆಯ 86ನೇ ಮನೆಗೆ ತಲುಪಿದೆವು. ಅಲ್ಲಿ 229ನೇ ಅಪಾರ್ಟ್‌ಮೆಂಟಿನ ಬಾಗಿಲಿನ

ಮೇಲೆ ನನ್ನ ಮಿತ್ರ ಗುಪ್ತ ಸಂಕೇತದಲ್ಲಿ ತಟ್ಟಿದ. ಒಳಗೆ ಏನೋ ಅವಸರದಲ್ಲಿ ತಳ್ಳಾಡಿದ ಸದ್ದು ಕೇಳಿ ಬಂತು. ನಂತರ ಬಾಗಿಲು ಕೊಂಚ ತೆರೆದು ಯಾರೋ ಹೆಂಗಸು ಇಣುಕಿ ಹಾಕಿ ನಮ್ಮನ್ನೇ ದಿಟ್ಟಿಸಿ ನೋಡಿ, "ಕೈರಿಲ್, ಏನೂ ಗಾಬರಿ ಆಗೋ ಅಂಥಾದ್ದಿಲ್ಲ" ಎಂದು ಕೂಗುತ್ತಾ ನಮ್ಮನ್ನು ಒಳಗೆ ಕರೆದುಕೊಂಡು ಹೋದಳು. ಅಲ್ಲಿ ಮೇಜಿನ ಮೇಲೆ ತಿಂಡಿ ಇದ್ದು, ಚಹಾದ ತಯಾರಿ ನಡೆಯುತ್ತಿತ್ತು.

ಕಿಟಕಿಯ ಪರದೆಗಳ ಹಿಂದೆ ಬಚ್ಚಿಟ್ಟುಕೊಂಡಿದ್ದ ಒಬ್ಬ ಅಧಿಕಾರಿಗಳ ಸಮವಸ್ತ್ರದಲ್ಲಿದ್ದಾತ ಹೊರಗೆ ಬಂದ. ಇನ್ನೊಬ್ಬ ಬೀರುವಿನಿಂದ ಹೊರಕ್ಕೆ ಕಾರ್ಮಿಕನ ಉಡುಪಿನಲ್ಲಿ ಅವತರಿಸಿದ. ಅವರಿಬ್ಬರಿಗೂ ಅಮೆರಿಕನ್ ವರದಿಗಾರನನ್ನು ಭೇಟಿಯಾದದ್ದು ಖುಷಿ. ಬೋಲ್ಶೆವಿಕರು ತಮ್ಮನ್ನು ಕಂಡರೆ ಕೊಲ್ಲುವರೆಂದೂ, ತಾವು ಸೋಷಲಿಸ್ಟ್ ರೆವಲ್ಯೂಶನರಿಗಳೆಂದೂ ಅವರು ಉತ್ಸಾಹದಿಂದಲೇ ಹೇಳಿಕೊಂಡರು. ಅವರು ತಮ್ಮ ಹೆಸರುಗಳನ್ನು ಮಾತ್ರ ಹೇಳಲಿಲ್ಲ.

"ನೀವೇಕೆ ನಿಮ್ಮ ಪತ್ರಿಕೆಗಳಲ್ಲಿ ಅಂಥಾ ಸುಳ್ಳುಗಳನ್ನು ಪ್ರಕಟಿಸುತ್ತೀರಿ?" ನಾನು ಕೇಳಿದೆ. ಅವನು ಕೋಪಿಸಿಕೊಳ್ಳದೆಯೇ ಉತ್ತರ ಕೊಟ್ಟ, "ಏನು ಮಾಡೋದು. ಜನರಲ್ಲಿ ಒಂದು ಮನಃಸ್ಥಿತಿಯನ್ನು ಸೃಷ್ಟಿ ಮಾಡಬೇಕು ಅಂದರೆ ಅದನ್ನೆಲ್ಲಾ ಬರೆಯಬೇಕಾಗುತ್ತೆ."

ಇನ್ನೊಬ್ಬ ಮಾತಿನಲ್ಲಿ ಬಾಯಿಹಾಕಿದ, "ಇದು ಬೋಲ್ಶೆವಿಕರ ದುಃಸಾಹಸ. ಅವರಲ್ಲಿ ಬುದ್ಧಿಜೀವಿಗಳಿಲ್ಲ. ಸರ್ಕಾರ ನಡೆಯೋಲ್ಲ ನೋಡ್ತಿರಿ. ಅವರು ಇರೋದು ಕೆಲವೇ ದಿನ ಅನ್ನೋದನ್ನ ಅರ್ಥಮಾಡಿಕೊಂಡು, ನಾವು ಅವರನ್ನು ಎದುರಿಸೋಕೆ ಆಗೋ ಅಂಥ ಬಲವಾದ ಶಕ್ತಿ ಯಾವುದು ಅಂತ ನೋಡಿ ಕೆರೆನ್‌ಸ್ಕಿಯನ್ನು ಬೆಂಬಲಿಸ್ತಿದೀವಿ. ಮೊದಲು ಸುವ್ಯವಸ್ಥೆ ವಾಪಸಾಗಲಿ ಅಂತ."

"ಅದು ಸರಿ, ಆದರೆ ಕ್ಯಾಡೆಟ್ ಪಕ್ಷವನ್ನು ಯಾಕೆ ಬೆಂಬಲಿಸುತ್ತೀರಿ?"

ಅವರಲ್ಲಿ ಕಾರ್ಮಿಕರ ವೇಷ ಹಾಕಿಕೊಂಡಿದ್ದವನು ಹೇಳಿದ, "ನಿಜ ಹೇಳಬೇಕೂಂದ್ರೆ, ಈ ಹೊತ್ತಿನಲ್ಲಿ ಜನಸಮುದಾಯ ಬೋಲ್ಶೆವಿಕರ ಜೊತೆಗಿದೆ. ನಮಗೆ ಬೆಂಬಲ ಇಲ್ಲ. ನಾವು ಕೆಲವು ಸೈನಿಕರನ್ನು ಒಟ್ಟುಗೂಡಿಸಕ್ಕಾಗಲ್ಲ. ಆಯುಧಗಳಿಲ್ಲ. ಬೋಲ್ಶೆವಿಕರು ಹೇಳೋದ್ರಲ್ಲಿ ಸತ್ಯವಿದೆ. ಈಗ ರಷ್ಯಾದಲ್ಲಿ ಇರೋದು ಎರಡೇ ಶಿಬಿರ. ಒಂದು ಬೋಲ್ಶೆವಿಕರದ್ದು. ಇನ್ನೊಂದರಲ್ಲಿ ಎಲ್ಲಾ ಪ್ರತಿಗಾಮಿಗಳೂ ಇದ್ದಾರೆ – ಕ್ಯಾಡೆಟ್‌ಗಳ ಬೆನ್ನ ಹಿಂದೆ ಅವಿತುಕೊಂಡು. ಕ್ಯಾಡೆಟ್‌ಗಳು ನಮ್ಮನ್ನು ಉಪಯೋಗಿಸಿಕೊಳ್ತೀವಿ ಅಂತ ಅಂದುಕೊಂಡಿದ್ದಾರೆ. ವಾಸ್ತವದಲ್ಲಿ ನಾವು ಅವರನ್ನು ಉಪಯೋಗಿಸಿಕೊಳ್ತಿದೀವಿ. ಬೋಲ್ಶೆವಿಕರನ್ನು ನಾಶ ಮಾಡಿದ ಮೇಲೆ ನಾವು ಕ್ಯಾಡೆಟ್‌ಗಳ ವಿರುದ್ಧ ತಿರುಗಿಬೀಳ್ತೀವಿ..."

"ಹೊಸ ಸರ್ಕಾರದಲ್ಲಿ ಬೋಲ್ಶೆವಿಕರನ್ನು ಸೇರಿಸಿಕೊಳ್ಳುತ್ತೀರೇನು?" ನಾನು ಕೇಳಿದೆ. ಅವನು ತಲೆ ಕೆರೆದುಕೊಳ್ಳುತ್ತಾ ನುಡಿದ: "ಅದೊಂದು ಸಮಸ್ಯೆ ನೋಡಿ, ಅವರನ್ನು ಸೇರಿಸಿಕೊಳ್ಳದಿದ್ದರೆ ಈ ಅವಾಂತರವನ್ನೆಲ್ಲಾ ಮತ್ತೆ ಸೃಷ್ಟಿಸ್ತಾರೆ. ಒಟ್ಟಿನಲ್ಲಿ ಅವರಿದ್ರೆ ಸಂವಿಧಾನಾತ್ಮಕ ಶಾಸನ ಸಭೆಯಲ್ಲಿ ಒಂದು ಸಮತೋಲನ ಇರುತ್ತೆ ಅನ್ನಿ; ಆದರೆ ಶಾಸನಸಭೆ ಆಗುತ್ತೋ ಇಲ್ವೋ..."

ಅಧಿಕಾರಿ ಪ್ರಾರಂಭಿಸಿದ : "ಮತ್ತೆ ಕ್ಯಾಡೆಟ್‌ಗಳನ್ನು ಸೇರಿಸಿಕೊಳ್ಳೋ ಪ್ರಶ್ನೆ ಬರುತ್ತೆ. ಕ್ಯಾಡೆಟ್‌ಗಳಿಗೆ ಬೋಲ್ಶೆವಿಕರನ್ನು ಈಗ ತುಳಿದುಹಾಕಿಬಿಡಕ್ಕಾದ್ರೆ, ಸಂವಿಧಾನಾತ್ಮಕ ಶಾಸನ

ಸಭೇನ ರಚಿಸೋದು ಬೇಕಾಗಿಲ್ಲ." ಕಷ್ಟ, ಕಷ್ಟ ಎನ್ನುವಂತೆ ತಲೆಯಾಡಿಸಿ ಹೇಳಿದ, "ನೀವು ಅಮೆರಿಕನ್ನರು ಹುಟ್ಟಾ ರಾಜಕಾರಣಿಗಳು, ಬಹಳ ಅನುಭವ ಇದೆ. ನಮಗಿದು ಹೊಸದು. ವರ್ಷ ಆಯ್ತು ಅಷ್ಟೇ."

"ಕೆರೆನ್‌ಸ್ಕಿ ಬಗ್ಗೆ ಏನಂತೀರಿ?" ನಾನು ಕೇಳಿದೆ.

"ಹಂಗಾಮಿ ಸರ್ಕಾರದ ಪಾಪಗಳಿಗೆ ಅವನೇ ಹೊಣೆ." ಇನ್ನೊಬ್ಬ ಹೇಳಿದ: "ಬೂರ್ಶ್ವಾಗಳ ಜೊತೆ ಮೈತ್ರಿ ಮಾಡ್ಕೊಳೋಕೆ ಒತ್ತಾಯ ಮಾಡಿದೋನೆ ಅವನು. ಆದರೆ ಅವನು ರಾಜಿನಾಮೆ ಕೊಟ್ಟಿದ್ರೆ ಬಿಕ್ಕಟ್ಟು ಉಂಟಾಗ್ತಿತ್ತು. ಹಾಗಾಗಿ ನಾವು ಅದನ್ನು ತಪ್ಪಿಸಲಿಕ್ಕೆ ನೋಡಿದ್ವಿ."

"ಕಡೆಗೂ ಆಗಿದ್ದು ಅದೇ ಅಲ್ವೇ?"

"ಕೆರೆನ್‌ಸ್ಕಿ ನಮಗೆ ಮೋಸ ಮಾಡಿಬಿಟ್ಟ, ಏನು ಮಾಡೋದು, ಚೆರ್ನೆವ್ ವಾಸಿ, ಅವನು ಕ್ರಾಂತಿಕಾರಿ. ಇವತ್ತಿಗೂ ಲೆನಿನ್‌ನಿಂದ ಆಹ್ವಾನ ಬಂದಿದೆ ಅವನಿಗೆ, ಸರ್ಕಾರ ಸೇರು ಅಂತ. ನಮಗೂ ಕೆರೆನ್‌ಸ್ಕಿ ಸರ್ಕಾರ ಹೋಗೋದು ಬೇಕಿತ್ತು. ನಾನಂತೂ ಪ್ರಾರಂಭದಲ್ಲಿ ಬೋಲ್ಶೆವಿಕರ ಪರವಾಗೇ ಇದ್ದೆ. ಆದ್ರೆ ಏನ್ಮಾಡೋದು ಪಾರ್ಟಿ ಶಿಸ್ತು ಅಂತ ಒಂದು ಇರುತ್ತಲ್ಲ!"

"ಇನ್ನೊಂದು ವಾರದಲ್ಲಿ ಬೋಲ್ಶೆವಿಕ್ ಸರ್ಕಾರ ತಾನೇ ಚೂರುಚೂರಾಗುತ್ತೆ. ಸೋಷಲಿಸ್ಟ್ ರೆವಲ್ಯೂಶನರಿಗಳು ಸುಮ್ಮನೆ ಕಾಯ್ತಾ ಕೂತಿದ್ರೆ ಸಾಕು. ಸರ್ಕಾರ ಬಂದು ನಮ್ಮ ಮಡಿಲಿಗೇ ಬೀಳುತ್ತೆ. ಆದ್ರೆ ಏನ್ಮಾಡೋದಪ್ಪ ಒಂದು ವಾರದಲ್ಲಿ ದೇಶವೇ ಅಸ್ತವ್ಯಸ್ತವಾಗುತ್ತೆ. ಜರ್ಮನ್ ಸಾಮ್ರಾಜ್ಯಶಾಹಿಗಳು ಗೆದ್ದುಬಿಡ್ತಾರೆ. ಅದಕ್ಕೆ ನಾವು ಎರಡೇ ಸೈನಿಕ ಪಡೆ ಜೊತೇಲಿ ಬಂಡಾಯ ಆರಂಭಿಸಿದ್ವಿ, ಅವರೂ ಕೈ ಕೊಟ್ರು, ಉಳಿದಿದ್ದದ್ದು ಬರೀ ಯಂಕರ್‌ಗಳು..."

"ಕೊಸ್ಸಾಕರ ಬಗ್ಗೆ ಏನು ಹೇಳ್ತೀರಿ?"

ಅಧಿಕಾರಿ ನಿಟ್ಟುಸಿರುಬಿಟ್ಟ. "ಅವರು ಬರಲೇ ಇಲ್ಲ. ಒಂದೊಂದು ಸಲ ಒಂದೊಂದು ನೆಪ ಹೇಳಿದ್ರು, ಕೆಲವರು ಕೆರೆನ್‌ಸ್ಕಿ ಜೊತೆಯಲ್ಲಿದ್ದಾರೆ. ಮತ್ತೆ ಬೋಲ್ಶೆವಿಕರು ಎಲ್ಲರಿಗೂ ಜಮೀನು ಕೊಡ್ತೀವಿ ಅಂದರಲ್ಲ. ಮುಗೀತು, ಈಗ ಅವರು ನಾವು ತಟಸ್ಥರಾಗಿರ್ತೀವಿ ಅಂತಾರೆ!"

ನಾವು ಮಾತನಾಡುತ್ತಿರುವಾಗ ಅನೇಕ ಅಧಿಕಾರಿಗಳು ಬಂದು ಹೋಗುತ್ತಿದ್ದರು. ಅವರೆಲ್ಲಾ ತಮ್ಮ ಸಮವಸ್ತ್ರಗಳ ಮೇಲಿದ್ದ ಅಧಿಕಾರಿಗಳ ಚಿಹ್ನೆಗಳನ್ನು ಹರಿದು ಬಿಸಾಕಿ ಬಿಟ್ಟಿದ್ದರು. ಶೌಚಾಲಯದಲ್ಲಿ ಅಡಗಿ ಒಬ್ಬ ಕರ್ನಲ್ ಏನೋ ಬರೆಯುತ್ತಿದ್ದ. ನೋಡಿದರೆ ಅವನು ಪಲ್ಕೋವ್‌ನಿಕೊವ್, ಮುಂಚೆ ಪೆತ್ರೋಗ್ರಾಡ್‌ನ ಕಮಾಂಡೆಂಟ್ ಆಗಿದ್ದವನು! ಅವನ ಸುಳಿವು ಕೊಟ್ಟರೆ ಭಾರೀ ಬಹುಮಾನವಿತ್ತು.

ನಿಮ್ಮ ಕಾರ್ಯಕ್ರಮವೇನು ಎಂದರೆ ಅವನು ಬೋಲ್ಶೆವಿಕರು ಈಗಾಗಲೇ ಘೋಷಿಸಿ ಜಾರಿಗೊಳಿಸಲು ಹೊರಟಿರುವ ಕಾರ್ಯಕ್ರಮವನ್ನೇ ಪುನರುಚ್ಚರಿಸಿದ. ಜೊತೆಗೆ "ನೋಡಿ, ಶಾಂತಿ ಬೇಕು. ಆದರೆ ಇಷ್ಟು ದಿನದ ಒಳಗೆ ಆಗಲೇಬೇಕು ಅಂತ ಬೇರೆ ದೇಶಗಳಿಗೆ ಗಡುವು ವಿಧಿಸಕ್ಕೆ ಆಗಲ್ಲ. ಬೋಲ್ಶೆವಿಕರು ಕೊಟ್ಟಿರೋ ಯಾವ ವಾಗ್ದಾನಾನೂ ಉಳಿಸಿಕೊಳ್ಳೋಕೆ ಆಗಲ್ಲ. ಅಲ್ಲ ನೋಡಿ, ಅವರು ರೈತರಿಗೆ ಸಂಬಂಧಿಸಿದ ಕಾರ್ಯಕ್ರಮಾನ ನಮ್ಮಿಂದ ಕದ್ದಿದ್ದಾರೆ. ಶಾಸನಸಭೆ ರಚನೆಗೂ ಕಾಯ್ಲಿಲ್ಲ..."

ಅಧಿಕಾರಿ ಬಾಯಿಹಾಕಿದ : "ಬರೀ ಶಾಸನಸಭೆ ಪ್ರಶ್ನೆ ಅಲ್ಲ. ಬೋಲ್ಶೆವಿಕರು ಸಮಾಜವಾದಿ ವ್ಯವಸ್ಥೆ ಸ್ಥಾಪಿಸ್ತೀವಿ ಅಂದ್ರೂ ನಮಗೆ ಅವರ ಜೊತೆ ಕೆಲಸ ಮಾಡೋಕೆ ಆಗಲ್ಲ. ಕೆರೆನ್‌ಸ್ಕಿ ತಪ್ಪುಮಾಡಿದ. ಬೋಲ್ಶೆವಿಕರನ್ನ ದಸ್ತಗಿರಿ ಮಾಡ್ತಿದೀವಿ ಅನ್ನೋದನ್ನ ಅವನು ಬಹಿರಂಗಪಡಿಸಬಾರದಿತ್ತು."

"ಆಯ್ತು, ಈಗ ನೀವು ಏನು ಮಾಡಬೇಕೂಂತ ಇದೀರಿ?"

ಇಬ್ಬರೂ ಮುಖ ಮುಖ ನೋಡಿಕೊಂಡರು. "ನಮಗೆ ಸರಿಯಾಗಿ ಸೈನ್ಯಗಳು ಸಿಕ್ಕಿದರೆ ನಾವು ಬೋಲ್ಶೆವಿಕರ ಜೊತೆ ರಾಜಿ ಆಗಲ್ಲ. ಇಲ್ಲದಿದ್ರೆ ನೋಡೋಣ..."

ಒಟ್ಟಿನಲ್ಲಿ ಅವರ ಅಸಹಾಯಕತೆ, ತಂತ್ರಗಾರಿಕೆ ಸ್ಪಷ್ಟವಾಗಿತ್ತು. ನಾವು ಅಲ್ಲಿಂದ ಹೊರಟು ನೆವ್‌ಸ್ಕಿ ಮುಖ್ಯರಸ್ತೆಗೆ ಬಂದೆವು. ಟ್ರಾಮ್ ಒಂದನ್ನು ಹತ್ತಿದೆವು. ಅದು ಕಿಕ್ಕಿರಿದು ತುಂಬಿ, ಮೆಟ್ಟಿಲಿನ ಭಾಗ ನೆಲಕ್ಕೆ ಉಜ್ಜುತ್ತಿತ್ತು. ನಿಧಾನವಾಗಿ ಸ್ಮೋಲ್ನಿಯತ್ತ ಅದು ತೆವಳಿತು.

ನಾವು ಸ್ಮೋಲ್ನಿಯನ್ನು ತಲುಪಿದಾಗ ಮೆಶ್‌ಕೊವ್‌ಸ್ಕಿ ಎಂಬ ಅಚ್ಚುಕಟ್ಟಾದ, ಪುಟ್ಟ ಬಡಕಲು ಮನುಷ್ಯ ಸಭಾಂಗಣದಿಂದ ಚಿಂತಾಕ್ರಾಂತನಾಗಿ ಬರುತ್ತಿದ್ದ. ಸಚಿವಾಲಯಗಳಲ್ಲಿನ ಮುಷ್ಕರದ ಪರಿಣಾಮ ಕೆಟ್ಟದಾಗಿದೆ ಎಂದು ಅವನು ವಿವರಿಸಿದ. ವಿದೇಶಗಳೊಂದಿಗಿನ ಎಲ್ಲಾ ಗುಪ್ತ ಒಪ್ಪಂದಗಳನ್ನು ಬಹಿರಂಗಗೊಳಿಸುತ್ತೇವೆ ಎಂದು ಮಾತುಕೊಟ್ಟಿದ್ದೆವು. ಈಗ ನೋಡಿದರೆ ಅದಕ್ಕೆ ಸಂಬಂಧಿಸಿದ ಅಧಿಕಾರಿ ಅದನ್ನೆತ್ತಿಕೊಂಡು ಓಡಿಹೋಗಿದ್ದಾನೆ. ಬ್ರಿಟಿಷ್ ರಾಯಭಾರಿ ಕಛೇರಿಯಲ್ಲಿ ಬಚ್ಚಿಟ್ಟಿದ್ದಾನೆ ಎಂದು ಗುಮಾನಿ."

"ಇನ್ನೂ ಕೆಟ್ಟದ್ದೆಂದರೆ ಬ್ಯಾಂಕ್ ಮುಷ್ಕರದಿಂದ ಕೈಲಿ ಹಣವಿಲ್ಲ. ರೈಲ್ವೆ, ಅಂಚೆ-ತಂತಿ ಕಾರ್ಮಿಕರಿಗೆ ಸಂಬಳ ಕೊಡಲು ಅಸಹಾಯಕರಾಗಿದ್ದೇವೆ. ಮುಖ್ಯವಾದ ಸ್ಟೇಟ್ ಬ್ಯಾಂಕ್‌ನ್ನು ಮುಚ್ಚಲಾಗಿದೆ. ಎಲ್ಲಾ ಬ್ಯಾಂಕ್‌ಗಳ ಗುಮಾಸ್ತರಿಗೆ ಲಂಚ ತಿನ್ನಿಸಿ ಕೆಲಸ ನಿಲ್ಲಿಸಿದ್ದಾರೆ..."

"ಆದರೆ ಈಗ ಲೆನಿನ್ ಎಲ್ಲಾ ಬ್ಯಾಂಕ್ ಖಜಾನೆಗಳ ಬಾಗಿಲುಗಳಿಗೆ ಡೈನಮೈಟ್ ಇಟ್ಟು ಸಿಡಿಸಲು ಹೇಳಿದ್ದಾರೆ. ಖಾಸಗಿ ಬ್ಯಾಂಕ್‌ಗಳು ನಾಳೆ ತೆರೆಯಲೇ ಬೇಕು ಎಂದು ಆಜ್ಞೆ ಹೊರಡಿಸಲಾಗಿದೆ."

ಇತ್ತ ಪೆತ್ರೋಗ್ರಾಡ್ ಸೋವಿಯತ್‌ನ ಸಭೆ ಪೂರ್ಣವೇಗದಲ್ಲಿ ನಡೆಯುತ್ತಿತ್ತು. ಸಭೆಯಲ್ಲಿ ಶಸ್ತ್ರಧಾರಿಗಳೇ ತುಂಬಿದ್ದರು. ಟ್ರಾಟ್‌ಸ್ಕಿ ಹೊಸ ಬೆಳವಣಿಗೆಗಳನ್ನು ವರದಿ ಮಾಡಿದ.

"ತ್ಸಾರ್‌ಸ್ಕೊಯೆ ಸೆಲೋಯಿಂದ ಕೊಸ್ಸಾಕರು ಹಿಮ್ಮೆಟ್ಟುತ್ತಿದ್ದಾರೆ." ವಿಪರೀತ ಹರ್ಷೋದ್ಗಾರ !

"ಆದರೆ ಯುದ್ಧದ ಆರಂಭ ಇದು. ಪುಲ್ಕೊವೊದಲ್ಲಿ ಭಾರೀ ಯುದ್ಧ ಆರಂಭವಾಗಿದೆ. ಲಭ್ಯವಿರುವ ಎಲ್ಲಾ ಪಡೆಗಳನ್ನೂ ಅಲ್ಲಿಗೇ ಕ್ಷಿಪ್ರವಾಗಿ ರವಾನಿಸಬೇಕಾಗಿದೆ... ಮಾಸ್ಕೋದಿಂದ ಬರುತ್ತಿರುವ ಸುದ್ದಿ ಮಾತ್ರ ಚೆನ್ನಾಗಿಲ್ಲ. ಕ್ರೆಮ್ಲಿನ್ ಯಂಕರ್‌ಗಳ ಕೈಯಲ್ಲಿದೆ. ಕಾರ್ಮಿಕರ ಕೈಯಲ್ಲಿ ಶಸ್ತ್ರಾಸ್ತ್ರಗಳಿಲ್ಲ. ಪೆತ್ರೋಗ್ರಾಡ್‌ನಲ್ಲಿ ಏನಾಗುತ್ತದೆ ಎಂಬುದರ ಮೇಲೆ ಎಲ್ಲಾ ನಿಂತಿದೆ.

"ಆದರೆ ರಣಾಂಗಣದಲ್ಲಿ ಮಾತ್ರ ಶಾಂತಿ ಮತ್ತು ಜಮೀನಿನ ಕುರಿತಾದ ನಮ್ಮ ಡಿಕ್ರಿಗಳಿಂದ ಸೈನಿಕರಲ್ಲಿ ತುಂಬ ಉತ್ಸಾಹ ಉಂಟಾಗಿದೆ. 'ಪೆತ್ರೋಗ್ರಾಡ್ ಉರಿಯುತ್ತಿದೆ. ರಕ್ತದ ಹೊಳೆ ಹರಿಯುತ್ತಿದೆ, ಹೆಂಗಸರು ಮಕ್ಕಳನ್ನು ಬೋಲ್ಶೆವಿಕರು ಕೊಚ್ಚಿಹಾಕಿದ್ದಾರೆ' ಎಂಬಂಥ ಕಟ್ಟುಕಥೆಗಳನ್ನು ಕೆರೆನ್‌ಸ್ಕಿ ಹರಡುತ್ತಿದ್ದಾನೆ. ಆದರೆ ಯಾರೂ ಅವುಗಳನ್ನು ನಂಬುತ್ತಿಲ್ಲ.

“ನೇವಾ ನದಿಯಲ್ಲಿ ನಿಂತಿರುವ ನಮ್ಮ ಅರೋರಾ ಮುಂತಾದ ಭಾರೀ ಯುದ್ಧ ನೌಕೆಗಳು ರಾಜಧಾನಿಯನ್ನು ಪ್ರವೇಶಿಸುವ ದಾರಿಗಳ ಮೇಲೆ ಗುಂಡಿನ ಮಳೆಗರೆಯಲು ಸಿದ್ಧವಾಗಿ ನಿಂತಿವೆ...”

‘ನೀನೇಕೆ ಇನ್ನೂ ಇಲ್ಲಿದ್ದೀಯಾ?’ ಯಾರೋ ಒರಟಾಗಿ ಕೇಳಿದರು.

“ನಾನೂ ಹೊರಟೆ” ಎನ್ನುತ್ತಾ ಟ್ರಾಟ್‌ಸ್ಕಿ ಮಿತ್ರರೊಂದಿಗೆ ಎಂದಿಗಿಂತ ಹೆಚ್ಚು ಬಿಳಿಚಿಕೊಂಡ ಮುಖದೊಂದಿಗೆ ಅವಸರದಲ್ಲಿ ಹೊರಗೆ ನಿಂತಿದ್ದ ವಾಹನದತ್ತ ಹೊರಟ.

ಈಗ ಕಮೆನೇವ್ ರಾಜಿ ಒಪ್ಪಂದಕ್ಕಾಗಿ ನಡೆದ ಸಮ್ಮೇಳನದ ವರದಿಯನ್ನು ಒಪ್ಪಿಸಿದ. ಮೆನ್ಶೆವಿಕರ ಕದನ ವಿರಾಮದ ಸಲಹೆಗಳನ್ನು ರೈಲ್ವೆ ನಾಯಕರೂ ಸೇರಿದಂತೆ ಎಲ್ಲರೂ ತಿರಸ್ಕರಿಸಿದ್ದರು.

ಆತ ವ್ಯಂಗ್ಯವಾಗಿ ಮುಂದುವರೆಸಿದ, “ನಾವೀಗ ಗೆದ್ದು ಇಡೀ ರಷ್ಯಾವನ್ನೇ ಆವರಿಸಿಕೊಳ್ಳುತ್ತಿರುವುದರಿಂದ, ನಮ್ಮ ವಿರೋಧಿಗಳದ್ದು ಪಾಪ ಮೂರೇ ಮೂರು ಪುಟ್ಟ ಬೇಡಿಕೆಗಳಿವೆ. 1. ನಾವು ಅಧಿಕಾರವನ್ನು ತ್ಯಾಗಮಾಡಬೇಕು 2. ಸೈನಿಕರು ವಿದೇಶಗಳೊಂದಿಗಿನ ಯುದ್ಧ ಮುಂದುವರೆಸುವಂತೆ ಮಾಡಬೇಕು 3. ರೈತರು ಜಮೀನಿನ ಬೇಡಿಕೆಯನ್ನು ಮರೆಯುವಂತೆ ಮಾಡಬೇಕು!” ಇದಕ್ಕೆ ಜನರ ಪ್ರತಿಕ್ರಿಯೆ ಏನೆಂಬುದು ಸ್ಪಷ್ಟ ವಿವರಿಸಬೇಕಿಲ್ಲವಷ್ಟೇ ! ಲೆನಿನ್ ಒಂದು ಸಣ್ಣ ಮಧ್ಯಪ್ರವೇಶ ಮಾಡಿದರು. ಅದು ಸೋಷಲಿಸ್ಟ್ ರೆವಲ್ಯೂಶನರಿಗಳ ಆಪಾದನೆಯನ್ನು ಉತ್ತರಿಸಲಿಕ್ಕೆ ಅಷ್ಟೇ. ಅವರು ಹೇಳಿದರು.

“ಸೋಷಲಿಸ್ಟ್ ರೆವಲ್ಯೂಶನರಿಗಳು ಆಪಾದಿಸುತ್ತಾರೆ, ಬೋಲ್ಶೆವಿಕರು ನಮ್ಮ ಭೂಮಿ ಕುರಿತಾದ ಕಾರ್ಯಕ್ರಮವನ್ನು ಕದ್ದಿದ್ದಾರೆ ಅಂತ... ಅದು ನಿಜವೇ ಅಂದುಕೊಳ್ಳಿ... ನಾವು ಕೃತಜ್ಞತೆಯಿಂದ ಅದಕ್ಕಾಗಿ ಅವರಿಗೆ ತಲೆಬಾಗಿ ವಂದಿಸುತ್ತೇವೆ. ಒಳ್ಳೆಯದೇ ಆಯಿತು ನಿಮ್ಮಿಂದ ಎನ್ನುತ್ತೇವೆ...”

ಹೀಗೆಯೇ ಸಭೆ ಮುಂದುವರೆಯುತ್ತಾ ಹೋಯಿತು. ನಾಯಕರಾದ ಮೇಲೆ ಇನ್ನೊಬ್ಬ ನಾಯಕರು ಮಾತನಾಡುತ್ತಲೇ ಇದ್ದರು. ವಿವರಣೆ, ಆಗ್ರಹ, ವಾಗ್ವಾದ ನಡೆದಿದ್ದವು. ಸೈನಿಕನಾದ ಮೇಲೆ ಸೈನಿಕ, ಕಾರ್ಮಿಕನಾದ ಮೇಲೆ ಕಾರ್ಮಿಕ ಬಂದು ತಮ್ಮ ಮನಸ್ಸನ್ನೂ ಹೃದಯವನ್ನೂ ಅಲ್ಲಿ ತೆರೆದಿಡುತ್ತಿದ್ದರು. ಸಭಾಂಗಣದೊಳಗೆ ಬರುವವರು ಬರುತ್ತಲೇ ಇದ್ದರು. ಹೋಗುವವರು ಹೋಗುತ್ತಿದ್ದರು. ಆಗಾಗ್ಗೆ ಯಾರೋ ಬಂದು ಇಡಿಯ ತುಕಡಿಗಳನ್ನೇ ರಣಾಂಗಣಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಕೆಲವರು ಯುದ್ಧದಿಂದ ಬಿಡುವು ಸಿಕ್ಕಿ ಬಂದವರು, ಕೆಲವರು ಗಾಯಗೊಂಡು ಹಿಂತಿರುಗಿದವರು. ಇನ್ನು ಕೆಲವರು ಶಸ್ತ್ರಾಸ್ತ್ರಗಳನ್ನು ಪಡೆದುಕೊಳ್ಳಲು ಬಂದವರು. – ಹೀಗೆ ವಿವಿಧ ಕಾರಣಗಳಿಂದ ಸೈನಿಕರು ಸ್ಮೋಲ್ನಿಯಲ್ಲಿ ದಟ್ಟೈಸುತ್ತಿದ್ದರು.

ಬೆಳಗಿನ ಜಾವ ಮೂರು ಘಂಟೆಗೆ ನಾವು ಸ್ಮೋಲ್ನಿಯಿಂದ ಹೊರಬಿದ್ದೆವು. ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಹೋಲ್ಡ್ಸ್‌ಮನ್ ಎಂಬಾತ ಆತಂಕ ಮುಗಿದು ಅರಳಿಕೊಂಡ ಸಂತಸದ ಮುಖದಿಂದ ಓಡಿಬಂದು “ಅಬ್ಬಾ ಒಳ್ಳೆ ಸುದ್ದಿ. ರಣಾಂಗಣದಿಂದ ಟೆಲಿಗ್ರಾಂ. ಕೆರೆನ್‌ಸ್ಕಿಯನ್ನು ಧ್ವಂಸ ಮಾಡಿದ್ದಾರೆ. ಇಲ್ಲಿ ನೋಡಿ” ಎಂದು ಪೆನ್ಸಿಲ್‌ನಲ್ಲಿ ಬರೆದುಕೊಂಡು ಬಂದಿದ್ದ ಸಂದೇಶವನ್ನು ತೋರಿಸಿದ. ನಮಗೆ ಓದಲಾಗದಿದ್ದರಿಂದ ಅವನೇ ಓದಿಹೇಳಿದ. (ಸಂಗ್ರಹಿತ ರೂಪ)

*ಪೊಲ್ಕೊವೊ, ಸಿಬ್ಬಂದಿ 2.10 ಮುಂಜಾನೆ*

*ನವೆಂಬರ್ 12–13ರ ರಾತ್ರಿಯು ಚರಿತ್ರಾರ್ಹವಾದದ್ದು.*

*ರಾಜಧಾನಿಯತ್ತ ಸೈನ್ಯ ತರಬೇಕೆನ್ನುವ ಕೆರೆನ್‌ಸ್ಕಿಯ ಪ್ರಯತ್ನವನ್ನು ಹಿಮ್ಮೆಟ್ಟಿಸಲಾಗಿದೆ. ನಮ್ಮ ಸೈನ್ಯ ಮುನ್ನಡೆಯುತ್ತಿದೆ. ಪೆತ್ರೋಗ್ರಾಡಿನ ಸೈನಿಕರು, ನಾವಿಕರು ಮತ್ತು ಕಾರ್ಮಿಕರು ಶಸ್ತ್ರಾಸ್ತ್ರಗಳೊಂದಿಗೆ ತಾವು ಜನತಂತ್ರದ ಸಂಕಲ್ಪವನ್ನು ಸ್ಥಾಪಿಸಿಯೇ ತೀರುತ್ತೇವೆ ಎಂಬುದನ್ನು ಸಾರಿಹೇಳಿದ್ದಾರೆ. ಬೂರ್ಶ್ವಾವರ್ಗವು ಕ್ರಾಂತಿಕಾರಿ ಸೈನ್ಯವನ್ನು ಏಕಾಂಗಿಯಾಗಿಸಲು ಯತ್ನಿಸಿತು. ಕೆರೆನ್‌ಸ್ಕಿ ಕೊಸ್ಸಾಕರ ಬಲದಿಂದ ಅದನ್ನು ಮುರಿಯಲು ಯತ್ನಿಸಿದ. ಎರಡೂ ಯೋಜನೆಗಳು ದಯನೀಯವಾಗಿ ಸೋತು ನೆಲಕಚ್ಚಿವೆ.*

*ರೈತ – ಕಾರ್ಮಿಕರ ಪ್ರಾಬಲ್ಯ ಎಂಬ ಕಲ್ಪನೆಯೇ ಸೈನ್ಯದಲ್ಲಿ ಒಗ್ಗಟ್ಟನ್ನು ತಂದು ಅದರ ಸಂಕಲ್ಪವನ್ನು ದೃಢಗೊಳಿಸಿತು. ಸೋವಿಯತ್ ಎಂಬುದು ತಾತ್ಕಾಲಿಕವಾದ, ಕ್ಷಣಭಂಗುರವಾದ ಶಕ್ತಿಯಲ್ಲ, ಇದೊಂದು ಅಜೇಯ ವಾಸ್ತವ ಎಂಬುದು ಇಡೀ ದೇಶಕ್ಕೆ ಮನದಟ್ಟಾಗಿದೆ. ಕೆರೆನ್‌ಸ್ಕಿಯ ಸೋಲು ಜಮೀನ್ದಾರರ ಸೋಲು, ಬೂರ್ಶ್ವಾಗಳ ಸೋಲು. ಹಾಗೇ ಅದು ಜನತೆಯ ಶಾಂತಿಯುತ ಬದುಕು, ಅನ್ನ, ಜಮೀನು, ಅಧಿಕಾರ ಈ ಹಕ್ಕುಗಳ ಸ್ಥಾಪನೆ ಕೂಡ, ಇನ್ನು ನಾವು ಭೂತಕಾಲಕ್ಕೆ ಹಿಂದಿರುಗುವುದಿಲ್ಲ. ನಮ್ಮ ಮುಂದೆ ಸಮರಗಳಿವೆ, ಅಡೆತಡೆಗಳಿವೆ, ಬಲಿದಾನಗಳಿವೆ. ಆದರೆ ದಾರಿ ಸ್ಪಷ್ಟವಾಗಿದೆ. ಗೆಲವು ಖಚಿತವಾಗಿದೆ.*

*ಕ್ರಾಂತಿಕಾರಿ ರಷ್ಯಾ ತನ್ನ ಸೈನ್ಯಗಳ ಬಗ್ಗೆ ಹೆಮ್ಮೆಪಡಲಿ. ಹುತಾತ್ಮರೆಲ್ಲರಿಗೂ ಶಾಶ್ವತವಾದ ಕೀರ್ತಿ.*

*ಕ್ರಾಂತಿಕಾರಿ, ಜನಾನುರಾಗಿ, ಸಮಾಜವಾದಿ ರಷ್ಯಾ ಚಿರಾಯುವಾಗಲಿ!*

*ಎಲ್. ಟ್ರಾಟ್‌ಸ್ಕಿ, ಜನತೆಯ ಕಮಿಸಾರ್*

ಮನೆಗೆ ಹೋಗುವಾಗ ನಾವು ನಿಕೊಲಾಯ್ ರೈಲ್ವೆ ನಿಲ್ದಾಣದ ಬಳಿ ಅಪಾರ ಜನಜಂಗುಳಿಯನ್ನು ಕಂಡೆವು. ಸಾವಿರಾರು ಜನ ನಾವಿಕರು ಬಂದೂಕು ಹಿಡಿದು ಅಲ್ಲಿ ಸೇರಿದ್ದರು. ಅಲ್ಲೊಬ್ಬ ವಿಕ್‌ಜೆಲ್ ರೈಲ್ವೆ ಸಂಘದ ನಾಯಕ ಮೆಟ್ಟಿಲ ಮೇಲೆ ನಿಂತು ಅವರಿಗೆ ಮನವಿ ಮಾಡಿಕೊಳ್ಳುತ್ತಿದ್ದ:

"ನಾವು ನಿಮ್ಮನ್ನು ಮಾಸ್ಕೋಗೆ ಕರೆದೊಯ್ಯಲು ಸಾಧ್ಯವಿಲ್ಲ. ನಾವು ತಟಸ್ಥರು. ನಾವು ಯಾವ ಪಕ್ಷದವರನ್ನೂ ಕರೆದುಕೊಂಡು ಹೋಗುತ್ತಿಲ್ಲ."

ಅಲ್ಲಿ ಇಡೀ ಚೌಕದಲ್ಲಿ ಸೇರಿ ಕುದಿಯುತ್ತಿದ್ದ ಜನ ಅವರತ್ತ ಘರ್ಜಿಸಿದರು. ನಾವಿಕರು ಮುಂದೆ ಮುಂದೆ ನುಗ್ಗಲಾರಂಭಿಸಿದರು. ಇದ್ದಕ್ಕಿದ್ದಂತೆ ಇನ್ನೊಂದು ಬಾಗಿಲು ಧಡಾರನೆ ತೆರೆದುಕೊಂಡಿತ್ತು. ಅಲ್ಲಿ ಇಬ್ಬರು ಮೂವರು ಬ್ರೇಕ್‌ಮನ್‌ಗಳು. ಒಬ್ಬ ಫೈರ್‌ಮನ್ ನಿಂತಿದ್ದರು. ಅದರಲ್ಲೊಬ್ಬ ಕೂಗಿಕೊಂಡ,

"ಬನ್ನಿ ಕಾಮ್ರೇಡ್ಸ್, ನಾವು ನಿಮ್ಮನ್ನು ಮಾಸ್ಕೋಗೆ ಕರೆದೊಯ್ಯುತ್ತೇವೆ. ನೀವು ಅಪೇಕ್ಷಿಸಿದರೆ ರಷ್ಯಾದ ತುತ್ತತುದಿಯ ವ್ಲಾದಿವೋಸ್ತಾಕ್‌ಗೂ! ಕ್ರಾಂತಿ ಚಿರಾಯುವಾಗಲಿ!"

## ಅಧ್ಯಾಯ – 9

# ವಿಜಯ

*ಆಜ್ಞೆ ಸಂಖ್ಯೆ 1*
*ಪುಲ್ಕೊವೊ ವಿಶೇಷ ಪಡೆಗೆ*
*13 ನವೆಂಬರ್, 1917* *ಬೆಳಿಗ್ಗೆ 9–38*

*ಭೀಕರ ಹೋರಾಟದ ನಂತರ ಪೊಲ್ಕೊವೊ ವಿಶೇಷ ಪಡೆಯು ಪ್ರತಿ ಕ್ರಾಂತಿಕಾರಿ ಶಕ್ತಿಗಳನ್ನು ಸಂಪೂರ್ಣವಾಗಿ ಸೋಲಿಸಿದೆ. ಸಂಪೂರ್ಣ ಅವ್ಯವಸ್ಥೆಯಲ್ಲಿ ಹಿಮ್ಮೆಟ್ಟಿದ ಶತ್ರುಪಡೆಗಳು ಈಗ ಗ್ಯಾಟ್‌ಚಿನಾವರೆಗೂ ಹಿಂದೆ ಸರಿದಿವೆ. ನಮ್ಮ ಮುಂದಳಗಳು ತ್ಸಾರ್‌ಸ್ಕೊಯೆ ಸೆಲೋದ ಈಶಾನ್ಯ ಭಾಗಗಳನ್ನು ಆಕ್ರಮಿಸಿಕೊಂಡಿವೆ. ಅಲೆಕ್ಸಾಂಡ್ರೊವ್‌ಸ್ಕಯಾ ರೈಲ್ವೆ ನಿಲ್ದಾಣವೂ ನಮ್ಮ ಕೈಯಲ್ಲಿದೆ. ಪೊಲ್ಕೊವೊ ದಳಗಳಿಗೆ ತ್ಸಾರ್‌ಸ್ಕೊಯೆ ಸೆಲೋನನ್ನು ಕೈಗೆ ತೆಗೆದುಕೊಂಡು, ಗ್ಯಾಟ್‌ಚಿನ ದಿಕ್ಕನ್ನು ದಾಳಿಯಿಂದ ರಕ್ಷಿಸಲು ಕೋಟೆಯಂಥ ರಕ್ಷಣೆಯನ್ನು ನಿರ್ಮಿಸಿಕೊಳ್ಳಲು ಹೇಳಲಾಗಿದೆ. ಕಂದಕಗಳು ಮುಂತಾದ ಎಲ್ಲಾ ಅಡೆತಡೆಗಳನ್ನು ನಿರ್ಮಿಸಿಕೊಳ್ಳಲು ಹೇಳಲಾಗಿದೆ. ಈ ಸೈನ್ಯಗಳು ಕೊಲ್ಪಿನೊ ಮತ್ತು ಕ್ರಾಸ್ನೊಯೆ ಸೆಲೊ ಎಂಬ ತಮ್ಮ ಎಡಬಲದಲ್ಲಿರುವ ದಳಗಳೊಂದಿಗೂ, ಪೆತ್ರೋಗ್ರಾಡ್‌ನ ಮಹಾಸೇನಾಪತಿಗಳೊಂದಿಗೂ ಸತತ ಸಂಪರ್ಕದಲ್ಲಿರತಕ್ಕದ್ದು.*

*ಲೆಫ್ಟಿನೆಂಟ್ ಕರ್ನಲ್ ಮುರಾವಿಯೊವ್*
*ಪ್ರತಿಕ್ರಾಂತಿಯ ವಿರುದ್ಧದ ಎಲ್ಲಾ ದಳಗಳ ಮಹಾದಂಡನಾಯಕ*

ಇದು ಮಂಗಳವಾರ ಬೆಳಿಗ್ಗೆ, ಅಬ್ಬಾ, ಇದೇನಾಗಿದೆ! ಎರಡೇ ದಿನದ ಹಿಂದೆ ಪೆತ್ರೋಗ್ರಾಡ್‌ನ ಸುತ್ತಲಿನ ಮೈದಾನದಲ್ಲಿ ಬೋಲ್ಶೆವಿಕ್ ಸೈನ್ಯಗಳು ನಾಯಕರಿಲ್ಲದೆ, ಆಹಾರವಿಲ್ಲದೆ, ಫಿರಂಗಿಯಿಲ್ಲದೆ, ಹೋರಾಟದ ಯೋಜನೆಯಿಲ್ಲದೆ ಓಡಾಡಿಕೊಂಡಿದ್ದವು. ಶಿಸ್ತೇ ಇಲ್ಲದ ಈ ರೆಡ್‌ಗಾರ್ಡ್‌ಗಳನ್ನು, ಅಧಿಕಾರಿಗಳಿಲ್ಲದ ಸೈನಿಕರನ್ನು, ತಾವೇ ಚುನಾಯಿಸಿದ ಮೇಲಿನ ನಾಯಕತ್ವಕ್ಕೆ ವಿಧೇಯರಾಗಬಲ್ಲಂಥ ಸೈನ್ಯವಾಗಿ ಪರಿವರ್ತಿಸಿದ ಶಕ್ತಿ ಯಾವುದು? ಕೊಸ್ಸಾಕರನ್ನೂ, ಫಿರಂಗಿಗಳನ್ನೂ ಎದುರಿಸಿ ಅವರ ವ್ಯೂಹವನ್ನು ಮುರಿಯುವ ಕೌಶಲ್ಯ, ಧೈರ್ಯ ಬಂದದ್ದಾದರೂ ಹೇಗೆ?

ಬಂಡಾಯದಲ್ಲಿರುವ ಜನತೆ ಹಿಂದಿನಿಂದಲೂ ಸ್ಥಾಪಿತವಾದ ಎಲ್ಲಾ ಮಿಲಿಟರಿ ಸೂತ್ರಗಳನ್ನೂ, ಪೂರ್ವ ನಿದರ್ಶನಗಳನ್ನೂ ಮುರಿದುಹಾಕಿಬಿಡುತ್ತಾರೆ. ಫ್ರೆಂಚ್ ಮಹಾಕ್ರಾಂತಿಯ ನಂತರ ಫ್ರಾನ್ಸ್‌ನ ಚಿಂದಿ ಬಟ್ಟೆಯುಟ್ಟ ಸೈನಿಕರು ಯುರೋಪಿನಲ್ಲಿ ದೇಶದ

ನಂತರ ದೇಶವನ್ನು ಗೆಲ್ಲುವ ಸಾಹಸ ಮಾಡಲಿಲ್ಲವೇ ಹಾಗೆ. ಅದನ್ನು ಮರೆಯಲು ಸಾಧ್ಯವಿಲ್ಲ. ಅಂದು ಚರಿತ್ರೆಯಲ್ಲಿ ವಾಲ್ಮಿ ಎಂಬಲ್ಲಿ ವೈಸೆಂಬೂರ್ಗ್‌ನ ಎರಡನೇ ಕದನದಲ್ಲಿ ನಡೆದದ್ದು ಅದೇ ಭವ್ಯ ಕಥೆ.

ಇಲ್ಲಿ ಸೋವಿಯತ್ ಸೈನ್ಯಗಳು ತಮ್ಮ ಎದುರಿಗೆ ಕಂಡದ್ದೇನು? ಯಂಕರ್‌ಗಳು, ಕೊಸ್ಸಾಕರು, ಭಾರೀ ಜಮೀನ್ದಾರರು, ಶ್ರೀಮಂತ ಕರಾಳ ಶತಕ (ಬ್ಲಾಕ್ ಹಂಡ್ರೆಡ್ಸ್) ಎಂಬ ಕುಖ್ಯಾತ ದಳಗಳು – ನೋಡಿದರೆ ಝಾರ್‌ನ ಆಳ್ವಿಕೆ ವಾಪಸ್ ಬರುತ್ತದೇನೋ ಎಂಬಂತೆ. ಅವರನ್ನು ಅಂದು ಕಾಡುತ್ತಿದ್ದ ನೆನಪು ಓಖ್ರಾನಾ ಎಂಬ ಕ್ರೂರ ಗುಪ್ತದಳ ಮತ್ತು ಸೈಬೀರಿಯಾದ ಜೈಲುಗಳ ಸರಪಳಿಗಳು. ಹಾಗೆಯೇ ಜರ್ಮನರ ಅಪಾಯ. ಹೀಗಿರುವಾಗ ಜನತೆಗೆ ಮತ್ತು ಬೋಲ್ಶೆವಿಕರಿಗೆ ಗೆಲ್ಲುವುದು ಎಂದರೆ ಹೇಗಿರುತ್ತಿತ್ತು? ಅದು ಫ್ರೆಂಚ್ ಮಹಾಕ್ರಾಂತಿಯನ್ನು ದಾಖಲಿಸಿದ ಚರಿತ್ರಕಾರ ಥಾಮಸ್ ಕಾರ್ಲೈಲ್‌ನ ಮಾತಿನಲ್ಲೇ ಹೇಳಬೇಕೆಂದರೆ,

"ವಿಜಯ – ಅದು ಉತ್ತುಂಗ ಶಿಖರದ ಆರೋಹಣ, ಅಂತ್ಯವಿಲ್ಲದ ಸಹಸ್ರಮಾನದ ಉದ್ಘಾಟನೆ!"

ಭಾನುವಾರ ರಾತ್ರಿಯಲ್ಲಿ ಅಸಹಾಯ ಸ್ಥಿತಿಯಲ್ಲಿ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಮಿಸಾರ್‌ಗಳು ಹೋರಾಟದ ಕಣದಿಂದ ಅಸಹಾಯಕರಾಗಿ ಹಿಂದಿರುಗಿದ್ದಾರೆ. ಪೆತ್ರೋಗ್ರಾಡ್‌ನ ರಕ್ಷಣಾದಳ ಐದು ಜನರ ನಾಯಕತ್ವವನ್ನು ಚುನಾಯಿಸಿದೆ. ಅದರಲ್ಲಿ ಇಬ್ಬರು ಸೈನಿಕರು, ಮೂವರು ಅಧಿಕಾರಿಗಳು. ಯಾರಿಗೂ ಪ್ರತಿಕ್ರಾಂತಿಯ ಸೋಂಕಿಲ್ಲ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ. ಕರ್ನಲ್ ಮುರಾವಿಯೊವ್‌ನನ್ನು ಸೇನಾಧಿಪತಿಯನ್ನಾಗಿ ಮಾಡಲಾಗಿದೆ. ಬಹಳ ದಕ್ಷ, ಆದರೆ ಆತನ ಮೇಲೆ ಒಂದು ಕಣ್ಣಿಟ್ಟಿರಲೇಬೇಕು, ಏಕೆಂದರೆ ಹಿಂದೆ ರಾಷ್ಟ್ರವಾದಿಗಳ ಬಣದಲ್ಲಿದ್ದವನು. ಅಲ್ಲಲ್ಲಿ ಓಡಾಡಿಕೊಂಡಿದ್ದ ಎಲ್ಲ ದಳಗಳನ್ನು, ಫಿರಂಗಿಗಳನ್ನು, ಅಶ್ವಾರೋಹಿಗಳನ್ನು ಒಟ್ಟುಮಾಡಲಾಗಿದೆ.

ನಸುಕು ಹರಿಯಿತು. ಕೆರೆನ್‌ಸ್ಕಿಯ ಕೊಸ್ಸಾಕರ ಮುಂದಳಗಳು ಕಾಣುತ್ತಿದ್ದಂತೆ ಗುಂಡಿನ ಚಕಮಕಿ ಆರಂಭವಾಯಿತು. ಶೀತಲವಾದ ಮೈದಾನದಲ್ಲಿ ಯುದ್ಧದ ಸದ್ದು. ಅಂತೂ ಮುಖ್ಯ ಯುದ್ಧ ಆರಂಭವಾಯಿತು! ಅವರೆಲ್ಲಾ ಯುದ್ಧಕ್ಕೆ ಹೊರಟರು. ಹಿಂದೆ ಕಾರ್ಮಿಕರ ಭಾರಿ ಗುಂಪುಗಳು ವೇಗವಾಗಿ ನಡೆದವು. ಈ ರೋಷತಪ್ತ ಜನಗಳಿಗೆ ಕಮಿಸಾರ್‌ಗಳು ಬಂದು ಕೆಲಸಗಳನ್ನು ಹಂಚಿದರು. ಇದು ಜನಗಳ ಯುದ್ಧ. ಜನರ ಹೊಸ ಜಗತ್ತಿಗಾಗಿ ಯುದ್ಧ. ಅಧಿಕಾರಿಗಳು ಅವರೇ ಚುನಾಯಿಸಿಕೊಂಡವರು. ಹೀಗಾಗಿ ಆ ಒಂದು ಕ್ಷಣದಲ್ಲಿ ಅಸ್ಪಷ್ಟವಾಗಿದ್ದ ಅಸಂಖ್ಯಾತ ಜನರ ಅರಿವು ಒಂದು ಸಂಕಲ್ಪಶಕ್ತಿಯಾಗಿ ಹೊರಹೊಮ್ಮಿತು.

ಈ ಸಮರದಲ್ಲಿ ಭಾಗಿಯಾಗಿದ್ದವರು ನನಗೆ ವಿವರಗಳನ್ನು ನೀಡಿದರು. ನಾವಿಕರು ಮದ್ದುಗುಂಡು ಮುಗಿಯುವವರೆಗೂ ಹೋರಾಡಿ ನಂತರ ಬಯೊನೆಟ್‌ಗಳೊಂದಿಗೆ ಶತ್ರುಗಳ ಮೇಲೆ ನುಗ್ಗಿದರಂತೆ. ಯಾವ ತರಬೇತಿಯೂ ಇಲ್ಲದ ಕಾರ್ಮಿಕರು ಮುನ್ನುಗ್ಗಿ ಕೊಸ್ಸಾಕರನ್ನು ಕುದುರೆಗಳಿಂದ ಕೆಳಗೆ ಎಳೆದುಹಾಕಿದರಂತೆ. ಅನಾಮಧೇಯ ಜನಗಳ ತಂಡಗಳು, ಯುದ್ಧಭೂಮಿಯ ಸುತ್ತಲೂ ಕತ್ತಲಲ್ಲಿ ಪ್ರವಾಹದ ಅಲೆಗಳಂತೆ ಎದ್ದು ಶತ್ರುಗಳ ಮೇಲೆ ಮುಗಿಬಿದ್ದರಂತೆ. ಸೋಮವಾರ ಮಧ್ಯರಾತ್ರಿಗೆ ಮುನ್ನವೇ ಕೊಸ್ಸಾಕರು ತಮ್ಮ ಫಿರಂಗಿಗಳನ್ನು ಬಿಟ್ಟು ಓಡಿಹೋದರು. ವಿಜಯೀ ಕಾರ್ಮಿಕರ ಸೇನೆ ತ್ಸಾರ್‌ಸ್ಕೊಯೆ ಸೆಲೊ

ಪಟ್ಟಣವನ್ನೂ ಆಕ್ರಮಿಸಿ ಅಲ್ಲಿನ ದೂರವಾಣಿ ಕೇಂದ್ರದಿಂದ ಇಡೀ ಜಗತ್ತಿಗೆ ತಮ್ಮ ಮಹಾನ್ ಗೆಲುವಿನ ಸಂದೇಶವನ್ನು ಬಿತ್ತರಿಸಿದರು.

*ಎಲ್ಲಾ ಕಾರ್ಮಿಕ, ಸೈನಿಕ ಪ್ರತಿನಿಧಿಗಳ ಸೋವಿಯತ್‌ಗಳಿಗೆ*

*ನವೆಂಬರ್ 12ರಂದು ಕೆರೆನ್‌ಸ್ಕಿ ಕೊರ್ನಿಲೊವ್‌ರ ಕ್ರಾಂತಿವಿರೋಧಿ ಪಡೆಗಳನ್ನು ಧ್ವಂಸ ಮಾಡಲಾಗಿದೆ. ಕ್ರಾಂತಿಕಾರಿ ಸರ್ಕಾರದ ಹೆಸರಿನಲ್ಲಿ ನಾವು ನೀಡುವ ಆಜ್ಞೆ, ಏನೆಂದರೆ ಎಲ್ಲಾ ಪ್ರತಿಕ್ರಾಂತಿ ಸೈನ್ಯಗಳ ವಿರುದ್ಧ ದಾಳಿಯನ್ನು ತೀವ್ರಗೊಳಿಸಿ ಹಾಗೂ ಕೆರೆನ್‌ಸ್ಕಿಯನ್ನು ಬಂಧಿಸಿ ಕ್ರಾಂತಿಯ ವಿಜಯಕ್ಕೆ ಭಂಗ ತರುವ ಯಾವುದೇ ಯತ್ನವನ್ನು ಸೋಲಿಸಿ.*

*ಕ್ರಾಂತಿಕಾರಿ ಸೈನ್ಯ ಚಿರಾಯುವಾಗಲಿ*

*ಮುರಾವಿಯೊವ್*

ಇನ್ನು ಪ್ರಾಂತ್ಯಗಳ ಸುದ್ದಿ.

ಸೆವಾಸ್ತಪೋಲ್ ಬಂದರಿನಲ್ಲಿ ಯುದ್ಧ ನೌಕೆಯ ನಾವಿಕರು ಬಂಡೆದ್ದು ತಮ್ಮ ಅಧಿಕಾರಿಗಳನ್ನು ಸಾಲಾಗಿ ನಿಲ್ಲಿಸಿ ಅವರಿಂದ ಕ್ರಾಂತಿಕಾರಿ ಸರ್ಕಾರಕ್ಕೆ ನಿಷ್ಠರಾಗಿರುತ್ತೇವೆ ಎಂದು ಪ್ರಮಾಣ ಮಾಡಿಸಿದರು. ನಿಜ್‌ನಿ ನೊವ್‌ಗೊರೋದ್ ಪಟ್ಟಣದಲ್ಲಿ ಸೋವಿಯತ್ ಅಧಿಕಾರಕ್ಕೆ ಬಂದಿತ್ತು. ಕಝಾನ್ ನಗರದಲ್ಲಿ ಕದನ ಮುಂದುವರೆದಿದೆ.

ಮಾಸ್ಕೋದಲ್ಲಿ ಭಯಂಕರ ಕದನ. ಕ್ರೆಮ್ಲಿನ್ ಭವನ ಮತ್ತು ನಗರ ಕೇಂದ್ರವನ್ನು ವಶದಲ್ಲಿಟ್ಟುಕೊಂಡಿದ್ದ ಯಂಕರ್ ಮತ್ತು ವೈಟ್‌ಗಾರ್ಡ್‌ಗಳ ಮೇಲೆ ಎಲ್ಲ ಕಡೆಯಿಂದ ಕ್ರಾಂತಿಕಾರಿ ಸೈನ್ಯ ಮುಗಿಬಿದ್ದಿತ್ತು. ನಗರ ಡ್ಯೂಮಾ ಕಟ್ಟಡದ ಮೇಲೆ ಸೋವಿಯತ್ ಸೈನ್ಯ ಫಿರಂಗಿ ಗುಂಡಿನ ಮಳೆ ಸುರಿಸಿತ್ತು. ರಸ್ತೆಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ ಯುದ್ಧಕ್ಕಾಗಿ ಕಂದಕಗಳನ್ನು ತೋಡಲಾಗಿತ್ತು. ಬ್ಯಾಂಕುಗಳು ಮತ್ತು ವ್ಯಾಪಾರಿ ಕೇಂದ್ರಗಳ ಮೇಲೆ ಮೆಶಿನ್‌ಗನ್‌ಗಳ ಗುಂಡಿನ ದಾಳಿ. ವಿದ್ಯುಚ್ಛಕ್ತಿಯಿಲ್ಲ, ದೂರವಾಣಿಯಿಲ್ಲ. ಬೂರ್ಶ್ವಾವರ್ಗಕ್ಕೆ ಸೇರಿದ ಜನ ನೆಲಮಾಳಿಗೆಗಳಲ್ಲಿ ಅವಿತುಕೊಂಡಿದ್ದರು. ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಕ್ರೆಮ್ಲಿನ್‌ನಲ್ಲಿರುವವರಿಗೆ ಕೂಡಲೇ ಶರಣಾಗಬೇಕೆಂದೂ, ಇಲ್ಲದಿದ್ದರೆ ಗುಂಡಿನ ದಾಳಿ ಆರಂಭವಾಗುವುದೆಂದೂ ಕಡೆಯ ಎಚ್ಚರಿಕೆ ಕೊಟ್ಟು ಅಂತಿಮ ಗಡುವು ನೀಡಿತ್ತು.

ದೇಶದಾದ್ಯಂತ ಈ ಕಡೆಯ ಸಮುದ್ರದಿಂದ ಆ ಕಡೆಯ ಸಮುದ್ರದವರೆಗೂ ಅಂತರ್ಯುದ್ಧ ಸ್ಫೋಟಿಸಿತ್ತು. ಕಾರ್ಖಾನೆಗಳಿಂದ, ಹಳ್ಳಿಗಳಿಂದ, ಸೇನಾ ಸಮಿತಿಗಳಿಂದ, ಸಮುದ್ರದಲ್ಲಿನ ಯುದ್ಧ ನೌಕೆಗಳಿಂದ, ಜನತೆಯ ಸರ್ಕಾರವನ್ನು ಅಭಿನಂದಿಸುವ ಟೆಲಿಗ್ರಾಂಗಳು ಪ್ರವಾಹದಂತೆ ಪೆತ್ರೋಗ್ರಾಡ್ ಅನ್ನು ತಲುಪಿದವು.

ನೊವೊಚೆರ್‌ಕಾಸ್ಕ್‌ನಲ್ಲಿದ್ದ ಕೊಸ್ಸಾಕ್ ಸರ್ಕಾರ ಮಾತ್ರ ಕೆರೆನ್‌ಸ್ಕಿಗೆ ತಮ್ಮ ಊರಿಗೆ ಬರಬೇಕೆಂದೂ, ಜಂಟಿ ಹೋರಾಟಕ್ಕೆ ಸಿದ್ಧತೆ ಮಾಡಬಹುದೆಂದೂ ಆಹ್ವಾನಿಸಿದ್ದರು.

ಫಿನ್‌ಲೆಂಡ್‌ನಲ್ಲಿಯೂ ಘಟನೆಗಳು ವೇಗವಾಗಿ ಜರುಗುತ್ತಿದ್ದವು. ಹೆಲ್‌ಸಿಂಗ್‌ಫೋರ್ಸ್ ನಗರದ ಸೋವಿಯತ್ ಮತ್ತು ಬಾಲ್ಟಿಕ್ ನೌಕಾದಳದ ಕೇಂದ್ರ ಸಮಿತಿಯು ಒಂದಾಗಿ ತುರ್ತುಸ್ಥಿತಿಯನ್ನು ಘೋಷಿಸಿ ಬೋಲ್ಶೆವಿಕ್ ಆಡಳಿತಕ್ಕೆ ತೊಂದರೆ ಉಂಟುಮಾಡುವುದಾಗಲಿ, ಆಯುಧ ಹಿಡಿದು ಪ್ರತಿರೋಧ ಒಡ್ಡುವುದಾಗಿ ಮಾಡಿದಲ್ಲಿ ಅದನ್ನು ನಿರ್ದಯವಾಗಿ ತುಳಿದುಹಾಕಲಾಗುವುದೆಂದು ಘೋಷಿಸಿದವು.

* * *

ಬೆಳಗಿನ ಜಾವದಲ್ಲೇ ನಾನು ಸ್ಮೋಲ್ನಿ ಭವನಕ್ಕೆ ಹೋದೆ. ಹೊರಗಿನ ದ್ವಾರವನ್ನು ದಾಟುತ್ತಿದ್ದಂತೆ, ಗಾಳಿಯ ಚಲನೆಯೇ ಇಲ್ಲದ, ಬೂದುಬಣ್ಣದ ಆಗಸದಿಂದ ತೆಳ್ಳಗಿನ ಮೊದಲ ಹಿಮದ ತುಣುಕುಗಳು ಹಿಂಜರಿಯುತ್ತಾ ಬೀಳಲಾರಂಭಿಸಿದವು. "ಹಿಮ" ಎಂದು ಅಲ್ಲಿದ್ದ ಸೈನಿಕ ಖುಷಿಯಿಂದ ಕೂಗಿದ.

ಒಳಗೆ ಕೋಣೆಗಳು ಖಾಲಿಯಾಗಿದ್ದವು. ಏನೋ ವಿಚಿತ್ರವಾದ ಸದ್ದು ಕೇಳಿಸುತ್ತ ಇತ್ತು. ನಾನು ಸುತ್ತಲೂ ನೋಡಿದೆ. ಎಲ್ಲ ಕಡೆ ನೆಲದ ಮೇಲೆ ಜನ ನಿದ್ರಿಸುತ್ತಿದ್ದರು. ಒರಟರು, ಕೊಳಕಾಗಿದ್ದವರು, ಕಾರ್ಮಿಕರು ಮತ್ತು ಸೈನಿಕರು. ಮೈತುಂಬ ಕೆಸರು ಒಣಗಿ ಗಟ್ಟಿಯಾಗಿದೆ. ಒಂಟಿಯಾಗೋ, ಗುಂಪಾಗೋ, ಸತ್ತಹೆಣಗಳ ಭಂಗಿಯಲ್ಲಿ ಬಿದ್ದು ನಿದ್ರಿಸುತ್ತಿದ್ದಾರೆ. ಕೆಲವರಿಗಂತೂ ಮೈತುಂಬ ಬಿಗಿದ ಬ್ಯಾಂಡೇಜುಗಳು ರಕ್ತದಿಂದ ಒದ್ದೆಯಾಗಿ, ಒಣಗಿ, ಹರಳುಗಟ್ಟಿದೆ. ಇಲ್ಲಿದೆ ನೋಡಿ. ವಿಜಯೀ ಶ್ರಮಜೀವಿ ಸೈನ್ಯ!

ಮೇಲಿನ ಔತಣದ ಪಡಸಾಲೆಯಲ್ಲಿ ಅವರು ಎಷ್ಟೊಂದು ಒತ್ತೊತ್ತಿಕೊಂಡು ಮಲಗಿಬಿಟ್ಟಿದ್ದರೆಂದರೆ, ನಡುವೆ ಹಾದಿ ಮಾಡಿಕೊಂಡು ಓಡಾಡುವುದು ಸಾಧ್ಯವಿರಲಿಲ್ಲ. ಗಾಳಿ ಹೊಲಸಾಗಿಬಿಟ್ಟಿತ್ತು. ಕಿಟಕಿಗಳಿಂದ ಮಬ್ಬಾದ ಬೆಳಕು ಬರುತ್ತಿತ್ತು. ವೇದಿಕೆಯ ಮೇಲೆ ಟೀ ಮಾಡುವ ಪರಿಕರಗಳು, ಕುಡಿದುಬಿಟ್ಟ ಲೋಟಗಳು. ಪಕ್ಕದ ಗೋಡೆಯ ಮೇಲೆ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಪ್ರಕಟಣೆಯನ್ನು ತಿರುಗುಮುರುಗಾಗಿ ಹಿಂಬದಿಯ ಖಾಲಿ ಪುಟ ಕಾಣಿಸುವಂತೆ ಅಂಟಿಸಿದ್ದಾರೆ.

ಅದರ ಮೇಲೆ ಯಾರೋ ವೇದನೆಯಿಂದ ಗೀಚಿದಂತಿದೆ. ಯಾರೋ ಸೈನಿಕ ತನ್ನ ಮಡಿದ ಸಂಗಾತಿಗಳಿಗೆ ಬರೆದ ಶ್ರದ್ಧಾಂಜಲಿ ಪತ್ರ ಅದು. ಪ್ರಾಯಶಃ ನಿದ್ರೆ ಕವಿದು ಕುಸಿದುಹೋಗುವ ಮುನ್ನ ಆತ ಅದನ್ನು ಗೀಚಿರಬೇಕು. ಬರೆಹ ಕಣ್ಣೀರು ಬಿದ್ದು ಕಲಸಿ ಹೋದಂತಿದೆ...

*ಅಲೆಕ್ಸಿ ವಿನೋಗ್ರದೋವ್*

*ಡಿ. ಮಸ್ಕ್ವಿನ್... ಇತ್ಯಾದಿ ಎಂಟು ಹೆಸರುಗಳು. ಅದರ ಕೆಳಗೆ,*

*ಇವರೆಲ್ಲರೂ ನವೆಂಬರ್ 15, 1916ರಿಂದ ಸೇನೆ ಸೇರಿದವರು. ಇದರಲ್ಲಿ ಮೂರು ಮಂದಿ ಮಾತ್ರ ಬದುಕಿದ್ದಾರೆ.*

*ಸಮರಶೀಲ ಗರುಡ ಹಕ್ಕಿಗಳೇ ಮಲಗಿ, ಪ್ರಶಾಂತ ಆತ್ಮಗಳೇ ಮಲಗಿ*
*ನಮ್ಮ ನಲ್ಮೆಯ ಬಂಧುಗಳೇ ಅರ್ಹರು ನೀವು ಸಂತಸಕ್ಕೆ, ಶಾಶ್ವತ ಶಾಂತಿಗೆ*
*ಗೋರಿಯ ಕೆಳಗಿನ ಮಣ್ಣಿನಲ್ಲಿ ಸಂಗಾತಿಗಳೊಡನೆ ಇದ್ದೀರಿ*
*ದೃಢವಾಗಿ ಸಂಗಾತಿಗಳೊಂದಿಗೆ ಒಂದಾಗಿದ್ದೀರಿ, ನಾಗರಿಕರೇ ಮಲಗಿ.*

ಮಿಲಿಟರಿ ಕ್ರಾಂತಿಕಾರಿ ಸಮಿತಿ ಮಾತ್ರ ಇನ್ನೂ ನಿದ್ರೆಯಿಲ್ಲದೆ ಜಾಗ್ರತವಾಗಿ ಕಾರ್ಯತತ್ಪರವಾಗಿತ್ತು. ಸ್ಕ್ರೈಪ್‌ನಿಕ್ ಎಂಬ ಬೋಲ್ಶೆವಿಕ್ ನಾಯಕ ನಮಗೆ ಸಿಕ್ಕಿದ. ಗೋಟ್ಸ್, ಅವ್‌ಕ್ಸೆಂತಿಯೆವ್ ಮುಂತಾದ ಪ್ರತಿಕ್ರಾಂತಿಯ ನಾಯಕರನ್ನು ಬಂಧಿಸಿರುವ ಸುದ್ದಿ ತಿಳಿಸಿದ. ಪ್ರತಿಕ್ರಾಂತಿಗೆ ಕರೆ ನೀಡಿದ ಘೋಷಣಾ ಪತ್ರಗಳನ್ನು ಹೊರಡಿಸಿದವರು, ಸಹಿ ಹಾಕಿದವರು ತಾವೇ ಎಂಬುದನ್ನು ಅವರೀಗ ಒಪ್ಪಿಕೊಳ್ಳುತ್ತಿಲ್ಲ. ಮತ್ತೆ ನಗರದಲ್ಲಿ

ಕೆಲವು ಸೈನಿಕದಳಗಳು ಮಾತ್ರ ಈಗಲೂ ಕೆರೆನ್‌ಸ್ಕಿಯ ವಿರುದ್ಧ ಹೋರಾಡಲು ಸಿದ್ಧರಿಲ್ಲ ಎಂಬುದನ್ನೂ ಆತ ಹೇಳಿದ.

ತಟಸ್ಥನೆನಿಸಿಕೊಂಡ ಚೆರ್ನೋವ್ ಗ್ಯಾಟ್‌ಚಿನ್‌ಗೆ ಹೋಗಿ ಪೆತ್ರೋಗ್ರಾಡ್ ಮೇಲೆ ದಾಳಿ ಮಾಡಬೇಡ ಎಂದು ಕೆರೆನ್‌ಸ್ಕಿಗೆ ಹೇಳುತ್ತಿದ್ದಾನಂತೆ. "ಈಗ ತಟಸ್ಥರು ಎನ್ನುವವರು ಯಾರೂ ಇರಲಿಕ್ಕೆ ಸಾಧ್ಯವಿಲ್ಲ" ಎಂದು ಸ್ಕ್ರೈಪ್‌ನಿಕ್ ನಕ್ಕುಬಿಟ್ಟ, "ನಾವು ಗೆದ್ದಾಯಿತು. ರಣಾಂಗಣದಿಂದ ಅರವತ್ತು ಪ್ರತಿನಿಧಿಗಳು ಬೆಂಬಲ ಘೋಷಿಸಿ ಬಂದಿದ್ದಾರೆ. ರುಮಾನಿಯಾ ರಣರಂಗದ ಸೈನ್ಯಗಳು ಬಿಟ್ಟರೆ ಎಲ್ಲಾ ಕಡೆಯ ಎಲ್ಲಾ ಸೇನೆಗಳೂ ಕ್ರಾಂತಿಗೆ ಬೆಂಬಲ ಘೋಷಿಸಿವೆ. ಅಲ್ಲಿಯೂ ಅಷ್ಟೆ, ಸುದ್ದಿ ಏನೆಂಬುದು ಇನ್ನೂ ತಿಳಿಯಬೇಕಾಗಿದೆ. ಸೇನೆಯ ಅಧಿಕಾರಿಗಳು ಕ್ರಾಂತಿಯ ಮುನ್ನಡೆಯನ್ನು ರಣಾಂಗಣಗಳಲ್ಲಿ ಮುಚ್ಚಿಟ್ಟಿದ್ದಾರೆ. ಆದರೆ ಈಗ ನಮ್ಮ ದೂತರು ನಿರಂತರವಾಗಿ ಸುದ್ದಿ ತಲುಪಿಸುತ್ತಿದ್ದಾರೆ." ಅವನ ಗಡ್ಡದಿಂದ ಕೂಡಿದ ಮುಖ ಗಾಢ ಶ್ರದ್ಧೆಯಿಂದ ಹುಟ್ಟುವ ಆನಂದದ ತೀವ್ರತೆಯಿಂದ ಮಿನುಗುತ್ತಿತ್ತು.

ಕಮೆನೇವ್ ಸಭಾಂಗಣದ ಒಳಗೆ ಪ್ರವೇಶಿಸುತ್ತಿದ್ದ. ಹೊಸ ಸರ್ಕಾರದ ರಚನೆಯ ಬಗ್ಗೆ ಇಡಿಯ ರಾತ್ರಿ ಸಭೆ ನಡೆಸಿ ಸುಸ್ತಾಗಿ ನಿತ್ರಾಣನಾಗಿದ್ದರೂ ಖುಷಿಯಾಗಿದ್ದ. ನಮ್ಮನ್ನು ನೋಡಿ ಹೇಳತೊಡಗಿದ,

"ಈಗ ಸೋಷಲಿಸ್ಟ್ ರೆವಲ್ಯೂಶನರಿಗಳು ಸೇರಿ ಎಲ್ಲರೂ ನಮ್ಮೊಂದಿಗೆ ಸರ್ಕಾರ ರಚಿಸಲು ತಯಾರಾಗಿದ್ದಾರೆ. ಕ್ರಾಂತಿಕಾರಿ ವಿಚಾರಣಾ ಆಯೋಗಗಳು ಸ್ಥಾಪನೆಯಾದ ಮೇಲೆ ಬಲಪಂಥೀಯರು ಹೆದರಿಬಿಟ್ಟಿದ್ದಾರೆ. ರೈಲ್ವೆ ಕಾರ್ಮಿಕ ಸಂಘ ವಿಕ್‌ಜೆಲ್ ಎಲ್ಲಾ ಸಮಾಜವಾದಿಗಳನ್ನು ಸೇರಿಸಿ ಸರ್ಕಾರ ರಚಿಸಲು ಯತ್ನಿಸುತ್ತಿದೆ. ಇದಕ್ಕೆಲ್ಲಾ ಕಾರಣ, ನಾವು ಗೆದ್ದಿರುವುದು. ನಮ್ಮ ಪರಿಸ್ಥಿತಿ ಚೆನ್ನಾಗಿಲ್ಲದಿದ್ದಾಗ ಯಾರೂ ನಮ್ಮನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಈಗ ಸೋವಿಯತ್‌ಗಳೊಂದಿಗೆ ಒಪ್ಪಂದ ಎಲ್ಲರಿಗೂ ಬೇಕಾಗಿದೆ. ನಮಗೆ ನಿರ್ಣಾಯಕ ಗೆಲುವು ಅವಶ್ಯಕ. ಕೆರೆನ್‌ಸ್ಕಿ ಕದನವಿರಾಮ ಕೇಳುತ್ತಿದ್ದಾನೆ. ನಮಗೆ ಅವನ ಶರಣಾಗತಿ ಬೇಕು."

ಬೋಲ್ಶೆವಿಕ್ ನಾಯಕರ ಮನಃಸ್ಥಿತಿ ಹೀಗಿತ್ತು. ಪತ್ರಕರ್ತರು ಟ್ರಾಟ್‌ಸ್ಕಿಯನ್ನು ಹೇಳಿಕೆ ನೀಡಿ ಎಂದು ಕೇಳಿದಾಗ ಆತ 'ನಮ್ಮ ಮಾತುಗಳೆಲ್ಲಾ ಈಗ ಫಿರಂಗಿಯ ಬಾಯಿಂದ' ಎಂದ.

ಆದರೂ ಆಳದಲ್ಲಿ ಹಣಕಾಸಿನ ಕೊರತೆಯ ಆತಂಕ ಇದ್ದೇ ಇತ್ತು. ಬ್ಯಾಂಕುಗಳನ್ನು ತೆರೆಯಿರಿ ಎಂಬ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಆಜ್ಞೆಯನ್ನು ಧಿಕ್ಕರಿಸಿ ಬ್ಯಾಂಕ್ ಉದ್ಯೋಗಿಗಳು ಮುಷ್ಕರ ಹೂಡಿದ್ದರು. ಸ್ಮೋಲ್ನಿಯ ಸರ್ಕಾರ ಮೂವತ್ತೈದು ಲಕ್ಷ ರೂಬಲ್ ಹಣ ಕೇಳಿದರೆ, ಬ್ಯಾಂಕಿನ ಅಧಿಕಾರಿ ಅದನ್ನು ನೀಡದೆ ಖಜಾನೆಗೆ ಬೀಗ ಹಾಕಿಬಿಟ್ಟಿದ್ದ. ಆದರೆ ಹಳೆಯ ಹಂಗಾಮಿ ಸರ್ಕಾರದವರಿಗೆ ಈಗಲೂ ಹಣ ದೊರಕುತ್ತಿತ್ತು. ಪ್ರತಿಗಾಮಿಗಳು ಈಗ ಬ್ಯಾಂಕನ್ನು ಒಂದು ಹೋರಾಟದ ಅಸ್ತ್ರವನ್ನಾಗಿ ಉಪಯೋಗಿಸುತ್ತಿದ್ದರು. ರೈಲ್ವೆ ಕಾರ್ಮಿಕ ಸಂಘ ಸಂಬಳ ಕೇಳಿದಾಗ ಬೋಲ್ಶೆವಿಕ್‌ರನ್ನೇ ಕೇಳಿ ಎಂದು ಕಳಿಸಿಬಿಟ್ಟಿದ್ದರು.

ನಾನು ಸ್ಟೇಟ್ ಬ್ಯಾಂಕ್‌ನ ಹೊಸ ಕಮಿಸಾರ್‌ನನ್ನು ಭೇಟಿಯಾಗಲು ಹೋದೆ. ಮುಷ್ಕರ ಹೂಡಿದ್ದವರು ಸೃಷ್ಟಿಸಿದ್ದ ಅಸ್ತವ್ಯಸ್ತತೆಯಲ್ಲಿ ಆತ ವ್ಯವಸ್ಥೆಯನ್ನು ತರಲು ಹೆಣಗಾಡುತ್ತಿದ್ದ.

ಎಲ್ಲಾ ಕಛೇರಿಗಳಲ್ಲೂ ಸ್ವಯಂಸೇವಕರಾಗಿ ದುಡಿಯಲು ಬಂದಿದ್ದ ಸೈನಿಕರು ತಮಗೆ ಅರ್ಥವಾಗದ ಕಡತಗಳನ್ನು, ಪುಸ್ತಕಗಳನ್ನು ಬಿಚ್ಚಿಟ್ಟುಕೊಂಡು ಹೆಣಗಾಡುತ್ತಿದ್ದರು. ಅಂತರ್ಯುದ್ಧದ ಭೀಕರತೆಯಿಂದಾಗಿ ಎಲ್ಲರ ಮನಸ್ಸಿನಲ್ಲೂ ಎರಡು ಪ್ರಶ್ನೆಗಳು ಮುಖ್ಯವಾಗಿದ್ದವು. ಒಂದು, ರಕ್ತಪಾತ ನಿಲ್ಲಬೇಕು. ಎರಡು, ಹೊಸ ಸರ್ಕಾರ ರಚನೆಯಾಗಬೇಕು. ಬೋಲ್ಶೆವಿಕರನ್ನು "ನಾಶ ಮಾಡುತ್ತೇವೆ" ಎಂಬ ಮಾತಿರಲಿ, ಅವರನ್ನು ಬಿಟ್ಟು ಸರ್ಕಾರ ರಚಿಸೋಣ ಎಂಬ ಸೊಲ್ಲೂ ಕ್ಷೀಣವಾಗಿಬಿಟ್ಟಿತ್ತು. ಬೋಲ್ಶೆವಿಕರ ಕಡುದ್ವೇಷಿಗಳು ಕೂಡ ಅವರಿಗೆ ಸಂಪುಟದಲ್ಲಿ ಕೆಲವೇ ಸ್ಥಾನ ಕೊಟ್ಟು ಸೇರಿಸಿಕೊಳ್ಳೋಣ, ಎನ್ನುವ ಸ್ಥಿತಿಗೆ ಇಳಿದಿದ್ದರು.

ಕೆರೆನ್‌ಸ್ಕಿಗೆ ಕಡೆಗೂ ಮಾನವೀಯ ಸಂವೇದನೆಗಳು ಹುಟ್ಟಿ, ರಾಷ್ಟ್ರ ವಿಮೋಚನಾ ಸಮಿತಿಗೆ "ನಾನು ಎಲ್ಲಾ ಜನತಾಂತ್ರಿಕ ಶಕ್ತಿಗಳ ಒತ್ತಡಕ್ಕೆ ಮಣಿದು ಯುದ್ಧ ಕಾರ್ಯಾಚರಣೆಯನ್ನು ನಿಲ್ಲಿಸಿದ್ದೇನೆ. ಅರ್ಥಹೀನ ರಕ್ತಪಾತ ನಿಲ್ಲಿಸೋಣ. ಮಾತುಕತೆಗೆ ಜನರನ್ನು ಕಳಿಸುತ್ತಿದ್ದೇನೆ" ಎಂದು ಘೋಷಿಸಿದ್ದನ್ನು 'ಪ್ರಾವ್ದಾ' ಪತ್ರಿಕೆ ವ್ಯಂಗ್ಯವಾಗಿ ಪ್ರಕಟಿಸಿತ್ತು.

ರಾಜಿ ಒಪ್ಪಂದಕ್ಕಾಗಿ ನಡೆಯುತ್ತಿದ್ದ ಎಲ್ಲಾ ಸಮಾಜವಾದಿ ಪಕ್ಷಗಳ ಸಮ್ಮೇಳನದ ಪ್ರತಿನಿಧಿಗಳನ್ನೂ ರಣಾಂಗಣಕ್ಕೂ ಗ್ಯಾಟ್‌ಚಿನ್ ಪಟ್ಟಣಕ್ಕೂ ಕಳಿಸಲಾಯಿತು. ಸಮ್ಮೇಳನದಲ್ಲಿ ಹೊಸ ಸರ್ಕಾರದ ರಚನೆಯ ಬಗ್ಗೆ ಅಂತಿಮ ತೀರ್ಮಾನಕ್ಕೆ ಬಂದಂತಿತ್ತು. ಒಂದು ಹಂಗಾಮಿ ಜನತಾ ಮಂಡಳಿಯನ್ನು ರಚಿಸಲು ಮತ್ತು ಅದರಲ್ಲಿ ಯಾವ ಯಾವ ಪಕ್ಷದವರು ಎಷ್ಟೆಷ್ಟು ಜನರಿರಬೇಕೆಂದು ಸಹ ನಿರ್ಧಾರವಾಗಿತ್ತು. ಚೆರ್ನೋವ್ ಹೊಸ ಪ್ರಧಾನಿ ಎಂದೂ ಹೇಳಲಾಗಿತ್ತು. ಆದರೆ ವದಂತಿಯಿದ್ದದ್ದೆಂದರೆ ಲೆನಿನ್ ಮತ್ತು ಟ್ರಾಟ್‌ಸ್ಕಿಯನ್ನು ಮಾತ್ರ ಒಳಗೆ ಬಿಟ್ಟುಕೊಳ್ಳಬಾರದು...

ಮಧ್ಯಾಹ್ನದ ಹೊತ್ತಿಗೆ ನಾನು ಮತ್ತೆ ಸ್ಮೋಲ್ನಿಯ ಮುಂದೆ ಬಂದೆ. ಅಲ್ಲೊಬ್ಬ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸ್ವಯಂಸೇವಕನಾಗಿ ಆಂಬ್ಯುಲೆನ್ಸ್ ಒಂದರಲ್ಲಿ ಚಾಲಕನಾಗಿದ್ದವನು ಪರಿಚಯವಾದ. ಅವನು ಕ್ರಾಂತಿಕಾರಿ ರಣಾಂಗಣಕ್ಕೆ ಹೊರಟಿದ್ದವನು ಜೊತೆಯಲ್ಲಿ ನನ್ನನ್ನೂ ಕರೆದುಕೊಂಡುಹೋಗಲು ಒಪ್ಪಿದ.

ಅವನು ಮೊದಲಿಗೆ ನನ್ನನ್ನು ಒಂದು ಸೈನ್ಯದ ಕಟ್ಟಡಕ್ಕೆ ಕರೆದುಕೊಂಡು ಹೋದ. ಅಲ್ಲೊಂದು ಉದ್ದನೆಯ ಟೇಬಲ್ ಮುಂದೆ ಇಪ್ಪತ್ತು ಜನ ಸೈನಿಕರು ಒಂದು ದೊಡ್ಡ ಮರದ ಟಬ್‌ನಿಂದ ಎಲ್ಲರೂ ಒಟ್ಟಿಗೆ ಚಮಚದಲ್ಲಿ ಕ್ಯಾಬೇಜ್ ಸೂಪ್ ಹೀರುತ್ತಾ ಕೂತಿದ್ದರು. ಆರನೇ ರಿಸರ್ವ್ ಎಂಜಿನಿಯರ್ಸ್ ಬೆಟಾಲಿಯನ್‌ಗೆ ಸ್ವಾಗತ ಎನ್ನುತ್ತಾ ಅವನು ನನ್ನನ್ನು ಸ್ವಾಗತಿಸಿ ಒಳಗೆ ಕರೆದುಕೊಂಡು ಹೋದ. ಅವರಿಗೆಲ್ಲಾ ನಾನೊಬ್ಬ ಅಮೆರಿಕನ್ ಸಮಾಜವಾದಿ ಎಂದು ಪರಿಚಯಿಸಿದ. ಎಲ್ಲರೂ ಎದ್ದು ಕೈ ಕುಲುಕಿದರು. ಒಬ್ಬನಂತೂ ಅಪ್ಪಿ ಮುದ್ದಿಟ್ಟ. ನನಗೂ ಚಮಚ ಕೊಟ್ಟು ಸೂಪ್ ತಿನ್ನಲು ಹೇಳಿದರು. ಒಂದಷ್ಟು ಬ್ರೆಡ್ ಮತ್ತು ಚಾ ಬಂತು.

ಎಲ್ಲರೂ ಈಗ ನನ್ನನ್ನು ಅಮೆರಿಕಾದ ಬಗ್ಗೆ ಪ್ರಶ್ನಿಸಲಾರಂಭಿಸಿದರು. ಸ್ವತಂತ್ರ ದೇಶಗಳಲ್ಲಿ ಜನ ಚುನಾವಣೆಗಳಲ್ಲಿ ಹಣಕ್ಕೆ ತಮ್ಮ ವೋಟುಗಳನ್ನು ಮಾರಿಕೊಳ್ಳುತ್ತಾರಂತೆ ಸತ್ಯವೇ? ಅಂಥ ದೇಶದಲ್ಲಿ ಕೆಲವೇ ಜನ ಇಡೀ ನಗರವನ್ನೇ ನಿಯಂತ್ರಿಸಿ ಅದನ್ನು ತಮ್ಮ

ಹಿತಾಸಕ್ತಿಗಾಗಿ ಶೋಷಿಸುತ್ತಾರಂತೆ ಹೌದೇ? ಜನ ಏಕೆ ಸುಮ್ಮನಿರುತ್ತಾರೆ? ಝಾರ್‌ನ ಕಾಲದಲ್ಲೂ ಭ್ರಷ್ಟಾಚಾರವಿತ್ತು, ನಿಜ. ಆದರೆ ಈ ರೀತಿ ಇಡೀ ಊರನ್ನೇ ಯಾರೂ ಕೊಳ್ಳಲಾಗುತ್ತಿರಲಿಲ್ಲ. ಜನರಲ್ಲಿ ಕ್ರಾಂತಿಕಾರಿ ಭಾವನೆಗಳೇ ಇಲ್ಲವೇ? ಇತ್ಯಾದಿ.

ನಮ್ಮ ದೇಶದಲ್ಲಿ ಜನ ಕಾನೂನಿನ ಮೂಲಕ ಬದಲಾವಣೆ ತರಲು ಯತ್ನಿಸುತ್ತಾರೆ ಎಂದು ನಾನು ವಿವರಿಸಿದೆ.

ಬಕ್ಲನೋವ್ ಎಂಬ ಫ್ರೆಂಚ್ ಬಲ್ಲ ತರುಣ ಸಾರ್ಜಂಟ್ ಹೇಳಲಾರಂಭಿಸಿದ: "ನಿಮ್ಮಲ್ಲಿ ತುಂಬ ಮುಂದುವರೆದ ಬಂಡವಾಳಶಾಹಿ ವರ್ಗವಿದೆ ನಿಜ. ಹಾಗಾಗಿ ಅದು ಶಾಸನಸಭೆಗಳನ್ನೂ, ನ್ಯಾಯಾಲಯಗಳನ್ನೂ ನಿಯಂತ್ರಿಸುತ್ತದೆ ಎಂಬುದು ನಿಜ. ಹೀಗಿರುವಾಗ ನಿಮ್ಮ ಜನ ಕಾನೂನು ಮೂಲಕ ಬದಲಾವಣೆ ತರುವುದು ಹೇಗೆ ಸಾಧ್ಯ? ನರಬಲಿಕ್ಕೆ ಅಸಾಧ್ಯ..."

ಹೀಗೇ ಮಾತು ಮುಂದುವರೆಯುತ್ತಿತ್ತು. ನಾನು "ತ್ಸಾರ್‌ಸ್ಕೊಯೆ ಸೆಲೊ ಊರಿಗೆ ಹೊರಟಿದ್ದೇನೆ" ಎಂದೆ. ಕೂಡಲೇ ಅವರೆಲ್ಲರೂ ಹೊರಡಲು ತಯಾರಾಗಿ ಬಿಟ್ಟರು. ಅಷ್ಟರಲ್ಲಿ ಬಾಗಿಲನ್ನು ತಟ್ಟಿ ಒಬ್ಬ ಕರ್ನಲ್ ಒಳಗೆ ಬಂದ. ಎಲ್ಲರೂ ಅವನಿಗೆ ವಂದಿಸಿದರು. ಆದರೆ ಯಾರೂ ಎದ್ದುನಿಂತು ಗೌರವ ತೋರಿಸಲಿಲ್ಲ! ಅನುಮತಿ ಕೇಳಿ ಆತ ಒಳಗೆ ಬಂದದ್ದು ನನಗೆ ಆಶ್ಚರ್ಯಕರವಾಗಿತ್ತು. ಅವನೊಬ್ಬ ಎತ್ತರವಾದ, ಮಂದಹಾಸ ಸೂಸುತ್ತಿದ್ದ, ಒಳ್ಳೆಯ ಕೋಟ್ ಧರಿಸಿದ್ದ ಆಕರ್ಷಕ ವ್ಯಕ್ತಿ. "ನೀವು ತ್ಸಾರ್‌ಸ್ಕೊಯೆ ಸೆಲೋಗೆ ಹೊರಡುವುದಾಗಿ ಮಾತಾಡಿಕೊಳ್ಳುತ್ತಿದ್ದುದು ಕೇಳಿಸಿತು. ನಾನೂ ಬರಬಹುದೇ?" ಆತ ಕೇಳಿದ.

ಬಕ್ಲನೋವ್ ಸ್ವಲ್ಪ ಯೋಚಿಸಿ, "ಆಗಬಹುದು, ಇಲ್ಲೇನೂ ಕೆಲಸ ಉಳಿದಿಲ್ಲ" ಎಂದ. ಕರ್ನಲ್ ಸಂತೋಷದಿಂದ ವಂದಿಸಿ ಟೀ ಕುಡಿಯಲು ಕುಳಿತ. ಈ ಅಸಾಧಾರಣ ನಡೆವಳಿಕೆಯನ್ನು ಗಮನಿಸುತ್ತಿದ್ದ ನನಗೆ ಬಕ್ಲನೋವ್ ಮೆಲುದನಿಯಲ್ಲಿ ಕರ್ನಲ್‌ಗೆ ಬೇಜಾರಾಗದಂತೆ ಪರಿಸ್ಥಿತಿಯನ್ನು ವಿವರಿಸಿದ. "ನೋಡಿ, ನಾನು ಸಮಿತಿಯ ಅಧ್ಯಕ್ಷನಾದ್ದರಿಂದ ಬೆಟಾಲಿಯನ್‌ಅನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತೇನೆ. ಆದರೆ ಯುದ್ಧಭೂಮಿಯಲ್ಲಿ ನಮಗೆ ಮುಂದಾಳತ್ವ ನೀಡಲು ನಾವು ಅವನನ್ನು ಆಯ್ಕೆ ಮಾಡಿದ್ದೀವಿ. ಅಲ್ಲಿ ಅವನಿಗೆ ನಾವು ವಿಧೇಯರು. ಆದರೆ ಅವನು ನಮಗೆ ಸಂಪೂರ್ಣವಾಗಿ ಉತ್ತರದಾಯಿ. ಮತ್ತೆ ಶಿಬಿರದಲ್ಲಂತೂ ಆತ ಏನೇ ಮಾಡಲೂ ನಮ್ಮ ಅನುಮತಿ ಪಡೆಯಬೇಕು..." ಎಂದು ವಿವರಿಸಿದ.

ನಮಗೆಲ್ಲರಿಗೂ "ದಾರಿಯಲ್ಲಿ ಕೊಸ್ಸಾಕರು ಎದುರಾಗಬಹುದು..." ಎಂದು ಹೇಳಿ ರೈಫಲ್‌ಗಳನ್ನೂ ಪಿಸ್ತೂಲುಗಳನ್ನೂ ನೀಡಿದರು. ನಾವೆಲ್ಲರೂ ಅನೇಕ ವೃತ್ತಪತ್ರಿಕೆಗಳ ಹೊರೆಗಳೊಂದಿಗೆ ಆಂಬ್ಯುಲೆನ್ಸ್ ಹತ್ತಿ ಕುಳಿತೆವು. ಆ ಪತ್ರಿಕೆಗಳನ್ನು ರಣಾಂಗಣದಲ್ಲಿ ಹಂಚುವುದಕ್ಕೆ ನನ್ನ ಪಕ್ಕದಲ್ಲಿ ಒಬ್ಬ ಅನೇಕ ಭಾಷೆಗಳನ್ನು ಬಲ್ಲ ಲೆಫ್ಟಿನೆಂಟ್ ಕುಳಿತಿದ್ದ.

ಅವನು ದೃಢವಾಗಿ ಹೇಳಿದ, "ನಾನು ಬೋಲ್ಶೆವಿಕ್ ಅಲ್ಲ, ನಮ್ಮದು ಶ್ರೀಮಂತರ ಮನೆತನ. ನನ್ನನ್ನು ಕ್ಯಾಡೆಟ್ ಪಕ್ಷದವನು ಎನ್ನಬಹುದು."

ನಾನು ಆಶ್ಚರ್ಯದಿಂದ "ಹಾಗಿದ್ದರೆ ನೀನು ಇಲ್ಲಿ..." ಎಂದೆ.

"ನಾನು ಸಮಿತಿಯ ಸದಸ್ಯ. ನನ್ನ ರಾಜಕೀಯ ಅಭಿಪ್ರಾಯಗಳನ್ನು ನಾನು

ಮುಚ್ಚಿಡೋದಿಲ್ಲ. ಆದರೆ ಬೇರೆಯವರಿಗೆ ಅದರ ಬಗ್ಗೆ ಬೇಸರವಿಲ್ಲ. ಏಕೆಂದರೆ ನಾನು ಬಹುಮತದ ಅಭಿಪ್ರಾಯದ ವಿರುದ್ಧ ಹೋಗೋದಿಲ್ಲ ಅಂತ ಅವರಿಗೆ ಗೊತ್ತಿದೆ. ನಾನು ಈ ಅಂತರ್ಯುದ್ಧದಲ್ಲಿ ಯಾವ ಪಾತ್ರವನ್ನೂ ವಹಿಸುತ್ತಿಲ್ಲ. ಯಾಕೆ ಅಂದ್ರೆ ನನಗೆ ಸೋದರರಾದ ರಷ್ಯನ್‌ರ ವಿರುದ್ಧ ಆಯುಧ ಎತ್ತಕ್ಕಾಗಲ್ಲ." ಎಲ್ಲರೂ ತಮಾಷೆಯಾಗಿ ಅವನಿಗೆ "ಇವನು ಏಜೆಂಟು, ಕೊರ್ನಿಲೊವ್ ಕಡೆಯವನು" ಎಂದು ಭುಜದ ಮೇಲೆ ಬಾರಿಸಿದರು.

ಬೃಹತ್ತಾದ ಚಿನ್ನದ ಬಣ್ಣದ ಚಿತ್ರಗಳು, ರಾಜ್ಯದ ಅಧಿಕೃತ ಹದ್ದಿನ ಚಿಹ್ನೆ, ತ್ಸಾರರ ಹೆಸರುಗಳು ಎಲ್ಲಾ ಇದ್ದ ಮಾಸ್ಕೊವ್‌ಸ್ಕಿ ದ್ವಾರವನ್ನು ದಾಟಿ ನಾವು ಹೆದ್ದಾರಿಗೆ ಬಂದೆವು. ಹಿಮಬಿದ್ದು ರಸ್ತೆ ಬೂದುಬಣ್ಣಕ್ಕೆ ತಿರುಗಿತ್ತು.

ರಸ್ತೆಯ ಗುಂಟ ರೆಡ್‌ಗಾರ್ಡ್‌ಗಳು ಕುಂಟುತ್ತಾ, ಎಡವುತ್ತಾ, ಕ್ರಾಂತಿಕಾರಿ ರಣಾಂಗಣದತ್ತ ನಡೆದಿದ್ದರು. ಅವರು ಕೂಗುತ್ತಾ ಹಾಡುತ್ತಾ ಹೋಗುತ್ತಿದ್ದರು. ವಾಪಸ್ ಬರುವವರಿಗೆ ಕೆಸರು ಮೆತ್ತಿತ್ತು. ಅದರಲ್ಲಿ ಅನೇಕರನ್ನು ಇನ್ನೂ ಹುಡುಗರು ಎನ್ನಬಹುದು. ಕೈಲಿ ಸನಿಕೆಯನ್ನು, ಬಂದೂಕವನ್ನು ಹಿಡಿದ ಹೆಂಗಸರೂ ಬರುತ್ತಿದ್ದರು. ಬೆನ್ನು ಬಾಗಿದ, ಕೆಲಸದಿಂದ ಜೀರ್ಣವಾದಂತಿದ್ದ ಈ ಹೆಂಗಸರು ಸ್ಲಂಗಳಿಗೆ ಸೇರಿದವರು. ಚೆನ್ನಾಗಿ ಕವಾಯತು ಕಲಿತ ಸೈನಿಕರು ಒಡ್ಡಂಬಡ್ಡ ನಡೆಯುವ ರೆಡ್‌ಗಾರ್ಡ್‌ಗಳನ್ನು ರೇಗಿಸುತ್ತಿದ್ದರು. ತಂದೆ ತಾಯಿಯರಿಗೆ ಊಟ ಹೊತ್ತು ಹೋಗುತ್ತಿದ್ದ ಗಂಭೀರ ಮುಖಭಾವದ ಮಕ್ಕಳು. ಅವರೆಲ್ಲರೂ ಬಿಳಿಯಾಗಿದ್ದ ಕೆಸರಿನಲ್ಲಿ ಇಂಚುಗಟ್ಟಲೆ ಹೂತುಹೋಗುವ ಕಾಲುಗಳನ್ನು ಎಳೆದುಹಾಕುತ್ತಾ ಬರುತ್ತಿದ್ದರು. ದಾರಿಯಲ್ಲಿ ಸಮರಾಂಗಣದಿಂದ ಬರುತ್ತಿದ್ದ ಫಿರಂಗಿಗಳು, ಲಾರಿಗಳು, ಗಾಯಗೊಂಡವರನ್ನು ತುಂಬಿಕೊಂಡ ಆಂಬ್ಯುಲೆನ್ಸ್‌ಗಳು ಎದುರಾದವು. ಒಂದು ಬಂಡಿಯಲ್ಲಿ ಹೊಟ್ಟೆ ಚೂರುಚೂರಾದ ಮಗುವೊಂದು ಅಳುತ್ತಿತ್ತು. ಹೊಲಗಳಲ್ಲಿ ವಯಸ್ಸಾದ ಮುದುಕರು ಹೆಂಗಸರು ಕಂದಕ ತೋಡುತ್ತಾ, ಮುಳ್ಳುತಂತಿ ಬೇಲಿಗಳನ್ನು ನಿಲ್ಲಿಸುತ್ತಿದ್ದರು.

ಉತ್ತರದಲ್ಲಿ ಮನೋಹರವಾಗಿ ಸಾಗುತ್ತಿರುವ ಮೋಡಗಳು, ಮಬ್ಬಾದ ಸೂರ್ಯ ಹೊರಗೆಬಂದ ಜೌಗು ನೆಲದಾಚೆ ಪೆತ್ರೋಗ್ರಾಡ್ ಮಿನುಗುತ್ತಿತ್ತು. ಎತ್ತರವಾದ ಚಿಮಣಿಗಳು ರಸ್ತೆಯ ಒಂದು ಕಡೆ ಹೊಗೆ ಉಗುಳುತ್ತಿದ್ದವು. ಆಚೆಗೆ, ಫಿನ್‌ಲೆಂಡ್ ಮೇಲಿನ ಆಕಾಶ, ಎರಡೂ ಕಡೆ ಚರ್ಚುಗಳು.

ಪುಲ್ಕೊವೊ ಬಳಿ ರಸ್ತೆ ಕವಲೊಡೆಯುವ ಜಾಗದಲ್ಲಿ ವಿಪರೀತ ಜನ ಸೇರಿದ್ದರು. ನಾವೂ ವಾಹನವನ್ನು ನಿಲ್ಲಿಸಿದೆವು. ಸೇರಿದ್ದ ಮಿತ್ರರು ಒಬ್ಬರಿಗೊಬ್ಬರು ಯುದ್ಧದ ಬಗ್ಗೆ ವರ್ಣಿಸುತ್ತಿದ್ದರು. ಮನೆಗಳ ಮೇಲೆಲ್ಲಾ ಗುಂಡಿನ ಗುರುತು. ಸುತ್ತಲೂ ಅರ್ಧ ಮೈಲಿ ದೂರ ನೆಲ ತುಳಿದು ಕೆಸರಾಗಿತ್ತು. ಇಲ್ಲಿ ಯುದ್ಧ ಉಗ್ರವಾಗಿ ನಡೆದಿತ್ತು. ಕೊಸ್ಸಾಕರು ಬಿಟ್ಟೋಡಿದ್ದ ಕುದುರೆಗಳು ಹುಲ್ಲು ಸಿಗದೆ ಹಸಿವಿನಿಂದ ಓಡಾಡಿಕೊಂಡಿದ್ದವು. ರೆಡ್‌ಗಾರ್ಡ್ ಒಬ್ಬ ಕುದುರೆ ಹತ್ತಲು ಯತ್ನಿಸಿ ಬೀಳುತ್ತಿದ್ದ. ಜನ ಮಕ್ಕಳಂತೆ ನಗುತ್ತಿದ್ದರು.

ಎಡಗಡೆಯ ರಸ್ತೆಯಲ್ಲೇ ಕೊಸ್ಸಾಕರು ಪಲಾಯನ ಮಾಡಿದ್ದುದು. ಅಲ್ಲಿ ಹೋದರೆ ಒಂದು ಪುಟ್ಟ ಗುಡ್ಡದಿಂದ ಸುತ್ತಲಿನ ಮೈದಾನ ವಿಶಾಲವಾಗಿ ಭವ್ಯವಾಗಿ ಕಾಣುತ್ತಿತ್ತು. ಪೀಟರ್ಸ್‌ಬರ್ಗ್‌ನಿಂದ ಸಾವಿರಾರು ಜನ ಬರುತ್ತಿರುವುದೂ ಕಂಡಿತು. ಎಡಗಡೆ ದೂರದಲ್ಲಿ ಕ್ರಾಸ್‌ನೊಯೆ ಸೆಲೋನ ಬೆಟ್ಟ.

ನಾವೊಂದು ಬೋಳುಗುಡ್ಡದ ಮೇಲೆ ಹೋಗುವಾಗ ನಮ್ಮ ಚಾಲಕ ಹೇಳಿದ : "ಇಲ್ಲೇ ಡ್ಯೂಮಾದ ಬೋಲ್ಶೆವಿಕ್ ಸದಸ್ಯೆ ವೆರಾ ಸ್ಲುತ್‌ಸ್ಕಯಾ ಬೆಳಿಗ್ಗೆ ತೀರಿಕೊಂಡಿದ್ದು. ಆಕೆ ಒಂದು ವಾಹನದಲ್ಲಿದ್ದಳು. ಕದನವಿರಾಮವಿತ್ತೆಂದು ಅವರು ರಣಾಂಗಣದತ್ತ ಹೊರಟಿದ್ದರು. ಕೆರೆನ್‌ಸ್ಕಿ ಕುಳಿತಿದ್ದ ವಾಹನದಿಂದಲೇ ಹಾರಿಸಿದ ಗುಂಡಿಗೆ ಆಕೆ ಬಲಿಯಾದಳು..."

ಅಂತೂ ತ್ಸಾರ್‌ಸ್ಕೋಯೇಗೆ ಬಂದು ತಲುಪಿದೆವು. ಊರು ತುಂಬ ಗೆಲುವಿನಿಂದ ಹೆಮ್ಮೆಪಡುತ್ತಿದ್ದ ಶ್ರಮಜೀವಿ ಧೀರರು. ಸೋವಿಯತ್ ಸಭೆಯ ಜಾಗದಲ್ಲಿ ವಿಪರೀತ ಜನ ಸೇರಿದ್ದರು. ರೆಡ್‌ಗಾರ್ಡ್‌ಗಳು, ನಾವಿಕರು ಅಂಗಳದಲ್ಲಿ ಸೇರಿದ್ದರು. ಪತ್ರವಾಹಕರು, ಕಮಿಸಾರ್‌ಗಳು ಒಳಹೊರಗೆ ಓಡಾಡಿಕೊಂಡಿದ್ದರು. ಸೋವಿಯತ್ ಕೊಠಡಿಯಲ್ಲಿ ಒಂದೈವತ್ತು ಜನ ಕಾರ್ಮಿಕರು, ಸೈನಿಕರು ಚಾ ಕುಡಿಯುತ್ತಾ ಜೋರಾಗಿ ಹರಟುತ್ತಿದ್ದರು. ಮಧ್ಯದಲ್ಲಿ ಮೇಜಿನ ಮೇಲೆ ಭೂಪಟ ಹರಡಿಕೊಂಡು ಬೃಹದಾಕಾರದ ಡೈಬೆಂಕೊ ನಿಂತಿದ್ದ. ಎಂದಿನಂತೆ ಒಂದು ಕೈಯಲ್ಲಿ ರಿವಾಲ್ವರ್.

ಗೋಡೆಯ ಬಳಿ ಮಂಚವೊಂದರ ಮೇಲೆ ಒಬ್ಬ ತರುಣ ಗಾಯಗೊಂಡು ಮಲಗಿದ್ದ. ಇಬ್ಬರು ರೆಡ್‌ಗಾರ್ಡ್‌ಗಳು ಅವನ ಮೇಲೆ ಬಾಗಿ ನೋಡಿಕೊಳ್ಳುತ್ತಿದ್ದರು. ಆತನ ಎದೆಯಲ್ಲಿ ಗುಂಡಿನ ತೂತಾಗಿ ಪ್ರತಿಬಾರಿ ಎದೆ ಹೊಡೆದುಕೊಂಡಾಗ ರಕ್ತ ಹೊರಬರುತ್ತಿತ್ತು. ಅವನ ಎಳೆಯ ಗಡ್ಡ ತುಂಬಿದ ಮುಖ ಹಸಿರು ಬಣ್ಣಕ್ಕೆ ತಿರುಗುತ್ತಿತ್ತು. ಅವನಿನ್ನೂ ಕೊಂಚ ಉಸಿರಾಡುತ್ತಿದ್ದ. ಪ್ರತಿ ಉಸಿರಿನ ಜೊತೆ "ಶಾಂತಿ ಬರುತ್ತಿದೆ ! ಶಾಂತಿ ಬರುತ್ತಿದೆ !" ಎನ್ನುತ್ತಿದ್ದ.

ನಾವು ಒಳಗೆ ಬರುತ್ತಿದ್ದಂತೆ ಡೈಬೆಂಕೊ ತಲೆ ಎತ್ತಿ ನೋಡಿ, ಬಕ್ಲನೋವ್‌ಗೆ "ಓಹೋ ನೀನು ! ಕಾಮ್ರೇಡ್, ನೀನು ಕಮಾಂಡೆಂಟ್ ಕಛೇರಿಗೆ ಹೋಗು. ಎಲ್ಲವನ್ನೂ ನಿನ್ನ ವಶಕ್ಕೆ ತಗೋ. ಇಗೋ ನಿನಗೆ ಆಜ್ಞಾಪತ್ರ ಕೊಡುತ್ತೇನೆ" ಎಂದು ಒಂದು ಬೆರಳಲ್ಲಿ ಟೈಪ್ ಮಾಡಲಾರಂಭಿಸಿದ.

ನಾನೂ, ಈ ಹೊಸ ಕಮಾಂಡೆಂಟು ಇಬ್ಬರೂ ಎಕಟೆರಿನಾ ಅರಮನೆಗೆ ಹೋದೆವು. ಅವನಿಗೆ ಸಿಕ್ಕಿದ ಪ್ರಾಶಸ್ತ್ಯದಿಂದ ಬಕ್ಲನೋವ್ ಖುಷಿಯಾಗಿತ್ತು. ಅಲ್ಲಿ ಹೋದರೆ ರೆಡ್‌ಗಾರ್ಡ್‌ಗಳು ಕುತೂಹಲದಿಂದ ಎಲ್ಲವನ್ನೂ ಎಳೆದು ನೋಡುತ್ತಿದ್ದರು. ನಾನು ಈ ಹಿಂದೆ ಇಲ್ಲಿಗೆ ಬಂದಿದ್ದಾಗ ಸಿಕ್ಕಿದ್ದ ಹಳೆಯ ಗೆಳೆಯ ಕರ್ನಲ್ ಅಲ್ಲೇ ಇದ್ದ. ನನ್ನನ್ನು ನೋಡಿ ಸೋದರನೊಬ್ಬ ಸಿಕ್ಕಿದಂತಾಯಿತು ಅವನಿಗೆ. ಬೋಲ್ಶೆವಿಕರು ಅಲ್ಲೇ ಕೆಲಸ ಮುಂದುವರೆಸಲು ಹೇಳಿದ್ದರಂತೆ. "ನಮ್ಮಂಥೋರು ಇಂಥ ಯುದ್ಧದಲ್ಲಿ ಯಾರ ಕಡೇನೂ ಇರಕ್ಕಾಗಲ್ಲ. ನಂಗೆ ಈ ಜನರ ಮಂದೆಯ ಸರ್ಕಾರ ಇಷ್ಟವಿಲ್ಲದಿದ್ದರೂ... ನಮ್ಮಮ್ಮನ್ನು ನೋಡಿ ಎಷ್ಟು ದಿನವಾಯ್ತಲ್ಲಪ್ಪಾ" ಎಂದ.

ಬಕ್ಲನೋವ್ ಉಸ್ತುವಾರಿ ವಹಿಸಿಕೊಳ್ಳುತ್ತಿದ್ದ. ಕರ್ನಲ್ ಹೆದರುತ್ತಾ ಬೀಗದ ಕೈ ಕೊಟ್ಟ. ಒಬ್ಬ ರೆಡ್‌ಗಾರ್ಡ್ ಮಧ್ಯೆ ಬಾಯಿ ಹಾಕಿ "ಹಣ ಎಲ್ಲಿ" ಎಂದ ಒರಟಾಗಿ. ಕರ್ನಲ್ ಆಶ್ಚರ್ಯಚಕಿತನಾದವನಂತೆ "ಹಣ ? ಹಣ? ಓಹ್ ಆ ಪೆಟ್ಟಿಗೇನೋ ನೀವು ಹೇಳ್ತಿರೋದು. ಅದು ಅಲ್ಲೇ ಇದೆ ನೋಡಿ. ಮೂರು ದಿನದ ಹಿಂದೆ ನಾನು ಇಲ್ಲಿನ ಉಸ್ತುವಾರಿ ತಗೊಂಡಾಗ ಹೇಗಿತ್ತೋ ಹಾಗೇ ಇದೆ. ಬೀಗದ ಕೈಯ? ನನಗೆ ಗೊತ್ತಿಲ್ಲಪ್ಪ."

ರೆಡ್‌ಗಾರ್ಡ್ ಎಲ್ಲಾ ಗೊತ್ತಿರುವವನಂತೆ "ಜಾಣ ಉತ್ತರ" ಎಂದ.

"ಪೆಟ್ಟಿಗೆ ಒಡೆಯೋಣ. ಕೊಡಲಿ ತನ್ನಿ. ಇಲ್ಲಿ ಅಮೆರಿಕನ್ ಸಂಗಾತಿ ಇದ್ದಾರೆ. ಅವರೇ ಒಳಗೇನಿದೆ ನೋಡಿ ಪಟ್ಟಿ ಮಾಡಲಿ" ಎಂದ ಬಾಕ್ಲನೊವ್. ನಾನು ಕೊಡಲಿಯಿಂದ ಪೆಟ್ಟಿಗೆ ಸೀಳಿದೆ. ಒಳಗೇನಿದೆ, ಖಾಲಿ !

"ಇವನನ್ನು ಬಂಧಿಸೋಣ. ಇವನು ಹಣ ಕದ್ದು ಕೆರೆನ್‌ಸ್ಕಿಗೆ ಕೊಟ್ಟಿದ್ದಾನೆ" ಎಂದ ರೆಡ್‌ಗಾರ್ಡ್. ಬಾಕ್ಲನೊವ್‌ಗೆ ಅದು ಇಷ್ಟವಿರಲಿಲ್ಲ. ಆದರೆ ರೆಡ್‌ಗಾರ್ಡ್‌ಗಳು ಬಿಡಲಿಲ್ಲ. ಇವನನ್ನು ರಾಜಧಾನಿಯಲ್ಲಿ ಪೀಟರ್ – ಪಾಲ್ ಕೋಟೆಯಲ್ಲಿ ಕೂಡಿಹಾಕುತ್ತೇವೆ ಎಂದು ಎಳೆದುಕೊಂಡು ಹೋದರು.

* * *

ಸೋವಿಯತ್ ಭವನದ ಬಳಿಯಲ್ಲಿ ಒಂದು ಟ್ರಕ್ ರಣಾಂಗಣದತ್ತ ಹೊರಟಿತ್ತು. ಆರೆಂಟು ಸೈನಿಕರು ಕಾರ್ಮಿಕನೊಬ್ಬನ ನೇತೃತ್ವದಲ್ಲಿ ಅತ್ತ ಹೊರಟಿದ್ದವರು ನನ್ನನ್ನು ಜೊತೆಗೆ ಕರೆದರು. ಟ್ರಕ್‌ನಲ್ಲಿ ಭಾರೀಶಕ್ತಿಶಾಲಿಯೂ, ಡೈನಮೈಟ್‌ಗಳಿಗಿಂತ ಸೂಕ್ಷ್ಮವೂ ಆದ ಬಾಂಬುಗಳನ್ನು ತುಂಬಿದರು. ಹಿಂದುಗಡೆ ಒಂದು ಫಿರಂಗಿ ಗಾಡಿಯನ್ನೂ ಹಗ್ಗ, ತಂತಿ ಸೇರಿಸಿ ವಾಹನಕ್ಕೆ ಕಟ್ಟಿದರು.

ಜೋರಾಗಿ ಕೂಗುತ್ತಾ ಗರಿಷ್ಠ ವೇಗದಲ್ಲಿ ನಮ್ಮ ಪ್ರಯಾಣ ಆರಂಭವಾಯಿತು. ಟ್ರಕ್ಕು ಅತ್ತಿಂದಿತ್ತ ವಾಲಾಡುತ್ತಿದ್ದಂತೆ ಬಾಂಬುಗಳು ಕೇರಂಬೋರ್ಡಿನ ಪಾನ್‌ಗಳಂತೆ ಓಡಾಡುತ್ತಾ ಲಾರಿಯ ಗೋಡೆಗಳಿಗೆ ಡಿಕ್ಕಿ ಹೊಡೆಯುತ್ತಿದ್ದವು.

ವ್ಲಾದಿಮಿರ್ ಎಂಬ ಆ ಕಾರ್ಮಿಕ ಪ್ರಯಾಣದ ಸಮಯದಲ್ಲಿ ಒಂದೇ ಸಮನೆ ನನ್ನನ್ನು ಅಮೆರಿಕಾದ ಬಗ್ಗೆ ಪ್ರಶ್ನಿಸುತ್ತಾ ಹೋದ. ಅಮೆರಿಕಾ ಯುದ್ಧಕ್ಕೆ ಸೇರಿಕೊಂಡದ್ದು ಏಕೆ? ಅಮೆರಿಕನ್ ಕಾರ್ಮಿಕರು ತಮ್ಮ ಬಂಡವಾಳಗಾರರನ್ನು ಕಿತ್ತೊಗೆಯಲು ಸಿದ್ಧರಿದ್ದಾರೆಯೇ? ಹೀಗೆ ಅನೇಕ ಪ್ರಶ್ನೆಗಳು, ಉತ್ತರಿಸಲು ಜಟಿಲವಾದವು. ಹರಿದಾಡುವ ಬಾಂಬುಗಳ ಮಧ್ಯೆ ಕುಣಿದಾಡುತ್ತಿದ್ದ ನಾವು ಲಾರಿಯ ಶಬ್ದವನ್ನು ಮೀರಿಸಿ ಕೂಗುತ್ತಾ ಈ ಚರ್ಚೆಯನ್ನು ಮಾಡಬೇಕಿತ್ತು.

ಅಲ್ಲಲ್ಲಿ ರಕ್ಷಣಾದಳದವರು ನಮ್ಮನ್ನು ನಿಲ್ಲಿಸಲು ಯತ್ನಿಸಿದರೂ ನಾವು ಸಾಗುತ್ತಲೇ ಇದ್ದೆವು. ರೆಡ್‌ಗಾರ್ಡ್‌ಗಳು "ನಾವು ಯಾರು ಹೇಳಿದರೂ ನಿಲ್ಲಿಸುವುದಿಲ್ಲ. ನಾವು ಯಾರು ಗೊತ್ತೇ? ನಾವು ರೆಡ್‌ಗಾರ್ಡ್‌ಗಳು" ಎಂದು ಅರಚುತ್ತಿದ್ದರು. ವ್ಲಾದಿಮಿರ್ ಜೋರಾಗಿ ಕೂಗುತ್ತಾ ರಾಜಕೀಯ ಚರ್ಚೆಗೆ ಯತ್ನಿಸುತ್ತಲೇ ಇದ್ದ.

ಸುಮಾರು ಐದು ಮೈಲು ಹೋದ ಮೇಲೆ ಕೆಲವು ನಾವಿಕರು ವಾಪಸ್ ಬರುತ್ತಿದ್ದದ್ದು ಕಾಣಿಸಿತು. ನಾವು ವಾಹನ ನಿಲ್ಲಿಸಿ "ರಣಾಂಗಣ ಎಲ್ಲಿದೆ" ಎಂದು ಕೇಳಿದೆವು. "ಸುಮಾರು ಅರ್ಧ ಮೈಲು ಆಚೆಕಡೆ ಇತ್ತು. ಹಾಳಾದ್ದು ಈಗ ಎಲ್ಲೂ ಕಾಣುತ್ತಿಲ್ಲ" ಎಂದ ಒಬ್ಬ.

ಆದರೂ ಅವರು ನಮ್ಮೊಡನೆ ಹತ್ತಿದರು. ಸುಮಾರು ಒಂದು ಮೈಲಿ ದೂರ ಕ್ರಮಿಸಿದಾಗ ವ್ಲಾದಿಮಿರ್ ಕಿವಿಗೊಟ್ಟು ಆಲಿಸಿ ವಾಹನವನ್ನು ನಿಲ್ಲಿಸಲು ಹೇಳಿದ.

"ಗುಂಡಿನ ಸದ್ದು, ಕೇಳುತ್ತಿಲ್ಲವೇ?" ಎಂದ. ಸ್ವಲ್ಪಕಾಲ ಸ್ಮಶಾನಮೌನ. ನಂತರ ಮುಂದುಗಡೆ ಎಡಭಾಗದಲ್ಲಿ ಮೂರು ಬಾರಿ ಗುಂಡು ಹಾರಿದ ಸದ್ದು. ನಾವು ಪ್ರಯಾಣ ಮಾಡುತ್ತಿದ್ದ ಕಡೆ ರಸ್ತೆಯ ಪಕ್ಕದಲ್ಲಿ ಕಾಡು ಇತ್ತು. ನಮಗೂ ಉದ್ವೇಗ. ನಿಧಾನವಾಗಿ ಚಲಿಸುತ್ತಾ, ಪಿಸುಗುಟ್ಟಿನಲ್ಲಿ ಮಾತನಾಡುತ್ತಾ ಗುಂಡಿನ ಸದ್ದು ಕೇಳಿದ ಸ್ಥಳಕ್ಕೆ ಬಂದೆವು.

ಲಾರಿಯಿಂದ ಕೆಳಗಿಳಿದು ನಾವು ಒಬ್ಬರಿಂದ ಒಬ್ಬರು ದೂರದಲ್ಲಿ ನಡೆಯುತ್ತಾ ಬಂದೂಕು ಹಿಡಿದು ಸದ್ದಿಲ್ಲದೆ ಕಾಡಿನಲ್ಲಿ ನಡೆದೆವು. ಇಬ್ಬರು ಫಿರಂಗಿಯನ್ನು ಬಿಚ್ಚಿಕೊಂಡು ಅದನ್ನು ನಮ್ಮ ಹಿಂದೆಯೇ ತಂದರು.

ಕಾಡು ನಿಶ್ಶಬ್ದವಾಗಿತ್ತು. ಎಲೆಗಳೇ ಇರಲಿಲ್ಲ. ಮರಗಳೋ ವಿವರ್ಣವಾಗಿದ್ದವು. ಶರದೃತುವಿನ ಹೊಳಪಿಲ್ಲದ ಸೂರ್ಯ. ಏನೂ ಅಲ್ಲಾಡುತ್ತಿಲ್ಲ. ಇದೇನು ಯಾರಾದರೂ ಆಕ್ರಮಣಕ್ಕೆ ಕಾದಿದ್ದಾರೇನು?

ಮುಂದೆ ಹೋದಂತೆ ಮರಗಳ ದಟ್ಟಣೆ ಕಡಿಮೆಯಾಯಿತು. ಅಲ್ಲಿ ನೋಡಿದರೆ ಮೂವರು ಸೈನಿಕರು ಏನು ನಡೆಯುತ್ತಿದೆ ಎಂಬ ಪರಿವೆಯೇ ಇಲ್ಲದೆ ಬೆಂಕಿ ಕಾಯಿಸುತ್ತಾ ಕೂತಿದ್ದಾರೆ !

ವ್ಲಾದಿಮಿರ್ ಮುಂದೆ ಹೋಗಿ ಅವರನ್ನು ವಂದಿಸುತ್ತಾ "ಏನಾಯಿತು ಇಲ್ಲಿ ಕಾಮ್ರೇಡ್ಸ್" ಎಂದು ಕೇಳಿದ. ಅವನ ಹಿಂದೆ ಇಪ್ಪತ್ತು ಜನ ಬಂದೂಕು ಹಿಡಿದ ಸೈನಿಕರು, ಫಿರಂಗಿ, ಬಾಂಬುಗಳ ರಾಶಿ! ಸೈನಿಕರು ದಡದಡನೆ ಎದ್ದು ನಿಂತರು.

ಒಬ್ಬ ಸೈನಿಕ ಸ್ವಲ್ಪ ನೆಮ್ಮದಿಯಿಂದ ಹೇಳಿದ, "ಏನಿಲ್ಲಾ ಕಾಮ್ರೇಡ್, ಒಂದೆರಡು ಮೊಲ ಹೊಡೀತಿದ್ವಿ ಅಷ್ಟೇ!"

ಈ ವಿನೋದದ ಘಟನೆಯ ನಂತರ ನಾವು ಮುಂದೆ ಸಾಗಿದೆವು.

* * *

ನಮ್ಮ ಟ್ರಕ್ ಶುಭ್ರವಾದ ಹಗಲಿನಲ್ಲಿ ವೇಗವಾಗಿ ಹೋಯಿತು. ಕವಲುದಾರಿಯ ಬಳಿ ಸೈನಿಕರು ನಮ್ಮನ್ನು ನಿಲ್ಲಿಸಿ "ಪಾಸ್ ತೋರಿಸಿ ಕಾಮ್ರೇಡ್ಸ್" ಎಂದರು. ನಮ್ಮವರು "ನಾವು ರೆಡ್‌ಗಾರ್ಡ್‌ಗಳು, ನಮಗೇಕೆ ಪಾಸ್" ಎಂದು ಕೂಗಾಡಿದರು.

ಆದರೆ ನಮ್ಮನ್ನು ನಿಲ್ಲಿಸಿದ ಸೈನಿಕ ಅದನ್ನು ಒಪ್ಪಲಿಲ್ಲ, "ಇದು ಸರಿಯಲ್ಲ ಕಾಮ್ರೇಡ್ಸ್, ನಮ್ಮಲ್ಲಿ ಕ್ರಾಂತಿಕಾರಿ ಶಿಸ್ತು ಇರಬೇಕಾಗುತ್ತದೆ. ಯಾರಾದರೂ ಪ್ರತಿಕ್ರಾಂತಿಕಾರಿಗಳು ಹೀಗೆ ಟ್ರಕ್‌ನಲ್ಲಿ ಬಂದು ಪಾಸ್‌ನ ಅವಶ್ಯಕತೆ ಇಲ್ಲ ಎಂದರೆ ಏನು ಮಾಡುವುದು?" ಇದರ ಬಗ್ಗೆ ಒಂದಷ್ಟು ವಾಗ್ವಾದವಾಯಿತು. ಕಡೆಗೆ ನಮ್ಮವರು ತಮ್ಮ ಕೊಳೆಯಾದ ಅನುಮತಿ ಪತ್ರಗಳನ್ನು ತೋರಿಸಿದರು. ಆದರೆ ನನ್ನ ಅನುಮತಿ ಪತ್ರ ಬೇರೆ ರೀತಿಯದ್ದಾಗಿದ್ದರಿಂದ ನಾನು ರಕ್ಷಕ ಭಟರ ಜೊತೆಯಲ್ಲಿ ಹೋಗಬೇಕಾಗುತ್ತದೆ ಎಂದರು. ನಮ್ಮವರು ಒಪ್ಪಲಿಲ್ಲ. ಸೆಂಟ್ರಿಗಳು "ನೋಡಿ, ಇವರು ನಿಜವಾದ ಕಾಮ್ರೇಡ್ ಇರಬಹುದು. ಆದರೆ ಕ್ರಾಂತಿಕಾರಿ ಶಿಸ್ತು ಎಂದರೆ ನಾವು ಆಜ್ಞೆಗಳನ್ನು ಪಾಲಿಸಬೇಕಾಗುತ್ತದೆ" ಎಂದರು. ನನ್ನಿಂದ ಒಂದು ರಂಪವಾಗುವುದು ಇಷ್ಟವಿಲ್ಲದೆ ನಾನು ಅವರೊಂದಿಗೆ ಇಳಿದುಹೋದೆ.

ಟ್ರಕ್ ಹೋಗುವುದನ್ನೇ ನಾನು ನೋಡುತ್ತಾ ನಿಂತೆ. ಸೈನಿಕರು ತಮ್ಮ ತಮ್ಮಲ್ಲೇ ಏನೋ ಗುಸುಗುಸು ಮಾತಾಡಿಕೊಂಡರು. ನಂತರ ನನ್ನನ್ನು ಕರೆದುಕೊಂಡು ಹೋಗಿ ಒಂದು ಗೋಡೆಯ ಮುಂದೆ ನಿಲ್ಲಿಸಿದರು. ಆಗ ನನಗೆ ಮಿಂಚಿನಂತೆ ಹೊಳೆಯಿತು, ಇವರು ನನ್ನನ್ನು ಗುಂಡಿಟ್ಟು ಕೊಲ್ಲಲಿದ್ದಾರೆ!

ಯಾವ ದಿಕ್ಕಿನಲ್ಲೂ ಯಾರೂ ಸಹಾಯಕ್ಕೆ ಜನ ಕಾಣುತ್ತಿಲ್ಲ. ಎಲ್ಲೋ ದೂರದಲ್ಲಿ ಚಿಮಣಿಯಿಂದ ಹೊಗೆ ಹೊರಡುತ್ತಿರುವುದು ಬಿಟ್ಟರೆ ಜೀವದ ಚಿಹ್ನೆಯೂ ಇಲ್ಲ. ಸೈನಿಕರಿಬ್ಬರೂ ರಸ್ತೆಯತ್ತ ಹೊರಟಿದ್ದರು. ಪ್ರಾಯಶಃ ಅಲ್ಲಿಂದ ನನಗೆ ಗುರಿ ಇಡುತ್ತಾರೆ!

ನಾನು ಅಸಹಾಯಕತೆಯಿಂದ, ಉದ್ವೇಗದಿಂದ ಅವರತ್ತ ಓಡಿ ಮತ್ತೆ ಪಾಸ್

ತೋರಿಸಿದೆ, "ಆದರೆ ಕಾಮ್ರೇಡ್ಸ್ ಇಲ್ಲಿ ನೋಡಿ. ಇದರ ಮೇಲೆ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಮೊಹರು (ಸೀಲ್) ಇದೆ."

ಅವರಿಬ್ಬರೂ ಪೆದ್ದುಪೆದ್ದಾಗಿ ಪಾಸ್‌ಅನ್ನು ನೋಡಿ ಮತ್ತೆ ಪರಸ್ಪರ ಮುಖ ನೋಡಿ ಕೊಂಡರು. "ಇದು ಉಳಿದವರದಕ್ಕಿಂತ ಬೇರೆ ತರಹ ಇದೆಯಲ್ಲ! ನಮಗೆ ಓದಲಿಕ್ಕೆ ಬರೋದಿಲ್ಲ" ಎಂದ ಒಬ್ಬ. ನಾನು ಅವನ ತೋಳು ಹಿಡಿದು ಎಳೆಯುತ್ತಾ ಹೇಳಿದೆ, "ನೋಡಿ, ಅಲ್ಲೊಂದು ಮನೆ ಕಾಣ್ತಿದೆ. ಅಲ್ಲಿ ಯಾರಿಗಾದ್ರೂ ಓದಕ್ಕೆ ಬಂದೇ ಬರುತ್ತೆ. ಹೋಗೋಣ ನಡೀರಿ." ಅದರಲ್ಲೊಬ್ಬ ಹಿಂಜರಿಯುತ್ತಾ "ಇಲ್ಲ, ಇಲ್ಲ" ಎಂದ. ಇನ್ನೊಬ್ಬ ಮಾತ್ರ "ಯಾಕಾಗಬಾರದು, ಸುಮ್ಮನೆ ಕೊಲ್ಲೋದು ಮಹಾಪಾತಕ" ಎಂದ. ಸದ್ಯ!

ನಾವು ಆ ಮನೆಯನ್ನು ತಲುಪಿದೆವು. ಒಬ್ಬ ಕುಳ್ಳಾಗಿದ್ದ ದಪ್ಪ ಹೆಂಗಸು ಮೊದಲಿಗೆ ನಮ್ಮನ್ನು ನೋಡಿ ಬೆದರಿದಳು. "ನನಗೇನೂ ಗೊತ್ತಿಲ್ಲ" ಎಂದು ಕೂಗಲಾರಂಭಿಸಿದಳು. ಸೈನಿಕರು "ಇದನ್ನು ಓದಿ ಹೇಳಿ" ಎಂದು ಕಾಗದವನ್ನು ತೋರಿಸಿದರು. ಹಿಂಜರಿಯುತ್ತಾ ಕಾಗದ ತೆಗೆದುಕೊಂಡ ಆಕೆ ಜೋರಾಗಿ ಓದಿದಳು:

"ಈ ಪಾಸ್ ಅನ್ನು ಹೊಂದಿರುವವರು ಜಾನ್ ರೀಡ್, ಅಮೆರಿಕಾದ ಸೋಷಲ್ ಡೆಮಾಕ್ರಸಿಯ ಸದಸ್ಯರು, ಅಂತರರಾಷ್ಟ್ರೀಯವಾದಿ." ನಾನು ಪಾರಾಗಿದ್ದೆ!

ಆದರೆ ಅಲ್ಲಿಂದ ಹೊರಟಮೇಲೂ ಸೈನಿಕರು ತಮ್ಮಲ್ಲೇ ಮಾತಾಡಿಕೊಂಡು ನನ್ನನ್ನು ರೆಜಿಮೆಂಟಲ್ ಸಮಿತಿಯ ಕಛೇರಿಗೆ ಕರೆದುಕೊಂಡು ಹೊರಟರು. ಮುಸ್ಸಂಜೆಯಲ್ಲಿ ನಾವು ಕೆಸರಿನಲ್ಲಿ ನಡೆಯುತ್ತಿದ್ದರೆ ದಾರಿಯುದ್ದಕ್ಕೂ ಸೈನಿಕರು ಸಿಗುತ್ತಿದ್ದರು. ನನ್ನನ್ನು ದುರುಗುಟ್ಟಿ ನೋಡುತ್ತಾ ಇವನನ್ನು ಕೊಲ್ಲಬೇಕೇ ಇಲ್ಲವೇ ಎಂದೇ ಉದ್ರಿಕ್ತರಾಗಿ ಚರ್ಚೆ ಮಾಡುತ್ತಿದ್ದರು.

ಕತ್ತಲಾದಾಗ ನಾವು ಎರಡನೇ ತ್ಸಾರ್‌ಸ್ಕೊಯೆ ಸೆಲೊ ರೈಫಲ್ಸ್ ದಳದ ಕಛೇರಿಯನ್ನು ತಲುಪಿದೆವು. ದ್ವಾರದಲ್ಲಿದ್ದ ಸೈನಿಕರು ಉತ್ಸುಕತೆಯಿಂದ ಕೇಳಿದರು. "ಗೂಢಚಾರನಾ? ಅಥವಾ ಪ್ರಚೋದಕ ಏಜೆಂಟಾ?" ನಾವು ಮೆಟ್ಟಿಲು ಹತ್ತಿ ದೊಡ್ಡ ಸಭಾಂಗಣಕ್ಕೆ ಹೋದೆವು. ಅಲ್ಲಿ ಬೇಕಾದಷ್ಟು ಮಂಚಗಳು. ಸುಮಾರು ಸಾವಿರ ಜನ ಸೈನಿಕರಿರಬೇಕು. ಇಸ್ಪೀಟಾಡುತ್ತಿದ್ದರು. ಗೋಡೆಯಲ್ಲಿ ಕೆರೆನ್‌ಸ್ಕಿಯ ಫಿರಂಗಿ ಮಾಡಿದ ದೊಡ್ಡ ತೂತು ಇತ್ತು.

ನಾನು ಬಾಗಿಲಲ್ಲಿ ನಿಂತೊಡನೆ ಇದ್ದಕ್ಕಿದ್ದಂತೆ ಮೌನ ಆವರಿಸಿತು. ಅವರೆಲ್ಲಾ ದ್ವೇಷ ತುಂಬಿದ ಮುಖಗಳಿಂದ ನನ್ನತ್ತ ದಿಟ್ಟಿಸಿ ನೋಡಿದರು. ನನ್ನ ಗಾರ್ಡ್‌ಗಳು "ಕಾಮ್ರೇಡ್ಸ್, ದಾರಿ ಬಿಡಿ, ಸಮಿತಿಯ ಕಛೇರಿಗೆ ಹೋಗಬೇಕು" ಎಂದು ಕೂಗಿದರು. ಅವರೆಲ್ಲಾ ಶಪಿಸುತ್ತಾ ನನ್ನ ಸುತ್ತ ನಿಂತರು. ಅವರಲ್ಲೊಬ್ಬ ತೆಳ್ಳಗಿದ್ದ ಯುವಕ, ತೋಳಿಗೆ ಕೆಂಪು ಪಟ್ಟಿ ಕಟ್ಟಿಕೊಂಡಿದ್ದವನು ಮುಂದೆ ಬಂದು "ಯಾರಿವನು" ಎಂದು ಒರಟಾಗಿ ಕೇಳಿದ. ನನ್ನ ಕಾವಲುಭಟರು ವಿವರಿಸಿದರು. "ಅವನ ಪತ್ರ ಕೊಡಿ" ಎಂದು ತೆಗೆದುಕೊಂಡವನು ಅದನ್ನು ಎಚ್ಚರಿಕೆಯಿಂದ ಓದಿದ. ನಂತರ ಮುಗುಳ್ನಕ್ಕು ನನ್ನ ಪಾಸ್ ಅನ್ನು ಹಿಂದಿರುಗಿಸಿ ಅವರಿಗೆಲ್ಲಾ ವಿವರಿಸಿದ. "ಈತ ಅಮೆರಿಕನ್ ಕಾಮ್ರೇಡ್." ನನ್ನತ್ತ ತಿರುಗಿ ಹೇಳಿದ : "ನಾನು ಸಮಿತಿಯ ಅಧ್ಯಕ್ಷ. ಬನ್ನಿ, ನಮ್ಮ ರೆಜಿಮೆಂಟ್‌ಗೆ ಸುಸ್ವಾಗತ." ಈಗ ಶುಭಾಶಯದ, ಕೈಕುಲುಕುವ ಕೋಲಾಹಲ ಶುರುವಾಯಿತು!

"ನೀವಿನ್ನೂ ಊಟ ಮಾಡಿಲ್ಲವೆನಿಸುತ್ತೆ. ನಡೆಯಿರಿ ಅಧಿಕಾರಿಗಳ ಮೆಸ್‌ಗೆ ಹೋಗೋಣ. ಅಲ್ಲಿ ನಿಮ್ಮ ಭಾಷೆ ಮಾತನಾಡುವವರು ಸಿಗುತ್ತಾರೆ."

ಅಲ್ಲಿ ನನ್ನನ್ನು ಶ್ರೀಮಂತ ಕುಟುಂಬದವನಂತೆ ಕಾಣುತ್ತಿದ್ದ ಲೆಫ್ಟಿನೆಂಟ್ ಒಬ್ಬನಿಗೆ ಪರಿಚಯಿಸಿದರು. ಆತ ಚೆನ್ನಾಗಿ ಫ್ರೆಂಚ್ ಮಾತನಾಡುತ್ತಿದ್ದ. ಅವನು ಕರೆದುಕೊಂಡು ಹೋದ. ಮೆಟ್ಟಿಲುಗಳು, ಬಿಲಿಯರ್ಡ್ಸ್ ಕೊಠಡಿ, ಗ್ರಂಥಾಲಯ ಎಲ್ಲವನ್ನೂ ಹಾದು ನಾವು ಊಟದ ಕೋಣೆಗೆ ಹೋದೆವು. ಎಲ್ಲವೂ ಅದ್ದೂರಿಯಾಗಿದ್ದವು. ಅಲ್ಲಿ ಇಪ್ಪತ್ತು ಜನ ಅಧಿಕಾರಿಗಳು ಊಟದ ಮೇಜಿನ ಸುತ್ತ ಕೂತಿದ್ದರು. ಎಲ್ಲರೂ ಹಳೇ ಸಾಮ್ರಾಜ್ಯದ ಬೆಲೆಬಾಳುವ ಸಮವಸ್ತ್ರಗಳನ್ನು ಹಾಕಿಕೊಂಡು, ಸೊಂಟಕ್ಕೆ ಚಿನ್ನದ ಕತ್ತಿ ಸಿಕ್ಕಿಸಿ ಕೊಂಡಿದ್ದವರೇ. ನನಗೆ ಆಶ್ಚರ್ಯವಾಯಿತು. ನನ್ನನ್ನು ನಾಯಕನಾಗಿದ್ದ ವಯಸ್ಸಾಗಿದ್ದ ಕರ್ನಲ್‌ನ ಪಕ್ಕದಲ್ಲಿ ಕೂರಿಸಿದರು. ಆಗ ನನಗನ್ನಿಸಿದ್ದು "ಅರೆ, ಕ್ರಾಂತಿ ಎಲ್ಲಿದೆ?"

"ನೀವೆಲ್ಲಾ ಬೋಲ್ಶೆವಿಕರಲ್ಲವೇ?" ನಾನು ಕೇಳಿದೆ.

ಲೆಫ್ಟಿನೆಂಟ್ ನಗುತ್ತಾ ಹೇಳಿದ, "ಇಲ್ಲ ನಾನು ಬಲಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿ. ಅಧಿಕಾರಿಗಳಲ್ಲಿ ಬೋಲ್ಶೆವಿಕ್ ಒಬ್ಬನೇ ಇರುವುದು. ಅವನು ಇವತ್ತು ರಾಜಧಾನಿಗೆ ಹೋಗಿದ್ದಾನೆ. ಇನ್ನು ಕರ್ನಲ್, ಆತ ಮೆನ್ಶೆವಿಕ್. ಕ್ಯಾಪ್ಟನ್, ಕ್ಯಾಡೆಟ್ ಪಕ್ಷದವನು. ಆದರೆ ಏನು ಗೊತ್ತೆ, ನಮಗೆಲ್ಲಾ ಜನತಂತ್ರದಲ್ಲಿ ನಂಬಿಕೆ ಇದೆ. ಎಲ್ಲಾ ಸೈನಿಕರಿಗೂ ಬೋಲ್ಶೆವಿಕರು ಬೇಕು. ಸರಿ, ನಾವೂ ಅವರೊಂದಿಗೇ ಹೋಗುತ್ತೇವೆ."

ಊಟವಾದ ನಂತರ ಮೇಜಿನ ಮೇಲೆ ಭೂಪಟವನ್ನು ಹರಡಿದರು. ತಮ್ಮ ಸೈನ್ಯಗಳು ಎಲ್ಲಿವೆ, ಎಲ್ಲಿರಬೇಕು ಎಂದು ಕರ್ನಲ್ ಎಲ್ಲರೊಂದಿಗೆ ಚರ್ಚಿಸಿದ. ಅಷ್ಟುಹೊತ್ತಿಗೆ ಅಲ್ಲಿಗೆ ನನ್ನ ಪಾಸ್ ಓದಿ ನನ್ನನ್ನು ಪಾರುಮಾಡಿದ್ದ ಬೋಲ್ಶೆವಿಕ್, ರೆಜಿಮೆಂಟ್‌ನ ಅಧ್ಯಕ್ಷನು ಇನ್ನೊಬ್ಬ ಸೈನಿಕನೊಂದಿಗೆ ಬಂದ, ಭೂಪಟ ನೋಡುತ್ತ ಚರ್ಚೆ ಮುಂದುವರೆಯಿತು.

ಕರ್ನಲ್ ತೃಪ್ತಿಯಿಂದ ಹೇಳಿದ : "ಒಳ್ಳೆಯದು. ಕೊಸ್ಸಾಕರು ಹತ್ತು ಕಿಲೋಮೀಟರ್ ಹಿಂದೆ ಬಿದ್ದಿದ್ದಾರೆ. ನಾವಿನ್ನು ಮುಂದುವರೆದು ಆಕ್ರಮಿಸೋ ಅಗತ್ಯ ಕಾಣ್ತಾ ಇಲ್ಲ. ಆದ್ದರಿಂದ ಮಹನೀಯರೇ, ಇವತ್ತು ನೀವೆಲ್ಲಾ ಇದೇ ಜಾಗದಲ್ಲಿದ್ದು, ಇದನ್ನು ಭದ್ರಪಡಿಸಿಕೊಂಡು..."

ಅಷ್ಟರಲ್ಲಿ ರೆಜಿಮೆಂಟ್ ಅಧ್ಯಕ್ಷ ಮಧ್ಯಪ್ರವೇಶಿಸಿ ನುಡಿದ, "ಕ್ಷಮಿಸಿ, ನಿಮಗೆ ಬೇಸರವಿಲ್ಲದಿದ್ದರೆ ಒಂದು ಮಾತು. ನಮಗಿರುವ ಆಜ್ಞೆ ಎಂದರೆ ಪೂರ್ತಿ ವೇಗದಿಂದ ಸಾಗಿ, ಕೊಸ್ಸಾಕರನ್ನು ಗ್ಯಾಟ್‌ಚಿನ್ ಪಟ್ಟಣದ ಉತ್ತರದಲ್ಲಿ ಬೆಳಿಗ್ಗೆಯೇ ಎದುರಿಸಬೇಕು. ಶತ್ರುಗಳ ಸರ್ವನಾಶವಾಗುವಂಥ ವಿಜಯ ಬೇಕಾಗಿದೆ. ಅದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ, ದಯಮಾಡಿ."

ಒಂದು ಕ್ಷಣ ಮೌನ. ಆಮೇಲೆ ಕರ್ನಲ್ ಇತರ ಅಧಿಕಾರಿಗಳತ್ತ ತಿರುಗಿ ಮಾತನಾಡಿದ. ಅವನ ದನಿ ಬದಲಾಗಿತ್ತು. ಅವನು ಭೂಪಟದ ಮೇಲೆ ಗೆರೆಗಳನ್ನು ಎಳೆಯುತ್ತಾ ಹೊಸ ಯೋಜನೆಗೆ ಸೂಕ್ತ ಸೂಚನೆಗಳನ್ನು ನೀಡಿದ. ಕೆಲವೇ ನಿಮಿಷಗಳಲ್ಲಿ ಸಾರ್ಜೆಂಟ್ ಹೋಗಿ ಅವುಗಳನ್ನು ಟೈಪ್ ಮಾಡಿಕೊಂಡು ಪ್ರತಿಯೊಂದಿಗೆ ಹಿಂದಿರುಗಿದ. ರೆಜಿಮೆಂಟಿನ ಬೋಲ್ಶೆವಿಕ್ ಅಧ್ಯಕ್ಷ ಭೂಪಟವನ್ನೂ, ಆಜ್ಞೆಯ ಪ್ರತಿಯನ್ನೂ ಸೂಕ್ಷ್ಮವಾಗಿ

ನೋಡಿಕೊಂಡ. ನಂತರ ಅದಕ್ಕೆ ಸಹಿ ಹಾಕಿ, ಮುದ್ರೆ ಒತ್ತಿ ಕರ್ನಲ್‌ಗೆ ನೀಡಿದ. ಎಂದರೆ ಅಂತಿಮವಾಗಿ ನಡೆಯುತ್ತಿದ್ದದ್ದು ಕ್ರಾಂತಿಯ ಪರವಾಗಿದ್ದ ಸೈನಿಕರ ಮಾತೇ!

'ಕ್ರಾಂತಿ ಎಲ್ಲಿದೆ, ಏನಾಯ್ತು' ಎಂದುಕೊಂಡ ನನ್ನ ಪ್ರಶ್ನೆಗೆ ಈಗ ಉತ್ತರ ಸಿಕ್ಕಿತ್ತು.

ಕ್ರಾಂತಿ ಇಲ್ಲಿತ್ತು, ಹೀಗಿತ್ತು.

* * *

ನಾನು ತ್ಸಾರ್‌ಸ್ಕೊಯೆ ಸೆಲೋನ ಸೋವಿಯತ್ ಅರಮನೆಗೆ ಹಿಂದಿರುಗಿದೆ. ಈಗಲೂ ಅದೇ ಜನಜಂಗುಳಿ. ವಿಪರೀತ ಕಾರ್ಮಿಕರು, ಸೈನಿಕರು ಹೋಗಿಬರುತ್ತಿದ್ದರು. ಬಾಗಿಲ ಬಳಿ ಟ್ರಕ್ಕುಗಳು, ಆರ್ಮರ್ಡ್ ಕಾರ್‌ಗಳು, ಫಿರಂಗಿಗಳು. ಅಭೂತಪೂರ್ವ ವಿಜಯದ ನಂತರದ ಗಲಾಟೆ, ನಗು. ಅಲ್ಲೊಬ್ಬ ಕೊಸ್ಸಾಕರಿಗೆ ನೆರವಾದ ಪಾದ್ರಿಯನ್ನು ಹಿಡಿದುಕೊಂಡು ಹೋಗುತ್ತಿದ್ದರು. ಅವನಿಗೆ ನಂತರ ಮರಣದಂಡನೆಯಾಯಿತೆಂದು ಕೇಳಿದೆ. ದಳಪತಿ ಡೈಬೆಂಕೊ ಹೊರಗೆ ಬಂದವನು ಬಿರುಸಾಗಿ ಆಜ್ಞೆಗಳನ್ನು ನೀಡಿ ಹೊರಟ, ವಾಹನದ ಹಿಂದಿನ ಸೀಟಿನಲ್ಲಿ ಎಂದಿನಂತೆ ರಿವಾಲ್ವರ್ ಹಿಡಿದು ರಣಾಂಗಣದತ್ತ ಕೆರೆನ್‌ಸ್ಕಿಯನ್ನು ಸೋಲಿಸಲು. ರಾತ್ರಿಯ ಹೊತ್ತಿಗೆ ಗ್ಯಾಟ್‌ಚಿನ್‌ದ ಹೊರವಲಯವನ್ನು ತಲುಪಿ ಅಲ್ಲಿಂದ ನಡೆದುಕೊಂಡೇ ಹೋದನಂತೆ. ಆತ ಕೊಸ್ಸಾಕರೊಂದಿಗೆ ಏನು ಮಾತಾಡಿದ ಎಂಬ ವಿವರಗಳು ಲಭ್ಯವಿಲ್ಲ. ಆದರಂತೂ ಬೆಳಿಗ್ಗೆ ಜನರಲ್ ಕ್ರಾಸ್‌ನೊವ್ ಸಾವಿರಾರು ಸೈನಿಕರೊಂದಿಗೆ ಶರಣಾದ. ಕೆರೆನ್‌ಸ್ಕಿಗೂ ಅದೇ ಸಲಹೆಯನ್ನು ಕೊಟ್ಟ. ಕೆರೆನ್‌ಸ್ಕಿಯ ಗತಿ? ನಾನು ಈ ಕೆಳಗೆ ಜನರಲ್ ಕ್ರಾಸ್‌ನೊವ್‌ನ ಹೇಳಿಕೆಯನ್ನು ನೀಡುತ್ತೇನೆ.

*ಗ್ಯಾಟ್‌ಚಿನ ಪಟ್ಟಣ (ನವೆಂಬರ್ 14)*

*ಮುಂಜಾನೆ ಮೂರು ಘಂಟೆಗೆ ಮಹಾದಂಡನಾಯಕ ಕೆರೆನ್‌ಸ್ಕಿ ನನ್ನನ್ನು ಕರೆಸಿದ್ದರು. ಬಹಳ ಆತಂಕದಲ್ಲಿದ್ದರು.*

*"ಜನರಲ್, ನೀವೆಲ್ಲಾ ದ್ರೋಹ ಬಗೆದಿದ್ದೀರಿ. ನಿಮ್ಮ ಕೊಸ್ಸಾಕರು ನನ್ನನ್ನು ಬಂಧಿಸಿ ಬೋಲ್ಶೆವಿಕ್ ನಾವಿಕರಿಗೆ ಒಪ್ಪಿಸುತ್ತಾರಂತೆ" ಎಂದರು. ನಾನು "ಅಂಥ ಮಾತು ಕೇಳಿ ಬರುತ್ತಿದೆ. ನಿಮ್ಮ ಬಗ್ಗೆ ಎಲ್ಲೂ ಸಹಾನುಭೂತಿ ಇಲ್ಲ" ಎಂದೆ.*

*"ಅಧಿಕಾರಿಗಳ ಅಭಿಪ್ರಾಯ ಏನು?"*

*"ಅಧಿಕಾರಿಗಳಲ್ಲೇ ನಿಮ್ಮ ಬಗ್ಗೆ ಹೆಚ್ಚಿನ ಅತೃಪ್ತಿ ಇದೆ."*

*"ಸರಿ, ನಾನೇನು ಮಾಡಲಿ, ಆತ್ಮಹತ್ಯೆ ಮಾಡಿಕೊಳ್ಳಲೇ?"*

*"ನೀವು ಘನತೆವೆತ್ತ ವ್ಯಕ್ತಿಯಾಗಿದ್ದರೆ ಪೆತ್ರೋಗ್ರಾಡ್‌ಗೆ ಬಿಳಿಯ ಬಾವುಟ ಹಿಡಿದು ಹೋಗಿ ಶರಣಾಗಿ. ಸರ್ಕಾರದೊಂದಿಗೆ ಮಾತುಕತೆ ನಡೆಸಿ."*

*"ಆಯಿತು ಜನರಲ್."*

*ಹಾಗೆಯೇ ಅವನೊಂದಿಗೆ, 'ಒಬ್ಬ ರಕ್ಷಕ ಭಟನನ್ನು ಕಳಿಸುತ್ತೇನೆ. ರಾತ್ರಿ ಹೋಗಬೇಡಿ. ಅದು ಕಳ್ಳತನದಲ್ಲಿ ಹೋದಂತಿರುತ್ತದೆ. ಹಗಲಲ್ಲಿ ದಿಟ್ಟವಾಗಿ ಹೋಗಿ' ಎಂದೆ. ಆಮೇಲೆ ನಾನು ಆತನ ಜೊತೆಗೆ ಹೋಗಲು ಸೈನಿಕರನ್ನು ನೇಮಿಸಿ ಬರುವಷ್ಟರಲ್ಲಿ ಆತ ತಪ್ಪಿಸಿಕೊಂಡಿದ್ದ.*

ಹೀಗೆ ಕೆರೆನ್‌ಸ್ಕಿ ಒಂಟಿಯಾಗಿ "ನಾವಿಕನ ಮಾರುವೇಷದಲ್ಲಿ" ಓಡಿಹೋಗಿದ್ದ. ಈ ಪಲಾಯನದಿಂದಾಗಿ ರಷ್ಯನ್ ಜನರಲ್ಲಿ ಇರಬಹುದಾಗಿದ್ದ ಅಲ್ಪಸ್ವಲ್ಪ ಗೌರವವನ್ನೂ ಅವನು ಕಳೆದುಕೊಂಡ.

ನಾನು ಇತ್ತ ಟ್ರಕ್ ಒಂದರಲ್ಲಿ, ರೆಡ್‌ಗಾರ್ಡ್‌ಗಳೊಂದಿಗೆ ಪೆತ್ರೋಗ್ರಾಡ್‌ಗೆ ವಾಪಸಾದೆ. ವಾಹನದಲ್ಲಿ ದೀಪವಿರಲಿಲ್ಲ. ದಾರಿಯುದ್ದಕ್ಕೂ ಯುದ್ಧಭೂಮಿಯಿಂದ ರಾಜಧಾನಿಗೆ ವಾಪಸ್ಸಾಗುತ್ತಿರುವ ಸೈನಿಕರು ಮತ್ತು ಅವರ ಬದಲು ರಣಾಂಗಣಕ್ಕೆ ರಾಜಧಾನಿಯಿಂದ ಹೋಗುತ್ತಿರುವವರು. ದೊಡ್ಡ ಟ್ರಕ್ಕುಗಳು, ಫಿರಂಗಿ ಗಾಡಿಗಳು. ಅವುಗಳಿಗೂ ದೀಪವಿಲ್ಲ. ನಮ್ಮ ವಾಹನ ಭಯಂಕರವಾಗಿ ಕುಕ್ಕುತ್ತಾ, ಜಾಲಾಡುತ್ತಾ ಎದುರಿನಿಂದ ಬರುವವರಿಗೆ ಇನ್ನೇನು ಢಿಕ್ಕಿ ಹೊಡೆಯುತ್ತದೇನೋ ಎಂಬಂತೆ ಧಾವಿಸುತ್ತಿತ್ತು. ದಾರಿಹೋಕರು ನಮ್ಮನ್ನು ಶಪಿಸುತ್ತಿದ್ದರು.

ಕ್ಷಿತಿಜದಲ್ಲಿ ರಾಜಧಾನಿಯ ದೀಪಗಳು ಮಿನುಗುತ್ತಿದ್ದವು. ಖಾಲಿ ಮೈದಾನದ ಮೇಲೆ ಮುತ್ತುರತ್ನಗಳನ್ನು ಸುರಿದ ಹಾಗಿತ್ತು. ರಾತ್ರಿಯಲ್ಲಿ ಬಲುಚೆನ್ನ.

ಗಾಡಿ ಓಡಿಸುತ್ತಿದ್ದ ವಯಸ್ಸಾದ ಕಾರ್ಮಿಕ ಕೈಯಿಂದ ಇಡೀ ರಾಜಧಾನಿಯತ್ತ ಕೈಬೀಸಿ ಹೇಳಿದ:

"ನನ್ನದು. ಎಲ್ಲವೂ ನನ್ನದು. ನನ್ನ ಪೆತ್ರೋಗ್ರಾಡ್!"

ಅವನ ಮುಖ ಆನಂದದಿಂದ ಬೆಳಗುತ್ತಿತ್ತು.

## ಅಧ್ಯಾಯ – 10

# ಮಾಸ್ಕೋ

ಮಿಲಿಟರಿ ಕ್ರಾಂತಿಕಾರಿ ಸಮಿತಿಯು ವಿಜಯದ ನಂತರ ವೇಗವಾಗಿ ಮುನ್ನುಗ್ಗುತ್ತಿತ್ತು.

*ನವೆಂಬರ್ 14*

*ಸೇನೆಯ ಎಲ್ಲಾ ಘಟಕಗಳಿಗೆ, ಎಲ್ಲಾ ಸೋವಿಯತ್‌ಗಳಿಗೆ,*

*ಕಾರ್ಮಿಕರು ಮತ್ತು ಸೈನಿಕರೊಂದಿಗೆ, ಈಗ ಕೊಸ್ಸಾಕರು ಮತ್ತು ಯಂಕರ್‌ಗಳೂ ಸೇರಿ ತೀರ್ಮಾನ ಮಾಡಿರುವುದೇಂದರೆ, ಈಗ ಕೆರೆನ್‌ಸ್ಕಿಯನ್ನು ಹಿಡಿದು ಒಂದು ನ್ಯಾಯಾಂಗದ ಟ್ರಿಬ್ಯೂನಲ್‌ನ ಎದುರು ವಿಚಾರಣೆಗೆ ಗುರಿಪಡಿಸಬೇಕು. ಆತನನ್ನು ಕಂಡಲ್ಲಿ ಬಂಧಿಸಿ ಕೆಳಕಂಡ ಸಂಘಟನೆಗಳ ಆಜ್ಞೆಗೆ ಅನುಸಾರವಾಗಿ ಪೆತ್ರೋಗ್ರಾಡ್‌ಗೆ ತಂದು ಟ್ರಿಬ್ಯೂನಲ್‌ಗೆ ಒಪ್ಪಿಸತಕ್ಕದ್ದು.*

*ಜನತೆಯ ಕಮಿಸಾರ್, ಡೈಬೆಂಕೊ*

*(ಆತನ ಸಹಿಯೊಂದಿಗೆ ಕೊಸ್ಸಾಕ್ ಹಾಗೂ ಯಂಕರ್ ಪ್ರತಿನಿಧಿಗಳ ಸಹಿ ಇತ್ತು)*

ಇನ್ನೊಂದು ಕಡೆ ವಿಮೋಚನಾ ಸಮಿತಿಯವರು, ಡ್ಯೂಮಾದವರು, ಸೋಷಲಿಸ್ಟ್ ರೆವಲ್ಯೂಶನರಿ ಪಕ್ಷದವರು. ಈಗಲೂ ಆತ, ಅಂದರೆ ಕೆರೆನ್‌ಸ್ಕಿ, ತಮ್ಮ ಸದಸ್ಯನೆಂದು ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಾ, ಆತನ ಉತ್ತರದಾಯಿತ್ವ ಇರುವುದು ಕೇವಲ ಸಂವಿಧಾನಾತ್ಮಕ ಶಾಸನಸಭೆಗೆ ಎಂದೇ ವಾದಿಸುತ್ತಿದ್ದರು.

ನವೆಂಬರ್ 16ರಂದು ಸಂಜೆ ನಾನು ಎರಡು ಸಾವಿರ ರೆಡ್‌ಗಾರ್ಡ್‌ಗಳ ಮೆರವಣಿಗೆಯನ್ನು ನೋಡಿದೆ. ಅವರ ಮುಂದೆ ಒಂದು ಮಿಲಿಟರಿ ಬ್ಯಾಂಡ್ ಮೇಳವು ಫ್ರೆಂಚ್ ಮಹಾಕ್ರಾಂತಿಯ ಪ್ರಸಿದ್ಧ ಗೀತೆಯಾದ 'ಮಾರ್ಸೆಲೇಸ್' ಅನ್ನು ನುಡಿಸುತ್ತ ಬಂತು. ಆ ಕಪ್ಪಾಗಿ ಕಾಣುತ್ತಿದ್ದ ಕಾರ್ಮಿಕರು ರಕ್ತಗೆಂಪಿನ ಧ್ವಜಗಳನ್ನು ಹಿಡಿದು ಬರುತ್ತಿದ್ದರು. 'ಕೆಂಪು ಪೆತ್ರೋಗ್ರಾಡ್'ಅನ್ನು ರಕ್ಷಿಸಿದ ತಮ್ಮ ಅಣ್ಣತಮ್ಮಂದಿರನ್ನು ಸ್ವಾಗತಿಸಲು ಅವರು ಆ ಹಾಡು ಹಾಡುವುದು ತುಂಬ ಔಚಿತ್ಯಪೂರ್ಣ ಎಂದು ನನಗನ್ನಿಸಿತು. ಬೂರ್ಶ್ವಾಗಳು ರಸ್ತೆ ಬದಿಯಲ್ಲಿ ನಿಂತು ಅವರನ್ನು ತಿರಸ್ಕಾರದಿಂದ, ಭಯದಿಂದ ನೋಡುತ್ತಿದ್ದರೆ ಆ ಗಂಡಸರು, ಹೆಂಗಸರು ಬಯೊನೆಟ್ ಬೀಸುತ್ತಾ ಕೆಸರಿನಲ್ಲಿ ನಡೆದುಹೋದರು.

ಅವರನ್ನು ಎಲ್ಲರೂ ವಿರೋಧಿಸಿದ್ದರು – ವರ್ತಕರು, ಷೇರು ಮಾರುಕಟ್ಟೆ ದಲ್ಲಾಳಿಗಳು, ಉದ್ಯಮಿಗಳು, ಜಮೀನುದಾರರು, ಸೇನಾಧಿಕಾರಿಗಳು, ರಾಜಕಾರಣಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ವಿವಿಧ ವೃತ್ತಿಪರ ಜನ, ಅಂಗಡಿ ಮಾಲಿಕರು, ಗುಮಾಸ್ತರು. ಉಳಿದ ಸಮಾಜವಾದಿ ಪಕ್ಷಗಳು ಸಹ ಬೋಲ್ಶೆವಿಕ್‌ರನ್ನು ಉಗ್ರವಾಗಿ ದ್ವೇಷಿಸಿದ್ದವು.

ಸೋವಿಯತ್‌ಗಳ ಕಡೆಗಿದ್ದವರು ಸಾಧಾರಣ ಕಾರ್ಮಿಕರು, ನಾವಿಕರು, ಆತ್ಮವಿಶ್ವಾಸ ಕಳೆದುಕೊಳ್ಳದಿದ್ದ, ಯುದ್ಧದಲ್ಲಿ ಹೈರಾಣಾಗದಿದ್ದ ಸೈನಿಕರು, ಭೂರಹಿತ ರೈತರು ಮತ್ತು ಕೆಲವೇ ಕೆಲವು ಬುದ್ಧಿಜೀವಿಗಳು.

ರಷ್ಯಾದ ಮೂಲೆಮೂಲೆಯಲ್ಲೂ ಬೀದಿಯುದ್ಧ ಸ್ಫೋಟವಾಗಿತ್ತು. ಅದು ಜೀವನ್ಮರಣ ಹೋರಾಟ. ಕೆರೆನ್‌ಸ್ಕಿಯ ಸೋಲಿಗೆ ಪ್ರತಿಧ್ವನಿ ಎಂಬಂತೆ ಎಲ್ಲ ಕಡೆಯಿಂದ ಕಾರ್ಮಿಕ ವರ್ಗದ ವಿಜಯೀ ಘರ್ಜನೆ ಕೇಳಿಬಂತು. ಕಝಾನ್, ಸರಾತೊವ್, ನೊವ್‌ಗೊರೋದ್ ಎಲ್ಲ ನಗರಗಳ ಬೀದಿಗಳಲ್ಲೂ ರಕ್ತ ಹರಿಯಿತು. ಮಾಸ್ಕೋದಲ್ಲಿ ಬೂರ್ಶ್ವಾಗಳ ಪಡೆಯ ಭದ್ರಕೋಟೆ ಕ್ರೆಮ್ಲಿನ್ ಭವನದ ಮೇಲೆ ಫಿರಂಗಿದಳದ ಗುಂಡಿನ ಮಳೆಗರೆದರು.

ಪೆತ್ರೋಗ್ರಾಡಿನ ಬೀದಿಗಳಲ್ಲಿ ಭಯತಲ್ಲಣಗಳಿಂದ 'ಕ್ರೆಮ್ಲಿನ್ ಮೇಲೆ ಗುಂಡು ಹಾರಿಸುತ್ತಿದ್ದಾರೆ' ಎಂಬ ಸುದ್ದಿ ಹರಡಿತು. 'ತಾಯಿ ಮಾಸ್ಕೊ'ದಿಂದ ಬಂದ ಜನ ಭಯಾನಕ ಕಥೆಗಳನ್ನು ಹರಡುತ್ತಿದ್ದರು. ಚರ್ಚುಗಳು ನಾಶವಾಗಿವೆ, ಕ್ರೆಮ್ಲಿನ್‌ನ ದ್ವಾರ ಅಲ್ಲಾಡಿ ಬೀಳುವಂತಿದೆ. ಡ್ಯೂಮಾ ಕಟ್ಟಡವನ್ನಂತೂ ಸಂಪೂರ್ಣವಾಗಿ ಸುಟ್ಟು ಹಾಕಲಾಗಿದೆ.

ಬೋಲ್ಶೆವಿಕರು ಮಾಡಿರುವರೆಂದು ಹೇಳಲಾಗಿದ್ದ ಯಾವುದೇ ಅಪಕೃತ್ಯಕ್ಕಿಂತ ಪವಿತ್ರ ರಷ್ಯಾದ ಹೃದಯಕ್ಕೇ ಪೆಟ್ಟು ಕೊಡುವಂಥ ಈ ಘಟನೆ ಅತ್ಯಂತ ಧರ್ಮವಿರೋಧಿ ಎಂದು ದೈವಭಕ್ತರಿಗೆ ಅನ್ನಿಸಿರಲಿಕ್ಕೆ ಸಾಕು. ಪವಿತ್ರ ಚರ್ಚುಗಳ ಮೇಲೆ ದಾಳಿ, ರಷ್ಯಾ ರಾಷ್ಟ್ರದ ಕೇಂದ್ರ ಸ್ಥಾನ ಕ್ರೆಮ್ಲಿನ್ ಮೇಲೆಯೇ ಆಕ್ರಮಣ!

ನವೆಂಬರ್ 15ರಂದು ಶಿಕ್ಷಣ ಇಲಾಖೆಯ ಕಮಿಸಾರ್ ಆಗಿದ್ದ ಲೂನಚಾರ್‌ಸ್ಕಿ, ಸಚಿವ ಸಂಪುಟದ ಸಭೆಯಲ್ಲಿ ಕಣ್ಣೀರು ಹಾಕುತ್ತ ಹೇಳಿದರಂತೆ, "ಕಲಾತ್ಮಕ ಸೌಂದರ್ಯ ಮತ್ತು ಪರಂಪರೆಯನ್ನು ಈ ರೀತಿ ನಾಶಮಾಡುವುದನ್ನು ನಾನು ಸಹಿಸಲಾರೆ." ಹೀಗೆ ಹೇಳಿ ಅವರು ಸರ್ಕಾರಕ್ಕೆ ರಾಜಿನಾಮೆ ನೀಡಿದರು. ಅದೇ ದಿನ ಸಂಜೆ ವೃತ್ತಪತ್ರಿಕೆಗಳಲ್ಲಿ ಅವರ ರಾಜಿನಾಮೆ ಪತ್ರ ಪ್ರಕಟವಾಗಿತ್ತು.

"ಮಾಸ್ಕೋದಿಂದ ಬರುತ್ತಿರುವವರಿಂದ ನಾನು ಕೇಳಿರುವ ಪ್ರಕಾರ ಕ್ಯಾಥೆಡ್ರಲ್‌ಗೆ ಬಾಂಬು ಹಾಕಲಾಗಿದೆ. ಅತ್ಯಂತ ಅಮೂಲ್ಯ ವಸ್ತುಗಳಿರುವ ಕ್ರೆಮ್ಲಿನ್ ಮೇಲೆ ಸಹ ಫಿರಂಗಿ ದಾಳಿ ನಡೆದಿದೆ. ಈ ಭಯಂಕರ ಹೋರಾಟ ಪಾಶವೀ ಆಯಾಮವನ್ನು ತಳೆಯುತ್ತಿದೆ. ಇನ್ನೇನು ಉಳಿದಿದೆ – ಇನ್ನೇನೂ ಆಗಲಿಕ್ಕೆ ಉಳಿದಿಲ್ಲ. ನನಗಿನ್ನು ಸಹಿಸುವುದು ಸಾಧ್ಯವಿಲ್ಲ. ನನಗೆ ಹುಚ್ಚು ಹಿಡಿಯುತ್ತದೆ ಅನಿಸುತ್ತಿದೆ."*

---

*ಇದು ಅವರ ಪತ್ರದ ಸಾರಾಂಶ

[ರೀಡ್ ನೀಡುವ ಟಿಪ್ಪಣಿಗೆ ಭಿನ್ನವಾಗಿ ಕ್ರೆಮ್ಲಿನ್‌ನ ಯಾವ ಅಮೂಲ್ಯ ವಸ್ತುವಿಗೂ ಧಕ್ಕೆ ಆಗಿರಲಿಲ್ಲ. ಮಾತ್ರವಲ್ಲ, ಕ್ರೆಮ್ಲಿನ್ ಮುಖ್ಯ ಕಟ್ಟಡಕ್ಕೆ ಯಾವ ಧಕ್ಕೆಯೂ ಆಗಿರಲಿಲ್ಲ. ವದಂತಿಗಳಲ್ಲಿ ಹೆಸರಿಸಿದ್ದ ಬಹುತೇಕ ಚರ್ಚುಗಳಿಗೆ ಆಗಿದ್ದ ಹಾನಿ ನಗಣ್ಯವಾದದ್ದು ಮತ್ತು ಸುಲಭದಲ್ಲಿ ದುರಸ್ತಿ ಮಾಡಲು ಸಾಧ್ಯವಾಗುವಂಥದ್ದು. ಒಂದೆರಡು ಚರ್ಚುಗಳಿಗೆ ಗಣನೀಯ ಹಾನಿ ಆಗಿದ್ದದ್ದು ಮಾತ್ರ ಸತ್ಯ. ಅಂದು ರೀಡ್‌ಗೆ ದೊರೆತ ವರದಿಗಳು ವಿಪರೀತ ಉತ್ಪ್ರೇಕ್ಷಿತ ಹಾಗೂ ದುರುದ್ದೇಶಪೂರಿತವೂ ಪ್ರಚೋದನಕಾರಿಯೂ ಆಗಿದ್ದವು. – ಅನು.]

ಅದೇ ದಿನ ಕ್ರೆಮ್ಲಿನ್‌ನಲ್ಲಿ ಆಶ್ರಯಪಡೆದುಕೊಂಡಿದ್ದ ಯಂಕರ್‌ಗಳು ಮತ್ತು ವೈಟ್‌ಗಾರ್ಡ್‌ಗಳು ಶರಣಾಗತರಾದರು. ಶರಣಾಗತಿಯ ಮುಖ್ಯ ಷರತ್ತುಗಳು ಹೀಗಿದ್ದವು: ಮೊದಲನೆಯದಾಗಿ, ಇನ್ನುಮುಂದೆ ಪ್ರತಿಕ್ರಾಂತಿಯ ಕೇಂದ್ರವಾಗಿದ್ದ ಸಾರ್ವಜನಿಕ ಭದ್ರತೆಯನ್ನು ವಿಸರ್ಜಿಸುವುದು. ವೈಟ್‌ಗಾರ್ಡ್‌ಗಳು ಎಲ್ಲಾ ಆಯುಧಗಳನ್ನೂ ಒಪ್ಪಿಸಿ ದಳವನ್ನು ವಿಸರ್ಜಿಸಬೇಕು. ಮಿಲಿಟರಿ ಶಾಲೆಗಳಲ್ಲಿ ತರಬೇತಿಗೆ ಅಗತ್ಯವಾದದ್ದಕ್ಕಿಂತ ಹೆಚ್ಚಿನ ಆಯುಧಗಳನ್ನು ಇರಿಸಿಕೊಳ್ಳುವಂತಿಲ್ಲ. ಇದಕ್ಕೆ ಪ್ರತಿಯಾಗಿ ಶರಣಾದ ಎಲ್ಲರಿಗೂ ಸ್ವಾತಂತ್ರ್ಯವನ್ನು, ವೈಯಕ್ತಿಕ ಭದ್ರತೆಯನ್ನು ಖಾತ್ರಿಪಡಿಸಲಾಗುವುದು. ಕೂಡಲೇ ಕದನ ವಿರಾಮ, ಎರಡೂ ಕಡೆಯ ಎಲ್ಲಾ ಬಂಧಿಗಳ ತತ್‌ಕ್ಷಣದ ಬಿಡುಗಡೆ.

ಎರಡು ದಿನಗಳಿಂದಲೂ ನಗರ ಬೋಲ್ಶೆವಿಕರ ಕೈಯಲ್ಲಿತ್ತು. ನೆಲಮಾಳಿಗೆಗಳಲ್ಲಿ ಅಡಗಿ ಕೂತಿದ್ದ ನಾಗರಿಕರು ಹೊರಬಂದು ಸತ್ತವರ ಶವಗಳಿಗೆ ಹುಡುಕಾಡುತ್ತಿದ್ದರು. ರಸ್ತೆಗಳಲ್ಲಿನ ಅಡೆತಡೆಗಳನ್ನು ತೆರೆಯಲಾಗಿತ್ತು. ಆದರೂ ಮಾಸ್ಕೋದ ಸರ್ವನಾಶದ ಕಥೆಗಳು ಹಬ್ಬುತ್ತಲೇ ಇದ್ದವು. ಈ ಭಯಂಕರ ವರದಿಗಳ ನಡುವೆಯೇ ನಾವು ಮಾಸ್ಕೊ ನಗರಕ್ಕೆ ಭೇಟಿ ನೀಡಲು ನಿರ್ಧರಿಸಿದೆವು.

ನೂರು ವರ್ಷಗಳಿಂದಲೂ ಪೆತ್ರೋಗ್ರಾಡ್ ನಗರವು ಸರ್ಕಾರದ ಕೇಂದ್ರವಾಗಿದೆ ನಿಜ. ಆದರೆ ನಿಜವಾದ ರಷ್ಯಾವನ್ನು ನೋಡಬೇಕೆಂದರೆ ಮಾಸ್ಕೋಗೆ ಹೋಗಬೇಕು. ಕ್ರಾಂತಿಯ ಕುರಿತಾದ ರಷ್ಯನ್ನರ ನಿಜವಾದ ಭಾವನೆಯನ್ನು ಅರಿಯಲು ಅದೇ ಸೂಕ್ತ ಸ್ಥಳ.

ಕಳೆದ ಒಂದು ವಾರದಿಂದ ಪೆತ್ರೋಗ್ರಾಡ್‌ನ ಮಿಲಿಟರಿ ಕ್ರಾಂತಿಕಾರಿ ಸಮಿತಿಯು ರೈಲ್ವೆಯಲ್ಲಿನ ಸಾಧಾರಣ ಕಾರ್ಮಿಕರ ಸಹಾಯದಿಂದ ನಿಕೊಲಾಯ್ ರೈಲು ಮಾರ್ಗದ ಮೇಲೆ ನಿಯಂತ್ರಣವನ್ನು ಸಾಧಿಸಿತ್ತು. ಅದರ ಮೂಲಕ ನೈರುತ್ಯ ದಿಕ್ಕಿಗೆ ಒಂದಾದ ಮೇಲೆ ಇನ್ನೊಂದರಂತೆ ರೈಲುಗಳ ತುಂಬ ನಾವಿಕರನ್ನೂ ರೆಡ್‌ಗಾರ್ಡ್‌ಗಳನ್ನೂ ಮಾಸ್ಕೋದತ್ತ ತೂರಿಬಿಟ್ಟಿತ್ತು. ನಾವು ಮಾಸ್ಕೊ ನಗರಕ್ಕೆ ಹೊರಟೆವು.

ಈಗ ನಮಗೂ ರಾಜಧಾನಿ ಬಿಟ್ಟು ಹೊರಡಲು ಸ್ಮೋಲ್ನಿಯಿಂದ ಪಾಸ್‌ಗಳು ಸಿಕ್ಕಿದ್ದವು. ಅದಿಲ್ಲದೆ ಯಾರು ಊರಾಚೆ ಹೋಗುವುದು ಸಾಧ್ಯವೇ ಇರಲಿಲ್ಲ. ನಾವು ರೈಲುನಿಲ್ದಾಣಕ್ಕೆ ಹೋದೆವು. ನಿಲ್ದಾಣಕ್ಕೆ ರೈಲು ಬರುತ್ತಿದ್ದಂತೆ ಕೊಳಕಾದ ಸೈನಿಕರು ಊಟ ತಿಂಡಿ ಹೊತ್ತುಕೊಂಡು ಬಾಗಿಲಲ್ಲಿ ನುಗ್ಗಿ, ಕಿಟಕಿ ಮುರಿದು ಒಳಗೆ ಹಾರಿ ಇಡೀ ಬೋಗಿಗಳನ್ನು ಆಕ್ರಮಿಸಿಕೊಂಡರು. ಚಾವಣಿಯ ಮೇಲೂ ಹೋಗಿ ಕುಳಿತರು. ನಾವು ಮೂರು ಜನ ಹೇಗೋ ಜಾಗ ಮಾಡಿಕೊಂಡು ಒಂದು ಬೋಗಿಯ ಒಳಗೆ ಪ್ರವೇಶಿಸಿದೆವು. ಆದರೆ ಕೆಲವೇ ನಿಮಿಷಗಳಲ್ಲಿ ಇಪ್ಪತ್ತು ಮಂದಿ ಸೈನಿಕರು ಒಳಗೆ ನುಗ್ಗಿದರು. ಅಲ್ಲಿ ನಾಲ್ಕು ಜನಕ್ಕೆ ಮಾತ್ರ ಜಾಗವಿತ್ತು. ಬೋಗಿಯ ನಿರ್ವಾಹಕನೂ ಅವರಿಗೆ ಗಲಾಟೆಮಾಡದೆ ನಮಗೆ ಜಾಗ ಬಿಡಲು ಹೇಳಿದ. ಅವರು ಸುಮ್ಮನೆ ನಕ್ಕುಬಿಟ್ಟರು. ನಮ್ಮಂಥ ಬೂರ್ಶ್ವಾಗಳ ಲೋಲುಪ್ತಿಗಾಗಿ ಅವರು ತಲೆಕೆಡಿಸಿಕೊಳ್ಳಬೇಕೇ! ಆಗ ನಾವು ನಮಗೆ ಸ್ಮೋಲ್ನಿಯಿಂದ ನೀಡಿದ್ದ ಪಾಸ್‌ಗಳನ್ನು ತೋರಿಸಿದೆವು. ಆ ಕೂಡಲೇ ಅವರ ಧೋರಣೆ ಬದಲಾಯಿತು.

ಅವರಲ್ಲೊಬ್ಬ ಹೇಳಿದ, "ಕಾಮ್ರೇಡ್ಸ್, ಬನ್ನಿ ಹೋಗೋಣ. ಇವರು ಅಮೆರಿಕಾದ ಕಾಮ್ರೇಡ್ಸ್. ಸಾವಿರಾರು ಕಿಲೋಮೀಟರ್ ದೂರದಿಂದ ಬಂದಿದ್ದಾರೆ. ನಮ್ಮ ಕ್ರಾಂತಿ ನೋಡಕ್ಕೋಸ್ಕರ, ನಿಜಕ್ಕೂ ಸುಸ್ತಾಗಿರ್ತಾರೆ."

ಬಹಳ ವಿನಯಶೀಲತೆಯಿಂದಲೂ, ಸ್ನೇಹಭಾವದಿಂದಲೂ ಅವರು ಹೊರಟು ಹೋದರು. ಸ್ವಲ್ಪ ಸಮಯದಲ್ಲೇ ಅವರು ಇಬ್ಬರು ಧಡೂತಿ ರಷ್ಯನ್ ಶ್ರೀಮಂತರು ಕಂಡಕ್ಟರ್‌ಗೆ ಲಂಚ ತಿನ್ನಿಸಿ ಒಂದು ಕಂಪಾರ್ಟ್‌ಮೆಂಟ್‌ಗೆ ನುಗ್ಗಿ ಬಾಗಿಲು ಹಾಕಿಕೊಂಡಿದ್ದುದನ್ನು ಒಡೆದು ಒಳಗೆ ಪ್ರವೇಶಿಸಿದ್ದನ್ನು ನೋಡಿದೆವು.

ಸಂಜೆ ಏಳಕ್ಕೆ ರೈಲು ಹೊರಟಿತು. ಬಹಳ ಉದ್ದನೆಯ ರೈಲಿಗೆ ಒಂದು ಸಣ್ಣ ದುರ್ಬಲವಾದ ಎಂಜಿನ್ ತಗುಲಿಸಿದ್ದರು. ಮರದ ತುಂಡು ಉರಿಸಿ ಓಡಿಸುವ ಎಂಜಿನ್ ಅದು. ಅನೇಕ ನಿಲ್ದಾಣಗಳಲ್ಲಿ ನಿಲ್ಲುತ್ತಾ ಅದು ತೆವಳುತ್ತಿತ್ತು. ಚಾವಣಿಯ ಮೇಲೆ ಕೂತಿದ್ದ ಸೈನಿಕರು ಕಾಲಿನಲ್ಲಿ ಚಾವಣಿಯನ್ನು ಕುಕ್ಕುತ್ತಾ ರೈತರ ಹಾಡುಗಳನ್ನು ಹಾಡಿಕೊಂಡಿದ್ದರು. ಓಡಾಡಲು ಸಾಧ್ಯವೇ ಇಲ್ಲದ ಬೋಗಿಯ ಒಳಗಿನ ದಾರಿಗಳಲ್ಲಿ ತೀಕ್ಷ್ಣವಾದ ರಾಜಕೀಯ ಚರ್ಚೆಗಳು ರಾತ್ರಿಯಿಡೀ ನಡೆಯುತ್ತಿದ್ದವು. ಆಗಾಗ ಕಂಡಕ್ಟರ್ ಅಭ್ಯಾಸಬಲದ ಮೇಲೆ ಟಿಕೆಟ್ ತಪಾಸಣೆಗೆ ಬರುತ್ತಿದ್ದ. ನಮ್ಮನ್ನು ಬಿಟ್ಟರೆ ಬಹುತೇಕ ಯಾರಲ್ಲೂ ಟಿಕೆಟ್ ಇರಲಿಲ್ಲ. ಅರ್ಧ ಘಂಟೆ ವ್ಯಾಜ್ಯದ ನಂತರ ಅವನು ಅಸಹಾಯಕನಾಗಿ ಕೈಚೆಲ್ಲಿ ಹೋದ. ವಾತಾವರಣದಲ್ಲಿ ವಿಪರೀತ ಹೊಗೆ, ಹೊಲಸು ವಾಸನೆ ಸೇರಿ ಉಸಿರು ಕಟ್ಟುವಂತಿತ್ತು. ಕಿಟಕಿಗಳನ್ನು ಪೂರ್ತಿ ಮುರಿದಿದ್ದರಿಂದಲೇ ನಾವು ರಾತ್ರಿ ಉಸಿರಾಡಿಕೊಂಡಿರಲು ಸಾಧ್ಯವಾದದ್ದು !

ಬೆಳಿಗ್ಗೆ ಹೊರಗೆ ನೋಡಿದರೆ ಹಿಮದಿಂದ ತುಂಬಿದ ಜಗತ್ತು. ಮಧ್ಯಾಹ್ನದ ಹೊತ್ತಿಗೆ ಒಬ್ಬ ರೈತ ಹೆಂಗಸು ಬೇಕಾದಷ್ಟು ಬ್ರೆಡ್ ತುಂಡುಗಳನ್ನೂ, ಕಾಫಿಯಂತಹ ದ್ರವವನ್ನೂ ತೆಗೆದುಕೊಂಡು ಬಂದಳು. ಅಲ್ಲಿಂದಾಚೆಗೆ ದಾರಿಯುದ್ದಕ್ಕೂ ರೈಲು ತುಂಬೇ ಇರುತ್ತಿತ್ತು. ನಿಲ್ದಾಣಗಳಲ್ಲಿ ಹಸಿದ ಪ್ರಯಾಣಿಕರು ಹೊರಗೆ ಧುಮುಕಿ ಸಿಕ್ಕಿದ್ದೆಲ್ಲಾ ತಿಂದು ಖಾಲಿ ಮಾಡಿಬಿಡುತ್ತಿದ್ದರು. ಇಂಥ ನಿಲ್ದಾಣವೊಂದರಲ್ಲಿ ನಾನು ನೋಗಿನ್, ರೈಕೋವ್ ಮತ್ತು ಬುಖಾರಿನ್‌ರಂಥ ಬೋಲ್ಶೆವಿಕ್ ನಾಯಕರನ್ನು ಭೇಟಿಯಾದೆ.

ಗಂಟೆ ಬಾರಿಸಿದಾಗ ನಾವು ಓಡಿ ರೈಲು ಹತ್ತಿದೆವು. ವಿಪರೀತ ಜನ. ಆದರೆ ಪ್ರಯಾಣದ ಎಲ್ಲಾ ಕಷ್ಟಗಳನ್ನು ತಾಳ್ಮೆಯಿಂದ ಭರಿಸುವ ಒಳ್ಳೆಯ ಸ್ವಭಾವದವರು, ದಾರಿಯುದ್ದಕ್ಕೂ ಪೆತ್ರೋಗ್ರಾಡ್ ಪರಿಸ್ಥಿತಿ, ಬ್ರಿಟನ್ನಿನ ಕಾರ್ಮಿಕ ಸಂಘಗಳು, ಹೀಗೆ ಎಲ್ಲವುದರ ಬಗ್ಗೆಯೂ ಚರ್ಚೆ, ಅಲ್ಲೊಬ್ಬರು ಇಲ್ಲೊಬ್ಬರು ಇದ್ದ ಬೂರ್ಶ್ವಾಗಳೊಂದಿಗೆ ವಾಗ್ವಾದ. ಮಾಸ್ಕೊ ತಲುಪುವ ವೇಳೆಗೆ ಎಲ್ಲಾ ಬೋಗಿಗಳಲ್ಲೂ ಆಹಾರ ಸಂಗ್ರಹಣೆ ಹಾಗೂ ವಿತರಣೆಗೆ ಸಮಿತಿಗಳನ್ನು ಮಾಡಿಕೊಂಡುಬಿಟ್ಟಿದ್ದರು. ಸಮಿತಿಗಳ ಒಳಗೆ ಸಹ ವಿವಿಧ ರಾಜಕೀಯ ಗುಂಪುಗಳ ನಡುವಿನ ವಾದ ವಿವಾದ ನಡೆದೇ ಇತ್ತು.

ಮಾಸ್ಕೋದಲ್ಲಿ ನಿಲ್ದಾಣ ನಿರ್ಜನವಾಗಿತ್ತು. ನಾವು ನಮ್ಮ ವಾಪಸ್ ಪ್ರಯಾಣದ ಟಿಕೇಟುಗಳನ್ನು ಕಾಯ್ದಿರಿಸಲು ಅಲ್ಲಿದ್ದ ಕಮಿಸಾರ್ ಬಳಿ ಹೋದರೆ ಅವನು ಅಸಮಾಧಾನದಲ್ಲೇ ಇದ್ದ. ನಮ್ಮಲ್ಲಿದ್ದ ಸ್ಮೋಲ್ನಿಯ ಅನುಮತಿ ಪತ್ರವನ್ನು ತೋರಿಸಿದರೆ ಅವನು ರೇಗಿಬಿಟ್ಟ. ಅವನು ಸಾರ್ವಜನಿಕ ಭದ್ರತಾ ಸಮಿತಿಗೆ ಸೇರಿದವನು. ಊರು ಗೆದ್ದ ಬೋಲ್ಶೆವಿಕರು ರೈಲ್ವೆ ನಿಲ್ದಾಣದ ಮೇಲಿನ ನಿಯಂತ್ರಣವನ್ನೇ ಮರೆತಿದ್ದರು!

ಊರೊಳಗೆ ಹೋಗಲು ಕಡೆಗೂ ಒಂದು ಟಾಂಗಾ ಸಿಕ್ಕಿತು. ಆದರೆ ಅದರ ಚಾಲಕ

ಊರಿನ ಕೇಂದ್ರಕ್ಕೆ ಕರೆದುಕೊಂಡು ಹೋಗಲು ನೂರು ರೂಬಲ್ ಹಣ ಕೇಳಿದ. ಕ್ರಾಂತಿಗೆ ಮುನ್ನ ಎರಡು ರೂಬಲ್ ಇತ್ತು ಅಷ್ಟೇ! ನಾವು ಎಷ್ಟು ಚೌಕಾಸಿ ಮಾಡಿದರೂ ಐವತ್ತು ರೂಬಲ್‌ಗಿಂತ ಕೆಳಗಿಳಿಯಲಿಲ್ಲ. ಟಾಂಗಾ ನಡೆಸುವುದು ಎಷ್ಟು ಅಪಾಯಕಾರಿಯಾಗಿದೆ, ಕಳೆದ ಆರು ದಿನಗಳಲ್ಲಿ ತಾನು ಎದುರಿಸಿದ ಅಪಾಯ, ಫಿರಂಗಿ ಗುಂಡುಗಳ ಭಯ, ಎಲ್ಲವನ್ನೂ ಆತ ವಿವರಿಸಿದ. ಬಾಡಿಗೆ ಕೋಣೆಗಳು ಸಿಗುವುದು ಕಷ್ಟ ಎಂದೂ ಆತ ವರದಿ ನೀಡಿದ.

ಕೋಣೆ ಹುಡುಕಲು ನಾವು ಹೊಟೇಲಿಂದ ಹೊಟೇಲಿಗೆ ಅಲೆಯಬೇಕಾಯಿತು. ಒಂದು ಹೊಟೇಲಿನಲ್ಲಿ ಕೋಣೆ ಕೊಡುತ್ತೇವೆ, ಆದರೆ ಕಿಟಕಿಗಳೆಲ್ಲಾ ಗುಂಡೇಟಿನಿಂದ ಧ್ವಂಸವಾಗಿವೆ ಎಂದರು. ಸರಿ, ಮತ್ತೆ ಹುಡುಕುತ್ತಾ ಹೊರಟೆವು. ಎಷ್ಟೋ ಕಡೆ ಹೊಟೇಲ್ ಮಾಲಿಕರು ಎಷ್ಟು ಗಾಬರಿಯಾಗಿದ್ದರೆಂದರೆ ಕೋಣೆಗಳಿದ್ದರೂ ಸಹ ಅವರು ಬಾಡಿಗೆಗೆ ಕೊಡಲು ತಯಾರಿರಲಿಲ್ಲ. ಬ್ಯಾಂಕುಗಳು, ವರ್ತಕರ ಮಳಿಗೆಗಳು ಇದ್ದ ಕಡೆಯಂತೂ ಬೋಲ್ಶೆವಿಕರು ಯಾವುದಕ್ಕೂ ಲೆಕ್ಕಿಸದೆ ಗುಂಡಿನ ಮಳೆಗರೆದಿದ್ದರು. ಯಂಕರ್‌ಗಳು, ವೈಟ್‌ಗಾರ್ಡ್‌ಗಳು ಎಲ್ಲಿ ಅಡಗಿಕೊಂಡಿದ್ದರೆಂಬುದು ನಿರ್ದಿಷ್ಟವಾಗಿ ತಿಳಿಯದಿದ್ದಾಗ ಅಂಥ ಪ್ರದೇಶಗಳಲ್ಲಿ ಇಂಥ ದಾಳಿ ನಡೆದಿತ್ತು ಎಂದು ನಮಗೆ ಸೋವಿಯತ್ ಅಧಿಕಾರಿಯೊಬ್ಬ ತಿಳಿಸಿದ.

ಬಹಳ ದೊಡ್ಡದಾಗಿದ್ದ ಹೊಟೇಲ್ ನ್ಯಾಷನಲ್‌ನಲ್ಲಿ ನಮಗೆ ಕಡೆಗೂ ಕೋಣೆ ಸಿಕ್ಕಿತು. ಮಿಲಿಟರಿ ಕ್ರಾಂತಿಕಾರಿ ಸಮಿತಿಯವರು ವಿದೇಶಿಗರು ತಂಗುವ ಜಾಗಗಳಿಗೆ ರಕ್ಷಣೆ ನೀಡುವುದಾಗಿ ಹೇಳಿದ್ದರು. ಅಲ್ಲಿಗೂ ದಾಳಿಯ ಬಿಸಿ ಮೇಲ್ ಮಹಡಿಯಲ್ಲಿ ತಟ್ಟಿತ್ತು. ಅದನ್ನು ತೋರಿಸುತ್ತಾ ಮ್ಯಾನೇಜರ್ ಕೂಗಾಡಿದ : "ಮೃಗಗಳು ! ಇನ್ನು ನಾಕು ದಿನ. ಇವರ ಸರ್ಕಾರ ಬಿದ್ದುಹೋಗುತ್ತೆ. ಆಮೇಲೆ ತೋರಿಸ್ತೀವಿ ಇವರಿಗೆ" ಎನ್ನುತ್ತಿದ್ದ.

ನಾವೊಂದು ಪೂರ್ಣ ಸಸ್ಯಾಹಾರಿ ಹೊಟೇಲ್‌ನಲ್ಲಿ ಊಟ ಮಾಡಿದೆವು. ಗೋಡೆಯ ಮೇಲೆ ಟಾಲ್‌ಸ್ಟಾಯ್ ಅವರ ಚಿತ್ರವಿದ್ದ ಆ ಹೊಟೇಲ್‌ಗೆ ಆಕರ್ಷಕವಾದ ಹೆಸರಿತ್ತು;

*'ಐ ಈಟ್ ನೋಬಡಿ'*

*"ನಾನು ಯಾರನ್ನೂ ತಿನ್ನುವುದಿಲ್ಲ"* ಎಂದು

ಮಾಸ್ಕೋ ಸೋವಿಯತ್‌ನ ಕೇಂದ್ರ ಕಛೇರಿಯು ಹಿಂದಿನ ಗವರ್ನರ್ ಜನರಲ್‌ನ ಸುಂದರ ಶ್ವೇತ ಸೌಧವೊಂದರಲ್ಲಿತ್ತು. ಬಾಗಿಲಲ್ಲಿ ರೆಡ್‌ಗಾರ್ಡ್‌ಗಳು ಕಾವಲು ಕಾಯುತ್ತಿದ್ದರು. ವಿಶಾಲವಾದ ಮಹಡಿ ಮೆಟ್ಟಿಲುಗಳನ್ನು ಹತ್ತಿ ಹೋದರೆ ಅಲ್ಲಿ ಗೋಡೆಗಳ ಮೇಲೆ ವಿವಿಧ ಸಭೆಗಳ ಪ್ರಕಟಣೆಗಳು, ರಾಜಕೀಯ ಪಕ್ಷಗಳ ವಿಳಾಸಗಳು, ಇವುಗಳನ್ನೆಲ್ಲಾ ಅಂಟಿಸಿದ್ದರು. ಅದರಾಚೆ ಒಳಗಡೆ ಸುಂದರವಾದ ಕೋಣೆಗಳು. ಗೋಡೆಗಳ ಮೇಲೆ ಸೊಗಸಾದ ಚಿತ್ರಗಳು. ಅದಾದ ಮೇಲೆ ಗಾಜಿನ ದೀಪದ ಗೊಂಚಲುಗಳು, ಚಿನ್ನದ ಬಣ್ಣದ ಗೋಡೆಯ ಪಟ್ಟಿಗಳು ಇದ್ದ ಮನೋಹರವಾದ ಪ್ರಭುಗಳ ದಿವಾನಖಾನೆ. ಅಲ್ಲಿ ಸುಮಾರು ಐವತ್ತು ಮಂದಿ ಹೆಂಗಸರು ಮೆಲುದನಿಯಲ್ಲಿ ಮಾತನಾಡುತ್ತಾ ಹೊಲಿಗೆ ಯಂತ್ರಗಳನ್ನು ತುಳಿಯುತ್ತಿದ್ದರು. ಸತ್ತ ಕ್ರಾಂತಿಕಾರಿಗಳ ಶವಯಾತ್ರೆಗಾಗಿ ಅವರು ಕಪ್ಪು, ಕೆಂಪು ಬಟ್ಟೆಗಳಿಂದ ಬ್ಯಾನರ್‌ಗಳನ್ನು ತಯಾರಿಸಿದ್ದರು. ಬದುಕಿನಲ್ಲಿ ಸಂಕಷ್ಟಗಳನ್ನೆದುರಿಸಿದ ನೋವುಂಡ ಮುಖಗಳು ಅವು. ಬಹಳಷ್ಟು ಜನಕ್ಕೆ ಅತ್ತೂ ಅತ್ತೂ ಕಣ್ಣುಗಳು ಕೆಂಪಾಗಿದ್ದವು. ಕೆಂಪು ಸೈನ್ಯದಲ್ಲಿನ ಜೀವಹಾನಿ ಅಗಾಧವಾಗಿತ್ತು.

ಅಲ್ಲಿ ಮೂಲೆಯೊಂದರಲ್ಲಿ ಮೇಜು ಒಂದರ ಮುಂದೆ ರಗೋವ್ ಎಂಬ ಬುದ್ಧಿವಂತ ಬೋಲ್ಶೆವಿಕ್ ಅಧಿಕಾರಿಯೊಬ್ಬ ಕುಳಿತಿದ್ದ. ಆತ ನಮ್ಮನ್ನೂ ಮಾರನೆಯ ಬೆಳಿಗ್ಗೆಯ ಶವಯಾತ್ರೆಯಲ್ಲಿ ಭಾಗವಹಿಸಲು ಆಹ್ವಾನಿಸಿದ. "ಈ ಸೋಷಲಿಸ್ಟ್ ರೆವಲ್ಯೂಶನರಿಗಳಿಗೆ, ಮೆನ್ಶೆವಿಕರಿಗೆ ಯಾರೂ ಏನೂ ಕಲಿಸಕ್ಕಾಗಲ್ಲ. ರಾಜಿ ಅನ್ನೋದು ಅವರ ಹುಟ್ಟುಗುಣ. ನಾಳೆ ಶವಯಾತ್ರೆಗೆ ಯಂಕರ್‌ಗಳನ್ನು ಸೇರಿಸಿಕೊಳ್ಳೋಣ ಅಂತಾರೆ ನೋಡಿ" ಎಂದ.

ಅಷ್ಟರಲ್ಲಿ ಚಿಂದಿಯಾಗಿದ್ದ ಸೈನಿಕರ ಕೋಟನ್ನು ಧರಿಸಿದ್ದ ನನ್ನ ಹಳೆಯ ಗೆಳೆಯ ಮೆಲ್‌ನಿಕಾನ್‌ಸ್ಕಿ ಅಲ್ಲಿಗೆ ಬಂದ. ಅವನು ಅಮೆರಿಕಾದಲ್ಲಿದ್ದಾಗ ಸ್ಟ್ಯಾಂಡರ್ಡ್ ಆಯಿಲ್ ಮುಷ್ಕರದಲ್ಲಿ ಭಾಗಿಯಾಗಿದ್ದವನು. ಅವನು ಈಗ ಮಾಸ್ಕೋದಲ್ಲಿ ಲೋಹ ಕಾರ್ಮಿಕರ ಸಂಘದ ಕಾರ್ಯದರ್ಶಿಯೂ ಮಿಲಿಟರಿ ಕ್ರಾಂತಿಕಾರಿ ಸಮಿತಿಯ ಕಮಿಸಾರ್‌ನೂ ಆಗಿದ್ದಾನಂತೆ.

"ನನ್ನ ವೇಷಭೂಷಣ ಹೇಗಿದೆ ನೋಡು, ಯಂಕರ್‌ಗಳ ಜೊತೆಯ ಮೊದಲ ದಾಳಿಯಲ್ಲಿ ನಾನಿದ್ದೆ. ಅವರು ನನ್ನ ಕೋಟು, ವಾಚು, ಹಣ, ಉಂಗುರ ಎಲ್ಲಾ ಕಸಿದುಕೊಂಡು ನೆಲಮಾಳಿಗೆಯಲ್ಲಿ ಕೂಡಿಹಾಕಿದ್ದರು" ಎಂದ. ಅವನಿಂದ ನನಗೆ ಆ ಆರು ದಿನಗಳ ರಕ್ತಸಿಕ್ತ ಹೋರಾಟದ ಪರಿಚಯವಾಯಿತು. ಮಾಸ್ಕೋದಲ್ಲಿ ನಗರ ಡ್ಯೂಮಾವು ಸ್ವತಃ ತಾನೇ ಮುಂದೆ ನಿಂತು ಯಂಕರ್‌ಗಳಿಗೂ, ವೈಟ್‌ಗಾರ್ಡ್‌ಗಳಿಗೂ ಎಲ್ಲಾ ಕ್ರಾಂತಿವಿರೋಧಿಗಳಿಗೂ ನೇತೃತ್ವವನ್ನು ನೀಡಿಬಿಟ್ಟಿತ್ತು. 'ಯಂಕರ್‌ಗಳು ಕ್ರೆಮ್ಲಿನ್ ಕಟ್ಟಡದಲ್ಲಿ ಬಚ್ಚಿಟ್ಟುಕೊಳ್ಳಲಿ. ಅದರ ಮೇಲೆ ಗುಂಡು ಹಾರಿಸಲು ಯಾರಿಗೂ ಧೈರ್ಯ ಬರುವುದಿಲ್ಲ' ಎಂಬ ಸಲಹೆಯನ್ನು ಸ್ವತಃ ಮೇಯರ್‌ನೇ ಕೊಟ್ಟಿದ್ದನಂತೆ.

ತಟಸ್ಥವಾಗಿ ಉಳಿಯುತ್ತೇವೆ ಎಂದು ತೀರ್ಮಾನಿಸಿದ ನಗರ ರಕ್ಷಣಾದಳದ ರೆಜಿಮೆಂಟ್ ಒಂದು ಏನೂ ಮಾಡದೆ ನಿಷ್ಕ್ರಿಯವಾಗಿ ಕಡೆಗೆ ಸೂರ್ಯಕಾಂತಿ ಬೀಜ ಮಾರುವ ಕೆಲಸ ಮಾಡಿಕೊಂಡಿದ್ದ ವಿಚಿತ್ರ ಕಥೆಯನ್ನೂ ಅವನು ನನಗೆ ಹೇಳಿದ!

"ಬಹಳ ದೊಡ್ಡ ಸಮಸ್ಯೆಯೆಂದರೆ ನಮ್ಮ ಶತ್ರುಗಳಿಗೆ ಅವರ ಯೋಜನೆ ಸ್ಪಷ್ಟವಿತ್ತು. ಆದರೆ ನಮ್ಮಲ್ಲಿ ಕಾರ್ಮಿಕರ ಸೋವಿಯತ್‌ಗಳೂ, ಸೈನಿಕರ ಸೋವಿಯತ್‌ಗಳೂ ಯಾರು ಸೇನಾಧಿಪತಿಯಾಗಬೇಕು ಎಂಬ ಅಮುಖ್ಯ ವಿಷಯದಲ್ಲಿ ತಕರಾರು ಮಾಡಿಕೊಂಡವು. ಮತ್ತೆ ಕೆಲವು ರೆಜಿಮೆಂಟುಗಳು ಯಾವ ನಿಲುವು ತೆಗೆದುಕೊಳ್ಳಬೇಕೆಂಬ ಬಗ್ಗೆ ದಿನಗಟ್ಟಲೆ ಚರ್ಚೆ ನಡೆಸಿದವು. ಕಡೆಗೆ ಅಧಿಕಾರಿಗಳು ನಮ್ಮನ್ನು ತೊರೆದ ಮೇಲೆ ನಮಗೆ ನಾಯಕತ್ವವೇ ಇಲ್ಲದಂತಾಯಿತು."

ಅನೇಕ ಮನಮುಟ್ಟುವ ಘಟನೆಗಳನ್ನು ಆತ ನನಗೆ ಹೇಳಿದ. ಒಂದು ದಿನ ಆತ ರಸ್ತೆ ಬದಿಯಲ್ಲಿ ನಿಂತಿದ್ದ. ಅಲ್ಲಿ ಮೆಷಿನ್‌ಗನ್ ದಾಳಿ, ನಡೆಯಿತು. ಅಲ್ಲಿ ಒಂದಷ್ಟು ಜನ ಬೀದಿ ಮಕ್ಕಳಿದ್ದರು. ವೃತ್ತ ಪತ್ರಿಕೆ ಮಾರುವುದು ಮುಂತಾದ ಚಿಲ್ಲರೆ ಕೆಲಸ ಮಾಡುವ ಹುಡುಗರು. ಅವರಿಗೆ ಯುದ್ಧ, ಮೆಶಿನ್‌ಗನ್ ದಾಳಿ, ಇವೆಲ್ಲಾ ಒಂದು ಹೊಸ ಆಟದಂತೆ ಕಂಡಿತು. ದಾಳಿ ಕಡಿಮೆಯಾದಾಗ ರಸ್ತೆಯ ಒಂದು ಬದಿಯಿಂದ ಇನ್ನೊಂದು ಬದಿಗೆ ಓಡಿ ಹೋಗಲು ಯತ್ನಿಸಿದರು. ಕೆಲವರು ಸತ್ತೂ ಹೋದರು. ಆದರೆ ಅವರು ನಗುತ್ತಾ ಮತ್ತೆ ಒಬ್ಬರಿಗೊಬ್ಬರು ಸವಾಲು ಹಾಕುತ್ತಿದ್ದರು!

ಸಂಜೆ ನಾನು ಹಿಂದೆ ಶ್ರೀಮಂತರ ಕ್ಲಬ್ ಆಗಿದ್ದ ಒಂದು ಜಾಗಕ್ಕೆ ಹೋದೆ. ಅಲ್ಲಿಗೆ

ಕೇಂದ್ರ ಸಮಿತಿಯಿಂದ ರಾಜಿನಾಮೆ ಕೊಟ್ಟುಬಂದಿದ್ದ ಇದೇ ಊರಿನ ಸದಸ್ಯರು ನೋಗಿನ್ ಮತ್ತು ರೈಕೋವ್ ಬರುವವರಿದ್ದರು.

ಅದೊಂದು ರಂಗಮಂದಿರ. ಹಿಂದೆ ಅಧಿಕಾರಿಗಳಿಗಾಗಿ ಮನರಂಜನಾ ಕಾರ್ಯಕ್ರಮ ನಡೆಯುತ್ತಿತ್ತು. ನಾವು ಅಲ್ಲಿಗೆ ಹೋದಾಗ ಅದರ ತುಂಬ ಬುದ್ಧಿಜೀವಿಗಳೇ ತುಂಬಿಕೊಂಡಿದ್ದರು. ನೋಗಿನ್ ಮಾತನಾಡಲಾರಂಭಿಸಿದ. ಕೇಳುಗರು ಅವನಿಗೆ ಬೆಂಬಲ ಸೂಚಿಸುತ್ತಿದ್ದರು. ಕಾರ್ಮಿಕರು ನಗರದ ಹೊರವಲಯದಿಂದ ಬರಬೇಕಾಗಿತ್ತು. ಟ್ರಾಮ್‌ಗಳು ಓಡುತ್ತಿರಲಿಲ್ಲ. ಹೀಗಾಗಿ ಅವರೆಲ್ಲಾ ಮಧ್ಯರಾತ್ರಿಯ ಹೊತ್ತಿಗೆ ಬಂದು ತಲುಪಿದರು. ಅವರೆಲ್ಲಾ ಕೊಳಕರು, ಒರಟರು, ನೇರವಾಗಿ ಯುದ್ಧಭೂಮಿಯಿಂದ ಬರುತ್ತಿರುವವರು. ದೆವ್ವಗಳಂತೆ ಹೊಡೆದಾಡುತ್ತಾ ತಮ್ಮ ಸಂಗಾತಿಗಳು ಸಾವನ್ನಪ್ಪಿದ್ದನ್ನು ಕಣ್ಣಾರೆ ಕಂಡು ಬಂದವರು.

ಆದರೆ ಸಭೆ ಔಪಚಾರಿಕವಾಗಿ ಆರಂಭವಾದ ಮೇಲೆ ನೋಗಿನ್‌ನ ಮಾತಿಗೆ ಸಿಟ್ಟಿನ ಪ್ರತಿಕ್ರಿಯೆಗಳು, ಲೇವಡಿ ಶುರುವಾದವು. ನೋಗಿನ್ ವಾದಿಸಿದ, ವಿವರಿಸಲು ಯತ್ನಿಸಿದ. ಆದರೆ ಜನ ಅವನ ಮಾತನ್ನು ಕೇಳಲು ತಯಾರಿರಲಿಲ್ಲ. ಯುದ್ಧ ನಡೆಯುವಾಗ ಅವನು ತನ್ನ ಜವಾಬ್ದಾರಿಯನ್ನು ತೊರೆದು ಬರಬಾರದಿತ್ತು ಎಂಬುದು ಅವರ ನಿಲುವು. ನಂತರ ಬುಖಾರಿನ್ ಮಾತನಾಡಲು ನಿಂತ. ಅವನು ತಾರ್ಕಿಕವಾಗಿ, ನಿರ್ದಯವಾಗಿ, ಆಕ್ರಮಣಕಾರಿ ದನಿಯಲ್ಲಿ ಮಾತನಾಡಿದ. ಈತನ ಮಾತನ್ನು ಜನ ಹೊಳೆಯುವ ಕಣ್ಣುಗಳಿಂದ ಕೇಳಿಸಿಕೊಂಡರು. ನಂತರ ನಿರ್ಣಯದ ಸಮಯ. ಜನತೆಯ ಕಮಿಸಾರ್‌ಗಳ ಮಂಡಳಿಗೆ, ಎಂದರೆ ಬೋಲ್ಶೆವಿಕ್ ಕ್ರಾಂತಿಗೆ, ಬೆಂಬಲ. ಭಾರೀ ಬಹುಮತದ ಈ ತೀರ್ಮಾನವೇ ಮಾಸ್ಕೋ ನಗರವು ಆಡಿದ ಮಾತು!

ತಡರಾತ್ರಿಯಲ್ಲಿ ನಾವು ನಿರ್ಜನ ಬೀದಿಗಳಲ್ಲಿ ನಡೆಯುತ್ತಾ ಕೆಂಪು ಚೌಕವನ್ನೂ, ಕ್ರೆಮ್ಲಿನ್ ಭವನವನ್ನೂ ತಲುಪಿದೆವು. ವ್ಯಾಸಿಲಿ ಬ್ಲಾಜೆನಿ ಚರ್ಚು ಸುಂದರವಾಗಿ ಕಾಣುತ್ತಿತ್ತು. ಅದಕ್ಕೆ ಯಾವ ಹಾನಿಯೂ ಆಗಿರಲಿಲ್ಲ. ಚೌಕದ ಇನ್ನೊಂದು ಕಡೆ ಕ್ರೆಮ್ಲಿನ್‌ನ ಗೋಡೆಗಳು ಕತ್ತಲಲ್ಲಿ ಮಬ್ಬಾಗಿ ಕಾಣುತ್ತಿದ್ದವು. ಅಲ್ಲಿ ಪಂಜಿನ ಬೆಳಕು ಕಾಣುತ್ತಿತ್ತು. ನೆಲ ಅಗೆಯುವ ಸದ್ದು ಮತ್ತು ಮಾತುಗಳು ತೇಲಿಬಂದವು. ನಾವು ಅತ್ತ ಸಾಗಿದೆವು.

ಗೋಡೆಯ ಬುಡದಲ್ಲಿ ಕಲ್ಲು ಮತ್ತು ಮಣ್ಣನ್ನು ಬೆಟ್ಟದಂತೆ ಪೇರಿಸಲಾಗಿತ್ತು. ಅದರ ಮೇಲೆ ಹತ್ತಿ ನೋಡಿದೆವು. ಸುಮಾರು ಹತ್ತು ಹದಿನೈದು ಅಡಿ ಆಳವೂ ನೂರೈವತ್ತು ಅಡಿ ಉದ್ದವೂ ಇದ್ದ ಹಳ್ಳದಲ್ಲಿ ನೂರಾರು ಸೈನಿಕರು ಮತ್ತು ಕಾರ್ಮಿಕರು ನೆಲ ಅಗೆಯುತ್ತಿದ್ದರು.

ಒಬ್ಬ ವಿದ್ಯಾರ್ಥಿ ನಮಗೆ ಜರ್ಮನ್ ಭಾಷೆಯಲ್ಲಿ ವಿವರಿಸಿದ : "ಇದು 'ಸೋದರರ ಸಮಾಧಿ'. ಇಲ್ಲಿ ನಾಳೆ ನಾವು ಕ್ರಾಂತಿಗಾಗಿ ಮಡಿದ ಐನೂರು ಶ್ರಮಜೀವಿಗಳನ್ನು ಮಣ್ಣು ಮಾಡಲಿದ್ದೇವೆ". ಆತ ನಮ್ಮನ್ನು ಹಳ್ಳದೊಳಗೆ ಕರೆದುಕೊಂಡು ಹೋದ. ಅವಸರದಲ್ಲಿ ಸನಿಕೆ, ಗುದ್ದಲಿಗಳು ನೆಲವನ್ನು ಬಗೆಯುತ್ತಿದ್ದವು. ಯಾರೂ ಮಾತನಾಡುತ್ತಿರಲಿಲ್ಲ. ಆಕಾಶದಲ್ಲಿ ನಕ್ಷತ್ರಗಳು ತುಂಬಿಕೊಂಡಿದ್ದವು. ಕ್ರೆಮ್ಲಿನ್‌ನ ಗೋಡೆ ಕಣ್ಣು ಕಾಣುವವರೆಗೂ ಎತ್ತರವಾಗಿ ಚಾಚಿಕೊಂಡಿತ್ತು.

ವಿದ್ಯಾರ್ಥಿ ಹೇಳುತ್ತಿದ್ದ, "ಇದು ಪವಿತ್ರ ಜಾಗ. ರಷ್ಯಾದಲ್ಲಿ ಅತ್ಯಂತ ಪವಿತ್ರ ಜಾಗ. ನಾವಿಲ್ಲಿ ನಮ್ಮ ಅತ್ಯಂತ ಪವಿತ್ರ ಸಂಗಾತಿಗಳನ್ನು ಮಣ್ಣು ಮಾಡಲಿದ್ದೇವೆ. ಇಲ್ಲಿ ಝಾರ್

ದೊರೆಗಳು ಗೋರಿಯಾಗಿರುವ ಕಡೆ, ಈ ನಮ್ಮ ಜ಼ಾರ್‌ಗಳು, ಜನಸಾಮಾನ್ಯರು, ಚಿರನಿದ್ರೆಯಲ್ಲಿ ಮಲಗಿದ್ದಾರೆ." ಅವನ ಕೈ ಕುತ್ತಿಗೆಯಿಂದ ಬ್ಯಾಂಡೇಜ್‌ನಲ್ಲಿ ನೇತಾಡುತ್ತಿತ್ತು. ಅವನು ಮಾತು ಮುಂದುವರೆಸಿದ, "ನೀವು ವಿದೇಶಿಯರು ನಮ್ಮನ್ನು ಮಧ್ಯಯುಗದ ರಾಜಪ್ರಭುತ್ವವನ್ನು ಸಹಿಸಿಕೊಂಡಿದ್ದಂಥ ಜನ ಎಂದು ಕೀಳಾಗಿ ನೋಡುತ್ತಿದ್ದಿರಿ. ಆದರೆ ನಮಗನ್ನಿಸಿತು ತ್ಸಾರ್ ಒಬ್ಬನೇ ಅಲ್ಲ ಜಗತ್ತಿನಲ್ಲಿ ದುಷ್ಟಪ್ರಭು. ಬಂಡವಾಳಶಾಹಿ ಅದಕ್ಕಿಂತ ದುಷ್ಟವಾದದ್ದು ಎಂದು. ಜಗತ್ತಿನ ಎಲ್ಲ ದೇಶಗಳಲ್ಲೂ ಬಂಡವಾಳಶಾಹಿಯೇ ಚಕ್ರವರ್ತಿ... ಹೀಗಾಗಿ ರಷ್ಯನ್ ಕ್ರಾಂತಿಕಾರಿ ಸಮರತಂತ್ರವೇ ಸರ್ವೋತ್ಕೃಷ್ಟವಾದದ್ದು."

ನಾವು ಹೊರಡುತ್ತಿರುವಾಗಲೇ, ಆ ಕೆಟ್ಟ ಚಳಿಗಾಳಿಯಲ್ಲೂ ಬೆವರು ಸುರಿಸುತ್ತಿದ್ದ ಕಾರ್ಮಿಕರು, ಸುಸ್ತಾಗಿ ಹಳ್ಳದಿಂದ ಮೇಲಕ್ಕೆ ಹತ್ತಿ ಬರಲಾರಂಭಿಸಿದರು. ಅಷ್ಟರಲ್ಲಿ ಇನ್ನೊಂದು ತಂಡ ಕತ್ತಲಿನಲ್ಲಿ ಬಂದು ಮಾತಿಲ್ಲದೆ ಸನಿಕೆ ಗುದ್ದಲಿಗಳನ್ನು ಕೈಗೆತ್ತಿಕೊಂಡಿತು. ಹೀಗೆಯೇ ಇಡೀ ರಾತ್ರಿ ಸ್ವಯಂಸೇವಕರ ತಂಡಗಳು ಬಂದು ಒಂದು ಜಾಗದ ನಂತರ ಇನ್ನೊಂದು ಜಾಗದಲ್ಲಿ ಅಗೆಯುತ್ತಲೇ ಹೋದವು. ಬೆಳಿಗ್ಗೆಯ ಹೊತ್ತಿಗೆ ಬಿಳಿಯ ಹಿಮದ ನೆಲದ ನಡುವೆ ಕಪ್ಪುಹಳ್ಳಗಳು 'ಸೋದರರ ಸಮಾಧಿಗಾಗಿ' ಸಿದ್ಧವಾಗಿದ್ದವು.

ನಾವು ಮುಂಜಾನೆ ಬೇಗ ಎದ್ದು ಹೊರಟೆವು. ಇಡೀ ಊರಿನಲ್ಲಿ ನಮಗೆ ಯಾರೂ ಕಾಣಲಿಲ್ಲ. ಆದರೆ ಊರು ಎದ್ದೇಳುವ ಮಂದವಾದ ಶಬ್ದ ಕೇಳಿಸುತ್ತಿತ್ತು. ನಾವು ಸೋವಿಯತ್ ಕೇಂದ್ರ ಕಛೇರಿಯ ಬಳಿ ಬಂದಾಗ ಒಂದು ಗುಂಪು ಜನ ತಿಳಿಯಾಗುತ್ತಿದ್ದ ಕತ್ತಲಿನಲ್ಲಿ ಚಿನ್ನದ ಬಣ್ಣದ ಅಕ್ಷರಗಳಲ್ಲಿ 'ಮಾಸ್ಕೋ ಸೋವಿಯತ್‌ನ ಕೇಂದ್ರ ಕಾರ್ಯಕಾರಿ ಸಮಿತಿ' ಎಂದು ಬರೆದಿದ್ದ ಬ್ಯಾನರ್‌ಗಳನ್ನು ಹಿಡಿದುಕೊಂಡಿದ್ದರು. ನಾವು ತ್ವೇರ್‌ಸ್ಕಯಾ ರಸ್ತೆಯಲ್ಲಿ ಸ್ಕೋಬೆಲೆವ್ ಚೌಕದ ಕಡೆಗೆ ನಡೆಯುತ್ತಿದ್ದರೆ ತಲೆಯ ಮೇಲೂ ಬ್ಯಾನರ್‌ಗಳು ಪಟಪಟನೆ ಹೊಡೆದುಕೊಳ್ಳುತ್ತಿದ್ದವು. ದಾರಿಯುದ್ದಕ್ಕೂ ಚರ್ಚುಗಳು ಮುಚ್ಚಿದ್ದವು. ಪ್ರತಿಯೊಬ್ಬ ಜ಼ಾರ್ ಚಕ್ರವರ್ತಿಯು ಕಿರೀಟಧಾರಣೆಗೆ ಮುನ್ನ ಕಡ್ಡಾಯವಾಗಿ ಹೋಗುತ್ತಿದ್ದ ಐಬೀರಿಯನ್ ವರ್ಜಿನ್ ಚರ್ಚು ಸಹ ಮುಚ್ಚಿತ್ತು. ಸದಾ ಮೋಂಬತ್ತಿಗಳು ಬೆಳಗುತ್ತ, ದಿನ-ರಾತ್ರಿ ತೆರೆದಿರುವ ಆ ಚರ್ಚು ನೆಪೋಲಿಯನ್‌ನ ಆಕ್ರಮಣದ ನಂತರ ಇಂದೇ – ಎಂದರೆ ಸುಮಾರು ನೂರಿಪ್ಪತ್ತು ವರ್ಷಗಳಲ್ಲಿ ಮೊದಲ ಬಾರಿ ಮುಚ್ಚಿತ್ತು.

ಸಾಂಪ್ರದಾಯಿಕ ಚರ್ಚ್ ತನ್ನ ಕೃಪಾಕಟಾಕ್ಷವನ್ನು ಈ ನಾಸ್ತಿಕ, ಹಾವಿನಂತಹ ಜನಗಳ ಮೇಲೆ ಬೀರಲು ಸಿದ್ಧವಿರಲಿಲ್ಲ! ಪಾದ್ರಿಗಳು ಕಾಣೆಯಾಗಿದ್ದರು. ಹೀಗಾಗಿ ಕ್ರಾಂತಿಕಾರಿ ಸಮಾಧಿಗಳ ಬಳಿ ಈ ಧರ್ಮದ್ರೋಹಿಗಳಿಗಾಗಿ ಪ್ರಾರ್ಥನೆ ಸಲ್ಲಿಸಲು ಯಾವ ಧರ್ಮಗುರುವೂ ಇರಲಿಲ್ಲ! ಸ್ವಲ್ಪ ಕಾಲದ ನಂತರ ಆ ಪ್ರದೇಶದ ಮುಖ್ಯ ಬಿಷಪ್‌ರು ಸೋವಿಯತ್‌ಗಳನ್ನು ಧರ್ಮದಿಂದ ಹೊರಹಾಕಿದರು!

ಅದೇ ರೀತಿ ವರ್ತಕರು ಅಂಗಡಿಗಳನ್ನು ಮುಚ್ಚಿದ್ದರು. ಇದು ಜನಗಳ ದಿನ. ಅವರು ಅಲೆಗಳಂತೆ ಗುಡುಗುತ್ತಾರೆ ಎಂಬ ಸುದ್ದಿ ಇತ್ತಲ್ಲ, ಆ ಕಾರಣದಿಂದಾಗಿ ಆಸ್ತಿವಂತ ವರ್ಗಗಳೆಲ್ಲಾ ಮನೆಗಳಲ್ಲೇ ಉಳಿದಿದ್ದವು.

ಆಗಲೇ ಐಬೀರಿಯನ್ ಮಹಾದ್ವಾರದ ಮೂಲಕ ಜನತೆಯ ಮಹಾನದಿ ಹರಿದು ಬರುತ್ತಿತ್ತು. ಆಗಲೇ ಕೆಂಪುಚೌಕದಲ್ಲಿ ಜನಜಂಗುಳಿ ಸೇರಲಾರಂಭಿಸಿತ್ತು. ಐಬೀರಿಯನ್ ಚರ್ಚಿನ ಮುಂದೆ ಯಾರೇ ಹಾದುಹೋದರೂ ಎದೆಯ ಮೇಲೆ ಶಿಲುಬೆಯ ಗುರುತು

ಮಾಡಿಕೊಳ್ಳುವುದು ವಾಡಿಕೆ. ಇಂದೇಕೋ ಯಾರೂ ಚರ್ಚನ್ನು ಗಮನಿಸಿದಂತೆಯೇ ತೋರಲಿಲ್ಲ!

ನಾವು ಕ್ರೆಮ್ಲಿನ್ ಗೋಡೆಯ ಬಳಿ ಹೋಗಿ ಮಣ್ಣಿನ ಬೆಟ್ಟದ ಮೇಲೆ ನಿಂತೆವು. ಅಲ್ಲಿ ಸೇರಿದ್ದವರಲ್ಲಿ ಎತ್ತರವಾಗಿ, ಸರಳವಾಗಿ ಕಾಣುತ್ತಿದ್ದ ಗಡ್ಡಧಾರಿ, ಸೌಮ್ಯ ಮುಖದ ವ್ಯಕ್ತಿಯೊಬ್ಬನಿದ್ದ. ಆತ ಮಾಸ್ಕೋದ ಕಮಾಂಡೆಂಟ್ ಆಗಿ ಆಯ್ಕೆಯಾಗಿದ್ದ ಒಬ್ಬ ಸಾಧಾರಣ ಸೈನಿಕ.

ಕೆಂಪುಚೌಕಕ್ಕೆ ಬರುವ ಎಲ್ಲ ದಾರಿಗಳಿಂದಲೂ ಬಡವರು, ದುಡಿಯುವ ಜನ, ಸಾವಿರ ಸಾವಿರಗಟ್ಟಲೆ ಬಂದು ತುಂಬಿಕೊಳ್ಳುತ್ತಿದ್ದರು. ಒಂದು ಮಿಲಿಟರಿ ಬ್ಯಾಂಡು 'ಇಂಟರ್‌ನ್ಯಾಷನಲ್' ಗೀತೆಯನ್ನು ನುಡಿಸುತ್ತಾ ಬಂತು. ತನ್ನಿಂದ ತಾನೇ ಇಡಿಯ ಜನಸಮೂಹ ನಿಧಾನವಾಗಿ, ಗಂಭೀರವಾಗಿ, ಸಾಗರದ ಮೇಲೆ ಸುಳಿಯುವ ಗಾಳಿಯಂತೆ ಆ ಹಾಡನ್ನು ಪಸರಿಸುತ್ತಾ ಹೋಯಿತು. ಕ್ರೆಮ್ಲಿನ್‌ನ ಗೋಡೆಗಳ ಉದ್ದಕ್ಕೂ ಬೃಹದಾಕಾರದ ಚಿನ್ನದ ಬಣ್ಣದ ಅಕ್ಷರಗಳಲ್ಲಿ ಬರೆದ ಬ್ಯಾನರ್‌ಗಳು ಇಳಿಬಿದ್ದಿದ್ದವು. ಅವುಗಳ ಮೇಲೆ 'ಜಾಗತಿಕ ಸಮಾಜವಾದಿ ಕ್ರಾಂತಿಯ ಹರಿಕಾರರು' ಎಂದು ಮತ್ತು 'ವಿಶ್ವದ ಕಾರ್ಮಿಕರ ಭ್ರಾತೃತ್ವ ಚಿರಾಯುವಾಗಲಿ' ಎಂದೂ ಬರೆಯಲಾಗಿತ್ತು.

ಒಂದು ಕುಳಿರ್ಗಾಳಿ ಬೀಸಿ ಬ್ಯಾನರ್‌ಗಳನ್ನು ಮೇಲೆತ್ತಿತು. ಈಗ ನಗರದ ಮೂಲೆಮೂಲೆಗಳಿಂದ ವಿವಿಧ ಕಾರ್ಖಾನೆಗಳ ದುಡಿಯುವ ಜನ ತಮ್ಮ ಸಂಗಾತಿಗಳ ಶವಗಳನ್ನು ಮೆರವಣಿಗೆಯಲ್ಲಿ ತರಲಾರಂಭಿಸಿದರು. ದ್ವಾರದ ಮೂಲಕ ಅವರು ತಮ್ಮ ಬ್ಯಾನರ್‌ಗಳೊಂದಿಗೆ, ಶವಪೆಟ್ಟಿಗೆಗಳೊಂದಿಗೆ ಬಂದರು. ಅವು ಸಮತಟ್ಟಾಗಿಲ್ಲದ ಹಲಗೆಗಳಲ್ಲಿ ಮಾಡಿದ ಒರಟಾದ ಪೆಟ್ಟಿಗೆಗಳು. ಅವುಗಳಿಗೆ ಕೆಂಪು ಬಣ್ಣವನ್ನು ಬಳಿಯಲಾಗಿತ್ತು. ಅದನ್ನು ಹೆಗಲ ಮೇಲೆ ಹೊತ್ತು ತರುತ್ತಿದ್ದವರೂ ಒರಟು ಜನ. ಅವರ ಮುಖದಲ್ಲಿ ಕಣ್ಣೀರ ಧಾರೆ ಹರಿದುಹೋಗುತ್ತಿತ್ತು. ಅವರ ಹಿಂದೆ ಕೆಲವು ಹೆಣ್ಣು ಮಕ್ಕಳು ಅಳುತ್ತಾ, ಕೂಗುತ್ತಾ ಬಂದರೆ, ಇನ್ನು ಕೆಲವರು ಬಿಳಿಚಿಕೊಂಡ, ನಿರ್ಜೀವ ಮುಖಹೊತ್ತು ಮರಗಟ್ಟಿದ ಶರೀರಗಳಂತೆ ನಡೆದು ಬರುತ್ತಿದ್ದರು. ಕೆಲವು ಶವಪೆಟ್ಟಿಗೆಗಳ ಮುಚ್ಚಳವನ್ನು ತೆಗೆದು ಹಿಂದೆ ಬರುವವರು ಕೈಲಿ ಹಿಡಿದು ಬರುತ್ತಿದ್ದರು. ಕೆಲವಕ್ಕೆ ಚಿನ್ನದ ಅಥವಾ ಬೆಳ್ಳಿಯ ಬಣ್ಣದ ಬಟ್ಟೆಯನ್ನು ಹೊದಿಸಿದ್ದರು. ಕೃತಕ ಹೂವುಗಳ ಗುಚ್ಛಗಳು ಅನೇಕವಿದ್ದವು. ಬ್ಯಾಂಡ್‌ಸೆಟ್ ಒಂದು ಶವಯಾತ್ರೆಯ ಸಂಗೀತವನ್ನು ನುಡಿಸುತ್ತಿತ್ತು. ದೊಡ್ಡ ಜನಸಮುದಾಯದ ಗುಡುಗಿನಂತಹ ಹಾಡಿನೊಂದಿಗೆ, ತಲೆಗಳಿಂದ ಹ್ಯಾಟುಗಳನ್ನು ತೆಗೆದು ಕೈಯಲ್ಲಿ ಹಿಡಿದು ಪೆರೇಡಿನಲ್ಲಿ ಭಾಗವಹಿಸಿದ್ದ ಆ ಜನ ಬಿಕ್ಕುತ್ತಾ, ಗಂಟಲು ತುಂಬಿ ಒಂದು ಗಡುಸಾದ ಧ್ವನಿಯಲ್ಲಿ ಹಾಡುತ್ತಿದ್ದರು.

ಕಾರ್ಮಿಕರ ಮೆರವಣಿಗೆಗಳ ಮಧ್ಯದಲ್ಲಿಯೇ ಸೈನಿಕರ ಮೆರವಣಿಗೆಗಳು ಬಂದವು. ಅಶ್ವಾರೋಹಿ ಸೈನಿಕರು ಸೆಲ್ಯೂಟ್ ಮಾಡುತ್ತಾ ಸವಾರಿ ಮಾಡಿ ಬಂದರು. ಫಿರಂಗಿದಳಗಳೂ ಬಂದವು. ಅವರ ಬ್ಯಾನರ್‌ಗಳಲ್ಲಿ 'ಮೂರನೇ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಸಂಘಟನೆ ಚಿರಾಯುವಾಗಲಿ' ಮತ್ತು 'ಪ್ರಾಮಾಣಿಕ, ಸಾರ್ವತ್ರಿಕ, ಜನತಾಂತ್ರಿಕ ಶಾಂತಿ ಬೇಕೇ ಬೇಕು' ಎಂಬ ಘೋಷಣೆಗಳನ್ನು ಬರೆಯಲಾಗಿತ್ತು.

ಮೆರವಣಿಗೆಯಲ್ಲಿ ಬಂದವರು ಸಮಾಧಿಯನ್ನು ತಲುಪಿದರು. ಶವದ ಪೆಟ್ಟಿಗೆಗಳನ್ನು

ಹೊತ್ತವರು ಹಳ್ಳದಲ್ಲಿ ಇಳಿದರು. ಅವರಲ್ಲಿ ಅನೇಕರು ಗಟ್ಟಿಮುಟ್ಟಾಗಿದ್ದ ದುಡಿಯುವ ವರ್ಗದ ಹೆಂಗಸರು. ಸತ್ತವರ ಹಿಂದೆ ಇನ್ನೂ ಅನೇಕ ಹೆಂಗಸರು ಬಂದರು. ತರುಣಿಯರು, ದುಃಖಿತಪ್ತರು, ವಯಸ್ಸಾಗಿ ಚರ್ಮ ಸುಕ್ಕುಗಟ್ಟಿದ ಅಜ್ಜಿಯರು, ಗಾಯಗೊಂಡ ಮೂಕಪ್ರಾಣಿಗಳಂತೆ ಸದ್ದು ಮಾಡುತ್ತಾ ತಮ್ಮ ಮಕ್ಕಳನ್ನೋ ಗಂಡಂದಿರನ್ನೋ ಅನುಸರಿಸಿ 'ಸೋದರರ ಸಮಾಧಿ'ಗೆ ಬಂದವರು. ಸಹಾನುಭೂತಿಯ ಕೈಗಳು ಅವರನ್ನು ಸಮಾಧಾನ ಮಾಡಲೆತ್ನಿಸಿದಾಗ ಗೊಳೋ ಎಂದು ಅತ್ತರು.

ಬಡವರು ಒಬ್ಬರನ್ನೊಬ್ಬರು ಪ್ರೀತಿಸುವುದು ಹಾಗೆಯೇ !

ಇಡೀ ದಿನ ಶವಯಾತ್ರೆಗಳು ಬರುತ್ತಲೇ ಇದ್ದವು. ಆಶಾವಾದದ ಭವಿಷ್ಯ ನುಡಿಗಳನ್ನು ಸಾರುವ ಬ್ಯಾನರ್‌ಗಳ ನದಿಯೇ ಹರಿದುಬಂತು. ಒಂದಾದ ಮೇಲೊಂದರಂತೆ ಐದುನೂರು ಶವದ ಪೆಟ್ಟಿಗೆಗಳನ್ನೂ ಹಳ್ಳದಲ್ಲಿ ಇಳಿಸಲಾಯಿತು. ಸಂಜೆಯಾಯಿತು. ಬ್ಯಾನರ್‌ಗಳು ಹಾರಾಡುತ್ತಾ ಬಂದವು. ಜನ ಹಾಡುತ್ತಲೇ ಇದ್ದರು. ಬ್ಯಾಂಡ್‌ಸೆಟ್ ಶವಯಾತ್ರೆಯ ಸಂಗೀತವನ್ನು ನುಡಿಸುತ್ತಲೇ ಇತ್ತು. ಸಮಾಧಿಯ ಪಕ್ಕದಲ್ಲಿ ಕೊಂಬೆಗಳನ್ನು ಚಾಚಿಕೊಂಡಿದ್ದ ವೃಕ್ಷಗಳಿದ್ದವು. ಎಲ್ಲಾ ಎಲೆಗಳೂ ಉದುರಿದ್ದ ಆ ಮರಗಳ ಮೇಲೆ ನೇತು ಹಾಕಿದ ಶವದ ಮೇಲಿನ ಪುಷ್ಪಗುಚ್ಛಗಳು ವಿಚಿತ್ರವಾದ ಹೂಗೊಂಚಲುಗಳಂತೆ ಕಾಣುತ್ತಿದ್ದವು. ಇನ್ನೂರು ಜನ ಒಟ್ಟಿಗೆ ಸನಿಕೆಗಳಲ್ಲಿ ಮಣ್ಣು ತುಂಬಲು ಆರಂಭಿಸಿದಾಗ ಮಳೆ ಶುರುವಾಗಿ ಶವದ ಪೆಟ್ಟಿಗೆಗಳ ಮೇಲೆ ಹನಿ ಬಿದ್ದ ಶಬ್ದ ಕೇಳುತ್ತಿತ್ತು.

ರಸ್ತೆ ದೀಪಗಳು ಹೊತ್ತಿಕೊಂಡವು. ಕಡೆಯ ಬ್ಯಾನರ್‌ಗಳು ಸಾಗಿಹೋದವು. ಬಿಕ್ಕುವ ಹೆಂಗಸರು ಗಾಢ ವೇದನೆಯಿಂದ ಹಿಂದೆ ತಿರುಗಿ ನೋಡುತ್ತಾ ಹೋದರು. ಶ್ರಮಜೀವಿಗಳ ಅಲೆಯ ಉಬ್ಬರ ಕೆಂಪುಚೌಕದಲ್ಲಿ ಇಳಿಯುತ್ತಾ ಹೋಯಿತು.

ನನಗೆ ಇದ್ದಕ್ಕಿದ್ದಂತೆ ಅನ್ನಿಸಿತು, ಇನ್ನು ಧರ್ಮಭೀರು ರಷ್ಯನ್ನರಿಗೆ ಸ್ವರ್ಗಕ್ಕೆ ಕಳಿಸಿಕೊಡಲು ಪಾದ್ರಿಗಳ ಅವಶ್ಯಕತೆ ಇಲ್ಲ. ಯಾವುದೇ ಸ್ವರ್ಗಕ್ಕಿಂತ ಉಜ್ವಲವಾದ ಸಾಮ್ರಾಜ್ಯವನ್ನು ಅವರು ಭೂಮಿಯ ಮೇಲೆಯೇ ಕಟ್ಟುತ್ತಿದ್ದಾರೆ ಮತ್ತು ಅದಕ್ಕಾಗಿ ಪ್ರಾಣಕೊಡುವುದೇ ಭವ್ಯವಾದದ್ದು, ದಿವ್ಯವಾದದ್ದು...!

## ಅಧ್ಯಾಯ – 11

# ಅಧಿಕಾರದ ಸ್ಥಾಪನೆ

### *ರಷ್ಯಾದ ಜನತೆಯ ಹಕ್ಕುಗಳ ಘೋಷಣೆ*

*...ಈ ವರ್ಷದ ಜೂನ್ ತಿಂಗಳಲ್ಲಿ ನಡೆದ ಸೋವಿಯತ್‌ಗಳ ಪ್ರಥಮ ಮಹಾಧಿವೇಶನದಲ್ಲಿ ರಷ್ಯಾದ ಜನತೆಯ ಸ್ವಯಂ ನಿರ್ಣಯದ ಹಕ್ಕನ್ನು ಘೋಷಿಸಲಾಗಿತ್ತು. ನವೆಂಬರ್‌ನಲ್ಲಿ ಜರುಗಿದ ಸೋವಿಯತ್‌ಗಳ ಎರಡನೆಯ ಮಹಾಧಿವೇಶನವು ರಷ್ಯಾದ ಜನತೆಯ ಈ ಹಕ್ಕನ್ನು ಹೆಚ್ಚು ನಿರ್ಣಾಯಕವಾಗಿಯೂ, ಖಚಿತವಾಗಿಯೂ ಎತ್ತಿ ಹಿಡಿದಿದೆ.*

*ಈ ಮಹಾಧಿವೇಶನಗಳ ಸಂಕಲ್ಪವನ್ನು ಕಾರ್ಯರೂಪಕ್ಕಿಳಿಸುತ್ತಾ, ಜನತೆಯ ಕಮಿಸಾರ್‌ಗಳ ಮಂಡಳಿಯು, ರಾಷ್ಟ್ರೀಯತೆಗಳ ಕುರಿತಾದ ತನ್ನ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಈ ಕೆಳಗಿನ ನೀತಿ ನಿರ್ದೇಶನಗಳನ್ನು ಆಧಾರವಾಗಿ ರೂಪಿಸಿದೆ.*

1. *ರಷ್ಯಾದ ರಾಷ್ಟ್ರೀಯತೆಗಳ ಸಾರ್ವಭೌಮತೆ ಮತ್ತು ಅವುಗಳ ನಡುವೆ ಸಮಾನತೆ.*
2. *ರಷ್ಯಾದ ರಾಷ್ಟ್ರೀಯತೆಗಳಿಗೆ ಮುಕ್ತವಾದ ಸ್ವಯಂ ನಿರ್ಣಯದ ಹಕ್ಕು ಇರುತ್ತದೆ. ಈ ಹಕ್ಕು ರಷ್ಯಾದಿಂದ ಪ್ರತ್ಯೇಕವಾಗುವುದಕ್ಕೂ, ಸ್ವತಂತ್ರ ರಾಷ್ಟ್ರವನ್ನು ರಚಿಸಿ ಕೊಳ್ಳುವುದಕ್ಕೂ ಅನ್ವಯಿಸುತ್ತದೆ.*
3. *ಎಲ್ಲ ರೀತಿಯ ರಾಷ್ಟ್ರೀಯ, ಧಾರ್ಮಿಕ–ಸವಲತ್ತುಗಳನ್ನೂ, ತಾರತಮ್ಯಗಳನ್ನೂ ರದ್ದುಪಡಿಸಲಾಗಿದೆ.*
4. *ರಷ್ಯಾದ ಗಡಿಯೊಳಗಿನ ಎಲ್ಲಾ ರಾಷ್ಟ್ರೀಯ ಹಾಗೂ ಬುಡಕಟ್ಟು ಅಲ್ಪಸಂಖ್ಯಾತ ಸಮುದಾಯಗಳ ಮುಕ್ತ ಅಭಿವೃದ್ಧಿಯನ್ನು ಖಾತ್ರಿಪಡಿಸುವುದು.*
   *ರಾಷ್ಟ್ರೀಯತೆಗಳ ಆಯೋಗವನ್ನು ರಚಿಸಿದ ಕೂಡಲೇ ಇದಕ್ಕೆ ಸಂಬಂಧಿಸಿದ ಡಿಕ್ರಿಗಳನ್ನು ಸಿದ್ಧಪಡಿಸಲಾಗುವುದು.*

*ರಷ್ಯನ್ ಗಣರಾಜ್ಯದ ಹೆಸರಿನಲ್ಲಿ*
*ಯುಸ್ಲೊವ್ ಜುಗಾಶ್‌ವಿಲಿ – ಸ್ಟಾಲಿನ್*

*ರಾಷ್ಟ್ರೀಯತೆಗಳ ಜನತಾ ಕಮಿಸಾರ್*
*ವಿ. ಉಲ್ಯಾನೋವ್ (ಲೆನಿನ್)*
*ಜನತೆಯ ಕಮಿಸಾರ್‌ಗಳ ಮಂಡಳಿಯ ಅಧ್ಯಕ್ಷರು.*

ಇದರ ನಂತರ ಉಕ್ರೇನ್ ಮತ್ತು ಫಿನ್‌ಲೆಂಡ್‌ಗಳು ತಾವು ಸ್ವತಂತ್ರ ಗಣರಾಜ್ಯಗಳು ಎಂದು ಘೋಷಿಸಿಕೊಂಡವು. ಸೈಬೀರಿಯಾ, ಕಾಕಸಸ್‌ಗಳಲ್ಲಿ ಸ್ವತಂತ್ರ ಸರ್ಕಾರಗಳು ಉದಯಿಸಿದವು. ಪೋಲಿಶ್ ಮಿಲಿಟರಿ ಸಮಿತಿಯು ರಷ್ಯನ್ ಸೈನ್ಯದಲ್ಲಿದ್ದ ತನ್ನ ತುಕಡಿಗಳನ್ನೆಲ್ಲಾ ತೆಗೆದುಕೊಂಡು ಹೊರಟುಹೋಗಿ, ಸೈನಿಕರ ಸಮಿತಿಗಳನ್ನು ರದ್ದುಪಡಿಸಿ ಉಕ್ಕಿನ ಶಿಸ್ತನ್ನು ಹೇರಿತು. ಈ ಎಲ್ಲಾ ಸರ್ಕಾರಗಳಲ್ಲೂ ಸಾಮಾನ್ಯವಾದ ಎರಡು ಅಂಶಗಳೆಂದರೆ – ಮೊದಲನೆಯದಾಗಿ ಇದರ ನೇತೃತ್ವ ವಹಿಸಿದ್ದವರು ಆಸ್ತಿವಂತ ವರ್ಗಗಳು ಮತ್ತು ಇವರೆಲ್ಲರಿಗೂ ಬೋಲ್ಶೆವಿಕರ ಬಗ್ಗೆ ಗಾಢ ದ್ವೇಷವೂ ಭಯವೂ ಇತ್ತು.

ಎಲ್ಲಾ ಅಸ್ತವ್ಯಸ್ತತೆ, ಅರಾಜಕತೆಯ ನಡುವೆಯೇ ಜನತಾ ಕಮಿಸಾರ್‌ಗಳ ಮಂಡಳಿಯು ಹೊಸ ಸಮಾಜವಾದಿ ವ್ಯವಸ್ಥೆಯ ಚೌಕಟ್ಟನ್ನು ನಿರ್ಮಿಸಿತು. ಸಾಮಾಜಿಕ ವಿಮೆ, ಕೈಗಾರಿಕೆಗಳ ಮೇಲೆ ಕಾರ್ಮಿಕರ ನಿಯಂತ್ರಣ, ಭೂಸಮಿತಿಗಳ ಕುರಿತಾದ ನಿಯಮಾವಳಿಗಳು, ಬಿರುದುಗಳು ಹಾಗೂ ಶ್ರೇಣಿಗಳ ರದ್ದತಿ, ಹಳೆಯ ನ್ಯಾಯಾಲಯಗಳ ರದ್ದತಿ ಮತ್ತು ಹೊಸ ಟ್ರಿಬ್ಯೂನಲ್‌ಗಳ ರಚನೆ ಇವುಗಳಿಗೆಲ್ಲಾ ಸಂಬಂಧಿಸಿದಂತೆ ಹೊಸ ಡಿಕ್ರಿಗಳನ್ನು ಹೊರಡಿಸಲಾಯಿತು. ಒಂದಾದ ಮೇಲೊಂದರಂತೆ ಅನೇಕ ಸೇನೆಗಳು ಶುಭಾಶಯಗಳನ್ನು ಕಳಿಸುತ್ತಾ ಹೋದವು.

ಒಂದು ದಿನ ಸ್ಮೋಲ್ನಿಯ ಎದುರು ನಾನು ಒಂದು ಚಿಂದಿ ಬಟ್ಟೆಗಳಲ್ಲಿ ಇರುವ, ಆಗತಾನೆ ಯುದ್ಧದ ಕಂದಕಗಳಿಂದ ಬಂದ ಸೇನಾ ತುಕಡಿಯೊಂದನ್ನು ನೋಡಿದೆ. ಅವರು ಸ್ಮೋಲ್ನಿ ಭವನದತ್ತ ದೇವರೇ ಅಲ್ಲಿದ್ದಾನೋ ಎಂಬಂತೆ ಮೆಚ್ಚುಗೆ, ಗೌರವಗಳಿಂದ ನೋಡುತ್ತಿದ್ದರು. ಅಲ್ಲಿನ ಬಾಗಿಲುಗಳ ಮೇಲೆ ಇದ್ದ ಝಾರ್ ಚಕ್ರವರ್ತಿಯ ಆಳ್ವಿಕೆಯ ಲಾಂಛನಗಳತ್ತ ಬೊಟ್ಟು ಮಾಡಿ ಅವರು ನಗುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ರೆಡ್‌ಗಾರ್ಡ್‌ಗಳು ಬಂದರು. ಸೈನಿಕರು ಅವರ ಬಗ್ಗೆ ಕೇಳಿದ್ದರೇ ವಿನಾ ಕಂಡಿರಲಿಲ್ಲವಾದ್ದರಿಂದ ಕುತೂಹಲದಿಂದ ಅವರತ್ತ ನೋಡಿದರು. ಬೆನ್ನು ತಟ್ಟುತ್ತಾ ಅರ್ಧ ತಮಾಷೆ, ಅರ್ಧ ಅಭಿಮಾನದಿಂದ ನಗುತ್ತಿದ್ದರು...

ಇನ್ನು ಹಂಗಾಮಿ ಸರ್ಕಾರ ಅಸ್ತಿತ್ವದಲ್ಲಿರಲಿಲ್ಲ. ನವೆಂಬರ್ ಹದಿನೈದರಿಂದ ಚರ್ಚಿನ ಪಾದ್ರಿಗಳು ಸಹ ಸರ್ಕಾರದ ಹೆಸರಿನಲ್ಲಿ ಪ್ರಾರ್ಥನೆ ಮಾಡುವುದನ್ನು ನಿಲ್ಲಿಸಿಬಿಟ್ಟರು. ಆದರೆ ಲೆನಿನ್ ಸ್ವತಃ ತ್ಸೆ–ಇ–ಕಾ ಮುಂದೆ ಹೇಳಿದಂತೆ ಇದು 'ಅಧಿಕಾರದ ಸ್ಥಾಪನೆಯ ಆರಂಭ ಅಷ್ಟೇ.' ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡರೂ ವಿರೋಧ ಪಕ್ಷಗಳಿಗೆ ಆರ್ಥಿಕ ವ್ಯವಸ್ಥೆಗೆ ಒಳಗಿನಿಂದಲೇ ಅಡೆತಡೆಯೊಡ್ಡುವಷ್ಟು ಸಂಘಟನಾ ಸಾಮರ್ಥ್ಯವಿತ್ತು. ಉದಾಹರಣೆಗೆ, ಬ್ಯಾಂಕ್ ಮುಷ್ಕರಗಳು ಸುಸಂಘಟಿತವಾಗಿದ್ದು ಅದಕ್ಕೆ ಬೇಕಾದ ಆರ್ಥಿಕ ನೆರವನ್ನು ಬ್ಯಾಂಕರ್‌ಗಳು, ವರ್ತಕರು ಒದಗಿಸುತ್ತಿದ್ದರು. ಬೋಲ್ಶೆವಿಕರು ಸರ್ಕಾರಿ ಉಪಕರಣವನ್ನು ಕೈಗೆತ್ತಿಕೊಳ್ಳಲಾಗದಂತೆ ಹೆಜ್ಜೆಹೆಜ್ಜೆಗೂ ಪ್ರತಿರೋಧವಿತ್ತು. ವಿದೇಶಾಂಗ ಇಲಾಖೆಯಲ್ಲಿ ಟ್ರಾಟ್‌ಸ್ಕಿಯನ್ನೇ ಕೂಡಿಹಾಕಿದ್ದರು. ಬಲವಂತವಾಗಿ ಬಾಗಿಲು ಒಡೆದು ಪ್ರವೇಶಿಸಿದಾಗ ಅಲ್ಲಿನ ಉದ್ಯೋಗಿಗಳು ರಾಜೀನಾಮೆ ಕೊಟ್ಟುಬಿಟ್ಟರು. ಆತನಿಗೆ ಸುಲಭದಲ್ಲಿ ಹಳೆಯ ದಾಖಲೆಗಳನ್ನು, ವಿದೇಶಿ ಸರ್ಕಾರಗಳ ಜೊತೆಗಿನ ಕರಾರುಗಳನ್ನು ಅವರು ಒಪ್ಪಿಸಲಿಲ್ಲ. ಶ್ಲಿಯಾಪ್ನಿಕೊವ್‌ಗೆ ಇಲಾಖೆಯಲ್ಲಿ ಚಳಿಗಾಲದಲ್ಲಿ ಬೆಂಕಿಗೂಡನ್ನು ಹೊತ್ತಿಸಲು ಸಹ ಕಛೇರಿಯಲ್ಲಿ ಯಾರೂ ಇರಲಿಲ್ಲ. ಅವನಿಗೆ ಯಾರೂ ಆತನ ಕಛೇರಿಯನ್ನೂ

ತೋರಿಸಲಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಕಮಿಸಾರ್ ಆಗಿ ನೇಮಕಗೊಂಡಿದ್ದ ಅಲೆಗ್ಸಾಂಡ್ರಾ ಕೊಲಂತಾಯ್ ಅವರಿಗೆ ಮುಷ್ಕರದಿಂದಲೇ ಸ್ವಾಗತ ದೊರೆತದ್ದು. ಎಲ್ಲಾ ಮಹಾನಗರಗಳ ಬಡವರು, ಅನಾಥಾಶ್ರಮ, ಅಬಲಾಶ್ರಮಗಳಲ್ಲಿ ವಾಸಮಾಡುತ್ತಿದ್ದವರು ತಮ್ಮ ಮನವಿ ಹೊತ್ತ ಪ್ರತಿನಿಧಿಗಳನ್ನು ಆಕೆಯ ಬಳಿ ಕಳಿಸಿದರು. ಕೈಕಾಲು ಊನವಾದ ಜನ, ಚಳಿಯಲ್ಲಿ ನೀಲಿಗಟ್ಟಿದ ಮುಖದ ಮಕ್ಕಳು ಕಟ್ಟಡವನ್ನು ಸುತ್ತುವರೆದಿದ್ದರು. ಕಣ್ಣಲ್ಲಿ ನೀರು ಸುರಿಯುತ್ತಿದ್ದ ಮೇಡಂ ಕೊಲಂತಾಯ್ ಬೀಗದ ಕೈ ಒಪ್ಪಿಸದಿದ್ದ ಉದ್ಯೋಗಿಗಳನ್ನು ದಸ್ತಗಿರಿ ಮಾಡಿಸಿದರು. ಬೀಗದ ಕೈ ಸಿಕ್ಕಾಗ ನೋಡಿದರೆ ಹಳೆಯ ಸಚಿವೆ ಕೌಂಟೆಸ್ ಪನೀನಾ ಖಜಾನೆಯನ್ನು ಖಾಲಿ ಮಾಡಿದ್ದಳು!

ಕೃಷಿ ಇಲಾಖೆಯಲ್ಲಿ, ಸರಬರಾಜು, ಹಣಕಾಸು ಇಲಾಖೆ ಎಲ್ಲ ಕಡೆ ಒಂದೇ ಕಥೆ. ಕೆಲಸವನ್ನೂ, ಪಿಂಚಣಿಯನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂದು ಹೆದರಿಸಿದರೂ ಕೆಲವರು ವಾಪಸಾಗಲಿಲ್ಲ. ವಾಪಸಾದವರು ಒಳಗಿನಿಂದಲೇ ಕೆಲಸ ಹಾಳುಮಾಡಲು ಬಂದಂಥವರು. ಬುದ್ಧಿಜೀವಿ ವರ್ಗ ಹೆಚ್ಚುಕಡಿಮೆ ಬೋಲ್ಶೆವಿಕ್ ವಿರೋಧಿಯಾಗಿದ್ದರಿಂದ, ಹೊಸ ಜನರನ್ನು ಬದಲಿಯಾಗಿ ನೇಮಕ ಮಾಡುವುದೂ ಸಾಧ್ಯವಿರಲಿಲ್ಲ.

ಖಾಸಗಿ ಬ್ಯಾಂಕ್‌ಗಳು ಹಠಮಾರಿಗಳಂತೆ ವ್ಯವಹಾರವನ್ನು ಸಂಪೂರ್ಣವಾಗಿ ನಿಲ್ಲಿಸಿದ್ದವು. ಆದರೆ ಬೇಕಾದವರೊಂದಿಗೆ ಹಿಂಬಾಗಿಲಿನ ವ್ಯವಹಾರ ನಡೆದೇ ಇತ್ತು. ಸ್ಟೇಟ್ ಬ್ಯಾಂಕ್ ಉದ್ಯೋಗಿಗಳದ್ದೂ ಸಂಪೂರ್ಣ ಅಸಹಕಾರ. ಆದರೆ ಅವರು ವಿಮೋಚನಾ ಸಮಿತಿಗೂ ಡ್ಯೂಮಾಗೂ ಬೇಕಾದಷ್ಟು ಹಣವನ್ನು ತಲುಪಿಸುತ್ತಿದ್ದರು.

ರೆಡ್‌ಗಾರ್ಡ್‌ಗಳ ತುಕಡಿಯೊಂದಿಗೆ ಸರ್ಕಾರದ ವೆಚ್ಚಕ್ಕೆ ಹಣ ಕೇಳಲು ಒಬ್ಬ ಕಮಿಸಾರ್ ಬಂದಿದ್ದ. ಮೊದಲಬಾರಿ ಡ್ಯೂಮಾ ಸದಸ್ಯರು, ಮೆನ್ಶೆವಿಕರು, ಸೋಷಲಿಸ್ಟ್ ರೆವಲ್ಯೂಷನರಿಗಳು ಇದರ ಪರಿಣಾಮ ನೆಟ್ಟಗಾಗುವುದಿಲ್ಲವೆಂದು ಹೆದರಿಸಿ ಕಳಿಸಿದರು. ಎರಡನೇ ಬಾರಿ ಅವರು ಪತ್ರದಲ್ಲಿ ತೋರಿಸಿದ ತಾಂತ್ರಿಕದೋಷಗಳಿಗೆ ಹಿಂಜರಿದು ಅವನು ಸುಮ್ಮನೆ ವಾಪಸಾದ. ವಿದೇಶಗಳೊಂದಿಗೆ ಇದ್ದ ಹಣಕಾಸು ವ್ಯವಹಾರದ ಎಲ್ಲಾ ದಾಖಲೆಗಳನ್ನು ಸಹ ನಾಶಮಾಡಲಾಗಿತ್ತು.

ನಗರಸಭೆಯಲ್ಲಿ ನಾಗರಿಕ ಸೌಲಭ್ಯಗಳನ್ನು ನೀಡಬೇಕಾಗಿದ್ದ ನೌಕರರು ಸಹ ಸಂಪೂರ್ಣ ಅಸಹಕಾರವನ್ನು ಪ್ರದರ್ಶಿಸಿದರು. ನಗರದ ಜನತೆಯ ದಾರುಣ ಪರಿಸ್ಥಿತಿಯನ್ನು ನೋಡಿ ಬೋಲ್ಶೆವಿಕರು ಆ ಸೇವೆಗಳನ್ನು ನಿಯಂತ್ರಿಸಲು ಯತ್ನಿಸಿದಾಗ ನೌಕರರು ಕೂಡಲೇ ಮುಷ್ಕರ ಹೂಡಿದರು.

ಮಿಲಿಟರಿ ಕೇಂದ್ರ ಕಛೇರಿಯಲ್ಲೂ, ಯುದ್ಧದ ಇಲಾಖೆಯಲ್ಲೂ ಸಾಮಾನ್ಯ ಉದ್ಯೋಗಿಗಳು ಕೆಲಸ ಮಾಡಲು ಒಪ್ಪಿದರೂ, ಮೇಲಧಿಕಾರಿಗಳು ಎಲ್ಲ ರೀತಿಯಲ್ಲೂ ಅಡೆತಡೆಯೊಡ್ಡುತ್ತಿದ್ದರು. ಕಡೆಗೆ ರಣಾಂಗಣಕ್ಕೆ ನೆರವು ನೀಡುವುದನ್ನೂ ಉಪೇಕ್ಷೆ ಮಾಡಿದರು. ರೈಲ್ವೆ ಕಾರ್ಮಿಕರ ಸಂಘದ ನಾಯಕರಂತೂ ಸ್ವಲ್ಪವೂ ಸಹಕರಿಸುತ್ತಿರಲಿಲ್ಲ. ಪ್ರತಿಯೊಂದು ರೈಲು ಪೆತ್ರೋಗ್ರಾಡ್‌ನ್ನು ಬಿಡುವಾಗಲೂ ರೈಲ್ವೆ ಅಧಿಕಾರಿಗಳನ್ನು ಹೆದರಿಸಬೇಕಾಗುತ್ತಿತ್ತು ಅಥವಾ ಬಂಧಿಸಬೇಕಾಗುತ್ತಿತ್ತು. ಅವರು ತಿರುಗಿಬಿದ್ದು ಸಾರ್ವತ್ರಿಕ ರೈಲ್ವೆ ಮುಷ್ಕರದ ಬೆದರಿಕೆ ಹಾಕಿದರು.

ಸ್ಮೋಲ್ನಿಯಲ್ಲಿನ ಬೋಲ್ಶೆವಿಕ್ ಸರ್ಕಾರ ಅಸಹಾಯಕವಾಗಿತ್ತು. ಕಾರ್ಖಾನೆಗಳಲ್ಲಿ

ಇಂಧನ ಮುಗಿಯುತ್ತಾ ಬಂದಿದೆ. ಡಿಸೆಂಬರ್‌ನಿಂದ ರೈಲುಗಳನ್ನು ಓಡಿಸುವುದು ಸಾಧ್ಯವೇ ಇಲ್ಲ ಎನ್ನಲಾಗಿದೆ. ಪೆತ್ರೋಗ್ರಾಡ್‌ನಲ್ಲಿ ಇರುವ ಆಹಾರ ಮೂರು ದಿನಕ್ಕೆ ಸಾಕು ಅಷ್ಟೇ. ಹೊರಗಿನಿಂದ ಆಹಾರ ಪದಾರ್ಥಗಳು ರಾಜಧಾನಿಗೆ ಬರುತ್ತಿಲ್ಲ. ಸೈನ್ಯವೇ ಉಪವಾಸ ಬೀಳುತ್ತಿದೆ. ವಿಮೋಚನಾ ಸಮಿತಿ ಮತ್ತು ನೌಕರರ ಸಂಘಗಳು ಸರ್ಕಾರದ ಆಜ್ಞೆಗಳನ್ನು ಉಲ್ಲಂಘಿಸಿ ಎಂದು ಪ್ರಚೋದಿಸುತ್ತಿದ್ದಾರೆ. ಮಿತ್ರ ರಾಷ್ಟ್ರಗಳ ರಾಯಭಾರ ಕಛೇರಿಗಳು ಸರ್ಕಾರವನ್ನು ದ್ವೇಷಿಸುತ್ತಿದ್ದವು. ಹೊಸ ಹೊಸ ಹೆಸರುಗಳಲ್ಲಿ ಹೊರಬರುವ ವಿರೋಧಿ ಪತ್ರಿಕೆಗಳು ಸರ್ಕಾರದ ವಿರುದ್ಧ ಅವಿರತವಾಗಿ ಲೇವಡಿ ಮಾಡಿದವು.

ಒಂದು ಪತ್ರಿಕೆ "ಸುಲಭವಾಗಿ ಗಳಿಸಿದ ಅಧಿಕಾರವನ್ನು ಬೋಲ್ಶೆವಿಕರು ಉಳಿಸಿಕೊಳ್ಳಲಾರರು. ಇರುವ ಸರ್ಕಾರಿ ಯಂತ್ರವನ್ನು ನಡೆಸುವುದು ಆಗುವುದಿಲ್ಲ. ಹೊಸ ಯಂತ್ರವನ್ನು ಸೃಷ್ಟಿಸಿಕೊಳ್ಳುವ ಶಕ್ತಿಯಿಲ್ಲ. ಮೊನ್ನೆಮೊನ್ನೆಯವರೆಗೂ ಪಕ್ಷವನ್ನು ನಡೆಸಿಕೊಂಡು ಹೋಗುವುದಕ್ಕೇ ಸಾಕಷ್ಟು ಜನವಿಲ್ಲದಿದ್ದ ಈ ಪಕ್ಷ ಸಂಕೀರ್ಣವಾದ ಸರ್ಕಾರಿ ವ್ಯವಹಾರಗಳನ್ನು ನಿರ್ವಹಿಸುವುದಾದರೂ ಹೇಗೆ? ಈ ಸರ್ಕಾರ ಬರೇ ಬೆದರಿಸುತ್ತದೆ. ಹೆಚ್ಚು ಹೆಚ್ಚು ತೀವ್ರಗಾಮಿಯಾಗಿ, ಸಮಾಜವಾದಿಯಾಗಿ ಕಾಣುವ ಡಿಕ್ರಿಗಳನ್ನು ಪುಂಖಾನುಪುಂಖವಾಗಿ ಹೊರಡಿಸುತ್ತದೆ. ಆದರೆ ಒಟ್ಟಿನಲ್ಲಿ ಇದು ಕಾಗದದ ಮೇಲಿನ ಸಮಾಜವಾದವೇ ಹೊರತು, ದಿನನಿತ್ಯದ ಸವಾಲುಗಳನ್ನು ಪರಿಹರಿಸುವಂಥದ್ದಲ್ಲ" ಎಂದಿತು.

ಹಿಂದೆಯೇ ಹೇಳಿದಂತೆ ಒಂದು ಕಾಲದಲ್ಲಿ ರೈಲ್ವೆ ಕಾರ್ಮಿಕರ ಸಂಘಟನೆ ಮುಂದೊಡಗಿನಿಂದ ಎಲ್ಲಾ ಪಕ್ಷಗಳನ್ನೂ ಸೇರಿಸಿ ಸರ್ಕಾರ ರಚಿಸುವ ಕೆಲಸ ಬಹಳಷ್ಟು ಮುಂದುವರೆದಿತ್ತು. ಆದರೆ ಕೆರೆನ್‌ಸ್ಕಿಯ ಪಲಾಯನ ಹಾಗೂ ಸೋವಿಯತ್‌ಗಳ ಸಾರ್ವತ್ರಿಕ ವಿಜಯ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿತು. ಆದರೂ ಜಟಿಲವಾಗಿದ್ದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಷನರಿಗಳು ಮತ್ತೊಮ್ಮೆ ಎಲ್ಲರೂ ಸೇರಿ ಸರ್ಕಾರ ರಚಿಸಬೇಕು ಎಂಬ ಪ್ರಸ್ತಾಪವನ್ನು ಮುಂದಿಟ್ಟರು. ಮಾಸ್ಕೋದಲ್ಲಿ ಎರಡೂ ಕಡೆ ಸಾಯುತ್ತಿರುವವರೂ ನಮ್ಮವರೇ. ಇಲ್ಲಿಯವರೆಗೂ ತಾವು ಬೋಲ್ಶೆವಿಕರೊಂದಿಗೆ ಇದ್ದರೂ, ಇನ್ನು ಮುಂದೆ ಬೋಲ್ಶೆವಿಕರು ಜಂಟಿ ಸರ್ಕಾರಕ್ಕೆ ಒಪ್ಪದಿದ್ದಲ್ಲಿ ತಾವೂ ಸಹ ವಿರೋಧ ಪಕ್ಷಗಳನ್ನು ಸೇರಬೇಕಾಗುತ್ತದೆ ಎಂಬುದು ಅವರ ಕೊನೆಯ ಎಚ್ಚರಿಕೆಯಾಗಿತ್ತು. ಇದನ್ನು ಪರಿಗಣಿಸಿದ ನಂತರ ಬೋಲ್ಶೆವಿಕರ ನಿರ್ಣಯವನ್ನು ಕಮೆನೇವ್ ಪ್ರಕಟಿಸಿದ.

"ತ್ಸೆ – ಇ – ಕಾ, ಹೊಸ ಸರ್ಕಾರದ ರಚನೆಗೆ ಒಪ್ಪುತ್ತದೆ. ಆದರೆ ಇದಕ್ಕೆ ಕೆಲವು ಪೂರ್ವ ನಿಬಂಧನೆಗಳು ಅವಶ್ಯಕ. ಮೊದಲನೆಯದಾಗಿ ನವೆಂಬರ್ ಏಳನೆಯ ತಾರೀಖಿನ ಕ್ರಾಂತಿಗೆ ಮನ್ನಣೆ ನೀಡುವವರು, ರೈತ–ಕಾರ್ಮಿಕ–ಸೈನಿಕ ಸೋವಿಯತ್‌ಗಳಲ್ಲಿ ಇರುವ ಸಮಾಜವಾದಿ ಪಕ್ಷಗಳ ಸರ್ಕಾರ ಅದಾಗಿರಬೇಕು. ಅವರು ಶಾಂತಿ, ಭೂಮಿ ಹಂಚಿಕೆ, ಕಾರ್ಖಾನೆಗಳ ಮೇಲಿನ ಕಾರ್ಮಿಕ ನಿಯಂತ್ರಣದ ಡಿಕ್ರಿಗಳನ್ನು ಒಪ್ಪಬೇಕು.

"ಸರ್ಕಾರ ತ್ಸೆ–ಇ–ಕಾಗೆ ಉತ್ತರದಾಯಿಯಾಗಿರುತ್ತದೆ. ತ್ಸೆ–ಇ–ಕಾದ ಮೂಲ 150 ಸದಸ್ಯರ ಸಂಖ್ಯೆಯನ್ನು ಉಳಿಸಿಕೊಂಡು, ಅಧಿಕವಾಗಿ ಕಾರ್ಮಿಕ ಸೈನಿಕ ಪ್ರತಿನಿಧಿಗಳಿಗೆ 150 ಪ್ರಾತಿನಿಧ್ಯ ಕಲ್ಪಿಸುವುದು. ರೈತರಿಗೆ 75, ರಣಾಂಗಣದ ಸೈನ್ಯಗಳಿಗೆ 80, ಕಾರ್ಮಿಕ

ಸಂಘಗಳಿಗೆ 40, ರೈಲ್ವೆ ಕಾರ್ಮಿಕರಿಗೆ 10, ಅಂಚೆ–ತಂತಿಗೆ 5, ರಾಜಧಾನಿಯ ಡ್ಯೂಮಾದ ಸಮಾಜವಾದಿ ಪಕ್ಷಗಳಿಗೆ 50. ಮತ್ತೆ ಸಂಪುಟದಲ್ಲಿ ಅರ್ಧಭಾಗವು, ಗೃಹ, ಕಾರ್ಮಿಕ, ವಿದೇಶಾಂಗ ಖಾತೆಗಳೂ ಬೋಲ್ಶೆವಿಕರಿಗೆ ಮೀಸಲು. ರಾಜಧಾನಿ ಮತ್ತು ಮಾಸ್ಕೋದ ರಕ್ಷಣಾದಳಗಳು ಆಯಾ ನಗರ ಸೋವಿಯತ್‌ಗಳ ಕೈಯಲ್ಲಿ. ದೇಶದಾದ್ಯಂತ ಕಾರ್ಮಿಕರನ್ನು ಶಸ್ತ್ರಸಜ್ಜಿತಗೊಳಿಸಲಾಗುವುದು. ಲೆನಿನ್ ಮತ್ತು ಟ್ರಾಟ್‌ಸ್ಕಿಯವರು ಸರ್ಕಾರದಲ್ಲಿ ಇರಲೇಬೇಕು."

ಬೋಲ್ಶೆವಿಕ್ ವಿರೋಧಿಗಳು ಮುಂದಿಟ್ಟ "ಜನತೆಯ ಮಂಡಳಿ"ಯ ಕುರಿತಾದ ನಿಲುವನ್ನು ಕುರಿತು ತಮ್ಮ ನಿಲುವನ್ನು ಕಮೆನೇವ್ ವಿವರಿಸಿದ. ಅವರು ಹೇಳುವ ಮಂಡಲಿಯಲ್ಲಿ ಬೋಲ್ಶೆವಿಕರ ಸಂಖ್ಯೆಯನ್ನು ಕಡಿಮೆ ಮಟ್ಟದಲ್ಲಿ ಇರಿಸಲಾಗಿದೆ. ಹಳೆಯ ತ್ಸೆ–ಇ–ಕಾದ ಪ್ರತಿ ಕ್ರಾಂತಿಕರಿಗಳಿಗೆ, ಸಾಮಾನ್ಯ ರೈತರ ಹಾಗೂ ಸೈನಿಕರ ಬೆಂಬಲವಿಲ್ಲದ ಹಳೆಯ ನಾಯಕರ ಸಮಿತಿಗಳಿಗೆ ದೊಡ್ಡ ಪ್ರಾತಿನಿಧ್ಯವನ್ನು ನೀಡುವ ಹುನ್ನಾರ ನಡದಿದೆ. ಅಲ್ಲದೆ ಮುನಿಸಿಪಲ್ ಡ್ಯೂಮಾಗಳಿಗೂ ಮಣೆ ಹಾಕಲಾಗಿದೆ. ಅವರಲ್ಲಿ ಬಹುತೇಕ ಜನ ಇವತ್ತಿಗೂ ಕೋರ್ನಿಲೊವ್‌ನ ಏಜೆಂಟರು. ಇವರಾರನ್ನೂ ನಾವು ಒಪ್ಪುವುದಿಲ್ಲ. ರೈತರ ಸೋವಿಯತ್‌ಗಳ ಮಹಾಧಿವೇಶನವನ್ನು ಕರೆಯಲಾಗಿದೆ. ಅದು ತನ್ನ ಹೊಸ ಪ್ರತಿನಿಧಿಗಳನ್ನು ಆಯ್ಕೆ ಮಾಡಲಿ. ಲೆನಿನ್ ಮತ್ತು ಟ್ರಾಟ್‌ಸ್ಕಿಯನ್ನು ಕೈಬಿಡಿ ಎನ್ನುವುದು ನಮ್ಮ ಪಕ್ಷದ ಅಂಗ ವಿಚ್ಛೇದನ ಮಾಡುವ ಕುತಂತ್ರ. ಮತ್ತೆ ಹೊಸ ಮಂಡಳಿಯ ಅವಶ್ಯಕತೆಯೂ ಇಲ್ಲ. ಇದೀಗ ರಚಿತವಾಗಿರುವ ತ್ಸೆ–ಇ–ಕಾದಲ್ಲಿ ಎಲ್ಲಾ ಸಮಾಜವಾದಿ ಪಕ್ಷಗಳಿಗೂ ಸೋವಿಯತ್‌ನಲ್ಲಿ ಅವರಿಗಿರುವ ಬಲಾಬಲಗಳಿಗೆ ಅನುಗುಣವಾಗಿ ಪ್ರಾತಿನಿಧ್ಯ ಇದ್ದೇ ಇದೆ.

ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಈ ಪ್ರಸ್ತಾಪವನ್ನು ಒಪ್ಪುವುದಾಗಿ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಷನರಿಗಳು ಪ್ರಕಟಿಸಿದರು. ಅವರ ಕೋರಿಕೆ ಮೇರೆಗೆ ಕೃಷಿ ಖಾತೆಯನ್ನು ಅವರಿಗೆ ಕಾದಿರಿಸಲಾಯಿತು.

ಆದರೆ ಸ್ಮೋಲ್ನಿಯಲ್ಲಿನ ಸರ್ಕಾರದಲ್ಲೇ ಲೆನಿನ್‌ರ ನೀತಿಗಳಿಗೆ ಬಲವಾದ ವಿರೋಧ ಸೃಷ್ಟಿಯಾಗಿತ್ತು. ನವೆಂಬರ್ 17ರ ರಾತ್ರಿ ತ್ಸೆ–ಇ–ಕಾದ ಸಭೆ ತುಂಬಿ ತುಳುಕುತ್ತಿತ್ತು. ಅಪಾಯದ ಮುನ್ಸೂಚನೆಗಳು ಕಾಣುತ್ತಿದ್ದವು. ಬೋಲ್ಶೆವಿಕ್‌ನೇ ಆದ ಲಾರಿನ್ ಕೆಳಗಿನ ಪ್ರಸ್ತಾಪಗಳನ್ನು ಮುಂದಿಟ್ಟ : ಸಂವಿಧಾನಾತ್ಮಕ ಶಾಸನ ಸಭೆಯು ಹತ್ತಿರವಾಗುತ್ತಿದೆ. ಆದ್ದರಿಂದ ಎಲ್ಲಾ ರಾಜಕೀಯ ಭಯೋತ್ಪಾದನೆಯನ್ನೂ ನಿಲ್ಲಿಸಬೇಕು. ಪತ್ರಿಕಾ ಸ್ವಾತಂತ್ರ್ಯದ ಮೇಲಿರುವ ನಿರ್ಬಂಧಗಳನ್ನು ತೆಗೆಯಬೇಕು. ಸಶಸ್ತ್ರ ದಂಗೆಗೆ ಕರೆಕೊಡುವ ಪತ್ರಿಕೆಗಳನ್ನು ಮಾತ್ರ ನಿಷೇಧಿಸಬೇಕು. ರಾಜಕೀಯ ದಮನದ ಬಗ್ಗೆ ನಿರ್ಧರಿಸಲು ಹೊಸ ಟ್ರಿಬ್ಯೂನಲ್ ಒಂದನ್ನು ರಚಿಸಬೇಕು. ಇವುಗಳಲ್ಲದೆ, ಅದಕ್ಕೆ ಈಗಾಗಲೇ ತೆಗೆದುಕೊಂಡಿರುವ ಕ್ರಮಗಳನ್ನು ವಿಮರ್ಶಿಸಿ, ವಾಪಸ್ ಮಾಡುವ ಅಧಿಕಾರವಿರಲಿ ಎಂಬ ನಿರ್ಣಯವನ್ನೂ ಆತ ಮಂಡಿಸಿದ. ಇದಕ್ಕೆ ವಿಪರೀತ ಕರತಾಡನ. ಇದರಲ್ಲಿ ಭಾಗಿಯಾದವರಲ್ಲಿ ಬೋಲ್ಶೆವಿಕರೂ ಇದ್ದರು.

ಬೋಲ್ಶೆವಿಕರ ಪರವಾಗಿ, ಪತ್ರಿಕಾ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದೂಡೋಣ ಎಂದು ಅವಾನೆಸೊವ್ ಹೇಳಿದ. ಆದರೆ ಅವನ ಮಾತನ್ನು ಕೇಳಲು ಯಾರೂ

ತಯಾರಿರಲಿಲ್ಲ. ಆಗ ಅವನು ಪ್ರತಿಯಾಗಿ ಪತ್ರಿಕಾ ಸ್ವಾತಂತ್ರ್ಯದ ಕುರಿತಾದ ಬೋಲ್ಷೆವಿಕರ ನಿರ್ಣಯವನ್ನು ಮುಂದಿಟ್ಟ, ಅದರ ಸಾರಾಂಶ ಹೀಗಿತ್ತು :

*"ಬೂರ್ಶ್ವಾ ಪತ್ರಿಕೆಗಳನ್ನು ಹತ್ತಿಕ್ಕಿದ್ದಕ್ಕೆ ಕಾರಣ ಕೇವಲ ಮಿಲಿಟರಿ ಅವಶ್ಯಕತೆಯಾಗಿರಲಿಲ್ಲ. ಪ್ರತಿ ಕ್ರಾಂತಿಯನ್ನು ಬಗ್ಗುಬಡಿಯುವುದೂ ಅಲ್ಲ. ಹೊಸ ಸಮಾಜವಾದಿ ವ್ಯವಸ್ಥೆಯ ಸ್ಥಾಪನೆಗೆ ಅದು ಅಗತ್ಯವಾಗಿತ್ತು.*

*"ಪತ್ರಿಕಾ ಸ್ವಾತಂತ್ರ್ಯದ ಹೆಸರಿನಲ್ಲಿ 'ಜನತೆಯ ತಲೆಗೆ ವಿಷ ತುಂಬುವ' ಬಂಡವಾಳಗಾರರಿಗೆ ಮುದ್ರಣಾಲಯಗಳನ್ನು ವಾಪಸ್ ಕೊಡುವುದೆಂದರೆ ಬೂರ್ಶ್ವಾ ಆಶೋತ್ತರಗಳಿಗೆ ಶರಣಾದಂತೆ, ಹೀಗಾಗಿ ಪತ್ರಿಕಾಲೋಕದಲ್ಲಿ ಹಳೆಯ ಆಳ್ವಿಕೆಯನ್ನು ಸ್ಥಾಪಿಸುವುದನ್ನು ತಿರಸ್ಕರಿಸುವ ಜನತಾ ಕಮಿಸಾರ್‌ಗಳ ಮಂಡಳಿಯ ತೀರ್ಮಾನವನ್ನು ತ್ಸೆ–ಇ–ಕಾ ಬೆಂಬಲಿಸುತ್ತದೆ."*

ಇದಕ್ಕೆ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳೂ ಮತ್ತು ಬಂಡುಕೋರ ಬೋಲ್ಷೆವಿಕರೂ ವಿರೋಧವನ್ನು ಸೂಚಿಸಿ ಕೂಗುತ್ತಾ, ಲೇವಡಿ ಮಾಡುತ್ತಾ ಇದ್ದರು. ಕರೆನಿನ್ ಅಂತೂ "ಮೂರು ವಾರದ ಹಿಂದೆಯೂ ಪತ್ರಿಕಾ ಸ್ವಾತಂತ್ರ್ಯವನ್ನು ಬೋಲ್ಷೆವಿಕರು ಬೆಂಬಲಿಸುತ್ತಿದ್ದರು. ಈಗ ಹಿಂದಿನ ಪ್ರತಿಗಾಮಿ ದಮನಕಾರಿಗಳಾದ ಬ್ಲಾಕ್ ಹಂಡ್ರೆಡ್‌ಗಳಂತೆ ಇವರೂ ಸಹ ಪತ್ರಿಕೆಗಳು ಜನತೆಯ ತಲೆಗೆ ವಿಷ ತುಂಬುತ್ತವೆ ಎನ್ನುತ್ತಿದ್ದಾರೆ" ಎಂದು ಪ್ರತಿಭಟಿಸಿದ.

ನಂತರ ಮಾತನಾಡಿದ ಟ್ರಾಟ್‌ಸ್ಕಿ, "ನಮ್ಮ ಶತ್ರುಗಳ ಮೇಲಿನ ನಮ್ಮ ವಿಜಯ ಇನ್ನೂ ಪೂರ್ತಿಯಾಗಿಲ್ಲ. ಹೀಗಾಗಿ ವೃತ್ತಪತ್ರಿಕೆಗಳನ್ನು ಮುಚ್ಚಿಸುವುದು ಅವಶ್ಯಕ ರಕ್ಷಣಾತ್ಮಕ ಕ್ರಮ. ವ್ಯಾಪಾರದ ಸ್ವಾತಂತ್ರ್ಯವನ್ನು ನಿರಾಕರಿಸಿದಂತೆಯೇ, ಪತ್ರಿಕೆಗಳ ಮಾಲಿಕತ್ವದ ಸ್ವಾತಂತ್ರ್ಯವನ್ನೂ ನಿರಾಕರಿಸಬೇಕಾಗುತ್ತದೆ. ಮುದ್ರಣಾಲಯ, ಕಾಗದ, ಇಂಕು ಇವು ಕೂಡ ರೈತ – ಕಾರ್ಮಿಕರಿಗೆ ಮೊದಲು ಸೇರಬೇಕು. ನಂತರ ಮಾತ್ರ ಬೂರ್ಶ್ವಾ ಪಕ್ಷಗಳಿಗೂ ನೀಡಬಹುದು" ಎಂದ. ಆತನ ಮಾತಿಗೆ ಚಪ್ಪಾಳೆಯೂ, ವಿರೋಧವೂ ವ್ಯಕ್ತವಾದವು. ಮತ್ತೆ ಕರೆಲಿನ್ ಎದ್ದುನಿಂತು ಪತ್ರಿಕಾ ಸ್ವಾತಂತ್ರ್ಯವನ್ನು ತ್ಸೆ–ಇ–ಕಾ ನಿರ್ಧಾರ ಮಾಡಬಾರದು, ಅದನ್ನೊಂದು ವಿಶೇಷ ಸಮಿತಿಗೆ ಒಪ್ಪಿಸಬೇಕು ಎಂದ.

ನಂತರ ಲೆನಿನ್ ಸುಕ್ಕುಗಟ್ಟಿದ ಹಣೆಯೊಂದಿಗೆ, ನಿಧಾನವಾಗಿ, ಭಾವಾತಿರೇಕವಿಲ್ಲದೆ, ಶಾಂತವಾಗಿ, ಪ್ರತೀ ಪದವನ್ನು ಆಯ್ದುಕೊಂಡು ಮಾತನಾಡಿದರು. ಆದರೆ ಅವರ ಒಂದೊಂದು ವಾಕ್ಯವೂ ಸುತ್ತಿಗೆಯ ಪೆಟ್ಟಿನಂತಿತ್ತು.

"ದೇಶದೊಳಗಿನ ಅಂತರ್ಯುದ್ಧ ಮುಗಿದಿಲ್ಲ. ಶತ್ರುಗಳು ನಮ್ಮ ನಡುವೆ ಕ್ರಿಯಾಶೀಲರಾಗಿದ್ದಾರೆ. ಹೀಗಾಗಿ ಪತ್ರಿಕೆಗಳ ಮೇಲಿನ ದಮನಕಾರಿ ಕ್ರಮಗಳನ್ನು ಹಿಂತೆಗೆದುಕೊಳ್ಳುವುದು ಸಾಧ್ಯವಿಲ್ಲ.

"ನಾವು ಬೋಲ್ಷೆವಿಕರು ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇವೆ, ನಾವು ಅಧಿಕಾರಕ್ಕೆ ಬಂದಾಗ ಬೂರ್ಶ್ವಾ ಪತ್ರಿಕೆಗಳನ್ನು ಮುಚ್ಚಿಸುತ್ತೇವೆ, ಎಂದು. ಬೂರ್ಶ್ವಾಪ್ರಚಾರವನ್ನು ಸಹಿಸಿಕೊಳ್ಳುವುದು ಎಂದರೆ ಸಮಾಜವಾದಿಯಾಗಿ ಉಳಿಯಲಸಾಧ್ಯ ಎಂಬುದನ್ನು ಯಾವತ್ತೂ ಹೇಳುತ್ತಾ ಬಂದಿದ್ದೇವೆ. ಕ್ರಾಂತಿಯನ್ನು ನೆರವೇರಿಸಿದವರು ಕಾಯುತ್ತಾ ಕೂರಲು ಸಾಧ್ಯವಿಲ್ಲ. ಅವರು ಮುಂದಕ್ಕೆ ಹೋಗುತ್ತಲೇ ಇರಬೇಕು – ಇಲ್ಲವೆಂದರೆ

ಹಿಂದಕ್ಕೆ ಸರಿಯಬೇಕು. ಈಗ 'ಪತ್ರಿಕಾ ಸ್ವಾತಂತ್ರ್ಯ'ದ ಬಗ್ಗೆ ಮಾತನಾಡುವವರು ಹಿಂದಕ್ಕೆ ಪ್ರಯಾಣ ಮಾಡುತ್ತಾರೆ. ಸಮಾಜವಾದದತ್ತ ವೇಗವಾಗಿ ಸಾಗುವುದಕ್ಕೆ ಅಡೆತಡೆಯಾಗುತ್ತಾರೆ.'

"ಮೊದಲನೆಯ ಕ್ರಾಂತಿ ತ್ಸಾರ್‌ಶಾಹಿಯ ನೊಗವನ್ನು ಕಿತ್ತೆಸೆದಂತೆ ನಾವು ಬಂಡವಾಳಶಾಹಿಯ ನೊಗವನ್ನು ಕಿತ್ತು ಒಗೆದಿದ್ದೇವೆ. ಮೊದಲನೆಯ ಕ್ರಾಂತಿಗೆ ರಾಜಶಾಹಿಯ ಪತ್ರಿಕೆಗಳನ್ನು ದಮನಮಾಡಲು ಹಕ್ಕಿತ್ತು ಎಂದಾದರೆ, ನಮಗೆ ಬಂಡವಾಳಶಾಹಿ ಪತ್ರಿಕೆಗಳನ್ನು ಹತ್ತಿಕ್ಕಲು ಹಕ್ಕಿದೆ. ಪತ್ರಿಕಾ ಸ್ವಾತಂತ್ರ್ಯದ ಪ್ರಶ್ನೆಯನ್ನು, ವರ್ಗಹೋರಾಟದ ಪ್ರಶ್ನೆಯಿಂದ ಬೇರ್ಪಡಿಸುವುದು ಸಾಧ್ಯವಿಲ್ಲ. ನಾವು ಈ ಪತ್ರಿಕೆಗಳನ್ನು ಮುಚ್ಚುತ್ತೇವೆ ಎಂದು ವಾಗ್ದಾನ ಮಾಡಿದ್ದೆವು. ಅದನ್ನು ಪೂರೈಸುತ್ತೇವೆ. ವಿಶಾಲ ಜನಸಮುದಾಯ ನಮ್ಮೊಂದಿಗಿದೆ.'

"ಸಶಸ್ತ್ರದಂಗೆ ಮುಗಿದಿದೆ. ಆದ್ದರಿಂದ ಇನ್ನು ಮುಂದೆ ಸಮಾಜವಾದಿ ಪತ್ರಿಕೆಗಳನ್ನು ಮುಚ್ಚಿಸುವ ಆಶೆ ನಮಗಿಲ್ಲ. ಆದರೆ ಅವರು ಕ್ರಾಂತಿಯ ವಿರುದ್ಧ ಸಶಸ್ತ್ರ ಬಂಡಾಯಕ್ಕೆ, ಸೋವಿಯತ್ ಸರ್ಕಾರಕ್ಕೆ ಅವಿಧೇಯತೆ ತೋರುವುದಕ್ಕೆ ಪ್ರಚೋದಿಸಬಾರದು ಅಷ್ಟೇ. ಆದರೆ ಈ ಪತ್ರಿಕೆಗಳು ಸ್ವಾತಂತ್ರ್ಯದ ಹೆಸರಿನಲ್ಲಿ ಬಂಡವಾಳಶಾಹಿ ವರ್ಗದಿಂದ ಯಥೇಚ್ಛವಾಗಿ ಕಾಗದ, ಇಂಕುಗಳನ್ನು ಪಡೆದುಕೊಳ್ಳಲು ಅವಕಾಶವಿಲ್ಲ. ಈಗ ಮುದ್ರಣಕ್ಕೆ ಅವಶ್ಯಕವಾದ ಎಲ್ಲಾ ಸಾಮಗ್ರಿಗಳನ್ನು ಸೋವಿಯತ್ ಸರ್ಕಾರ ವಶಪಡಿಸಿಕೊಳ್ಳುತ್ತದೆ. ಅವರವರ ಮತದಾನದ ಶಕ್ತಿಗೆ ಅನುಸಾರವಾಗಿ ಮೊದಲು ಸಮಾಜವಾದಿ ಪಕ್ಷಗಳಿಗೆ ಅದನ್ನು ವಿತರಿಸಲಾಗುವುದು."

ಅವರ ಮಾತಿನ ನಂತರ ನಿರ್ಣಯಗಳನ್ನು ಮತಕ್ಕೆ ಹಾಕಲಾಯಿತು. ಲಾರಿನ್‌ನ ನಿರ್ಣಯದ ಪರವಾಗಿ 22 ಮತಗಳು, ವಿರುದ್ಧವಾಗಿ 31 ಮತಗಳು ಬಿದ್ದು ಅದು ಸೋತುಹೋಯಿತು. ಲೆನಿನ್‌ರ ನಿರ್ಣಯದ ಪರವಾಗಿ 34, ವಿರುದ್ಧವಾಗಿ 24 ಮತಗಳೂ ಬಿದ್ದು ಅದು ಅಂಗೀಕೃತವಾಯಿತು. ವಿರುದ್ಧವಾಗಿ ಮತ ಚಲಾಯಿಸಿದವರಲ್ಲಿ ಇಬ್ಬರು ಬೋಲ್ಶೆವಿಕ್ ನಾಯಕರೂ ಇದ್ದರು.

ಇದಾದನಂತರ ಮುಂದೆ ನಡೆಯುವುದಕ್ಕೆ ಹೊಣೆ ಹೊರಲು ತಾವು ಸಿದ್ಧರಿಲ್ಲವೆಂದು ಹೇಳಿ ಎಡಪಂಥೀಯ ಸೋಷಿಯಲಿಸ್ಟ್ ರೆವಲ್ಯೂಶನರಿಗಳು ಮಿಲಿಟರಿ ಕ್ರಾಂತಿಕಾರಿ ಸಮಿತಿಯಿಂದಲೂ ಇತರ ಜವಾಬ್ದಾರಿಯುತ ಸ್ಥಾನಗಳಿಂದಲೂ ಹಿಂದೆ ಸರಿದರು.

ನೋಗಿನ್, ರೈಕೋವ್, ಮಿಲ್ಯುಟಿನ್, ತಿಯೊಡೊರೊವಿಚ್ ಮತ್ತು ಶ್ಲಿಯಾಪ್ನಿಕೊವ್ ಎಂಬ ಐದು ಮಂದಿ ಜನತಾ ಕಮಿಸಾರ್ ಮಂಡಳಿಯ ಸದಸ್ಯರು ರಾಜಿನಾಮೆ ನೀಡಿದರು. ಅದಕ್ಕೆ ಅವರು ನೀಡಿದ ಕಾರಣದ ಸಾರಾಂಶವು ಹೀಗಿತ್ತು: "ಸೋವಿಯತ್‌ಗಳಲ್ಲಿರುವ ಎಲ್ಲಾ ಪಕ್ಷಗಳೂ ಒಂದಾಗಿ ಸಮಾಜವಾದಿ ಸರ್ಕಾರವನ್ನು ರಚಿಸಬೇಕು ಎಂಬುದು ನಮ್ಮ ನಿಲುವು. ಅದು ಮಾತ್ರವೇ ಕ್ರಾಂತಿಯ ಸಾಧನೆಗಳನ್ನು ಖಚಿತಪಡಿಸುತ್ತದೆ. ಇದನ್ನು ಬಿಟ್ಟರೆ ಉಳಿಯುವ ದಾರಿ ಎಂದರೆ ಬೋಲ್ಶೆವಿಕ್ ಭಯೋತ್ಪಾದನೆ. ಜನತಾ ಕಮಿಸಾರ್‌ಗಳ ಮಂಡಳಿ ಆ ದಾರಿಯನ್ನೇ ಹಿಡಿದಿದೆ."

ರಾಜಿನಾಮೆ ನೀಡದಿದ್ದರೂ ರಿಯಾಜ಼ನೊವ್, ಲಾರಿನ್ ಮುಂತಾದ ಐದು ಜನ ಮುಖ್ಯರು ಇದಕ್ಕೆ ಸಹಿ ಹಾಕಿದ್ದರು. ಇದಲ್ಲದೆ ಕಮೆನೇವ್, ಜ಼ಿನೊವೀವ್, ರೈಕೋವ್,

ನೋಗಿನ್ ಮತ್ತು ಮಿಲ್ಯುಟಿನ್ ಎಂಬ ಐದು ಮಂದಿ ಮುಖ್ಯ ನಾಯಕರು ಕೇಂದ್ರ ಸಮಿತಿಗೆ ರಾಜಿನಾಮೆ ನೀಡಿದರು. ಅದಕ್ಕೆ ಕಾರಣವನ್ನೂ ಅವರು ಬಹಿರಂಗ ಪಡಿಸಿದರು. ಅದರ ಸಾರಾಂಶ ಹೀಗಿತ್ತು:

*"ಸೋವಿಯತ್‌ಗಳಲ್ಲಿರುವ ಎಲ್ಲಾ ಪಕ್ಷಗಳನ್ನೂ ಸೇರಿಸಿ ಸರ್ಕಾರವನ್ನು ರಚಿಸುವುದು ಅಗತ್ಯವಾಗಿದೆ. ರಕ್ತಪಾತ, ಕ್ಷಾಮ, ಕಲೆಡಿನ್‌ನ ಅನುಯಾಯಿಗಳಿಂದ ಕ್ರಾಂತಿಯ ನಾಶ, ಇವನ್ನೆಲ್ಲಾ ತಪ್ಪಿಸಲು ಇದು ಅವಶ್ಯ. ಸಂವಿಧಾನಾತ್ಮಕ ಶಾಸನ ಸಭೆಯನ್ನು ಸೂಕ್ತ ಸಮಯದಲ್ಲಿ ಕರೆಯಲು, ಸೋವಿಯತ್ ಮಹಾಧಿವೇಶನದ ಕಾರ್ಯಕ್ರಮವನ್ನು ಜಾರಿಗೊಳಿಸಲು ಸಹ ಇದು ಅವಶ್ಯಕ. ಹೀಗಿರುವಾಗ ವಿಶಾಲ ಜನಸ್ತೋಮದ ಇಚ್ಛೆಗೆ ವಿರುದ್ಧವಾಗಿ ಕೇಂದ್ರ ಸಮಿತಿ ವರ್ತಿಸುತ್ತಿರುವುದನ್ನು ಪ್ರತಿಭಟಿಸಿ ನಾವು ಕೇಂದ್ರ ಸಮಿತಿಯನ್ನು ತೊರೆದು ಜನರ ಮುಂದೆ ನಮ್ಮ ಅಭಿಪ್ರಾಯವನ್ನು ಮಂಡಿಸುತ್ತಿದ್ದೇವೆ."*

ಇದು ಕಾರ್ಮಿಕರಲ್ಲೂ, ರಕ್ಷಣಾದಳದ ಸೈನಿಕರಲ್ಲೂ ತೀವ್ರವಾದ ಕಳವಳವನ್ನು ಸೃಷ್ಟಿಸಿತು. ಅವರು ಸ್ಮೋಲ್ನಿಗೂ, ಬೇರೆ ಸರ್ಕಾರ ರಚನೆಯ ಪ್ರಯತ್ನದಲ್ಲಿದ್ದವರಿಗೂ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಪ್ರತಿನಿಧಿಗಳನ್ನು ಕಳಿಸಲು ಪ್ರಾರಂಭಮಾಡಿದರು. ಬೋಲ್ಶೆವಿಕರಲ್ಲಿ ಕಂಡುಬಂದ ಒಡಕು ಅವರ ವಿರೋಧಿಗಳಲ್ಲಿ ಸಂತೋಷ ಉತ್ಸಾಹಗಳನ್ನು ಉಂಟುಮಾಡಿತು.

ಆದರೆ ಲೆನಿನ್‌ರ ಬೆಂಬಲಿಗರು ಇದಕ್ಕೆ ಉತ್ತರವನ್ನು ನಿರ್ದಯವಾಗಿ ಕೂಡಲೇ ನೀಡಿದರು. ಶ್ಲಿಯಾಪ್ನಿಕೊವ್ ಮತ್ತು ತಿಯೊಡೊರೊವಿಚ್ ಪಕ್ಷದ ಶಿಸ್ತಿಗೆ ಮನ್ನಣೆ ನೀಡಿ ರಾಜಿನಾಮೆಯನ್ನು ವಾಪಸ್ ತೆಗೆದುಕೊಂಡರು. ಕಮೆನೇವ್‌ನನ್ನು ತ್ಸೆ–ಇ–ಕಾದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಆ ಜಾಗಕ್ಕೆ ಸ್ವೆರ್ಡ್‌ಲೋವ್‌ನನ್ನು ತರಲಾಯಿತು. ಪೆತ್ರೋಗ್ರಾಡ್ ಸೋವಿಯತ್‌ನ ಅಧ್ಯಕ್ಷ ಸ್ಥಾನದಿಂದ ಝಿನೊವೀವ್‌ನನ್ನು ಪದಚ್ಯುತಗೊಳಿಸಲಾಯಿತು. ಡಿಸೆಂಬರ್ 5ರಂದು 'ಪ್ರಾವ್ಡಾ' ಪತ್ರಿಕೆ ಲೆನಿನ್‌ರ ತೀಕ್ಷ್ಣವಾದ ಘೋಷಣೆಯನ್ನು ಬಿತ್ತರಿಸಿತು. ಅದೇ ಲಕ್ಷಾಂತರ ಪ್ರತಿಗಳಾಗಿ ರಷ್ಯಾದ ತುಂಬ ಹಂಚಲ್ಪಟ್ಟಿತು. ಅದರ ಸಾರಾಂಶ ಹೀಗಿದೆ:

*"ಎರಡನೇ ಸೋವಿಯತ್ ಮಹಾಧಿವೇಶನವು – ಬೋಲ್ಶೆವಿಕರಿಗೆ ಬಹುಮತವನ್ನು ನೀಡಿದೆ. ಹಾಗಾಗಿ ನಮ್ಮ ಪಕ್ಷ ರಚಿಸುವ ಸರ್ಕಾರ ಮಾತ್ರವೇ ನಿಜವಾದ ಸೋವಿಯತ್ ಸರ್ಕಾರವಾಗುತ್ತದೆ. ಸರ್ಕಾರ ರಚನೆಗೆ ಮುನ್ನ ನಾವು ಮೂರು ಜನ ವಿಖ್ಯಾತ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳ ನಾಯಕರನ್ನು ಸರ್ಕಾರದಲ್ಲಿ ಭಾಗವಹಿಸಲು ಆಹ್ವಾನಿಸಿದೆವು. ಆದರೆ ಅವರು ನಿರಾಕರಿಸಿದರು. ಹೀಗೆ ನಿರಾಕರಿಸುವುದು ಕ್ರಾಂತಿಗಳಿಗೆ, ಕಾರ್ಮಿಕವರ್ಗದ ನಾಯಕರಿಗೆ ಸರಿಯಲ್ಲ. ಇದನ್ನೆಲ್ಲಾ ನಾವು ವಿಷಾದದಿಂದ ಹೇಳಬೇಕಾಗಿದೆ. ಮತ್ತೆ ಅವರು ಸರ್ಕಾರಕ್ಕೆ ಯಾವಾಗ ಬೇಕಾದರೂ ಬಂದು ಸೇರಲು ನಮ್ಮ ಆಹ್ವಾನ ಮುಕ್ತವಾಗಿದೆ.*

*"ಕಾಮ್ರೇಡ್ಸ್, ಕಮೆನೇವ್ ಹಾಗೂ ಝಿನೊವೀವ್ ಮುಂತಾದ ನಾಯಕರು ಕೇಂದ್ರ ಸಮಿತಿಯಿಂದಲೂ, ಜನತಾ ಕಮಿಸಾರ್‌ಗಳ ಮಂಡಳಿಯಿಂದಲೂ ರಾಜಿನಾಮೆ ನೀಡಿ ನಿರ್ಗಮಿಸಿದ್ದಾರೆ. ಇದನ್ನು ರೈತಕಾರ್ಮಿಕರು, ಸೈನಿಕರು ಒಪ್ಪುವುದಿಲ್ಲ.*

*"ಇದರಲ್ಲಿ ಇಬ್ಬರಂತೂ – ಕಮೆನೇವ್ ಮತ್ತು ಜಿನೊವೀವ್ – ಕ್ರಾಂತಿಗೆ ಮುನ್ನವೂ ಸಶಸ್ತ್ರ ಬಂಡಾಯದ ವಿರುದ್ಧ ಮತ ಹಾಕಿದ್ದಲ್ಲದೆ, ಕೇಂದ್ರ ಸಮಿತಿಯ ಗೊತ್ತುವಳಿಯ ವಿರುದ್ಧವೇ ಪಕ್ಷದ ಸದಸ್ಯರ ಸಭೆಯಲ್ಲಿ ತಮ್ಮ ಪ್ರಸಾರವನ್ನು ಮುಂದುವರೆಸಿದ್ದವರು. ಆದರೆ ವೇಗವಾಗಿ ಚಲಿಸುವ ರೈಲು ಅಡ್ಡಬಂದ ಮರದ ಹೊಟ್ಟನ್ನು ಗಾಳಿಗೆ ತೂರುವಂತೆ ಲಕ್ಷಾಂತರ ಕಾರ್ಮಿಕರ ಧೀರೋದಾತ್ತ ಹೋರಾಟವು ಇವರನ್ನೆಲ್ಲಾ ಪಕ್ಕಕ್ಕೆ ತಳ್ಳಿತ್ತು.*

*"ಯಾರಿಗೆ ವಿಶ್ವಾಸವಿಲ್ಲ, ಯಾರು ಹಿಂಜರಿಯುತ್ತಾರೆ, ಬೂರ್ಶ್ವಾಗಳಿಗೆ ಹೆದರುತ್ತಾರೆ, ಅವರಿಗೆ ನಾಚಿಕೆಯಾಗಬೇಕು. ಆದರೆ ಜನತೆಗೆ ಯಾವ ಹಿಂಜರಿಕೆಯೂ ಇಲ್ಲ."*

ಇದಕ್ಕೆ ದೇಶದಾದ್ಯಂತ ಬಂದ ಪ್ರತಿಕ್ರಿಯೆ ಒಂದು ಸುಡುಸುಡುವ ಚಂಡಮಾರುತದಂತಿತ್ತು. ಅನೇಕ ದಿನಗಳ ಕಾಲ ಕಾರ್ಖಾನೆಗಳಿಂದ, ರಣರಂಗದಿಂದ ನಿಯೋಗಗಳು ಬರುತ್ತಲೇ ಇದ್ದವು. ತಮ್ಮ ಸ್ಥಾನವನ್ನು ತೊರೆದುಹೋದವರ ಕುರಿತು ಖಂಡನೆಗಳ ಮಹಾಪೂರವೇ ಬಂತು. "ಅವರು ಸರ್ಕಾರವನ್ನು ತೊರೆದದ್ದೇಕೆ? ಅವರಿಗೆ ಬೂರ್ಶ್ವಾಗಳು ಹಣ ಕೊಟ್ಟಿದ್ದಾರೆಯೇ? ಅವರು ವಾಪಸಾಗಿ ಕೇಂದ್ರ ಸಮಿತಿಯ ನಿರ್ಧಾರಗಳನ್ನು ಒಪ್ಪಿಕೊಳ್ಳಬೇಕು". ಇದು ಜನತೆಯ ಒತ್ತಾಯವಾಗಿತ್ತು. ಪೆತ್ರೋಗ್ರಾಡ್ ರಕ್ಷಣಾದಳಗಳಲ್ಲಿ ಮಾತ್ರ ಕೊಂಚ ಅನಿಶ್ಚಿತತೆ ಇತ್ತು. ಆದರೆ ನವೆಂಬರ್ 24ರ ಸಭೆಯಲ್ಲಿ ಎಲ್ಲಾ ಪಕ್ಷಗಳ ಸೈನಿಕ ಪ್ರತಿನಿಧಿಗಳೂ ಸೇರಿ ಲೆನಿನ್‌ರವರ ನೀತಿಯನ್ನು ಅಧಿಕ ಬಹುಮತದಿಂದ ಬೆಂಬಲಿಸಿದರು.

ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳಿಗೆ ಮತ್ತೆ ಸರ್ಕಾರವನ್ನು ಸೇರಲು ಹೇಳಲಾಯಿತು.

ಹೊಸ ಬೇಡಿಕೆಗಳೊಂದಿಗೆ ಮೆನ್ಶೆವಿಕರು ಮತ್ತೊಂದು ಅಂತಿಮ ಗಡುವಿನ ಬೆದರಿಕೆಯನ್ನು ಒಡ್ಡಿದರು: ಎಲ್ಲಾ ಬಂಧಿತ ಸಚಿವರನ್ನು ಬಿಡುಗಡೆ ಮಾಡಬೇಕು. ಎಲ್ಲಾ ವೃತ್ತಪತ್ರಿಕೆಗಳ ಸ್ವಾತಂತ್ರ್ಯವನ್ನೂ ಖಾತ್ರಿಪಡಿಸಬೇಕು. ರೆಡ್‌ಗಾರ್ಡ್‌ಗಳನ್ನು ನಿರಾಯುಧಗೊಳಿಸಬೇಕು ಮತ್ತು ನಗರರಕ್ಷಣಾ ದಳವನ್ನು ಡ್ಯೂಮಾದ ನಿಯಂತ್ರಣಕ್ಕೆ ತರಬೇಕು.

ಇದಕ್ಕೆ ಸ್ಮೋಲ್ನಿಯಲ್ಲಿನ ಸರ್ಕಾರ ನೀಡಿದ ಉತ್ತರ ಹೀಗಿತ್ತು: ಎಲ್ಲಾ ಸಚಿವರನ್ನು ಬಿಡುಗಡೆ ಮಾಡಲಾಗಿದೆ. ಕೆಲವೇ ಯಂಕರ್‌ಗಳು ಬಂಧನದಲ್ಲಿದ್ದಾರೆ. ಬೂರ್ಶ್ವಾ ಪತ್ರಿಕೆಗಳನ್ನು ಬಿಟ್ಟು ಎಲ್ಲರಿಗೂ ಸ್ವಾತಂತ್ರ್ಯ ಸಿಕ್ಕಿದೆ. ಎಲ್ಲಾ ಸೈನ್ಯಗಳೂ ಸೋವಿಯತ್ ನಿಯಂತ್ರಣದಲ್ಲೇ ಉಳಿಯುತ್ತವೆ.

ನಂತರ ಹೊಸ ಸರ್ಕಾರವನ್ನು ರಚಿಸಲು ಕರೆದಿದ್ದ ಸಮ್ಮೇಳನ ವಿಸರ್ಜಿತವಾಯಿತು. ವಿರೋಧ ಪಕ್ಷದ ನಾಯಕರು ಇದಾದ ಮೇಲೆ ಒಬ್ಬರ ನಂತರ ಒಬ್ಬರು ಮೊಘಿಲೆವ್ ಎಂಬ ಊರಿಗೆ ಕಾಲ್ತೆಗೆದರು. ಕೆಲವು ಕಾಲ ಅಲ್ಲಿ ಸರ್ಕಾರದ ನಂತರ ಸರ್ಕಾರಗಳನ್ನು ರಚಿಸುವ ಯತ್ನಗಳು ನಡೆದೇ ಇದ್ದವು.

ಏತನ್ಮಧ್ಯೆ ಬೋಲ್ಶೆವಿಕರು ಬಹಳ ಮುಖ್ಯವಾಗಿದ್ದ ರೈಲ್ವೆ ಕಾರ್ಮಿಕರ ಸಂಘ (ವಿಕ್‌ಜೆಲ್)ದ ನಾಯಕತ್ವದ ಪ್ರಾಬಲ್ಯವನ್ನು ಕುಗ್ಗಿಸಲು ಯತ್ನಿಸುತ್ತಲೇ ಇದ್ದರು. ಪೆತ್ರೋಗ್ರಾಡ್ ಸೋವಿಯತ್ ಅದಕ್ಕನುಗುಣವಾಗಿ ರೈಲ್ವೆಯಲ್ಲಿರುವ ಸಾಮಾನ್ಯ ಕಾರ್ಮಿಕರಿಗೆ ಮನವಿ ಮಾಡಿಕೊಂಡಿತ್ತು. ನವೆಂಬರ್ 15ನೆಯ ತಾರೀಕು ತ್ಸೆ–ಇ–ಕಾ, ರೈತರ ಮಹಾಧಿವೇಶನವನ್ನು ಡಿಸೆಂಬರ್ 1ನೆಯ ತಾರೀಕಿಗೆ ಕರೆಯಿತು. ಡಿಸೆಂಬರ್

2ರಂದು ಸಂಚಾರ – ಸಂಪರ್ಕದ ಇಲಾಖೆಯನ್ನು ತ್ಸೆ–ಇ–ಕಾ ವಿಕ್‌ಜೆಲ್‌ಗೆ ನೀಡಲು ನಿರ್ಧರಿಸಿತು. ವಿಕ್‌ಜೆಲ್ ಸರ್ಕಾರವನ್ನು ಸೇರಿಕೊಂಡಿತು.

ಹೀಗೆ ಅಧಿಕಾರ ಗ್ರಹಣದ ಸಮಸ್ಯೆಗಳನ್ನು ಬಗೆಹರಿಸಿಕೊಂಡನಂತರ ಬೋಲ್ಶೆವಿಕರು ದೈನಂದಿನ ಆಡಳಿತದ ಸವಾಲುಗಳನ್ನು ನಿರ್ವಹಿಸುವತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಮೊತ್ತಮೊದಲಿಗೆ ಆಹಾರದ ಸಮಸ್ಯೆ. ಹಸಿದ ದೇಶಕ್ಕೂ, ಸೈನ್ಯಕ್ಕೂ ಊಟ ಒದಗಿಸಬೇಕು. ಆಹಾರಧಾನ್ಯಗಳನ್ನು ಬಚ್ಚಿಟ್ಟಿರಬಹುದಾದ ಎಲ್ಲಾ ಉಗ್ರಾಣಗಳನ್ನು, ರೈಲ್ವೆ ನಿಲ್ದಾಣಗಳನ್ನು, ಬಂದರು – ನೌಕೆಗಳನ್ನು ಶೋಧಿಸಿ ಮಿಲಿಯಾಂತರ ಪೌಂಡುಗಳಷ್ಟು ಧಾನ್ಯವನ್ನು ವಶಪಡಿಸಿಕೊಳ್ಳಲಾಯಿತು. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲೂ ಭೂಮಿಸಮಿತಿಗಳ ಮೂಲಕ ಧಾನ್ಯವನ್ನು ವಶಪಡಿಸಿಕೊಳ್ಳಲಾಯಿತು. ವೈಟ್‌ಗಾರ್ಡ್‌ಗಳ ವಶದಲ್ಲಿದ್ದ ಸೈಬೀರಿಯಾದ ಪ್ರದೇಶಗಳನ್ನು ದೊಡ್ಡ ಸೈನ್ಯಗಳನ್ನು ಕಳಿಸಿ ಗೆದ್ದುಕೊಂಡು ಅಲ್ಲಿಂದ ಆಹಾರವನ್ನು ತರಲು ಏರ್ಪಾಟಾಯಿತು. ಸೈಬೀರಿಯಾದ ಕಡೆಗೆ ಹೋಗುವ ಎಲ್ಲಾ ಯಾತ್ರಿಕರ ರೈಲುಗಳನ್ನು ಎರಡು ವಾರ ಸ್ಥಗಿತಗೊಳಿಸಿ, ಅಲ್ಲಿನ ರೈತರಿಗೆ ಬೇಕಾದ ಬಟ್ಟೆ, ಲೋಹದ ವಸ್ತುಗಳನ್ನು ಕಳಿಸಿಕೊಟ್ಟು, ಪ್ರತಿಯಾಗಿ ಆಹಾರ ಸಾಮಗ್ರಿಗಳನ್ನು ಸಂಪಾದಿಸಿಕೊಂಡು ಬರಲಾಯಿತು.

ಕ್ರಾಂತಿವಿರೋಧಿ ಕಲೆಡಿನ್, ಡಾನ್ ಪ್ರದೇಶದ ಕಲ್ಲಿದ್ದಲು ಗಣಿಗಳ ಮೇಲೆ ಹತೋಟಿಯನ್ನು ಸಾಧಿಸಿಕೊಂಡಿದ್ದನಷ್ಟೇ. ಈ ತುರ್ತು ಪರಿಸ್ಥಿತಿಯಿಂದ ಹೊರಗೆ ಬರಲು ಇಂಧನದ ಮಿತವ್ಯಯ ಹಾಗೂ ದುಂದುಗಾರಿಕೆಯ ನಿಯಂತ್ರಣ, ಎರಡೂ ಅವಶ್ಯಕವಾಗಿದ್ದವು. ಆದ್ದರಿಂದ ಅನೇಕ ದಿನಗಳವರೆಗೆ ಥಿಯೇಟರುಗಳನ್ನು ರೆಸ್ಟೋರೆಂಟ್‌ಗಳನ್ನು ಬಂದ್ ಮಾಡಲಾಯಿತು. ದೊಡ್ಡ ದೊಡ್ಡ ಸೌದೆ ಮಂಡಿಗಳಿಂದ ಉರುವಲು ಕಟ್ಟಿಗೆಯನ್ನು ವಶಪಡಿಸಿಕೊಳ್ಳಲಾಯಿತು. ಬಾಲ್ಟಿಕ್ ನೌಕಾದಳದವರು ಕಾರ್ಖಾನೆಗಳ ಕೆಲಸ ನಿಲ್ಲದಂತೆ ತಮ್ಮಲ್ಲಿದ್ದ ಕಲ್ಲಿದ್ದಲು ದಾಸ್ತಾನನ್ನು ಒದಗಿಸಿಕೊಟ್ಟರು.

ನವೆಂಬರ್ ತಿಂಗಳ ಕೊನೆಯ ಹೊತ್ತಿಗೆ "ಹೆಂಡದ ದಂಗೆಗಳು" ಆರಂಭವಾದವು. ಪ್ರತಿಕ್ರಾಂತಿಕಾರಿಗಳಿಂದ ಪ್ರಚೋದಿತರಾದ ಕೆಲವು ಸೈನಿಕರು ಎಲ್ಲೆಲ್ಲಿ ಮದ್ಯದ ದಾಸ್ತಾನಿದೆಯೋ ಅವುಗಳನ್ನು ಲೂಟಿಹೊಡೆದು ಕಂಠಮಟ್ಟ ಕುಡಿದು ರಸ್ತೆಯಲ್ಲಿ ಓಡಾಡಿಕೊಂಡಿದ್ದರು. ಕಡೆಗೆ ದೊಂಬಿ ಅಡಗಿಸಲು ಸೈನಿಕರು ಗೋಲಿಬಾರ್ ಮಾಡಬೇಕಾಯಿತು. ನಂತರ ಮದ್ಯದ ದಾಸ್ತಾನುಗಳಿಗೆ ಡೈನಮೈಟ್ ಇಟ್ಟು ನಾಶಪಡಿಸಿ ಶಾಂತಿ ಸ್ಥಾಪಿಸಬೇಕಾಯಿತು.

ಎಲ್ಲಾ ವಾರ್ಡ್ ಸೋವಿಯತ್‌ಗಳ ಕೇಂದ್ರ ಕಛೇರಿಗಳನ್ನು ಮೊದಲು ಜನತೆಯಿಂದಲೇ ರಚಿತವಾಗಿದ್ದ ಮಿಲಿಶಿಯಾಗಳು ರಕ್ಷಿಸುತ್ತಿದ್ದವು. ಕ್ರಮೇಣ ಈ ಜವಾಬ್ದಾರಿಯನ್ನು ತರಬೇತಿ ಪಡೆದ ಶಿಸ್ತುಬದ್ಧ, ನಿಯತವಾಗಿ ವೇತನ ಪಡೆಯುವ, ಸೈನಿಕರೇ ವಹಿಸಿಕೊಂಡರು. ಸಣ್ಣಪುಟ್ಟ ಕಳ್ಳತನದಂಥ ಅಪರಾಧಗಳನ್ನು ವಿಚಾರಿಸಿಕೊಳ್ಳಲು ಕ್ರಾಂತಿಕಾರಿ ಟ್ರಿಬ್ಯೂನಲ್‌ಗಳನ್ನು ಜನತೆ ರಚಿಸಿಕೊಂಡಿತು. ದೊಡ್ಡ ಹೊಟೇಲುಗಳ ಮೇಲೆ ದಾಳಿ ಮಾಡಿ, ಅಲ್ಲಿ ನೆಲೆ ಊರಿದ್ದ ಕಾಳಸಂತೆಕೋರರು, ದಲ್ಲಾಳಿಗಳನ್ನು ಬಂಧಿಸಿ ಜೈಲಿಗೆ ದಬ್ಬಲಾಯಿತು.

ಮನೆಗೆಲಸದವರನ್ನೂ ಸಂಘಟಿಸಿಕೊಂಡಿದ್ದ ಕಾರ್ಮಿಕ ವರ್ಗವು ಅವರು ನೀಡುತ್ತಿದ್ದ ಮಾಹಿತಿಗಳನ್ನು ಉಪಯೋಗಿಸಿಕೊಂಡು ಶ್ರೀಮಂತರ ಮನೆಗಳಲ್ಲಿ ನಡೆಯುತ್ತಿದ್ದ

ಪಿತೂರಿಗಳ ಬಗ್ಗೆ ಕಣ್ಣಿಟ್ಟಿತು. ಈ ಗೂಢಚರ್ಯ ವ್ಯವಸ್ಥೆಯ ಮೂಲಕವೇ ಕುಲೀನರು, ಅಧಿಕಾರಿಗಳು ನಡೆಸಿದ್ದ ಪೆತ್ರೋಗ್ರಾಡಿಗೆ ಕಲೆಡಿನ್‌ನನ್ನು ಕರೆಸುವ ಒಳಸಂಚು ಬಯಲಾಯಿತು. ಹಳೆಯ ಸರ್ಕಾರದ ಅನೇಕ ಗುಪ್ತ ಸಂಧಿಗಳ, ಒಳಒಪ್ಪಂದಗಳ ದಾಖಲೆಗಳೊಂದಿಗೆ ಓಡಿಹೋಗಿದ್ದ ನೆರಾತೊವ್ ಎಂಬುವನು ಜನರ ರೋಷಕ್ಕೆ ಬೆದರಿ, ಶರಣಾಗಿ ಎಲ್ಲ ದಾಖಲೆಗಳನ್ನು ತಂದು ಒಪ್ಪಿಸಿಬಿಟ್ಟ.

ಇನ್ನೊಂದು ಡಿಕ್ರಿಯ ಮೂಲಕ ವೃತ್ತಪತ್ರಿಕೆಗಳ ಮೇಲಿನ ನಿರ್ಬಂಧವನ್ನು ಬಿಗಿಗೊಳಿಸಲಾಯಿತು. ಎಲ್ಲಾ ಜಾಹಿರಾತು ಪ್ರಕಟಣೆಗಳನ್ನು ಸರ್ಕಾರಿ ಸ್ವಾಮ್ಯದ ಪತ್ರಿಕೆಗಳ ಮೂಲಕ ಮಾತ್ರ ಮಾಡಲಾಯಿತು. ಮೊದಲು ಇದನ್ನು ವಿರೋಧಿಸಿದ, ಮುರಿಯಲೆತ್ನಿಸಿದ ಪತ್ರಿಕೆಗಳೂ ಕೂಡ ಮೂರುವಾರದ ನಂತರ ದಾರಿಗೆ ಬಂದವು.

ಇಷ್ಟಾಗಿಯೂ ವಿವಿಧ ಸಚಿವಾಲಯಗಳಲ್ಲಿ ಅಧಿಕಾರಿಗಳ ಒಳಸಂಚು ನಡೆದೇ ಇತ್ತು. ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ಹುನ್ನಾರಗಳೂ ನಡೆಯುತ್ತಲೇ ಇದ್ದವು. ಆದರೆ ಸ್ಮೋಲ್ನಿಯಲ್ಲಿನ ಕ್ರಾಂತಿಕಾರಿ ಸರ್ಕಾರದ ಹಿಂದೆ ಇದ್ದದ್ದು ಇಡೀ ಜನತೆಯ ಸಂಕಲ್ಪಶಕ್ತಿ ಮಾತ್ರ. ಆದ್ದರಿಂದ ಲೆನಿನ್‌ರವರು ತಮ್ಮ ಹೊಸ ಘೋಷಣೆಯ ಮೂಲಕ ಅತ್ಯಂತ ಸರಳ ಮಾತುಗಳಲ್ಲಿ ಕ್ರಾಂತಿಯ ಮಹತ್ವವನ್ನು ವಿವರಿಸಿದರು. ಎಲ್ಲೆಡೆ ಜನತೆ ಅಧಿಕಾರವನ್ನು ತಮ್ಮ ಕೈಗಳಿಗೆ ತೆಗೆದುಕೊಳ್ಳಬೇಕು, ಆಸ್ತಿವಂತ ವರ್ಗಗಳ ಎಲ್ಲ ಪ್ರತಿರೋಧವನ್ನೂ ಮುರಿದುಹಾಕಬೇಕು, ಸರ್ಕಾರಿ ಸಂಸ್ಥೆಗಳ ಹತೋಟಿಯನ್ನು ಜನರೇ ಮಾಡಬೇಕು ಎಂಬುದು ಅವರ ಕರೆಯಾಗಿತ್ತು. ಕ್ರಾಂತಿಕಾರಿ ಶಿಸ್ತು! ಶಿಸ್ತುಬದ್ಧ ಉತ್ತರದಾಯಿತ್ವ – ನಿಯಂತ್ರಣ! ಮುಷ್ಕರಗಳಿಗೆ ವಿರಾಮ! ಪುಂಡಾಟಿಕೆ ಸಲ್ಲದು! ನವೆಂಬರ್ 20ರಂದು ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಎಚ್ಚರಿಕೆಯೊಂದನ್ನು ನೀಡಿತು:

*"ರೈತರು ಕಾರ್ಮಿಕರು ಸೈನಿಕರು ರಚಿಸಿಕೊಂಡಿರುವ ಸೋವಿಯತ್ ಸರ್ಕಾರದ ಅಧಿಕಾರವನ್ನು ಶ್ರೀಮಂತ ವರ್ಗಗಳು ವಿರೋಧಿಸುತ್ತವೆ. ಅವರ ಬೆಂಬಲದಿಂದಾಗಿ ಸರ್ಕಾರ ಮತ್ತು ಡ್ಯೂಮಾದಲ್ಲಿನ ಅಧಿಕಾರಿಗಳು ಕೆಲಸ ನಿಲ್ಲಿಸುತ್ತಿದ್ದಾರೆ. ಬ್ಯಾಂಕುಗಳು, ರೈಲು, ಅಂಚೆ – ತಂತಿ ಇಲ್ಲೆಲ್ಲಾ ಮುಷ್ಕರಗಳನ್ನು ಪ್ರಚೋದಿಸಲಾಗುತ್ತಿದೆ.*

ಅವರಿಗೆ ನಾವು, 'ನೀವು ಬೆಂಕಿಯೊಂದಿಗೆ ಸರಸವಾಡುತ್ತಿದ್ದೀರಿ, ಹುಷಾರ್!' ಎಂದು ಎಚ್ಚರಿಕೆ ನೀಡಲು ಇಚ್ಛಿಸುತ್ತೇವೆ. ಇಡೀ ದೇಶವೂ, ಸೈನ್ಯವೂ ಕ್ಷಾಮವನ್ನು, ಉಪವಾಸವನ್ನು ಎದುರಿಸುತ್ತಿದೆ. ಅವರಿಗೆ ಅವಶ್ಯ ವಸ್ತುಗಳನ್ನು ತಲುಪಿಸಲು ಸರ್ಕಾರ ಯತ್ನಿಸುತ್ತಿದೆ. ಇದನ್ನು ವಿರೋಧಿಸುವುದು ಜನತೆಯ ಮೇಲೆ ಎಸಗುವ ಅಪರಾಧ, ಇವುಗಳನ್ನು ನಿಲ್ಲಿಸದಿದ್ದರೆ ಶ್ರೀಮಂತ ವರ್ಗಗಳೇ ಇದರ ಫಲವನ್ನು ಅನುಭವಿಸಬೇಕಾಗುತ್ತದೆ. ಅವರ *ಆಹಾರದ ಹಕ್ಕನ್ನು ನಿರಾಕರಿಸಲಾಗುತ್ತದೆ. ಅವರ ಆಹಾರದ ದಾಸ್ತಾನನ್ನೂ, ಆಸ್ತಿ – ಪಾಸ್ತಿಯನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ."*

*ನವೆಂಬರ್ 22ರಂದು ನಗರದಲ್ಲಿ 'ವಿಶೇಷ ಪ್ರಕಟಣೆ' ಎಂಬ ಭಿತ್ತಿಪತ್ರ ಕಾಣಿಸಿಕೊಂಡಿತು.*

*ಉತ್ತರ ರಣಾಂಗಣದಿಂದ ಜನತಾ ಕಮಿಸಾರ್‌ಗಳಿಗೆ ತುರ್ತು ಟೆಲಿಗ್ರಾಂ ಬಂದಿದೆ.*

*"ಇನ್ನು ತಡವಾಗಬಾರದು. ಉಪವಾಸದಿಂದ ಸೈನ್ಯ ಸಾಯಕೂಡದು. ಅನೇಕ ದಿನಗಳಿಂದ ನಮ್ಮ ಸಮರಭೂಮಿಯ ಸೈನಿಕರಿಗೆ ಒಂದು ತುಂಡು ಬ್ರೆಡ್ಡೂ ಬಂದಿಲ್ಲ.*

*ಇದುವರೆಗೂ ಮುಟ್ಟದಿದ್ದ ಆಪತ್ಕಾಲೀನ ದಾಸ್ತಾನಿನಿಂದ ಬಿಸ್ಕತ್ತುಗಳನ್ನು ತೆಗೆದು ಹಂಚುತ್ತಿದ್ದೇವೆ. ಅದೂ ಮುಗಿಯುತ್ತಾ ಬಂದಿದೆ. ಮೂರು ವರ್ಷಗಳಿಂದ ಕಂದಕಗಳಲ್ಲಿ ಕಾದಾಡಿ, ರೋಗಗ್ರಸ್ತರಾಗಿ, ಚಿಂದಿಬಟ್ಟೆಯುಟ್ಟು, ಕಾಲಿಗೆ ಕೊರೆವ ಚಳಿಯಲ್ಲಿ ಶೂಗಳಿಲ್ಲದೆ ಒದ್ದಾಡುತ್ತಿರುವ ಸೈನಿಕರಿಗೆ ಹುಚ್ಚು ಹಿಡಿಯುವುದೊಂದೇ ಬಾಕಿ. ಹೀಗಾಗಿ ಅನೇಕ ಪ್ರತಿನಿಧಿಗಳು ಸೈನ್ಯದ ಒಂದು ದೊಡ್ಡ ಭಾಗವನ್ನು ಸಮರಭೂಮಿಯಿಂದ ದೇಶದ ಒಳಭಾಗಕ್ಕೆ ಕಳಿಸಬೇಕೆಂದೂ ಇಲ್ಲದಿದ್ದರೆ ಪ್ರವಾಹದಂತೆ ದೊಡ್ಡ ಸಂಖ್ಯೆಯಲ್ಲಿ ಅವರೆಲ್ಲಾ ಯುದ್ಧ ಬಿಟ್ಟೋಡಬಹುದೆಂದೂ ಆತಂಕ ವ್ಯಕ್ತಪಡಿಸಿದ್ದಾರೆ.*

*ಮಿಲಿಟರಿ ಕ್ರಾಂತಿಕಾರಿ ಸಮಿತಿಯು ಇದನ್ನು ಎಲ್ಲರ ಗಮನಕ್ಕೆ ತರುತ್ತಿದೆ. ರಣಾಂಗಣದ ಪರಿಸ್ಥಿತಿ ತುರ್ತು ಸಹಾಯವನ್ನು ಆಗ್ರಹಿಸುತ್ತಿದೆ. ಆದರೆ ಸರ್ಕಾರದಲ್ಲಿರುವ ಅಧಿಕಾರಿಗಳು ರೈಲ್ವೆ, ಬ್ಯಾಂಕ್‌ನ ಮೇಲ್‌ತರಗತಿ ಉದ್ಯೋಗಿಗಳು ಬೇಕೆಂದೇ ಅಸಹಕಾರ ತೋರುತ್ತಿದ್ದಾರೆ. ಈಗ ಒಂದೊಂದು ಘಂಟೆಯ ವಿಳಂಬವೂ ಸಾವಿರಾರು ಸೈನಿಕರನ್ನು ಬಲಿ ತೆಗೆದುಕೊಳ್ಳುತ್ತದೆ. ಹಾಗಾಗಿ ಇದು ಕೊನೆಯ ಎಚ್ಚರಿಕೆ, ವಿರೋಧಿಗಳು ಈಗಲೂ ದುಷ್ಕೃತ್ಯವನ್ನು ಮುಂದುವರೆಸಿದಲ್ಲಿ, ಅಪರಾಧಕ್ಕೆ ತಕ್ಕ ಶಿಕ್ಷೆ ಖಚಿತ."*

ಇಡೀ ದೇಶದಲ್ಲಿ ಈ ಕುಕೃತ್ಯಗಳ ವಿರುದ್ಧ ರೋಷದ ಕಾಳ್ಗಿಚ್ಚೇ ಹಬ್ಬಿತು. ಆದರೆ ಸರ್ಕಾರಿ ಉದ್ಯೋಗಿಗಳು ಮಾತ್ರ ತಮ್ಮನ್ನು ಸಮರ್ಥಿಸಿಕೊಂಡು ಪ್ರಕಟಣೆಗಳನ್ನು ಹಂಚಿದರು. ಬ್ಯಾಂಕಿನ ಅಧಿಕಾರಿಗಳು ಬೋಲ್ಶೆವಿಕರ ಹಿಂಸಾಚಾರದಿಂದಲೂ, ಮಿಲಿಯಾಂತರ ರೂಬಲುಗಳನ್ನು ಪೋಲುಮಾಡಲು ಅವರು ಹಣಕ್ಕಾಗಿ ಆಗ್ರಹಿಸುತ್ತಿರುವುದರಿಂದಲೂ ತಾವು ಅಸಹಕಾರ ತೋರಿಸುತ್ತಿರುವುದಾಗಿಯೂ, ತಾವು ಜನರ ಹಣವನ್ನು ಕಾಪಾಡಲು ಯತ್ನಿಸುತ್ತಿರುವುದಾಗಿಯೂ ತಮ್ಮ ಕೃತ್ಯಗಳನ್ನು ಸಮರ್ಥಿಸಿಕೊಂಡರು.

ಆದರೆ ಜನ ಇದನ್ನು ನಂಬಲು ತಯಾರಾಗಿರಲಿಲ್ಲ. ರೇಷನ್‌ಗಾಗಿ ನಿಂತ ಕ್ಯೂಗಳಲ್ಲಿ ನಾಗರಿಕರು ಕೆರೆನ್‌ಸ್ಕಿ ಆಡಳಿತದ ಕಾಲದಲ್ಲಿ ಸರ್ಕಾರವನ್ನು ಬೈದುಕೊಳ್ಳುತ್ತಿದ್ದರು. ಆದರೆ ಈಗ ಕಾರ್ಮಿಕರು ಮತ್ತು ಸೈನಿಕರು ಸರ್ಕಾರವನ್ನು ದೂಷಿಸದೆ, ಬದಲಾಗಿ ಅಧಿಕಾರಿಗಳೆಲ್ಲಾ ಏಜೆಂಟರು ಒಳಗಿನಿಂದಲೇ ಬತ್ತಿ ಇಡುತ್ತಿದ್ದಾರೆ ಎಂದು ಶಪಿಸುತ್ತಿದ್ದರು.

ಈ ಎಲ್ಲಾ ಪ್ರತಿಕ್ರಾಂತಿಕಾರಿ ಚಟುವಟಿಕೆಗಳ ಕೇಂದ್ರ ಕಾರಸ್ಥಾನವಾಗಿದ್ದದ್ದು ಡ್ಯೂಮಾ ಮತ್ತು ಅದರ ಆಕ್ರಮಣಕಾರಿ ಆಯುಧವಾದ ವಿಮೋಚನಾ ಸಮಿತಿ. ಅವರು ಸರ್ಕಾರದ ಆಜ್ಞೆಗಳನ್ನು ಧಿಕ್ಕರಿಸುತ್ತಾ, ಸೋವಿಯತ್ ಸರ್ಕಾರಕ್ಕೆ ಮನ್ನಣೆ ನೀಡದೆ, ಮೊಘಿಲೆವ್ ಪಟ್ಟಣದಲ್ಲಿ ಸ್ಥಾಪಿತವಾದ ಪ್ರತಿಕ್ರಾಂತಿಕಾರಿ ಸರ್ಕಾರದ ಜೊತೆ ಸಹಕರಿಸಿಕೊಂಡಿದ್ದರು. ನವೆಂಬರ್ 17ರಂದು ತಾನು ಮಾಡಿದ ಪ್ರಕಟಣೆಯಲ್ಲಂತೂ ಡ್ಯೂಮಾವು, ಎಲ್ಲ ನಗರಸಭೆಗಳಿಗೆ, ಸೋವಿಯತ್‌ಗಳಿಗೆ ಬೋಲ್ಶೆವಿಕ್ ಸರ್ಕಾರದ ವಿರುದ್ಧ ಹೋರಾಡಲು ಮತ್ತು ವಿಮೋಚನಾ ಸಮಿತಿಯನ್ನು ಬೆಂಬಲಿಸಲು ಕರೆ ನೀಡಿತು.

ಇಷ್ಟು ಹೊತ್ತಿಗೆ ಪೆತ್ರೋಗ್ರಾಡ್‌ನ ಸಂವಿಧಾನಾತ್ಮಕ ಶಾಸನ ಸಭೆಗೆ ಚುನಾವಣೆ ನಡೆದು ಅದರಲ್ಲಿ ಬೋಲ್ಶೆವಿಕರಿಗೆ ಭಾರೀ ಬಹುಮತ ದೊರೆಯಿತು. ಎಷ್ಟರಮಟ್ಟಿಗೆ ಎಂದರೆ ಮೆನ್ಶೆವಿಕಿ ಇಂಟರ್‌ನ್ಯಾಷನಲಿಸ್ಟ್‌ನಂತಹ ವಿಭಿನ್ನ ಧೋರಣೆಯುಳ್ಳ ಪಕ್ಷ ಸಹ ರಾಜಧಾನಿಯ ಜನತೆಯ ರಾಜಕೀಯ ಒಲುಮೆ ನಿಲುಮೆಗಳೂ ಬದಲಾಗಿವೆ, ಆದ್ದರಿಂದ ಡ್ಯೂಮಾಗೆ ಮತ್ತೆ ಚುನಾವಣೆ ನಡೆಸಬೇಕಾಗುತ್ತದೆ, ಎಂದಿತು. ಅಲ್ಲದೆ ಸುತ್ತಮುತ್ತಲಿನ

ಎಲ್ಲಾ ಪ್ರದೇಶಗಳ ರೈತ – ಕಾರ್ಮಿಕರಿಂದ ಪ್ರತಿಕ್ರಾಂತಿಕಾರಿ ಡ್ಯೂಮಾ ರಾಜಿನಾಮೆ ನೀಡಲಿ ಎಂಬ ಒತ್ತಾಯಗಳ, ನಿರ್ಣಯಗಳ ಮಳೆ ಸುರಿಯಿತು....

ನವೆಂಬರ್ 23ರಂದು ವಿಮೋಚನಾ ಸಮಿತಿಯನ್ನು ಹಾಗೂ 29ರಂದು ಪೆತ್ರೋಗ್ರಾಡ್ ಡ್ಯೂಮಾವನ್ನು ವಿಸರ್ಜಿಸಲಾಯಿತು. ಡ್ಯೂಮಾದ ವಿಸರ್ಜನೆಗೆ ಜನತಾ ಕಮಿಸಾರ್‌ಗಳ ಮಂಡಳಿಯು ಪ್ರಕಟಿಸಿದ ಆಜ್ಞೆಯ ಸಾರಾಂಶ ಹೀಗಿತ್ತು:

*ಸೆಪ್ಟೆಂಬರ್ 2ರಂದು, ಎಂದರೆ ಕ್ರಾಂತಿಗೆ ಮುನ್ನ, ಚುನಾಯಿತವಾಗಿದ್ದ ಪೆತ್ರೋಗ್ರಾಡ್ ನಗರ ಡ್ಯೂಮಾವು ಜನತೆಯ ಬೆಂಬಲವನ್ನು ಈಗ ಕಳೆದುಕೊಂಡಿದೆ ಎಂಬುದು ಸ್ಪಷ್ಟ. ಜನತೆಯ ಹೊಸ ಆಶೋತ್ತರಗಳನ್ನು ಪ್ರತಿನಿಧಿಸದ ಅದು ಚುನಾಯಿತ ಅಂಗವಾಗಿ ಕೆಲಸಮಾಡಲು ಅರ್ಹತೆಯನ್ನು ಕಳೆದುಕೊಂಡಿದೆ. ಆದರೂ ಅದು ಪ್ರತಿಕ್ರಾಂತಿಕಾರಿ ವಿರೋಧದ ನಿಲುವನ್ನು ಮುಂದುವರೆಸುತ್ತಾ ಸರ್ಕಾರಿ ಕೆಲಸಗಳಿಗೆ ಅಡಚಣೆ ಉಂಟುಮಾಡುತ್ತಿರುವುದರಿಂದ ಕೆಳಕಂಡ ಕ್ರಮಗಳು ಅನಿವಾರ್ಯವಾಗುತ್ತವೆ.*

*1917ರ ನವೆಂಬರ್ 30ರಿಂದ ಡ್ಯೂಮಾ ವಿಸರ್ಜನೆಗೊಳ್ಳುತ್ತದೆ. ಎಲ್ಲಾ ಡ್ಯೂಮಾದ ಚುನಾಯಿತ, ನೇಮಕಾತಿ ಹೊಂದಿರುವ ಅಧಿಕಾರಿಗಳು, ಹೊಸ ವ್ಯವಸ್ಥೆ ಆಗುವವರೆಗೂ ತಮ್ಮ ಕೆಲಸವನ್ನು ಮುಂದುವರೆಸಿಕೊಂಡು ಹೋಗುವುದು.*

*ಡ್ಯೂಮಾಗೆ ಮತ್ತೆ ಚುನಾವಣೆಯನ್ನು ಡಿಸೆಂಬರ್ 9ಕ್ಕೆ ಕರೆಯಲಾಗಿದ್ದು, ಹೊಸ ಡ್ಯೂಮಾದ ಪ್ರಥಮ ಸಭೆಯನ್ನು ಡಿಸೆಂಬರ್ 11ಕ್ಕೆ ಕರೆಯಲಾಗಿದೆ.*

*ಈ ಆಜ್ಞೆಯನ್ನು ವಿರೋಧಿಸುವವರನ್ನು, ಡ್ಯೂಮಾದ ಆಸ್ತಿಪಾಸ್ತಿಗೆ ಧಕ್ಕೆ ಉಂಟುಮಾಡುವವರನ್ನು, ಕ್ರಾಂತಿಕಾರಿ ಟ್ರಿಬ್ಯೂನಲ್‌ಗಳ ಎದುರು ವಿಚಾರಣೆಗೆ ಗುರಿಪಡಿಸಲಾಗುವುದು.*

ಇಷ್ಟಾಗಿಯೂ ಡ್ಯೂಮಾ ತನ್ನ ಸಭೆಗಳನ್ನು ಮುಂದುವರೆಸಿಕೊಂಡೇ ಇತ್ತು. "ರಕ್ತದ ಕೊನೆಯ ಹನಿಯವರೆಗೂ ನಮ್ಮ ಸ್ಥಾನಗಳನ್ನು ಉಳಿಸಿಕೊಳ್ಳಲು ಹೋರಾಡುತ್ತೇವೆ" ಎಂದು ಗುಡುಗುತ್ತಲೇ ಇತ್ತು. 'ನಮ್ಮನ್ನು ರಕ್ಷಿಸಲು ಮುಂದೆ ಬನ್ನಿ, ನಾವು ನಿಮ್ಮ ಚುನಾಯಿತ ಸಂಸ್ಥೆ' ಎಂದು ಜನತೆಗೆ ಕರೆಕೊಟ್ಟರೂ ಜನ ಮಾತ್ರ ಸ್ಪಂದಿಸಲೇ ಇಲ್ಲ. ಡ್ಯೂಮಾದ ಬಗ್ಗೆ ದ್ವೇಷವಿತ್ತು. ನವೆಂಬರ್ 30ರಂದು ಮೇಯರ್ ಶ್ರೈಡರ್ ಮತ್ತಿತರರನ್ನು ದಸ್ತಗಿರಿ ಮಾಡಿ, ವಿಚಾರಣೆ ನಡೆಸಿ ಬಿಡುಗಡೆ ಮಾಡಲಾಯಿತು. ಆದರೂ ಡ್ಯೂಮಾ ಸಭೆ ಮುಂದುವರಿದಾಗ, ಎಚ್ಚರಿಕೆಗಳನ್ನು ನೀಡಿ, ಕಡೆಗೆ ಡಿಸೆಂಬರ್ 2ರಂದು ಕೆಲವು ನಾವಿಕರು ಸಭೆ ನಡೆಯುವ ನಿಕೊಲಾಯ್ ಸಭಾಂಗಣವನ್ನು ಪ್ರವೇಶಿಸಿ ಇನ್ನು ಸಭೆಯನ್ನು ಬರ್ಖಾಸ್ತು ಮಾಡಬೇಕೆಂದು ಆಜ್ಞೆ ಮಾಡಿದರು. ಹತ್ತು ದಿನಗಳ ನಂತರ ಚುನಾಯಿತವಾದ ಹೊಸ ಡ್ಯೂಮಾವನ್ನು ಮಂದಗಾಮಿ ಸಮಾಜವಾದಿಗಳು ಪ್ರವೇಶಿಸದೆ, ಅದು ಬಹುತೇಕ ಬೋಲ್ಶೆವಿಕ್ ಸದಸ್ಯರಿಂದ ತುಂಬಿಹೋಯಿತು.

ಇನ್ನೂ ಕೆಲವು ಅಪಾಯಕಾರಿಯಾದ ಪ್ರತಿಕ್ರಾಂತಿಯ ಕೇಂದ್ರಗಳು ಉಳಿದುಕೊಂಡಿದ್ದವು. ಅವುಗಳಲ್ಲಿ ಮುಖ್ಯವಾದವು ತಮ್ಮನ್ನೇ 'ಗಣರಾಜ್ಯ' ಎಂದು ಘೋಷಿಸಿಕೊಂಡಿದ್ದ ಉಕ್ರೇನ್ ಮತ್ತು ಫಿನ್‌ಲೆಂಡ್. ಎರಡೂ ಕಡೆಯೂ ಅಲ್ಲಿನ ಸೇನೆಗಳು ಬೋಲ್ಶೆವಿಕರನ್ನು ಮಟ್ಟಹಾಕಲು ಯತ್ನಿಸುತ್ತಿದ್ದವು. ಉಕ್ರೇನ್ ಎಲ್ಲಾ ದಕ್ಷಿಣ ರಷ್ಯಾವನ್ನು ಆಕ್ರಮಿಸಿಕೊಂಡು ಕ್ರಾಂತಿವಿರೋಧಿಗಳ ದಂಡನಾಯಕ ಕಲೆಡಿನ್‌ಗೆ ಬೇಕಾದ ಜನಗಳನ್ನೂ

ಸಾಮಾಗ್ರಿಗಳನ್ನೂ ಒದಗಿಸುತ್ತಿತ್ತು. ಫಿನ್‌ಲೆಂಡ್ ಮತ್ತು ಉಕ್ರೇನ್ ಎರಡಕ್ಕೂ ಒಂದು ಕಡೆ ಜರ್ಮನರ ಬೆಂಬಲವೂ ಇತ್ತು. ಇನ್ನೊಂದು ಕಡೆ ಅವರ ವೈರಿಗಳೆನಿಸಿಕೊಂಡ ಮಿತ್ರ ರಾಷ್ಟ್ರಗಳಿಂದಲೂ ನೆರವು ಸಿಗುತ್ತಿತ್ತು. ಮಿತ್ರ ರಾಷ್ಟ್ರಗಳಂತೂ ಪ್ರತಿಕ್ರಾಂತಿಯ ನೆಲೆಗಳನ್ನು ಸೃಷ್ಟಿಸಲು ಬೇಕಾದಷ್ಟು ಧನ ಸಹಾಯವನ್ನು ನೀಡಿದವು. ಕಡೆಗೂ ಎರಡೂ ಕಡೆ ಬೋಲ್ಶೆವಿಕರೇ ಗೆದ್ದಾಗ, ಅಲ್ಲಲ್ಲಿನ ಆಳುವ ವರ್ಗಗಳು ತಮ್ಮನ್ನು ಮತ್ತೆ ಅಧಿಕಾರದಲ್ಲಿ ಪ್ರತಿಷ್ಠಾಪಿಸಲು ಬರಬೇಕೆಂದು ಜರ್ಮನ್ ಸಾಮ್ರಾಜ್ಯಶಾಹಿಗಳಿಗೆ ಕರೆ ನೀಡಿದವು.

ಅದೇನೇ ಇರಲಿ ಸೋವಿಯತ್ ಸರ್ಕಾರಕ್ಕೆ ಇಬ್ಬರು ಪ್ರಬಲವಾದ ಶತ್ರುಗಳು ದೇಶದ ಒಳಗೇ ಇದ್ದರು. ಒಂದು ಕಲೆಡಿನ್ ನೇತೃತ್ವದ ಕೊಸ್ಸಾಕರ ದಂಗೆ, ಎರಡನೆಯದು ಮೊಘಿಲೆವ್‌ನಲ್ಲಿದ್ದ ಸರ್ಕಾರದ ಪರವಾಗಿ ಝಾರ್‌ನ ಮಾಜಿ ಮಹಾದಂಡನಾಯಕನಾಗಿದ್ದ ಜನರಲ್ ದುಖೊನಿನ್‌ನ ನೇತೃತ್ವದ ಸೇನೆ.

ಎಲ್ಲಕಡೆಯೂ ಕಣ್ಣಿಗೆ ಬೀಳುವಂತೆ ಕ್ರಿಯಾಶೀಲನಾಗಿದ್ದ ಮುರಾವಿಯೊವ್‌ನನ್ನು ಕೊಸ್ಸಾಕರ ವಿರುದ್ಧದ ಯುದ್ಧಕ್ಕೆ ದಳಪತಿಯಾಗಿ ನೇಮಿಸಲಾಯಿತು. ಕಾರ್ಖಾನೆಗಳ ಕಾರ್ಮಿಕರನ್ನೇ ಒಟ್ಟುಗೂಡಿಸಿ ಕೆಂಪುಸೈನ್ಯವನ್ನು ರಚಿಸಲಾಯಿತು. ಅನೇಕ ಪ್ರಚಾರಕರನ್ನು ಡಾನ್ ನದಿಯ ಪ್ರಾಂತ್ಯಕ್ಕೆ ಕಳಿಸಿ ಕೊಸ್ಸಾಕರಿಗೆ ಬೋಲ್ಶೆವಿಕ್ ಸರ್ಕಾರದ ನೀತಿಗಳನ್ನು ವಿವರಿಸಲಾಯಿತು. ಸೋವಿಯತ್ ಸರ್ಕಾರವು ಜನಪರವಾದದ್ದು ಮತ್ತು ಅದನ್ನು ವಿರೋಧಿಸುವವರು ಜಮೀನ್ದಾರರು, ಪಾಳೆಯಗಾರರು, ಬ್ಯಾಂಕ್ ಮಾಲಿಕರು, ಸೇನಾಧಿಕಾರಿಗಳು ಮತ್ತು ಎಲ್ಲಾ ಆಸ್ತಿವಂತ ಜನ ಎಂಬುದನ್ನು ಮನವರಿಕೆ ಮಾಡಿಕೊಡಲೆತ್ನಿಸಲಾಯಿತು. ಅವರ ಆಸ್ತಿಯನ್ನು ಉಳಿಸಿಕೊಳ್ಳಲು ಶ್ರೀಮಂತರು ಕ್ರಾಂತಿಯನ್ನು ನಾಶಮಾಡಲು ಯತ್ನಿಸುತ್ತಿದ್ದಾರೆ ಎಂದೂ ಸ್ಪಷ್ಟಪಡಿಸಲಾಯಿತು.

ನವೆಂಬರ್ 27ರಂದು ಕೊಸ್ಸಾಕರ ನಿಯೋಗವೊಂದು ಲೆನಿನ್ ಮತ್ತಿತರ ನಾಯಕರನ್ನು ಭೇಟಿಮಾಡಲು ಬಂತು. ಮೊದಲಿಗೆ ನಮ್ಮ ಕೊಸ್ಸಾಕರ ಭೂಮಿಯನ್ನು ರಷ್ಯನ್ ರೈತರಿಗೆ ಹಂಚುವ ಯಾವ ಯೋಜನೆಯೂ ಇಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿಕೊಂಡರು. ನಂತರ ಯೋಚಿಸಿ ಅವರು ಕೇಳಿದ ಪ್ರಶ್ನೆ: "ನಮ್ಮ ಕೊಸ್ಸಾಕ್ ಜಮೀನ್ದಾರರ ಭೂಮಿಯನ್ನು ವಶಪಡಿಸಿಕೊಂಡು ನಮಗೆ ಹಂಚುತ್ತೀರಾ?" ಎಂದು. ಅದಕ್ಕೆ ಉತ್ತರಿಸುತ್ತಾ ಲೆನಿನ್ ಹೇಳಿದರು, "ಅದು ನೀವೇ ಮಾಡಬೇಕಾದ ಕೆಲಸ. ನಾವು ಕೊಸ್ಸಾಕರ ದುಡಿಯುವ ಜನತೆಗೆ ಎಲ್ಲ ಬೆಂಬಲವನ್ನು ನೀಡುತ್ತೀವಿ. ಮೊದಲು ನೀವು ಮಾಡಬೇಕಾದ ಕೆಲಸವೆಂದರೆ, ನಿಮ್ಮದೇ ಆದ ಸೋವಿಯತ್ ಜನಸಮಿತಿಗಳನ್ನು ರಚಿಸಿಕೊಳ್ಳುವುದು. ಆಗ ನಿಮಗೆ ತ್ಸೆ-ಇ-ಕಾದಲ್ಲಿ ಪ್ರಾತಿನಿಧ್ಯ ಸಿಗುತ್ತದೆ. ಆ ರೀತಿಯಲ್ಲಿ ಈ ಸರ್ಕಾರ ನಿಮ್ಮದೂ ಆಗುತ್ತದೆ."

ಕೊಸ್ಸಾಕರು ಇದನ್ನೇ ಚಿಂತನ ಮಂಥನ ಮಾಡಿಕೊಳ್ಳುತ್ತಾ ವಾಪಸ್ ಹೋದರು. ಎರಡು ವಾರದ ಮೇಲೆ ಕೊಸ್ಸಾಕ್ ಸೈನಿಕರ ನಿಯೋಗವೊಂದು ಜನರಲ್ ಕಲೆಡಿನ್‌ನನ್ನು ಭೇಟಿಯಾಯಿತು. ಅವರು ಕಲೆಡಿನ್‌ನನ್ನು "ನೀವು ಶ್ರೀಮಂತ ಕೊಸ್ಸಾಕರ ಭೂಮಿಯನ್ನು ಕೊಸ್ಸಾಕ್ ದುಡಿಯುವ ಜನರ ನಡುವೆ ಹಂಚುತ್ತೀರಾ?" ಎಂದು ಕೇಳಿದರು. ಕಲೆಡಿನ್ ರೋಷದಿಂದ "ಅದೆಲ್ಲಾ ಆಗುವುದಿದ್ದರೆ ನನ್ನ ಹೆಣ ಬಿದ್ದ ಮೇಲೆ" ಎಂದ. ಇದಾಗಿ ಒಂದು ತಿಂಗಳಿನಲ್ಲಿ ಅವನ ಕಣ್ಣೆದುರಿಗೇ ಅವನ ಇಡಿಯ ಸೈನ್ಯ ಕರಗಿಹೋಯಿತು.

ಕಲೆಡಿನ್ ತನ್ನ ತಲೆಗೆ ಗುಂಡು ಹೊಡೆದುಕೊಂಡು ಸತ್ತ. ಅಲ್ಲಿಗೆ ಕೊಸ್ಸಾಕ್ ಬಂಡಾಯ ಮುಗಿದಿತ್ತು.

* * *

ಇನ್ನೊಂದು ಕಡೆ ಮೊಘಿಲೆವ್ ಪಟ್ಟಣದಲ್ಲಿ ಹಳೆಯ ತ್ಸೆ–ಇ–ಕಾದ ನಾಯಕರು, "ಮಂದಗಾಮಿ" ಸಮಾಜವಾದಿ ಮುಖಂಡರು, ಹಳೆಯ ಸೈನ್ಯಾಧಿಕಾರಿಗಳು, ಪ್ರತಿಗಾಮಿ ಅಧಿಕಾರಿಗಳು ಎಲ್ಲರೂ ಒಂದಾಗಿದ್ದರು. ಇವರು ಜನತಾ ಕಮಿಸಾರ್‌ಗಳ ಮಂಡಳಿಯ ಸರ್ಕಾರಕ್ಕೆ ಮಾನ್ಯತೆ ನೀಡಲು ಒಪ್ಪಲಿಲ್ಲ. ಇವರ ಸುತ್ತ ಹಳೆಯ ಕ್ರಾಂತಿವಿರೋಧಿ ಸೇನಾ ತುಕಡಿಗಳು, ಸಮರಭೂಮಿಯಲ್ಲಿದ್ದ ಕೊಸ್ಸಾಕ್ ಸೈನಿಕರು, ಉಕ್ರೇನಿನ ಸರ್ಕಾರ, ಕಲೆಡಿನ್‌ನ ಬಂಡಾಯಗಾರರು, ಮಿತ್ರರಾಷ್ಟ್ರಗಳ ಸೇನಾಧಿಕಾರಿಗಳು ಸೇರಿಕೊಂಡಿದ್ದರು.

ನವೆಂಬರ್ 8ರಂದೇ ಸೋವಿಯತ್ ಮಹಾಧಿವೇಶನವು ಹೊರಡಿಸಿದ್ದ ಶಾಂತಿಯ ಕುರಿತಾದ ಡಿಕ್ರಿಗಾಗಲೀ, ಕದನ ವಿರಾಮದ ಪ್ರಸ್ತಾಪಕ್ಕಾಗಲೀ ಮಿತ್ರರಾಷ್ಟ್ರಗಳ ಸರ್ಕಾರಗಳು ಯಾವ ಉತ್ತರವನ್ನೂ ನೀಡಿರಲಿಲ್ಲ.

ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾದ ರಾಯಭಾರಿಗಳಿಗೆ ಟ್ರಾಟ್‌ಸ್ಕಿ ಒಂದು ಪತ್ರವನ್ನು ಕಳಿಸಿದ. ಅದರ ಸಾರಾಂಶ ಹೀಗಿದೆ:

ಸನ್ಮಾನ್ಯ ರಾಯಭಾರಿಗಳೇ,

*ನವೆಂಬರ್ 8ರಂದು ಅಖಿಲ ರಷ್ಯಾ ಸೋವಿಯತ್ ಮಹಾಧಿವೇಶನವು, ಜನತಾ ಕಮಿಸಾರ್‌ಗಳನ್ನೊಳಗೊಂಡ ಮಂಡಳಿಯ ರೂಪದಲ್ಲಿ ಹೊಸ ಸರ್ಕಾರವನ್ನು ರಚಿಸಿದೆ. ಇದರ ಅಧ್ಯಕ್ಷರು ವ್ಲಾದಿಮಿರ್ ಇಲ್ಯಿಚ್ ಲೆನಿನ್‌ರವರು. ಸರ್ಕಾರದಲ್ಲಿ ವಿದೇಶಾಂಗ ವ್ಯವಹಾರದ ಕಮಿಸಾರ್ ಆದ ನಾನು ಈ ಮೂಲಕ ಆ ಮಹಾಧಿವೇಶನವು ಜನತಾಂತ್ರಿಕ ಶಾಂತಿ ಹಾಗೂ ಕದನ ವಿರಾಮದ ಕುರಿತು ತೆಗೆದುಕೊಂಡ ನಿರ್ಣಯವನ್ನು ತಮಗೆ ಕಳಿಸುತ್ತಿದ್ದೇನೆ. ಇದನ್ನು ತಾವು ಶಾಂತಿ ಮಾತುಕತೆ ಹಾಗೂ ಕದನ ವಿರಾಮದ ಕುರಿತಾದ ನಮ್ಮ ಅಧಿಕೃತ ಪ್ರಸ್ತಾವ ಎಂದು ಅಂಗೀಕರಿಸಬೇಕಾಗಿ ವಿನಂತಿ.*

*ನಿಮ್ಮ ಜನತೆಯ ಕುರಿತಾದ ನಮ್ಮ ಗಾಢ ಗೌರವವನ್ನು ಸ್ವೀಕರಿಸಿ. ನಿಮ್ಮ ಜನ ಎಲ್ಲಾ ಜನತೆಯಂತೆ ಈ ಕ್ರೂರ ಯುದ್ಧದಿಂದ ನಿತ್ರಾಣರಾಗಿ ಶಾಂತಿಗಾಗಿ ಹಂಬಲಿಸುತ್ತಿದ್ದಾರಷ್ಟೇ.*

ಅದೇ ದಿನ ಜನತಾ ಕಮಿಸಾರ್‌ಗಳ ಮಂಡಳಿಯು ಜನರಲ್ ದುಖೊನಿನ್‌ಗೂ ಟೆಲಿಗ್ರಾಂ ಒಂದನ್ನು ಕಳಿಸಿತು. ಅದರ ಪಠ್ಯದ ಸಂಗ್ರಹ ಹೀಗಿತ್ತು:

*"... ಜನತಾ ಕಮಿಸಾರ್‌ಗಳ ಮಂಡಳಿಯು ಎಲ್ಲಾ ಮಿತ್ರ ಹಾಗೂ ಶತ್ರುರಾಷ್ಟ್ರಗಳಿಗೆ ಯಾವುದೇ ವಿಳಂಬವಿಲ್ಲದೆ ಶಾಂತಿ ಹಾಗೂ ಕದನ ವಿರಾಮದ ಪ್ರಸ್ತಾಪವನ್ನು ಮಾಡಲು ನಿರ್ಧರಿಸಿದ್ದು, ಅದಕ್ಕನುಗುಣವಾಗಿ ನಿರ್ಣಯವನ್ನು ಮಿತ್ರರಾಷ್ಟ್ರಗಳ ಪ್ರತಿನಿಧಿಗಳಿಗೆ ರಾಜಧಾನಿಯಲ್ಲಿ ಕಳಿಸಿಕೊಟ್ಟಿದೆ. ದಂಡನಾಯಕರಿಗೆ ಸರ್ಕಾರದ ಆಜ್ಞೆ ಇದು.*

*"ನೀವು ಕೂಡಲೇ ಶತ್ರು ಸೈನ್ಯದ ಮುಖ್ಯಸ್ಥರೊಂದಿಗೆ ಶಾಂತಿ ಮತ್ತು ಕದನವಿರಾಮದ ಪ್ರಸ್ತಾಪ ಮಾಡುವುದು. ಶತ್ರುಗಳೊಂದಿಗೆ ಮಾಡುವ ಯಾವುದೇ ಮಾತುಕತೆಯನ್ನು ಕೂಡಲೇ ತಂತಿಯ ಮೂಲಕ ಸರ್ಕಾರಕ್ಕೆ ತಿಳಿಸುವುದು. ಜನತಾ ಕಮಿಸಾರ್‌ಗಳ ಮಂಡಲಿಗೆ ವಿಷಯ ತಿಳಿಸಿ ಒಪ್ಪಿಗೆ ಪಡೆದುಕೊಂಡನಂತರವೇ ಒಪ್ಪಂದಕ್ಕೆ ಸಹಿ ಹಾಕಬೇಕು."*

ಮಿತ್ರರಾಷ್ಟ್ರಗಳ ರಾಯಭಾರಿಗಳೂ ಟ್ರಾಟ್‌ಸ್ಕಿಯ ಪತ್ರಕ್ಕೆ ದಿವ್ಯನಿರ್ಲಕ್ಷ್ಯ ತೋರಿಸಿ, ಪತ್ರಿಕಾ ಸಂದರ್ಶನಗಳಲ್ಲಿ ಅದನ್ನು ಲೇವಡಿ ಮಾಡಿದರು. ದುಖೋನಿನ್‌ಗೆ ಕಳಿಸಿರುವ ಪತ್ರವಂತೂ ಮಿತ್ರರಾಷ್ಟ್ರಗಳಿಗೆ ಬಗೆದ ದ್ರೋಹ ಎಂದು ಬಣ್ಣಿಸಿದರು.

ದುಖೋನಿನ್ ವಿಷಯ ತನಗೆ ಮುಟ್ಟಿತು ಎಂಬುದನ್ನು ಸಹ ತೋರಿಸಿಕೊಳ್ಳದೆ ಸುಮ್ಮನೆ ಕುಳಿತಿದ್ದ. ನವೆಂಬರ್ 22ರಂದು ದೂರವಾಣಿಯ ಮೂಲಕ ಸಂಪರ್ಕಿಸಿದಾಗ, ಆತ ಸೇನೆಯೂ ದೇಶವೂ ಒಪ್ಪಿಕೊಂಡಂಥ ಸರ್ಕಾರದಿಂದ ಮಾತ್ರ ಆಜ್ಞೆಯನ್ನು ಸ್ವೀಕರಿಸುವುದಾಗಿ ಹೇಳಿದ. ಅವನನ್ನು ಕೂಡಲೇ ಟೆಲಿಗ್ರಾಂ ಮೂಲಕ ಕಿತ್ತುಹಾಕಿ ಆ ಸ್ಥಾನಕ್ಕೆ ಕ್ರೈಲೆಂಕೋನನ್ನು ನೇಮಿಸಲಾಯಿತು. ನಂತರ ಎಂದಿನಂತೆ ಲೆನಿನ್, ನೇರವಾಗಿ ರೇಡಿಯೊ ಮೂಲಕ ಸಾಮಾನ್ಯ ಸೈನಿಕರನ್ನು, ಸೇನಾಸಮಿತಿಗಳನ್ನು ಸಂಪರ್ಕಿಸಿ ದುಖೋನಿನ್ ಪ್ರಕರಣವನ್ನು ವಿವರಿಸಿದರು. ಮತ್ತು ತಾವು ಯುದ್ಧನಿರತರಾಗಿರುವ ಎಲ್ಲ ಸ್ಥಳಗಳಲ್ಲಿ ಶತ್ರುಪಾಳೆಯದ ಸೇನಾ ಮುಖ್ಯಸ್ಥರೊಂದಿಗೆ ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ನೇರವಾಗಿ ಕದನವಿರಾಮವನ್ನು ಪ್ರಸ್ತಾಪಿಸಲು ಸೂಚಿಸಿದರು.

ನವೆಂಬರ್ 23ರಂದು ಮಿತ್ರರಾಷ್ಟ್ರಗಳು ಇನ್ನೊಂದು ತಂತ್ರವನ್ನು ಆರಂಭಿಸಿದವು. ಅವು ದುಖೋನಿನ್‌ಗೆ ಪತ್ರ ಬರೆದು, ಅವನು ತಮ್ಮನ್ನು ಬಿಟ್ಟು ಪ್ರತ್ಯೇಕವಾಗಿ ಜರ್ಮನಿಯೊಂದಿಗೆ ಯಾವುದೇ ಕದನ ವಿರಾಮದ ಒಪ್ಪಂದ ಮಾಡಿಕೊಳ್ಳಕೂಡದೆಂದೂ, ಹಾಗೆ ಮಾಡಿದರೆ ಅದರಿಂದ ರಷ್ಯಾದ ಮೇಲೆ ದುಷ್ಪರಿಣಾಮವಾಗುತ್ತದೆಂದೂ ಬೆದರಿಸಿದರು. ಅದನ್ನೇ ಕಾಯುತ್ತಿದ್ದ ದುಖೋನಿನ್ ಆ ಪತ್ರವನ್ನು ಎಲ್ಲಾ ಸೇನಾ ಸಮಿತಿಗಳಿಗೆ ಕಳಿಸಿ ಗೊಂದಲ ಮೂಡಿಸಲು ಯತ್ನಿಸಿದ.

ಮಾರನೆಯ ದಿನವೇ ಸರ್ಕಾರವು ಮತ್ತೊಂದು ಪತ್ರದ ಮೂಲಕ ಇಂಗ್ಲೆಂಡ್ – ಫ್ರಾನ್ಸ್ ಮೊದಲಾದ ರಾಷ್ಟ್ರಗಳು ಈ ರೀತಿಯಲ್ಲಿ ಕಳಿಸಿರುವ ಸಂದೇಶದ ಮೂಲಕ ರಷ್ಯಾದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ; ಅಲ್ಲದೇ ಝಾರ್‌ನ ಕಾಲದಲ್ಲಿ ಮಾಡಿಕೊಂಡ ಒಪ್ಪಂದದ ಮೂಲಕ ಯುದ್ಧವನ್ನು ಮುಂದುವರೆಸಲು ಬಲಾತ್ಕಾರ ಮಾಡಿದಂತಾಗುತ್ತದೆ ಎಂದು ಆಪಾದಿಸಿತು.

ಸರ್ಕಾರವು ದುಖೋನಿನ್‌ನ ದ್ರೋಹವನ್ನು ಬಯಲಿಗೆಳೆದು ಸ್ಮೋಲ್ನಿಯಿಂದ ಅನೇಕ ಪ್ರಕಟಣೆಗಳನ್ನು ಹೊರಡಿಸಿತು. ಮೊಘಿಲೆವ್‌ನಲ್ಲಿ ಕೂಡಿಕೊಂಡಿದ್ದ ಪ್ರತಿಗಾಮಿ ರಾಜಕಾರಣಿಗಳನ್ನು ಖಂಡಿಸಿತು. ಸಾವಿರ ಮೈಲು ಉದ್ದದ ರಣಾಂಗಣದಲ್ಲಿ ಎಲ್ಲೆಲ್ಲೂ ಸೈನಿಕರು ದುಖೋನಿನ್‌ನ ಪ್ರಯತ್ನಗಳನ್ನು ಸಂಶಯದಿಂದ ನೋಡುತ್ತಾ ಕುದಿಯ ಲಾರಂಭಿಸಿದರು. ಕ್ರೈಲೆಂಕೊ ರೋಷಾವಿಷ್ಟರಾದ ನಾವಿಕರ ಮೂರು ದಳಗಳೊಂದಿಗೆ ಪ್ರತೀಕಾರದ ಬೆದರಿಕೆಗಳನ್ನು ಘೋಷಿಸುತ್ತಾ ಹೊರಟ. ದಾರಿಯುದ್ದಕ್ಕೂ ಸೈನ್ಯದಳಗಳು ಹರ್ಷದಿಂದ ಅವನನ್ನು ಸ್ವಾಗತಿಸಿದರು. ಅದು ವಿಜಯದ ನಡಿಗೆಯಾಗಿಬಿಟ್ಟಿತು.

ಸುದ್ದಿ ತಲುಪಿದ ಮೊಘಿಲೆವ್‌ನ ನಗರ ರಕ್ಷಣಾ ದಳದವರು ಬಂಡೆದ್ದು ನಗರವನ್ನು ಹಿಡಿದುಕೊಂಡು ದುಖೋನಿನ್‌ನನ್ನೂ ಅವನ ಸೇನಾ ಸಮಿತಿಯನ್ನೂ ಬಂಧಿಸಿದರು. ವಿಜಯದ ಕೆಂಪು ಬ್ಯಾನರ್‌ಗಳನ್ನು ಹಿಡಿದು ಹೊಸ ಮಹಾದಂಡನಾಯಕನನ್ನು ಸ್ವಾಗತಿಸಿದರು.

ಕ್ರೈಲೆಂಕೊ ಮಾರನೆಯ ದಿನ ನಗರವನ್ನು ಪ್ರವೇಶಿಸಿದಾಗ ಅವನು ಕಂಡ ದೃಶ್ಯವೆಂದರೆ ದುಖೋನಿನ್‌ನನ್ನು ಬಂಧಿಸಿಟ್ಟಿದ್ದ ರೈಲ್ವೆ ಬೋಗಿಯ ಸುತ್ತ ಕೋಪೋದ್ರಿಕ್ತರಾದ ಸೈನಿಕರು

ಗುಂಪು ಸೇರಿ ಬೈಗುಳದ ಮಳೆಗರೆಯುತ್ತಿದ್ದುದು. ಕ್ರೈಲೆಂಕೊ ಭಾಷಣ ಮಾಡಿ ಅವರನ್ನು ಸಮಾಧಾನ ಮಾಡಲು ಯತ್ನಿಸಿದ. ದುಖೊನಿನ್‌ನನ್ನು ಪೆತ್ರೋಗ್ರಾಡ್‌ಗೆ ಒಯ್ದು ಕ್ರಾಂತಿಕಾರಿ ಟ್ರಿಬ್ಯೂನಲ್‌ನ ಮುಂದೆ ವಿಚಾರಣೆ ಮಾಡಬೇಕಾಗುತ್ತದೆ ಎಂದು ವಿವರಿಸಿದ. ಆದರೆ ಅಷ್ಟರಲ್ಲಿ ದುಖೊನಿನ್ ತಾನೂ ಭಾಷಣ ಮಾಡುವಂತೆ ಹೊರಗೆ ಕಾಣಿಸಿಕೊಂಡ. ಅವನನ್ನು ಕಂಡಕೂಡಲೇ ಜನರ ರೋಷ ನೂರ್ಮಡಿಯಾಗಿ ಬೋಗಿಯ ಮೇಲೆ ಮುಗಿಬಿದ್ದು ಅವನನ್ನು ಹೊರಗೆಳೆದು ಹೊಡೆದರು. ವೃದ್ಧ ಜನರಲ್ ಪೆಟ್ಟುತಿಂದು ಪ್ಲಾಟ್‌ಫಾರಂ ಮೇಲೇ ಸತ್ತುಹೋದ...

ಇಲ್ಲಿಗೆ ಸ್ತಾವ್ಕಾ ಬಂಡಾಯ ಕೊನೆಯಾಯಿತು.

ಹೀಗೆ ಕಡೆಯ ಪ್ರತಿಕ್ರಾಂತಿ ಕೇಂದ್ರವು ಉರುಳಿಹೋದ ಮೇಲೆ ಸೋವಿಯತ್ ಸರ್ಕಾರವು ತನ್ನ ಪ್ರಭುತ್ವದ ಉಪಕರಣಗಳನ್ನು ಹೆಚ್ಚಿನ ಆತ್ಮವಿಶ್ವಾಸದಿಂದ ಪುನರ್‌ಸಂಘಟಿಸಲು ಶುರುಮಾಡಿತು. ಎಷ್ಟೋ ಹಳೆಯ ಅಧಿಕಾರಿಗಳು, ಬೇರೆ ಬೇರೆ ಪಕ್ಷದ ಹಿಂಬಾಲಕರು ಕೆಲಸಗಳಿಗೆ ಮರಳಿದರು. ಆದರೆ ತುಂಬ ಹಣಕಾಸಿನ ಲಾಭದ ಆಸೆಯಿದ್ದವರಿಗೆ ಹೊಸ ಸರ್ಕಾರದ ಸಂಬಳವೇನೂ ಆಕರ್ಷಕವಾಗಿರಲಿಲ್ಲ. ಜನತಾ ಕಮಿಸಾರ್‌ಗಳಿಗೆ, ಎಂದರೆ ಕೇಂದ್ರ ಮಂತ್ರಿಗಳಿಗೆ, ನಿಗದಿಯಾಗಿದ್ದ ವೇತನವೇ ಐನೂರು ರೂಬಲ್‌ಗಳು. ಅಂದರೆ ಸುಮಾರು ಐವತ್ತು ಡಾಲರ್‌ಗಳು. ಸರ್ಕಾರಿ ನೌಕರರ ಮುಷ್ಕರ ತಾನೇ ಮುರಿದುಬಿತ್ತು. ಕಾರಣ, ಅದರ ಹಿಂದಿದ್ದ ಬಂಡವಾಳಶಾಹಿಗಳು ಜಾಣತನದಿಂದ ಹಿಂದೆ ಸರಿದು ತಮ್ಮ ಧನಸಹಾಯವನ್ನು ನಿಲ್ಲಿಸಿಬಿಟ್ಟಿದ್ದರು.

ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಜನತೆಯ ಆರ್ಥಿಕತೆಯನ್ನು ರೂಪಿಸುವ ಸರ್ವೋಚ್ಚ ಮಂಡಲಿ ಅಸ್ತಿತ್ವಕ್ಕೆ ಬಂತು. ಭೂಮಿ ಹಂಚಿಕೆಯ ಡಿಕ್ರಿಯು ಹಳ್ಳಿಗಳಲ್ಲಿ ಅನುಷ್ಠಾನಗೊಳ್ಳಲಾರಂಭಿಸಿತು. ಸೈನ್ಯದ ಜನತಾಂತ್ರಿಕ ಪುನರ್‌ಸಂಘಟನೆ ಆರಂಭವಾಯಿತು. ಸರ್ಕಾರದ ವಿವಿಧ ಅಂಗಗಳಲ್ಲೂ, ಜನತೆಯ ಜೀವನದಲ್ಲೂ ವ್ಯಾಪಕ ಬದಲಾವಣೆಗಳು ಕಂಡುಬರಲಾರಂಭಿಸಿದವು. ಇವೆಲ್ಲವೂ ಸಾಧ್ಯವಾದದ್ದು ರೈತ – ಕಾರ್ಮಿಕ – ಸೈನಿಕರ ಸಂಕಲ್ಪಶಕ್ತಿಯಿಂದಾಗಿ. ಎಷ್ಟೋ ತಪ್ಪುಗಳು, ಅಡೆತಡೆಗಳು ಇವೆಲ್ಲವುಗಳೊಂದಿಗೆ ಕಾರ್ಮಿಕರ ರಷ್ಯಾವನ್ನು ಎರಕ ಹೊಯ್ಯುವ ಕೆಲಸ ನಿಧಾನವಾಗಿ ಮುನ್ನಡೆಯತೊಡಗಿತು.

ಬೋಲ್ಶೆವಿಕರು ಅಧಿಕಾರವನ್ನು ಪಡೆದುಕೊಂಡದ್ದು ಆಸ್ತಿವಂತ ವರ್ಗಗಳೊಂದಿಗೆ ರಾಜಿ ಮಾಡಿಕೊಂಡು ಅಲ್ಲ, ಬೇರೆ ರಾಜಕೀಯ ಪಕ್ಷಗಳ ನಾಯಕರೊಂದಿಗೆ ಸೇರಿ ಮಸಲತ್ತು ಮಾಡಿಯೂ ಅಲ್ಲ, ಹಳೆಯ ಸರ್ಕಾರದ ಅಧಿಕಾರಶಾಹಿಯನ್ನು ಓಲೈಸಿಯೂ ಅಲ್ಲ. ಒಂದು ಸಣ್ಣ ಗುಂಪಿನ ಹಿಂಸಾಕೃತ್ಯಗಳಿಂದ ಖಂಡಿತ ಅಲ್ಲ. ಇಡೀ ರಷ್ಯಾದಾದ್ಯಂತ ಜನಸಮುದಾಯವು ಸಶಸ್ತ್ರ ಬಂಡಾಯಕ್ಕೆ ತಯಾರಾಗಿಲ್ಲದಿದ್ದರೆ ಅದು ಖಂಡಿತವಾಗಿಯೂ ವಿಫಲವಾಗಿಬಿಡುತ್ತಿತ್ತು. ಬೋಲ್ಶೆವಿಕರ ಯಶಸ್ಸಿನ ಕಾರಣ ಇಷ್ಟೇ. ಅವರು ಜನಸಮುದಾಯದ ಅತ್ಯಂತ ಸರಳ ಆಶೋತ್ತರಗಳನ್ನು ಗೆದ್ದುಕೊಟ್ಟರು. ಹಳೆಯ ವ್ಯವಸ್ಥೆಯನ್ನು ಮುರಿದುಬಿಸುಡುವ ಕಾರ್ಯದಲ್ಲಿ ಆ ಜನತೆಯನ್ನು ತೊಡಗಿಸಿಕೊಂಡರು ಮತ್ತು ಹಾಗೇ ನೆಲಕ್ಕೊರಗಿದ ವ್ಯವಸ್ಥೆಯ ಧೂಳಿನ ರಾಶಿಯ ನಡುವೆ ಅವರು ಜನತೆಯೊಂದಿಗೆ ಒಂದಾಗಿ ದುಡಿಯುತ್ತಾ ಹೊಸಜಗತ್ತಿನ ಬುನಾದಿಯನ್ನು ನಿರ್ಮಿಸಿದ್ದರು...

## ಅಧ್ಯಾಯ – 12

# ರೈತರ ಮಹಾಧಿವೇಶನ

ನವೆಂಬರ್ 18ರಂದು ಹಿಮ ಬೀಳಲು ಶುರುವಾಯಿತು. ಕಿಟಕಿಗಳ ಮೇಲೆಲ್ಲಾ ಕಟ್ಟಿಕೊಂಡಿದ್ದ ಹಿಮ. ಹಿಮ ದಟ್ಟವಾಗಿ ಹತ್ತು ಅಡಿಗಳ ಆಚೆಯ ವಸ್ತುಗಳು ಕಾಣುತ್ತಿರಲಿಲ್ಲ. ಮಾಮೂಲಿ ಟಾಂಗಾಗಾಡಿಗಳು ಚಕ್ರ ತೆಗೆದು ಹಿಮದ ಮೇಲೆ ಜಾರುವ ಬಂಡಿಗಳಾಗಿ ಮಾರ್ಪಾಟಾದವು. ಕ್ರಾಂತಿಯ ಸಮಯವಾದರೂ ಭವಿಷ್ಯದ ಬಗ್ಗೆ ಏನೇ ಆತಂಕವಿದ್ದರೂ ಹಿಮದ ಆಗಮನ ಇಡೀ ರಷ್ಯಾವನ್ನು ಸಂತಸದಲ್ಲಿ ಮುಳುಗಿಸಿತ್ತು. ಜನ ರಸ್ತೆಗೆ ನುಗ್ಗಿ ಹಿಮದ ಪಕಳೆಗಳು ಬೀಳುತ್ತಿದ್ದಾಗ ಕೈಗಳನ್ನು ಅಗಲಿಸಿ ಬೀಳುವ ಹಿಮವನ್ನು ಹಿಡಿಯಲೆತ್ನಿಸುತ್ತಾ ಹಿಮವನ್ನು ಅನುಭವಿಸುತ್ತಾ ಖುಷಿಪಟ್ಟರು.

ಸ್ಮೋಲ್ನಿ ಭವನದ ಎದುರು ಕೊಂಚ ದೂರದಲ್ಲಿ ಒಂದು ಅಗ್ಗವಾದ ಹೊಟೇಲ್ ಇತ್ತು. ಅದನ್ನು ತಮಾಷೆಯಾಗಿ 'ಅಂಕಲ್ ಟಾಮ್ಸ್ ಕ್ಯಾಬಿನ್' ಎಂದೇ ಕರೆಯುತ್ತಿದ್ದರು. ವಿಪರೀತ ಜನಸಂದಣಿಯಿದ್ದ ಈ ಕೊಳಕು ಹೊಟೇಲ್‌ಗೆ ರೆಡ್‌ಗಾರ್ಡ್‌ಗಳು ಯಾವಾಗಲೂ ಭೇಟಿ ಕೊಡುತ್ತಿದ್ದರು. ಒಂದು ಸಂಜೆ ನಾನಲ್ಲಿ ಕುಳಿತಿದ್ದೆ. ದಟ್ಟವಾದ ಸಿಗರೇಟ್ ಹೊಗೆಯ ನಡುವೆ ವೇಟರ್‌ಗಳು ಅವಸರದಿಂದ ಓಡಾಡುತ್ತಿದ್ದರು.

ಒಂದು ಮೂಲೆಯಲ್ಲಿ ಕ್ಯಾಪ್ಟನ್‌ನ ಸಮವಸ್ತ್ರದಲ್ಲಿದ್ದ ಅಧಿಕಾರಿಯೊಬ್ಬ ಒಂದಷ್ಟು ಜನರೊಂದಿಗೆ ವಾದ ಮಾಡುತ್ತಿದ್ದ.

"ನೀವು ಕೊಲೆಗಾರರಿಗಿಂತ ಏನೂ ಉತ್ತಮ ಇಲ್ಲ", ಅವನೆಂದ.

"ನಾವು ಯಾರನ್ನು ಕೊಲೆ ಮಾಡಿದ್ವಿ?" ಕಾರ್ಮಿಕನೊಬ್ಬ ಕೇಳಿದ.

"ಹೋದ ಭಾನುವಾರ ಯಂಕರ್‌ಗಳನ್ನು ಹೊಡೆದು ಹಾಕಿದ್ರಲ್ಲ."

"ಅವರು ನಮ್ಮನ್ನು ಕೊಲ್ಲೋಕೆ ಗುಂಡು ಹಾರಿಸಲಿಲ್ವ?" ಒಬ್ಬ ತನ್ನ ಮುರಿದ ಕೈ ತೋರಿಸಿ ಕೇಳಿದ.

"ನೀವು ಸುಮ್ಮನೆ ತಟಸ್ಥವಾಗಿರಬೇಕಿತ್ತು. ನೀವು ಯಾರು, ಕಾನೂನುಬದ್ಧವಾಗಿ ಇದ್ದ ಸರ್ಕಾರಾನ ನಾಶ ಮಾಡೋದಕ್ಕೆ? ಯಾರು ಆ ಲೆನಿನ್? ಆತ ಒಬ್ಬ ಜರ್ಮನ್ ಏಜೆಂಟ್..." ಅವರೆಲ್ಲಾ ಒಂದಾಗಿ ಈಗ ಅವನ ವಿರುದ್ಧ ಕೂಗಿದರು, "ನೀನು ಯಾರು? ನೀನೊಬ್ಬ ಏಜೆಂಟು, ಪ್ರತಿಕ್ರಾಂತಿಕಾರಿ."

ಕಡೆಗೆ ಅವನು ಎದ್ದು ಹೊರಡುತ್ತಾ "ನೀವು ರಷ್ಯಾದ ಜನತೆ ಅಂತ ಕರೆದುಕೊಳ್ತೀರ, ಆದರೆ ನೀವಲ್ಲ. ರಷ್ಯಾದ ಜನತೆ ರೈತರು, ರೈತರು ಜನ ಅಂದ್ರೆ, ಅವರು ಏನು ಹೇಳ್ತಾರೆ ಕಾದು ನೋಡಿ" ಎಂದ.

ಕಾರ್ಮಿಕರು ಮತ್ತೆ ಕೂಗಿಕೊಂಡರು, "ಅದು ನಿಜ, ರೈತರು ಏನು ಹೇಳ್ತಾರೆ ಕೇಳೋಣ. ಅವರು ತಾನೆ ಏನು ಹೇಳ್ತಾರೆ? ಅವರೂ ನಮ್ಮ ಹಾಗೆ ದುಡಿಯೋ ಜನ."

ರಷ್ಯಾದ ಭವಿಷ್ಯ ಈಗ ರೈತರ ಕೈಯ್ಯಲ್ಲಿತ್ತು. ಜನಸಂಖ್ಯೆಯಲ್ಲಿ ಶೇಕಡ ಎಂಭತ್ತಕ್ಕಿಂತ ಹೆಚ್ಚಾಗಿದ್ದ ರೈತರು ರಾಜಕೀಯವಾಗಿ ಹಿಂದುಳಿದಿದ್ದರು. ಅವರಲ್ಲಿ ಬೋಲ್ಶೆವಿಕರಿಗೆ ಬೆಂಬಲ ಕಡಿಮೆ. ಒಂದಾನೊಂದು ಕಾಲದಲ್ಲಿ ರೈತಾಪಿಗಳು ಸೋಷಲಿಸ್ಟ್ ರೆವಲ್ಯೂಶನರಿ ಪಾರ್ಟಿಯ ಹಿಂದೆ ಇದ್ದರು. ಆದರೆ ಈಗ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳದ್ದೇ ಮೇಲುಗೈ. ಈ ಪಕ್ಷವೇನೋ ಹೊಸ ಸರ್ಕಾರದ ಬೆಂಬಲಕ್ಕಿತ್ತು. ರಷ್ಯಾವನ್ನು ಎಂದೆಂದಿಗೂ ಕೇವಲ ಕಾರ್ಮಿಕರ ಏಕೈಕ ಸರ್ವಾಧಿಕಾರವನ್ನಾಗಿ ರೂಪಿಸುವುದು ಅಸಾಧ್ಯ. ರೈತರು ಬೇಕೇ ಬೇಕು. ನಗರಗಳಲ್ಲಿ ಕಾರ್ಮಿಕರ ಬೆಂಬಲವಿಲ್ಲದಿದ್ದ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ರೈತರ ಬೆಂಬಲವನ್ನು ಗಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸುತ್ತಿದ್ದರು.

ಏತನ್ಮಧ್ಯೆ ಸ್ಮೋಲ್ನಿಯಲ್ಲಿನ ಸೋವಿಯತ್ ಸರ್ಕಾರ ಸಹ ರೈತರನ್ನೇನೂ ಉಪೇಕ್ಷೆ ಮಾಡಿರಲಿಲ್ಲ. ಅವರು ಹಳೆಯ ರೈತರ ಕಾರ್ಯಕಾರಿಣಿಯನ್ನು ಬದಿಗೊತ್ತಿ ಹೊಸ ರೈತರ ಮಹಾಧಿವೇಶನಕ್ಕೆ ಕರೆ ನೀಡಿದ್ದರು. ಸಾವಿರಾರು ಪ್ರಚಾರಕರನ್ನು ರೈತರ ಮಧ್ಯೆ ಕೆಲಸ ಮಾಡಲು ಕಳಿಸಿಕೊಡಲಾಗಿತ್ತು. ಅವರಿಗೆ ಲೆನಿನ್ ಮತ್ತು ಕೃಷಿ ಮಂತ್ರಿ ಮಿಲಿಯುಟಿನ್ ಸೂಚನೆಗಳ ಪಟ್ಟಿಯನ್ನು ನೀಡಿದ್ದರು. ಅದರ ಮುಖ್ಯಾಂಶಗಳು ಹೀಗಿದ್ದವು.

- ಯಾವುದೇ ಪ್ರದೇಶಕ್ಕೆ ಭೇಟಿಕೊಟ್ಟ ಪ್ರಚಾರಕನು ಕೂಡಲೇ ಅಲ್ಲಿನ ಸೋವಿಯತ್‌ಗಳ ಸಭೆ ಕರೆದು ಅವರಿಗೆ ಕೃಷಿಗೆ ಸಂಬಂಧಿಸಿದ ಹೊಸ ಕಾನೂನುಗಳ ಕುರಿತು ಮಾಹಿತಿ ನೀಡಬೇಕು.
- ಆಯಾ ಪ್ರದೇಶದ ಕೃಷಿ ಸಮಸ್ಯೆಯನ್ನು ಅಧ್ಯಯನ ಮಾಡಬೇಕು.
- ಅಲ್ಲಿನ ಭೂಮಾಲಿಕರ ಜಮೀನನ್ನು ವಶಪಡಿಸಿಕೊಳ್ಳಲಾಗಿದೆಯೇ ಮತ್ತು ವಶಪಡಿಸಿಕೊಂಡ ನಂತರ ಅದು ಸೋವಿಯತ್‌ಗಳ ನಿಯಂತ್ರಣಕ್ಕೆ ಬಂದಿದೆಯೇ?
- ಕೃಷಿ ಯಂತ್ರಗಳು ಮತ್ತು ಜಾನುವಾರುಗಳು ಯಾರ ಹಿಡಿತದಲ್ಲಿವೆ?
- ಕೃಷಿಯಲ್ಲಿ ತೊಡಗಿಸಲ್ಪಟ್ಟ ಜಮೀನಿನ ಪ್ರಮಾಣ ಹೆಚ್ಚಾಗುತ್ತಿದೆಯೇ? ಸರ್ಕಾರ ಪ್ರತಿ ರೈತನಿಗೆ ನೀಡಬೇಕೆಂದಿರುವ ಸರಾಸರಿ ಜಮೀನಿಗೆ ಅಗತ್ಯ ಪ್ರಮಾಣದಲ್ಲಿ ಭೂಮಿ ಲಭ್ಯವಿದೆಯೇ?
- ಭೂಮಿ ದೊರೆತ ರೈತರು ಕೂಡಲೇ ಸಾಗುವಳಿಯ ಪ್ರದೇಶವನ್ನು ಹೆಚ್ಚಿಸಿ, ಕ್ಷಾಮದ ಸಮಸ್ಯೆಯನ್ನು ಪರಿಹರಿಸಲಾಗುವಂತೆ ಹೆಚ್ಚಿನ ಬೆಳೆ ಬೆಳೆದು ನಗರಗಳಿಗೆ ಕಳಿಸಿಕೊಡಬೇಕು.
- ಭೂಮಾಲಿಕರಿಂದ ಬೇಗನೆ ಭೂಮಿಯನ್ನು ಭೂಸಮಿತಿಗಳಿಗೆ ವರ್ಗಾಯಿಸಬೇಕು.
- ದಕ್ಷ ಕೃಷಿ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಸೋವಿಯತ್‌ಗಳು ಎಲ್ಲಾ ಕೃಷಿಗೆ ಸಂಬಂಧಿಸಿದ ಸಾಮಾನು ಸರಂಜಾಮುಗಳನ್ನು ಯೋಗ್ಯರೀತಿಯಲ್ಲಿ ನಿರ್ವಹಿಸಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಂಚಾರವಾದಂತಾಗಿತ್ತು. ಇದಕ್ಕೆ ಭೂಮಿಯ ಕುರಿತಾದ ಡಿಕ್ರಿ ಒಂದೇ ಕಾರಣವಲ್ಲ. ರಣಾಂಗಣದಿಂದ ಹಿಂದಿರುಗುತ್ತಿದ್ದ ತರುಣ ರೈತ–

ಸೈನಿಕರು ಕ್ರಾಂತಿಕಾರಿ ಚಿಂತನೆಗಳೊಂದಿಗೆ ಹಿಂದಿರುಗಿದ್ದರು. ಇವರೇ ಹೊಸ ರೈತ ಮಹಾಧಿವೇಶನವನ್ನು ಬೆಂಬಲಿಸಿದವರು.

ರೈತರ ನಾಯಕತ್ವವನ್ನು ಹೊಂದಿದ್ದೇವೆ ಎಂದು ಕೊಚ್ಚಿಕೊಳ್ಳುತ್ತಿದ್ದ ಹಳೆಯ ಕಾರ್ಯಕಾರಿ ಸಮಿತಿಯು ಆರಂಭದಲ್ಲಿ ರೈತರ ಮಹಾಧಿವೇಶನವನ್ನು ಬಹಿಷ್ಕರಿಸಿ ಎಂದು ಸಾಮಾನ್ಯ ರೈತರಿಗೆ ಕರೆ ನೀಡಿತ್ತು. ಆದರೆ ತಮ್ಮ ಮಾತು ನಡೆಯದಿದ್ದಾಗ ಆದಷ್ಟು ಹಳೆಯ ಸಂಪ್ರದಾಯವಾದಿ ಧೋರಣೆಯಿರುವ ರೈತ ಪ್ರತಿನಿಧಿಗಳನ್ನೇ ಕಳಿಸಿಕೊಡಿ ಎಂದು ಪ್ರಾಂತ್ಯಗಳಿಗೆ ತುರ್ತು ಟೆಲಿಗ್ರಾಂ ಕಳಿಸಿತು.

ಡ್ಯೂಮಾ ಕಟ್ಟಡದ ಅಲೆಗ್ಸಾಂಡರ್ ಸಭಾಂಗಣದಲ್ಲಿ ರೈತರ ಮಹಾಧಿವೇಶನದ ಮೊದಲ ಗೋಷ್ಠಿ ಆರಂಭವಾಯಿತು. ಪ್ರತಿನಿಧಿಗಳಲ್ಲಿ ಅರ್ಧದಷ್ಟು ಜನ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳಿದ್ದರೆ, ಕಾಲುಭಾಗ ಬಲಪಂಥೀಯ ಎಸ್.ಆರ್. ಗಳು ಮತ್ತು ಕೇವಲ ಐದನೆಯ ಒಂದು ಭಾಗ ಮಾತ್ರ ಬೋಲ್ಶೆವಿಕರು.

ಸಭಾಂಗಣ ಕಿಕ್ಕಿರಿದು ತುಂಬಿತ್ತು. ಗಿಜಿಗಿಜಿ ಶಬ್ದ ಆವರಿಸಿತ್ತು. ಪ್ರತಿನಿಧಿಗಳ ನಡುವೆ ಆಳವಾದ ಕಹಿಭಾವನೆಗಳ ಅಡ್ಡಗೋಡೆಗಳಿದ್ದವು. ಬಲಗಡೆಯಲ್ಲಿ ಕುಳಿತವರಲ್ಲಿ ಕೆಲವರಿಗೆ ಮಾಜಿ ಅಧಿಕಾರಿಗಳ ಸಮವಸ್ತ್ರದ ಚಿಹ್ನೆಗಳೂ ಇದ್ದವು. ಸ್ವಲ್ಪ ಸ್ಥಿತಿವಂತರೂ, ವಯಸ್ಸಾದ ಯಜಮಾನರೂ ಆ ಕಡೆ ಕುಳಿತಿದ್ದರು. ಮಧ್ಯದಲ್ಲಿ ಕೆಲವು ರೈತರು, ಸೇನೆಯ ಕೆಳದರ್ಜೆ ಅಧಿಕಾರಿಗಳು ಇದ್ದರು. ಎಡಗಡೆಯಲ್ಲಿ ಮಾತ್ರ ಹೆಚ್ಚಾಗಿದ್ದವರು ತರುಣರು, ಸೈನಿಕರ ಸಮವಸ್ತ್ರ ಧರಿಸಿದವರು. ಗ್ಯಾಲರಿಗಳಲ್ಲಿ ರೈತರ ಮನೆತನಗಳಿಂದ ಬಂದ ಕಾರ್ಮಿಕರು ತುಂಬಿದ್ದರು.

ಹಳೆ ಕಾರ್ಯಕಾರಿಣಿಯು ಇದನ್ನು ಅಧಿಕೃತ ಮಹಾಧಿವೇಶನ ಎಂದು ಒಪ್ಪಲಿಲ್ಲ. ಡಿಸೆಂಬರ್ 13ಕ್ಕೆ ಮಹಾಧಿವೇಶನವನ್ನು ನಾವು ಕರೆದಿದ್ದೇವೆ. ಇದೊಂದು ತುರ್ತುಸಭೆ ಅಷ್ಟೇ ಎಂದು ವೇದಿಕೆಯಿಂದ ಘೋಷಿಸಿದರು. ಆದರೆ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳ ನಾಯಕಿ ಮರಿಯ ಸ್ಪಿರಿದನೊವಾ ಸಮ್ಮೇಳನದ ಅಧ್ಯಕ್ಷರಾಗಿ ಚುನಾಯಿತರಾದಾಗ, ಹಳೆಯ ನಾಯಕತ್ವದ ಮಾತಿಗೆ ಯಾವ ಕಿಮ್ಮತ್ತೂ ಇಲ್ಲ ಎಂಬುದು ಸ್ಪಷ್ಟವಾಯಿತು. ಅಲ್ಲದೆ ಪ್ರತಿನಿಧಿಗಳು ಆದಷ್ಟು ವಿಶಾಲವಾದ ಪ್ರಾತಿನಿಧ್ಯವೂ ಅಧ್ಯಕ್ಷೀಯ ಮಂಡಳಿಯಲ್ಲಿರಬೇಕು ಎಂದು ಬಿಗಿಪಟ್ಟು ಹಿಡಿದರು. ಅಲ್ಲಿಂದಾಚೆಗೆ ಹಳೆಯ ಕಾರ್ಯಕಾರಿಣಿಯು ಮಹಾಧಿವೇಶನವನ್ನು ತೊರೆದು ಹೊರಟುಹೋಯಿತು. ಇಷ್ಟಕ್ಕೆ ಮೊದಲ ದಿನದ ಗೋಷ್ಠಿ ಮುಗಿದಿತ್ತು.

ಅದೇನೇ ಇರಲಿ, ಅಷ್ಟು ಸಮಯದಲ್ಲೇ ವೇದ್ಯವಾದದ್ದೇನೆಂದರೆ ಬಹುತೇಕ ಪ್ರತಿನಿಧಿಗಳು ಜನತಾ ಕಮಿಸಾರ್‌ಗಳ ಮಂಡಳಿಗೆ ವಿರುದ್ಧವಾಗಿದ್ದರು ಎಂಬುದು. ಝಿನೋವೀವ್ ಸರ್ಕಾರದ ಪರ ಮಾತನಾಡಲು ಯತ್ನಿಸಿದಾಗ ಜನ ಅವನನ್ನು ಕೇಕೆ ಹಾಕಿ ವೇದಿಕೆಯಿಂದ ಕೆಳಗಿಳಿಯುವಂತೆ ಮಾಡಿದರು. ಪ್ರಾಂತ್ಯದಿಂದ ಬಂದಿದ್ದ ಎಡಪಂಥೀಯ ಎಸ್.ಆರ್. ಪ್ರತಿನಿಧಿಯೊಬ್ಬ "ನಾವು ಈ ಸರ್ಕಾರವನ್ನು ಮಾನ್ಯ ಮಾಡುವುದಿಲ್ಲ. ಇದು ಬರೇ ಕಾರ್ಮಿಕರ ಸರ್ಕಾರ, ಇದು ಎಲ್ಲ ಜನರನ್ನು ಪ್ರತಿನಿಧಿಸಿಲ್ಲ" ಎಂದು ಕೂಗಿಕೊಂಡ.

ಪ್ರತಿಗಾಮಿಗಳಾಗಿದ್ದ ಪ್ರತಿನಿಧಿಗಳು ಈ ಒಡಕನ್ನು ಬಲಗೊಳಿಸಿದರು. ಬೋಲ್ಶೆವಿಕರ ವಿರೋಧವನ್ನು ಲೆಕ್ಕಿಸದೆ ಈ ಜನ ಸರ್ಕಾರವು ಮಹಾಧಿವೇಶನವನ್ನು

ನಿಯಂತ್ರಿಸಲೆತ್ನಿಸುತ್ತದೆ, ಸಾಧ್ಯವಾಗದಿದ್ದರೆ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಿ ಇದನ್ನು ವಿಸರ್ಜಿಸುತ್ತದೆ, ಎಂದು ಪ್ರಚಾರ ಮಾಡಿದರು. ಇದನ್ನು ಕೇಳಿದ ರೈತರ ರೋಷ ಇನ್ನಷ್ಟು ಹೆಚ್ಚಾಯಿತು.

ಮೂರನೆಯ ದಿನ ಲೆನಿನ್‌ರವರು ಇದ್ದಕ್ಕಿದ್ದಂತೆ ವೇದಿಕೆಯನ್ನೇರಿದರು. ಅವರಿಗೆ ಮಾತನಾಡಲು ಬಿಡದೆ ಸಭಾಂಗಣ ಹತ್ತು ನಿಮಿಷಗಳ ಕಾಲ ಗದ್ದಲದಲ್ಲಿ ಮುಳುಗಿಹೋಗಿತ್ತು. ಕೆಲವರು ಅವರಿಗೆ 'ಧಿಕ್ಕಾರ' ಹಾಕಿದರು. "ಯಾವ ಕಮಿಸಾರ್ ಸಹ ಇಲ್ಲಿ ಮಾತಾಡ್ಬೇಕಾಗಿಲ್ಲ" ಎಂದು ಕೂಗಾಡಿದರು.

ಲೆನಿನ್ ಎರಡೂ ಕೈಗಳಲ್ಲಿ ಡೆಸ್ಕ್‌ಅನ್ನು ಹಿಡಿದು ಪ್ರಶಾಂತವಾಗಿ ನಿಂತೇ ಇದ್ದರು. ಕೆಳಗಿನ ಕೋಲಾಹಲವನ್ನು ಅವರು ತಮ್ಮ ಪುಟ್ಟ ಪುಟ್ಟ ಕಣ್ಣುಗಳಿಂದ ನೋಡುತ್ತಾ ಇದ್ದರು. ಸ್ವಲ್ಪ ಗದ್ದಲ ಕಡಿಮೆಯಾದ ಮೇಲೆ ಅವರು ಹೇಳಿದರು :

"ನಾನು ಕಮಿಸಾರ್ ಆಗಿ ಇಲ್ಲಿ ಮಾತನಾಡಲು ಬಂದಿಲ್ಲ. ನಾನೂ ಒಬ್ಬ ಚುನಾಯಿತ ಪ್ರತಿನಿಧಿ, ಬೋಲ್ಶೆವಿಕ್ ಬಣದವನು." ಈಗ ಅವರು ಎಲ್ಲರಿಗೂ ಕಾಣುವಂತೆ ತಮ್ಮ ಪ್ರತಿನಿಧಿ ಕಾರ್ಡ್‌ಅನ್ನು ಎತ್ತಿಹಿಡಿದು ತೋರಿಸಿ ಮುಂದುವರೆದರು, "ಆದರೆ ಸರ್ಕಾರ ನಡೆಸುತ್ತಿರೋದು ಬೋಲ್ಶೆವಿಕರು ಎಂಬುದೇನೋ ನಿಜ". ಮತ್ತೆ ಗದ್ದಲ ಶುರುವಾದರೂ, ಅನೇಕರಿಗೆ ಈತನ ಮಾತನ್ನು ಕೇಳೋಣ ಎಂಬ ಕುತೂಹಲ ಹೆಚ್ಚುತ್ತಿತ್ತು.

ಲೆನಿನ್‌ರ ವಾದಸರಣಿ ತೀರಾ ಸರಳವಾಗಿತ್ತು: "ಬಂಧುಗಳೆ, ಹೇಳಿ, ನಿಮಗೆ ನಾವು ಶ್ರೀಮಂತ ಜಮೀನ್ದಾರರ ಭೂಮಿಯನ್ನು ಹಂಚಿದ್ದೇವೆ. ಅದೇ ರೀತಿ ಇನ್ನು ಮುಂದೆ ಕಾರ್ಮಿಕರಿಗೆ ಕಾರ್ಖಾನೆಗಳ ನಿಯಂತ್ರಣವನ್ನು ಬಂಡವಾಳಗಾರರಿಂದ ಕಸಿದುಕೊಂಡು ದುಡಿಯುವ ಜನಕ್ಕೆ ಒಪ್ಪಿಸುತ್ತೇವೆ. ಇದರಲ್ಲಿ ತಪ್ಪೇನು? ಇಂತಹ ಕ್ರಮಗಳು ಬಂಡವಾಳಗಾರರಿಗಾಗಲಿ, ಜಮೀನ್ದಾರರಿಗಾಗಲೀ ಹಿಡಿಸುವುದಿಲ್ಲ. ಅವರು ನಮ್ಮ ಒಗ್ಗಟ್ಟು ಮುರಿಯಲು ಯತ್ನಿಸುತ್ತಾರೆ. ನೀವು ಯಾರ ಕಡೆ ಇರಬೇಕೆನ್ನುತ್ತೀರಿ ?

"ಬೋಲ್ಶೆವಿಕ್ ಪಕ್ಷವು ಶ್ರಮಜೀವಿಗಳಿಗೆ ಸೇರಿದ್ದು. ಗ್ರಾಮೀಣ ಹಾಗೂ ಕೈಗಾರಿಕಾ ಶ್ರಮಜೀವಿಗಳಿಬ್ಬರಿಗೂ ಸೇರಿದ್ದು. ನಮ್ಮದು ಸೋವಿಯತ್ ಸರ್ಕಾರ. ನಾವು ಕಾರ್ಮಿಕರ, ಸೈನಿಕರ, ರೈತರ ಎಲ್ಲಾ ಸೋವಿಯತ್‌ಗಳಿಗೂ ರಕ್ಷಣೆ ನೀಡುತ್ತೇವೆ. ಆದ್ದರಿಂದಲೇ ರೈತ ಸೋವಿಯತ್‌ಗಳು ಸರ್ಕಾರವನ್ನು ಸೇರಬೇಕು ಎಂದು ಆಹ್ವಾನಿಸಿದ್ದೇವೆ. ಎಡವಾದಿ ಎಸ್.ಆರ್. ಗಳನ್ನು ಸರ್ಕಾರದೊಳಗೆ ಬನ್ನಿ ಎಂದು ಕರೆದಿದ್ದೇವೆ...

"ಸೋವಿಯತ್‌ಗಳು ಅತ್ಯಂತ ಪರಿಪೂರ್ಣ ಮಾದರಿಯಲ್ಲಿ ಜನತೆಯ ಪ್ರತಿನಿಧಿಗಳು, ಅದನ್ನು ಯಾರೇ ನಾಶಮಾಡಲು ಯತ್ನಿಸಿದರೂ ಅವರು ಜನತಂತ್ರ ವಿರೋಧಿಯಾಗುತ್ತಾರೆ. ಪ್ರತಿಕ್ರಾಂತಿಕಾರಿಗಳಾಗುತ್ತಾರೆ. ನಾವಿಲ್ಲಿ ಬಲಪಂಥೀಯ ಎಸ್.ಆರ್. ಗಳಿಗೂ ಕ್ಯಾಡೆಟ್ ಪಕ್ಷದವರಿಗೂ ಎಚ್ಚರಿಕೆ ನೀಡುತ್ತಿದ್ದೇವೆ. ನೀವು ಸೋವಿಯತ್‌ಗಳನ್ನು ನಾಶಪಡಿಸಲು ಸಾಂವಿಧಾನಿಕ ಶಾಸನಸಭೆಯ ಮೂಲಕ ಪ್ರಯತ್ನಿಸಿದರೆ, ನಾವು ಸಾಂವಿಧಾನಿಕ ಶಾಸನಸಭೆಗೆ ಅಂಥ ಯಾವ ಅವಕಾಶವನ್ನೂ ಕೊಡುವುದಿಲ್ಲ...!"

ನವೆಂಬರ್ 25ರಂದು ಹಳೆಯ ಕಾರ್ಯಕಾರಿ ಸಮಿತಿಯವರು ಚೆರ್ನೊವ್ ಎಂಬುವವನನ್ನು ಮೊಘಿಲೆವ್ ಪಟ್ಟಣದಿಂದ ಕರೆಸಿಕೊಂಡರು. ಒಂದು ಕಾಲದಲ್ಲಿ

ಉಗ್ರಕ್ರಾಂತಿಕಾರಿ ಎಂದೂ ರೈತರ ಜನಪ್ರಿಯ ನಾಯಕನೆಂದೂ ಹೆಸರು ಪಡೆದಿದ್ದ ಅವನನ್ನು ಕರೆಸಿಕೊಂಡ ಉದ್ದೇಶವೆಂದರೆ ಮಹಾಧಿವೇಶನವು ಎಡಪಂಥೀಯರತ್ತ ವಾಲುತ್ತಿರುವುದನ್ನು ತಡೆಯುವುದು. ಆದರೆ ಆತ ಕ್ರಾಂತಿಯ ಸಮಯದಲ್ಲಿ ಪೆತ್ರೋಗ್ರಾಡ್ ಮೇಲೆ ದಂಡೆತ್ತಿ ಬರಲು ಸೈನ್ಯ ತರಲೆತ್ನಿಸಿದ್ದ ಎಂದು ಬೋಲ್ಶೆವಿಕರು ಆಪಾದಿಸಿದರು. ಅದಕ್ಕೆ ಅವನ ಪಕ್ಷದ ಪತ್ರಿಕೆಗಳೇ ಸಾಕ್ಷಿ ಒದಗಿಸಿದ್ದವು. ಹೀಗಾಗಿ ಅಪಮಾನಿತನಾಗಿ ಅವನು ಗದ್ದಲದ ನಡುವೆ ಹೊರಗೆ ಹೋಗಬೇಕಾಯಿತು.

ಈಗ ಹಳೇ ಕಾರ್ಯಕಾರಿ ಸಮಿತಿಯನ್ನು ಏನು ಮಾಡುವುದು ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿತ್ತು. ಅವರು ಮಹಾಧಿವೇಶನವನ್ನು ಅನಧಿಕೃತ ಎಂದು ಹೊರನಡೆದಿದ್ದರಷ್ಟೇ. ಆದ್ದರಿಂದ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು 'ಅವರು ಮಹಾಧಿವೇಶನಕ್ಕೆ ಮಾನ್ಯತೆ ನೀಡದಿದ್ದರೆ, ಅಧಿವೇಶನವು ಅವರಿಗೆ ಮಾನ್ಯತೆ ನೀಡುವುದಿಲ್ಲ. ಅವರ ಅಧಿಕಾರವನ್ನು ಮಹಾಧಿವೇಶನವೇ ವಹಿಸಿಕೊಳ್ಳಲಿ' ಎಂಬ ನಿಲುವನ್ನು ತೆಗೆದುಕೊಂಡರು.

27ರಂದು ಜಮೀನಿನ ಪ್ರಶ್ನೆಯ ಕುರಿತು ನಡೆದ ಚರ್ಚೆಯಲ್ಲಿ ಬೋಲ್ಶೆವಿಕರಿಗೂ, ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳಿಗೂ ಇದ್ದ ಭಿನ್ನಾಭಿಪ್ರಾಯಗಳು ಬೆಳಕಿಗೆ ಬಂದವು. ಎಡಪಂಥೀಯ ಎಸ್.ಆರ್.ಗಳ ಪರವಾಗಿ ಕೆವಾಲ್‌ಚೆನ್‌ಸ್ಕಿ ಎಂಬಾತ ಮಾತನಾಡಿ ಭೂಮಿಯ ಪ್ರಶ್ನೆಯ ಕುರಿತು ಕ್ರಾಂತಿಯ ಸಂದರ್ಭದಲ್ಲಿ ನಡೆದ ಘಟನಾವಳಿಗಳ ಇತಿಹಾಸದ ಬಗ್ಗೆ ತಮ್ಮ ಪಕ್ಷದ ವ್ಯಾಖ್ಯಾನವನ್ನು ಮಂಡಿಸಿದ : "ರೈತರ ಸೋವಿಯತ್‌ಗಳ ಪ್ರಥಮ ಮಹಾಧಿವೇಶನದಲ್ಲಿಯೇ ಜಮೀನುಗಳನ್ನು ಭೂಮಿ ಸಮಿತಿಗೆ ಒಪ್ಪಿಸಬೇಕೆಂಬ ಗೊತ್ತುವಳಿಯನ್ನು ಅಂಗೀಕರಿಸಲಾಗಿತ್ತು. ಆದರೆ ಆಗ ಕ್ರಾಂತಿಯ ಮುಂಚೂಣಿಯಲ್ಲಿದ್ದ ಬೂರ್ಶ್ವಾವರ್ಗಗಳು, ಇದರ ಬಗ್ಗೆ ಸಾಂವಿಧಾನಿಕ ಶಾಸನಸಭೆ ತೀರ್ಮಾನ ತೆಗೆದುಕೊಳ್ಳಲಿ ಎಂದು ಅದನ್ನು ಮುಂದೂಡುತ್ತಾ ಬಂದರು.

"ಕ್ರಾಂತಿಯ ಎರಡನೆಯ ಅವಧಿಯಲ್ಲಿ ರಾಜಿ ಮನೋಭಾವವೇ ಮೇಲುಗೈ ಪಡೆಯಿತು. ಚೆರ್ನೊವ್‌ನಂಥವರು ಮಂತ್ರಿಮಂಡಲ ಸೇರಿದರೂ ಸಹ ರೈತರ ನಿರೀಕ್ಷೆಯಂತೆ ಭೂಮಿಯ ಪ್ರಶ್ನೆಗೆ ಪರಿಹಾರ ಸಿಗಲೇ ಇಲ್ಲ. ಪ್ರತಿಗಾಮಿಗಳು ಮತ್ತು ರಾಜಿಪರ ಶಕ್ತಿಗಳು ಯಾವುದೇ ಸಕಾರಾತ್ಮಕ ಮುನ್ನಡೆ ಸಾಧ್ಯವಾಗದಂತೆ ನೋಡಿಕೊಂಡರು. ರೈತರು ತಾಳ್ಮೆ ಕಳೆದುಕೊಂಡರು. ಅವರಿಗೆ ಕ್ರಾಂತಿ ಎಂದರೆ ಏನೆಂದು ತಿಳಿದಿತ್ತು. ಅವರು 'ಮಾತುಗಳನ್ನು' ಕ್ರಿಯೆಗೆ ಇಳಿಸಲು ಕಾತರರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರಂಭವಾಗಿರುವುದು ದಂಗೆಯಲ್ಲ, ದುಸ್ಸಾಹಸವಲ್ಲ, ನಿಜವಾದ ಜನಸಮುದಾಯದ ಬಂಡಾಯ.

"ಸಾಮಾನ್ಯವಾಗಿ ಬೋಲ್ಶೆವಿಕರು ಈ ವಿಷಯದಲ್ಲಿ ತೆಗೆದುಕೊಂಡ ನಿಲುವು ಸರಿಯಾಗೇ ಇದೆ. ಆದರೆ ರೈತರು ಬಲಾತ್ಕಾರದಿಂದ ಜಮೀನನ್ನು ಕಸಿದುಕೊಳ್ಳಲಿ ಎಂದು ಹೇಳುವ ಮೂಲಕ ಅವರು ಅರಾಜಕತಾವಾದಕ್ಕೆ ಆಹ್ವಾನ ನೀಡಿದ್ದಾರೆ. ಬೋಲ್ಶೆವಿಕರಿಗೆ ಕ್ರಾಂತಿಯ ಪ್ರಧಾನ ಪ್ರಶ್ನೆಗಳನ್ನು ಬೇಗ ಪರಿಹರಿಸುವುದು ಮುಖ್ಯವಾಗಿಹೋಯಿತು. ಆದರೆ ಹೇಗೆ ಪರಿಹರಿಸಬೇಕೆಂಬುದು ಗೌಣವಾಯಿತು. ಈ ಪ್ರಶ್ನೆಯನ್ನು ಸಾಂವಿಧಾನಿಕ ಶಾಸನಸಭೆ ಆರಂಭವಾಗುವವರೆಗೂ ಉಳಿಸಬಾರದು ಎಂಬುದು ಅವರ ಇರಾದೆ.

"ಇದಲ್ಲದೆ, ಕೂಡಲೇ ಕಾರ್ಯಗತ ಮಾಡಲಾಗುವಂತಹ ಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ಅವಶ್ಯವಾಗಿಬಿಟ್ಟಿತು. ಆದ್ದರಿಂದ ಅದು ಭೂಸಮಿತಿಗಳ ನಿಯಮಾವಳಿಗಳನ್ನೂ ಪ್ರಕಟಿಸಿಬಿಟ್ಟಿತು. ಇದರಿಂದ ಒಂದು ವಿಚಿತ್ರವಾದ ಸನ್ನಿವೇಶ ಸೃಷ್ಟಿಯಾಗಿದೆ. ಜನತಾ ಕಮಿಸಾರ್‌ಗಳ ಮಂಡಳಿಯ ಆಜ್ಞೆಯ ಪ್ರಕಾರ ಭೂಮಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಖಾಸಗಿ ಆಸ್ತಿ ಇರುವುದಿಲ್ಲ. ಆದರೆ ಹೊಸದಾಗಿ ಮಾಡಿರುವ ಭೂಮಿ ಸಮಿತಿಯ ನಿಯಮಾವಳಿಗಳ ಪ್ರಕಾರ ಜಮೀನಿನಲ್ಲಿ ಖಾಸಗಿ ಆಸ್ತಿಯನ್ನು ಮಾನ್ಯ ಮಾಡಲಾಗಿದೆ. ಇರಲಿ ಬಿಡಿ, ತೊಂದರೆ ಏನೂ ಇಲ್ಲ. ಭೂಮಿ ಸಮಿತಿಗಳು ಸೋವಿಯತ್ ಸರ್ಕಾರದ ಆಜ್ಞೆಗಳನ್ನು ಪಕ್ಕಕ್ಕಿಟ್ಟು ಯಾವ ಕ್ರಮ ಕಾರ್ಯಸಾಧುವೋ ಅದನ್ನೇ ಜಾರಿಗೊಳಿಸುತ್ತಿವೆ. ಅವರು ಶಾಸನದ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಅದನ್ನು ಸಾಂವಿಧಾನಿಕ ಶಾಸನಸಭೆ ರೂಪಿಸಲಿ ಎಂದುಬಿಟ್ಟಿದ್ದಾರೆ. ಆದರೆ ಆ ಸಭೆ ಅದನ್ನು ಮಾಡಲಾಗದು. ಅಂಥ ಸಂದರ್ಭದಲ್ಲಿ ರೈತರ ಸಂಕಲ್ಪಕ್ಕನುಗುಣವಾಗಿಯೇ ಅದು ಭೂಮಿ ಪ್ರಶ್ನೆಯನ್ನು ಪರಿಹರಿಸಬೇಕಾಗುತ್ತದೆ."

ಆನಂತರ ಲೆನಿನ್ ಮಾತನಾಡಿದರು. ಈಗ ಮಹಾಧಿವೇಶನ ಹೆಚ್ಚು ಗಮನಕೊಟ್ಟು ಅವರ ಮಾತನ್ನು ಆಲಿಸುತ್ತಿತ್ತು. ಅವರ ಮಾತಿನ ಸಾರಾಂಶ ಹೀಗಿತ್ತು:

"ಈ ಹೊತ್ತು ನಾವು ಬರಿಯ ಭೂಮಿಯ ಪ್ರಶ್ನೆಯನ್ನು ಬಗೆಹರಿಸಲು ಯತ್ನಿಸುತ್ತಿಲ್ಲ. ಸಾಮಾಜಿಕ ಕ್ರಾಂತಿಯ ಪ್ರಶ್ನೆಯನ್ನು – ಕೇವಲ ರಷ್ಯಾದ್ದಲ್ಲ, ಜಾಗತಿಕ ಕ್ರಾಂತಿಯ ಪ್ರಶ್ನೆಯನ್ನು– ಬಗೆಹರಿಸಲು ಯತ್ನಿಸುತ್ತಿದ್ದೇವೆ. ಭೂಮಿಯ ಪ್ರಶ್ನೆಯನ್ನು ಸಾಮಾಜಿಕ ಕ್ರಾಂತಿಯ ಪ್ರಶ್ನೆಯಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ಉದಾಹರಣೆಗೆ, ನಾವು ಭೂಮಿಯನ್ನು ವಶಪಡಿಸಿಕೊಳ್ಳಲು ಹೋದಾಗ ಅದಕ್ಕೆ ಪ್ರತಿರೋಧ ಒಡ್ಡುವುದು ಕೇವಲ ರಷ್ಯನ್ ಭೂಮಾಲಿಕರಲ್ಲ. ವಿದೇಶೀ ಬಂಡವಾಳಗಾರರೂ ಇದನ್ನು ವಿರೋಧಿಸುತ್ತಾರೆ. ಏಕೆಂದರೆ ಇವರಿಬ್ಬರಿಗೂ ಬ್ಯಾಂಕುಗಳ ಮೂಲಕ ಹಣಕಾಸಿನ ಸಂಬಂಧಗಳಿವೆ.

"ರಷ್ಯಾದಲ್ಲಿ ಭೂಮಿಯ ಒಡೆತನವು ಅಪಾರವಾದ ಶೋಷಣೆ ಮತ್ತು ದಮನಕ್ಕೆ ಎಡೆಮಾಡಿಕೊಟ್ಟಿದೆ. ಭೂಮಿಯನ್ನು ರೈತರು ವಶಕ್ಕೆ ತೆಗೆದುಕೊಳ್ಳುವುದು ಕ್ರಾಂತಿಯಲ್ಲಿ ಒಂದು ಮುಖ್ಯ ಹೆಜ್ಜೆ. ಆದರೆ ಕ್ರಾಂತಿ ಹಾದುಹೋಗಬೇಕಾದ ಅನೇಕ ಹಂತಗಳಿಂದ ಅದನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು ಮಾಡಿದ ತಪ್ಪೆಂದರೆ, ಹಿಂದಿನ ಸಂದರ್ಭದಲ್ಲಿ ರಾಜಿಸೂತ್ರಗಳನ್ನು ವಿರೋಧಿಸದೇ ಉಳಿದದ್ದು. ಆಗ ಅವರು ನೀಡಿದ ಕಾರಣವೆಂದರೆ ಜನತೆಯ ಪ್ರಜ್ಞಾಮಟ್ಟ ಸಾಕಷ್ಟು ಬೆಳೆದಿಲ್ಲ ಎಂಬುದು.

*"ಆದರೆ ಜನತೆಯ ಬೌದ್ಧಿಕ ಸಾಮರ್ಥ್ಯ ಸಾಕಷ್ಟು ಬೆಳೆದಾಗ ಮಾತ್ರವೇ ಸಮಾಜವಾದ ಅಸ್ತಿತ್ವಕ್ಕೆ ಬರುತ್ತದೆ ಎನ್ನುವುದಾದರೆ, ಮುಂದಿನ ಐನೂರು ವರ್ಷಗಳಲ್ಲೂ ನಾವು ಸಮಾಜವಾದವನ್ನು ಕಣ್ಣಲ್ಲಿ ನೋಡುವುದೂ ಸಾಧ್ಯವಿಲ್ಲ.*

ಕಾರ್ಮಿಕ ವರ್ಗದ ಮುಂಚೂಣಿ ದಳವಾದ ಸಮಾಜವಾದಿ ರಾಜಕೀಯ ಪಕ್ಷವು, ಜನತೆ ಹಿಂದುಳಿದಿದ್ದಾರೆ ಎಂದು ತಾನೂ ನಿಂತಕಡೆ ನಿಲ್ಲದೆ ಕ್ರಾಂತಿಕಾರಿ ಮುಂದೊಡಗಿರುವ ಸೋವಿಯತ್‌ಗಳ ಮೂಲಕ ಮುನ್ನಡೆಯಬೇಕು... ರಾಜಿ

ಮನೋಭಾವ ಮುಂದುವರೆದರೆ ಕ್ರಾಂತಿ ಕಣ್ಮರೆಯಾಗುತ್ತದೆ. ಬೂರ್ಶ್ವಾವರ್ಗದೊಂದಿಗೆ ರಾಜಿ ಅಸಾಧ್ಯ...

"ನಾವು ಬೋಲ್ಶೆವಿಕರು ನಮ್ಮ ಭೂಮಿಯ ಕುರಿತಾದ ಕಾರ್ಯಕ್ರಮವನ್ನು ಬದಲಾಯಿಸಿಲ್ಲ. ಜಮೀನಿನಲ್ಲಿ ಖಾಸಗಿ ಆಸ್ತಿ ಇರಕೂಡದೆಂಬ ನಮ್ಮ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲ... ಭೂಮಿ ಸಮಿತಿಯ ಕುರಿತು ನಾವು ಮಾಡಿರುವ ನಿಯಮಾವಳಿಯು ಖಾಸಗಿ ಆಸ್ತಿಯ ಮೇಲೆ ಆಧಾರವಾಗಿಲ್ಲ. ಎಲ್ಲಾ ಜನತೆಯ ಸಂಕಲ್ಪಕ್ಕೆ ಅನುಗುಣವಾಗಿ ಅದನ್ನು ಅಂಗೀಕರಿಸಲಾಗಿದೆ. ಇದರ ಮೂಲಕ ಕ್ರಾಂತಿಯನ್ನು ಅಪೇಕ್ಷಿಸುವ ಎಲ್ಲರನ್ನೂ ಒಂದುಗೂಡಿಸುವುದು ನಮ್ಮ ಉದ್ದೇಶ. ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳು, ಹಿಂದೆ ತಿರುಗಿ ನೋಡುತ್ತಾ ಇರದೆ, ರಾಜಿಪರ ಶಕ್ತಿಗಳನ್ನು ದೂರವಿರಿಸಿ ಸರ್ಕಾರ ಸೇರಬೇಕೆಂಬುದು ನಮ್ಮ ಆಹ್ವಾನ.

"ಇನ್ನು ಸಾಂವಿಧಾನಿಕ ಶಾಸನಸಭೆಯ ಬಗ್ಗೆ ನನ್ನ ಮುಂಚಿನ ಭಾಷಣಕಾರರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಜನರ ಸಂಕಲ್ಪಶಕ್ತಿಯ ಮೇಲೆ ಸಾಂವಿಧಾನಿಕ ಶಾಸನಸಭೆ ಏನು ಮಾಡುತ್ತದೆ ಎಂಬುದು ತೀರ್ಮಾನವಾಗುತ್ತದೆ.

"ನಾನು ಹೇಳುವುದಿಷ್ಟೇ, ಕ್ರಾಂತಿಕಾರಿ ಸಂಕಲ್ಪ ಶಕ್ತಿಯ ಮೇಲೆ ವಿಶ್ವಾಸವಿಡಿ, ಆದರೆ ನಿಮ್ಮ ಬಂದೂಕು ನಿಮ್ಮ ಕೈಯ್ಯಲ್ಲಿರಲಿ, ಅದನ್ನು ಮಾತ್ರ ಮರೆಯಬೇಡಿ."

ನಂತರ ಲೆನಿನ್ ಬೋಲ್ಶೆವಿಕರ ಪರವಾಗಿ ಗೊತ್ತುವಳಿಯನ್ನು ಮಂಡಿಸಿದರು. ಅದರಲ್ಲಿ ವಿವರಿಸಿದ ಮುಖ್ಯಾಂಶಗಳು ಹೀಗಿದ್ದವು:

*"ರೈತರ ಮಹಾಧಿವೇಶನವು ನವೆಂಬರ್ 8ನೇ ತಾರೀಖಿನ ಭೂಮಿಯ ಕುರಿತಾದ ಡಿಕ್ರಿಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಅದೇರೀತಿ ರಷ್ಯನ್ ಗಣರಾಜ್ಯದ ರೈತ ಕಾರ್ಮಿಕರ ಸರ್ಕಾರವನ್ನು ಒಪ್ಪಿಕೊಳ್ಳುತ್ತದೆ.*

*"ರೈತರ ಮಹಾಧಿವೇಶನವು ಭೂಮಿಯ ಕುರಿತಾದ ಕಾನೂನನ್ನು ಜಾರಿಗೊಳಿಸಲು ರೈತರಿಗೆ ಕರೆ ನೀಡುತ್ತದೆ. ಈ ಕೆಲಸದಲ್ಲಿ ದೊಡ್ಡ ಭೂಮಾಲಿಕರಿಂದಲೂ, ಬಂಡವಾಳಗಾರರಿಂದಲೂ ಬರತಕ್ಕಂಥ ಪ್ರತಿರೋಧವನ್ನು ಹಿಮ್ಮೆಟ್ಟಿಸಿ ರೈತರ ಹಿತವನ್ನು ಕಾಪಾಡಲು, ಮಾತಿನಲ್ಲಲ್ಲದೆ ನಿಜವಾಗಿಯೂ ಕೃತಿಯಲ್ಲಿ, ಶೋಷಿತರ ಪರ ಹೋರಾಡಿದಂತಹವರಿಗೆ ಜವಾಬ್ದಾರಿ ನೀಡಬೇಕೆಂದು ನಿರ್ದೇಶಿಸುತ್ತದೆ.*

*"1917ರ ನವೆಂಬರ್ 7ರಂದು ಆರಂಭವಾದ ಸಾಮಾಜಿಕ ಕ್ರಾಂತಿಯು ಯಶಸ್ವಿಯಾಗದೆ ಇದ್ದರೆ ರೈತರಿಗೆ ಭೂಮಿ ದೊರೆಯುವುದಾಗಲೀ, ದೊಡ್ಡ ರೈತರ ಯಂತ್ರಗಳು, ಸಲಕರಣೆಗಳು ರೈತಾಪಿಗಳ ವಶವಾಗುವುದಾಗಲೀ, ಭೂರಹಿತ ಕಾರ್ಮಿಕರ ಕೂಲಿಗುಲಾಮಗಿರಿ ಸಂಪೂರ್ಣ ರದ್ದಾಗುವುದಾಗಲೀ ಸಾಧ್ಯವಿಲ್ಲ. ರಷ್ಯಾದ ಎಲ್ಲ ಜನರಿಗೂ ಸಮಾನವಾಗಿ ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳು ದೊರಕುವುದಕ್ಕೂ ಬ್ಯಾಂಕುಗಳ ಮೇಲೆ ಜನತೆಯ ನಿಯಂತ್ರಣ ಬರುವುದಕ್ಕೂ ಕ್ರಾಂತಿ ಅತ್ಯಗತ್ಯ ಎಂಬುದು ರೈತ ಮಹಾಧಿವೇಶನದ ಅಭಿಮತ. ಕ್ರಾಂತಿ ಯಶಸ್ವಿಯಾಗಲು ರೈತಾಪಿ ದುಡಿಯುವ ಜನತೆಯು ಕೈಗಾರಿಕಾ ಕಾರ್ಮಿಕ ವರ್ಗದೊಂದಿಗೆ ಒಂದುಗೂಡುವುದು ಸಾಮಾಜಿಕ ಕ್ರಾಂತಿಯ ಶಾಶ್ವತ ಗೆಲುವಿಗೆ ಅತ್ಯವಶ್ಯಕ. ಈ ಮೈತ್ರಿಯನ್ನು ಮುಂದುವರೆದ ರಾಷ್ಟ್ರಗಳ*

*ಕಾರ್ಮಿಕ ವರ್ಗದೊಂದಿಗೂ ಬೆಳೆಸಿಕೊಳ್ಳಬೇಕು. ಜಗತ್ತಿನಾದ್ಯಂತ ಸಮಾಜವಾದದ ಗೆಲುವು ಇದರಿಂದ ಮಾತ್ರ ಖಚಿತವಾಗುತ್ತದೆ."*

ಹಳೆಯ ಕಾರ್ಯಕಾರಿಣಿಯ ಪ್ರತಿಗಾಮಿ ನೇತಾರರಿಗೆ ಮತ್ತೆ ಈ ಕಡೆ ಸುಳಿಯುವ ಧೈರ್ಯವಿರಲಿಲ್ಲ. ಚೆರ್ನೊವ್ ಮಾತ್ರ ನಿಷ್ಪಕ್ಷಪಾತಿಯೆಂಬಂತೆ ಭಾಷಣ ಮಾಡುತ್ತಿದ್ದ. ಒಮ್ಮೆ ಯಾರೋ ಅವನನ್ನು ಅಧ್ಯಕ್ಷನಾಗಲಿ ಎಂದು ಸೂಚಿಸಿದರೂ, ಜ್ಹಿನೊವೀವ್ ಮುಂತಾದವರ ವಿರೋಧದಿಂದ ಅದು ನಡೆಯಲಿಲ್ಲ. ಆದರೂ ಚೆರ್ನೊವ್ ಅಂತೂ ಇಂತೂ ಜನಪ್ರಿಯತೆಯನ್ನು ಉಳಿಸಿಕೊಂಡಿದ್ದ.

ಭೂಮಿಯ ಪ್ರಶ್ನೆ ಹಾಗೂ ಲೆನಿನ್ನರ ಗೊತ್ತುವಳಿಯ ಕುರಿತು ನಡೆದ ತೀಕ್ಷ್ಣ ಚರ್ಚೆಗಳ ಗತಿಯಲ್ಲಿ ಬೋಲ್ಶೆವಿಕ್ ಪ್ರತಿನಿಧಿಗಳು ಎರಡುಬಾರಿ ಮಹಾಧಿವೇಶನವನ್ನು ಬಿಟ್ಟು ಹೊರಡಲು ಅನುವಾಗಿದ್ದರು. ಅವರ ನಾಯಕರು ಅವರನ್ನು ಸಮಾಧಾನ ಮಾಡಿ ಕೂಡಿಸಿದ್ದರು. ಈ ಮಹಾಧಿವೇಶನದಲ್ಲಿ ಏನೂ ತೀರ್ಮಾನವಾಗಲಿಕ್ಕಿಲ್ಲ ಎಂದು ನಾನೂ ಸಹ ಭಾವಿಸಿದ್ದೆ.

ಆದರೆ ನಮಗೆ ಯಾರಿಗೂ ಗೊತ್ತಿಲ್ಲದಂತೆ ಸ್ಮೋಲ್ನಿಯಲ್ಲಿ ಬೋಲ್ಶೆವಿಕರ ಮತ್ತು ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳ ನಡುವೆ ಸಂಧಾನ ನಡೆದಿತ್ತು. ಮೊದಲಿಗೆ ಎಡಪಂಥೀಯರು ಸರ್ಕಾರದಲ್ಲಿ ಎಲ್ಲಾ ಸಮಾಜವಾದಿ ಪಕ್ಷಗಳೂ ಇರಲಿ, ಲೆನಿನ್, ಟ್ರಾಟ್‌ಸ್ಕಿ ಬೇಡ, ಮಿಲಿಟರಿ ಕ್ರಾಂತಿಕಾರಿ ಸಮಿತಿಯನ್ನು ವಿಸರ್ಜಿಸಿ – ಮುಂತಾದ ಷರತ್ತುಗಳನ್ನು ಒಡ್ಡಿದರು.

ಆದರೆ ಬುಧವಾದ ಬೆಳಿಗ್ಗೆ, ಎಂದರೆ ನವೆಂಬರ್ 28ರಂದು ರಾತ್ರಿ ಇಡೀ ಭಯಂಕರ ವಾದವಿವಾದ ನಡೆದು ಕಡೆಗೂ ಒಂದು ಒಪ್ಪಂದಕ್ಕೆ ಬರಲಾಯಿತು. ಅಲ್ಲಿ ಎಡಪಂಥೀಯ ಎಸ್.ಆರ್. ಗಳ ಷರತ್ತುಗಳು ಉಳಿದಿರಲಿಲ್ಲ. ತ್ಸೆ–ಇ–ಕಾವನ್ನು ವಿಸ್ತರಿಸಬೇಕೆಂದು ಮಾತ್ರ ತೀರ್ಮಾನಿಸಲಾಯಿತು.

ಮುಂಚೆ ಇದ್ದ 108 ಸದಸ್ಯರ ಜೊತೆಗೆ ರೈತ ಸಮಾವೇಶದಿಂದ 108 ಸದಸ್ಯರನ್ನು, ಸೈನ್ಯದಿಂದ ನೂರು ಜನರನ್ನು, ಟ್ರೇಡ್ ಯೂನಿಯನ್‌ಗಳಿಂದ 50 ಜನರನ್ನೂ ಸೇರಿಸಲಾಯಿತು.

ಈಗ ಮಹಾಧಿವೇಶನದ ಗೋಷ್ಠಿಗಳನ್ನು ರೈತರ ಸೋವಿಯತ್ ಕಛೇರಿ ಇದ್ದ ಕಟ್ಟಡಕ್ಕೇ ಸ್ಥಳಾಂತರಿಸಲಾಗಿತ್ತು. ಅಲ್ಲೇ ಒಂದು ಕೋಣೆಯಲ್ಲಿ ರೈತರ ಹಳೆಯ ಕಾರ್ಯಕಾರಿಣಿ ತನ್ನ ಅಳಿದುಳಿದ ಸದಸ್ಯರೊಂದಿಗೆ ಸಭೆ ಮಾಡಿಕೊಂಡಿತ್ತು. ಚೆರ್ನೊವ್ ಎರಡೂ ಕಡೆಯೂ ಓಡಾಡುತ್ತ ಭಾಷಣ ಮಾಡಿಕೊಂಡಿದ್ದ. ಎಲ್ಲಾ ಕಡೆಯೂ ನಿಗಾ ಇಡಲು ಯತ್ನಿಸುತ್ತಿದ್ದ. ಅವನಿಗೆ ಬೋಲ್ಶೆವಿಕ್‌ರೊಂದಿಗೆ ಒಪ್ಪಂದದ ಕುರಿತು ಚರ್ಚೆಯಾಗುತ್ತಿದೆ ಎಂದು ಗೊತ್ತಿತ್ತು. ಆದರೆ ಅದು ಅಂಗೀಕೃತವಾಗಿದೆ ಎಂದು ತಿಳಿದಿರಲಿಲ್ಲ.

ಅವನು ಅಳಿದುಳಿದವರ ಸಮಾವೇಶದಲ್ಲಿ ಎಲ್ಲಾ ಸಮಾಜವಾದಿಗಳು ಸೇರಿ ಸರ್ಕಾರ ನಡೆಸಬೇಕು ಎಂದು ಹೇಳಿ ಕಡೆಗೆ ಕೆರೆನ್‌ಸ್ಕಿಯನ್ನು, ಅವನ ಸರ್ಕಾರವನ್ನು, ಹೊಗಳಿದ. ಕೆರೆನ್‌ಸ್ಕಿ, ಬೋಲ್ಶೆವಿಕರು, ಇಬ್ಬರೂ ಅಧಿಕಾರ ಬಿಟ್ಟರೆ ಒಳ್ಳೆಯದು. ಕೆರೆನ್‌ಸ್ಕಿ ಒಪ್ಪಿಕೊಂಡಿದ್ದಾನೆ, ಬೋಲ್ಶೆವಿಕರೇ ಒಪ್ಪುತ್ತಿಲ್ಲ. ಬೋಲ್ಶೆವಿಕರಿಗೆ ಏನಾದರೂ ಆಗಲಿ,

ರಷ್ಯಾಗೆ ಏನೂ ಆಗುವುದಿಲ್ಲ, ಅದರ ರಷ್ಯಾದ ಭವಿಷ್ಯ ಹಳ್ಳಿಗಳಲ್ಲಿ ಭದ್ರವಾಗಿದೆ ಎಂದೆಲ್ಲಾ ಅಬ್ಬರಿಸಿದ.

ಆದರೆ ಇತ್ತ ವಿಶಾಲವಾದ ಸಭಾಂಗಣದಲ್ಲಿ ಉಸ್ತಿನೊವ್ ಎಂಬಾತ ರೈತರ ಮಹಾಧಿವೇಶನಕ್ಕೂ, ಸೋವಿಯತ್ ಸರ್ಕಾರಕ್ಕೂ ಆದ ಒಪ್ಪಂದವನ್ನು ಘೋಷಿಸುತ್ತಿದ್ದಂತೆ ಪ್ರತಿನಿಧಿಗಳು ಅದನ್ನು ಮುಕ್ತಕಂಠದಿಂದ ಸ್ವಾಗತಿಸಿ ಸಂಭ್ರಮಿಸಿದರು. ನಂತರ ಅಲ್ಲಿಗೆ ಬಂದ ಚೆರ್ನೊವ್ ಭಾಷಣಕ್ಕೆ ಅವಕಾಶ ಕೇಳಿ, ಒಪ್ಪಂದ ಕಾನೂನುಬದ್ಧವಲ್ಲವೆಂದೂ, ಸೋವಿಯತ್ ಸರ್ಕಾರವು ರೈತರಿಗೆ ನೀಡಿದ ವಾಗ್ದಾನವನ್ನು ಉಳಿಸಿಕೊಳ್ಳುವುದಿಲ್ಲವೆಂದೂ ಬೆದರಿಸಲು ನೋಡಿದ. ಜನ ಅವನನ್ನು ನೋಡಿ ಗಟ್ಟಿಯಾಗಿ ನಕ್ಕುಬಿಟ್ಟರು. ಪರಿಸ್ಥಿತಿ ಅರ್ಥವಾಗಿ ಅವನು ತನ್ನ ಜನಪ್ರಿಯತೆಯನ್ನು ಮೂಟೆಕಟ್ಟಿಕೊಂಡು ಅಲ್ಲಿಂದ ಜಾಗ ಖಾಲಿ ಮಾಡಿದ. ಇಲ್ಲಿಗೆ ಎಲ್ಲ ರಾಜಿಸಂಧಾನದ ಶಕ್ತಿಗಳ ಪಾತ್ರವೂ ಮುಗಿದಿತ್ತು.

ನವೆಂಬರ್ 29ರಂದು ಮಹಾಧಿವೇಶನದ ವಿಶೇಷ ಗೋಷ್ಠಿ ನಡೆಯಿತು. ಆಗ ಅಲ್ಲಿದ್ದದ್ದು ರಜಾದಿನದ ಲಹರಿ. ಎಲ್ಲರ ಮುಖದಲ್ಲೂ ಮುಗುಳ್ನಗೆ ಮಿಂಚುತ್ತಿತ್ತು. ಮಾಮೂಲಿ ಕಲಾಪಗಳನ್ನು ಬೇಗ ಮುಗಿಸಲಾಯಿತು. ನಂತರ ಎಡಪಂಥೀಯ ಸೋಷಲಿಸ್ಟ್ ರೆವಲ್ಯೂಶನರಿಗಳ ಪರವಾಗಿ ಬೆಳ್ಳಿ ಕೂದಲಿನ ವೃದ್ಧ ನ್ಯಾತನ್‌ಸನ್ ರೈತರ ಸೋವಿಯತ್, ಕಾರ್ಮಿಕರ – ಸೈನಿಕರ ಸೋವಿಯತ್‌ಗಳೊಂದಿಗೆ ಸಂಮಿಲನವಾಗಿದೆ ಎಂಬುದನ್ನು ಕಂಪಿಸುವ ಕಂಠದಲ್ಲಿ ಓದಿದ. ಆತನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. 'ಒಂದಾಗಿದ್ದೇವೆ' ಎಂಬ ಪದವನ್ನು ಆತ ಓದಿದಾಗೆಲ್ಲ ಸಭಾಂಗಣ ಅದನ್ನು ಆನಂದಾತಿರೇಕದಿಂದ ಚಪ್ಪಾಳೆ ಹೊಡೆದು ಸ್ವಾಗತಿಸುತ್ತಿತ್ತು. ಸ್ಮೋಲ್ನಿ ಮತ್ತು ಕೆಂಪು ಸೈನ್ಯದ ಪ್ರತಿನಿಧಿಗಳೂ ಅಲ್ಲಿಗೆ ಬಂದರು. ಪ್ರತಿನಿಧಿಗಳು ಎದ್ದುನಿಂತು ಕರತಾಡನದ ಮೂಲಕ ಅವರನ್ನು ಸ್ವಾಗತಿಸಿದರು.

ನಂತರ ಅಮೆರಿಕನ್ ಸೋಷಲಿಸ್ಟ್ ಲೇಬರ್ ಪಾರ್ಟಿಯ ರೈನ್‌ಸ್ಟೇನ್ ಮಾತನಾಡಿದ : "ರೈತರು, ಕಾರ್ಮಿಕರು – ಸೈನಿಕರೊಂದಿಗೆ ಮಿಲನವಾದ ಅಧಿವೇಶನದ ಈ ದಿನವು ಕ್ರಾಂತಿಯ ಮಹತ್ವಪೂರ್ಣ ದಿನಗಳಲ್ಲಿ ಒಂದು. ಇದರ ಪ್ರತಿಧ್ವನಿ ಜಗತ್ತಿನಾದ್ಯಂತ ಮೊಳಗಲಿದೆ. ಎಲ್ಲ ದುಡಿಯುವ ಜನತೆಯ ಹೃದಯಗಳಲ್ಲಿ ಈ ಮಿಲನ ಸಂತಸವನ್ನು ತುಂಬಿದೆ. ಒಂದು ಮಹಾನ್ ಪರಿಕಲ್ಪನೆ ಜಯಶಾಲಿಯಾಗಿದೆ. ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳು ರಷ್ಯಾದಿಂದ ಮಹತ್ತರವಾದದ್ದನ್ನು ನಿರೀಕ್ಷಿಸಿದ್ದವು. ಜಗತ್ತಿನ ಕಾರ್ಮಿಕ ವರ್ಗವು ರಷ್ಯಾದ ಕ್ರಾಂತಿಯ ಮಹಾನ್ ಸಾಧನೆಗಳಿಗಾಗಿ ಕಾಯುತ್ತಿದೆ."

ತ್ಸೆ–ಇ–ಕಾದ ಅಧ್ಯಕ್ಷನಾಗಿದ್ದ ಸ್ವೆರ್ದ್‌ಲೊವ್ ಎಲ್ಲರನ್ನೂ ಉದ್ದೇಶಿಸಿ ಅಭಿನಂದನಾ ಭಾಷಣವನ್ನು ಮಾಡಿದ.

ನಂತರ ಅಧಿವೇಶನದ ಮುಕ್ತಾಯದ ಘೋಷಣೆಗಳನ್ನು ಕೂಗುತ್ತಾ ರೈತರು ಸಭಾಂಗಣದಿಂದ ಹೊರಬಿದ್ದರು.

"ಅಂತರ್ಯುದ್ಧದ ಸಮಾಪ್ತಿ ಚಿರಾಯುವಾಗಲಿ !"

"ಒಗ್ಗಟ್ಟಿನ ಪ್ರಜಾತಂತ್ರ ಚಿರಾಯುವಾಗಲಿ !"

ಆಗಲೇ ಕತ್ತಲಾಗಿತ್ತು. ಹಿಮ ಗಡ್ಡೆಕಟ್ಟಿದ್ದು, ಚಂದ್ರ ಮತ್ತು ತಾರೆಯರ ಬೆಳಕಿನಲ್ಲಿ

ಮಿನುಗುತ್ತಿತ್ತು. 'ಮಾರ್ಸೆಲೆನ್' ಹಾಡನ್ನು ಬ್ಯಾಂಡ್‌ನಲ್ಲಿ ನುಡಿಸುತ್ತಾ ಸೈನಿಕರ ತುಕಡಿಯೊಂದು ಅಲ್ಲಿದ್ದ ಕಾಲುವೆಯೊಂದರ ದಡದಗುಂಟ ನಡೆದುಹೊರಟಿತ್ತು. ಸೈನಿಕರ ಕಿವಿಗಡಚಿಕ್ಕುವ ಗದ್ದಲದ ನಡುವೆಯೇ ರೈತರು ಸಾಲಾಗಿ ನಿಂತು ತಮ್ಮ ಬ್ಯಾನರ್‌ಅನ್ನು ಬಿಚ್ಚಿಹಿಡಿದರು. ಚಿನ್ನದ ಅಕ್ಷರಗಳಲ್ಲಿ ಅದರ ಮೇಲೆ "ಕ್ರಾಂತಿಕಾರಿ ಹಾಗೂ ದುಡಿಯುವ ಜನತೆಯ ಐಕ್ಯತೆ ಚಿರಾಯುವಾಗಲಿ!" ಎಂದು ಬರೆದಿತ್ತು. ವಿವಿಧ ಸೋವಿಯತ್‌ಗಳು, ಕಾರ್ಮಿಕ ಸಂಘಟನೆಗಳು ಅಂಥವೇ ಘೋಷಣೆಗಳಿದ್ದ ಬ್ಯಾನರ್‌ಗಳನ್ನು ಬಿಚ್ಚಿ ಹಿಡಿದರು.

ಯಾರೋ ಎಲ್ಲಿಂದಲೋ ದೀವಟಿಗೆಗಳನ್ನು ಹೊತ್ತಿಸಿ ತಂದರು. ಕಿತ್ತಳೆ ಬಣ್ಣದ ಜ್ವಾಲೆಯ ಪಂಜುಗಳ ಚೆಲುವು, ಹಿಮದಗಡ್ಡೆಯ ಮೇಲೆ ಪ್ರತಿಫಲಿಸುತ್ತಾ ನೂರ್ಮಡಿ ಹೆಚ್ಚಾಯಿತು. ಮೆರವಣಿಗೆ ಹೊರಟಂತೆ ಜನ ಅಚ್ಚರಿಯಿಂದ ಅವರನ್ನು ನೋಡುತ್ತಿದ್ದರು. ಘೋಷಣೆಗಳು ಮೊಳಗುತ್ತಲೇ ಇದ್ದವು; "ಕ್ರಾಂತಿಕಾರಿ ಸೈನ್ಯ ಚಿರಾಯುವಾಗಲಿ! ರೆಡ್‌ಗಾರ್ಡ್ ಚಿರಾಯುವಾಗಲಿ! ರೈತರು ಚಿರಾಯುವಾಗಲಿ!"

ಮಹಾಮೆರವಣಿಗೆ ನಗರದುದ್ದಕ್ಕೂ ನಡೆಯುತ್ತಾ ಹೋದಂತೆ ದಾರಿಯಲ್ಲಿ ಇನ್ನಷ್ಟು ಚಿನ್ನದ ಅಕ್ಷರವಿರುವ ಕೆಂಪು ಪತಾಕೆಗಳು ಸೇರಿಕೊಂಡವು. ಇಬ್ಬರು ವಯಸ್ಸಾದ ರೈತರು ಮಾತಾಡಿಕೊಳ್ಳುತ್ತಾ ಹೋಗುತ್ತಿದ್ದರು. ಕೈ ಕೈ ಹಿಡಿದು ಸಾಗುತ್ತಿದ್ದ ಅವರ ಮುಖದಲ್ಲಿ ಶಿಶುಸಹಜ ಸಂತಸ ತುಂಬಿ ತುಳುಕುತ್ತಿತ್ತು.

"ಇನ್ನು ನಮ್ಮ ಭೂಮಿಯನ್ನು ಶ್ರೀಮಂತರು ಕಸಿದುಕೊಳ್ಳಲಿ ನೋಡೋಣ!" ಸ್ಮೋಲ್ನಿಯ ಬಳಿ ರೆಡ್‌ಗಾರ್ಡ್‌ಗಳು ಸಾಲಾಗಿ ನಿಂತಿದ್ದರು. ಅವರೂ ಆನಂದೋದ್ರೇಕದಲ್ಲೇ ಇದ್ದರು. ಇನ್ನೊಬ್ಬ ರೈತ ಈಗ ಮಾತಾಡಿದ : "ನನಗೆ ಸುಸ್ತೇ ಆಗ್ತಿಲ್ಲ. ಗಾಳಿಯಲ್ಲಿ ನಡೀತಾ ಇದೀನಿ ಅನ್ನಿಸ್ತಾ ಇದೆ."

ಸ್ಮೋಲ್ನಿಯ ಮೆಟ್ಟಿಲಿನ ಮೇಲೆ ಸ್ವಾಗತಿಸಲು ನಿಂತಿದ್ದ ಸುಮಾರು ನೂರು ಜನ ಕಾರ್ಮಿಕ, ಸೈನಿಕ ಪ್ರತಿನಿಧಿಗಳು ತಮ್ಮ ಬ್ಯಾನರ್‌ನೊಂದಿಗೆ ಕೆಳಗೆ ಧಾವಿಸಿ ಬಂದು ರೈತ ನಾಯಕರನ್ನು ಆಲಂಗಿಸಿದರು, ಮುತ್ತಿಟ್ಟರು. ಮೆರವಣಿಗೆ ಗುಡುಗಿನ ಸದ್ದಿನೊಂದಿಗೆ ಸಭಾಂಗಣವನ್ನು ಪ್ರವೇಶಿಸಿತು.

ಅಲ್ಲಿ ತ್ಸೆ-ಇ-ಕಾ, ಪೆತ್ರೋಗ್ರಾಡ್ ಸೋವಿಯತ್ ಸದಸ್ಯರು ಮತ್ತು ಸಾವಿರಾರು ಪ್ರೇಕ್ಷಕರು, ಚರಿತ್ರೆಯ ಅತ್ಯಂತ ಪ್ರಜ್ಞಾಪೂರ್ಣ ಸನ್ನಿವೇಶಗಳಿಗೆ ಅನುರೂಪವಾದಂಥ ಗಾಂಭೀರ್ಯದಿಂದ ಕಾಯುತ್ತಿದ್ದರು. ಬ್ಯಾಂಡ್‌ಸೆಟ್‌ನ ಸಂಗೀತದೊಂದಿಗೆ ಮೆರವಣಿಗೆಯ ಮುಂಭಾಗ ಬರುತ್ತಿದ್ದಂತೆ ಝಿನೊವೀವ್, ರೈತ ಮಹಾಧಿವೇಶನದೊಂದಿಗೆ ಆದ ಒಪ್ಪಂದವನ್ನು ಓದಿದ. ಅದಕ್ಕೆ ಜನರ ಹರ್ಷೋದ್ಗಾರದ ಪ್ರತಿಕ್ರಿಯೆ ಘರ್ಜನೆಯಂತಿತ್ತು, ಚಂಡಮಾರುತದಂತಿತ್ತು. ವೇದಿಕೆಯ ಮೇಲೆ ಇದ್ದ ಅಧ್ಯಕ್ಷ ಮಂಡಳಿಯು ರೈತರ ಅಧ್ಯಕ್ಷ ಮಂಡಳಿಯನ್ನು ಸ್ವಾಗತಿಸಿ ಜೊತೆಯಲ್ಲಿ ಕೂಡಿಸಿಕೊಂಡಿತು. ಝಾರ್‌ನ ಚಿತ್ರವನ್ನು ಹರಿದುಹಾಕಿದ್ದ ಹಿಂಬದಿಯ ಬಿಳಿಯ ಗೋಡೆಯ ಮೇಲೆ ಈಗ ಈ ಎರಡು ಹೊಸ ಬ್ಯಾನರ್‌ಗಳು ಕಾಣಿಸಿಕೊಂಡವು.

ನಂತರ ವಿಜಯೋತ್ಸವದ ಗೋಷ್ಠಿ ಆರಂಭವಾಯಿತು. ಸ್ವೆರ್ದ್‌ಲೊವ್‌ನ ಸ್ವಾಗತದ ಮಾತುಗಳಾದ ಮೇಲೆ ಮರಿಯ ಸ್ಪಿರಿದನೋವಾ ಮಾತನಾಡಲು ಎದ್ದುನಿಂತಳು. ಚಿಕ್ಕ

ದೇಹದ, ಬಿಳಿಚಿಕೊಂಡ ಮುಖದ, ಕನ್ನಡಕ ಧರಿಸಿದ ಆಕೆ ನಮ್ಮ ಅಮೆರಿಕಾದ ಶಾಲಾ ಟೀಚರ್‌ನ ಹಾಗಿದ್ದಳು. ಅಂದಿನ ದಿನಗಳಲ್ಲಿ ಆಕೆ ಇಡಿಯ ರಷ್ಯಾದಲ್ಲಿ ಅತ್ಯಂತ ವಿಖ್ಯಾತಳೂ, ಜನತೆಗೆ ಪ್ರೀತಿಪಾತ್ರಳೂ ಶಕ್ತಿಶಾಲಿಯೂ ಆದ ಮಹಿಳೆ. ಆಕೆ ನುಡಿದಳು : "ರಷ್ಯಾದ ಕಾರ್ಮಿಕರ ಎದುರು ಚರಿತ್ರೆ ಇದುವರೆಗೂ ಪರಿಚಿತವಲ್ಲದ ಹೊಸ ಕ್ಷಿತಿಜಗಳು ತೆರೆದುಕೊಳ್ಳುತ್ತಿವೆ. ಇತಿಹಾಸದಲ್ಲಿ ಇದುವರೆಗೂ ಎಲ್ಲ ಕಾರ್ಮಿಕರ ಹೋರಾಟಗಳೂ ಸೋಲು ಕಂಡಿವೆ. ಆದರೆ ಇಂದಿನ ಚಳುವಳಿ ಅಂತರರಾಷ್ಟ್ರೀಯವಾದದ್ದು, ಆದ್ದರಿಂದಲೇ ಅಜೇಯವಾದದ್ದು. ಕ್ರಾಂತಿಯ ಜ್ವಾಲೆಯನ್ನು ಆರಿಸುವ ಶಕ್ತಿ ಈ ಜಗತ್ತಿನಲ್ಲೆ ಇಲ್ಲ. ಹಳೆಯ ಪ್ರಪಂಚ ಮುರಿದುಬೀಳುತ್ತಿದೆ. ಹೊಸ ಜಗತ್ತು ಆರಂಭವಾಗುತ್ತಿದೆ..."

ನಂತರ ಮಾತನಾಡಿದ ಟ್ರಾಟ್‌ಸ್ಕಿ, "ಕಾಮ್ರೇಡ್ ರೈತರೇ, ರಷ್ಯಾದ ಕ್ರಾಂತಿಯ ಹೃದಯಕ್ಕೆ ಆವಾಸಸ್ಥಾನವಾದ ಈ ಸಭಾಂಗಣವಿರುವ ಸೌಧಕ್ಕೆ ನಾನು ನಿಮ್ಮನ್ನು ಸ್ವಾಗತಿಸುತ್ತಾ ಹೇಳುವುದೇನೆಂದರೆ, ನೀವು ಈ ಮನೆಯ ಅತಿಥಿಗಳಲ್ಲ, ಯಜಮಾನರು, ಎಂದು." ನಂತರ ಆತ ಕಟುವಾದ ವ್ಯಂಗ್ಯದಿಂದ ಕದನವಿರಾಮಕ್ಕೆ ಮಿತ್ರರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಗಳು ನಿರ್ಲಕ್ಷ್ಯದಿಂದ ಸೂಕ್ತವಾಗಿ ಪ್ರತಿಕ್ರಿಯಿಸದಿದ್ದರೂ, ಕೇಂದ್ರ ಶಕ್ತಿಗಳು ಎನಿಸಿಕೊಂಡ ವೈರಿ ರಾಷ್ಟ್ರಗಳ ಗುಂಪು, ಎಂದರೆ, ಜರ್ಮನಿ, ಆಸ್ಟ್ರಿಯಾ, ಹಂಗೇರಿ, ಟರ್ಕಿಗಳು ಒಪ್ಪಿಕೊಂಡು ಯುದ್ಧ ನಿಂತಿರುವುದನ್ನು ವರದಿ ಮಾಡಿದ.

ನಂತರ ಕ್ರೈಲೆಂಕೊ ಮಾತನಾಡಿದ. ರಣಾಂಗಣದ ವಿವರಗಳನ್ನು ನೀಡುತ್ತಾ, ದುಖೊನಿನ್ ಯುದ್ಧಕ್ಕೆ ತಯಾರಾಗುತ್ತಿರುವುದನ್ನು ಹೇಳಿ, ಶಾಂತಿಯ ಹಾದಿಯಲ್ಲಿ ಅಡ್ಡವಾಗಿ ನಿಂತವರು ದುಖೊನಿನ್ ಆಗಲೀ ಮತ್ತೊಬ್ಬರಾಗಲೀ, ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಆತ ಘೋಷಿಸಿದ. (ಆಗಿನ್ನೂ ದುಖೊನಿನ್ ಸೋತು, ಸತ್ತಿರಲಿಲ್ಲ.)


ಡೈಬೆಂಕೊ ನೌಕಾ ಸೈನ್ಯಗಳ ಪರವಾಗಿ ಅಭಿನಂದನೆ ಸಲ್ಲಿಸಿದ. ಆಮೇಲೆ ಕ್ರುಶಿನ್‌ಸ್ಕಿ ವಿಕ್‌ಜೆಲ್ ಪರವಾಗಿ ಮಾತನಾಡಿ "ಈ ಕ್ಷಣದಿಂದ, ಎಲ್ಲಾ ನೈಜ ಸಮಾಜವಾದಿಗಳೂ ಒಂದಾಗಿರುವಾಗ, ರೈಲ್ವೆ ಕಾರ್ಮಿಕರು ಸಂಪೂರ್ಣವಾಗಿ ಕ್ರಾಂತಿಕಾರಿ ಜನತಂತ್ರದ ಪರವಾಗಿ ನಿಲ್ಲುತ್ತಾರೆ" ಎಂದು ನುಡಿದ. ನಂತರ ಮಾತನಾಡಿದ ಲೂನಚಾರ್‌ಸ್ಕಿಯ ಕಣ್ಣಿನಿಂದ ನೀರು ತೊಟ್ಟಿಕ್ಕಲಿದೆ ಎನಿಸುತ್ತಿತ್ತು. ಎಡವಾದಿ ಸೋಷಲಿಸ್ಟ್ ರೆವಲ್ಯೂಶನರಿಗಳ ಪರವಾಗಿ ಪ್ರೊಶಿಯನ್ ಮಾತನಾಡಿದ. ಮಾರ್ಟೊವ್ ಮತ್ತು ಖ್ಯಾತ ಲೇಖಕ ಮ್ಯಾಕ್ಸಿಂ ಗಾರ್ಕಿಯವರಿದ್ದ ಯುನೈಟೆಡ್ ಸೋಷಿಯಲ್ ಡೆಮಾಕ್ರೆಟ್ಸ್ ಇಂಟರ್‌ನ್ಯಾಷನಲ್ ಪರವಾಗಿ ಸಹರಾಶ್‌ವಿಲಿ ಹೀಗೆಂದು ಘೋಷಿಸಿದ : "ಬೋಲ್ಶೆವಿಕರು ಯಾವುದೇ ರಾಜಿಗೆ ತಯಾರಿಲ್ಲವೆನಿಸಿದಾಗ, ನಾವು ತ್ಸೆ-ಇ-ಕಾವನ್ನು ತೊರೆದುಹೋಗಿದ್ದೆವು. ಕ್ರಾಂತಿಕಾರಿ ಜನತಂತ್ರಕ್ಕಾಗಿ ಒಗ್ಗಟ್ಟು ಸ್ಥಾಪನೆಯಾಗಿರುವ ಈ ಘಳಿಗೆಯಲ್ಲಿ ತ್ಸೆ-ಇ-ಕಾಗೆ ಹಿಂತಿರುಗ ಬೇಕಾದದ್ದು ನಮ್ಮ ಪವಿತ್ರ ಕರ್ತವ್ಯ ಎಂದು ನಾವು ಭಾವಿಸಿದ್ದೇವೆ. ಹೊರಗೆ ಹೋದ ಎಲ್ಲರೂ ಈಗ ತ್ಸೆ-ಇ-ಕಾಗೆ ಮರಳಿ ಬರಬೇಕು ಎಂದು ನಾವು ಆಹ್ವಾನಿಸುತ್ತೇವೆ."

ಇದೇ ರೀತಿಯಲ್ಲಿ ಇನ್ನೂ ರೈತರ ನಾಯಕರು, ಕಾರ್ಮಿಕರ ಮುಖಂಡರು, ಪೋಲೆಂಡ್‌ನ ಸಮಾಜವಾದಿಗಳ ಪ್ರತಿನಿಧಿ ಮುಂತಾಗಿ ಎಲ್ಲರೂ ಹೃದಯ ತುಂಬಿ, ಆಶೋತ್ತರಗಳ ಪೂರೈಕೆಯಿಂದ ಆನಂದದಿಂದ ತಮ್ಮನ್ನೇ ಅಭಿವ್ಯಕ್ತಿಗೊಳಿಸಿಕೊಳ್ಳುತ್ತಾ ಹೋದರು...

ತಡರಾತ್ರಿಯಲ್ಲಿ ಈ ಕೆಳಕಂಡ ಗೊತ್ತುವಳಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು :

"ಪೆತ್ರೋಗ್ರಾಡ್ ಸೋವಿಯತ್ ಮತ್ತು ರೈತರ ಮಹಾಧಿವೇಶನಗಳ ಜೊತೆ ಸೇರಿ ಇಂದು ತ್ಸೆ–ಇ–ಕಾ ಜಮೀನು ಮತ್ತು ಶಾಂತಿಯ ಕುರಿತು ಕಾರ್ಮಿಕರು ಹಾಗೂ ಸೈನಿಕರ ಪ್ರತಿನಿಧಿಗಳ ಸೋವಿಯತ್‌ನ ಎರಡನೆಯ ಮಹಾಧಿವೇಶನವು ಅಂಗೀಕರಿಸಿದ ಡಿಕ್ರಿಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತದೆ ಮತ್ತು ಅದೇ ರೀತಿಯಲ್ಲಿ ತ್ಸೆ–ಇ–ಕಾ ಈ ಹಿಂದೆ ಕಾರ್ಖಾನೆಗಳ ಮೇಲೆ ಕಾರ್ಮಿಕರ ನಿಯಂತ್ರಣದ ಬಗ್ಗೆ ಅಂಗೀಕರಿಸಿರುವ ಡಿಕ್ರಿಯನ್ನೂ ಸಹ ಪುನಃ ಅನುಮೋದಿಸುತ್ತದೆ.

"ತ್ಸೆ–ಇ–ಕಾ ಮತ್ತು ರೈತರ ಮಹಾಧಿವೇಶನದ ಈ ಜಂಟಿಗೋಷ್ಠಿಯು ಖಂಡಿತ ರೈತ – ಕಾರ್ಮಿಕ – ಸೈನಿಕರ ಒಗ್ಗಟ್ಟು. ಎಲ್ಲಾ ದುಡಿಯುವ ಜನತೆಯ – ಶೋಷಿತರ ಸೋದರತೆಯ ಒಗ್ಗಟ್ಟು. ತಾವು ಗೆದ್ದುಕೊಂಡಿರುವ ಅಧಿಕಾರವನ್ನು ಭದ್ರಪಡಿಸಿಕೊಳ್ಳುತ್ತದೆ ಎಂದು ದೃಢವಾಗಿ ನಂಬಿದ್ದು, ಇದು ಎಲ್ಲಾ ರಾಷ್ಟ್ರಗಳಲ್ಲೂ ಅಧಿಕಾರವು ಕಾರ್ಮಿಕ ವರ್ಗಕ್ಕೆ ಹಸ್ತಾಂತರವಾಗುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಅಗತ್ಯವಾದ ಕ್ರಾಂತಿಕಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸ ಹೊಂದಿದೆ. ಮತ್ತು ಇದು ನ್ಯಾಯಯುತವಾದ ಶಾಂತಿ ಮತ್ತು ಸಮಾಜವಾದದ ವಿಜಯವನ್ನು ಖಚಿತಪಡಿಸುತ್ತದೆ ಎಂಬುದೂ ಸಹ ಶತಃಸಿದ್ಧ."





ಸೋವಿಯತ್ ರಷ್ಯದಲ್ಲಿ ನಡೆದ ಐತಿಹಾಸಿಕ ಜಗತ್ಪ್ರಸಿದ್ಧ ಅಕ್ಟೋಬರ್ ಕ್ರಾಂತಿಗೆ (1917) ಈಗ ನೂರರ ಸಂಭ್ರಮ. ಝಾರ್ ಚಕ್ರವರ್ತಿಯ ಕ್ರೂರ ದಬ್ಬಾಳಿಕೆಯ ಆಳ್ವಿಕೆಯಿಂದ ರೋಸಿ ಹೋದ ಜನತೆ ಬೋಲ್ಶೆವಿಕ್ ನಾಯಕ ಲೆನಿನ್ ನೇತೃತ್ವದಲ್ಲಿ ಒಗ್ಗೂಡಿ ಹೋರಾಟದ ಮಾರ್ಗ ಹಿಡಿದು ಸಶಸ್ತ್ರ ದಂಗೆ ಮೂಲಕ ಹೊಸದೊಂದು ಆಡಳಿತವನ್ನು ತನ್ನ ಪ್ರಜೆಗಳಿಗೆ ನೀಡಿದ ಸುದಿನವದು. ಎಲ್ಲೆಲ್ಲೂ ಕೆಂಪುಬಾವುಟಗಳ ಅಲೆಗಳನ್ನೆಬ್ಬಿಸಿ, ಕೆಂಪುಚೌಕದಲ್ಲಿ ತಮ್ಮ ವಿಜಯ ಎತ್ತಿ ಹಿಡಿದು ರಷ್ಯದ ಅರಸೊತ್ತಿಗೆಯ ಮೇಲೆ ಶೋಷಿತರ ಪರವಾಗಿ ಜಯ ಸಾಧಿಸಿದ ದಿನ. ಅಷ್ಟೇ ಅಲ್ಲ, ಪ್ರಪಂಚದಾದ್ಯಂತ ಕಮ್ಯುನಿಸ್ಟ್ ಒಲವಿರುವ ಜನರಿಗೆ ಮೈ ನವಿರೇಳಿಸಿದ ಗಳಿಗೆಯದು. ಅಂತೆಯೇ ಬಂಡವಾಳಶಾಹಿ – ಸಾಮ್ರಾಜ್ಯವಾದಿ ಶೋಷಕ ವರ್ಗಕ್ಕೆ ಮೈ ನಡುಕವುಂಟಾದ ಕ್ಷಣವೂ ಹೌದು. ಈ ಮಹಾಕ್ರಾಂತಿಯ ಹಿನ್ನೆಲೆ ಏನು? ಹೋರಾಟಕ್ಕೆ ಯಶ ದೊರತದ್ದು ಹೇಗೆ? ಸುದೀರ್ಘ ಹೋರಾಟದ ಕೊನೆಯ ಹತ್ತು ದಿನಗಳ ಕಥೆ ಏನು? ಇದೆಲ್ಲವನ್ನೂ ಜಾನ್‌ರೀಡ್ ಎಂಬ ಅಮೆರಿಕನ್ ಪತ್ರಕರ್ತ ಅಲ್ಲಿ ನಡೆದ ವಿದ್ಯಮಾನಗಳನ್ನು ಕಣ್ಣಾರೆ ಕಂಡು ತನ್ನ 'ಟೆನ್ ಡೇಸ್ ದಟ್ ಶುಕ್ ದ ವರ್ಲ್ಡ್' ಕೃತಿಯಲ್ಲಿ ಅಕ್ಷರ ರೂಪಕ್ಕಿಳಿಸಿದ್ದಾನೆ. (ಜಾನ್ ರೀಡ್ ಬಗ್ಗೆ ವಿವರಗಳು ಪುಟ 9–16ರಲ್ಲಿವೆ.)

* * *



ಅಕ್ಟೋಬರ್ ಮಹಾಕ್ರಾಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟಿಸುವ ಸಲುವಾಗಿ ಮಹತ್ವದ ಈ ಕೃತಿಯನ್ನು ಸಂಕ್ಷಿಪ್ತಗೊಳಿಸಿ ಕನ್ನಡಕ್ಕೆ ರೂಪಾಂತರಿಸಿದವರು ಡಾ॥ ಬಿ. ಆರ್. ಮಂಜುನಾಥ್. ಇವರು ಓದಿನ ನಂತರ ವೈದ್ಯ ವೃತ್ತಿಯನ್ನು ಪ್ರವೇಶಿಸದೆ ಕಳೆದ ನಾಲ್ಕು ದಶಕಗಳಿಂದಲೂ ಪ್ರಗತಿಶೀಲ ಆಂದೋಲನಗಳಲ್ಲಿ, ವಿದ್ಯಾರ್ಥಿ ಯುವಜನ ಚಳುವಳಿಗಳಲ್ಲಿ ಸಕ್ರಿಯವಾಗಿರುವವರು. ಅನೇಕ ಕಿರು ಪತ್ರಿಕೆಗಳ ಸಂಪಾದಕರಾಗಿ ಸಹ ಕೆಲಸ ಮಾಡಿದ್ದಾರೆ. ನಲವತ್ತಕ್ಕೂ ಹೆಚ್ಚು ನಾಟಕಗಳನ್ನು, ವಿಶೇಷವಾಗಿ ಬೀದಿ ನಾಟಕಗಳನ್ನು, ಬರೆದು ಆಡಿಸಿದ್ದಾರೆ. ಈಗ ಪತ್ರಿಕೆಗಳಿಗೆ ಅಂಕಣಕಾರರಾಗಿಯೂ ಬರೆಯುತ್ತಿದ್ದಾರೆ. ಇವರ ಸ್ವರಚಿತ ಕೃತಿಗಳೂ ಪ್ರಕಟವಾಗಿವೆ.

* * *

'ಟೆನ್ ಡೇಸ್ ದಟ್ ಶುಕ್ ದ ವರ್ಲ್ಡ್' ಕೃತಿಯ ಸಮಗ್ರ ಕನ್ನಡಾನುವಾದವನ್ನು ನವಕರ್ನಾಟಕ ಪ್ರಕಾಶನವು ಅಕ್ಟೋಬರ್ ಕ್ರಾಂತಿಯ 70ನೇ ವರ್ಧಂತಿಯ ಸಂದರ್ಭದಲ್ಲಿ ಪ್ರಕಟಿಸಿತ್ತು. 'ಜಗತ್ತನ್ನು ತಲ್ಲಣಗೊಳಿಸಿದ ಹತ್ತು ದಿನಗಳು' (ಅನು : ಎಚ್. ಎಸ್. ಹರಿಶಂಕರ್) ಪ್ರಕಟವಾದದ್ದು 1987ರಲ್ಲಿ.

ISBN 81-8467-724-3
9 788184 677249

ನಮ್ಮ ಆನ್‌ಲೈನ್ ಮಳಿಗೆ

www.navakarnataka.com

Code : 004652

₹ 275

ಇತಿಹಾಸ